ಅಕ್ಷರ ಮಂಟಪ

ಸಾಹಿತ್ಯಧಾರೆಗಳಲ್ಲಿ ಲಂಬಾಣಿ ಸಂಸ್ಕೃತಿಯ ಮುಖಾಮುಖಿ



ಸಂಪಾದಕರು

ಡಾ. ನಾಯಕರ ಹುಲುಗಪ್ಪ
ಡಾ. ಅಣ್ಣಾಜಿ ಕೃಷ್ಣಾರೆಡ್ಡಿ

ಸಾಹಿತ್ಯಧಾರೆಗಳಲ್ಲಿ
ಲಂಭಾಣಿ
ಸಂಸ್ಕೃತಿಯ ಮುಖಾಮುಖಿ

ಸಂಪಾದಕರು

ಡಾ. ನಾಯಕರ ಹುಲುಗಪ್ಪ

ಡಾ. ಅಣ್ಣಾಜಿ ಕೃಷ್ಣಾರೆಡ್ಡಿ

ಅಕ್ಷರ ಮಂಟಪ

ಹಂಪಿನಗರ, ಬೆಂಗಳೂರು–560 104

SAHITHYADAREGALALLI LAMBANI SAMSKRUTHIYA MUKHAMUKHI

Edited by
Dr. Nayakara Hulugappa
Dr. Annaji Krishnareddy

Published by
AKSHRA MANTAPA
1667, 6th Cross
6th `C' Main, Hampi Nagar
Bangalore-560104

First Edition : 2022
Pages : 234
Copies : 1000
Price: 250/-
Size : Demy 1/8
Paper Used : 70 GSM Maplitho

ISBN-978-81-955633-2-6
ಪ್ರಥಮ ಮುದ್ರಣ: 2022
ಪುಟಗಳು: 234
ಪ್ರತಿಗಳು: 1000
ಬೆಲೆ: 250/–
ಅಳತೆ: ಡೆಮಿ 1/8
ಕಾಗದ: 70 ಜಿಎಸ್ಎಂ ಮ್ಯಾಪ್ಲಿತೋ
ಮುಖಪುಟ ವಿನ್ಯಾಸ: ಚೇತನ್

Printed at
A. M. Prints
Kamakshipalya, Bengaluru - 560079
Mob: 9986167684

ಮುನ್ನುಡಿ

ಅಲೆಮಾರಿ ಅರಣ್ಯವಾಸಿಗಳು ತಂಡೋಪತಂಡಗಳಲ್ಲಿ ಪಶುಗಳೊಂದಿಗೆ ವಾಸಿಸುವುದರಿಂದ ಅವರಿಗೆ ಸುಗಾಲಿ, ಸುಕಾಲಿಗಳೆಂದು ಮತ್ತು ಅವರ ನೆಲೆಗಳಿಗೆ ತಂಡ>ತಾಂಡಾ ಎಂದು ಕರೆಯಲಾಗಿದೆ. ಕಾಲಾಂತರದಲ್ಲಿ ಅವರು ಲವಣಕಾರ(ಉಪ್ಪಾರ)ರಾಗಿ ಗೋರಮಾಟಿ (ಬಿಳಿ/ಶುದ್ಧ ಮಣ್ಣು>ಬಿಳಿಶುದ್ದುಪ್ಪು) ಗಳಾದವರು. ವನ, ಬನಗಳಲ್ಲಿ ಉತ್ಪನ್ನ ಮಾಡಿದ ಉಪ್ಪನ್ನು ಮಾರಾಟ ಮಾಡುವವರಿಗೆ ವನಜಾರಾ, ಬನಜಾರಾಗಳು ಎಂದು ಕರೆಯಲಾಗಿದೆ. ಉಪ್ಪಿನ ವಣಿಕರು, ಬಣಿಕರಾಗಿ ಬಣಜಿಗ(ವ್ಯಾಪಾರಿ)ರಾಗಿರುವರು. ವಿಶ್ವದ ನೂರಾರು ದೇಶಗಳಲ್ಲಿ ಕಾಣಸಿಗುವ ರೋಮಾ, ಜಿಪ್ಸಿಗಳನ್ನು ಭಾರತದಲ್ಲಿ ಬಂಜಾರಾ, ಭಂಜಾರಾ, ವಂಜಾರಾ, ವಂಝಾರಿ, ವಂಜಾರಿ, ಬ್ರಿಂಜಾರಿ, ಬಂಜಾರಿ, ಲಬಾನ, ಲಂಬಾಣ, ಲಂಬಾಡಿ, ಲಂಬಾನಿ, ಲಮಾಣಿ, ಲಧಾರಿ, ಲವಣ, ಲಬನ, ಸುಗಾಲಿ, ಸುಕಾಲಿ, ಬೋಯಿಪಾರಿ, ಗೋರ್ ಮಾಟಿ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದೆ. ಇವರು ಸಿಂದುಕೊಳ್ಳದ ದ್ರಾವಿಡರ ನಂತರ ದೇಶಾಂತರವಾಗಿ ಪಂಜಾಬ, ರಾಜಾಸ್ಥಾನ, ಗುಜರಾತ್, ಕಡೆಯಿಂದ ಕಾಲಾಂತರದಲ್ಲಿ ಮಧ್ಯ ಮತ್ತು ದಕ್ಷಿಣ ಭಾರತದ ಮಹಾರಾಷ್ಟ್ರ, ತೇಲಂಗಾಣ, ಆಂಧ್ರ ಪ್ರದೇಶ, ಕರ್ನಾಟಕ, ತಮಿಳುನಾಡು ಇತ್ಯಾದಿ ರಾಜ್ಯಗಳಿಗೆ ಪಶುಪಾಲನೆ ಮತ್ತು ಉಪ್ಪಿನ ವ್ಯಾಪಾರಕ್ಕಾಗಿ ಚದುರಿದ್ದಾರೆ. ಇವರು ತಮ್ಮನ್ನು ತಾವು ಬಂಜಾರಭಾಯಿ, ಗೋರಬಂಜಾರ, ಗೋರಬಂದಾ, ಗೋರವಟ, ಗೋರಮಾಟಿ, ಗೋರಭಾಯಿ, ಗೋರಿಯ ಎಂದು ಗೋರಬೋಲಿಯಲ್ಲಿ ಕರೆದುಕೊಳ್ಳುತ್ತಾರೆ.

ಭಾರತದಲ್ಲಿ ಮಾತನಾಡವ ಸುಗಾಲಿ, ಲಮಾಣಿ, ಬಂಜಾರರ ಗೋರಬೋಲಿಯು ಇಂಡೋ ಆರ್ಯನ್ ಭಾಷಾ ಪರಿವಾರಕ್ಕೆ ಸೇರಿದ್ದು, ಕೋಟಿಗಟ್ಟಲೆ ಜನ ಗೋರಬೋಲಿ ಮಾತನಾಡುವವರು ಭಾರತ ಸಂವಿಧಾನದ ಅನುಚ್ಛೇದ 8ರಲ್ಲಿ ಸೇರದೇ ಇರುವುದು ಚಿಂತನೀಯವಾಗಿದೆ. ಸರ್ವಚೇತನವಾದದ ಅಪ್ಪಟ ಬುಡಕಟ್ಟು ಲಕ್ಷಣಗಳನ್ನು ಹೊಂದಿರುವ

ಇವರನ್ನು ಸ್ವತಂತ್ರ ಭಾರತದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿಮುಕ್ತ ಮತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ವರ್ಗೀಕರಿಸಿ ವಿಭಿನ್ನ ರಾಜ್ಯಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಇದು ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆಗೆ ಹಿನ್ನಡೆಯಾಗುತ್ತಿದೆ. ಮೀಸಲಾತಿ ಪಡೆಯುವಲ್ಲಿಯೂ ಅಪಸ್ವರಗಳು ಕೇಳಿಬರುತ್ತಿವೆ. ಈ ಕಳಂಕದಿಂದ ಮುಕ್ತಿ ನೀಡಲು ಇವರೆಲ್ಲರನ್ನು ಅವರ ಕಳ್ಳುಬಳ್ಳಿಯ ಹಿನ್ನೆಲೆಯಲ್ಲಿ ಭಾರತದಾದ್ಯಂತ ಬುಡಕಟ್ಟು ಪಟ್ಟಿಗೆ ಸೇರಿಸಿ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ವಿಶೇಷ ಮೀಸಲಾತಿ ಕಲ್ಪಿಸುವುದು ಸೂಕ್ತವಾಗಿದೆ.

ಸುಗಾಲಿ, ಲಮಾಣಿ, ಬಂಜಾರ, ಗೋರಬೋಲಿ ಭಾಷೆ ಮತ್ತು ಸಂಸ್ಕೃತಿಯ ಕುರಿತು ಭಾರತದಾದ್ಯಂತ ನೂರಾರು ಚಿಂತಕರು ಸಾಹಿತ್ಯ ರಚಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರೊ. ಪಿ.ಕೆ. ಖಂಡೋಬ, ಪ್ರೊ. ಡಿ.ಬಿ. ನಾಯಕ, ಪ್ರೊ. ಸಣ್ಣರಾಮ, ಪ್ರೊ. ಗಂಗಾ ನಾಯಕ, ಪ್ರೊ. ಶಿರಗಾನಹಳ್ಳಿ ಶಾಂತನಾಯ್ಕ, ಡಾ. ಪಿ.ಕೆ. ರಾಠೋಡ, ಡಾ. ಹರಿಲಾಲ ಪವಾರ, ಡಾ. ಕೆ.ಬಿ. ಪವಾರ ಅವರುಗಳು ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತ ಉತ್ಕೃಷ್ಠ ಸಾಹಿತ್ಯ ಕೃಷಿಮಾಡಿದ್ದಾರೆ.

ಆಧುನಿಕ ಕನ್ನಡ, ಬಂಜಾರ ಸಾಹಿತ್ಯದಲ್ಲಿ ಕಂಡು ಬರುವ ಪ್ರಖರ ಲೇಖಕರಲ್ಲಿ ಪ್ರೊ. ಶಿರಗಾನಹಳ್ಳಿ ಎನ್. ಶಾಂತನಾಯ್ಕರವರು ಒಬ್ಬರು. ಇವರು ವಿಜಯನಗರ ಜಿಲ್ಲೆಯ ಹರಪ್ಪನಹಳ್ಳಿ ತಾಲೂಕಿನ ಶಿರಗಾನಹಳ್ಳಿ ತಾಂಡದಲ್ಲಿ ಜನಿಸಿದ್ದು, ಮೂರು ದಶಕಗಳ ಅಧ್ಯಾಪಕ ವೃತ್ತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಆಂಗ್ಲ ಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರೂ ಇವರಿಗೆ ಕನ್ನಡ ಮತ್ತು ಗೋರಬೋಲಿ ಭಾಷೆ, ಸಾಹಿತ್ಯ ವ್ಯಾಕರಣದ ಮೇಲೆ ಅಪಾರವಾದ ಪ್ರೀತಿ. ಕಳೆದ ನಾಲ್ಕು ದಶಕಗಳಿಂದ ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಇವರು ನೀಡಿರುವ ಕೊಡುಗೆ ಅಪಾರ. ಇವರ ಬರವಣಿಗೆಗಳು ದಲಿತ ಚಿಂತನ, ಬಂಡಾಯ ವಿಮರ್ಶೆಗಳಿಂದ ಕೂಡಿವೆ. ಇವರ ಸಾಹಿತ್ಯ ಕೃಷಿ ಹಲವು ಮಜಲುಗಳಲ್ಲಿ ಕಂಡು ಬರುತ್ತದೆ. ಅವು ಕಥೆ, ಕಾದಂಬರಿ, ನಾಟಕ ವಿಮರ್ಶೆ, ಲೇಖನಗಳು. ಇವರ ಬರಹಗಳಲ್ಲಿನ ಭಾಷೆ ಒಂದು ಬಗೆಯ ಸರಳತೆ ಓಜಸ್ಸು, ಅವರ ಸುಜ್ಞಾನದ ಅರಸುವಿಕೆ ಅದನ್ನು ಸುಲಭ ಗ್ರಾಹ್ಯವಾಗಿ ಓದುಗನ ಅಂತರಾಳಕ್ಕೆ ತಲುಪಿಸುವುದು ಎಲ್ಲರದಲ್ಲೂ ಆಳವಾದ ಪರಿಶ್ರಮವಿದೆ. ತಾಂಡ, ಗ್ರಾಮೀಣ ಬದುಕಿನಲ್ಲಾಗುತ್ತಿರುವ ಪಲ್ಲಟಗಳು, ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿರುವ ಬಂಜಾರ ಸಮುದಾಯದವರ ದಿನನಿತ್ಯದ ಪರಿಸ್ಥಿತಿ ಮತ್ತು ಸ್ವತಃ ಲೇಖಕರು ಅನುಭವಿಸಿದ ನೋವುಗಳು ಅವರ ಸಾಹಿತ್ಯದಲ್ಲಿ ಪ್ರಕಟಗೊಂಡಿವೆ. ಕನ್ನಡ ಕಾವ್ಯಗಳಲ್ಲಿನ ವಿಷಯ ವಸ್ತು, ಪದ ಪ್ರಯೋಗ, ರಚನಾತ್ಮಕ ಶೈಲಿಯ ದೋಷಗಳನ್ನು

ಮುಕ್ತವಾಗಿ ಚರ್ಚಿಸುವ ಮೂಲಕ ನಾಟಕ ಕ್ಷೇತ್ರದಲ್ಲಿ ಸಮಕಾಲಿನ ಲೇಖಕರಲ್ಲಿ ವಿಭಿನ್ನವಾಗಿ ಗುರುತಿಸಿಕೊಂಡಿದ್ದಾರೆ.

ಪ್ರೊ. ಶಿರಗಾನಹಳ್ಳಿ ಅವರ ನಾಟಕಗಳು ಆಧುನಿಕ ಜೀವನದ ಸಮಸ್ಯೆಯನ್ನು ಆಧರಿಸಿ ರಚಿತವಾಗಿವೆ. ಅವರ ಕಾದಂಬರಿ, ಸಣ್ಣ ಕಥೆ, ಸಂಕಲನಗಳಲ್ಲಿ ಶೋಷಣೆಗೆ ಸಂಬಂಧಿಸಿದ ಪ್ರಸಂಗಗಳಿವೆ. ಅವರ 'ಗೋರ್‌ಮಾಟಿ' ಕಾದಂಬರಿಯೂ ಲಂಬಾಣಿ ಸಮುದಾಯವನ್ನೇ ಮುಖ್ಯ ವಸ್ತುವನ್ನಾಗಿಟ್ಟುಕೊಂಡು ತಾಂಡ ಜನರ ಬದುಕಿನ ಆಚರಣೆಗಳು ಮತ್ತು ಪದ್ಧತಿಗಳನ್ನು ಪ್ರಶ್ನಿಸುವ ಮೂಲಕ ಅಲ್ಲಿನ ಜನರ ಮೇಲಾಗುತ್ತಿರುವ ಶೋಷಣೆ, ದಬ್ಬಾಳಿಕೆಗಳ ಮೇಲೆ ಬೆಳಕುಚಲ್ಲಿವೆ. ಬದಲಾಗುತ್ತಿರುವ ಆಧುನಿಕ ಯುಗದಲ್ಲಿ ಬಂಜಾರ ಸಂಸ್ಕೃತಿಯ ಅನನ್ಯತೆಯನ್ನು ತಮ್ಮ ಕಥೆ, ಕವನ, ಕಾದಂಬರಿ, ನಾಟಕ, ಕಾವ್ಯಗಳ ಮೂಲಕ ಅನಾವರಣಗೊಳಿಸಿದ್ದಾರೆ. ಅವರ ಬೋಧನಾವೃತ್ತಿ ಮತ್ತು ಸಂಶೋಧನಾ ಸೃಜನಶೀಲ ಪ್ರವೃತ್ತಿ ಎರಡನ್ನೂ ಸರಿದೂಗಿಸುವ ಪ್ರಯತ್ನ ಅನನ್ಯವಾಗಿದೆ. ಅವರ ಬರವಣಿಗೆಯ ಮನೋಭೂಮಿಕೆ ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಕಡೆಗೆ ಸಾಗಿದೆ. ಸಾಹಿತ್ಯದ ಓದು ಮತ್ತು ಬರವಣಿಗೆಯಲ್ಲಿ ಧ್ಯಾನಸ್ಥರಾಗಿ ಮುಗ್ಧತೆಯನ್ನು ಉಳಿಸಿಕೊಂಡ ಅವರ ವಿನಿತ ಗುಣ ಆದರ್ಶ ಪ್ರಾಯವಾದದ್ದು. ಅವರ ಬರಹಗಳು ವಿಸ್ತೃತವಾಗಿದ್ದು ಎಲ್ಲೆಡೆ ಹರಡುವಂತಾದವುಗಳು. ಅವು ಸಮರ್ಥವಾಗಿ ಎಲ್ಲಡೆ ಹರಡುವಂತಾಗಲೆಂದು ಆಶಿಸುತ್ತೇನೆ.

ಬಳ್ಳಾರಿಯಲ್ಲಿ ಬಳ್ಳಾರಿಯ ರಂಗಜಂಗಮ ಸಂಸ್ಥೆ, ಆದಿವಾಸಿ ಕಲೆ, ಸಾಹಿತ್ಯ ಸಂಶೋಧನೆ ಟ್ರಸ್ಟ್ ಹಾಗೂ ಬಳ್ಳಾರಿ ಜಿಲ್ಲಾ ಬಂಜಾರ ನೌಕರರ ಸಂಸ್ಕೃತಿ ಮತ್ತು ಸಂಶೋಧನಾ ಸಂಘವು ದಿನಾಂಕ 18.12.2021ರಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಇಂಗ್ಲಿಸ್ ವಿಭಾಗದ ಪ್ರಾಧ್ಯಾಪಕ ಡಾ ಶಿರಗಾನಹಳ್ಳಿ ಎನ್ ಶಾಂತನಾಯ್ಕ ಅವರ ಸಾಹಿತ್ಯಾವಲೋಕನ ಕುರಿತು ಆಯೋಜಿಸಿದ 'ಬರೆದಷ್ಟು ಬರವಣಿಗೆ' ಎಂಬೀ ಶೀರ್ಷಿಕೆಯ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ 14 ಪ್ರಬಂಧಗಳು ಮಂಡನೆಗೊಂಡಿವೆ. ಅವುಗಳನ್ನು ಡಾ. ನಾಯಕರ ಹುಲುಗಪ್ಪ ಮತ್ತು ಡಾ. ಅಣ್ಣಾಜಿ ಕೃಷ್ಣಾರೆಡ್ಡಿ ಅವರು ಸಂಪಾದಿಸಿದ್ದಾರೆ.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕನ್ನಡ ಅತಿಥಿ ಉಪನ್ಯಾಸಕರಾದ ಡಾ. ನಾಯಕರ ಹುಲುಗಪ್ಪ ಅವರು ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದವರು. ಅವರು ಚರಿತ್ರೆ ಮತ್ತು ತಳಸಮುದಾಯಗಳ ಕುರಿತು ಹತ್ತಾರು ಕೃತಿ ಲೇಖನಗಳನ್ನು ಬರೆದ ಹಾಗೂ ವಿವಿಧ ಸಂಶೋಧನಾ ಯೋಜನೆಗಳಲ್ಲಿ ತೊಡಗಿಸಿಕೊಂಡ ಅನುಭವಿಗಳು. ವಿಜಯನಗರ ಶ್ರೀಕೃಷ್ಣದೇವರಾಯ

ವಿಶ್ವವಿದ್ಯಾಲಯದ ಪ್ರದರ್ಶನ ಕಲೆ ನಾಟಕ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ. ಅಣ್ಣಾಜಿ ಕೃಷ್ಣಾರೆಡ್ಡಿ ಅವರು ಬಳ್ಳಾರಿ ಜಿಲ್ಲೆಯ ಡಿ. ಕಗ್ಗಲ್ಲಿನವರು. ಅವರು ರಂಗಕಲೆ ಕುರಿತು ಹತ್ತಾರು ಕೃತಿ ಲೇಖನಗಳನ್ನು ಬರೆದ ಹಾಗೂ ವಿವಿಧ ರಂಗಕಲಾಪ್ರಯೋಗಗಳಲ್ಲಿ ತೊಡಗಿಸಿಕೊಂಡ ಅನುಭವಿಗಳು. ಇವರಿರ್ವರೂ 'ಬರೆದಷ್ಟು ಬರವಣಿಗೆ' ವಿಚಾರ ಸಂಕಿರಣದಲ್ಲಿ ಮಂಡನೆಗೊಂಡ ಪ್ರಬಂಧಗಳನ್ನು ಶಿರಗಾನಹಳ್ಳಿ ಸಾಹಿತ್ಯಧಾರೆಗಳಲ್ಲಿ ಲಂಬಾಣಿ ಸಂಸ್ಕೃತಿಯ ಮುಖಾಮುಖಿ ಎಂಬೀ ಶಿರೋನಾಮೆಯಲ್ಲಿ ಸಂಪಾದಿಸಿ ಉಪಕರಿಸಿದ್ದಾರೆ. ಅವರಿಗೆ ಅಭಿನಂದನೆಗಳು. ಇದು ಶಿರಗಾನಹಳ್ಳಿಯವರ ಸಾಹಿತ್ಯ ಸಮೀಕ್ಷಾ ಕೃತಿಯಾಗಿದ್ದು ಸಂಶೋಧಕರಿಗೆ ಆಕರವಾಗುವುದರಲ್ಲಿ ಸಂದೇಹವಿಲ್ಲ.

ದಿನಾಂಕ: 24.10.2022

ಪ್ರೊ. ಕೆ.ಎಂ. ಮೇತ್ರಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ 583 276

ಅಭಿನಂದನಾ ನುಡಿ

ಮೃದುಮಧುರ ಮನಸ್ಸಿನ, ವಿಶ್ವವಿದ್ಯಾಲಯದ ಪ್ರದರ್ಶನ ಕಲೆ ವಿಭಾಗದ ಮುಖ್ಯಸ್ಥರಾಗಿ ಸಮರ್ಥ ನಾಯಕತ್ವ ಹಾಗೂ ನಮ್ಮದೇ ಅತಿ ವಿಶಿಷ್ಟ ಕಲೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಅರ್ಥಪೂರ್ಣ ಸೃಜನಶೀಲ ಸಾಹಿತ್ಯ ರಚನೆಯಲ್ಲಿ ತೊಡಗಿ ಯಾವುದೇ ಪ್ರಶಸ್ತಿ, ಪ್ರಚಾರ ಬಯಸದ ಅಪರೂಪದ ಆತ್ಮೀಯ ಪ್ರಾಧ್ಯಾಪಕರಾದ ಶ್ರೀ ಎನ್.ಶಾಂತಾನಾಯ್ಕರಿಗೆ ನನ್ನ ಅಭಿಮಾನ ಪೂರ್ವಕ ಅಭಿನಂದನೆಗಳು.

ನಿಮ್ಮ ಸಮಗ್ರ ಸಾಹಿತ್ಯದ ಅವಲೋಕನ ಕುರಿತು ಇಂದು ಆಯೋಜಿಸಲಾಗಿರುವ **'ಬರೆದಷ್ಟು ಬರವಣಿಗೆ'** ಅತ್ಯಂತ ಯಶಸ್ವಿ ಆಗಲಿ ಸಮಾರಂಭದಲ್ಲಿ ನಮ್ಮ ಮಾರ್ಗದರ್ಶಕ ರಾದಂತಹ ಡಾ.ರಾಜಪ್ಪ ದಳವಾಯಿ ಸರ್ ಅವರು ಸರ್ವಾಧ್ಯಕ್ಷರಾಗಿರುವುದು ಹೆಮ್ಮೆಯ ಸಂಗತಿ. ಉದ್ಘಾಟಕರಾದಂತಹ ಡಾ. ಎಂ.ಮೇತ್ರಿ ಸರ್ ಸೇರಿದಂತೆ ವಿವಿಯ ಗಣ್ಯರು, ಸಾಹಿತ್ಯ ಪರಿಷತ್ ಗಣ್ಯರು, ಪ್ರಾಧ್ಯಾಪಕ ವೃಂದ, ಸಾಹಿತಿಗಳು ವಿಷಯ ಮಂಡನೆ, ನಿರೂಪಣೆ ಹಾಗೂ ಅತಿಥಿಗಳಾಗಿ ಭಾಗವಹಿಸುತ್ತಿರುವುದು ಸಂತಸ. ನಮ್ಮ ಅಕಾಡೆಮಿಯ ಸದಸ್ಯರಾಗಿ ಅತ್ಯಂತ ಗ್ರಾಮೀಣ ಭಾಗದಲ್ಲಿ ಸಕ್ರೀಯರಾಗಿ ಕೆಲಸಮಾಡುತ್ತಿರುವ ಶ್ರೀಮತಿ ರಾಧಾಕೊಡಗು ಅವರು ಆಗಮಿಸಿರುವುದು ಸಂತೋಷ.

ಸರ್ ತಮ್ಮನ್ನು ಅಭಿನಂದಿಸಲು ಇನ್ನೊಂದು ಕಾರಣ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಪ್ರದರ್ಶನ ಕಲೆ ವಿಭಾಗದ ಪ್ರಥಮ ಮುಖ್ಯಸ್ಥರು ತಾವಾಗಿ ಪ್ರಥಮ ಬ್ಯಾಚ್‌ನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಮರ್ಥ ಮಾರ್ಗದರ್ಶನ ನೀಡಿ ಅವರು ಸ್ನಾತಕೋತ್ತರ ಪದವೀಧರರಾಗಿ ನಾಡಿನಾದ್ಯಂತ ನಾಟಕ-ಪ್ರದರ್ಶನ ಕಲೆಗಳಲ್ಲಿ ತೊಡಗುವಂತೆ ಮಾಡಿದ್ದೀರಿ, ನಿಮ್ಮೊಡನೆ ಅಷ್ಟೇ ಪರಿಶ್ರಮ ವಹಿಸಿ ಕಾರ್ಯಪ್ರವೃತ್ತರಾಗಿರುವ ಡಾ. ಅಣ್ಣಾಜಿ ಕೃಷ್ಣಾರೆಡ್ಡಿ ಅಪರೂಪದ ಆತ್ಮೀಯ ಹೃತ್ಪೂರ್ವಕವಾಗಿ ನೆನೆಯುತ್ತೇನೆ ಅಲ್ಲದೇ ಪ್ರಥಮ ಬ್ಯಾಚ್ ಅವರಿಗೆ ಅಭಿನಂದನೆ ಮತ್ತು ದ್ವಿತೀಯ ಬ್ಯಾಚ್‌ನವರಿಗೆ ಶುಭಹಾರೈಕೆ.

ನಾನು ಬಳ್ಳಾರಿಯಿಂದ ದೂರವಿದ್ದರೂ ಸೆಮಿನಾರ್‌ನಲ್ಲೆ ಇರುವಂತೆ ಮನಸ್ಸು ಮಾಡಲು ಕಾರಣ ಡಾ.ಅಣ್ಣಾಜಿ ಕೃಷ್ಣಾರೆಡ್ಡಿ ಅವರ ಸಂಘಟನಾ ಕೌಶಲ್ಯ ಈ ಮೂಲಕ ಅವರೆಲ್ಲರಿಗೂ ನನ್ನ ಶುಭಾಶಯಗಳು.

ಡಾ.ಶಾಂತನಾಯ್ಕ ಸರ್, ನಿಮ್ಮ ಸೃಜನಶೀಲ ಸಾಹಿತ್ಯದ ಪರಾಮರ್ಶೆ ನಿಮ್ಮೆದುರೇ ನಡೆಯುತ್ತಿರುವುದು ಇನ್ನೂ ವಿಶೇಷ ಹಾಗೂ ಔಚಿತ್ಯಪೂರ್ಣ. ನಿಮ್ಮಿಂದ ಇನ್ನಷ್ಟು ಸಾಹಿತ್ಯ – ಸಂಸ್ಕೃತಿ ಸೇವೆ ಕರುನಾಡಿಗೆ ಸಂದಾಯವಾಗಲಿ.

ನಾಟಕ ಅಕಾಡೆಮಿ ಪರವಾಗಿಯೂ ತಮಗೆ ಅಭಿನಂದನೆಗಳು.

ಪ್ರೊ. ಆರ್.ಭೀಮಸೇನ
ಬೆಂಗಳೂರು

ಪರಿವಿಡಿ

ಸಾಹಿತ್ಯಧಾರೆಗಳಲ್ಲಿ ಲಂಭಾಣಿ ಸಂಸ್ಕೃತಿಯ ಮುಖಾಮುಖಿ

ಪ್ರೊ. ಎಸ್. ಶಾಂತನಾಯ್ಕ ರವರ ಆಯ್ದ ನಾಟಕಗಳಲ್ಲಿ ಬುಡಕಟ್ಟು ಪ್ರಜ್ಞೆ

ಡಾ. ಅಣ್ಣಾಜಿ ಕೃಷ್ಣಾರೆಡ್ಡಿ

ಪ್ರೊ. ಎಸ್. ಶಾಂತನಾಯ್ಕ ರವರ ನಾಟಕಗಳನ್ನು ನೋಡಿದಾಗ ಸಮಕಾಲೀನ ಕನ್ನಡ ರಂಗಭೂಮಿಯಲ್ಲಷ್ಟೇ ಅಲ್ಲ, ಭಾರತೀಯ ರಂಗಭೂಮಿಯಲ್ಲೂ ಮಹತ್ವದ ನಾಟಕಗಳಾಗಿ ಕೂಡ ನೋಡಬಹುದು. ಬುಡಕಟ್ಟು ಸಮುದಾಯಗಳಲ್ಲಿನ ಸಾಹಿತ್ಯದ ಒಲವು, ಅಲ್ಲಿನ ಸೈದ್ಧಾಂತಿಕ ಬದ್ಧತೆ ಹಾಗೂ ಸಮೂಹಮಾಧ್ಯಮದ ಅರಿವು ಇವರ ರಂಗ ಕೃಷಿಯಲ್ಲಿನ ಚಟುವಟಿಕೆಗಳು ಮೂಲ ತಳಪಾಯವಾಗಿದ್ದು, ಅವರ ನಾಟಕಗಳು ಹೊಸತನವನ್ನು ನೀಡುವುದರ ಜೊತೆ ಮತ್ತು ತಮ್ಮ ನಾಟಕದ ವಸ್ತುವಿಗೆ ವಿಭಿನ್ನ ದೃಷ್ಟಿ ನೀಡುವುದಕ್ಕೆ ಹೆಸರು ಮಾಡಿದ ಇವರ ಆಸಕ್ತಿಗೆ ನಾವೆಲ್ಲಾ ಗೌರವಿಸಲೇಬೇಕು .ರಂಗಭೂಮಿಗೆ ಮಣ್ಣಿನ ವಾಸನೆಯನ್ನು ಗ್ರಹಿಸುವ ಶಕ್ತಿಯಿದೆ. ಕನ್ನಡ ಭಾಷೆಯನ್ನೇ ತೆಗೆದುಕೊಳ್ಳಿ, ರಂಗಭೂಮಿಮೂಲಕ ಅವರು ಬುಡಕಟ್ಟು ಪ್ರಜ್ಞೆಯನ್ನು ಹಾಗೂ ಸಾಹಿತ್ಯ, ಭಾಷೆಯನ್ನು ಗ್ರಹಿಸಿರುವ ರೀತಿ ತುಂಬ ಭಿನ್ನವಾದದ್ದು. ರಂಗಭೂಮಿಗೆ ಮಾತು ಮುಖ್ಯ, ಸಾಹಿತ್ಯಕ್ಕೆ ಬರವಣಿಗೆ ಮುಖ್ಯ. ಮಾತಿಗೆ ಸಂವಹನ ಮುಖ್ಯ, ಬರವಣಿಗೆಗೆ ವ್ಯಾಕರಣ ಮುಖ್ಯ, ಮಾತಿನ ಅರೆಬರೆತನ ರಂಗಭೂಮಿಯನ್ನು ಬಾಧಿಸುವುದಿಲ್ಲ, ಆದರೆ ಸಾಹಿತ್ಯವನ್ನು ಬಾಧಿಸುತ್ತದೆ. ಸಮಕಾಲೀನ ಲೇಖಕರಲ್ಲಿ ಕನ್ನಡ ಕಾವ್ಯಗಳಲ್ಲಿನ ವಿಷಯವಸ್ತು, ಭಾಷಾ ಪ್ರಯೋಗ, ರಚನಾತ್ಮಕ ಶೈಲಿಯ ದೋಷಗಳನ್ನು ಮುಕ್ತವಾಗಿ ಚರ್ಚಿಸುತ್ತಾ ಮೇರು ಕೃತಿಯಾಗುವಲ್ಲಿ ಅವರ ಈನಾಟಕಗಳು . ಸರಳ ಸಾಹಿತ್ಯ ವಿಮರ್ಶೆಯನ್ನು ತನ್ನ ಸಮುದಾಯಗಳಲ್ಲಿ ಹುಡುಕಾಟ ಮಾಡುತ್ತಿರುವುದನ್ನು ಗಮನಿಸಬಹುದು.

ಅವರು ವಿಶ್ವವಿದ್ಯಾಲಯದ ಆಚೆಗೂ ರಂಗಭೂಮಿಯ ಎಲ್ಲಾ ಆಯಾಮಗಳನ್ನು ಮತ್ತು ರಂಗೇತರ ಚಟುವಟಿಕೆಯ ಸಾಧ್ಯತೆಗಳನ್ನು ಕಂಡುಕೊಳ್ಳುವುದರ ಜೊತೆಗೆ

ಸಾಹಿತ್ಯ ರಚನೆ, ನಾಟಕ ರಚನೆ, ಕಲಾವಿನ್ಯಾಸ, ಸಂಘಟನೆ, ದೇಸಿ ಚಳುವಳಿ, ಸಮುದಾಯ, ಕುಶಲೆ, ಬಂಜಾರ ಸಂಸ್ಥೆಗಳು, ಸದಸ್ಯರಾಗಿ ಕವಿಗಳಾಗಿ – ಸಾಂಸ್ಕೃತಿಕ ಸಂದರ್ಭದಲ್ಲಿ ಅಪರೂಪದ ವ್ಯಕ್ತಿತ್ವದವರಾಗಿದ್ದಾರೆ. ಇವೆಲ್ಲವೂ ರಂಗಾಸಕ್ತಿಯಲ್ಲಿ ಕ್ರೂಡಿಕರಣ ಗೊಳ್ಳುವುದರಿಂದ ಪ್ರೊ. ಎಸ್. ಶಾಂತನಾಯ್ಕ ರವರ ನಾಟಕಗಳು ಮತ್ತು ಸಾಹಿತ್ಯ ಮತ್ತು ರಂಗ ಪ್ರಯೋಗಗಳು ವಿಶಿಷ್ಟ ಹಾಗೂ ಅನನ್ಯ ಅನುಭವದಿಂದ ಕೂಡಿವೆ. ನಿಜ ಹೇಳಬೇಕೆಂದರೆ, ಒಳ್ಳೆಯ ನಾಟಕವಾಗಲಿಕ್ಕೆ ಕ್ರಾಂತಿಯ ಮನೋಭಾವ ಅದರ ಉದ್ದೇಶ ಧ್ಯೇಯ ಅನಿವಾರ್ಯವಲ್ಲ, ಸಮಾಜದ ಯಥಾವತ್ ಚಿತ್ರಣವೂ ಅನಿವಾರ್ಯವಲ್ಲ. ಆದರೆ ಒಳ್ಳೆಯ ನಾಟಕಕ್ಕೆ ಗಟ್ಟಿಯಾದ ರಂಗಕ್ರಿಯೆ ಅನಿವಾರ್ಯ. ಜನರನ್ನು ರಂಜಿಸಲಿಕ್ಕೆಂದೇ ತಿಣಿಕಿ ಬರೆದ ನಾಟಕಗಳನ್ನು ಜನ ಸಮುದಾಯಗಳನ್ನು ತಲುಪಲು ಬೇಕಾದ ಪ್ರಕ್ರಿಯೆಗಳು ಸತ್ಯವಾದವು.

ಸಂಘಟನೆ, ನಿರ್ದೇಶನ, ನಾಟಕ ಉಪನ್ಯಾಸಕರಾಗಿ ರಚನೆಗಳಲ್ಲಿ /ಕಾದಂಬರಿ.ಕಾವ್ಯ ಕವನ. ನಾಟಕಗಳಲ್ಲಿ –ಹೀಗೆ ಹಲವಾರು ಆಯಾಮಗಳನ್ನು ತಮ್ಮದೇ ದೃಷ್ಠಿಕೋನದ ನಿಟ್ಟಿನಿಂದ ಆಧುನಿಕ ರಂಗಭೂಮಿಯನ್ನು ಕಳೆದ ನಾಲ್ಕು ದಶಕಗಳಿಂದ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಶಾಂತನಾಯ್ಕ ರವರು. ರಂಗಭೂಮಿಯ ಹೊರಗೂ ತಮ್ಮ ಸೃಜನಶೀಲ ಚಟುವಟಿಕೆಗಳನ್ನು ವಿಸ್ತರಿಸಿ ಸದಾ ಕ್ರೀಯಾಶೀಲರಾಗಿರುವ ಅವರು ಹೆಜ್ಜೆ ಇಟ್ಟ ಕಡೆಯಲ್ಲೆಲ್ಲಾ ತಮ್ಮ ವಿಶಿಷ್ಟ ಗುರುತು ಮೂಡಿಸಿದ್ದಾರೆ. ಪ್ರಗತಿಪರ ನಾಟಕಗಳನ್ನು ರಂಗಭೂಮಿಗೆ ತೋರಿಸಿದ ಅವರು ನಾಟಕಗಳು, ಲೇಖನಗಳು, ಕವನಗಳು, ಕಾದಂಬರಿಗಳು, ಚಿಂತನೆಗಳು, ಹೋರಾಟಗಳು ರಂಗಭೂಮಿಯ ಚರಿತ್ರೆಯ ದೃಷ್ಟಿಯಿಂದ ಅವಶ್ಯವೆನಿಸುತ್ತದೆ. ಮೊದಲು ಕ್ರಾಂತಿಕಾರಿಮನೋಭಾವದಲ್ಲಿ ತಮ್ಮ ಪಯಣ ಆರಂಭಿಸಿದ ಇವರು ತಮ್ಮ ಈ ಐದು ನಾಟಕಗಳಲ್ಲಿ ಬಹಳ ಮಹತ್ವನ್ನ ಸಾರಿಹೇಳಿದ್ದಾರೆ.ಬುಡಕಟ್ಟಿನ ಸಾಮಾಜಿಕ ಜಾನಪದ ಪ್ರಜ್ಞೆಗಳನ್ನು ನಾಟಕಗಳಲ್ಲಿ ನಂಬಿಕೆ ಇಟ್ಟು ಅವುಗಳ ಮೂಲಕ ಆಶಯದೊಂದಿಗೆ ಇಡೀ ಕನ್ನಡ ರಂಗಭೂಮಿಯ ರಂಗ ಸಾಹಿತ್ಯ, ವಿಮರ್ಶೆ, ನಟ, ನಾಟಕ, ನಾಟಕಕಾರ, ನಿರ್ದೇಶಕರ ಕುರಿತು ನೇರವಾಗಿ, ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ.

ನಾಟಕಗಳ ಬಗ್ಗೆ. ಜಾಗತೀಕರಣವೂ ತಿಮ್ಮಜ್ಜಿ ಕೋಳಿಯೂ

ಈ ನಾಟಕ ದಲ್ಲಿ ನಮಗೆ ಕಾಣಿಸುವುದು ಕೆಲವು ಕೋಳಿ ಸಾಕಾಣಿಕೆಯ, ಕೋಳಿ ಮಾರುವ ಕೋಳಿ ಕೊಂಡುಕೊಳ್ಳುವ ಪಾತ್ರಗಳು ಆದರೆ ಅವು ನಿತ್ಯಜೀವನದಲ್ಲಿ ನಮಗೆ ಕಾಣಿಸುವ ಅನೇಕ ತರಹದ ವ್ಯಾಪಾರ ದೃಕ್ಪಥವುಳ್ಳ ವ್ಯಾಪಾರಸ್ಥರ ಜೀವನಕ್ಕೆ ಪ್ರತಿರೂಪದ ಪಾತ್ರಗಳಾಗಿವೆ.

ಜಾಗತೀಕರಣ ಆದಾಗಿನ ವ್ಯಾಪಾರಸ್ಥರ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟಿದ ಹಾಗೆ ತಿಮ್ಮಜ್ಜಿ ಮತ್ತು ರಂಗಮ್ಮ ಪಾತ್ರಗಳಲ್ಲಿ ಕಾಣಬಹುದು. ಈ ಪಾತ್ರಗಳಲ್ಲಿ ಇಂದಿನ ಮನನೊಂದು ಅದೇ ಗುಂಗಿನಲ್ಲಿ ಬದುಕನ್ನು ಸಾಗಿಸುತ್ತಿರುವ ಚಿಕ್ಕ ಚಿಕ್ಕ ವ್ಯಾಪಾರಿಗಳ ಮನಃಸ್ಥಿತಿಯನ್ನು ಕಾಣಬಹುದು. ಅದೇ ರೀತಿ ಸಮಾಜದಲ್ಲಿ ಸಾಮಾನ್ಯ ಜನ ಯಾವುದು, ಹೇಗೆ ಬರುತ್ತದೆ, ಏನಾಗುತ್ತದೆ ಎನ್ನುವುದನ್ನು ಯೋಚಿಸದೆ ತಮಗೆ ನಿಲುಕುವ ಅನುಕೂಲವಾಗುವಂತಹ ಬೆಲೆಗಳಲ್ಲಿಯೇ ಯಾವುದೇ ವಸ್ತುಗಳನ್ನು ಕೊಳ್ಳುತ್ತಾರೆ. ಆದರೆ ಪ್ರಾಮಾಣಿಕವಾಗಿ ವಸ್ತುಗಳ ಗುಣಮಟ್ಟದ ಪ್ರಮಾಣವನ್ನು ನಾಲ್ಕು ಕಾಲಕ್ಕೆ ನಿಲ್ಲು ರೀತಿ ಮಾಡಿದ್ದರೂ ಅದು ದುಬಾರಿ ಎನಿಸಿದರೆ ತಗೊಳ್ಳುವ ಮನಃಸ್ಥಿತಿ ಇಲ್ಲವೆಂಬುದು ಇಂದಿನ ಪರಿಸ್ಥಿತಿ ಆಗಿದೆ.ಇನ್ನು ಉಳಿದ ಪಾತ್ರಗಳಲ್ಲಿ ಮರಿತಿಬ್ಬೇಗೌಡ, ಚನ್ನ್ಯಾ ಮತ್ತು ಇತರೆ ಪಾತ್ರಗಳು ನಮ್ಮ ವಸ್ತುಗಳ ಮೇಲೆ ಅಲ್ಲಗಳೆಯುವ ಮನಸ್ತತ್ವವನ್ನು ತೋರಿಸುತ್ತವೆ. ಹಾಗೆಯೇ ವಿದೇಶಿ ವಸ್ತುಗಳ ಮೇಲೆ ವ್ಯಾಮೋಹವೂ ಸಹಾ ಯಾವರೀತಿ ಉಂಟಾಗುತ್ತವೆ ಎನ್ನುವ ಒಂದು ವಿಷಯವನ್ನು ಈ ನಾಟಕದಲ್ಲಿ ನಮ್ಮ ಗಮನಕ್ಕೆ ಬರುತ್ತದೆ.

ಏನೇ ಆಗಲಿ ಒಟ್ಟಾರೆ ಇಲ್ಲಿ ಈ ನಾಟಕದಲ್ಲಿ ಕಾಣುವುದು ನಮ್ಮ ಸುತ್ತಮುತ್ತಲಿನ ಪ್ರಪಂಚ. ಒಬ್ಬರ ಮೇಲೆ ಒಬ್ಬರು ವಿಜಯಾವಕಾಶಗಳಿಗಾಗಿ ಹೇಗೆ ಮೋಸ ವಂಚನೆಗಳನ್ನು ಮಾಡಲು ಕೂಡಾ ಹಿಂಜರಿಯುವುದಿಲ್ಲವೆಂದು ಮರಿತಿಬ್ಬೇಗೌಡನ ಕೋಳಿ ಸೋಲಲು ಕಾರಣವನ್ನು ಕೊಟ್ಟ ವಬ್ಯಕ್ತಿಗಳ ಮೂಲಕ ಹೇಳಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಕಡಿಮೆ ಬೆಲೆ ಅಂದಕೂಡಲೇ ಆ ವಸ್ತುವಿನ ಗುಣಮಟ್ಟವನ್ನು ನೋಡದೆ ಆ ವಸ್ತುವನ್ನು ಸ್ವಂತ ಮಾಡಿಕೊಳ್ಳುವ, ಹಾಗೆಯೇ ಗುಣಮಟ್ಟ ಎಷ್ಟೇ ಇದ್ದರೂ ಸ್ವಂತಿಕೆಯನ್ನು ಸ್ವಂತ ವ್ಯಕ್ತಿತ್ವ ಉಳ್ಳ ವ್ಯಕ್ತಿಗಳನ್ನು ಅಲ್ಲಗಳೆದು ಅನುಕರಣಾ ಸಿದ್ಧಾಂತಕ್ಕೆ ಬದಲಾಗುವಂತಹ ವಿಚಿತ್ರ ಮನಸ್ಸುಳ್ಳ, ವಿಚಿತ್ರ ವ್ಯಕ್ತಿತ್ವವುಳ್ಳ ಸಮಾಜವನ್ನು ಪಾತ್ರಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ನಾಟಕಕಾರರೇ ಹೇಳಿದ ರೀತಿ "ಎಲ್ಲಿಯೂ ಜಾಗತೀಕರಣದ ಸುಳಿವನ್ನು ಪ್ರಸ್ತಾಪಿಸದೆ ಗ್ರಾಮೀಣ ಬದುಕಿನಲ್ಲಾಗುತ್ತಿರುವ ದುರಂತವನ್ನು ಈ ನಾಟಕ ದಾಖಲಿಸುತ್ತ ಹೋಗುವುದೇ ನಾಟಕದ ಸ್ವಾರಸ್ಯ ಹಾಗೂ ಸತ್ವ ಆಗಿದೆ". ಇದು ಒಂದು ವಿಡಂಬನಾತ್ಮಕವಾಗಿ ಸಮಾಜವನ್ನು ಕಣ್ಣಮುಂದೆ ತರುವ ನಾಟಕವಾಗಿದೆ.

ಅಡವಿ . ಈ ನಾಟಕದಲ್ಲಿ ನಮ್ಮ ಜೀವನದ ಚಿತ್ರಣವನ್ನೇ ನಾಟಕಕಾರರು ಬಿಚ್ಚಿಟ್ಟಿದ್ದಾರೆ. ಈಗ ನಡೆಯುತ್ತಿರುವ ಪ್ರಕೃತಿ ಪ್ರಳಯಗಳಿಗೆ ನಾವು ಎಲ್ಲರೂ ಹೇಗೆ ಭಾಗಿಯಾಗಿದ್ದೇವೆ ಎಂದು ಇಲ್ಲಿಯ ಪಾತ್ರಗಳ ಮುಖಾಂತರ ತೋರಿಸಿಕೊಟ್ಟಿದ್ದಾರೆ.

ಇಲ್ಲಿ ಕೆಲವೇ ಪಾತ್ರಗಳು ಇರಬಹುದು ಆದರೆ ಆ ಪಾತ್ರಗಳು ಆಯಾ ವರ್ಗಕ್ಕೆ ಪ್ರಾತಿನಿಧ್ಯ ವಹಿಸುತ್ತವೆ. ಇಲ್ಲಿ ವರ್ಗ ಎಂದರೆ ಜಾತಿ ಅಲ್ಲ. ವೃತ್ತಿ ವರ್ಗವಾಗಿದೆ.

ಅಂದರೆ ಇಲ್ಲಿಯ ಪಾತ್ರಗಳಿಗೆ ಹೆಸರುಗಳು ಇರುವುದಿಲ್ಲ ಬದಲಾಗಿ ಅವರು ಮಾಡುವ ಕಾಯಕವನ್ನು ಸೂಚಿಸಿರುತ್ತಾರೆ. ಇದು ನಾಟಕಕಾರರ ಒಂದು ಅದ್ಭುತ ಊಹೆಯೆಂದು ಹೇಳಬಹುದು. ಯಾಕೆಂದರೆ ಪಾತ್ರಗಳಿಗೆ ಹೆಸರುಗಳನ್ನು ಕೊಟ್ಟರೆ ಮತ್ತೆ ಅವರು ಯಾರು? ಏನು? ಎನ್ನುವುದನ್ನು ಹೆಸರಿಸಬೇಕಾಗುತ್ತದೆ, ಪಠ್ಯನಾಟಕ ಓದುವವರಿಗೆ ಮತ್ತು ನಾಟಕ ನೋಡುವ ಪ್ರೇಕ್ಷಕರಿಗೆ ಗೊಂದಲ ಉಂಟಾಗುವ ಸಾಧ್ಯತೆ ಇದೆ ಮತ್ತು ಪಾತ್ರಗಳ ಲಕ್ಷಣಗಳಬನ್ನು ಹೇಳುವ ಅವಶ್ಯಕತೆ ಇರುತ್ತದೆ. ಆದರೆ ಈಗ ಈ ನಾಟಕದಲ್ಲಿ ಓದುಗರಿಗೆ ಮತ್ತು ಪ್ರೇಕ್ಷಕರಿಗೆ ಅವರ ವೃತ್ತಿಯ ವರ್ಗ ಏನು ಮತ್ತು ಈ ನಾಟಕದಲ್ಲಿ ಅಥವಾ ಈ ಕಥೆಯಲ್ಲಿ ಅವರ ಪ್ರಾಮುಖ್ಯತೆ ಏನು ಎಂದು ಗೊಂದಲವಿಲ್ಲದೆ ತಿಳಿಯುತ್ತದೆ.

ಈ ನಾಟಕಕಾರರ ಮತ್ತೊಂದು ಅದ್ಭುತ ಊಹೆಯೆಂದರೆ ನಾಟಕದ ಆದಿಯಲ್ಲೇ ಒಂದನೆಯ ಮಾತಿನಲ್ಲೇ ಸಮಸ್ಯೆಯನ್ನು ತಿಳಿಸಿ ಮುಂದೆ ಬರುವ ಉಳಿದ ಪಾತ್ರಗಳ ಮುಖಾಂತರ ಚರ್ಚೆ ಮಾಡಿ ಪರಿಹಾರ ಕಂಡುಹಿಡಿಯುವ ಒಂದು ಪೂರ್ತಿ ಸ್ವರೂಪದ ಒಂದು ನಾಟಕ ಇದಾಗಿದೆ. ಪ್ರತಿಯೊಂದು ಸಮಸ್ಯೆಗೂ ಸಮಸ್ಯೆ ಸೃಷ್ಠಿ ಮತ್ತು ಸಮಸ್ಯೆಯ ಫಲ ಎರಡೂ ಇರುವಂತೆಯೇ ಈ ನಾಟಕದಲ್ಲಿ ಪ್ರಸ್ತಾಪಿಸಿದಂತ ಸಮಸ್ಯೆಗೆ ಫಲ ಅನುಭವಿಸುವ ಪಾತ್ರಗಳಾದ ಕಾಡು ಪ್ರಾಣಿಗಳ ಪಾತ್ರಗಳು ಕಾಡಿನಲ್ಲಿಯ ಒಂದೊಂದರ ವರ್ಗದ ಪಾತ್ರಗಳು ಬರುತ್ತವೆ. ಕೊನೆಗೆ ಸಮಸ್ಯೆಗೆ ಪರಿಷ್ಕಾರ ಪಕೃತಿ ರಕ್ಷಣೆಯೇ ಎಂದು ಹೇಳಿದ ವಿಧಾನ ಮತ್ತು ನಾಟಕಕಾರರ ಪರಿಸರ ಕಾಳಜಿ ಚೆನ್ನಾಗಿದೆ.

ಡಾ. ಅಣ್ಣಾಜಿ ಕೃಷ್ಣಾರೆಡ್ಡಿ, ಪ್ರದರ್ಶನ ಕಲಾ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಯಲ ಬಳ್ಳಾರಿ. ಮೊ: 9986752680

ಪ್ರೊ.ಶಿರಗಾನಗಳ್ಳಿ ಶಾಂತನಾಯ್ಕರವರ 'ತಾಂಡ' ಕಾದಂಬರಿ ಒಂದು ಅವಲೋಕನ

ಡಾ. ನಾಯಕರ ಹುಲುಗಪ್ಪ

'ಬರೆದಷ್ಟು ಬರವಣಿಗೆ' ಎನ್ನುವ ರಾಜ್ಯಮಟ್ಟದ ವಿಚಾರ ಸಂಕಿರಣದ ಪ್ರೊ. ಶಿರಗಾನಗಳ್ಳಿ ಶಾಂತನಾಯ್ಕರವರ 'ಕಾದಂಬರಿ' ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಡಾ. ಪ್ರವೀಣಕುಮಾರ, ಭಾಷಾಂತರಕಾರರು, ಬೆಂಗಳೂರು ಅವರೇ, ಹಾಗೆಯೇ ಈ ಗೋಷ್ಠಿಯಲ್ಲಿ ನನ್ನ ಜೊತೆಗೆ ಪ್ರಬಂಧಕಾರರಾಗಿ ಭಾಗವಹಿಸಿರುವ ಡಾ.ಶಕೀಲಾ.ಕೆ ಅವರೇ, ಶ್ರೀ ವಾಲಪ್ಪ ಲಮಾಣಿಯವರೇ, ಶ್ರೀಮತಿ ಪ್ರಭಾವತಿಯವರೇ ಮತ್ತು ಹಿರಿಯರು, ಬಂಡಾಯಕಾರರು ಆದಂತಹ ಶ್ರೀ ಪಿ.ವೆಂಕಟೇಶ್ ರವರೇ, ಹಾಗೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಎಲ್ಲಾ ಹಿರಿಯ ವಿದ್ವಾಂಸರಿಗೆ, ಸಂಶೋಧನಾರ್ಥಿಗಳಿಗೆ ನಾನು ಹೃದಯಪೂರ್ವಕ ವಂದಿಸುತ್ತೇನೆ. ಹಾಗೂ ಈ ಒಂದು ವಿಚಾರಸಂಕಿರಣದ ಆಯೋಜಕರಾಗಿರುವ ರಂಗ ಜಂಗಮ ಸಂಸ್ಥೆ, ಬಳ್ಳಾರಿ, ಆದಿವಾಸಿ ಕಲೆ ಸಾಹಿತ್ಯ ಸಂಶೋಧನೆ ಟ್ರಸ್ಟ್, ಬಳ್ಳಾರಿ ಇವರಿಗೂ, ಹಾಗೂ ಸಂಯೋಜಕರಾದ ಡಾ. ಅಣ್ಣಾಜಿ ಕೃಷ್ಣರೆಡ್ಡಿರವರಿಗೂ ಪ್ರೀತಿಪೂರ್ವಕ ವಂದನೆಗಳು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಪ್ರಸಿದ್ಧ ದಲಿತ ಲೇಖಕರಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಇಂಗ್ಲೀಷ್ ಅಧ್ಯಯನ ವಿಭಾಗದ ಪ್ರೊ.ಶಾಂತನಾಯ್ಕರು ಒಬ್ಬರು. ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ, ಪಿಎಚ್.ಡಿ ಪದವಿಯನ್ನು ಪಡೆದರೂ ಅವರಿಗೆ ಕನ್ನಡ ಭಾಷೆ, ಸಾಹಿತ್ಯ, ವ್ಯಾಕರಣದ ಮೇಲೆ ಅಪಾರವಾದ ಪ್ರೀತಿ ಮತ್ತು ಇವುಗಳ ಮೇಲೆ ಹಿಡಿತವಿದೆ. ಅವರ ಬರವಣಿಗೆಗಳೆಲ್ಲಾ ಹೆಚ್ಚು ಕನ್ನಡ ಭಾಷೆಯವು, ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿರುವು. ಇವರ ಬರವಣಿಗೆ ದಲಿತ ಚಿಂತನೆಗಳಿಂದ, ಬಂಡಾಯದ ಧ್ವನಿಯಿಂದ, ವಿಮರ್ಶೆಗಳಿಂದ ಕೂಡಿವೆ. ಅಲೆಮಾರಿ ಸಮುದಾಯವಾದ ತಾಂಡದ ಜನರ ಬದುಕು, ನಡೆ, ನುಡಿ, ಪರಂಪರೆ, ಸಂಸ್ಕೃತಿಯನ್ನು

ಬೆಳಕಿಗೆ ತರುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ಇಂತಹ ನಗುಮುಖದ, ಸೌಮ್ಯ ಸ್ವಭಾವದ ವ್ಯಕ್ತಿಯ ಸಾಹಿತ್ಯ ಕೃಷಿಯನ್ನು ಈ ವಿಚಾರ ಸಂಕಿರಣದ ಮೂಲಕ ಅನಾವರಣಗೊಳಿಸುತ್ತಿರುವುದು ತುಂಬಾ ಸಂತೋಷದ ಸಂಗತಿ. ಇವರ ಸಾಹಿತ್ಯ ಕೃಷಿ ಹಲವು ಮಜಲುಗಳಲ್ಲಿ ಕಂಡುಬರುತ್ತದೆ. ಅವು ಕಾದಂಬರಿ ಇರಬಹುದು, ಕಾವ್ಯಗಳಿರಬಹುದು, ನಾಟಕಗಳಿರಬಹುದು, ವಿಮರ್ಶೆಗಳಿರಬಹುದು ಅಥವಾ ಲೇಖನಗಳಿರಬಹುದು. ಇವೆಲ್ಲವೂ ಅವರ ಸ್ವವಿವರ ನೋಡಿದರೆ ನಮಗೆ ತಿಳಿದುಬರುತ್ತದೆ.

ನಾನು ನನಗೆ ಸಿಕ್ಕಂತಹ ಈ ಅವಧಿಯಲ್ಲಿ ಅವರ ಇತ್ತೀಚಿಗೆ ಪ್ರಕಟವಾದ 'ತಾಂಡ' ಕಾದಂಬರಿಯನ್ನು ಕುರಿತು ವಿಶ್ಲೇಷಿಸುವ ಅಥವಾ ವಿಮರ್ಶಿಸುವ ಪ್ರಯತ್ನವನ್ನು ಮಾಡುತ್ತೇನೆ. ನನ್ನ ಪ್ರಯತ್ನವನ್ನು ಎರಡು ಪ್ರಮುಖ ನೆಲೆಗಟ್ಟಿನಲ್ಲಿ ವಿಂಗಡಿಸಿಕೊಂಡಿದ್ದೇನೆ. ಒಂದು ಕಾದಂಬರಿಯ ತಾತ್ವಿಕ ಚೌಕಟ್ಟು ಮತ್ತೊಂದು ವಿಮರ್ಶಾತ್ಮಕ ನೆಲೆಯಲ್ಲಿ.

ಈ 'ತಾಂಡ' ಕಾದಂಬರಿಯು ಉತ್ತರ ಭಾರತದಿಂದ ದಕ್ಷಿಣ ಭಾರತದ ಕಡೆಗೆ ಬದುಕಿಗಾಗಿ ಸಂಘರ್ಷ ಮಾಡುತ್ತಾ ಬಂದ ಸುಗಾಲಿ, ಸಿಂಗಾಡಿ, ಬಂಜಾರ, ಲಂಬಾಣ, ಗೋರ್‌ಮಾಡಿ, ಲಂಬಾಡಿ, ಲಮಾಣಿ ಅಥವಾ ಬಂಜಾರ ಎಂದು ಮುಂತಾದ ಹೆಸರುಗಳುಳ್ಳ ಸಮುದಾಯದ, ಸಂಸ್ಕೃತಿಯು ಜಾಗತೀಕರಣದ ಸಂದರ್ಭಕ್ಕೆ ಹೇಗೆ ಮುಖಾಮುಖಿಯಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಈ ಕಾದಂಬರಿಯು ಬೃಹತ್ ಆಗಿದ್ದು ಸುಮಾರು 424 ಪುಟಗಳನ್ನು ಒಳಗೊಂಡಿದ್ದು ಲೇಖಕರು ಇದನ್ನು 87 ಅಧ್ಯಾಯಗಳಲ್ಲಿ(ವಿಭಾಗಗಳಲ್ಲಿ) ವಿಂಗಡಿಸಿದ್ದಾರೆ. ಇದನ್ನು ಓದಿದಾಗ ನನಗೆ ಕುವೆಂಪುರವರ ಎರಡು ಬೃಹತ್ ಕಾದಂಬರಿಗಳಾದ, ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ನೆನಪಿಗೆ ಬರುತ್ತದೆ.

ಭದ್ರನಾಯ್ಕನ ತಾಂಡದ ಕತೆಯನ್ನು 55 ವರ್ಷದ ಒಬ್ಬ ಯುವಕ ತಾನು ಕಂಡಂತಹ ತನ್ನ ತಾಂಡದ ಜನರ ಬದುಕು ಬವಣೆಯನ್ನು, ಅದು ಬದಲಾದ ಬಗೆಯನ್ನು ಹಲವು ಸನ್ನಿವೇಶಗಳ ಮೂಲಕ ನೆನಪಿಸಿಕೊಳ್ಳುವ ಪ್ರಯತ್ನ ಈ ಕಾದಂಬರಿಯಲ್ಲಿದೆ. ಇಲ್ಲಿ ಲೇಖಕರು ಇಲ್ಲಿಯ ಹಲವಾರು ಸನ್ನಿವೇಶಗಳನ್ನು ಈ ರೀತಿ ಹಲವು ವಿಶೇಷಣ ಮೂಲಕ ನೆನಪಿಸುತ್ತಾರೆ. "ಹುಲಿಯೂರ ಬಹಳ ಸೂಕ್ಷ್ಮ ಸಂವೇದಿ. ತನ್ನ ನೆನಪಿನ ಕಣಜದಲ್ಲಿ ಹಾಗೆ ಕಾಪಿಟ್ಟಿದ್ದ ಸಾವಿರಾರು ಘಟನೆಗಳನ್ನು ಒಂದೊಂದಾಗಿ, ರಾಸುಗಳು ದಿನವಿಡಿ ಹುಲ್ಲು ತಿಂದು ರಾತ್ರಿ ಮೆಲಕು ಹಾಕುವಂತೆ ಮೆಲಕು ಹಾಕುತ್ತಿದ್ದ". ಲೇಖಕರು ಇಲ್ಲಿ ಸಿಂಹಾವಲೋಕನ ಕ್ರಮವನ್ನು ಅನುಸರಿಸಿದ್ದಾರೆ. ಹುಲಿಯೂರು ನಡೆದುಬಂದ ದಾರಿ, ಸವಿಸಿದ ದೂರ, ಅನುಭವಿಸಿದ ನೋವು ಅವನನ್ನು ಎಡಬಿಡದೆ ಕಾಡುತ್ತಿತ್ತು. ಬಾಲ್ಯದಲ್ಲಿ ಕೂಳಿಗಾಗಿ ಪಟ್ಟ ಪರಿಶ್ರಮ, ಅನುಭವಿಸಿದ ವೇದನೆ, ಚಿಕ್ಕವನಿರುವಾಗಲೇ

ಎಲ್ಲಾ ಸವಾಲುಗಳ ವಿರುದ್ಧ ಮನಸ್ಸಿನೊಳಗೆ ಪ್ರಶ್ನೆ ಮಾಡಿದ್ದ. ಯಾಕೆ? ಏನು? ಅಂತ?. ಇವೆಲ್ಲವುಗಳನ್ನು ನೋಡಿದಾಗ ನನಗೆ ಇಲ್ಲಿಯೇ ಒಂದು ಅನುಮಾನ ಶುರುವಾಯಿತು. ಈ ಕತೆ ಹೇಳುವ ಹುಲಿಯೂರನ ಸ್ಥಾನದಲ್ಲಿ ನಮ್ಮ ಈ 'ತಾಂಡ' ಕಾದಂಬರಿಯ ಲೇಖಕರೇ ಅದಂತಹ ಪ್ರೊ.ಶಾಂತನಾಯ್ಕರೇ ಇರಬಹುದೇ ಅಂಥಾ. ಎಕೆಂದರೆ, ಹುಲಿಯೂರನ ವಯಸ್ಸು 55 ಮತ್ತು ನಮ್ಮ ಕಾದಂಬರಿಕಾರರ ವಯಸ್ಸು 56 ಮತ್ತು ಈ ಕಾದಂಬರಿಯ ಉದ್ದಕ್ಕೂ ಬರುವ ಅನೇಕ ಇಂಗ್ಲೀಷ್ ಭಾಷೆಯ ಪದಗಳು Facebook, Twitter, Google, Billgates, Carona, Nighty, Lockdown, Chicken Manchuri, Chicken Sixty-five, Chicken Hyderabad ಒಟ್ಟಾರೆಯಾಗಿ 1960ರ ದಶಕದಿಂದಾಚೆಗೆ ಬಂಜಾರ ಸಮುದಾಯದ ಸಾಂಸ್ಕೃತಿಕ ಆಯಾಯಮಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಕಾದಂಬರಿಕಾರರು ಮಾಡಿದ್ದಾರೆ. (ಆದರೂ ಲೇಕಕರೇ ಹೇಳುವಂತೆ ಇದು ಯಾರಿಗೂ ಅನ್ವಯಿಸುವುದಿಲ್ಲ. ಕೇವಲ ಕಾಲ್ಪನಿಕ ಮಾತ್ರ).

ನಾನು ಇಲ್ಲಿ ಸಂಪೂರ್ಣ ಕಾದಂಬರಿಯನ್ನು ಪರಿಚಯ ಮಾಡಿಸಲು ಸಮಯದ ಕೊರತೆಯಿದೆ. ಹಾಗಾಗಿ ಈ ಕಾದಂಬರಿಯಲ್ಲಿ ಬರುವ ನಾನು ಪ್ರಮುಖ ಎಂದುಕೊಂಡಿರುವ ಮೂರು ಪ್ರಸಂಗಗಳ ಬಗ್ಗೆ ಮಾತನಾಡುವೆನು.

'ಸೋರುತಿಹದು ಮನೆಯ ಮಾಳಿಗೆ ಅಜ್ಞಾನದಿಂದ' ಎಂದು ಶಿಶುನಾಳ ಶರೀಪರ ತತ್ವಪದದ ಶೀರ್ಷಿಕೆಯುಳ್ಳ ಅಧ್ಯಾಯ. ಈ ಶೀರ್ಷಿಕೆಯನ್ನು ನೋಡಿದಾಗ ನನಗೆ ಬಸವಣ್ಣನವರ 'ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೋ? ಹೊಸ್ತಿಲಲ್ಲಿ ಹುಲ್ಲುಹುಟ್ಟಿ' ಎನ್ನುವ ವಚನ ನೆನಪಾಗುತ್ತದೆ. ಏಕೆಂದರೆ ಮನೆಯಲ್ಲಿ ಯಾರು ಇಲ್ಲದಿದ್ದರೂ ಅಲ್ಲಿ ಗೆದ್ದಲುಗಳ ವಾಸಸ್ಥಾನವಾಗುತ್ತದೆ. ಇಲ್ಲಿ ಹುಲಿಯೂರಿನಲ್ಲಿ ಮೇಲ್ಜಾತಿಯವರಿಂದ ಸೊಸೈಟಿಯಿಂದ ಸಿಗಬೇಕಾದ ಸವಲತ್ತುಗಳು ಊರಿನ ರೈತರಿಗೆ ಸಿಗದೆ ಇರುವುದು ಅವರಲ್ಲಿರುವ ಅಜ್ಞಾನವೆ ಕಾರಣವೆಂದು ಲೇಖಕರು ಅಭಿಪ್ರಾಯಾಪಡುತ್ತಾರೆ. ಇಲ್ಲಿನ ಜನರ ಅಜ್ಞಾನ, ಅಂಧಾನುಕರಣೆ, ಮೌಡ್ಯ, ಭ್ರಷ್ಟಚಾರ, ಕಂದಾಚಾರವನ್ನು ಅರಿತ ಇಲ್ಲಿನ ಸೊಸೈಟಿಯ ಬಸಣ್ಣಿ ಅಂತವರು ರೈತರಿಗೆ ದೊರೆಯಬೇಕಾದ ಹಲವಾರು ಸವಲತ್ತು ದೊರೆಯದಂತೆ ಮಾಡುತ್ತಾರೆ. ರೈತರಿಗೆ ಬಡ್ಡಿ, ಚಕ್ರಬಡ್ಡಿ, ವಿಷ್ಣುಬಡ್ಡಿ ಅಂತ ಹಾಕಿ ಅವರನ್ನು ಶೋಷಣೆ ಮಾಡುವುದನ್ನು ಕಾಣುತ್ತೇವೆ. ಈ ಸಂದರ್ಭದಲ್ಲಿ ಲೇಖಕರು ವರ್ತಮಾನದಲ್ಲಿ ದೇಶದ ಬ್ಯಾಂಕ್‌ಗಳಿಂದ ಸಾಲ ಪಡೆದು ಪರಾರಿಯಾಗಿರುವ ವಿಜಯ ಮಲ್ಯ, ನಿರಾಜ ಮೋದಿಯನ್ನು ನೆನಪಿಸಿಕೊಳ್ಳುತ್ತಾರೆ. ಸಾವಿರಾರು ಕೋಟಿ ರೂಪಾಯಿಗಳನ್ನು ಲೂಟಿ ಹೊಡೆದು ದೇಶ ಬಿಟ್ಟು ಬೇರೆ ದೇಶಗಳ ಆಶ್ರಯ ಪಡೆದು

ವಾಸಮಾಡುವುದನ್ನು ಕಾಣುತ್ತೇವೆ. ನಮ್ಮ ರೈತರು ಭೂಮಿ ತಾಯಿಯನ್ನು ನಂಬಿ ಇರುವವರು ಅವರು ಯಾರು ದೇಶ ಬಿಟ್ಟು ಹೋಗಲಾರರು. ಅವರಿಗೆ ಬೇಕಿರುವುದು ಲಕ್ಷಗಟ್ಟಲೇ ಹಣವಲ್ಲ, ಹೊಲಕ್ಕೆ ಬೇಕಿರುವ ಬೀಜ, ಗೊಬ್ಬರ ಮಾತ್ರ. ಇಲ್ಲಿ ಹುಲಿಯೂರ ತನ್ನ ತಂದೆ ತೋಪುನಾಯ್ಕನಿಗೆ 40 ಎಕರೆ ಭೂಮಿ ಇದ್ದರೂ ತಮ್ಮ ಕಷ್ಟವನ್ನು ನೆನಪು ಮಾಡಿಕೊಂಡಿದ್ದ. ಇದು ರೈತರಿಗೆ ಮೇಲ್ಜಾತಿಯವರು ಸೊಸೈಟಿ ಮತ್ತು ಇನ್ನಿತರ ವಿಷಯಗಳಿಂದ ಶೋಷಣೆ ಮಾಡುವುದನ್ನು ಕಾಣುತ್ತೇವೆ. ಕೆಲವು ಮೌಢ್ಯಗಳಿಂದಾಗಿ ಅಲ್ಲಿನ ಜನ ಅಜ್ಞಾನ ಅಂದಾನುಕರಣೆಯಿಂದ, ಕಂದಾಚಾರ, ಮತಿಹೀನತೆಯಿಂದ ಯಾರೊಬ್ಬರು ನೆಮ್ಮದಿಯಾಗಿ ಇರಲಿಲ್ಲ ಎನ್ನುವುದಕ್ಕೆ ತೋಪುನಾಯ್ಕ ಒಂದು ಕತೆಯೇಳುತ್ತಿದ್ದ. "ಗುಡಿಯೊಳಗಿನ ತಿರುಪೆ ಎತ್ತಿ ತಿನ್ನುವ ಜೋಗಪ್ಪಗಳ ಕತೆ". ಇದು ಹಬ್ಬ ಬಂತೆಂದರೆ ಲಂಬಾಣಿಗರು ಮಾಡುವ ಹಬ್ಬದ ಖರ್ಚು ಕುರಿತು, ಆದಾಯ ಶೂನ್ಯ, ಖರ್ಚು ಜಾಸ್ತಿ, ಊರು ಜಾತ್ರೆ ಬಂತೆಂದರೆ ಆಗುವ ಖರ್ಚು ಕುರಿತು ಹುಲಿಯೂರು ನೊಂದು ಕೊಳ್ಳುತ್ತಿದ್ದ ತಮ್ಮ ತಂದೆ ತೋಪುನಾಯ್ಕನನ್ನು ಕೇಳಿದರೆ ಅವರು "ಲಮಾಣ್ಯರು ಮಾಡುವುದು ಕಂಡಕ್ಕೆ, ಹೆಂಡಕ್ಕೆ, ಆದರೆ, ಲಿಂಗಯಾತರು ಮಾಡುವುದು ದಂಡಕ್ಕೆ" ಇದು ನಮಗೆ ಅಂಟಿರುವ ಶಾಪ ಅಂತ ಹೇಳುತ್ತಿದ್ದರು. ಎಲ್ಲಿಯವರೆಗೆ ನಾವು ಈತರಹ ಹಬ್ಬ ಜಾತ್ರೆಗಳನ್ನು ಮಾಡುತ್ತೇವೆ ಅಲ್ಲಿಯವರೆಗೆ ನಮ್ಮವರು ಉದ್ಧಾರ ಆಗುವುದಿಲ್ಲ ಎನ್ನುವುದು ತೋಪುನಾಯ್ಕನ ಅಭಿಪ್ರಾಯ.

ನನ್ನ ಅವಲೋಕನದ ಮತ್ತೊಂದು ಪ್ರಸಂಗವೆಂದರೆ, ಮಹಾಸತಿಯ ಕಲ್ಲುಗಳ ಪ್ರಸಂಗ–ಒಲ್ಲಾಂಗ್(ಪ್ರಾಥನೆ). ಸತಿ ಪದ್ಧತಿ ಭಾರತ ಮತ್ತು ಕರ್ನಾಟಕದಲ್ಲಿ ಅತೀ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿರುವ ಪದ್ದತಿ. ಮಹಾಸತಿ ಆಗುವವಳು ಪುರಾಣದಿಂದ ಇಳಿದು ಬಂದ ದೇವತೆಯಲ್ಲ ಪರಿಸರದಿಂದ ಎದ್ದುನಿಂತ ದೇವತೆ. ಮಾಸ್ತಿಯಾಗುವವರು ಸಾಮಾನ್ಯವಾಗಿ ಊರೊಡೆಯನ ಮನ್ನಣೆ ಪಡೆದು ಹಳದಿ ಸೀರೆಯನ್ನುಟ್ಟು ಒಂದು ಕೈಯಲ್ಲಿ ನಿಂಬೆಹಣ್ಣು ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದು, ದಂಡೆ–ಬಾಂಸಿಗ, ಕುಪ್ಪಸ, ಮಾಲೆಗಟ್ಟುಗಳಿಂದ ಸಿಂಗರಿಸಿಕೊಂಡು ಬೀದಿಯಲ್ಲಿ ಕಾಲು ನಡಿಗೆಯಿಂದ ಇಲ್ಲವೆ ಕುದುರೆ ಪಲ್ಲಕ್ಕಿಗಳನ್ನೇರಿ ಮಾಸ್ತಿಯಾಗುವವಳು. ಆಗ ವೀರರು ಅವಳಿಂದ ಲಿಂಬೆ, ಮುಡಿಯ ಹೂ ಪಡೆಯುತ್ತಿದ್ದರು. ಆಮೇಲೆ ಗೌರಿವ್ರತ ಪೂರೈಸಿ ಎಣ್ಣೆಯಲ್ಲಿ ಮುಖನೋಡಿ ಕೊಂಡದ ಹತ್ತಿರ ಹಿಡಿದ ತೆರೆಗೆ ಎದುರಾಗಿ ಸತಿಕಲ್ಲು ಮೇಲೆ ನಿಲ್ಲುತ್ತಿದ್ದಳು. ಕಟ್ಟುಗೆ, ಕರ್ಪುರಗಳಿಂದ ಬೆಂಕಿ ಉಜ್ವಲಗೊಳ್ಳುತ್ತಿದ್ದಂತೆ ಆಕೆ ಚಿತೆಯಲ್ಲಿ ಪ್ರವೇಶಿಸುವುದೇ ತಡ ಆಗ ಜನ ಗೋಳಾಡುತ್ತಿದ್ದರೆಂದೂ ಜಯಘೋಷ ಮಾಡುತ್ತಿದ್ದರೆಂದೂ ಹಲವಾರು ಆಕರಗಳು ತಿಳಿಸುತ್ತವೆ.

ಆದರೆ ನನಗೆ ಕೂತೂಹಲವಿದ್ದದ್ದು ಬಂಜಾರ ಸಮುದಾಯದ ಮಹಿಳೆಯರು ಸತಿಹೋದದ್ದು. ಒಂದು ಅಲೆಮಾರಿ ಸಮುದಾಯವಾದ ಬಂಜಾರರು ನಮ್ಮ ಪ್ರಾಚೀನ ಕಾಲದಿಂದಲೂ ಅನುಸರಿಸಿಕೊಂಡ ಬಂದ ಸಾಂಸ್ಕೃತಿಕ ಮೌಲ್ಯ ಎಂದು ಕರೆಯುವ ಪದ್ಧತಿಯನ್ನು ಇವರು ಅನುಸರಿದ್ದು ಸೋಜಿಗವೆ ಸರಿ. ನನಗೆ ಲೇಖಕರೆ ಹೇಳಿದಂತೆ ಬಂಜಾರರ ಸುಮಾರು ಸತಿಕಲ್ಲುಗಳು ಭಾರತ-ಕರ್ನಾಟಕದಾದ್ಯಂತ ದೊರೆಯುತ್ತವೆ. ಅವುಗಳಿಗೆ ಲಿಪಿಯಿಲ್ಲ. ಕೇವಲ ಶಿಲ್ಪಗಳಿವೆ ಎಂದು. ಅದರಲ್ಲಿ ತೋಪುನಾಯ್ಕನ ವಂಶದವಳಾದ ಗುಜಾಸತ್ತಿ ಒಬ್ಬಾಕಿ ಅಂತ. ಬಂಜಾರ ಸಮುದಾಯದವರು ದೀಪಾವಳಿ, ಯುಗಾದಿ ಹಬ್ಬದ ಸಂದರ್ಭದಲ್ಲಿ ಈ ಕಲ್ಲುಗಳಿಗೆ ಒಳಾಂಗ್(ಪ್ರಾರ್ಥನೆ) ಸಲ್ಲಿಸುತ್ತಿದ್ದರು. ಹಾಗೆಯೇ ಮದುವೆ ನಾಮಕರಣ ಸಂದರ್ಭದಲ್ಲಿ ಇವುಗಳಿಗೆ ವಿವಿಧ ರೀತಿಯ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದವು. ಹುಲಿಯೂರನ ತಾಯಿ ಜಾನಿಬಾಯಿ ತೀರಿಕೊಂಡ ಮೇಲೆ ಈ ಕಲ್ಲುಗಳು ಕೂಡ ಯಾವುದೋ ಕಾರಣಕ್ಕೆ ಮಾನವ ಹಾಳು ಮಾಡಿದ ಎಂದು ಲೇಖಕರು ಸಾಂಸ್ಕೃತಿಕ ಕುರುಹುಗಳು ನಾಶವಾಗಿದ್ದರ ಬಗ್ಗೆ ವಿಷಾದ ವ್ಯಕ್ತಿಪಡಿಸುತ್ತಾರೆ. ಅಂದಿನಿಂದ ಗುಜಾಸತ್ತಿಯ ಪೂಜೆ ನಿಂತು ಹೋಯಿತು ಎನ್ನುತ್ತಾರೆ.

ಅದರೂ ಲೇಖಕರು ವ್ಯಕ್ತಿಯ ಜೀವನ ಮೌಲ್ಯವನ್ನು ತಿಳಿಸಿ ಸತಿ ಹೋಗುವುದನ್ನು ತಡೆಯಲು ಅನೇಕ ಸಮಾಜ ಸುಧಾರಕರು ಶ್ರಮಿಸಿದರು. ಈ ಸತಿ ಪದ್ದತಿ ಈ ಹಿಂದೆ ಯಾವುದೊ ಕಾರಣಕ್ಕೆ ಅದು ಮೌಲ್ಯ ಎಂದು ಕರೆಸಿಕೊಂಡರು ಅದರ ಅಗತ್ಯತೆ ಈಗ ಇಲ್ಲ ಎನ್ನುತ್ತಾರೆ. ಆದರೂ ಉತ್ತರ ಭಾರತದಲ್ಲಿ ಅಲ್ಲಲ್ಲಿ ಸತಿ ಪ್ರಕರಣಗಳು ನಡೆಯುತ್ತಲೇ ಇರುವುದು ಕಂಡುಬರುತ್ತದೆ. ವಿಶೇಷವಾಗಿ ರಾಜಸ್ಥಾನದಲ್ಲಿ ಕೆಲವು ಸತಿ ಮರಣಗಳು ನಡೆಯುತ್ತಿರುವುದಕ್ಕೆ ನಿದರ್ಶನಗಳಿವೆ. ರಾಜಸ್ಥಾನದ ಹಥಿದೆಹ್ ಎಂಬ ಗ್ರಾಮದಲ್ಲಿ(ಸಿರ್‌ಹತ್ ಜಿಲ್ಲೆ) 1980ರಲ್ಲಿ ನೂರಾರು ಗ್ರಾಮಸ್ಥರ ಸಮುಖದಲ್ಲಿ ಸರಸ್ವತಿ ಎಂಬ ಹೆಣ್ಣು ತನ್ನ ಗಂಡ ಹೀರಾಲಾಲಿನ ಚಿತೆಯಲ್ಲಿ ಭಸ್ಮವಾದ ವಿಷಯ ತಿಳಿದು ಬರುತ್ತದೆ. ಅದೇ ರೀತಿಯಲ್ಲಿ 1980ರಂದು ನೀಮ್ಡಿಕೊಥಾರಿಯ ಗ್ರಾಮದ (ನಾಗಪುರ ಜಿಲ್ಲೆ 62 ವರ್ಷದ ರಜಪೂತ ಹೆಣ್ಣು ಸುಗನ ಕನ್ವರ ತನ್ನ 75 ವರ್ಷದ ಗಂಡ ಸುಜನಸಿಂಗ ಮರಣ ಹೊಂದಿದಾಗ ನೂರಾರು ಗ್ರಾಮಸ್ಥರ ಸಮ್ಮುಖದಲ್ಲಿ ಗಂಡನ ಶಿವದೊಂದಿಗೆ ಚಿತಯೇರಿದಳು.

ಸತಿಯ ತೀರಾ ಇತ್ತೀಚಿನ ನಿದರ್ಶನವೆಂದರೆ 1987ರಲ್ಲಿ ಚಿತೆಯೆರಿದ 18ವರ್ಷ ವಯಸ್ಸಿನ ರೂಪ ಕನ್ವರಳದು(ಈ ಘಟನೆ ನಡೆದಿದ್ದು ರಾಜಸ್ಥಾನದಲ್ಲಿ). ಅವಳು ಸತಿ ಹೋದಾಗ ಇಡೀ ದೇಶದ ತುಂಬಾ ದೊಡ್ಡ ಸುದ್ದಿಯಾಗಿ ಕೇಂದ್ರ ಸರ್ಕಾರದ ಗಮನ ಸೆಳೆದು ವಿಶೇಷವಾದ ಸುಗ್ರಿವಾಜ್ಞೆ ಮೂಲಕ ಸರಕಾರ ಈ ಅನಿಷ್ಟ ಪದ್ದತಿಯನ್ನು

ನಿಷೇಧಿಸಿ, ಸತಿ ಪದ್ಧತಿಯನ್ನು ವೈಭವೀಕರಿಸುವ, ಸತಿಮಾತಾ ಹೆಸರಿನಲ್ಲಿ ದೇವಾಲಯಗಳನ್ನು ಕಟ್ಟುವ ಮತ್ತು ಯಾವುದೇ ರೀತಿಯಲ್ಲಿ ಸತಿಯನ್ನು ಉತ್ತೇಜಿಸುವುದು ಶಿಕ್ಷಾರ್ಹ ಅಪರಾಧ ಎಂದು ಘೋಷಣೆ ಮಾಡಿತು. ಹೀಗೆ ಒಂದು ಕಾಲದಲ್ಲಿ ವಿಜೃಂಭಿಸಿದ್ದ ಪದ್ದತಿಯು ಇಂದು ದೇಶದ ಯಾವುದೇ ಭಾಗದಲ್ಲಿ ಕಂಡುಬರುತ್ತಿಲ್ಲ. ಸತಿ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಲು ಕಟ್ಟುನಿಟ್ಟಾದ ಕ್ರಮಗಳನ್ನು ಸರಕಾರ ಅನುಸರಿಸಿದೆ.

ಈ ಕಾದಂಬರಿಯ ಮತ್ತೊಂದು ಪ್ರಸಂಗವೆಂದರೆ ಮಳಾವೋ(ನ್ಯಾಯಪಂಚಾಯಿತಿ). ಬಂಜಾರ ಸಮುದಾಯ ತಮ್ಮ ತಾಂಡದಲ್ಲಿ ಜನಗಳ ನಡುವೆ ಯಾವುದಾದರು ಕಾರಣಕ್ಕೆ ಜಗಳ, ಘರ್ಷಣೆ, ಗೊಡವೆಗಳಾದರೇ ತಾವೇ ಸ್ವತಃ ಬಗೆಹರಿಸಿಕೊಳ್ಳುತ್ತಿದ್ದರು. ಇದನ್ನು ಮಳಾವೋ ಎನ್ನುತ್ತಿದ್ದರು. ಸಾಮಾನ್ಯವಾಗಿ ಗಲಾಟೆಗಳು ಭಟ್ಟಿ ಸಾರಾಯಿ ಕುಡಿದು ಹೊಡೆದಾಡುವುದು, ಯಾರು ದುರ್ಬಲನಿರುತ್ತಾನೆ ಅವನ ಹೆಂಡತಿಯನ್ನು ಇಟ್ಟುಕೊಳ್ಳುವುದು, ಹುಡುಗರು ಹುಡುಗಿಯರನ್ನು ಹೋಡಿಸಿಕೊಂಡು ಹೋಗುವುದು, ಗಂಡ-ಹೆಂಡತಿಯರ ನಡುವಿನ ಗಲಾಟೆ ಇತ್ಯಾದಿ. ಇಂತಹ ಗಲಾಟೆಗಳಾದರೆ ಊರಿನ ಹಿರಿಯರೇ ಇಂತಹ ಕೇಸ್‌ಗಳನ್ನು ತಾವೇ ತಮ್ಮ ನ್ಯಾಯ ಪಂಚಾಯಿತಿಯಲ್ಲಿ ಬಗೆಹರಿಸಿಕೊಳ್ಳುವರು. ಅವರು ಯಾರು ಪೊಲೀಸ್ ಸ್ಟೇಷನ್ ಅಥವಾ ನ್ಯಾಯಲಯದ ಮೆಟ್ಟಿಲನ್ನು ಏರುತ್ತಿರುಲಿಲ್ಲ. ತಾವೇ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತಿದ್ದರು.ತಾಂಡದ ಜನರ ಬದಕುನ್ನುಇಲ್ಲಿನ ಘಟನೆಗಳ ಮೂಲಕ ಗಮನಿಸಿದಾಗ ಒಂದು ಸಮಾಜದಲ್ಲಿ ಮಹಿಳೆಯಾಗಿರಲಿ ಅಥವಾ ಪುರುಷನೇ ಆಗಿರಲಿ ಅವರ ಸ್ಥಾನಮಾನಗಳು ಅವರು ವಾಸಿಸುವ ಸಮಾಜದ ಮೇಲೆ ನಿರ್ಧಾರವಾಗಿರುತ್ತವೆ. ಅದು ಗ್ರಾಮೀಣ ಸಮಾಜವಾಗಿರಬಹುದು ಇಲ್ಲವೇ ನಗರ ಸಮಾಜವಾದರೂ ಆಗಿರಬಹುದು. ಸಾಮಾನ್ಯವಾಗಿ ಎಲ್ಲ ಮಹಿಳೆಯರ ಬಗ್ಗೆ, ವಿಶೇಷವಾಗಿ ತಾಂಡದ ಮಹಿಳೆಯರನ್ನು ಕೆಳಮಟ್ಟದಿಂದ ನೋಡುವುದು ಪುರಾತನ ಕಾಲದಿಂದಲೆ ನಡೆದುಕೊಂಡು ಬಂದ ಪರಿಪಾಠವಾಗಿದೆ.

ತಾಂಡದಲ್ಲಿ ವಾಸಿಸುವ ಮಹಿಳೆಯರನ್ನು ಹೀನವಾಗಿ ತುಚ್ಛವಾಗಿ, ಅವಮಾನದಿಂದ ಕಾಣುವುದು ಸತ್ಯವಾಗಿದೆ. ನಗರ ಮಹಿಳೆಯರನ್ನೊಳಗೊಂಡಂತೆ ಎಲ್ಲ ಮಹಿಳೆಯರು ತಮ್ಮ ಶಕ್ತಿಗೆ ಮೀರಿದ ಕೌಟುಂಬಿಕ ಜವಾಬ್ದಾರಿಯನ್ನು ಹೋರುತ್ತಾರೆ. ಈ ಜವಾಬ್ದಾರಿಗಳೆಂದರೆ ಮನೆಯ ಕೆಲಸಗಳಾದ ಕಸಗುಡಿಸುವುದು, ಪಾತ್ರೆ ತೊಳೆಯುವುದು, ಬಟ್ಟೆ ತೊಳೆಯುವುದು, ಅಡಿಗೆ ಮಾಡುವುದು. ಊಟಕ್ಕೆ ಬಡಿಸುವುದು, ಮಕ್ಕಳ ಪಾಲನೆ-ಪೋಷಣೆ, ಗಂಡನ ಆಜ್ಞೆಗಳ ಪರಿಪಾಲನೆ, ಹಿರಿಯರ ಉಪಚಾರ ಮುಂತಾದವುಗಳು. ಒಟ್ಟಾರೆ ಮನೆಗೆ ಸಂಬಂಧಿಸಿದ ಎಲ್ಲ ಜವಾಬ್ದಾರಿಗಳನ್ನು ಮಹಿಳೆಯೇ ನಿರ್ವಹಿಸಬೇಕಾಗಿದೆ.

ಅದಕ್ಕಾಗಿಯೇ ಅವಳು ಹುಟ್ಟಿ ಬಂದವಳು ಎನ್ನುವಂಥ ಸಾಮಾಜಿಕ ಪರಿಸರವನ್ನು ಕುಟುಂಬದಲ್ಲಿ ನೀಡುತ್ತ ಬೆಳಸಲಾಗುತ್ತಿದೆ. ಇಲ್ಲಿ ಪುರುಷರ ಪಾತ್ರವೇ ಇರುವುದಿಲ್ಲ. ಮಹಿಳೆಯರಿಗೆ ಮನೆಗೆಲಸದೊಂದಿಗೆ ತಮ್ಮ ಕುಟುಂಬದ ಆರ್ಥಿಕ ಮಟ್ಟವನ್ನು ಸುಧಾರಿಸಲು ಕೂಲಿ ಮಾಡುವುದು ರಸ್ತೆ ನಿರ್ಮಾಣ, ಕಟ್ಟಡ ನಿರ್ಮಾಣಗಳಂಥ ಗುತ್ತಿಗೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಮುಂತಾಗಿ ಅಸಂಘಟಕ ಕೆಲಸಗಳಲ್ಲಿ ತೊಡಗುವುದು ಅನಿವಾರ್ಯವಾಗಿದೆ. ಇದನ್ನು ಕಾದಂಬರಿಕಾರರು ತಮ್ಮ 'ತಾಂಡ' ಕಾದಂಬರಿಯಲ್ಲಿ ಲಂಬಾಣಿ ಹೆಣ್ಣು ಮಕ್ಕಳು ಕೆಲಸಕ್ಕಾಗಿ ಗುಳೆ ಹೋಗುವುದು ಜೀವನ ನಿರ್ವಹಣೆಗೆ ತಮ್ಮ ಬದುಕನ್ನೆ ಸವೆಸುವುದನ್ನು ಕಣ್ಣಿಗೆ ಕಾಣುವಂತೆ ಚಿತ್ರಿಸಿದ್ದಾರೆ. ಅದೇ ಸಮಯದಲ್ಲಿ ಹೈನುಗಾರಿಕೆಯೊಂದಿಗೆ ಆಡು, ಕುರಿ, ಕೋಳಿ, ಸಾಕಾಣಿಕೆ, ದನ-ಕರುಗಳನ್ನು ಮೇಯಿಸುವುದು, ಮೇವು ಸಂಗ್ರಹ, ಹಾಲು ಕರೆಯುವುದು, ಮಣ್ಣು ತೆಗೆಯುವುದು, ಆಸರೆಯಲ್ಲಿ ನಿಲ್ಲಿಸುವ ಜವಾಬ್ದಾರಿಗಳೆಲ್ಲವು ಇವಳದೆ. ದಿನ-ರಾತ್ರಿಯಾದರೂ ಮುಗಿಯದ ಕೆಲಸಕ್ಕೆ ಒಂದು ವಿರಾಮವೆ ದೊರೆಯದಷ್ಟು ತಾಂಡದ ಮಹಿಳೆ ಕಾರ್ಯನಿರತಳಾಗಿರುತ್ತಾಳೆ.

ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಇಡೀ ಕುಟುಂಬದ ಸಂಸಾರಕ್ಕೆ ಪುರುಷನೇ ಮೂಲಾಧಾರ ಎಂಬಂತೆ ಬಿಂಬಿಸಲಾಗುತ್ತಿದೆ. ಅದೆಷ್ಟೇ ಸೋಮಾರಿ ಪುರುಷನಿದ್ದರೂ, ದುಡಿದು ತಂದಿದ್ದು ಚಟಕ್ಕೆ ಸಾಲದು ಎಂಬಂತೆಇದ್ದರೂ ಮನೆಯ ಯಜಮಾನ ಪುರುಷನೆ ಎಂಬಂತೆ ಚಿತ್ರಿಸಲಾಗಿದೆ. ಪುರುಷರು ತಮ್ಮ ಶಕ್ತಿ-ಸಾಮರ್ಥ್ಯದಿಂದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಕೆಲಸಗಳಲ್ಲಿ ಭಾಗವಹಿಸಿ ತಮ್ಮ ಪ್ರಾಬಲ್ಯವನ್ನು ಮೆರೆಯುತ್ತಾರೆ. ಇಲ್ಲಿ ಎಲ್ಲಡೆಯೂ ಮಹಿಳೆಯ ದುಡಿಮೆ ಗೌಣವಾಗಿ ಯಾವುದೇ ಅಸ್ತಿತ್ವವೇ ಇಲ್ಲದಂತೆ ಆಗುತ್ತಿದೆ.

ತಾಂಡದ ಕುಟುಂಬದಲ್ಲಿ ಪುರುಷನಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗುತ್ತಿದೆ. ಮನುಸ್ಮೃತಿಯಲ್ಲಿ ಹೇಳಿರುವಂತೆ ಮಹಿಳೆಯು ಬಾಲ್ಯದಲ್ಲಿ ತಂದೆಯ ಆಧೀನದಲ್ಲಿರಬೇಕು, ಯೌವ್ವನದಲ್ಲಿ ಗಂಡನ ಆಧೀನದಲ್ಲಿರಬೇಕು. ಮುಪ್ಪಿನಲ್ಲಿ ಮಕ್ಕಳ ಆಧೀನಳಾಗಿ ದುಡಿಯುವುದು ಅವಳ ಕರ್ಮವೆಂಬಂತೆ ಅವಳಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿಲ್ಲ ಎಂಬಂತೆ ಚಿತ್ರಿಸಲಾಗಿದೆ. ಮಹಿಳೆಯ ದುಡಿಮೆ ಅವಳ ಕರ್ತವ್ಯವೆನ್ನುವಂತೆ ಬಲವಂತವಾಗಿ ಅವಳ ಮೇಲೆ ಹೇರಲಾಗಿದೆ. ಆದರೂ ಅದರ ಫಲದ ಮೇಲೆ ಹಕ್ಕಿರುವುದಿಲ್ಲ. ಹಿರಿಯರು ಗಳಿಸಿದ ಆಸ್ತಿಯ ಮೇಲೆ ಹಕ್ಕಿದ್ದರೂ ಜೀವನಾಂಶವಾಗಲಿ, ಪಾಲಾಗಲಿ ಕೇಳುವಂತಿಲ್ಲ. ಗಂಡನು ಹೇಳುವ ಎಲ್ಲ ಕೆಲಸಗಳನ್ನು, ಹೇಳದೆಯಿರುವ ಕೆಲಸಗಳನ್ನು ಪ್ರೀತಿಯಿಂದ ಹೇಳಿರುವುದನ್ನು, ದರ್ಪದಿಂದ ಆದೇಶಿಸಿದ್ದು, ಅಹಂಕಾರದಿಂದ

ಮಾಡು ಎಂದು ನಿರ್ದೇಶಿಸಿದ ಎಲ್ಲವನ್ನು ಮಾಡಲೇಬೇಕಾದದ್ದು ಅವಳ ಧರ್ಮ-ಕರ್ಮ ಎಂಬಂತೆಯೇ ಬೆಳೆಸಲಾಗುತ್ತಿದೆ. ಇದನ್ನೆ ಸಮಾಜದ ಹಿರಿಯರು ಸಹನೆ, ತ್ಯಾಗ, ಕರುಣೆ, ಪತಿವ್ರತೆ ಎಂಬ ಶಬ್ದಗಳಲ್ಲಿ ಅವಳ ಮೇಲಿನ ಎಲ್ಲ ಶೋಷಣೆಯನ್ನು ತಡೆದುಕೊಳ್ಳುವಂತೆ ಉಪದೇಶಿಸುವುದಾದರೆ ಅವಳ ಸುಃಖ-ದುಃಖ ಕೇಳುವುದಾದರೂ ಯಾರು? ಪುರುಷನೆಂದರೆ ಪ್ರಶ್ನಾತೀತ, ಪುರುಷ ಎಂದರೆ ಮನೆಗೆ ಎಲ್ಲವು, ಮಹಿಳೆಗೆ ಸಕಲ ಸೌಭಾಗ್ಯವೂ ಪುರುಷನೆಂಬಂತೆ ಇವನಿಲ್ಲದೆ ಮಹಿಳೆಗೆ ಬದುಕೇ ಇಲ್ಲ ಎಂಬಂತೆ ಸಮಾಜ ಬಿಂಬಿಸುತ್ತಾ ಬಂದಿದೆ.

ನಮ್ಮನ್ನು ಆವರಿಸಿಕೊಂಡಿರುವ ವಾತಾವರಣದ ಪರಿಧಿಯಲ್ಲಿ ಸಂಭವಿಸುವ ಘಟನೆಗಳಿಗೆ ಸ್ಪಂದಿಸಿ, ಅದಕ್ಕೊಂದು ಅಭಿವ್ಯಕ್ತಿಯ ರೂಪ ತೊಡಿಸುವ ಕಾರ್ಯವನ್ನು 'ಸಂವೇದನೆ'ಯೆಂದು ಗುರುತಿಸಲಾಗಿದೆ. ಇಲ್ಲಿ ಕಾದಂಬರಿಕಾರರು ಈ ಕೆಲಸವನ್ನು ಮಾಡಿದ್ದಾರೆ. ಅಭಿವ್ಯಕ್ತಗೊಳ್ಳುವ ಸಂವೇದನೆಯಲ್ಲಿ ಬುದ್ಧಿ ಮತ್ತು ಭಾವನೆಗಳೆರಡೂ ಮಿಳಿತವಾಗಿರುತ್ತವೆ. ಸಂವೇದನೆಯ ಸ್ವರೂಪವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ಕಾಣಿಸಿಕೊಳ್ಳುತ್ತದೆ. ವ್ಯಕ್ತಿಯ ಅನುಭವ, ಲೋಕದ ಗ್ರಹಿಕೆಗಳು ವೈಯಕ್ತಿಕತೆ ಮತ್ತು ಸುತ್ತಲಿನ ಪರಿಸರದ ಆವರಣವನ್ನು, ಅಧ್ಯಯನದ ವ್ಯಾಪ್ತಿಯನ್ನು ಅವಲಂಬಿಸಿರುತ್ತದೆ. ಬರಹಗಾರರ ಸೂಕ್ಷ್ಮ ಗ್ರಹಿಕೆ ಮತ್ತು ಅಭಿವ್ಯಕ್ತಿಸಬಲ್ಲ ಸಾಮರ್ಥ್ಯವನ್ನು ಅವಲಂಬಿಸಿ ಗಂಡು-ಹೆಣ್ಣಿನ ಅಂತರಂಗವನ್ನು; ಹೆಣ್ಣು-ಗಂಡಿನ ಅಂತರಂಗವನ್ನು ಗ್ರಹಿಸಿ ಅನಾವರಣಗೊಳಿಸಬಹುದು. ಇಂತಹ ನೂರಾರು ಘಟನೆಗಳನ್ನು ಮುಕ್ತ ಸಂವೇದನೆಯಲ್ಲಿ ತಾಂಡದ ಜನರ ಬದುಕಿನ ಅನುಭವದ ಪರಿಧಿಯೊಳಗೆ ಪ್ರವೇಶಿಸಿ, ಚಿತ್ರಿಸಿದ ಚಿತ್ರಣವನ್ನು ನಾವು ಈ ಕಾದಂಬರಿಯಲ್ಲಿ ಕಾಣಬಹುದು.

ಡಾ. ನಾಯಕರ ಹುಲುಗಪ್ಪ, ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ವಿಭಾಗ
ಸ್ನಾತಕೋತ್ತರ ಕೇಂದ್ರ, ಕೊಪ್ಪಳ, ವಿಶ್ರೀಕೃ, ಬಳ್ಳಾರಿ

ಡಾ. ಶಿರಗಾನಹಳ್ಳಿ ಶಾಂತನಾಯ್ಕರ ಕಾದಂಬರಿಗಳ ಪಕ್ಷಿನೋಟ

ಪ್ರೊ. ವಾಲಪ್ಪ ಸುಬ್ಬಪ್ಪ ಲಮಾಣಿ

ಭಾರತದಲ್ಲಿ ಸುಮಾರು 63 ಬುಡಕಟ್ಟು ಸಮುದಾಯಗಳಿವೆ ಎಂಬುದು ಇತಿಹಾಸದಿಂದ, ವಾಸ್ತವ ಸಂಗತಿಗಳಿಂದ ವೇದ್ಯವಾಗುತ್ತದೆ. ಈ ಬುಡಕಟ್ಟು ಸಮುದಾಯಗಳಲ್ಲಿ ತನ್ನದೇ ಆದಂತಹ ವಿಶಿಷ್ಟ ಕಲೆ, ಪರಂಪರೆ, ಉಡುಗೆ-ತೊಡುಗೆಗಳಿಂದ ಗುರುತಿಸಿಕೊಂಡಿರುವ ಒಂದು ವಿಶಿಷ್ಟ ಸಮುದಾಯವೆಂದರೆ ಅದು ಲಂಬಾಣಿ ಸಮುದಾಯ. ಲಂಬಾಣಿ ಸಮುದಾಯದ ಸಮುದಾಯದ ಲೇಖಕರಾದ ಡಾ. ಶಿರಗಾನಹಳ್ಳಿ ಶಾಂತ ನಾಯಕ ಎಂಬ ಗುರುವಿನ ಸತತ ಪ್ರಯತ್ನದ ಫಲವೇ ಕನ್ನಡ ಸಾಹಿತ್ಯಲೋಕದಲ್ಲಿ ಹರಡಿರುವ ಅವರ ಸಾಹಿತ್ಯವನ್ನು ಅವಲೋಕನ ಮಾಡುವ ಪ್ರಯತ್ನ.

ಡಾ. ಶಾಂತ ನಾಯ್ಕರ ಸಾಹಿತ್ಯಲೋಕ ಹಲವು ಓದುಗರನ್ನು ಪಡೆದಿರುವುದು ಅಷ್ಟೇ ಸತ್ಯ ಕಾರಣ ಸಾಹಿತ್ಯಲೋಕದ ಓದುಗರನ್ನು ಸೆಳೆದ ಅವರ ಕಾದಂಬರಿ ಜಗತ್ತು ಹಾಗೂ ಕಾವ್ಯಜಗತ್ತು ಸಾಹಿತ್ಯಲೋಕದಲ್ಲಿ ಅಪರೂಪವಾದದ್ದು.

"ಇತಿಹಾಸವನ್ನು ಅರಿಯದವನು ಇತಿಹಾಸವನ್ನು ಸೃಷ್ಟಿಸಲಾರ"

- ಡಾ. ಬಿ.ಆರ್. ಅಂಬೇಡ್ಕರ್

ಅವರ ಅನುಭವದ ವಾಣಿಯಂತೆ ಬಂಜಾರ ಕುಲಬಾಂಧವರಾದ ಡಾ.ಶಿರಗಾನಹಳ್ಳಿ ಶಾಂತ ನಾಯ್ಕರು ಆ ಜನಾಂಗದ ನೋವು-ನಲಿವುಗಳನ್ನು ಅಲ್ಲದೆ ಶತಶತಮಾನಗಳಿಂದಲೂ ಅಲೆಮಾರಿಗಳಾಗಿ ಊರಿಂದೂರಿಗೆ, ಸೀಮೆಯಿಂದ ಸೀಮೆಗೆ ಅಲೆಯುತ್ತಿದ್ದ ಬಂಜಾರರದ್ದು ಕಡುಕಷ್ಟದಿಂದ ಸಾಗಿದ ಬದುಕಾಗಿದೆ. ನಾಯಕರು ತಮ್ಮ ಸಾಹಿತ್ಯದಲ್ಲಿ ಬಂಜಾರರ ಇತಿಹಾಸವನ್ನು, ಅವರು ಪಟ್ಟ ಕಷ್ಟವನ್ನು ಬರೆದು ತೋರಿಸಿದಾಗ ನಮಗೆ ನೆನಪಾಗುವುದು ದಲಿತ ಕವಿ ಸಿದ್ದಲಿಂಗಯ್ಯನವರ ಈ ಸಾಲುಗಳು

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ಒರಗಿದವರು ನನ್ನ ಜನಗಳು
ಕಾಲು ಕೈಯ್ಯ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು

ಎನ್ನುವಂತೆ, ಬಂಜಾರ ಜನಾಂಗದವರಾದ ನಾಯಕರು ತಮ್ಮ ಕಾದಂಬರಿಗಳ ಆದ್ಯಂತ ತುಂಬಾ ಪರಿಣಾಮಕಾರಿಯಾಗಿ ಆ ಜನಾಂಗದ ಇತಿಹಾಸವನ್ನು ಕರುಳು ಮಿಡಿಯುವಂತೆ ಹೇಳುತ್ತಾ ಹೋಗುವುದನ್ನು ಓದುಗರಾದ ನಾವು ಕಾಣುತ್ತೇವೆ. ಈ ಜನಾಂಗದ ದುಗುಡ; ನೋವು-ನಲಿವುಗಳನ್ನು ನಾಯ್ಕರು ತಮ್ಮ ಕೃತಿಗಳಲ್ಲಿ ಕಣ್ಣಿಗೆ ಕಟ್ಟುವಂತೆ ಪ್ರತಿಪಾದಿಸುತ್ತಾರೆ. ಜನಾಂಗದ ಚರಿತ್ರೆಯ ಒಂದು ಘಟ್ಟದಲ್ಲಿ ಸಾಂಘಿಕ ಬದುಕಿನ ಕನಸನ್ನು ಹೊತ್ತು ನೆಲೆನಿಲ್ಲಲು ಪ್ರಯತ್ನಿಸಿದ ಸಂದರ್ಭವನ್ನು ಎದುರಿಸಿದ ಬಿಕ್ಕಟ್ಟುಗಳನ್ನು, ಸಂಕಷ್ಟಗಳನ್ನು ಕಾದಂಬರಿಯ ವಸ್ತುಗಳನ್ನು ತೆಗೆದುಕೊಂಡು ಕಾದಂಬರಿಯ ಪಾತ್ರಗಳಲ್ಲಿ ಸಾಕ್ಷೀಕರಿಸುತ್ತಾರೆ.

ಕನ್ನಡ ಸಾಹಿತ್ಯದ ಕಾದಂಬರಿ ಲೋಕವನ್ನೊಮ್ಮೆ ಅವಲೋಕನ ಮಾಡಿದಾಗ. ಬಂಜಾರ ಜನಾಂಗದ ವಸ್ತುವನ್ನು ಒಳಗೊಂಡ ಕಾದಂಬರಿಗಳನ್ನು ನಾವು ಕಾಣುವುದು ಇಪ್ಪತ್ತನೇ ಶತಮಾನದ ಎಂಬತ್ತರ ದಶಕದಲ್ಲಿ ಬಂಜಾರ ಸಮುದಾಯದ ಬರಹಗಾರ್ತಿ ಬಿ.ಟಿ.ಲಲಿತಾ ನಾಯಕ್ ಅವರ ಪ್ರಮುಖ ಕಾದಂಬರಿಗಳಿಂದ. ಈ ಕಾದಂಬರಿಗಳಲ್ಲಿ ಬಂಜಾರ ಸಮುದಾಯದಲ್ಲಿ ಅಥವಾ ಸಮಾಜದಲ್ಲಿ ಹೆಣ್ಣಿಗೆ ಆಗುತ್ತಿರುವ ನಿರಂತರ ಶೋಷಣೆಯನ್ನು, ಅವಹೇಳನ, ಅನ್ಯಾಯವನ್ನು ಪರಿಣಾಮಕಾರಿಯಾಗಿ, ಕಲಾತ್ಮಕವಾಗಿ ಇಡುವಂತಹ ಒಂದು ಪ್ರಯತ್ನವನ್ನು ನಾವು ಕಾಣುತ್ತೇವೆ. ಸಹಜವಾಗಿ ಲೇಖಕಿ ತಾನು ಅನುಭವಿಸಿದ ನೋವು-ನಲಿವುಗಳನ್ನು ಕಾದಂಬರಿಯಾಗಿ ಪರಿವರ್ತಿಸಿರುವದನ್ನು ಹಾಗೂ ತಾಂಡಾ ಸಂಸ್ಕೃತಿಯಲ್ಲಿ ಹೆಣ್ಣಿಗೆ ಆಗುತ್ತಿರುವ ಶೋಷಣೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವುದನ್ನು ಅವರ ಕಾದಂಬರಿಗಳಾದ್ಯಂತ ಕಾಣುತ್ತೇವೆ.

ಇದಾದ ಬಳಿಕ 2001 ರಲ್ಲಿ ಮಲ್ಲಿಕಾರ್ಜುನ ಹಿರೇಮಠ ಅವರು ಬರೆದಂತಹ 'ಹವನ' ಎಂಬ ಕಾದಂಬರಿಯನ್ನು ಕಾಣುತ್ತೇವೆ. ಇಲ್ಲಿ ಬಂಜಾರ ಜನಾಂಗಕ್ಕೆ ಹೊರತಾದ ಒಬ್ಬ ವ್ಯಕ್ತಿ ಆ ಜನಾಂಗದ ಕುರಿತಾಗಿ ಒಂದು ಕಾದಂಬರಿಯನ್ನು ರಚನೆ ಮಾಡುವಂತಹ ಒಂದು ಸಂದರ್ಭ, ಪ್ರಯತ್ನವನ್ನು ಕಾಣುತ್ತೇವೆ. ಬಂಜಾರಾ ಜನಾಂಗದ ಒಬ್ಬ ವ್ಯಕ್ತಿ ಬಂಜಾರಾ ಜನಾಂಗದ ವಸ್ತುವನ್ನೊಳಗೊಂಡ ಕಾದಂಬರಿಯನ್ನು ರಚಿಸುವದಕ್ಕೂ ಆ ಜನಾಂಗದಿಂದ ಹೊರತಾದ ಒಬ್ಬ ವ್ಯಕ್ತಿ ಆ ಜನಾಂಗದ ವಸ್ತುವನ್ನೊಳಗೊಂಡ ಕಾದಂಬರಿಯನ್ನು ರಚಿಸುವದಕ್ಕೂ ಇರುವ ವ್ಯತ್ಯಾಸವನ್ನು ಕಾಣುತ್ತೇವೆ.

ತದನಂತರ ಬಂಜಾರ ಜನಾಂಗದ ವಸ್ತುವನ್ನು ಒಳಗೊಂಡಂತಹ ಬೃಹತ್ ಹಾಗೂ ಮಧ್ಯಮ ಗಾತ್ರದ ಕಾದಂಬರಿಗಳನ್ನು ಕಾಣುವುದೇ ಡಾ. ಶಿರಗಾನಹಳ್ಳಿ ಶಾಂತನಾಯ್ಕರ ಕಾದಂಬರಿಗಳಲ್ಲಿ. ಪ್ರಸ್ತುತ ಬಂಜಾರ ಸಮಾಜದ ನೆಲೆಯಿಂದ ಬಂದ ವ್ಯಕ್ತಿ ಪಟ್ಟಂತಹ ಕಷ್ಟಗಳನ್ನು ತಮ್ಮ ಕಾದಂಬರಿಯ ಮೂಲಕ ಕಟ್ಟಿಕೊಡುವ ಮತ್ತೊಂದು ತಳಮಟ್ಟದ ಪ್ರಯತ್ನವನ್ನು ಡಾ. ಶಾಂತನಾಯ್ಕರ ಕಾದಂಬರಿಗಳಲ್ಲಿ ಕಾಣುತ್ತೇವೆ. ಡಾ. ಶಿರಗಾನಹಳ್ಳಿ ಶಾಂತ ನಾಯ್ಕರು ಬರೆದ ಬಂಜಾರಾ ಜನಾಂಗದ ವಸ್ತುವನ್ನೊಳಗೊಂಡ ಕಾದಂಬರಿಗಳೆಂದರೆ 'ಗೋರ್ ಮಾಟಿ', 'ಲಮಾಣಿ ಚಿಮ್ಮಿ ಆತ್ಮಚರಿತ್ರೆ', 'ಮಲಾಣ್' ಹಾಗೂ ತಾಂಡ್ಯ. ರಾಜ-ಮಹಾರಾಜರ ಪರಂಪರೆಯನ್ನು ಹೊಂದಿರುವಂತಹ ಬಂಜಾರ ಜನಾಂಗ ಗುಜರಾತ, ಉತ್ತರಪ್ರದೇಶ ಹಾಗೂ ರಾಜಸ್ತಾನಗಳಲ್ಲಿ ವ್ಯಾಪಾರಕ್ಕೆ ಹೆಸರುವಾಸಿಯಾಗಿ, ಈ ಮಣ್ಣಿನ ಅಂತಃಸತ್ವದಿಂದ ಹುಟ್ಟಿದ ಸಮುದಾಯ ಎಂಬುದನ್ನು ಗಮನಿಸಬೇಕಾಗುತ್ತದೆ. ಬ್ರಿಟಿಷರು ಕುತಂತ್ರದಿಂದ ಬಂಜಾರ ಜನಾಂಗಕ್ಕೆ ಕಪ್ಪು ಚುಕ್ಕೆಯನ್ನು ಹೊರಿಸುವ ಪ್ರಯತ್ನವನ್ನು ಹಾಗೂ ಸುದೀರ್ಘ ವಲಸೆಯನ್ನು ಈ ಮಲಾಣ್ ಕಾದಂಬರಿಯಲ್ಲಿ ಓದುಗರಾದ ನಾವು ಕಾಣುತ್ತೇವೆ.

ಇದೊಂದು ಶತಮಾನಗಳ ವಲಸೆಯ ಕಥೆ. ರಾಜಸ್ತಾನದ ಒಂದು ಹಳ್ಳಿಯಿಂದ ಕರ್ನಾಟಕ-ಆಂಧ್ರ ಕಡೆಗೆ ವಲಸೆ ಬಂದಂತಹ ಈ ಜನಾಂಗದ ಕಥೆಯನ್ನು ಓದಿದರೆ ರೋಚಕ ಅನುಭವ ಆಗುತ್ತದೆ. ಈ ಕಾದಂಬರಿಯ ಓದುಗರಾದ ನಮಗೆ ಕೆಲವು ಕಡೆ ಕೋಪ, ಕೆಲವು ಕಡೆ ಕಣ್ಣೀರು ಈ ಕಾದಂಬರಿಯನ್ನು ಓದುವ ಸಂದರ್ಭದಲ್ಲಿ ನಮ್ಮನ್ನು ಆವರಿಸುತ್ತವೆ. ಬಂಜಾರ ಜನಾಂಗವು ರಾಜಸ್ಥಾನದ ಹಳ್ಳಿಗಳಲ್ಲಿ ವೈಭವದಿಂದ ಜೀವನ ಮಾಡಿಕೊಂಡಿದ್ದವರು. ಬಂಜಾರರು ವ್ಯಾಪಾರ ವಹಿವಾಟಿನಲ್ಲಿ ಸಾಕಷ್ಟು ಗಟ್ಟಿ ಹಾಗೂ ಚಾಣಾಕ್ಷ ಎನಿಸಿಕೊಂಡವರು. ಆದರೆ ದುರದೃಷ್ಟವಶಾತ ಯಾವಾಗ ದೆಹಲಿಯಲ್ಲಿ ಮುಸ್ಲಿಂ ಆಡಳಿತ ಪ್ರಾರಂಭವಾಯಿತೋ ಅದರಲ್ಲೂ ಔರಂಗಜೇಬನು ದೆಹಲಿಯ ಸಿಂಹಾಸನವನ್ನೇರಿದನೊ ಆಗ ಪ್ರಾರಂಭವಾಯಿತು ಬಂಜಾರರ ದುರಾದೃಷ್ಟ.

ಮಲಾಣ್ ಕಾದಂಬರಿಯ ಪ್ರಾರಂಭವನ್ನು ದಕ್ಷಿಣಕ್ಕೆ ವಲಸೆ ಹೋಗುವ ಸೈನ್ಯದೊಂದಿಗೆ ಸೇರಿಕೊಳ್ಳುವ ಇಬ್ಬರು ಬಂಜಾರ ಸಹೋದರರ ಕಥೆಯೊಂದಿಗೆ ಗುರುತಿಸಲಾಗುತ್ತದೆ. ಈ ಸಹೋದರರು ಸೈನ್ಯಕ್ಕೆ ಸೇರಲು ಕಾರಣ ಮುಸ್ಲಿಮ್ ಯುವಕರು ತಮ್ಮ ಸಹೋದರಿಯರನ್ನು ಆಗ್ವಾ ಮಾಡಿಕೊಂಡು ಹೋದಾರೆಂಬ ಅಂಜಿಕೆಯಿಂದಲೇ. ಬಂಜಾರ ಹುಡುಗಿಯರು ತಾಂಡಾಗಳಿಂದ ಹೊರಗೆ ಬರುವುದೇ ದೀಪಾವಳಿ ಹಬ್ಬದಂದು ಅದಕ್ಕೆ ಕಾರಣ ಮರಿಯಮ್ಮನ ದೇವಾಲಯದ ಮುಂದೆ ನೃತ್ಯ ಮಾಡಲು. ಆಗ ಮಾತ್ರ ಮುಸ್ಲಿಂ ಯುವಕರಿಗೆ ಆ ಬಂಜಾರ ಹುಡುಗಿಯರು ಕಾಣುತ್ತಿದ್ದುದು. ಹೀಗೆ ಕಂಡ

ಯುವತಿಯರನ್ನು ಗುಂಪುಗುಂಪಾಗಿ ಬಂದು ಮುಸ್ಲಿಂ ಯುವಕರು ಅಪಹರಿಸಿಕೊಂಡು ಹೋಗಿಬಿಡುತ್ತಿದ್ದರು. ಹಾಗೆಯೇ ಅಪಹರಿಸಿಕೊಂಡು ಹೋದ ನಂತರ ಆ ಯುವತಿಯರು ಮುಸ್ಲಿಂ ಕೂಡ ಆಗಲಾರದೆ ಬಂಜಾರ ಸಮುದಾಯಕ್ಕೂ ಸೇರಲಾಗದ ತ್ರಿಶಂಕು ಸ್ಥಿತಿ ಉದ್ಭವಿಸುತಿತ್ತು. ಹೀಗಾಗಿ ಅವರು ಜೀವನದಲ್ಲಿ ನೊಂದು-ಬೆಂದು, ಬೆಸತ್ತು ಕೊನೆಗೆ ಆತ್ಮಹತ್ಯೆಗೆ ಶರಣಾಗುತ್ತಿದ್ದರು. ಇದರಿಂದಾಗಿ ಎತ್ತುಗಳನ್ನು ಸಾಕಿಕೊಂಡು ದೊಡ್ಡ ವ್ಯಾಪಾರಸ್ಥರಾಗಿದ್ದ, ಬಂಜಾರ ಗುಜರಾತ್ ಕಡೆಗೆ, ಉತ್ತರ ಪ್ರದೇಶ ಹಾಗೂ ಮಧ್ಯ ಪ್ರದೇಶದ ಕಾಡುಗಳೊಳಗೆ ಸೇರಿಕೊಂಡು ಬುಡಕಟ್ಟು ಜನಾಂಗದವರಂತೆ ವಾಸಿಸಲು ಆರಂಭಿಸಿ ಬುಡಕಟ್ಟು ಜನಾಂಗವಾದರು. ಆದರೆ ಬಂಜಾರರಿಗೆ ವ್ಯಾಪಾರದಲ್ಲಿ ಇದ್ದಂತಹ ಚಾಣಾಕ್ಷತನ, ನೈಪುಣ್ಯತೆ, ಅವರ ವ್ಯವಹಾರಿಕ ಜ್ಞಾನ ಮತ್ತು ಅವರ ಧೈರ್ಯ, ಸಾಹಸ ಅಷ್ಟೇ ಅಲ್ಲದೆ ಮುಸ್ಲಿಂ ಆಡಳಿತಗಾರರಿಗೆ ಅವರ ಮಾರ್ಗದರ್ಶನ ಅನಿವಾರ್ಯವಾಗಿತ್ತು.

ಬಂಜಾರರೂ ಸಹ ಮುಸ್ಲಿಂ ಆಡಳಿತದಿಂದ ದೂರಸರಿದು ತಮ್ಮ ಹೆಣ್ಣುಮಕ್ಕಳ ರಕ್ಷಣೆ ಮಾಡಿಕೊಳ್ಳುವಂತಹ ವಿಚಾರದಲ್ಲಿ ಮಗ್ನರಾಗಿದ್ದರು. ಇದೇ ಸಮಯದಲ್ಲಿ ಮೀಟು ಮತ್ತು ಥಾವುವಿನ ತಂಗಿ ರೂಪ್ಕಿ ಹಾಗೂ ಅವಳ ತಂಗಿ ಪಾರುವನ್ನು ರಕ್ಷಣೆ ಮಾಡುವ ಅವಸರದಲ್ಲಿ ಹತ್ತು ಮುಸ್ಲಿಂ ಯುವಕರನ್ನು ಕೊಂದುಹಾಕಿದ್ದರು. ಈ ವಿಷಯ ಔರಂಗಜೇಬನ ಸೇನಾಧಿಪತಿಯಾಗಿದ್ದ ಜುಲ್ಮಾನ ಖಾನಿಗೆ ತಿಳಿದರೆ ಇಡೀ ತಾಂಡಾ ಸರ್ವನಾಶವಾಗುವುದನ್ನು ಅರಿತು ಸಂಕೆಬಾಕ್ರಿ ತಾಂಡವನ್ನು ಬಿಟ್ಟು ಜೈಪುರ ಸಮೀಪದ ದಕ್ಷಿಣಭಾರತದ ವ್ಯಾಪಾರಕ್ಕೆಂದು ತಮ್ಮೊಂದಿಗೆ ಸೈನ್ಯವನ್ನು ಆಯ್ಕೆ ಮಾಡುತ್ತಿರುವ ಜಂಗಿ ಭಂಗಿ ಎಂಬ ಸಹೋದರ ಕಡೆ ಬಂದಿದ್ದರು. ತಾವು ಚವ್ಹಾಣರು ಎಂದು ಹೇಳಿ ಕೆಲಸಕ್ಕೆ ಸೇರಿಕೊಂಡು ಹೊರಡುವ ಮಹಾ ವಲಸೆ ಕಥೆಯನ್ನು ನಾವು ಕಾಣುತ್ತೇವೆ.

ಉತ್ತರದಿಂದ ದಕ್ಷಿಣದಡೆಗೆ ಬರುವಂತಹ ಈ ವಲಸೆ ಪಯಣದಲ್ಲಿಯೆ ಮದುವೆಯನ್ನು ಮಾಡಿಕೊಳ್ಳುವ ಮೀಟುವಿನ ಬಾಳಿನ ತಿರುವಿನ ಕಥೆಯನ್ನು ಇಲ್ಲಿ ಕಾಣುತ್ತೇವೆ. ಮೀಟು ಹೊರಟಿದ್ದು ಆಸಿಫಖಾನ್ ಎನ್ನುವವನೊಡನೆ, ಆದರೆ ಆತನ ಮಗಳು ಮೀಟುವಿನ ಶೌರ್ಯಕ್ಕೆ, ಸಾಹಸಕ್ಕೆ ಬೆರಗಾಗಿ ಆತನ ಮೇಲಿನ ಮೋಹದಿಂದ ಆತನಿಗೆ ಒಲಿದು ಬಂದಿದ್ದಳು. ಮದುವೆಯಾದ ಮೀಟು ಸೈನಾಜ್‌ಳ ಒತ್ತಾಯಕ್ಕೆ ಅನಿವಾರ್ಯವಾಗಿ ಅವಳೊಂದಿಗೆ ಸಂಬಂಧ ಬೆಳೆಸಿಕೊಂಡಿದ್ದ. ಅವಳ ಮದುವೆಯ ನಂತರವೂ ಇಬ್ಬರ ಸಂಬಂಧ ಮುಂದುವರೆದು ಆಕೆ ಮೀಟುವಿನಿಂದ ಒಬ್ಬ ಮಗನನ್ನು ಪಡೆಯುವ ಸಂದರ್ಭದಲ್ಲಿ ಸಾವನ್ನಪ್ಪುತ್ತಾಳೆ. ಆದರೆ ಮುಂದೆ ಇವರಿಬ್ಬರ ನಡುವಿನ ಅನೈತಿಕ ಸಂಬಂಧ ಆಕೆಯ ಗಂಡ ಲತೀಫ್‌ಖಾನನಿಗೆ ಗೊತ್ತಾದಾಗ, ತನ್ನ ಮಾವನ ಅಧಿಕಾರವನ್ನು ಪಡೆಯುವುದಕ್ಕೋಸ್ಕರ ಮೀಟುನನ್ನು ಕೊಂದು ಹಾಕುವುದರೊಂದಿಗೆ ಈ ಕಥೆಗೆ ಮತ್ತೊಂದು ತಿರುವು ಸಿಗುವುದನ್ನು ಕಾಣುತ್ತೇವೆ.

ಮೀಟು ಅಂತ್ಯವಾದ ಬಳಿಕ ಆತನ ತಮ್ಮ ಥಾವೂ ಅಣ್ಣನ ಹೆಂಡತಿ ಹಾಗೂ ಆತನ ಮಗ ದೆಸೂನನ್ನು ತುಂಬಾ ಜಾಗ್ರತೆಯಿಂದ ಕಾಪಾಡಿಕೊಳ್ಳುತ್ತಾನೆ. ಆದರೂ ಪೀಳಿಗೆಗಳು ಮುಂದುವರೆಯದಂತೆ ಹಳೆಯ ಬಾಂಧವ್ಯದ ಎಳೆ ಬಿಚ್ಚಿಕೊಳ್ಳುವುದನ್ನು ಕಾಣುತ್ತೇವೆ. ಹೈದರಾಬಾದಿನ ಕಡೆ ವ್ಯಾಪಾರಕ್ಕೆಂದು ಮಗ ಲಚ್ಮ ಹೋದ; ಥಾವೂ ಕೂಡ ಅಲ್ಲಿ ನಿಜಾಮರ ಜೊತೆಗಿದ್ದ ಲತೀಫ್ ಖಾನನ ಮಗನ ಸೈನಿಕರಿಂದ ಸತ್ತು ಹೋಗುತ್ತಾನೆ. ಗಾಯದಿಂದ ನಂಜೇರಿದ ಲಚ್ಮ ಕೂಡ ಮರಣ ಹೊಂದುತ್ತಾನೆ. ಲಚ್ಮನ ಹೆಂಡತಿ ಸತಿಯಾಗುತ್ತಾಳೆ. ಇದಕ್ಕೆ ಸಾಕ್ಷಿಯೆಂಬಂತೆ ದೈವಿಸ್ಥಾನ ಪಡೆದ ಆಕೆಯನ್ನು ಇಂದಿಗೂ ಭರಮ್‌ಕೋಟ್ಟ ಜನಾಂಗ ಗುಜಾಸತಿಯನ್ನು ಪ್ರಾರ್ಥಿಸಿ ಮುಂದುವರೆಯುವುದನದನು ಈಗಲೂ ಕಾಣುತ್ತೇವೆ.

ಇದಾಗಿ ದೇಸು ಹೈದರಾಬಾದಿನ ಕಡೆಗೆ ಮತ್ತೆ ವ್ಯಾಪಾರಕ್ಕೆ ಹೊರಟಾಗ ಲತೀಫ್‌ಖಾನನ ಮಗ ಜಂಗ್ಲಿಖಾನ್‌ನನ್ನು ಭೇಟಿಯಾಗುತ್ತಾನೆ. ತನ್ನಂತೆಯೇ ಇರುವ ಬಂಜಾರನನ್ನು ನೋಡಲು ಜಂಗ್ಲಿಖಾನನು ಆಸಕ್ತನಾದನು. ಅಲ್ಲದೆ ದರೋಡೆಕೋರರು ದೇಸೂನ ಮೇಲೆ ದಾಳಿ ಮಾಡಿದಾಗ ಆತನನ್ನು ಜಂಗ್ಲಿಖಾನ ರಕ್ಷಿಸುತ್ತಾನೆ. ಇದಾದನಂತರ ಬಂಜಾರರಿಗೆ ದೊಡ್ಡ ಹೊಡೆತ ಬಿದ್ದದ್ದು ಬ್ರಿಟಿಷರ ಆಡಳಿತದಲ್ಲಿ. ಸ್ವತಃ ವ್ಯಾಪಾರಿಗಳಾಗಿದ್ದ ಬ್ರಿಟಿಷರು ಸಣ್ಣಪುಟ್ಟ ವ್ಯಾಪಾರಿಗಳಿಂದ ಕೂಡಿದ ಸಂಪದ್ಭರಿತ ದೇಶವಾದ ಭಾರತದಲ್ಲಿರುವ ವ್ಯಾಪಾರಿಗಳನ್ನು ಹೊಸಕಿ ಹಾಕಿದರು. ಅಲ್ಲದೆ ತಮ್ಮ ಅನುಮತಿ ಇಲ್ಲದೆ ವ್ಯಾಪಾರ ಮಾಡುತ್ತಾರೆ ಎನ್ನುವ ಕಾರಣಕ್ಕಾಗಿ ಲಂಬಾಣಿ ಜನಾಂಗವನ್ನು ದರೋಡೆಕೋರರು ಎಂದು ಬಿಂಬಿಸಿ ಬಿಟ್ಟಿದ್ದರು. ಬಂಜಾರ ಜನಾಂಗ ಬ್ರಿಟಿಷರಿಂದ ತಮ್ಮನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಮತ್ತೆ ಕಾಡುಮೇಡುಗಳನ್ನೇ ಆಶ್ರಯಿಸಬೇಕಾಗಿ ಬಂದದ್ದು ವಿಪರ್ಯಾಸವಾಗಿ ಗೋಚರಿಸುತ್ತದೆ.

ಡಾ. ಶಿರಗಾನಹಳ್ಳಿ ಶಾಂತನಾಯ್ಕ ಅವರ ಲಂಬಾಣಿ ಸಮುದಾಯದ ಮೂರನೆಯ ವಿಶಿಷ್ಟ ಕಾದಂಬರಿ ಎಂದರೆ 'ಲಮಾಣಿ ಚಿಮ್ನಿ ಆತ್ಮ ಚರಿತೆ". ಪ್ರಸ್ತುತ ಕಾದಂಬರಿಯಲ್ಲಿ ನಾಯಕರು ಕಾದಂಬರಿಯ ಪ್ರಾರಂಭದಲ್ಲಿ ಒಂದು ಅದ್ಭುತವಾದಂತಹ ಮಾತನ್ನು ಹೇಳ್ತಾ ಕಾದಂಬರಿಯ ಕಥಾಹಂದರದ ಕಡೆ ಸೂಚ್ಯವಾಗಿ ನಮ್ಮ ಗಮನ ಸೆಳೆಯುತ್ತಾರೆ. ಆ ಮಾತು ಎಂದರೆ "ಕನಸು ಕಂಡವರ ಕನಸುಗಳು ಯಾವತ್ತೂ ಈಡೇರುವುದಿಲ್ಲ, ನುಚ್ಚುನೂರಾಗಿ ಬಿಡುತ್ತವೆ. ಇಂತಹ ಕರಾಳ ಕನಸು ಕಂಡು ಬದುಕಬೇಕೆಂದು ಹಂಬಲಪಟ್ಟಿದ್ದ ಚಿಮ್ನಿಗೆ ಅವಳ ಎದೆಯೊಳಗೆ ತೂತಾಗಿದೆ ಎಂದು ಕೇಳಿದಾಗ ನಿಂತ ನೆಲ ಕಾಲಡಿ ಕುಸಿದಿತ್ತು." ನಿರ್ಗತಿಕ ಅಂದರೆ ಬಡತನ, ಅನಕ್ಷರಸ್ಥ ಬದುಕಿನ ಧಾರುಣ ಕಥೆಯೇ ಈ ಒಂದು ಕಾದಂಬರಿಯ ಚಿತ್ರಣ ಎಂದೆನಿಸುತ್ತದೆ.

ಕಾದಂಬರಿಯ ಪ್ರಾರಂಭದಲ್ಲಿ ಚಿನ್ನಾನಾಯ್ಕ ಕಾಣಿಸಿಕೊಳ್ಳುತ್ತಾನೆ. ಈತ ಮೂವತ್ತು ವರ್ಷಗಳಿಂದ ಸರಕಾರಿ ಕೆಲಸದಲ್ಲಿ ಇದ್ದು ತನ್ನ ಹಿಂದಿನ ಕಡುಕಷ್ಟದ ಜೀವನವನ್ನು ಮೆಲುಕು ಹಾಕುವುದರೊಂದಿಗೆ ಹಾಗೂ ನನ್ನ ಚಿಕ್ಕಪ್ಪನ ಮಗಳು ಅಂದರೆ ತನ್ನಕ್ಕ ಚಿಮ್ಮಿಯು ಸತ್ತು ಇಪ್ಪತ್ತು ವರ್ಷಗಳಾಗಿರಬಹುದು ಎಂಬ ಮಾತಿನೊಂದಿಗೆ ಈ ಕಾದಂಬರಿಯ ಪ್ರಾರಂಭವನ್ನು ಕಾಣುತ್ತೇವೆ. ನಾಯಕನ ಅಪ್ಪ ಸಂತುನಾಯ್ಕ ತನ್ನ ಮಕ್ಕಳಿಗೆ ಅನಾರೋಗ್ಯ ಪೀಡಿತರಾದಾಗ ಅವರ ಆರೈಕೆಗಾಗಿ ಆತ ಮಾಡುವ ವಿಧಿವಿಧಾನಗಳನ್ನು ನೋಡಿದಾಗ ಸಹಜವಾಗಿಯೇ ಬುಡಕಟ್ಟು ಜನಾಂಗದ ಸಂಪ್ರದಾಯವನ್ನು, ಪರಂಪರೆಯನ್ನು, ಚಿಕಿತ್ಸಾಪದ್ಧತಿಯನ್ನು ಆತನ ನಡವಳಿಕೆಯಲ್ಲಿ ನಾವು ಕಾಣುತ್ತೇವೆ. ಅಂದರೆ ವಾಂತಿಭೇದಿ ಆದಾಗ ಚರಗಿಯೊಳಗೆ ಬೆಂಕಿ ಕೆಂಡ ಹಾಕಿ ಏಳು ಸಲ ನೆದರು ತೆಗೆಯುವುದನ್ನು ಕಾಣುತ್ತೇವೆ.

ಹೀಗೆ ಈ ಕಾದಂಬರಿ ಕಥಾಹಂದರ ಸಾಗುತ್ತಿರುವುದನ್ನು ನೋಡಿದಾಗ ಚಿನ್ನು ನಾಯಕನ ಅಪ್ಪ ಸಂತುನಾಯಕನ ತಮ್ಮ ಮಂಗಲ್ಯಾನಾಯಕ ಗಂಡು ಸಂತಾನವಾಗಬೇಕು ಎಂಬ ಆಸೆಯಿಂದ ಹನ್ನೆರಡು ಹೆಣ್ಣು ಜನ ಮಕ್ಕಳನ್ನು ಪಡೆದಾಗ ಊರಿನ ಹಿರಿಯ ನಾಯಕ ಪಾಂಡನಾಯ್ಕನ ಮೂಲಕ ಲೇಖಕರು ಆಧುನಿಕ ಮನೋಭಾವದವರಾಗಿ ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳುವ ಮಾತನ್ನು ಆಡಿಸುತ್ತಾರೆ "ಲೇ ಮಂಗು, ಯಾಕಿಂಗೆ ಹಂದಿ ಹಂಗ ಬುಳು ಬುಳುಂತ ಹೆಣ್ಣು ಹುಡ್ರನ್ನ ಹಡಿಯ್ಯಾಕ ಹತ್ತಿ, ನಿನ್ನವ್ವನ ಸೂಳಿಮಗ್ನ, ಬಂದಮಾಡು, ಅದೇನೋ ಸರ್ಕಾರದವ್ರು ನರಕೊಯ್ದು ಮಕ್ಕಳಾಗದಂಗ ಮಾಡ್ತಾರಂತಲ್ಲ ನೀನಾರ ಹೋಗು, ಇಲ್ಲ ನಿನ್ನ ಹೆಂಡತಿ ಚಿನ್ನಿನಾರು ಕಳ್ಸು" ಅಂತ ಹೇಳುವಾಗ ಆಧುನಿಕ ಮನೋಭಾವವನ್ನು ಇಲ್ಲಿ ಕಾಣುತ್ತೇವೆ. ಅಲ್ಲದೆ ಲಂಬಾಣಿ ಜನಾಂಗ ಆಧುನಿಕತೆಗೆ ಹೊಂದಿಕೊಳ್ಳುವುದನ್ನು ಕಾಣುತ್ತೇವೆ. ಇದಕ್ಕೆಲ್ಲ ಜಗ್ಗದ ಮನಸ್ಥಿತಿ ಮಂಗಲ್ಯಾನಾಯ್ಕನದಾಗಿತ್ತು. ಹೀಗಾಗಿ ಆತ ಮತ್ತೊಂದು ಮದುವೆಯನ್ನು ಗಂಡು ಮಗುವನ್ನು ಪಡೆದುಕೊಳ್ಳಲು ಮಾಡಿಕೊಳ್ಳುತ್ತಾನೆ. ಅದು ರತ್ನ ನಾಯಕನ ತಂಗಿ ಪೀಕಿ ಅನ್ನೋಳನ್ನ ಮದುವೆ ಮಾಡಿಕೊಳ್ಳುತ್ತಾನೆ. 'ಮೆಚ್ಚಿ ತಂದ ಎಮ್ಮಿ ಮಣಕ ಹಾಕ್ತು' ಅನ್ನೋಹಂಗೆ ಈಕೆಯಿಂದಲೂ ಆರಂಭಕ್ಕೆ ಆರು ಹೆಣ್ಣುಮಕ್ಕಳನ್ನು ಮಂಗಲ್ಯಾ ನಾಯಕ ಪಡೆಯುತ್ತಾನೆ.

ಮಂಗಲ್ಯಾ ನಾಯಕನ ಮೊದಲನೆಯ ಹೆಂಡತಿ ಚಿನ್ನಿಗೆ ಆಗಿದ್ದ ಹದಿಮೂರು ಜನ ಹೆಣ್ಣುಮಕ್ಕಳು ಎರಡನೇ ಹೆಂಡತಿ ಪೀಳಿಗೆ ಆಗಿದ್ದ ಏಳು ಜನ ಒಟ್ಟು ಇಪ್ಪತ್ತು ಜನ ಹೆಣ್ಣು ಮಕ್ಕಳನ್ನು ಪಡೆದಿದ್ದ ಇವರಲ್ಲಿ ಮೊದಲನೆಯ ಹೆಂಡತಿಯ ಮಗಳಾಗಿದ್ದ ಚಿಮ್ಮಿಯೆ ಈ ಕಾದಂಬರಿಯ ನಾಯಕಿ. ಅದೊಂದು ಕಾಲ ತಾಂಡಾದ ಜನ ಅದೆಷ್ಟು

ದುಡಿದರು ಅವರಿಗೆ ಅದು ಸಾಲದಾಗುತ್ತಿತ್ತು. ಹಾಗಾಗಿಯೇ ಅವರು ಬೇರೆಡೆ ಒಳ್ಳೆಯ ಆದಾಯಕ್ಕಾಗಿ ದುಡಿಯಲು ವಲಸೆಯ ಹೋಗಬೇಕಾಗುತ್ತಿತ್ತು. ಹೀಗೆ ವಲಸೆ ಹೋಗುವುದರಲ್ಲಿ ಚಿಮ್ನಿ ಎತ್ತಿದ ಕೈ. ಅಲ್ಲದೆ ತಮ್ಮ ಕುಟುಂಬದ ಎಲ್ಲ ತನ್ನ ಸಹೋದರಿಯರನ್ನು ಜೊತೆಗೂಡಿಸಿಕೊಂಡು ದುಡಿದು ಕುಟುಂಬವನ್ನು ಸಾಕುವುದರಲ್ಲಿ ಚಿಮ್ನಿಯು ತುಂಬಾ ಚೆನ್ನಾಗಿ ಪಳಗಿದ್ದಳು. ಹೀಗಾಗಿ ಕುಡುಕನಾದ ಆಕೆಯ ತಂದೆ ಮಂಗಲ್ಯಾನಾಯಕನಿಗೆ ಸಂಸಾರದ ತಾಪತ್ರಯವೇ ಇರಲಿಲ್ಲ.

ಈ ಕಾದಂಬರಿಯ ನಾಯಕಿಯಾದ ಚಿಮ್ನಿ ಕುಟುಂಬದಲ್ಲಿ ಎಲ್ಲ ಸದಸ್ಯರು ವಿಶ್ವಾಸವನ್ನು ಹೇಗೆ ಗಳಿಸಿದ್ದಳೊ ಹಾಗೆಯೆ ಕುಟುಂಬದ ಹೊರಗೆ ಕೂಡ, ತಾನು ದುಡಿಯುವ ಸಂದರ್ಭದಲ್ಲಿ ಅಲ್ಲಿರುವ ಜನರೊಂದಿಗೆ, ಕೆಲಸ ಕೊಡುವ ಮಾಲೀಕರೊಂದಿಗೆ ಪ್ರಾಮಾಣಿಕತೆಯನ್ನು ಹೊಂದಿದ್ದಳು. ಊರಲ್ಲೆಲ್ಲಾ ಅವಳದೇ ಸುದ್ದಿ ಎಲ್ಲ ಕುಟುಂಬಗಳಲ್ಲಿ ಆಕೆಯ ಆದರ್ಶವು ಚರ್ಚೆಯಾಗುತ್ತಿತ್ತು. ಹೀಗಾಗಿ ತಾಂಡಾ ಸುತ್ತಮುತ್ತಲಿನ ಲಿಂಗಾಯಿತರು, ಜಮೀನ್ದಾರು ಚಿಮ್ನಿನ ತುಂಬಾನೇ ನಂಬಿದ್ರು ಸಾಲಕಂತ ಹೋದವರಿಗೆ, ರಾಘವ ಎಂಬ ಶ್ರೀಮಂತ ಹೇಳುವ "ನೋಡ್ರಲೇ ನಿಮ್ಮೂರೊಳಗ ನಿಯತ್ತಿನ ಮನುಷ್ಯಳು ಅಂತಂದ್ರೆ ಆ ಮಂಗಲ್ಯಾನ ಮಗಳು ಚಿಮ್ನಿ ಒಬ್ಬಳೇ" ಚಿಮ್ನಿಯ ವ್ಯಕ್ತಿತ್ವದ ಪರಿಚಯ ಆಗುತ್ತದೆ.

ಕೊನೆಗೆ ಕಾದಂಬರಿಯ ಅಂತ್ಯದಲ್ಲಿ ಚಿಮ್ನಿಯ ದುರಂತ ಅಂತ್ಯವನ್ನು ಕಾಣುತ್ತೇವೆ. ಹದಿಹರಯದಲ್ಲಿ ಕನಸುಗಳ ರೆಕ್ಕೆಯನ್ನು ಕಟ್ಟಿ ಹಾರಾಡಿಕೊಂಡು, ವಯೋಸಹಜವಾಗಿ ಮದುವೆಯ ಆಗಬೇಕಾದ ಚಿನ್ನಿಗೆ ಏಕಾಏಕಿ ಜ್ವರ ಬಂದು ಕೆಲವು ದಿನಗಳು ತಾಂಡಾದ ಸಂಪ್ರದಾಯದಂತೆ ದೇವರು-ದಿಂಡರು ಉಪಚಾರ ಮಾಡಿದಾಗಲೂ ಜ್ವರ ಕಡಿಮೆಯಾಗದ್ದರಿಂದ ವೈದ್ಯರ ಹತ್ತಿರ ಅವಳನ್ನು ಚಿಕಿತ್ಸೆಗೆ ಕರೆದುಕೊಂಡು ಹೋದಾಗ ವೈದ್ಯರ ಸಲಹೆಯಂತೆ ದಾವಣಗೆರೆಯ ದೊಡ್ಡ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಅಲ್ಲಿ ವೈದ್ಯರು ಪರೀಕ್ಷಿಸಿ ಕೊನೆಗೆ ಕಾಯಿಲೆ ಗೊತ್ತಾಗದೆ ಇದ್ದಾಗ ಮಂಗಲ್ಯಾ ನಾಯಕನಿಗೆ ಬೆಂಗಳೂರಿಂದ ವೈದ್ಯರು ಬರುತ್ತಾರೆ, ಆಗ ಅವರು ಪರೀಕ್ಷಿಸಿ ಏನು ಹೇಳುತ್ತಾರೋ ನೋಡೋಣ ಸದ್ಯಕ್ಕೆ ಅವಳ ಜ್ವರ ಸ್ವಲ್ಪ ಕಡಿಮೆ ಆಗಿದೆ ಎಂದು ದಾವಣಗೆರೆಯ ವೈದ್ಯರು ಹೇಳುತ್ತಾರೆ. ಬೆಂಗಳೂರಿನ ವೈದ್ಯರು ಬಂದು ಪರೀಕ್ಷಿಸಿ "ಆಕೆಯ ಹೃದಯದಲ್ಲಿ ಒಂದು ಬೆರಳಿನಷ್ಟು ತೂತಾಗಿದೆ, ಆಕೆ ಬದುಕಿದರೆ ಕೇವಲ ಆರು ತಿಂಗಳು ಮಾತ್ರ" ಎಂದು ವೈದ್ಯರು ಹೇಳಿದಾಗ ನಾಯಕನಿಗೆ ದಿಗಿಲು ಬಡಿದಂತಾಗಿತ್ತು. ವಿಧಿಯ ಕ್ರೂರತೆಯನ್ನು ಕಂಡು ವಿಧಿಯು ಆಟ ಆಡುವುದು ನಮ್ಮಂತಹ ಬಡವರೊಂದಿಗೆ,

ಶ್ರೀಮಂತರೊಂದಿಗಲ್ಲ. ನನ್ನ ಮಗಳಿನ ಮುಖಾಂತರ ತನಗಾದ ಅನ್ಯಾಯವನ್ನು, ವಿಧಿಯ ಕ್ರೂರತನವನ್ನು ಆತ ಕಟುವಾಗಿ ಟೀಕಿಸುತ್ತಿದ್ದ.

ಅದೆಷ್ಟು ಬಡವರು ಈ ರೀತಿ ನಮ್ಮ ದೇಶದಲ್ಲಿ ಗೊತ್ತಿಲ್ಲದಂತೆಯೇ ವಿಧಿಯ ಕ್ರೂರತನಕ್ಕೆ ಬಲಿಯಾಗುವುದನ್ನು ಸಾಂಕೇತಿಕವಾಗಿ ಡಾ. ಶಾಂತನಾಯ್ಕರು ತುಂಬಾ ಸೂಕ್ಷ್ಮವಾಗಿ ಚಿಮ್ನಿಯನ್ನು ನೆಪಮಾಡಿಕೊಂಡು ಸಾರ್ವತ್ರಿಕವಾಗಿರುವ ಈ ನೋವನ್ನು ಈ ಕಾದಂಬರಿಯ ಮುಖಾಂತರ ತೋರಿಸುವುದನ್ನು ನಾವು ಕಾಣುತ್ತೇವೆ. ಡಾ. ಶಾಂತನಾಯ್ಕರು ಬಂಜಾರ ಸಮುದಾಯದಲ್ಲಿರುವ ಬಡತನ, ಅನಕ್ಷರತೆ, ಅಂಧಕಾರ, ಮುಗ್ಧತೆ ಇನ್ನೂ ಹಲವು ರೀತಿಯ ಸಮಸ್ಯೆಗಳನ್ನು ಸಹಿಸಿಕೊಂಡು ಅದರೊಂದಿಗೆ ಬದುಕನ್ನು ಸಾಗಿಸುತ್ತಿರುವ ಪರಿಯನ್ನು ಡಾ. ಶಾಂತನಾಯ್ಕರು ತಮ್ಮ ಈ ಕಾದಂಬರಿಗಳ ಮುಖಾಂತರ ತುಂಬಾ ಪರಿಣಾಮಕಾರಿಯಾಗಿ ಕಟ್ಟಿಕೊಡುವುದನ್ನು ನಾವು ಕಾಣುತ್ತೇವೆ. ಹೀಗಾಗಿ ಡಾ. ಶಾಂತ ನಾಯ್ಕರು ಕನ್ನಡ ಕಾದಂಬರಿ ಲೋಕದಲ್ಲಿ ಅದರಲ್ಲೂ ಲಂಬಾಣಿ ಜನಾಂಗದ ವಸ್ತುವನ್ನು ಹೊಂದಿರುವಂತಹ ಅವರ ಕಾದಂಬರಿಗಳನ್ನು ಗಮನಿಸಿದಾಗ ಒಬ್ಬ ಪ್ರಮುಖ ಕಾದಂಬರಿಕಾರರಾಗಿ ನಮ್ಮ ಮುಂದೆ ನಿಲ್ಲುತ್ತಾರೆ. ಅಲ್ಲದೆ ಬಂಜಾರ ಸಮಾಜದ ಎದುರಿಸುತ್ತಿರುವ ಹಲವು ಕೊರತೆಗಳನ್ನು ಇಡೀ ಸಮಾಜದ ಮುಂದೆ ಎತ್ತಿ ತೋರಿಸುವ ಪ್ರಯತ್ನವನ್ನು ಅವರ ಕಾದಂಬರಿಗಳಾದ್ಯಂತ ಪರಿಣಾಮಕಾರಿಯಾಗಿ ಬಂದಿರುವುದನ್ನು ಓದುಗ ಸಹೃದಯರಾದ ನಾವು ಕಾಣುತ್ತೇವೆ.

ಈಗಾಗಲೇ ನಾನು ಮಾರಾಟವಾಗಿದ್ದೇನೆ.

ಈ ನಾಟಕವೆಲ್ಲಾ ಪೀಕಿ ಎನ್ನುವ ಪಾತ್ರದ ದೃಷ್ಟಿಕೋನದಿಂದ ನಡೆಯುತ್ತದೆ. ಇರಲ್ಲಿ ಮಾರಾಟವಾಗಿದ್ದ ಪೀಕಿ ಪಾತ್ರವೇ ಮುಖ್ಯವಾಗಿದೆ. ಒಂದು ತಾಂಡದ ಸಾಮಾಜಿಕ–ಆರ್ಥಿಕ ವಿಚಾರಗಳನ್ನು, ಅಲ್ಲಿರುವ ಅನೇಕರ ಮನಃಸ್ಥಿತಿಗಳು ಈ ನಾಟಕದಲ್ಲಿ ನೋಡಬಹುದು. ನಾಟಕದಲ್ಲಿರುವ ತಾಂಡದಲ್ಲಿ ನಿಯಮಗಳಿವೆಯೋ ಅಥವಾ ಅಲಿಖಿತ ನಿಯಮಗಳೋ ಗೊತ್ತಿಲ್ಲ ಗಂಡ ಕೆಲಸ ಮಾಡುವುದಿಲ್ಲ ಹೆಂಡತಿ ಕೆಲಸಮಾಡಿ ಮನೆಯನ್ನು ಪೋಷಣೆ ಮಾಡುತ್ತಿರುತ್ತಾಳೆ. ಮತ್ತೆ ಖಾಲಿ ಇದ್ದವನ ಮೆದುಳು ದೆವ್ವಗಳ ಮನೆ ಎನ್ನುವ ಹಾಗೆ ದುಶ್ಚಟಗಳಿಗೆ ಬಲಿಯಾಗುತ್ತಾನೆ. ಅದೇ ರೀತಿ ಇಂತಹ ವ್ಯಕ್ತಿಗಳನ್ನು ಅವರ ದುಶ್ಚಟಗಳನ್ನು, ಅವರ ಮನೆಯ ಪರಿಸ್ಥಿತಿಯನ್ನು ಅವಕಾಶವಾಗಿ ತೆಗೆದುಕೊಂಡು ದಂಧೆ ಮಾಡುವ ವ್ಯಕ್ತಿಗಳ ರೂಪವಾಗಿ ಜೋಗಿರ, ಮೇರಿಯಮ್ಮ ಪಾತ್ರಗಳು ಕಾಣುತ್ತವೆ. ಆ ದಂಧೆ ಗೆ ಒಳಗಾದ ವ್ಯಕ್ತಿಗಳಲ್ಲಿ ಬಲಿಯಾಗುವ ಚೋಕ್ಲ, ಬಂಗಾರಿ ಗಳ ಮಕ್ಕಳ ತರಹ ಎಷ್ಟೋ ಮಂದಿಯ ಬಾಳಿನ ಕಹಿ ಘಟನೆಗಳನ್ನು ಒಳಗೊಂಡಿರುತ್ತದೆ. ಅವುಗಳನ್ನು ನಮ್ಮ ಕಣ್ಣ ಮುಂದೆ ತರಿಸುತ್ತದೆ ಈ ನಾಟಕ. ಹಾಗೆಯೇ ಕೆಲವು ಪರಿಸ್ಥಿತಿಗಳಿಗೆ ಸಿಲುಕಿ

ಕಷ್ಟ ಅನುಭವಿಸುತ್ತಿರುವ ಮನಸುಗಳಿಗೆ ಪರಿಹಾರ ಸಿಗದೇ ಇದ್ದಾಗ ಅವರ ಬಾಳು ಏನು ಎನ್ನುವುದನ್ನು ಗಮನಿಸಬೇಕೆನ್ನುವ ಕುತೂಹಲವನ್ನು ಈ ನಾಟಕ ಮೂಡಿಸುತ್ತದೆ. ಈ ನಾಟಕದಲ್ಲಿಯ ಪೀಕಿ ಗೆ ನಡೆದಂಥ ಘಟನೆಯನ್ನು ಅನುಭವಿಸುತ್ತಿರುವ ನೊಂದಜೀವಗಳು ಎಷ್ಟೋ ಇರುತ್ತವೆ. ಆ ಪರಿಸ್ಥಿತಿಯನ್ನು ಪಠ್ಯ ನಾಟಕ ಅಥವಾ ದೃಶ್ಯ ನಾಟಕವನ್ನು ಓದಿದ ಅಥವಾ ನೋಡಿದ ಪ್ರೇಕ್ಷಕರ ಮನಸ್ಸು ಯೋಚಿಸುವರೀತಿ ಮಾಡುತ್ತದೆ.

ಹೀಗೊಬ್ಬ ಹುಡುಗನ ಸ್ವಗತ

ಈ ನಾಟಕದಲ್ಲಿ ಯುವಪೀಳಿಗೆಯು ಒಂದು ಜೀವನದಿಂದ ಇನ್ನೊಂದು ಜೀವನದ ಕಡೆಗೆ ಪಯನ ಮಾಡಿದಾಗ ಆಗಿನ ಆ ಯುವ ಮನಸ್ಸಿನ ಪರಿಸ್ಥಿತಿಯನ್ನು ಬಹಿರಂಗಗೊಳಿಸುತ್ತದೆ. ಹಾಗೆಯೇ ಈ ನಾಟಕಕಾರ ಮತ್ತೊಂದು ಪ್ರಯೋಗದಂತೆ ಈ ನಾಟಕವನ್ನೆಲ್ಲಾ ಹುಡುಗನ ಸ್ವಗತ ರೂಪದಲ್ಲಿ ನಡೆಸಿದ್ದಾರೆ. ಇಲ್ಲಿಯೂ ಸಹ ಪಾತ್ರಗಳಿಗೆ ಹೆಸರಿಲ್ಲ. ಯಾಕೆಂದು ಯೋಚನೆ ಬಂದರೆ ಇದು ಸಮಾಜದ ಎಲ್ಲರಿಗೂ ಅನ್ವಯವಾಗುವಂತಹ ಪಾತ್ರಗಳು.

ಈ ನಾಟಕದಲ್ಲಿ ಬರುವ ಪಾತ್ರಗಳಲ್ಲಿ ತಂದೆ ತಾಯಿಗಳ ಪಾತ್ರಗಳಲ್ಲಿ ಮಕ್ಕಳ ಭವಿಷ್ಯತ್ತಿನ ಬಗ್ಗೆ ಆಸೆ ಆಕಾಂಕ್ಷಗಳನ್ನು ನೋಡುತ್ತೇವೆ. ಹಾಗೆಯೇ ಸ್ನೇಹಿತ ರ ಪಾತ್ರಗಳಲ್ಲಿ ನೋಡುವುದಾದರೆ ಐಷಾರಾಮಿ ಜೀವನಕ್ಕೊಳಗಾದವರ ದಾರಿ ತಪ್ಪುವ ಅವಕಾಶ ಇದ್ದಾಗ ತಾನು ಅಲ್ಲದೆ ಎಲ್ಲರನ್ನೂ ತನ್ನ ದಾರಿಗೆ ಎಳೆದುಕೊಳ್ಳಬೇಕು ಎನ್ನುವ ಮನಃಸ್ಥಿತಿಯನ್ನು ಹಾಗೆಯೇ ಮೂಲ ಆಶಯವನ್ನು ಮರೆತ ಎಷ್ಟೋ ಯುವಕರ ಮನಃಸ್ಥಿತಿಯನ್ನು ಬಿಚ್ಚಿಟ್ಟಿದ್ದಾರೆ. ಹಾಗೆಯೇ ಗುರುಗಳ ಅಸಹಾಯಕತೆಯನ್ನು ಸಹಾ ಮ್ಯಾಸ್ಟ್ರು ಎನ್ನುವ ಪಾತ್ರದ ಮುಖಾಂತರ ತೋರಿಸಿದರು.

ದಾರಿತಪ್ಪುವ ಎಷ್ಟೋ ಮನಸುಗಳನ್ನು ಈ ನಾಟಕದಲ್ಲಿ ನಮಗೆ ನಾಟಕಕಾರರು ತೋರಿಸುತ್ತಾ ಹೇಳಿದ ಮತ್ತೊಂದು ಸಾರ್ವಜನಿಕವಾದ ವಿಷಯ ಏನೆಂದರೆ ಕೈ ಸುಟ್ಟ ಮೇಲೆ ಎಲೆ ಮುಟ್ಟುಕೊಂಡ ಹಾಗೆ ಎನ್ನುವ ಗಾದೆಮಾತಿನ ರೀತಿ ಕಳೆದುಹೋದ ಸಮಯವು ಮರಳಿ ಬರುವುದಿಲ್ಲ ಎಂದು ತಿಳಿಸಿದ್ದಾರೆ.

ಈ ನಾಟಕವೆಲ್ಲ ಸ್ವಗತ ರೂಪದಲ್ಲಿ ಹೇಳಿದ್ದರಿಂದ ಒಂದು ಪಾತ್ರದಲ್ಲಿಯ ಮನಸಿನ ತೊಳಲಾಟ, ಆ ಪಾತ್ರದ ಸುತ್ತಮುತ್ತಲಿನ ಪಾತ್ರಗಳ ಕ್ರಿಯೆಗೆ ಪ್ರತಿಕ್ರಿಯೆ ತೋರಿಸುತ್ತದೆ. ಕೊನೆಗೆ ತಪ್ಪು ಯಾರದು ಎನ್ನುವ ಪ್ರಶ್ನೆಯಲ್ಲಿಯೇ ಸಮಾಧಾನ ಸಿಗುವಂತೆ ಹೇಳಿದ್ದಾರೆ.

ಹೋರಾಟ

ಈ ನಾಟಕದ ಕಥಾವಸ್ತುವನ್ನು ನಾಟಕಕಾರರು ಆಂಗ್ಲೇಯರ ಕಾಲದ ಕಾಲಘಟ್ಟವನ್ನು ತೆಗೆದುಕೊಂಡಿದ್ದಾರೆ. ಹಾಗೆಯೇ ಆಂಗ್ಲೇಯರು ನಮ್ಮ ದೇಶದವರನ್ನು ಹೇಗೆ ದೋಚುತ್ತಿದ್ದರು? ಇಲ್ಲಿಯವರನ್ನು ಹೇಗೆ ಹೀನಾಯವಾಗಿ ಕಾಣುತ್ತಿದ್ದರು? ಎನ್ನುವಂತಹ ಅಂದಿನ ಪರಿಸ್ಥಿತಿಯನ್ನು ನಮಗೆ ಪರಿಚಯಿಸಿದರು.

ಈ ನಾಟಕಕಾರರು ಅವರ ದೃಷ್ಟಿಕೋನದಲ್ಲಿ ಆಂಗ್ಲೇಯರ ಕಾಲಘಟ್ಟದಲ್ಲಿ ಇದ್ದಂತಹ ಪರಿಸ್ಥಿತಿ ಎಂದು ತೋರಿಸಿದರೂ ಇಂದಿಗೂ ಜ್ವಲಿಸುತ್ತಿರುವ ಸಮಸ್ಯೆಗಳು ಇದರಲ್ಲಿ ಕಾಣಿಸಿಕೊಂಡಿದ್ದಾವೆ ಎಂದರೆ ತಪ್ಪಾಗಲಾರದು. ಇಂದಿಗೆ ಹೇಗೆ ಈ ಪರಿಸ್ಥಿತಿ ಅನ್ವಯ ಎಂದರೆ ಈ ನಾಟಕದಲ್ಲಿ ಕಾರ್ಮಿಕ ಜೀವಿಗಳ, ಕೂಲಿ ಕೆಲಸಗಾರರ ಪರಿಸ್ಥಿತಿಯನ್ನು ಬಂಡವಾಳ ಶಾಹಿಗಳ ದೌರ್ಜನ್ಯವನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿದ್ದಾರೆ.

ಕಾಡನ್ನು ನಂಬಿಕೊಂಡಿರುವ ಕಾಡಿನ ಮಕ್ಕಳನ್ನು ತಮ್ಮ ಸ್ವಾರ್ಥಕ್ಕಾಗಿ ಯಾವರೀತಿ ಉಪಯೋಗಿಸಿಕೊಳ್ಳುತ್ತಿದ್ದರು ಎನ್ನುವ ವಿಷಯವನ್ನು ಕ್ಯಾಪ್ಟನ್ ಪಾತ್ರದ ಮುಖಾಂತರ ದೌರ್ಜನ್ಯಕಾರರ ದೌರ್ಜನ್ಯವನ್ನು ಪರಿಚಯಿಸಿದರು. ಹಾಗೆಯೇ ಅವರ ಬೆನ್ನಾಗಿ, ಅವರ ಭಿಕ್ಷೆಯನ್ನು ಹೇಸಿಕೊಳ್ಳದೆ ಉಪಯೋಗಿಸುವಂತಹ ವ್ಯಕ್ತಿಗಳ ಸಮೂಹಕ್ಕೆ ಬ್ರಿಟೀಷ್ ಸೈನಿಕ ನ ಪಾತ್ರವನ್ನು, ಕರುಣೆ, ಅನುಕಂಪ ಇದ್ದರೂ ವೃತ್ತಿಧರ್ಮದಿಂದ ಏನನ್ನೂ ಮಾಡಲು ಆಗದ ನಿಸ್ಸಹಾಯಕ ಪಾತ್ರವಾಗಿ ಸೈನಿಕನನ್ನು ನಮ್ಮ ಕಣ್ಣಮುಂದೆ ನಿಲ್ಲಿಸಿದ್ದಾರೆ.

ಈ ನಾಟಕದಲ್ಲಿ ಮತ್ತೊಂದು ಮಹತ್ವದ ವಿಷಯವೆಂದರೆ ಕಾಡಿನ ಮಕ್ಕಳ ಸ್ವೇಚ್ಛೆಗೆ ಭಂಗ ಂದನಂತರ ಅವರ ಬಾಳು ಬಂದೀಗಳಿಗಿಂತ ಹೇಗೆ ಹೀನಾಯವಾಗುತ್ತದೆ? ಅವರು ಹಿಂದೆ ಜೀವನೋಪಾಧಿಗಾಗಿ ಮಾಡುವ ಕೆಲಸವನ್ನು ಮುಂದೆ ಬಂದೀಗಳ, ಖೈದಿಗಳ ರೀತಿಯಲ್ಲಿ ಮಾಡುವ ಹಾಗೆ ಹೇಗೆ ರೂಪಾಂತರಗೊಂಡಿದೆ? ಅದೇ ರೀತಿ ಭದ್ರತೆಯಿಲ್ಲದ ಜೀವನ ಹೇಗೆ ಭಯಂಕರವಾಗಿ ಇರುತ್ತದೆ? ಎಂದು ತೋರಿಸುತ್ತಾ ಹಕ್ಕುಗಳಿಗಾಗಿ ಹೋರಾಡಿದರೆ ತಪ್ಪಿಲ್ಲ ಎನ್ನುವ ಸಂದೇಶವನ್ನು ಕೂಡಾ ನಾಟಕದಲ್ಲಿ ಪಾರಿ, ಹನಮ, ಚಂದಿಯಾ ಮುಂತಾದ ಪಾತ್ರಗಳಲ್ಲಿ ತೋರಿಸಲಾಗಿದೆ.

ಜೀವನದ ಕೊನೆಯೆಂಬುದು ಎಲ್ಲೋ ಇಲ್ಲ ನಮ್ಮ ಕೈಯಲ್ಲಿಯೇ ಇದೆ ಎಂದು ಯೋಚಿಸುವಂತೆ ಲಚ್ಮನಾಯ್ಕ ನ ಪಾತ್ರವನ್ನು ನಡೆಸಿದ ರೀತಿ ಅದ್ಭುತವಾಗಿ ಬಂದಿದೆ. ಅಂತ್ಯ ಸಮಯದಲ್ಲೂ ಛಲವನ್ನು ಹೊಂದಿದರೆ ಸಾಧನೆ ಮಾಡಲು ಅವಕಾಶವಿದೆಯೆಂದು ತಿಳಿಸಿದ್ದಾರೆ.

ಲಮಾಣಿ ಆತ್ಮಕಥನ ಕಾವ್ಯ

ಪ್ರೊ.ಶಾಂತನಾಯ್ಕ ಶಿರಗಾನಹಳ್ಳಿ ಅವರ ಬರಹ ಮತ್ತು ವ್ಯಕ್ತಿತ್ವ ಎರಡೂ ಸಹ ಗೌರವಯುತವಾದದ್ದವೇ. ಶಾಂತಾನಾಯ್ಕರು ಬಹುಮುಖ ಪ್ರತಿಭೆಯ ವಿದ್ವಾಂಸರು. ವೃತ್ತಿಯಲ್ಲಿ ಆಂಗ್ಲ ಭಾಷೆಯ ಪ್ರಾಧ್ಯಾಪಕರು, ಪ್ರವೃತ್ತಿಗಳಂತೂ ಸಾಕಷ್ಟು ; ಕವಿಗಳ ಮಧ್ಯೆ ಇವರು ಕವಿ, ನಾಟಕದ ಸಂದರ್ಭ ಬಂದಾಗ ಇವರು ರಂಗಕರ್ಮಿ, ನಟ., ಸೇವೆಯ ವಿಚಾರ ಬಂದಾಗ ರಾಷ್ಟ್ರೀಯ ಸ್ವಯಂಸೇವಾ ಯೋಜನೆಯ ಒಬ್ಬ ಸ್ವಯಂ ಸೇವಕ; ಅಧಿಕಾರಿ; ಜನಪದದ ಪ್ರಶ್ನೆ ಬಂದಾಗ ಇವರು ಒಬ್ಬ ಜನಪದ ಗಾಯಕ; ವಿದ್ಯಾರ್ಥಿಗಳ ಬಳಿ ಮೆಚ್ಚಿನ ಅಧ್ಯಾಪಕರ ಸಮೂಹದಲ್ಲಿ ಉತ್ತಮ ಅಧ್ಯಾಪಕ; ಸಾಂಸ್ಕೃತಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಸಂಸ್ಕೃತಿಯ ಪ್ರತಿನಿಧಿ; ಬಂಜಾರರ ವೇದಿಕೆಯಲ್ಲಿ ಅಪ್ಪಟ ಲಂಬಾಣಿ ತಾಂಡದ ಹುಡುಗ; ಆಕಾಶವಾಣಿಯಲ್ಲಿ ನಿರೂಪಕ; ಕನ್ನಡದ ಬರಹಕ್ಕೆ ಸಂಬಂಧಿಸಿದಂತೆ ಬರಹಗಾರ, ಲೇಖಕ, ವಿಮರ್ಶಕ ಆತ್ಮಕಥನಕಾರ. ಸಮೂಹ ಮಾಧ್ಯಮಕ್ಕೆ ಬಂದಾಗ ಇವರು ಓರ್ವ ವಿಚಾರವಾದಿ; ಪತ್ರಿಕೆಗಳಲ್ಲಿ ಬರೆಯುವ ಅಂಕಣಕಾರ. ಮಾನವೀಯತೆ ಅಂತಃಕರಣಗಳ ಸಾಕಾರ ಸ್ವರೂಪ, ಇವರಲ್ಲಿ ಮೈಗೂಡಿದೆ.

ಶಾಂತನಾಯ್ಕರನ್ನು ಏನೆಲ್ಲ ಪದಗಳಲ್ಲಿ ವರ್ಣಿಸಿದರೂ ಅದು ಕಡಿಮೆ. ನಾನೂ ಇಂಗ್ಲೀಷ್ ಸಾಹಿತ್ಯದ ವಿದ್ಯಾರ್ಥಿಯಲ್ಲ. ನೇರವಾಗಿ ಅವರ ವಿದ್ಯಾರ್ಥಿಯಲ್ಲ ಆದರೂ ಅವರನ್ನು ಹಿಂಬಾಲಿಸುವ ಅಸಂಖ್ಯಾತ ಶಿಷ್ಯರಲ್ಲಿ ನಾನೂ ಒಬ್ಬ.

ಸದಾ ಕಾರ್ಯಮಗ್ನ, ಪಾದರಸದಂತಹ ಹಲವಾರು ಚಟುವಟಿಕೆಗಳು. ಸದಾ ಸಮಾಜದ ಬಗ್ಗೆ, ಸಂಮುದಾಯದ ಬಗ್ಗೆ, ವಿದ್ಯಾರ್ಥಿಗಳ ಬಗ್ಗೆ ಆಲೋಚಿಸುವ ಶಾಂತನಾಯ್ಕರ ವ್ಯಕ್ತಿತ್ವವೇ ನನಗೆ ಅವರಬಗ್ಗೆ ಗೌರವ ಮೂಡಲು ಕಾರಣವಾಗುತ್ತದೆ.

ಶಾಂತನಾಯ್ಕರ ಬರವಣಿಗೆಯ ವ್ಯಾಪ್ತಿ ದೊಡ್ಡದು. ಆಂಗ್ಲ ಅಧ್ಯಾಪಕರಾಗಿದ್ದು ಕನ್ನಡ ಭಾಷೆ, ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ ಹಲವಾರು ಮಹನೀಯರ ಪರಂಪರೆಯಲ್ಲಿ ಶಾಂತನಾಯ್ಕರಿಗೆ ಸ್ಥಾನವಿದೆ. ಅವರ ಕಾವ್ಯವನ್ನು ಕುರಿತು ನನ್ನ ಕೆಲವು ಅಭಿಪ್ರಾಯಗಳನ್ನು ತಮ್ಮೊಂದಿಗೆ ಹಂಚಿಕೊಳ್ಳ ಬಯಸುತ್ತೇನೆ. ವಿದ್ಯಾರ್ಥಿ ದೆಸೆಯಲ್ಲಿಯೇ ಬರವಣಿಗೆಗೆ ಶ್ರೀಯುತರು ತೊಡಗಿದ್ದಾರೆ.

2003 ರಲ್ಲಿ ಬರೆದ 'ಬಂಡಾಯ', 2004ರಲ್ಲಿ ಬರೆದ 'ಹಳೆ ಭಾವನೆಯ ಹೊಸಮನುಷ್ಯ', 2002ರಲ್ಲಿ ಬರೆದ 'ಮೀನು ಮತ್ತು ಹುಡುಗಿ' ಕವನ ಸಂಕಲನ 'ಲಮಾಣಿ' ಎಂಬ ಆತ್ಮಕಥನ ಕವನ ಇವು ಕಾವ್ಯಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಇವರ ಬರಹಗಳು.

ಶೋಷಿತ ಸಮುದಾಯದಿಂದ ಸಮಾಜದ ಮುಖ್ಯವಾಹಿನಿಗೆ ಬಂದಿರುವ ಶಾಂತನಾಯ್ಕ ಅವರಿಗೆ ಸಮಾಜದ ದಟ್ಟವಾದ ಅನುಭವಗಳಿವೆ. ವಯಸ್ಸಾದನಂತರ, ಗಡ್ಡ ಬೆಳ್ಳಗಾದ ನಂತರ, ನೆನಪು ಮಾಸುವ ಹಂತದಲ್ಲಿ ಆತ್ಮಕಥೆಗಳನ್ನು ಬರೆಯುತ್ತಿದ್ದ ಕನ್ನಡದ ಬರಹಗಾರರ ನಡುವೆ ಒಂದು ವಯೋಮಾನದಲ್ಲಿ ಅನುಭವಗಳನ್ನು ದಾಖಲಿಸುವ ಹೊಸ ಬರವಣಿಗೆ ಆರಂಭವಾಗಿದೆ. ಸಾಮಾನ್ಯವಾಗಿ ಆತ್ಮಕತೆಗಳನ್ನು ಗದ್ಯದಲ್ಲಿ ಬರೆಯುವುದು ರೂಢಿ, ಶಾಂತನಾಯ್ಕರು ತಮ್ಮ ಆತ್ಮಕಥೆ 'ಲಮಾಣಿ'ಯನ್ನು ಕಾವ್ಯರೂಪದಲ್ಲಿ ಬರೆದಿರುವುದು ವಿಶೇಷ. ಸಾಹಿತ್ಯ ಕ್ಷೇತ್ರದ ಹಲವು ಪ್ರಕಾರಗಳಲ್ಲಿ ಶ್ರೀಯುತರು ಬರವಣಿಗೆ ಮಾಡಿದ್ದರೂ; ಕಾವ್ಯ ಅವರ ನೆಚ್ಚಿನ ಕ್ಷೇತ್ರ.

'ಲಮಾಣಿ' ಕೃತಿ ಮೈಸೂರಿನ ಒಡನಾಡಿ ಸಂಸ್ಥೆಯಲ್ಲಿ ಮೊದಲು ಬಿಡುಗಡೆಯಾದ ಕಾರ್ಯಕ್ರಮಕ್ಕೆ ನಾನು ಸಾಕ್ಷಿಯಾಗಿದ್ದೆ. ಸಾಹಿತ್ಯ ಅಕಾಡೆಮಿಯ ಅಂದಿನ ಕಾರ್ಯದರ್ಶಿಯವರಾದ ಅಗ್ರಹಾರ ಕೃಷ್ಣಮೂರ್ತಿ ಆತ್ಮಕಥೆಯನ್ನು ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೆ, ಭಾರತೀಯ ಭಾಷೆಗಳಲ್ಲಿನ ಆತ್ಮಕತೆಗಳೊಂದಿಗೆ ಕೃತಿಯನ್ನು ಹೋಲಿಕೆ ಮಾಡಿದ್ದಿದ್ದು ಇನ್ನೂ ಸ್ಪಷ್ಟವಾಗಿ ನೆನಪಿನಲ್ಲಿ ಉಳಿದಿದೆ.

ಶಾಂತನಾಯ್ಕರು ಕೃತಿಯ ಆರಂಭದಲ್ಲಿ ಹೇಳುವಂತೆ ಇದು ಬಾಲ್ಯದಿಂದ ಅವರಲ್ಲಿ ಮಡುಗಟ್ಟಿದ್ದ ಅನೇಕ ತಳಮಳ, ಕೌತುಕಗಳಿಗೆ ನೀಡಿದ ಅಕ್ಷರಗಳ ರೂಪ. ಸೂರಿಲ್ಲದ ಶಾಲೆ, ಸೋರುವಮನೆ, ಆರೈಕೆಯಿಲ್ಲದ ಕುಟುಂಬ, ಹಸಿದು ಮಲಗಿದ ಕ್ಷಣಗಳು, ಅರ್ಥವಿಲ್ಲದ ಹಾಸ್ಟೇಲಿನ ಬದುಕು, ಓದುವ ಹಂಬಲ ಇವುಗಳ ಅನುಭವವನ್ನು ಕಾವ್ಯದಲ್ಲಿ ದಾಖಲಿಸುವ ಪ್ರಯತ್ನ.

'ಕಾವ್ಯ' ಎಂದರೇನು? ಎಂದು ವ್ಯಾಖ್ಯಾನಿಸುವುದು ಕಷ್ಟ. ಏಕೆಂದರೆ ಇದು ಅನುಭವದ ವಿಚಾರ, ಅರ್ಥೈಸಿಕೊಳ್ಳಬೇಕು ಅಷ್ಟೇ. ಕುಗ್ರಾಮದ ತಾಂಡಾದಿಂದ ವಿಶ್ವವಿದ್ಯಾನಿಲಯದ ಅಂಗಳಕ್ಕೆ ಸಾಗುವ ಹಾದಿ, ಗ್ರಾಮದಿಂದ ಮಹಾನಗರಿಗೆ ನಡೆಯುವ ವಲಸೆ ಎಲ್ಲಾ ಅಕ್ಷರ ಕಲಿತ ಮೊದಲ ತಲೆಮಾರಿನ ಪ್ರಥಮ ತಲ್ಲಣ. ಇದಕ್ಕೆ ಶಾಂತನಾಯ್ಕರು ಸಹಾ ಅತೀತರಲ್ಲ.

'ಲಮಾಣಿ'ಯಲ್ಲಿ ಬರಹಗಾರರ ಬದುಕಿನ ಅನುಭವಗಳಿವೆ. ಬಾಲ್ಯ, ಹಸಿವು, ಅವ್ವನ ಪ್ರೀತಿ, ದೇವರು ದಿಂಡರುಗಳ ಹೆಸರಿನ ಮೌಢ್ಯ, ಶಾಲೆ, ಅಲ್ಲಿ ನೀಡುವ ಅಮೆರಿಕಾದ ಗೋಧಿ ಚಪಾತಿಗಾಗಿ ಕಾಯುವಿಕೆ, ಕಜ್ಜಿ ತುರಿಕೆಯಂತಹ ಅನಾರೋಗ್ಯದ ಪರಿಸರ, ದವಾಖಾನೆ, ಕುರಿಬಲಿ, ಬರಗಾಲ, ಕುಂಭದ್ರೋಣ ಮಳೆ, ಲಂಬಾಣಿ ಸಂಪ್ರದಾಯಗಳು, ಕಾಲೇಜು, ಅಲ್ಲಿನ ಬುದ್ಧಿಜೀವಿಗಳ ಸಣ್ಣತನ, ವಿಶ್ವವಿದ್ಯಾಲಯದ ವಿವಿಧ ಮುಖಗಳು, ಆಂಗ್ಲ ಭಾಷೆಯ ಬೆರಗು, ಕೆಲಸ, ಕುಟುಂಬ ಇವುಗಳ ಪ್ರಾಮಾಣಿಕವಾದ ಅಭಿವ್ಯಕ್ತಿಯಿದೆ.

'ಹಸಿವು ಜಗತ್ತಿನಲ್ಲೇನಾದರೂ ಮಾಡಿಸುತ್ತೆ' ಎಂಬ ಅತ್ಮಕಥೆಯ ಸಾಲು 'ನೆಸೆಸಿಟೀ ಈಜ್ ಏ ಮದರ್ ಆಫ್ ಆಲ್ ಇನವೆನ್ಷನ್' ಎಂಬುದರ ಕನ್ನಡ ರೂಪ.'

ಶಾಂತನಾಯ್ಕರು ಬರೆಯುವ
ಎಲ್ಲಿಹೋದವೋ ಆ ಕ್ಷಣ
ಕನಸುಗಳಿಲ್ಲದ ಈ ದಿನ
ಹಳೆ ಕನಸುಗಳ ರಾಶಿಯನ್ನೆ
ಕೆದಕುವ ಹುಸಿ ಪ್ರಯತ್ನ..

ಎಂಬ ಸಾಲು ನನಗೆ ಹಿಂದಿ ಚಲನಚಿತ್ರದ ಸಾಹಿತಿ ಪೀಯೂಶ್ ಮಿಶ್ರ ರ

"ವೋ ಪುರಾನೆ ದಿನ್
ವೋ ಸುಹಾನೆ ದಿನ್
....
ದಿನ್ ಗುಜರ್ ಗಯೇ
ಹಮ್ ಕಿದರ್ ಗಯೇ
ಪೀಚೆ ಮುಡ್ ಕೇ ದೇಖ್ ಪಾಯೇ
ಸಬ್ ಚಹರ್ ಗಯೇ..

ಅಖೇಲೆ ಹೇ ಜಡಿ

ಅನ್ನುವ ಸಾಲುಗಳ ಸ್ಮೃತಿ ಪಟಲದಲ್ಲಿ ಸುಳಿದು ಮರೆಯಾಗುತ್ತದೆ.

ಇಲ್ಲಿನ ಕವಿತೆಗಳನ್ನು ಓದುತ್ತಿರುವಾಗ ನನಗೆ ಕವಿತೆಗಳಲ್ಲಿನ ಲಯಬದ್ಧತೆ, ಛಂದಸ್ಸಿನ ಬಳಕೆ, ಭಾಷಾ ಬಳಕೆಯು ನನಗೆ ಮುಖ್ಯ ಅನಿಸಲಿಲ್ಲ. ಆ ಸಾಲುಗಳಲ್ಲಿ ಹುದುಗಿದ್ದ ಶಾಂತನಾಯ್ಕರ ಬದುಕಿನ ದಿನಗಳು, ಕ್ಷಣಗಳು ಚಿತ್ರಕಾವ್ಯದಂತೆ ಕಣ್ಮುಂದೆ ಸುಳಿಯುತ್ತಿದ್ದವು. ಹಸಿವು, ಬಡತನ, ನಿರುದ್ಯೋಗ, ಜಾತಿಯ ಅಸಮಾನತೆ ಎಲ್ಲವನ್ನೂ ಮೀರಿ ಶಾಂತನಾಯ್ಕರು ಬೆಳೆದದ್ದು, ಬದುಕುತ್ತಿರುವುದು ಅವರ ಬಗ್ಗೆ ವಿಶೇಷ ಪ್ರೀತಿ, ಗೌರವ ನನ್ನಲ್ಲಿ ಮೂಡುವಂತಾಯಿತು.

'ಲಮಾಣಿ' ಬದುಕಿನ ಅನುಭವಗಳಿಗೆ ಅಕ್ಷರರೂಪ ನೀಡಿರುವ ಕೃತಿ. ಇಲ್ಲಿ ಪ್ರಾಮಾಣಿಕತೆಯಿದೆ, ತನ್ನತನವನ್ನು ಸಮಾಜದ ಎದುರಿಗೆ ತೆರೆದಿರುವ ಹಂಬಲವಿದೆ, ಮುಚ್ಚು ಮರೆ ಇಲ್ಲಿ ಇಲ್ಲ.

'ಲಮಾಣಿ' ಆತ್ಮಕಥನದ ಕಾವ್ಯವಾದರೂ ಇಲ್ಲಿ ಅವರ ವ್ಯಕ್ತಿತ್ವದ, ಆಲೋಚನೆಗಳ ವಿವಿಧ ರೂಪಗಳು ದಾಖಲಾಗಿವೆ.

ನಗರ ಜೀವನದ ಒತ್ತಡದ ಬಗ್ಗೆ ಬೇಸರವಿದೆ, ಪ್ರಕೃತಿಯನ್ನು ಉಳಿಸಿಕೊಳ್ಳಬೇಕಾದ ಎಚ್ಚರಿಕೆಯ ಸಂದೇಶವಿದೆ. ಸಣ್ಣ ಮಕ್ಕಳ ಆಟಪಾಟಗಳು ದಾಖಲಾಗಿವೆ ; ಬಾಲ್ಯದಲ್ಲಿ ಕದ್ದು ಪೇರಳೆ ಹಣ್ಣು ತಿನ್ನುವ ಪ್ರಸಂಗವಿದೆ. ಹಾಸ್ಟೇಲಿನ ಊಟದ ವಿಚಾರವಿದೆ. ಅದರಲ್ಲಿ ಬರುವ ಸಾಲು

"ಪುಗಸಟ್ಟೆ ಹಾಸ್ಟೆಲಲ್ಲಿ

ಪರದೇಶಿಗಳ ದಂಡು

ಮೈ ತೊಳೆಯದವು, ತಲೆತುಂಬ ಹೇನು

ತುಂಬಿಕೊಂಡವುಗಳದ್ದೇ ಕಾರಬಾರು"

ಇದು ಹಾಸ್ಟೇಲಿನ ದರ್ಶನ. 06 ಮೈಲಿದೂರ ನಡೆದು ಹಾಸ್ಟೇಲಿನಿಂದ ಮನೆಗೆ ಬಂದ ಮಗನಿಗೆ ತಿನ್ನೋದಕ್ಕೆ ಏನೂ ಕೊಡಲಾರದೆ ಕಣ್ಣೀರು ಸುರಿಸುವ ತಾಯಿಯನ್ನು ಕುರಿತ ಈ ಸಾಲು ಕರುಳು ಹಿಂಡುವಂತಹದ್ದು

"ಹಸಿದ ನನಗೊಂದಿಷ್ಟು ಕೊಡಲು ಏನೂ ಇಲ್ಲದ ಸಂಕಟ, ಬಾಚಿ ತಬ್ಬಿಕೊಂಡು ಮೈ ಸವರಿದ್ದೆ ಏನೋ ನಿರಾಳ".

"ತಲೆತುಂಬಾ ಸಾವಿರಾರು ಕನಸುಗಳು

ರಸ್ತೆ ಮೇಲೆ ಹಣದ ಚೀಲ ಸಿಕ್ಕರೆ"

ನಾವು ಕಾರು, ಮನೆ, ಸ್ಕೂಟರ್ ತಗೊಳ್ಳಬೇಕು ಅಂತ ಬಯಸುತ್ತೇವೆ, ಆದರೆ ಶಾಂತನಾಯ್ಕರು

"ಮನೆಗೆ ಮೊದಲು ಅಕ್ಕಿ ಬೇಳೆ ಕೊಂಡು, ಹೊಸಬಟ್ಟೆ ಕೊಳ್ಳಬಹುದಿತ್ತಲ್ಲಾ" ಅಂತಾರೆ.

ಇನ್ನು ಬಾಲ್ಯದಲ್ಲಿ ಸಾಮಾನ್ಯವಾಗಿ ಮಕ್ಕಳು ಆಡಿರಬಹುದಾದ "ಮದುವೆ ಆಟ" ಶಾಂತನಾಯ್ಕರ ಬಾಲ್ಯದಲ್ಲಿಯೂ ಇದೆ. ಆ ಮದುವೆ ಆಟದಲ್ಲಿ ಶಾಂತನಾಯ್ಕರು ಮದುಮಗ.

ಪಕ್ಕದ ಊರಿನ ಶ್ರೀಮಂತನ ಮಗಳ ಮದುವೆಗೆ ಕರೆಯದೆ ಊಟಕ್ಕೆ ಹೋಗುವುದು, ಅಲ್ಲಿ ಊಟ ಖಾಲಿಯಾದದ್ದು ಕೇಳಿದಾಗ ಅಪಾರವಾದ ಬೇಸರ ಇವರಿಗೆ ಆಗುತ್ತೆ. ಇದೇ ಬಗೆಯ ಚಿತ್ರಣ ಅರವಿಂದ ಮಾಲಗತ್ತಿ ಅವರ ಆತ್ಮಕಥೆ 'ಗೌರ್ಮೆಂಟ್ ಬ್ರಾಹ್ಮಣ'ದಲ್ಲಿಯೂ ಬಂದಿರುವುದು ನೆನಪಾಗುತ್ತೆ.

ಚಹಾದ ಜೊತೆಗೆ ಮಿರ್ಚಿ ಮಂಡಕ್ಕಿನ ಪ್ರಸಂಗ ಉಲ್ಲೇಖವಿದ್ದು ಇದು ಸಹಜವಾಗಿ ಧಾರವಾಡ ಪ್ರಾದೇಶಿಕತೆಯನ್ನು ವ್ಯಕ್ತಪಡಿಸುತ್ತದೆ.

ಮನೆಯಲ್ಲಿ ಸಾಕುತ್ತಿದ್ದ ಆರು ಟಗರುಗಳಲ್ಲಿ 'ಮಂಟಮರಿ'ವೊಂದನ್ನು ಕತ್ತರಿಸಿ ದೇವರ ಪೂಜೆ ಸಂದರ್ಭದಲ್ಲಿ ಅದನ್ನೆ ಉಣ್ಣುವ ಸಂದರ್ಭವನ್ನು ಶಾಂತನಾಯ್ಕರು ಬಹಳ ನೋವಿನಿಂದ ದಾಖಲಿಸುತ್ತಾರೆ.

ಲಮಾಣಿ ಓದುತ್ತಿರುವಾಗ ನನಗೆ ಹೀರೋ ಶಾಂತನಾಯ್ಕರು ಕಾಣುತ್ತಿದ್ದಾರೆ. ಆದರೆ ಹೀರೋಯಿನ್ ಎಲ್ಲಿ ಅಂತ ಹುಡುಕುತ್ತಿರುವಾಗ ಅವರ ಕಾಲೇಜಿನ ವಿಚಾರ; ಅದರಲ್ಲಿನ ಅನಾಮಧೇಯ ಗೆಳತಿಯ ಪತ್ರ ಇವರ ಕೈಗೆ ಬಂದಾಗ, ಅದರಲ್ಲಿ ಅವರ ಗುಣ, ಎತ್ತರ, ದೈಹಿಕ ದಾರ್ಢ್ಯತೆ, ನಸುನಗು ಮುಂತಾದ ಎಲ್ಲವನ್ನು ಆ ಹುಡುಗಿ ಬರೆದು ಕೊನೆಗೆ ನನ್ನತ್ತ ಒಮ್ಮೆ ತಿರುಗಿಯಾದರೂ ನೋಡಿ ಬಿಡು "ಇಂತಿ ನಿನ್ನ ರೋಲ್ ನಂ. 36" ಅಂತ ಬರೆದಿರುತ್ತಾಳೆ. ಆದರೆ ಯಾರು ಆ ಹುಡುಗಿ ಅನ್ನೋದು ಕೇವಲ ಶಾಂತನಾಯ್ಕರಿಗೆ ಮಾತ್ರ ಗೊತ್ತು.

ಎಂ.ಎ. ಅಂತಿಮ ವರ್ಷದಲ್ಲಿ ಅವರು ಅನುತ್ತೀರ್ಣರಾದಾಗ ಬರೆಯುವ ಮಾತು ಮುಖ್ಯ ಅನಿಸಿತ್ತು.

"ನಾನಂದು ಸೋತಿದ್ದೆ
ಜಾತ್ಯಾತೀತರೆಂದು ಸೋಗು ಹಾಕಿಕೊಂಡು
ಹಾಡುಹಗಲೆ
ಹಲಾಲ್‌ಖೋರ್‌ತನ ಮಾಡುವ ವಿಶ್ವವಿದ್ಯಾನಿಲಯದ ಮೇಷ್ಟ್ರುಗಳು"

ಇಂಥ ಪ್ರವೃತ್ತಿಗಳನ್ನು ನಾವು ವಿಶ್ವವಿದ್ಯಾನಿಲಯದ ಅಂಗಳದಲ್ಲಿ ಹೀಗಿತ್ತು ಎಂಬುದನ್ನು ಕೇಳಿದ್ದೇವೆ.

ಹಳ್ಳಿಯಲ್ಲಿ ತಾವು ನಿರ್ದೇಶನ ಮಾಡಿದ ನಾಟಕ ಅದರಲ್ಲಿ ಸ್ತ್ರೀಪಾತ್ರ ಮಾಡಿದ ಜಗ್ಗ ಈ ಎಲ್ಲವೂ ಅವರ ನಾಟಕದ ನಿರ್ದೇಶನ, ನಟನೆ ಮತ್ತು ಆ ಬಗೆಗಿನ ಪ್ರೀತಿಯನ್ನು ತೋರುತ್ತದೆ. ಲಮಾಣಿ ಆತ್ಮಕಥೆ ದಟ್ಟವಾದ ಅನುಭವ, ಬಡತನದ ಹಿನ್ನೆಲೆ ಹೊಂದಿದ್ದರೂ ಬರವಣಿಗೆ ಶೈಲಿ ಓದುವಿಕೆಯನ್ನು ಮುಂದುವರೆಸುತ್ತದೆ. ಆಗ ನನಗೆ ಸಿದ್ದಲಿಂಗಯ್ಯನವರ ಆತ್ಮಕಥೆ 'ಊರುಕೇರಿ' ನೆನಪಾಗುತ್ತದೆ. 'ಊರುಕೇರಿ' ಸಾಕಷ್ಟು ಹಾಸ್ಯಭರಿತ ಬರಹಗಳನ್ನು ಹೊಂದಿದ್ದರೂ ಅವರ ಬದುಕು ಶೋಚನೀಯವಾದುದಾಗಿತ್ತು.

ತಮಗೆ ವಿದ್ಯೆ ಕಲಿಸಿದ ಪ್ರೊ. ಗೋಕಾವಿ, ವೀಣಾ ಶಾಂತೇಶ್ವರ, ವಿಲಿಯಂ ಮಾಡ್ತ, ಗುಂಜೆಟ್ಟಿ, ರಾಜೇಶ್ವರಿ ಮಹೇಶ್ವರಯ್ಯ ಎಲ್ಲರನ್ನೂ ನಾಯ್ಕರು ಸ್ಮರಿಸುತ್ತಾರೆ.

ಮತ್ತೆ ಮತ್ತೆ ಧಾರವಾಡದ ಕಾಲೇಜು, ಪದವಿಯ ದಿನಗಳು, ಗ್ರಂಥಾಲಯ, ಸಪ್ತಾಪುರ ಬಾವಿ, ಹಳಿಯಾಳ ರಸ್ತೆ, ಕಲ್ಯಾಣನಗರ ಅವರಿಗೆ ಬಹಳ ನೆನಪಾಗಿತ್ತು. ಜಗತ್ತಿನ ಎಲ್ಲ ವಿದ್ಯಾಮಾನಗಳಿಗೆ ಮೊದಲು ವಿಶ್ವವಿದ್ಯಾನಿಲಯ ಧ್ವನಿಯಾಗುತ್ತಿತ್ತು.

ಬಸ್ಸಿನ ಧರ ಹೆಚ್ಚಾದರೆ, ಪಾಠ-ಪ್ರವಚನ ಆಗದೆ ಇದ್ದರೆ ಶಾಂತನಾಯ್ಕರಲ್ಲಿಯೂ ಸಹ ಹೋರಾಟದ

ಇಂಗ್ಲೀಷಿನ ಪರಿಪಾಟಲುಳು :-

ಕನ್ನಡ ಮಾಧ್ಯಮದ ಗ್ರಾಮೀಣ ಭಾಗದ ಹಿನ್ನೆಲೆಯುಳ್ಳ ವಿದ್ಯಾರ್ಥಿಗಳಿಗೆ ಇಂಗ್ಲೀಷಿನ ಕಲಿಕೆ ಈ ವರೆಗೂ ಕಬ್ಬಿಣದ ಕಡಲೆ.

"ಮೊದಲ ಡೆಸ್ಕಿನ ಮೊದಲ ಸಾಲ ಮೊದಲನೇ ಸೀಟು
ತಿಂಗಳುಗಳುರಿಳಿದರೂ ಷೇಕ್ಸ್‌ಪಿಯರ್,
ಸೆಲ್ಲಿ, ಮಿಲ್ಟನ್,. . .. ಅರ್ಥವಾಗದ ನಿಘಂಟು"
ಈ ಎಲ್ಲ ಸಾಲುಗಳು ನಮಗೆಲ್ಲರಿಗೂ ಅನ್ವಯವಾಗುವಂತದ್ದೇ.
"ಈಗ ನಮ್ಮೊಳಗಿನ ಫ್ಯಾಸಿಸ್ಟ್ ಒಬ್ಬ ಜಾಗೃತನಾಗಿದ್ದಾನೆ
ಮೆಹಬೂಬ, ರೆಹಮಾನಿ, ಕರೀಂ ಬದ್ಧವೈರಿಗಳಾಗಿದ್ದಾರೆ
ದಲಿತ ಕೇರಿ ದುರ್ಗಚೆನ್ನರ ಕಂಡರೀಗ ಸೇಡಿನ ಕಿಡಿ ಕಾರುತ್ತೇನೆ
ಬ್ರಾಹ್ಮರ-ಶೆಟ್ಟಿಯರ ಕಂಡು ಕತ್ತಿ ಮಸಿಯುತ್ತೇನೆ
ಏಕೆಂದರೆ ನಾನು ಸ್ವಾರ್ಥಿಯಾಗಿದ್ದೇನೆ"

ಎಲ್ಲ ವಿದ್ಯಾವಂತರು ವಿದ್ಯಾವಂತರಾದರು ಆದರೆ ಮನುಷ್ಯರಾದರಾ ಗೊತ್ತಿಲ್ಲ!.

ಶಾಂತನಾಯ್ಕರ ಮೊದಲ ಮಗ ಅನಿಕೇತ್ ಜನನದ ವಿಚಾರ ಇಲ್ಲಿ ಬರುತ್ತದೆ. ಆತ ಈಗ ವಿದೇಶದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಅಕಂಪನ್ ದೊಡ್ಡವನಾಗಿದ್ದಾನೆ.

'ಲಮಾಣಿ'ಯಲ್ಲಿ ಸಂತ ಸೊಲಲರ ಪೂಜೆ ಕುರಿತ ವಿವರ ಸ್ಥೂಲವಾಗಿ ಬಂದಿದೆ. ಇದು ಲಮಾಣಿಯ ಭಾಗ-1. ಆದಷ್ಟು ಬೇಗ 'ಲಮಾಣಿ' ಭಾಗ 2 ಬರಲಿ ಅಂತ ಹಾರೈಸುವೆ.

'ಲಮಾಣಿ'ಯ ಕೊನೆಯ ಸಾಲುಗಳು ಅರ್ಥಗರ್ಭಿತವಾಗಿವೆ.

"ಬದುಕು ಬಂಡಿಯ ಸಹ ಪಯಣಿಗಳಿದ್ದಾಳೆ
ಸುಖದಲ್ಲಿ ಸುಖವನ್ನು
ದುಃಖದಲ್ಲಿ ದುಃಖವನ್ನು ಹಂಚಿ ಉಂಡು
ಬದುಕಿದ್ದೇವೆ ನನಗವಳು
ಅವಳಿಗೆ ನಾನು ಊರುಗೋಲಾಗಿ"

ಪ್ರೊ, ವಾಲಪ್ಪ ಸುಬ್ಬಪ್ಪ ಲಮಾಣಿ, ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ, ಎಂ.ಜಿ.ವ್ಹಿ.ಸಿ, ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಮುದ್ದೇಬಿಹಾಳ

ಹಳೆ ಭಾವನೆಯ ಹೊಸ ಮನುಷ್ಯ : ಬಹುಧಾರೆಯ ಮುಖಾಮುಖಿ

ಡಾ. ಗಿರೇಗೌಡ ಅರಳಿಹಳ್ಳಿ

ಡಾ. ಶಾಂತನಾಯ್ಕ ಅವರು ಸಾಹಿತ್ಯದ ಕಥೆ, ಕಾವ್ಯ, ಕಾದಂಬರಿ, ನಾಟಕ, ಆತ್ಮಕಥೆ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ ಮುಂತಾದ ವಿವಿಧ ಪ್ರಕಾರಗಳಲ್ಲಿ ಕನ್ನಡ ಮತ್ತು ಇಂಗ್ಲಿಷ ಭಾಷೆಗಳಲ್ಲಿ ಸಾಹಿತ್ಯದ ಕೃಷಿ ಮಾಡಿದ್ದಾರೆ.ಪ್ರಸ್ತುತ ನಾನು ವಿಷಯ ಮಂಡನೆಗೆ ಅವರ 'ಹಳೆ ಭಾವನೆಯ ಹೊಸ ಮನುಷ್ಯ' ಕವನ ಸಂಕಲನವನ್ನು ಆಯ್ದುಕೊಂಡಿದ್ದೇನೆ.ಇದರಲ್ಲಿ ಒಟ್ಟು 60 ಕವಿತೆಗಳಿವೆ. ಪ್ರೊ.ಸಿ.ನಾಗಣ್ಣ ಅವರು ಈ ಕವನ ಸಂಕಲನಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಇಲ್ಲಿಯ ಕವಿತೆಗಳು ವಸ್ತು ವೈವಿಧ್ಯತೆಯಿಂದ ಕೂಡಿರುವುದರ ಜೊತೆಗೆ ಸಮಾಜಮುಖಿಯಾದ ಚಿಂತನೆಗಳಿಂದಲೂ ಕೂಡಿವೆ. ಈ ಕವನ ಸಂಕಲನದ ಪ್ರಾರಂಭದ ಹತ್ತು ಕವಿತೆಗಳನ್ನು ನನ್ನ ವಿಷಯ ಮಂಡನೆಗೆ ಆಯ್ದುಕೊಂಡಿದ್ದೇನೆ.

'ಹಳೆ ಭಾವನೆಯ ಹೊಸ ಮನುಷ್ಯ' ಕವನವು ಬದಲಾವಣೆ ಜಗದ ನಿಯಮ ಎಂಬ ಆಶಯದಂತೆ ಕವಿತೆಯ ಆಸೆಯೂ ಕೂಡ ಸಮಾಜದಲ್ಲಿ ಬದಲಾವಣೆಯನ್ನು ಬಯಸುತ್ತದೆ. ಆದರೆ ಬದಲಾವಣೆ ಕೇವಲ ಹುಸಿ ಬದಲಾವಣೆಯಾಗಿದೆ ಎನ್ನುವುದನ್ನು ಅಭಿವ್ಯಕ್ತಿಸುತ್ತದೆ.

ಜಾತಿ ಬಿಟ್ಟು ಜಾತ್ಯಾತೀತನಾದ
ಬೆಕ್ಕು ದೀಕ್ಷೆ ಪಡೆದಂತೆ

ಮೇಲ್ನೋಟಕ್ಕೆ ಜಾತಿಯನ್ನು ಬಿಟ್ಟ ಇವನು ಅಂತರಂಗದಲ್ಲಿ ಜಾತಿಯ ಅತೀತನೆ ಆಗಿದ್ದಾನೆ ಎಂಬ ಸಶಕ್ತ ಮಾತುಗಳು ಅವರ ಆಂತರ್ಯವನ್ನು ತೆರೆದು ತೋರುವ ಕೀಲಕೈಯಂತಿವೆ. ಹೀಗೆ ಬಹಿರಂಗದ ಬದಲಾವಣೆ ಯಾಗಿದೆಯೇ ಹೊರತು ಅಂತರಂಗದ ಬದಲಾವಣೆಯಾಗದಿರುವಿಕೆಯನ್ನು ಕವಿತೆಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಹಗಲು ವೇಷದ ಮುಸುಕುದಾರಿಯಂತೆ

ಹೊಸವೇಷ

ಮುಖದಲ್ಲಿ ಹೊಸಕಳೆ

ಮನದ ತುಂಬ ಹಳೆಯ ಕೊಳೆ

ಹೀಗೆ ಈ ಕವಿತೆ ಸಮಕಾಲೀನ ಪ್ರಜ್ಞೆಯನ್ನು ಪರಿಣಾವಕಾರಿಯಾಗಿ ನಿರೂಪಿಸುತ್ತದೆ.

'ಡೊಕ್ಕಿ ಬರ' ಎಂಬ ಮತ್ತೊಂದು ಕವನದಲ್ಲಿ ಭೀಕರ ಬರಗಾಲದ ವ್ಯಕ್ತಿಚಿತ್ರಣವಿದೆ

ಕತ್ತಾಳೆ ಬೇರು ತಿಂದಾರಿ ಮಂದಿ

ಕಾರಿ ಹಣ್ಣಿನ ಸೊಪ್ಪ ರುಚಿ ನೋಡ್ಯಾರ

ಕತ್ತಾಳೆ ಕರಳರಿದು ಕಾರಿ ಸೊಪ್ಪು ಉರಿ ಮಂಡಲಾಗಿ

ಹೊಟ್ಟೆ ಉಬ್ಬಿ ಕೊಕ್ಕಿ ಹರಿದು ಕರುಳು ಹೊರಬಂತು

ಎಂದು ಬರಗಾಲಕ್ಕೆ ಮಿಡಿಯುವ ಹೃದಯ ಕವಿಯದಾಗಿರುವುದನ್ನು ಕಾಣುತ್ತೇವೆ.ಬರಗಾಲ ವ್ಯಕ್ತಿಯ ಬದುಕನ್ನು ಅತಂತ್ರಗೊಳಿಸುವುದರ ಜೊತೆಗೆ ಅವರ ಅಂತ್ಯಕ್ಕೂ ಕಾರಣವಾಗುವಿಕೆಯನ್ನು ಪರಿಣಾವಕಾರಿಯಾಗಿ ಹಿಡಿದಿಟ್ಟಿದ್ದಾರೆ.

'ಸಂತೆ' ಎಂಬ ಮತ್ತೊಂದು ಕವಿತೆಯಲ್ಲಿ ವ್ಯಕ್ತಿ ಬದುಕಿನ ಸಂತೆಯನ್ನು ಮನವರಿಕೆ ಮಾಡಿಕೊಡುತ್ತದೆ. ವ್ಯಕ್ತಿ ತನ್ನ ಅಸ್ತಿತ್ವಕ್ಕಾಗಿ ಅಸ್ತಿತ್ವವನ್ನೇ ಮಾರಿಕೊಳ್ಳುವ ಚಿತ್ರಣವಿದೆ.

ಬೆಳಗ್ಗೆಯಿಂದ ಬೆವರು ಬಿಟ್ಟ ಮೈ

ಭಾರವಾದ ಹೆಜ್ಜೆ ಹೊತ್ತು ಖಾಲಿ ಚೀಲ ಬುಟ್ಟಿ ಬ್ಯಾಗು ಹೆಗಲೇರಿಸಿ ಹೊರಟುಬಿಟ್ಟರು..

ಬಂದ ದಾರಿಗೆ ಸುಂಕವಿಲ್ಲದಂತೆ

ಹೀಗೆ ಈ ಕವಿತೆ ಸಂತೆಯ ಪ್ರತಿಮೆಗಳ ಮೂಲಕ ಬದುಕಿನ ಸಂತೆಯ ಚಿತ್ರಣವಿದೆ.

'ಅಳಲು' ಎಂಬ ಕವನದಲ್ಲಿ ಸ್ತ್ರೀ ಸಮಾನತೆಗಾಗಿ ಹಾತೊರೆಯುವ ಚಿತ್ರಣವಿದೆ. ಆ ಮೂಲಕ ಅವಳ ಅಂತರಾಳದ ಅಳಲನ್ನು ಕವಿ ಇಲ್ಲಿ ತೊಡಿಕೊಂಡಿದ್ದಾರೆ.

ಬಯಕೆ ಸುತ್ತೆಲ್ಲಾ

ಪಾಪಸುಕಳ್ಳಿಯ ಬೇಲಿ

ಅಕ್ಕ ತಂಗಿ ತಾಯಿ ಅಜ್ಜಿ ಮಡದಿ

ಎಷ್ಟೊಂದು ಪಾತ್ರಗಳು ಎಲ್ಲಿಯವರೆಗೆ

ಈ ಸಾಮಾಜಿಕ ವ್ಯವಸ್ಥೆಯಲ್ಲಿ ಅಕ್ಕ,ತಂಗಿ.ಮಡದಿ,ತಾಯಿ,ಅಜ್ಜಿ ಇನ್ನೂ ಮುಂತಾದ ಪಾತ್ರಗಳನ್ನು ಸ್ತ್ರೀ ನಿರ್ವಹಿಸಿದರು ಸಮಾಜ ಅವಳನ್ನು ಕಡೆಗಣಿಸುತ್ತಲೆ ಬಂದಿದೆ.ಇಂತಹ ಪುರುಷ ವ್ಯವಸ್ಥೆಯ ಅಧೀನತೆಯಿಂದ ಮುಕ್ತಳಾಗುವ ಬಯಕೆ ಇಲ್ಲಿ ಧ್ವನಿಪೂರ್ಣವಾಗಿ ಅಭಿವ್ಯಕ್ತಿಗೊಂಡಿದೆ.

'ಹೋರಾಟಗಾರರ ಸುತ್ತ' ಎಂಬ ಕವನದಲ್ಲಿ ಹುಸಿ ಹೋರಾಟಗಾರರ ಚಿತ್ರಣವನ್ನು ಮಾರ್ಮಿಕವಾಗಿ ಕಟ್ಟಿಕೊಟ್ಟಿದ್ದಾರೆ. ಇಂತಹ ಹೋರಾಟಗಾರರಿಗೆ ತಮ್ಮ ಹಿತಾಸಕ್ತಿ ಮುಖ್ಯವೇ ಹೊರತು, ಜನ ಸಮಾಜದ ಹಿತ ಮುಖ್ಯವಾಗಿ ಕಾಣುವುದಿಲ್ಲ.

ಮೌಲ್ಯಗಳೆ ಮುಳುವಾಗಿ ಸಿದ್ಧಾಂತ ಹೊಟ್ಟೆ ತುಂಬಿಸದು

ಸತ್ಯದ ಅರಿವಾದೊಡೆ

ವ್ಯವಸ್ಥೆಯ ವಿದ್ರೋಹ ಅವ್ಯವಸ್ಥೆಗೆ ಒಪ್ಪಿಕೊಂಡು ರಾಜಿಯಾಗುತ್ತಾರೆ

ಹೀಗೆ ಹೋರಾಟದ ಅಂತಿಮ ಸ್ವರೂಪವೇ ಬದಲಾಗುವ ವಾಸ್ತವ ಸತ್ಯವನ್ನು ಕಟ್ಟಿಕೊಟ್ಟಿದ್ದಾರೆ.

'ಅಂದು ಹೋದವರು' ಕವಿತೆಯು ತಮ್ಮ ಹಕ್ಕುಗಳಿಗಾಗಿ ಹೋರಾಡಿದವರ ವಾಸ್ತವ ಮುಖಗಳನ್ನು ಇಲ್ಲಿ ಹೆಣೆದಿದ್ದಾರೆ. ಶ್ರೇಣೀಕೃತ ವ್ಯವಸ್ಥೆಯಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡಿ ತಮ್ಮ ಅಂತ್ಯವನ್ನು ಕಂಡ ಮಾದರಿ ವ್ಯಕ್ತಿಗಳ ವ್ಯಕ್ತಿತ್ವ ಒಂದೆಡೆಯಾದರೆ, ಇನ್ನೊಂದು ವರ್ಗ ಯಾವುದೋ ಒಂದು ಕುರ್ಚಿ ಸಿಕ್ಕಾಗ ಹೋರಾಟದ ಹಾದಿಯನ್ನು ಅಂತ್ಯಗೊಳಿಸುವ ಧ್ವನಿ ಇಲ್ಲಿ ಅಡಕವಾಗಿದೆ.

ಕುರ್ಚಿ ಸಿಕ್ಕ ಮೇಲೆ ಮತ್ತೇಕೆ ಹಾಳು ನೆನಪುಗಳು

ಕುರ್ಚಿಗಾಗಿ ಕಾದವರಂತೆ

ನಮ್ಮದು ಮುಗಿಯಿತು .. ಹಕ್ಕು ಬೇಕಾದರೆ ಹೋರಾಡಿರೆಂದರು

ಇಂದಿನ ಹೋರಾಟಗಾರರ ಹಿಂದಿರುವ ಅವಕಾಶವಾದಿತನದ ಸ್ವಾರ್ಥ ಮನೋಭಾವಕ್ಕೆ ಹಿಡಿದ ಕನ್ನಡಿಯಂತಿದೆ ಈ ಕವಿತೆ.

'ಕ್ಯಾಂಪಸ್ಸಿನ ಕೋತಿಗಳು' ಎಂಬ ಕವನ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿನ ಅಧಿಕಾರಸ್ಥರ ಅವಾಂತರಗಳನ್ನು ತೆರೆದಿಟ್ಟಿದ್ದಾರೆ.

ಜಾತಿ ಬೇಲಿಯ ಹೆಣೆದು ಇವನ್ಯಾರವ ಇವನ್ಯಾರವ..

ಧರ್ಮದ ಮಲಿನಲಿ ಕಡಿಮೆ ಅಂಕ ಕರುಣಿಸುವ

ಹೀಗೆಅಧಿಕಾರಸ್ಥ ಕೋತಿಗಳ ಕುಚೇಷ್ಟೆಯನ್ನು ವಿಡಂಬನಾತ್ಮಕವಾಗಿ ಹೆಣೆದಿದ್ದಾರೆ.

ಮಾನವ ತನಗಿರುವ ಮಾತನಾಡುವ ಮತ್ತು ಬುದ್ಧಿಶಕ್ತಿ ಕೌಶಲದಿಂದಾಗಿ ಇತರ ಪ್ರಾಣಿಗಳಿಗಿಂತಲೂ ಭಿನ್ನವಾಗಿದ್ದಾನೆ ಆದರೂ ಕೂಡ ಪ್ರಾಣಿಗಳಿಗಿಂತ ಕ್ರೂರವಾಗಿ ವರ್ತಿಸುವುದನ್ನು ಈ ಕವಿತೆಯಲ್ಲಿ ಕಟ್ಟಿಕೊಟ್ಟಿದ್ದಾರೆ.ನಾವು ಎಷ್ಟು ಎಷ್ಟು ಅಕ್ಷರಸ್ಥರಾಗುತ್ತೇವೆಯೊ ಅಷ್ಟು ಮೂಢರಾಗುತ್ತಿದ್ದೇವೆ ಎನ್ನುವ ವಾಸ್ತವತೆಯನ್ನು ಹಿಡಿದಿಟ್ಟಿದೆ.

'ಧೃತರಾಷ್ಟನ ಮಕ್ಕಳು' ಎಂಬ ಕವನವು ಪೌರಾಣಿಕ ಪಾತ್ರಗಳ ಮೂಲಕ ವರ್ತಮಾನದ ವ್ಯವಸ್ಥೆಯ ಅನುಸಂಧಾನದ ಚಿತ್ರಣವಿದೆ. ಧರ್ಮದ ಹೆಸರಿನಲ್ಲಾಗುವ ಸಂಘರ್ಷಕ್ಕೆ ಕವಿ ಹೃದಯ ಇಲ್ಲಿ ಮಿಡಿಯುತ್ತದೆ.

ಯೋಚಿಸುತ್ತೇನೆ
ಪೈಗಂಬರ್ ಏಸು ಬುದ್ಧ ಬಸವ
ಅವರ ಹಾದಿಯೊಳು ಜಾಲಿ ಮುಳ್ಳಾದ ಪರಿಯಕಂಡು

ಇಂತಹ ಮಹಾನ್ ವ್ಯಕ್ತಿಗಳು ಹುಟ್ಟಿ ಬಾಳಿ ಬದುಕಿದ ಈ ದೇಶದಲ್ಲಿ ಇಂತಹ ವಿಷಬೀಜ ಬಿತ್ತುವ ವ್ಯಕ್ತಿಗಳು ಹುಟ್ಟಿದ ಬಗೆಗೆ ಮರುಕ ವ್ಯಕ್ತಪಡಿಸಿದ್ದಾರೆ.

'ಮಳೆಗೊಂದು ಅಪೀಲು' ಬರಗಾಲದ ಬಗೆಗೆ ಮರುಕ ವ್ಯಕ್ತಪಡಿಸುವ ರೈತಪರ ಜೀವಪರ ಕಾಳಜಿ ಈ ಕವಿತೆಯಲ್ಲಿ ಅಭಿವ್ಯಕ್ತಿಗೊಂಡಿದೆ.

ಚೆಲ್ಲಿ ಮೋಡಗಳೆ ನಾಲ್ಕು ಹನಿ ಮಳೆಯನೀರ
ಮೊಗ್ಗು ಬಿರಿಯಲಿ ಅವರೆದೆಯೊಳಗೆ
ಹಬ್ಬವಾಗುವುದಂದು ನನ್ನೂರೊಳಗೆ
ಮುಗ್ಧ ಆಲೋಚನೆಗೆ ಮುದ್ದಿನಂತೆ

ಕೃಷಿಯನ್ನೆ ಅವಲಂಬಿಸಿದ ರೈತರ ಮುಖದಲ್ಲಿ ಮಂದಹಾಸದ ನಗು ಮೂಡುವುದು ಕಾಲ ಕಾಲಕ್ಕಾಗುವ ಮಳೆಯಿಂದಲೆ, ಅದೇ ಅವರಿಗೆ ಹಬ್ಬವಿದ್ದಂತೆ. ಮಳೆ ಬಾರದಿದ್ದರೆ ಅವರ ನಗು ಇಲ್ಲವಾಗುತ್ತದೆ. ರೈತರ ಮುಖದಲ್ಲಿ ನಗು ಕಾಣಬಯಸುವ ಕವಿ ತನ್ನೂರಿಗೆ ಅತಿಥಿಯಾಗಿ ಬಂದು ಜನ, ಪ್ರಾಣಿ, ಪಕ್ಷಿ. ಗಿಡ. ಕೆರೆಗಳ ಸಂತಸಕ್ಕೆ ಕಾರಣನಾಗು ಎಂದು ಮಳೆರಾಯನಿಗೆ ಮನವಿಯನ್ನು ಮಾಡಿದ್ದಾರೆ.

'ಮುದುಕನೊಬ್ಬನ ಅಂತರಾಳಾ' ಕವನದಲ್ಲಿ ಕವಿ ಮುದುಕನೊಬ್ಬನ ಪಾತ್ರದ ಮೂಲಕ ಕಾಲದ ಆತ್ಮಾವಲೋಕನ ಮಾಡಿಕೊಳ್ಳುತ್ತಾನೆ. ಇಂದಿನ ಅಂದಿನ ಬದುಕಿನ ತೌಲನಿಕತೆ ಎದ್ದು ಕಾಣುತ್ತದೆ. ಈ ದಿನದ ಜಾಗತೀಕರಣ, ಕೈಗಾರಿಕೀಕರಣದಿಂದಾಗಿ ಈ ಹಿಂದಿನ ನಾಡು ನುಡಿ ಸಂಸ್ಕೃತಿ ಅಳಿದು ಹೋಗಿರುವುದನ್ನು ಈ ಕವಿತೆ ಹಿಡಿದಿಟ್ಟಿದೆ.

ಗುರು-ಹಿರಿಯರ ನಯನವಿನಯದ ಕಾಲ

ಮಾತು ತಪ್ಪದ ಮನುಜರಿದ್ದರು ಆಗ

ಕಾಲಕಾಲಕೆ ಮಳೆಬಂದು ಭೂತಾಯಿ ಗರ್ಭಧರಿಸಿದಂತೆ

ಸುತ್ತಲು ಕಾಡಿತು ನಾಡಿತ್ತು ನೆಮ್ಮದಿಯ ನೆಲೆಯಾಗಿತ್ತು

ಬದುಕಿನೊಳು ಹುಸಿಕನಸುಗಳಿಲ್ಲ

ಹಸನಾದ ನೆಮ್ಮದಿ ಸೂಸಿತ್ತು

ಹೀಗೆ ಇದ್ದ ನಾಡು ಜಾಗತೀಕರಣ,ಆಧುನಿಕರಣದ ಪ್ರಭಾವದಿಂದಾಗಿ ಅವೆಲ್ಲವೂ ಇಲ್ಲವಾಗಿ ಜಗತ್ತೆ ಹಳ್ಳಿಯಾಗಿ ಜಗತ್ತಿನ ವ್ಯಾಪಾರದಲ್ಲಿ ಸ್ಪರ್ಧೆಗೆ ಇಳಿಯಲಾರದೆ ರೈತ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ ಎನ್ನುವುದನ್ನು ಕವಿ ಹಿಂದಿನ ಮತ್ತು ಇಂದಿನ ಕಾಲದ ಬದುಕಿನ ಆತ್ಮಾವಲೋಕನದ ದರ್ಶನವನ್ನು ಕವಿ ಇಲ್ಲಿ ಮಾಡಿಸಿದ್ದಾರೆ.

ಹೀಗೆ ಈ ಕವನ ಸಂಕಲನದ ಆಯ್ದ ಕವಿತೆಗಳು ಬಹಿರಂಗದ ಬದಲಾವಣೆಗಿಂತ ಅಂತರಂಗದ ಬದಲಾವಣೆಯನ್ನು ಬಯಸುವುದರ ಜೊತೆಗೆ ಹಿಂದಿನ ಕಾಲದ ಬರಗಾಲ ಮತ್ತು ಸಾಮಾಜಿಕ ವ್ಯವಸ್ಥೆಯ ನಡೆ-ನುಡಿಯ ಶುದ್ಧತೆ, ಹುಸಿ ಹೋರಾಟಗಾರರ ಅವಕಾಶವಾದಿತನ, ಸ್ತ್ರೀ ಸಮಾನತೆಗಾಗಿ ಹಾತೋರೆಯುವಿಕೆಯ ಅಳಲು, ರೈತನ ಮಂದಹಾಸಕ್ಕೆ ಕಾರಣವಾದ ಮಳೆ, ಅಧಿಕಾರಸ್ಥರ ಅವಾಂತರಗಳು,ಸನಾತನ ಮನಸುಗಳ ಬಯಕೆ ಹೀಗೆ ಕವನಸಂಕಲನದ ಆಯ್ದ ಕವಿತೆಗಳ ಆಶಯಗಳು ಸಮಾಜಮುಖಿ ಚಿಂತನೆಗೆ ಸತ್ವಯುತವಾಗಿ ಮುಖಾಮುಖಿಯಾಗಿವೆ.

ಡಾ.ಗಿರೇಗೌಡ ಅರಳಿಹಳ್ಳಿ ಕನ್ನಡ ಅಧ್ಯಯನ ವಿಭಾಗ

ಶಾಂತಾನಾಯ್ಕರ ಕಥಾಸಾಹಿತ್ಯದಲ್ಲಿ ಲಂಬಾಣಿ ಸಮುದಾಯದ ತಲ್ಲಣಗಳು

ಡಾ. ಶಶಿಕಲಾ ಕೆ.

ಸಾಹಿತ್ಯ ಒಂದು ಕಲೆಯಾಗಿದೆ. ಈ ಕಲೆ ಹಲವು ಸಂಸ್ಕೃತಿಗಳನ್ನು ಒಳಗೊಂಡಿರುತ್ತದೆ, ವೈವಿಧ್ಯವಾಗಿದೆ. ಈ ಸಂಸ್ಕೃತಿ ಹಲವು ಸಮುದಾಯಗಳ ಬದುಕನ್ನು ಪ್ರತಿನಿಧಿಸುತ್ತದೆ. ಇಂತಹ ಬದುಕನ್ನು ಅಭಿವ್ಯಕ್ತಿಸುವ ಮಾಧ್ಯಮಗಳು ವಿಭಿನ್ನವಾಗಿವೆ.. ಅಂತಹ ಮಾಧ್ಯಮಗಳಲ್ಲಿ ಸಾಹಿತ್ಯವು ಒಂದು. ಈ ಕನ್ನಡ ಸಾಹಿತ್ಯವು ಹಲವು ಸಂಸ್ಕೃತಿಗಳ ಪ್ರತೀಕವಾಗಿದೆ. ಈ ವಿವಿಧ ಸಂಸ್ಕೃತಿಗಳನ್ನು ಅಭಿವ್ಯಕ್ತಿಸಲು ಸಾಹಿತ್ಯದ ವಿವಿಧ ಪ್ರಕಾರಗಳು ಮುಖ್ಯವಾಗಿವೆ. ಈ ಹಿನ್ನೆಲೆಯಲ್ಲಿ ಸಣ್ಣ ಕಥೆಯು ಮುಖ್ಯಪ್ರಕಾರವಾಗಿದೆ. ಈ ಸಣ್ಣಕಥೆ ಪ್ರಕಾರದ ಮೂಲಕ ತನ್ನದೇ ಸಮುದಾಯದ ಬವಣೆಯನ್ನು ಅಭಿವ್ಯಕ್ತಿಸಲು ಹಲವು ಸಮುದಾಯದ ಲೇಖಕರು ಮುಂದಾದರು. ಅಂತಹ ಲೇಖಕರಲ್ಲಿ ಶಿರಗಾನಹಳ್ಳಿ ಶಾಂತನಾಯ್ಕರು ಪ್ರಮುಖರು. ಇವರು ದಲಿತ-ಬಂಡಾಯೋತ್ತರ ಸಂದರ್ಭದಲ್ಲಿ ಕಾಣಿಸಿಕೊಂಡ ಲೇಖಕರು. ಈ ಸಂದರ್ಭದಲ್ಲಿ ಯಾವುದೇ ಚಳುವಳಿಗಳು ಇರಲಿಲ್ಲ. ಆದರೂ ಕಥಾ ಮಾದರಿ ನಿಲ್ಲಲಿಲ್ಲ. 1970ರ ಸಂದರ್ಭದಲ್ಲಿ ಶಿಕ್ಷಿತರಾದ ತಳಸಮುದಾಯದ ಲೇಖಕರು ತಮ್ಮ ಸಮುದಾಯದ ಬವಣೆಗಳಿಗೆ ಧ್ವನಿ ನೀಡಲು ಮುಂದಾದರು. ಇವರೆಲ್ಲ ಎಚ್ಚೆತ್ತ ಬರಹಗಾರರು. ಈ ಲೇಖಕರು ಸಮುದಾಯದ ತಲ್ಲಣಗಳಿಗೆ ಸ್ಪಂದಿಸಿದರು. ಸಂವೇದನೆ ನೀಡಿದರು. ಇಂತಹ ಬರಹಗಾರರಲ್ಲಿ ಶಾಂತಾನಾಯ್ಕರು ಪ್ರಮುಖರು.

ಇವರು ಲಂಬಾಣಿ ಸಮುದಾಯಕ್ಕೆ ಸೇರಿದವರು. ಈ ಲಂಬಾಣಿ ಸಮುದಾಯದ ಸಂಸ್ಕೃತಿಯನ್ನು ಕಥಾಪ್ರಕಾರದ ಮೂಲಕ ಅಭಿವ್ಯಕ್ತಿಸಿದ್ದಾರೆ. ಈ ಲಂಬಾಣಿ ಸಮುದಾಯದಲ್ಲಿ ಮೇಲುವರ್ಗ ಮತ್ತು ಕೆಳವರ್ಗಗಳಿವೆ. ಮೇಲುವರ್ಗದವರಾದ ಗೌಡರು ಜಮೀನ್ದಾರರಾಗಿದ್ದರು. ಇಡೀ ಸಮುದಾಯುವನ್ನು ತಮ್ಮ ಆಧೀನದಲ್ಲಿ ನಿಯಂತ್ರಿಸುವವರಾಗಿದ್ದಾರೆ. ಕೆಳವರ್ಗದ ಪರಿಶಿಷ್ಟ ಜಾತಿಗೆ ಸೇರಿದ ಲಂಬಾಣಿಗಳು

ಹಾಗೂ ದಲಿತರು ಹಟ್ಟಿಯಲ್ಲಿ ನೆಲೆಸುವರು. ಈ ಸಮುದಾಯದಲ್ಲಿ ಕೊಡುಕೊಳ್ಳುವಿಕೆ ಪದ್ಧತಿಯಿದೆ. ಈ ಪದ್ಧತಿ ಅಧೀನ ಮತ್ತು ಪ್ರಧಾನ ವ್ಯವಸ್ಥೆ ನಿಯಂತ್ರಣದಲ್ಲಿ ಜನರು ಬದುಕನ್ನು ರೂಪಿಸಿಕೊಳ್ಳುತ್ತಾರೆ. ಈ ಕಥೆಯ ಪ್ರಧಾನ ಸಂಸ್ಕೃತಿಗೆ ಸೇರಿದ ಪಾತ್ರಗಳೆಂದರೆ ಖಂಡೇಗೌಡ, ನಾಗನಗೌಡ (ಕೊಂಯ್ಯ ಮತ್ತು ಧೋತ್ರ) ಹನ್ಮಂತ ಭಟ್ಟ (ಬೂದುಗನ ಪ್ಲಾಸ್ಟಿಕ್ ಬೂಟುಗಳು), ಹಿರೀಗೌಡ್ರು (ಶರೀರಗೂಡು ಹೋಗದ ಮುನ್ನ), ದೊಡ್ಡಗೌಡ್ರು (ಶರೀರಗೂಡು ಹೋಗದ ಮುನ್ನ) ಇತ್ಯಾದಿ. ಅದೇ ರೀತಿ ಅಧೀನ ಸಂಸ್ಕೃತಿಗೆ ಸೇರಿದ ಪಾತ್ರಗಳು ಪೀಕ್ಲಿ (ಮಂಚವೆಂಬೊ ಮಾಯಾಕನ್ನಡಿ), ಬೂದುಗ (ಬೂದುಗನ ಪ್ಲಾಸ್ಟಿಕ್ ಬೂಟುಗಳು), ಕೊಂಯ್ಯ (ಕೊಂಯ್ಯ ಮತ್ತು ಧೋತ್ರ), ಜೋಗ್ಯಾ ಮತ್ತು ಬೆದರು ಇತ್ಯಾದಿ ಪಾತ್ರಗಳು. ಈ ಸಮುದಾಯದಲ್ಲಿ ಶಿಕ್ಷಿತ ಪಾತ್ರಗಳಿದ್ದು ಮುಖ್ಯವಾಗಿ ಮಲ್ಲಣ್ಣ (ಶರೀರಗೂಡು ಹೋಗದ ಮುನ್ನ), ಯಂಕಪ್ಪ (ಕೊಂಯ್ಯ ಮತ್ತು ಧೋತ್ರ) ಈ ಪಾತ್ರಗಳು ಗ್ರಾಮೀಣ ಸಂಸ್ಕೃತಿಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡವರು. ನಗರ ಸಂಸ್ಕೃತಿಗೆ ತಮ್ಮನ್ನು ತಾವು ತಂದು ಕೊಂಡ ಶಿಕ್ಷಿತ ಪಾತ್ರಗಳೆಂದರೆ ನಿರೂಪಕ ಮತ್ತು ವಂದನಾ.

ಲಂಬಾಣಿ ಸಮುದಾಯಗಳು ಮೇಗಲ ಮನೆ ಮತ್ತು ಕೆಳಮನೆ ಎಂದು ವರ್ಗೀಕರಿಸಿಕೊಂಡು ಅನೇಕ ಕುಟುಂಬಗಳು ಈ ಕಥೆಯಲ್ಲಿ ಚಿತ್ರಿತಗೊಂಡಿವೆ. ಈ ಪ್ರಧಾನ ಮತ್ತು ಅಧೀನ ಕುಟುಂಬಗಳು ಒಡೆಯ – ಆಳಿನ ಸಂಬಂಧವನ್ನು ಹೊಂದಿದೆ.

ಈ ಲಂಬಾಣಿ ಸಮುದಾಯದವರು ಅಶಿಕ್ಷಿತರು. ತಳ ಸಮುದಾಯದ ವರ್ಗಕ್ಕೆ ಸೇರಿದವರು. ಮೊದಲ ಹಂತದ ಸಂಸ್ಕೃತಿಗೆ ಸೇರಿದವರು. ಪರಿಪೂರ್ಣ ಬಯಕೆಯೇ ಸಂಸ್ಕೃತಿ. ಹೀಗೆ ಈ ಕಥೆಯಲ್ಲಿ ಅಭಿವ್ಯಕ್ತಗೊಂಡಿರುವ ಹಲವು ಪಾತ್ರಗಳಾದ ಪೀಕ್ಲಿ, ಜೋಗ್ಯ, ಬೂದುಗ, ಕೊಂಯ್ಯ, ಮಲ್ಲಣ್ಣ ಇತ್ಯಾದಿ ಪಾತ್ರಗಳಿಗೆ ಅತ್ಯಂತ ಸಣ್ಣಸಣ್ಣ ಆಸೆಗಳನ್ನು ಈಡೇರಿಸಿಕೊಳ್ಳಲು ತಮ್ಮ ಬದುಕನ್ನು ದುರಂತವಾಗಿಸುತ್ತಾರೆ. ಹೀಗೆ ಶಾಂತಾನಾಯ್ಕರಿಗೆ ಬದುಕಿನ ಸಣ್ಣ ಸಣ್ಣ ಆಸೆ – ಘಟನೆಗಳನ್ನು ಕಥೆಯಾಗಿಸುವ ಕಲೆ ಕರಗತವಾಗಿದೆ. ಇಲ್ಲಿನ ಲಂಬಾಣಿ ಸಮುದಾಯ ಆದಿವಾಸಿ ಸಂಸ್ಕೃತಿಯು ನಾಗರಿಕ ಸಂಸ್ಕೃತಿಯ ಕಡೆಗೆ ಸ್ಥಳಾಂತರಿಸುವುದು, ಈ ನಾಗರಿಕತೆ ಎಂಬುದು ಕೇವಲ ಸಲಕರಣೆಗಳನ್ನು ಪಡೆದು ದೇಹ ರಕ್ಷಣೆಯನ್ನು ಮಾಡುವಲ್ಲಿ ಶಕ್ತರಾಗಿದ್ದಾರೆ ಹೊರತು ವಸ್ತುಗಳಿಗಿಂತ ದೇಹ ಮುಖ್ಯ ಎಂಬ ಪ್ರಜ್ಞೆ ಈ ಪಾತ್ರಗಳಿಗಿಲ್ಲ ಹಾಗಾಗಿ ಇವರು ಸೌಲಭ್ಯ ಆಕಾಂಕ್ಷೆಗಳ ವಿನಹ ಪ್ರಜ್ಞಾವಂತರಲ್ಲ.

ಶಾಂತಾನಾಯ್ಕರು ತಮ್ಮ ಕಥೆಯಲ್ಲಿ ಮೌಲ್ಯಗಳ ಕುರಿತು ಬೆಳಕು ಚೆಲ್ಲಿದ್ದಾರೆ. 'ಜೋಗ್ಯಾ ಮತ್ತು ಬೆದರು' ಕಥೆಯ ಜೋಗ್ಯಾ ಅಪ್ರಾಪ್ತ ವಯಸ್ಸಿನ ಬಾಲಕನಾಗಿದ್ದಾನೆ.

ದುರಗ ಮತ್ತು ಜಂಪಿ ಮಗ ಜೋಗ್ಯಾ, ಮಗಳು ಚಿಮ್ಮಿ. ಜೋಗ್ಯಾನಿಗೆ ತಾಯಿಯ ಆರೈಕೆ ಇಲ್ಲದೆ ಆತನ ಕೂದಲು ಜಡೆಗಟ್ಟಿರುವವು. ಇದಕ್ಕೆ ಕಾರಣ ತಿಳಿಯದ ಜಂಪಿಗೆ ಮಗನ ಉದ್ದನ ಕೂದಲಿಗೆ ದೇವಿಯ ಮಹಿಮೆ ಎಂದು ನಿರ್ಧರಿಸಿದಳು. ಜೋಗ್ಯಾ ಅಂದಿನಿಂದ ದೇವಿ ಪುತ್ರನಾದ. ಈ ಜೋಗ್ಯಾನಿಗೆ ಹಿರಿಗೌಡ್ರ ಮನೆಯೆಂದರೆ ಬಹಳ ಆಕರ್ಷಣೆ ಕಾರಣ ಹಿರಿಗೌಡ್ರ ಮನೆಯ ಮೇಲೆ ಬಿದುರು ಗೊಂಬೆಗೆ ಹಾಕಿದ್ದ ಬಟ್ಟೆ ಅವನನ್ನು ಆಕರ್ಷಿಸಿತ್ತು. ಅಲ್ಲದೆ ಗೌಡ ತನಗೆ ಮನೆಯಮೇಲೆ ಬಿದಿರಿನ ಬಟ್ಟೆ ಹಾಕಿಸಿ ನಿಲ್ಲಿಸಿದರೆ ಎಂಬ ಆಸೆ ಅವನ ಕಡುಬಡತನವನ್ನು ಅದನ್ನೂ ಪೂರೈಸಲಾಗದ ಅಸಹಾಯಕತೆಯನ್ನು ತಿಳಿಸುತ್ತದೆ. ಆದರೆ ಜೋಗ್ಯಾ ಬಿದುರುಗೊಂಬೆಯನ್ನು ನೋಡಲು ಹಿರಿಗೌಡ್ರ ಮನೆಯಮೇಲೆ ಹತ್ತಿದ್ದು ಮಹಾ ಅಪರಾಧವಾಗಿ ಗೌಡ್ರ ಮನೆಯವರಿಂದ ಶಿಕ್ಷೆಗೆ ಒಳಗಾಗುತ್ತಾನೆ. ಈ ಶಿಕ್ಷೆಯಿಂದ ತನ್ನ ಕೂದಲನ್ನು ಕಳೆದುಕೊಳ್ಳುತ್ತಾನೆ. ಈ ಘಟನೆ ಜೋಗ್ಯಾನಲ್ಲಿ ಯಾವುದೇ ಕಳವಳ ತರದೆ ಬದಲಾಗಿ ಇದುವರೆಗೂ ಇದ್ದ ಭಾರವನ್ನು ಕಳೆದುಕೊಳ್ಳುವಂತೆ ಜೋಗ್ಯಾನ ಪಾತ್ರವನ್ನು ಚಿತ್ರಿಸಲಾಗಿದೆ. ಹೀಗೆ ಜೋಗ್ಯಾನಿಗೆ ಗೌಡ್ರು ಕತ್ತೆಯಮೇಲೆ ಕೂರಿಸಿ ತಲೆಕೂದಲನ್ನು ತೆಗೆಸಿ ಮೆರವಣಿಗೆ ಮಾಡಿಸಿದರು. ಆದರೆ ಬಿದಿರಿನ ಮೇಲಿನ ಅಂಗಿಯ ತೊಡುವ ಆಸೆ ಕಣ್ಮರೆಯಾಗುವುದಿಲ್ಲ ಹೀಗಾಗಿ ಅತ್ಯಂತ ಚಿಕ್ಕ ಚಿಕ್ಕ ಆಸೆಯನ್ನು ಈಡೇರಿಸಿಕೊಳ್ಳಲಾರದ ಅಸಹಾಯಕತೆಯಿದೆ. ಹಿರಿಯ ಗೌಡರಿಗೆ ತಾವು ಮಾಡಿದ ನಿರ್ಧಾರದ ಬಗ್ಗೆ ಯಾವುದೇ ಪಶ್ಚಾತ್ತಾಪವಿಲ್ಲ ಆದರೆ ಆತನ ಮಗಳು ರತ್ನಗೆ ಜೋಗ್ಯಾನ ಶಿಕ್ಷೆಯನ್ನು ನೋಡಿ ದುಃಖಿತಳಾಗುವ ಪ್ರಸಂಗ ಸಾಮಾಜಿಕ ಕಳಕಳಿಯನ್ನು ಸೂಚಿಸುತ್ತದೆ.

ಶಾಂತಾನಾಯ್ಕರು ತಮ್ಮ ಕಥೆಗಳಲ್ಲಿ ಜಾತೀಯತೆಯನ್ನು ಕುರಿತು ಬರೆಯುತ್ತಾರೆ. ಮುಖ್ಯವಾಗಿ ಕೊಂಯ್ಯ ಮತ್ತು ಧೋತ್ರ ಕಥೆಯಲ್ಲಿ ಕೊಂಯ್ಯ ಒಬ್ಬ ದಲಿತ ವ್ಯಕ್ತಿ. ಇಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಯಂಕಪ್ಪನ ಅಜ್ಜ ಜೇಂಬೂರಜ್ಜ ನಿಧನವಾಗಿದ್ದು. ಅವನ ಪುಣ್ಯಸಮಾರಾಧನೆ ಮಾಡಲು ತೀರ್ಮಾನಿಸುತ್ತಾರೆ. ಯಂಕಪ್ಪ ಕುಟುಂಬ ಈ ತಿಥಿಯನ್ನು ವಿಜೃಂಭಣೆಯಿಂದ ಮಾಡಲು ನಿರ್ಧರಿಸಿರುತ್ತಾರೆ. ಜೇಂಬೂರಜ್ಜನ ಮರಣ ನಂತರ ಆತನ ಬಟ್ಟೆ ಅಗಸರ ಪಾಲಿಗೆ ಸೇರಬೇಕಾದದ್ದು ಪದ್ಧತಿ ಆದರೆ ಕೊಂಯ್ಯ ಧೋತ್ರವನ್ನು ತೆಗೆದುಕೊಂಡು ಧರಿಸಿದ್ದೇ ಮಹಾ ಅಪರಾಧವಾಗಿ ಯಂಕಪ್ಪನ ಕುಟುಂಬ ಅವನನ್ನು ಶಿಕ್ಷಿಸಿತು. ಶಿಕ್ಷಿತನಾದ ಕೊಂಯ್ಯನ ಪರಿಸ್ಥಿತಿಗೆ ನೊಂದು ತನ್ನ ಹಿರಿಮಾವ ಹಿರಿಗೌಡ್ರ ಆಲೋಚನೆಯನ್ನು ಬದಲಾಯಿಸಲು ಯಂಕಪ್ಪ ಪ್ರಯತ್ನಿಸಿ ಅದು ಫಲಕಾರಿಯಾಗದೆ ಕೊಂಯ್ಯನಿಂದ ಧೋತ್ರವನ್ನು ಬಲವಂತವಾಗಿ ಪಡೆದುಕೊಳ್ಳುತ್ತಾರೆ. ಈ ಮೂಲಕ ದಲಿತ ಮತ್ತು ನಾಯಕರ ಕುಟುಂಬಗಳು ಅಜ್ಜನ ಆತ್ಮ ಶಾಂತವಾಯಿತು. ಅದರ ಪಾಪ

ನಮಗೆ ತಟ್ಟಲಿಲ್ಲ ಎಂದು ನೆಮ್ಮದಿಯಿಂದ ನಿಟ್ಟುಸಿರು ಬಿಡುತ್ತಾರೆ. ಆದರೆ ತನ್ನ ವಿಚಾರ ಪ್ರಜ್ಞೆಯಿಂದ ತನ್ನ ಕುಟುಂಬವನ್ನು ವಿರೋಧಿಸಿ ದಲಿತ ಕಟುಂಬದವರಿಗೆ ರಕ್ಷಣೆ ಕೊಡಲು ಹೋದ ಯಂಕಪ್ಪ ಹಾಸ್ಯಾಸ್ಪದ ವ್ಯಕ್ತಿಯಾಗುತ್ತಾನೆ. ಹೀಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಲ್ಲಿ ಜಾತಿ ವೈಷಮ್ಯವಿದ್ದು ಅವನ್ನು ಬದಲಾಯಿಸಲು ಪ್ರಯತ್ನಿಸಿ ಅದು ಬದಲಾಗದ ಸಂದರ್ಭವನ್ನು ಈ ಕಥೆ ನಿರೂಪಿಸಲಾಗಿದೆ.

ಇದಕ್ಕೆ ಪೂರಕವಾದ ಕಥೆ 'ಬೂದುಗನ ಪ್ಲಾಸ್ಟಿಕ್ ಬೂಟುಗಳು' ಈ ಕಥೆಯ ನಾಯಕ ಬೂದುಗ. ಬೂದುಗನ ತಂದೆ ಗೌಡರ ಭೂಮಿಯಲ್ಲಿ ಕೆಲಸ ಮಾಡುವ ಕೂಲಿಗಾರನಾಗಿದ್ದಾನೆ. ಬೂದುಗನ ತಂದೆ ಪತ್ರೇಶಿ ಕಬ್ಬಿನ ಸಸಿ ಜೋಪಾನ ಮಾಡುವ ಕೆಲಸವನ್ನು ಮಗನಾದ ಬೂದುಗನಿಗೆ ವಹಿಸಿದ್ದನು. ಆದರೆ ಬೂದಗನು ಸ್ನೇಹಿತನಾದ ಬಸಣ್ಣ ತೋರಿಸುವ ಹರಿದ ಪ್ಲಾಸ್ಟಿಕ್ ಬೂಟಿನ ಆಸೆಗೆ ಕಬ್ಬಿನ ಸಸಿಯನ್ನು ಮಾರಿದ. ಆದರೆ ಪ್ಲಾಸ್ಟಿಕ್ ಬೂಟುಗಳು ಅವನ ಕೈ ಸೇರದೆ ಕಳವಾದವು. ಹೀಗೆ ಈ ಅಲಕ್ಷಿತ ಸಮುದಾಯ ಅತ್ಯಂತ ಸಣ್ಣ ಆಸೆಯನ್ನು ಈಡೇರಿಸಿಕೊಳ್ಳದ ನಿರಾಶಾವಾದಿಗಳಾಗಿದ್ದಾರೆ.

ಈ ಕಥಾಸಂಕಲನದಲ್ಲಿ ಶಿಕ್ಷಿತ ಪಾತ್ರಗಳು ಇದ್ದವು. ಆದರೆ ತಾವು ಕಲಿತ ಶಿಕ್ಷಣದಿಂದ ಸಮುದಾಯವನ್ನು ಬದಲಾಯಿಸಲಾಗದೆ ವ್ಯವಸ್ಥೆಗೆ ಬಲಿಯಾದ ಪಾತ್ರಗಳಾಗಿದ್ದಾರೆ. ಮುಖ್ಯವಾಗಿ ಮಲ್ಲಣ್ಣ (ಶರೀರ ಗೂಡು ಹೋಗದ ಮುನ್ನಾ), ಕೊಂಯ್ಯ ಮತ್ತು ಧೋತ್ರ ಕಥೆಯ ಯಂಕಪ್ಪ. ಕೊಂಯ್ಯನ ಕುಟುಂಬವನ್ನು ರಕ್ಷಿಸಲು ಹೋಗಿ ಅಪಹಾಸ್ಯಕ್ಕೆ ಈಡಾಗುತ್ತಾನೆ. ಮಲ್ಲಣ್ಣ ಯುವಕ ಸಂಘ ಕಟ್ಟಿ ಊರನ್ನು ಬದಲಾಯಿಸಲು ಹೋಗಿ ತಾನೆ ಅಪರಾಧಿಯಾಗುತ್ತಾನೆ. ಜಂಬೂರ ಶಿಕ್ಷಿತನಾದರು ತನ್ನ ಬಡತನ ಮತ್ತು ವ್ಯವಸ್ಥೆಗೆ ಬಲಿಯಾಗಿ ಕಾಫಿ ತೋಟದ ಮಾಲೀಕನ ಮಗಳನ್ನು ವಿವಾಹವಾಗುವ ಅನಿವಾರ್ಯಕ್ಕೆ ಒಳಗಾಗುತ್ತಾನೆ. ಅವಳನ್ನು ವಿವಾಹವಾಗುವುದರ ಮೂಲಕ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ. ಹೀಗೆ ಈ ಸಮುದಾಯ ಶಿಕ್ಷಿತ ಪಾತ್ರಗಳು ತಾವು ಪಡೆದ ಅರಿವಿನಿಂದ ವ್ಯವಸ್ಥೆಯನ್ನು ಬದಲಾಯಿಸಲಾಗದೆ ತಾವೇ ತನ್ನತನವನ್ನು ಕಳೆದುಕೊಳ್ಳುವ ದುಸ್ಥಿತಿಗೆ ತಲುಪುತ್ತಾರೆ.

ಈ ಕಥಾಸಂಕಲನದಲ್ಲಿ ಬರುವ ಮಹಿಳಾ ಪಾತ್ರಗಳು ವಿಶೇಷವಾಗಿವೆ. ಈ ಮಹಿಳಾ ಪಾತ್ರಗಳು ಅಶಿಕ್ಷಿತ ಪಾತ್ರಗಳಾಗಿವೆ. ಉದಾಹರಣೆಗೆ ಪೀಕ್ಲಿ, ಜೆಂಪಿ, ದಿಂಬಮ್ಮ, ಬೊಮ್ಮವ್ವ, ಬರ್ಜಿ, ಮಾಲವ್ವ, ರತ್ನ, ವಂದನಾ ಇತ್ಯಾದಿ ಪಾತ್ರಗಳು ಪಿಂಕ್ರಿ, ಬರ್ಜಿ ಪಾತ್ರಗಳು ದಿನನಿತ್ಯದ ಅಗತ್ಯಗಳನ್ನು ಈಡೇರಿಸಲು ತಮ್ಮ ದೇಹವನ್ನು ತ್ಯಾಗಮಾಡಿ ಸೌಲಭ್ಯ ಪಡೆದುಕೊಳ್ಳುತ್ತಾರೆ ಹೊರತು ಈ ಪಾತ್ರಗಳಿಗೆ ನೈತಿಕ ಪ್ರಜ್ಞೆಯಿಲ್ಲ. ಈ ಪಾತ್ರಗಳಿಗೆ ವಯಸ್ಸು ಮತ್ತು ವಸ್ತ್ರಗಳು ಮಾತ್ರ ಬದುಕನ್ನು ಸಾಗಿಸಲು ಬೇಕಾದ

ಆಧಾರ ಸ್ತಂಭಗಳು. ಈ ವಸ್ತುಗಳಿಂದ ಅವರು ಗೌರವ ಹೊಂದುತ್ತಾರೆ. ಆದರೆ ಅವೇ ವಸ್ತುಗಳು ಹಾಳಾದಾಗ ಅದಕ್ಕೆ ಪರ್ಯಾಯವಾಗಿ ಬೇರೆ ದುಡಿಮೆಯನ್ನು ಕಂಡುಕೊಳ್ಳುವರು. ಆದರೆ ತನ್ನ ದೇಹದ ಸೌಖ್ಯದ ವಸ್ತುಗಳಿಗಾಗಿ ತನ್ನ ಮಗಳನ್ನು ಮಾರುತ್ತಾಳೆ. ಪವಿತ್ರತೆಯ ಮನೋಭಾವ ಇವರಿಗಿಲ್ಲ. ನೈತಿಕತೆಯ ಪ್ರಶ್ನೆ ಕಾಡುವುದಿಲ್ಲ.

ಜೋಗ್ಯಾ ಮತ್ತು ಬೆದರು ಕಥೆಯ ಜುಮ್ಮವ್ವ ಕೆಳವರ್ಗದ ಮಹಿಳೆ. ಹೆಂಡ ಮಾರುವವಳು. ಸರ್ಕಾರ ಹೆಂಡ ನಿಷೇಧಿಸಿದಾಗ ಕೊಳೆತ ಹಣ್ಣುಗಳನ್ನು ಮಾರಿ ಹಣ ಸಂಪಾದಿಸುವಳು ಹೊರತು ಕೊಳೆತ ಹಣ್ಣುಗಳಿಂದ ಆಗುವ ಅನಾಹುತ ಬಗ್ಗೆ ಪ್ರಜ್ಞೆಯಿಲ್ಲ. ಹೀನ ಬದುಕು, ಶೋಚನೀಯವಾಗಿ ಬದುಕುವ ಜುಮ್ಮವ್ವಗೆ ಸಾಮಾಜಿಕ ಕಳಕಳಿಯಿಲ್ಲ. ಅದೇ ರೀತಿ ಬರ್ಜಿ(ಬೂದುಗನ ಪ್ಲಾಸ್ಟಿಕ್ ಬೂಟುಗಳು) ಬೂದುಗನಿಂದ ಕಬ್ಬಿನ ಸಸಿಯನ್ನು ಪಡೆದದ್ದು ತನ್ನ ದೇಹದ ಆಕಾಂಕ್ಷ ಒಂದು ವಿನಹ ಪ್ರೀತಿಯಿಂದಲ್ಲ.

ಶಿಕ್ಷಿತ ಮಹಿಳಾ ಪಾತ್ರವಾಗಿ ವಂದನಾ(ಮುಖಗಳು) ಕಾಣಿಸುತ್ತಾಳೆ. ಅವಿವಾಹಿತ ಹೆಣ್ಣು, ತನಗಾಗಿ ಬಯಸಿಬಂದ ಗಂಡಸರ ಲೈಂಗಿಕತೆಯನ್ನು ನಿರಾಕರಿಸುತ್ತಾಳೆ. ಬದಲಾಗಿ ಈ ಲೈಂಗಿಕತೆಯನ್ನು ವಿವಾಹ ಎಂಬ ಬದುಕಲ್ಲಿ ಪಡೆಯಲು ಹಂಬಲಿಸುತ್ತಾಳೆ. ಹೀಗೆ ಶಿಕ್ಷಿತ ಹೆಣ್ಣು ಪರಿಪೂರ್ಣ ಗಂಡಸಿನ ಪ್ರೀತಿಯನ್ನು ಕುಟುಂಬ ಮೂಲಕ ಪಡೆಯಲು ಬಯಸಿ ಪ್ರಜ್ಞಾವಂತ ಪಾತ್ರವಾಗಿ ಕಂಡುಬರುತ್ತಾಳೆ. ಆದರೆ ಅಶಿಕ್ಷಿತ ಮಾಲವ್ವ (ಜೋಗ್ಯಾ ಮತ್ತು ಬೆದರು) ಗೌಡನ ಶಿಕ್ಷೆಯಿಂದ ಮಗನ ಕೂದಲು ಕಳೆದುಕೊಳ್ಳುವ ಪ್ರಸಂಗದಿಂದ ದೇವಿಯ ಅಪಕೃಪೆಗೆ ಪಾತ್ರಳಾಗುವ ಮನೋಭಾವನೆ ಮುಗ್ಧತೆಯನ್ನು ನಿರೂಪಿಸುತ್ತದೆ. ಅದೇ ರೀತಿ ಮೇಲುವರ್ಗದ ಗೌಡನ ಮಗಳು ಮಾಲವ್ವ ಜೋಗ್ಯಾನಿಗೆ ಒದಗಿದ ಶಿಕ್ಷೆಯಿಂದ ದುಃಖಿತಳಾಗುವ ಮೂಲಕ ಮಾನವೀಯತೆಯನ್ನು ಮೆರೆಯುವಳು.

ಶಾಂತಾನಾಯ್ಕರು ಈ ಕಥೆಗಳನ್ನು ಲಂಬಾಣಿ ಸಮುದಾಯ ಆಡು ಮತ್ತು ಶಿಷ್ಟ ಭಾಷೆಯನ್ನು ಒಳಗೊಂಡು ಕಥೆಯನ್ನು ಚಿತ್ರಿಸಿದ್ದಾರೆ. ಕೆಲವು ಕಥೆಗಳಲ್ಲಿ ಪಾತ್ರಗಳನ್ನು ನಿರೂಪಿಸುವುದಕ್ಕಾಗಿ ಆಂಗ್ಲ ಪದಗಳನ್ನು ಬಳಸಿದ್ದಾರೆ. ಈ ಭಾಷೆಯ ಮೂಲಕ ಕಥೆಗಾರರು ಅನೇಕ ಸಂಗತಿಗಳನ್ನು ಇದ್ದುದನ್ನು ಇದ್ದಹಾಗೆ ಕಥೆಯಲ್ಲಿ ನಿರೂಪಿಸುವ ಶೈಲಿ ಕರಗತವಾಗಿದೆ. ಇದು ಅವರ ಕಲೆಗಾರಿಕೆಗೆ ಸಾಕ್ಷಿಯಾಗಿದೆ. ಒಟ್ಟಾರೆ ಶಾಂತಾನಾಯ್ಕರು ಉತ್ತಮ ಕತೆಗಾರರೆಂದು ನಿರೂಪಿಸಿದ್ದಾರೆ. ಇವರ ಕಥನ ಕಲೆ ಭಿನ್ನವಾಗಿದೆ, ಸೂಕ್ತವಾಗಿದೆ.

ಪ್ರೊ. ಎನ್. ಶಾಂತನಾಯ್ಕ ಅವರ "ಬಂಜಾರು ಸಮುದಾಯದ ವೇರಾಳು"

ಡಾ. ಸಹನಾ ಪಿಂಜಾರ್

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಶಿರಾಗಾನಹಳ್ಳಿ ಎಂಬ ತಾಂಡದಲ್ಲಿ ಜನಿಸಿದ ಶಾಂತನಾಯ್ಕ್ ರವರು ಅತ್ಯಂತ ಹಿಂದುಳಿದ ಬುಡಕಟ್ಟು ಸಮುದಾಯವಾದ ಬಂಜಾರ(ಲಂಬಾಣಿ) ಸಮುದಾಯಕ್ಕೆ ಸೇರಿದವರಾಗಿದ್ದು, ಆ ಸಮುದಾಯದ ಆಚರಣೆ ಸಂಸ್ಕೃತಿಯನ್ನು ಅಲ್ಲಿನ ವಿಶೇಷತೆಗಳನ್ನು ಬರವಣಿಗೆಯ ಮೂಲಕ ಪ್ರಪಂಚಕ್ಕೆ ಪರಿಚಯಿಸುವಲ್ಲಿ ಯಶಸ್ಸು ಕಂಡರು ಅವರಕಥೆಗಳು ಕವನಸಂಕಲನಗಳು ಕಾದಂಬರಿ ನಾಟಕ ಸಾಹಿತ್ಯ ಹಾಗೂ ಪ್ರಬಂಧಗಳು ಓದುಗರ ಗಮನವನ್ನು ಸೆಳೆಯುತ್ತವೆ. ಅವರ ಕಥೆ ಕಾದಂಬರಿ ಮತ್ತು ನಾಟಕಗಳು ಸಾಮಾನ್ಯ ಜನರಿಗೆ ತುಂಬಾ ಹತ್ತಿರವಾಗುತ್ತವೆ.

ಅಧುನಿಕ ಕನ್ನಡ ರಂಗಭೂಮಿಯಲ್ಲಿ ವೇರಾಳು ನಾಟಕವು ಒಂದು ಹೊಸ ಮಾದರಿಯ ನಾಟಕವಾಗಿದೆ. ನಾಟಕದ ವಸ್ತು ಬಂಜಾರು ಸಮುದಾಯ ಒಂದು ನಿಜವಾದ ಐತಿಹಾಸಿಕದ ಘಟನೆಯ ಆಧಾರದ ಮೇಲೆ ಈ ನಾಟಕವನ್ನು ಕಟ್ಟಲಾಗಿದೆ. ಸಾಮಾನ್ಯ, ಸ್ಥಳೀಯ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ–ಆರ್ಥಿಕ ಹಿನ್ನೆಲೆ ಮತ್ತು ಬಂಜಾರ ಸಮುದವರು ಹೇಗೆ ಬದುಕುತ್ತಾರೆ ಎಂಬುದನ್ನು ಈ ನಾಟಕವು ವಿವರಣಾತ್ಮಕವಾದ ಇತಿಹಾಸ ರಾಜಕೀಯ ಮತ್ತು ಅವರ ಸಿಂಧೂ ನದಿಯ ಪೂರ್ವದ ನಾಗರಿಕತೆಕಯ ಪ್ರಾಚೀನ ಕಾಲದಿಂದಲೂ ಬಂಜಾರ ಸಮುದಾಯದ ಇತಿಹಾಸವನ್ನು ನಾಟಕದ ದೃಶ್ಯಗಳೊಂದಿಗೆ ನೋಡಬಹುದಾಗಿದೆ.

ಈ ಐತಿಹಾಸಿಕ ವಸ್ತುವಿಗೆ ಅಲ್ಪ–ಸ್ವಲ್ಪ ಬದಲಾವಣೆ ಮಾಡಿಕೊಂಡು ಮೂಲದಲ್ಲಿಯ ಘರ್ಷಣೆಗೆ ಹೊಸ ತಿರುವ, ಹೊಸ ವ್ಯಖ್ಯಾನ ನೀಡುವುದರ ಮೂಲಕ ಬಂಜಾರು ಸಮುದಾಯದ ಮೂಲಭೂತ ಸತ್ಯಗಳನ್ನು ಧ್ವನಿಸುವದು ಈ ನಾಟಕದ ಮೂಲ ಉದ್ದೇಶವಾಗಿದೆ. ಬ್ರಿಟಿಷ್ ಸಾಮ್ರಾಜ್ಯಶಾಹೀ ವಿರುದ್ಧ ಹೊರಾಡಿದ ಟಿಪ್ಪುಸುಲ್ತಾನ,

ಬ್ರಿಟಿಷರನ್ನು ಯಾವಯಾವ ನೆಲೆಯಾಲ್ಲಿ ವಿರೋಧಿಸುವುದಕ್ಕೆ ಪ್ರತಿ ತಂತ್ರಗಳನ್ನು ಹೂಡಿದ್ದ, ಮರಾಠರ ಬಗ್ಗೆ ಟೀಪುವಿಗೆ ಇದ್ದಕನಿಕರ ಮತ್ತು ಸಿಟ್ಟು ತನ್ನ ನೆಚ್ಚಿನ ಬಂಟರೇ ತನ್ನ ವಿರುದ್ಧ ಪಿತೂರಿಗೆ ಮುಂದಾದಗ. ಟೀಪ್ಪು ಮಾನಸಿಕವಾಗಿ ಆಘಾತಕ್ಕೆ ಒಳಗಾಗಿದ್ದ. ಟೀಪ್ಪು ನಂಬಿದ ಸೇನಾಧಿಪತಿ ಮೀರ್‌ಸಾಧಕ್ ಬ್ರಿಟೀಷರ ಕೈ ಗೊಂಬೆಯಾಗಿದ್ದ. ದಿವಾನ್ ಪೂರ್ಣಯ್ಯ ಮೇಲೆನೂ ಕೂಡ ವಿಶ್ವಾಸ ಹೊಗಿತ್ತು. ಈ ಹಿನ್ನೆಲೆಯಲ್ಲಿ ಆತನಿಗೆ ಮಾನಸಿಕವಾಗಿ ಹತ್ತರವಾದವನ್ನು ಕೇವಲ ಒಬ್ಬ ಬಂಜಾರ. ಅವನು ಗೂಢಾಚಾರನೂ ಆಗಿದ್ದ, ವ್ಯಪಾರಿಯಾಗಿದ್ದ, ಸೈನಿಕನ್ನೂಆಗಿದ್ದ ಎನ್ನುವ ಪುರಾವೆಯ ಮೂಲಕ ಈ ನಾಟಕ ಬಂಜಾರು ಸಮುದಾಯದ ಮೂಲಭೂತ ಸತ್ಯವನ್ನು ಧ್ವನಿಸುವಲ್ಲಿ ಲೇಖಕರ ಸೃಜನಾಶಿಲಾತೆ ಕಾಣಬಹುದಾಗಿದೆ.

ಭಾರತದ ಸ್ವಾತಂತ್ರ ಪೂರ್ವದಲ್ಲಿ ಟೀಪ್ಪು ಸುಲ್ತಾನನ ಕೊನೆಯ ಕಾಲಕ್ಕೆ ಸಹಾಯ ಮಾಡಲು ಮುಂದೆ ಬಂದವನೆ, ಭೀಮ. ಈ ಭೀಮ ನಾಯ್ಕನತ್ಯಾಗ ಬಲಿದಾನದಿಂದ ಕೂಡಿದ ಸತ್ಯ ಘಟನೆಗಳ ಆಧಾರವೇ ಈ ನಾಟಕದ ಮೂಲ ವಸ್ತುವಾಗಿದೆ. ಚಿಕ್ಕ ಜೋಗಿಹಳ್ಳಿ ತಾಂಡದಲ್ಲಿ ಇರುವ ಭೀಮದಾದನ ಗುಡಿ ಈ ನಾಟಕಕ್ಕೆ ಐತಿಹಾಸಿಕ ಪುರಾವೆ ಆಗಿದೆ. ವಲಸೆ ಹೋಗುವುದರಿಂದ ಪ್ರರಂಭವಾಗುವ ನಾಟಕದ ಈ ದೃಶ್ಯವು ಬಂಜಾರ ಸಮುದಾಯದಲ್ಲಿ ವಲಸೆ ಹೋಗುವಂತ ಸಂಸ್ಕೃತಿಯನ್ನು ಬಿಂಬಿಸುತ್ತದೆ. ತಮ್ಮ ಕುಟುಂಬ, ದವಸಧಾನ್ಯ, ಹಸುಗಳು, ಕುರಿಗಳು, ಹೀಗೆ ವ್ಯಾಪಾರದ ದೃಷ್ಟಿಯಿಂದ ಒಂದು ಬೀಡು ಬಿಟ್ಟು ಹೊಸ ಬಿಡನ್ನು ಕಟ್ಟಿಕೊಳ್ಳುವುದು ಬಂಜಾರು ಸಮೂದಾಯದ ಒಂದು ವಿಶಿಷ್ಟವಾದ ಸಂಸ್ಕೃತಿ ಎನ್ನಬಹುದು. ಭೀಮಾನಾಯ್ಕ ಆಂದ್ರ ಪ್ರಾಂತ್ಯದ ಕಡೆಯಿಮದ ವ್ಯಾಪಾರಕ್ಕೆ ಬಂದ ವ್ಯಾಪಾರಿ ತಂದೆ–ತಾಯಿ ಬಂಧು ಬಳಗದ ಜೊತೆಗೆ ವಲಸೆ ಬಂದು ಟಿಪ್ಪುಸುಲ್ತಾನ್ ಬಾದಷನ ಸ್ನೇಹ ಬೆಳೆಸಿಕೊಂಡು ವ್ಯಾಪಾರ ಮಾಡತೊಡಗಿದ್ದ. ಆದರೆ ಆ ದಿನಗಳು ಅಷ್ಟೇನು ಸುಲಭದ ದಿನಗಳಾಗಿರಲಿಲ್ಲಾ. ಒಂದು ಕಡೆ ವ್ಯಾಪಾರದಲ್ಲಿ ಸ್ಪರ್ಧೆ, ಮತ್ತೊಂದು ಕಡೆ ಇಂಗ್ಲೆಂಡಿನಿಂದ, ವ್ಯಾಪಾರಕ್ಕೆಂದು ಬಂದು ಇಡೀ ಭಾರತದ ರಸ್ತೆಯನ್ನು ನಮ್ಮಿಂದ ತಿಳಿದು ನಮ್ಮ ವ್ಯಾಪಾರಕ್ಕೆ ಪೆಟ್ಟು ಬೀಳಬಹುದೆಂದು ಬಂಜಾರ ಹಾಗೂ ಇತರೆ ಹಲವು ಬುಡಕಟ್ಟು ಜನರು ಯಾರು ಕಾಡನ್ನು ಆಶ್ರಯಿಸಿದ್ದರೋ ಅವರನ್ನು ಕಳ್ಳರು ಎನ್ನುವ ಹಣೆ ಪಟ್ಟಿಯನ್ನು ಕಟ್ಟಿ ಅವರನ್ನು ಕಾಡಿನಿಂದ ದೂರ ಉಳಿಯುವಂತೆ ಮಾಡಿದ್ದ ಬ್ರಿಟಿಷರು. ಪರಿಸ್ಥಿತಿಯಲ್ಲಿ ಸಹಾಯಮಾಡಲು ತಯಾರಾಗಿದ್ದು. ಕಠಿಣ ಮಾರ್ಗವನ್ನು ಆಯ್ದುಕೊಂಡಿದ್ದ ಭೀಮನಾಯ್ಕ ಆಂತರೀಕ ಮತ್ತು ಬಾಹ್ಯ ಶತ್ರುಗಳ ನಡುವೆ ನಲಗಿ ಹೋಗಿದ್ದ ಟಿಪ್ಪುವಿಗೆ ಅನಿವಾರ್ಯವಾಗಿ ಹತ್ತಿರವಾಗಿದ್ದ.

ಸ್ನೇಹಿತರ ಸಹಾಯಸಿಗದೆ ಟಿಪ್ಪುಸುಲ್ತಾನ ಒಬ್ಬಂಟಿಯಾಗಿದ್ದ. ಸೇನಾಧಿಪತಿ ಮೀರ್‌ಸಾಧಕ್ ಬ್ರಿಟೀಷರ ಕೈಗೊಂಬೆಯಾಗಿದ್ದ. ದಿವನ್ ಪೂರ್ಣಯ್ಯ ಮೇಲೆನೂ ಕೂಡ ಟಿಪ್ಪುಸುಲ್ತಾನ ವಿಶ್ವಾಸ ಹೋಗಿತ್ತು. ಅದೇ ಸಮಾಯದಲ್ಲಿ ದವಸ ಧಾನ್ಯಗಳನ್ನು ಸಾಗಿಸುತ್ತಿದ್ದ ಭೀಮ ಗುಪ್ತ ಮಾರ್ಗದಿಂದ ಟಿಪ್ಪುಸುಲ್ತಾನಗೆ ಆರು ತಿಂಗಳಿಗೆ ಬೇಕಾಗುವಷ್ಟು ಆಹಾರ ಧಾನ್ಯವನ್ನು ಕೋಟೆಯ ಒಳಗೆ ಸಾಗಿಸುತ್ತಿದ್ದ. ಭಿಮ ಮತ್ತು ಟಿಪ್ಪುಗೆ ಒಬ್ಬನೆ ಸಾಮಾನ್ಯ ಶತ್ರು ಬ್ರಿಟೀಷರು ಆಗಿದ್ದರು.

ಹೀಗೆ ಟಿಪ್ಪುಸುಲ್ತಾನನ ಕೊನೆಯ ಕಾಲಕ್ಕೆ ಸಹಾಯ ಮಾಡಲು ಮುಂದೆ ಬಂದವನೆ ಭೀಮ. ಆದರೆ ಭೀಮನಾಯ್ಕನ ತ್ಯಾಗ, ಬಲಿದಾನ ದಾಖಲಾಗದೆ ಇರುವುದು ಈ ದೇಶದ ದೊಡ್ಡದುರಂತ. ಇದನ್ನ ನಾವು ಇತಿಹಾಸಸದ ಅಪಯಶಸ್ಸು ಎಂದೆ ತಿಳಿಯಬೇಕಿದೆ. ಯಾವಾಗಲೂ ಇತಿಹಾಸ ಉಳ್ಳವರ ಪರವಾಗಿಯೆ ಇರುತ್ತದೆ. ಬ್ರಿಟೀಷರು ಮೋಸದಿಂದ ಭಾರತವನ್ನು ತಮ್ಮು ಚಕ್ರಾಧಿಪತ್ಯವನ್ನಾಗಿ ಮಾಡಿಕೊಂಡರು. ಹೀಗೆ ಅವರು ಟಿಪ್ಪು ಆಗಲಿ, ಭೀಮನಾಯ್ಕನ ಬಗ್ಗೆ ಒಳ್ಳೆಯ ಮಾತುಗಳನ್ನ ದಾಖಲಿಸಲು ಸಾಧ್ಯವಾಗಲಿಲ್ಲ. ಬ್ರಟೀಷರಿಗೆ ಒಡೆದು ಆಳುವ ನೀತಿಯನ್ನು ಕಲಿಸಿದ ಮಂದಿಯ ಕೈಯಲ್ಲಿ ಲೇಖನಿಯಿತ್ತು. ತಮ್ಮ ಬೆಳೆಕಾಳು ಬೇಯಿಸಿಕೊಂಡ ಧೂರ್ತರಿಗೆ ಬ್ರಟೀಷರೆ ಯಜಮಾನರು, ಅವರ ನರಿಬುದ್ಧಿ ಗೊತ್ತದ್ದ ಭಾರತೀಯರು ಅವರಿಗೆ ಪ್ರಿಯರಾಗಬಲ್ಲರೇ? ಹೀಗಾಗಿಯೆ ಬುಡಕಟ್ಟು, ಆದಿವಾಸಿ, ಜನಸಮುದಾಯಗಳ ಇತಿಹಾಸ ಹೊರಬಾರದೆ ಇರುವುದು. ಇಂಥ ಸತ್ಯದ ಇತಿಹಾಸವನ್ನು ದೃಶ್ಯದ ಮೂಲಾಕ ಕಟ್ಟುವುದು ತುಂಬಾ ಕಷ್ಟಕರವಾದ ಕೆಲಸ, ಅದನ್ನು ಲೇಖಕರು ಸತ್ಯದ ಇತಿಹಾಸಕ್ಕೆ ಧಕ್ಕೆ ಭಾರದಂತೆ ಹಾಗೂ ನಾಟಕವು ದೃಶ್ಯ, ಮತ್ತು ಹಾಡುಗಳಿಂದ ಕೂಡಿದ್ದು ಓದುಗರ ಮನಸಿಗೆ ನಾಟಕವನ್ನು ನೋಡಿದಷ್ಟೆ ರಸನುಭಾವವನ್ನು ಉಂಟುವಮಾಡುತ್ತದೆ. ಇಲ್ಲಿ ಲೇಖಕರ ಸೃಜನಾಶಿಲಾತೆಗೆ ಅಭಿನಂದನೆಗಳು.

ಬಂಜಾರ ಭಾಷೆಯನ್ನು "ಗೋರ್ ಬೋಲಿ" "ಗೋರ್ ಮತಿ ಬೋಲಿ ಅಥವಾ "ಬ್ರಂಜರಿ" ಎಂದು ಕರೆಯಲಾಗುತ್ತದೆ, ಇದು ಸ್ವತಂತ್ರ ಉಪಭಾಷೆಯಾಗಿದೆ. ಬಂಜಾರ/ ರೋಮ್/ಈಜಿಪ್ಟ್ ಜಿಪ್ಸಿ ಮಾತನಾಡುವ ಉಪಭಾಷೆಯು ಇಂಡೋ-ಆರ್ಯನ್ ಭಾಷೆಯ ವರ್ಗಕ್ಕೆ ಸೇರುತ್ತದೆ. ರಾಬರ್ಟ್ ಕಾಲ್ಡೆಲ್ ಬರೆಯುತ್ತಾರೆ, "ಲಂಬಾಡಿಗಳು, ಪರ್ಯಾಯ ದ್ವೀಪದ ಜಿಪ್ಸಿಗಳು, ಹಿಂದೂಸ್ತಾನಿಯ ಉಪಭಾಷೆಯನ್ನು ಮಾತನಾಡುತ್ತಾರೆ." ಈ ಉಪಭಾಷೆಯು ಸಿಂಧೂ ಅವಧಿಯ ಪೂರ್ವದ ಅಫ್ಘಾನಿಸ್ತಾನ, ಬಲೂಚಿಸ್ತಾನ್, ಸಿಂಧ್, ಪಂಜಾಬ್, ಗುಜರಾತ್, ಕೇಥೆವಾಡ, ಹರಪ್ಪ ಮತ್ತು ಮಹೆಂಜೋದಾರೋ ಪ್ರಾಂತ್ಯಗಳಲ್ಲಿ ಮಾತನಾಡುತ್ತಿದ್ದರು. ಬಂಜಾರರು ಹಿಂದಿ ಮತ್ತು ಸಂಸ್ಕೃತ ಭಾಷೆಯನ್ನು ಸುಲಭವಾಗಿ

ಅರ್ಥಮಾಡಿಕೊಳ್ಳಬಹುದು ಏಕೆಂದರೆ ಸುಮಾರು 90% ಪದಗಳು 'ಗೋರ್ ಬೋಲಿ' ಯೊಂದಿಗೆ ಹೋಲುತ್ತವೆ.

ಲೇಖಕರ ಸೃಜನಶೀಲತೆ ಕಾಣುವ ಇನ್ನೊಂದು ವಿಷಯ ಎಂದರೆ, ಈ ನಾಟಕದಲ್ಲಿ ಬಳಸಿರುವ ಬಂಜಾರ ಭಾಷೆಯಾದ "ಗೋರ್ ಬೋಲಿ" ಭಾಷೆ, ಇದು ಬಂಜಾರು ಸಮುದಾಯ ಭಾಷೆಯಾಗಿದೆ. "ಗೋರ್ ಬೋಲಿ" "ಗೋರ್ ಮತಿ ಬೋಲಿ ಅಥವಾ "ಬ್ರೃಂಜರಿ" ಎಂದು ಕರೆಯಲಾಗುತ್ತದೆ, ಇದು ಸ್ವತಂತ್ರ ಉಪಭಾಷೆಯಾಗಿದೆ. ಬಂಜಾರ/ ರೋಮಾ ಜಿಪ್ಸಿ ಮಾತನಾಡುವ ಉಪಭಾಷೆಯು ಇಂಡೋ-ಆರ್ಯನ್ ಭಾಷೆಯ ವರ್ಗಕ್ಕೆ ಸೇರುತ್ತದೆ. ರಾಬರ್ಟ್ ಕಾಲ್ಡ್ವೆಲ್ ಬರೆಯುತ್ತಾರೆ, "ಲಂಬಾಡಿಗಳು, ಪರ್ಯಾಯ ದ್ವೀಪದ ಜಿಪ್ಸಿಗಳು, ಹಿಂದೂಸ್ತಾನಿಯ ಉಪಭಾಷೆಯನ್ನು ಮಾತನಾಡುತ್ತಾರೆ." ಈ ಉಪಭಾಷೆಯು ಸಿಂಧೂ ಅವಧಿಯ ಪೂರ್ವದ ಅಫ್ಘಾನಿಸ್ತಾನ, ಬಲೂಚಿಸ್ತಾನ್, ಸಿಂಧ್, ಪಂಜಾಬ್, ಗುಜರಾತ್, ಕೇಥೆವಾಡ, ಹರಪ್ಪ ಮತ್ತು ಮಹೆಂಜೋದಾರೋ ಪ್ರಾಂತ್ಯಗಳಲ್ಲಿ ಮಾತನಾಡುತ್ತಿದ್ದರು. ಬಂಜಾರರು ಹಿಂದಿ ಮತ್ತು ಸಂಸ್ಕೃತ ಭಾಷೆಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು ಏಕೆಂದರೆ ಸುಮಾರು 90% ಪದಗಳು 'ಗೋರ್ ಬೋಲಿ' ಯೊಂದಿಗೆ ಹೋಲುತ್ತವೆ.

ಗೋರ್ ಬೋಲಿ ಭಾಷೆಯಲ್ಲಿ ವೇರಾಳು ಎಂದರೆ ವೀರಾ, ಯೋಧ, ಶೂರ ಎನ್ನುವ ಈ ಅರ್ಥವಾಗಿದೆ. ಹೀಗೆ ಬಂಜಾರು ಸಮುದಾಯದ ಭಾಷೆಯ ಅನೇಕ ಪದಗಳನ್ನು ಈ ನಾಟಕದಲ್ಲಿ ಕಾಣಬಹುದಾಗಿದೆ, ಐದನೇ ಪಹರೆಗೆ ಎಂದರೆ ಬೆಳಗ್ಗಿನಜಾವ ಐದು ಗಂಟೆಗೆ ಎಂದು ಅರ್ಥ, ಹಾಗೆ ಬಳಸಲಾದ ಪಾತ್ರದಾರಿಗಳ ಹೆಸರುಗಳು ಸಹ ವಿಶಿಷ್ಟವಾಗಿವೇ. ಜೇಮು, ಬದಿಯಾ, ರಾಮಿಬಾಯಿ, ಗೋಮ್ಲಿ ಹೀಗೆ ಅನೇಕ ಹೊಸ ಪದಗಳ ಪರಿಚಯಿಸುವ ಜೊತೆಗೆ ಆಧುನಿಕ ಸಮಾಜದಲ್ಲಿ ಬಂಜಾರು ಸಮೂದಾಯದ ಭಾಷೆ ಮತ್ತು ಸಂಸ್ಕೃತಿಗೆ ಹೊಸ ಆಕಾರವನ್ನು ಕೊಡಲು ಈ ನಾಟಕವು ಸಮರ್ಥವಾಗಿದೆ.

ನಾವೀಗ ಭಾಷೆಯನ್ನು ಒಂದು ಮಾಧ್ಯಮವಾಗಿ ಮಾತ್ರವೇ ಬಳಸುವ ವಿಚಾರವನ್ನು ಪುನರ್ ಪರಿಶೀಲಿಸಬೇಕಾದ ಪರಿಸ್ಥಿತಿ ಬಂದಿದೆ. ಭಾಷೆಯೋ, ಬಣ್ಣವೋ, ಶಬ್ದವೋ, ಇವೇಲಾ ಸೇರಿ ಒಂದು ಸಂಸ್ಕೃತಿಯೋ ಎನ್ನುವ ಒಂದು ಮಾಧ್ಯಮವನ್ನು ಹೊಂದಿರಬೇಕೆಂದು ತತ್ವವು ಒಂದು ಬೌದ್ಧಿಕ ನೆಲೆಯನ್ನು ಸೂಚಿಸುತ್ತದೆ. ಏನನ್ನು ಹೇಳಲಾಗಿದೆಯೋ ಅದು, ಹೇಳಲಾದ ವಿಧಾನಕ್ಕಿಂತಲೂ ಹೆಚ್ಚು ಮುಖ್ಯವಾದದ್ದು. ಕೇವಲ ಸಂವಹನಕ್ಕಾಗಿ ಇರುವ ಭಾಷೆಯು ಏನನ್ನು ಸಮವಹನಗೊಳಿಸುತ್ತದೆಯೋ ಅದಕ್ಕಿಂತ ಕಡಿಮೆ ಗೌಣವಾಗುತ್ತದೆ. ಆದರೆ ಭಾರತಿಯ ತತ್ವಶಾಸ್ತ್ರದಲ್ಲಿ ಭಾಷೆಯಿಲ್ಲದೆ ಜ್ಞಾನವಿರಲು ಸಾಧ್ಯವಿಲ್ಲ. ಭರ್ತೃಹರಿಯು ಹೇಳುವಂತೆ "ಭಾಷೆಯು ಬೆಳಕನ್ನೇ ಬೆಳಗುವ

ಜ್ಯೋತಿ" ಹಾಗಿದ್ದರೆ ಈ ಬಂಜಾರು ಸಮೂದಾಯದ ಭಾಷೆಯು ಮಾಧ್ಯಮವಾಗಿ ಮಾತ್ರವಲ್ಲ, ತನಗೆ ತಾನೇ ಬೆಳಕಾಗಿಯೂ ವಿಕಾಸಗೊಳಿಸಿಕೊಂಡಿದೆ.

ಇನ್ನೂ ಬಂಜಾರ ಮಹಿಳೆಯರು ಪುರುಷರಿಗೆ ಕಟ್ಟುನಿಟ್ಟಾಗಿ ಅಧೀನರಾಗಿರಲಿಲ್ಲ ಮತ್ತು ಅದೇ ಸಮಯದಲ್ಲಿ ಸಂಪೂರ್ಣವಾಗಿ ಮುಕ್ತರಾಗಿರಲಿಲ್ಲ. ಮಹಿಳೆಯರು ಕೃಷಿ, ಪಶುಪಾಲನೆ, ಉರುವಲು ಸಂಗ್ರಹಣೆ, ಜಾನುವಾರು ಸಾಕಣೆಯುಲ್ಲಿಯೂ ತೊಡಗಿಸಿಕೊಂಡಿದ್ದು, ಮದ್ಯ ತಯಾರಿಸುವ ಮೂಲಕ ಕುಟುಂಬದ ಆದಾಯಕ್ಕೆ ಕೊಡುಗೆ ನೀಡುತ್ತಿದ್ದಾರೆ. ಮಹಿಳೆಯರು ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಬಹುದು ಆದರೆ ಪುರುಷರಿಗೆ ಮಾತ್ರ ಧ್ವನಿ ಇರುತ್ತದೆ. ಆದರೆ ವೇರಾಳು ನಾಟಕವು ಮಹಿಳೆಗೆ ಒಂದು ಉತ್ತಮವಾದ ಸ್ಥಾನವನ್ನು ಕಲ್ಪಿಸಿದೆ ಎನ್ನಬಹುದಾಗಿದೆ. ಈ ನಾಟಕದಲ್ಲಿ ಭೀಮನಾಯ್ಕನ ತ್ಯಾಗ, ಬಲಿದಾನದ ಜೊತೆಗೆ ಅವನ ಪ್ರೇಯಸಿಯಾದ ಗೋಮ್ಲಿಯ ತ್ಯಾಗವು ಸಹ ಅಷ್ಟೆ ಮಹತ್ವದಾಗಿದೆ ಎನ್ನುವ ಒಳಧ್ವನಿಯನ್ನು ಈ ನಾಟಕವು ಸೃಷ್ಟಿಸಿರಿವುದು

ಗೋಮ್ಲಿ: ಇದೊಂದೆ ನೆನಪುಸಾಕು ಇನ್ನೂ ನೂರು ವರ್ಷಕ್ಕೆ ಸಾಕಾಗುತ್ತೆ. ಯಾವನೊ ಮನಸ್ಸಿಲ್ಲದವನ ಜೊತೆಗೆ ನೂರುವರ್ಷ ಬಾಳುವುದಕ್ಕಿಂತ, ಮನಸ್ಸು ಕೊಟ್ಟವನ ಹತ್ತಿರ ನೂರು ಗಂಟೆ ಬದುಕಿದರೆ ಸಾಕು. ಈ ಹೆಣ್ಣು ಅದನೆ ಬದುಕು ಅಚಿತಿ ಭಾವಿಸಿ ಬದುಕಿ ಬಿಡುತ್ತಾಳೆ.

ಹಿಗೆ ಗೋಮ್ಲಿಳ ಮಾತುಗಳೊಂದಿಗೆ ಒಬ್ಬ ಮಹಿಳೆಯ ವೀರಾತ್ವವನ್ನು ತೋರಿಸಲಾಗಿದೆ. ಇಲ್ಲಿ ವೀರನಾದ ಭೀಮನಾಯ್ಕನ ಜೋತೆ ಅವನ ಪ್ರೇಯಸಿಯು ಅಷ್ಟೇ ವೀರಾತ್ವವನ್ನು ಹೊಂದಿದ್ದಾಳೆ. ಎನ್ನುವುದರಿಂದಾಗಿ ಈ ನಾಟಕವು ಒಂದು ಮಹತ್ವದ ಹಾದಿಯನ್ನು ಮಹಿಳೆಯರಿಗೆ ನೀಡುತ್ತದೆ.

ಬಂಜಾರ ಜನರು ವಿಶಿಷ್ಟವಾದ ಸಾಂಸ್ಕೃತಿಕ ಜೀವನ ಮತ್ತು ಆಚರಣೆಗಳನ್ನು ಹೊಂದಿದ್ದಾರೆ, ಅದು ಅವರನ್ನು ಇತರರಿಂದ ಪ್ರತ್ಯೇಕಿಸುತ್ತದೆ. ಭಾಷೆ, ಆಹಾರ, ಉಡುಗೆ ಮತ್ತು ಆಭರಣಗಳು, ಕಲೆ ಮತ್ತು ನೃತ್ಯ, ದೇಹದ ಹಚ್ಚೆ ಮತ್ತು ಸಮಾರಂಭಗಳು ಬಂಜಾರ ಜನರ ಸಾಂಸ್ಕೃತಿಕ ಜಗತ್ತನ್ನು ರೂಪಿಸಿದವು. ಆಧುನಿಕ ಜೀವನ ಶೈಲಿಯ ಒಳಹರಿವು ಮತ್ತು ಬಂಜಾರೇತರ ಪ್ರಪಂಚದೊಂದಿಗೆ ಬೆಳೆಯುತ್ತಿರುವ ಸಂಪರ್ಕವು ಬಂಜಾರ ಸಾಂಸ್ಕೃತಿಕ ಜೀವನದ ಮೇಲೆ ಪರಿಣಾಮ ಬೀರಿತು.

ಸಾಹಿತ್ಯ ಮತ್ತು ರಂಗಭೂಮಿ ಸಮಾಜದ ಪೂರ್ಣ ವಿಕಾಸಕ್ಕೆ ಅಗತ್ಯವಾಗಿದೆ. ಆದರೆ ನಮ್ಮ ದೇಶದ ವಾಸ್ತವ ಪರಿಸ್ಥಿತಿಗಳು ಬೇರೆ ದೇಶಗಳಿಗಿಂತ ಭಿನ್ನವಾದವು.

ಉದಾಹರಣೆಗೆ, ಶಿಷ್ಟಸಮಾಜಗಳು ಮತ್ತು ಬುಡಕಟ್ಟುಗಳು ತಮ್ಮದೇ ಆದ ಮೌಖಿಕ ಕಾವ್ಯಗಳನ್ನೂ ಹೊಂದಿವೆ. ಅವುಗಳ ಇತಿಹಾಸವನ್ನು ಯಾರೂ ಬರೆದಿಟ್ಟಿಲ್ಲ. ಶಿಷ್ಟಸಮಾಜಗಳಿಗೆ ಪರಂಪರೆಯ ಸುದೀರ್ಘ ಇತಿಹಾಸವಿದೆ. ನಮ್ಮ ದೇಶಕ್ಕೆ ಇರುವುದು ಒಂದು ಇತಿಹಾಸವಲ್ಲ, ಹಲವಾರು, ವಿವಿಧ ಪ್ರದೇಶಗಳು ಈಗಲೂ ಬೇರೆ ಬೇರೆ ಸ್ಥಳೀಯ ಪಂಚಾಂಗಗಳನ್ನು ಅನುಸರಿಸುತ್ತವೆ. ಹೀಗಾಗಿ ಬುಡಕಟ್ಟು ಜನಸಮುದಾಯಗಳ ಇತಿಹಾಸವನ್ನು ನಾಟಕದ ರೂಪದಲ್ಲಿ ತಂದಿರುವುದು ತುಂಬ ಅಪರೂಪದ ಕೃತಿಯಾಗಿದ್ದು.ಈ ನಾಟಕವು ಬ್ರಟೀಷರ ವಿರುದ್ಧ ಮುಖಾಮುಖಿಯಾಗಿದ್ದರು ಎನ್ನುವುದನ್ನು ಪ್ರತಿಪಾದಿಸುತ್ತದೆ. ಇದನ್ನು ಆಧುನಿಕ ಕಾಲದಲ್ಲಿ ನಾಟಕದ ವಿಧ್ಯಾರ್ಥಿಗಳು ಹಾಗೂ ಕಲಾಸ್ತಕರಿಗೆ ನೀಡಿರುವಂತ ಪ್ರೊ.ಶಾಂತನಾಯ್ಕ ಅವರಿಗೆ ಅಭಿನಂದನೆಗಳು.

ಡಾ. ಸಹನಾ ಪಿಂಜಾರ್, ಅಥಿತಿ ಉಪನ್ಯಾಸಕರು, ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಯಲ ಬಳ್ಳಾರಿ, ಮೊ: 9901944706

ಶ್ರಮಸಂಸ್ಕೃತಿಯ ಕಥನ : ಗೋರ್‌ಮಾಟಿ

ಡಾ. ಮಲ್ಲಯ್ಯ ಸಂಡೂರು

ಕನ್ನಡ ಸಾರಸ್ವತ ಲೋಕದಲ್ಲಿ ಕತೆಗಾರ, ಕವಿ, ನಾಟಕಕಾರ ಮತ್ತು ಕಾದಂಬರಿಕಾರರಾದ ಡಾ. ಶಾಂತನಾಯ್ಕ ಅವರು ತಳಸಮುದಾಯದಿಂದ ಹೊರಹೊಮ್ಮಿದ ಬಹುಮುಖ ಪ್ರತಿಭೆ. ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರಾದ ಅವರು, ಕನ್ನಡಕ್ಕೆ 'ಗೋರ್‌ಮಾಟಿ' ಕಾದಂಬರಿಯನ್ನು ಕಾಣಿಕೆಯಾಗಿ ನೀಡಿದ್ದಾರೆ. ಈ ಕಾದಂಬರಿ ಲಂಬಾಣಿ ಸಮುದಾಯದ ಶ್ರಮಸಂಸ್ಕೃತಿಯ ಕಥನವಾಗಿದೆ. ಕಾದಂಬರಿಕಾರರು 'ಗೋರ್‌ಮಾಟಿ' ಪದವನ್ನು 'ನನ್ನ ಜನರು' ಎನ್ನುವ ಅರ್ಥದಲ್ಲಿ ಬಳಸಿದ್ದಾರೆ. ಈ ಪದವನ್ನು ಕೇಳಿದಾಗ ದಲಿತ ಕವಿ ಸಿದ್ಧಲಿಂಗಯ್ಯ ಅವರ 'ನನ್ನ ಜನಗಳು' ಕವಿತೆಯು ನೆನಪಿಗೆ ಬರುತ್ತದೆ. ಸಿದ್ಧಲಿಂಗಯ್ಯ ಅವರು ಒಟ್ಟೂ ದಲಿತ ಸಮುದಾಯವನ್ನು ಪ್ರತಿನಿಧಿಕರಣವನ್ನಾಗಿ ಮಾಡಿ 'ನನ್ನ ಜನಗಳು' ಎಂಬ ಕಾವ್ಯವನ್ನು ಬರೆದರು. ಇಲ್ಲಿ ಶಾಂತನಾಯ್ಕ ಅವರು 'ನನ್ನ ಜನರು' ಎನ್ನುವ ತಲೆಬರೆಹವನ್ನು ಇಟ್ಟುಕೊಂಡು ಲಂಬಾಣಿ ಸಮುದಾಯವನ್ನು ಕೇಂದ್ರೀಕರಿಸಿ 'ಗೋರ್‌ಮಾಟಿ' ಕಾದಂಬರಿಯನ್ನು ಕಟ್ಟಿಕೊಟ್ಟಿದ್ದಾರೆ.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ಜೀವಿಸುತ್ತಿದ್ದ ಕಾಕಾಪುರದ ಒಂದು ತಳಸಮುದಾಯದ ಕುಟುಂಬವನ್ನು ಕೇಂದ್ರೀಕರಿಸಿಕೊಂಡು ಬರೆದ ಕಾಲ್ಪನಿಕ ಕಾದಂಬರಿಯಾಗಿದೆ. ಆ ತಳಸಮುದಾಯದವೇ ಲಂಬಾಣಿ ಸಮುದಾಯ. ಊರೂರು ಅಲೆಯುತ್ತ ಅರೆಅಲೆಮಾರಿಗಳಂತೆ ಬದುಕುತ್ತಿದ್ದ ಲಂಬಾಣಿ ಕುಟುಂಬದ ನೆಪದಲ್ಲಿ ಲಂಬಾಣಿ ಸಮುದಾಯವನ್ನು ಸಶಕ್ತವಾಗಿ ಕಾದಂಬರಿಯಾಗಿ ಕಾದಂಬರಿಕಾರರು ಅನಾವರಣಗೊಳಿಸಿದ್ದಾರೆ. ಈ ಕಥನವು ಆರಂಭ, ಮದುವೆ ಎಂಬ ತಿಂಗಳ ಸಡಗರ, ಪೊಲೀಸರು ತಾಂಡಕ್ಕೆ ಬಂದದ್ದು, ದೀಪಾವಳಿಯ ದಿನದಂದು, ಗುದ್ದಮನ ಕಟ್ಟಿ

ಪಂಚಾಯತಿ, ಹೊಲ ಖರೀದಿಗೆ ಅಡ್ಡಗಾಲು ಹಾಕಿದವರು, ಎಲೆಕ್ಷನ್ ಸುಳಿಯಲ್ಲಿ, ಗೊತ್ತನಾಯ್ಕನ ಮನೆ ಗೋಡೆ ಬಿರುಕು, ವಿರೋಧದ ಅಲೆ ಎಬ್ಬಿಸಿದವರು ಮತ್ತು ಸಾವಿನಲ್ಲೂ ಸೆರೆ ಕುಡಿಯುವವರು ಎಂಬ ಹತ್ತು ಪ್ರಕರಣಗಳಲ್ಲಿ ಒಳಗೊಂಡಿದೆ.

ಅಖಂಡ ಬಳ್ಳಾರಿ ಜಿಲ್ಲೆಯನ್ನು ಒಳಗೊಂಡ ಹರಪನಹಳ್ಳಿ ಬಳ್ಳಾರಿ ಜಿಲ್ಲೆಗೆ ಸೇರಿದ ತಾಲ್ಲೂಕು. ಈ ಸೀಮೆಯ ಪ್ರಾದೇಶಿಕ ಭಾಷೆಯೇ ಈ ಕಾದಂಬರಿಯ ಹೂರಣ. ಪ್ರಾದೇಶಿಕತೆಯನ್ನು ನಿರ್ಧರಿಸಲು ಮುಖ್ಯವಾಗಿ ಸಾಹಿತ್ಯ ರಚನೆಗೊಂಡ ಲೇಖಕನ ಭೌಗೋಳಿಕತೆ, ಭಾಷಿಕತೆ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಗಮನಿಸಬೇಕು. ಕನ್ನಡದ ಕಥನ ಕಲೆಯು ಆರಂಭಗೊಂಡುದೇ ಇಂತಹದೊಂದು ವಿಶಿಷ್ಟವಾದ ಅಂಶದಿಂದಲೇ. ಕನ್ನಡದ ಪ್ರಥಮ ಕಾದಂಬರಿ 'ಇಂದಿರಾಬಾಯಿ' ಸೃಷ್ಟಿಗೊಂಡ ಕ್ರಮ ಕೂಡ ಪ್ರಾದೇಶಿಕತೆಯ ನೆಲೆಯಲ್ಲಿಯೇ ಆಗಿರುವುದೊಂದು ವಿಶೇಷ. ಕನ್ನಡದಲ್ಲಿ ರೂಪು ತಳೆದ ಕಾದಂಬರಿ ಪ್ರಕಾರಕ್ಕಾಗಲಿ, ಸಣ್ಣಕಥೆಯ ಪ್ರಕಾರಕ್ಕಾಗಲಿ ಪಾಶ್ಚಾತ್ಯ ಸಾಹಿತ್ಯಿಕ ರೂಪಗಳೇ ಕಾರಣವಾದರೂ ಕಾಲ ಮತ್ತು ಸಾಮಾಜಿಕ ಸಂದರ್ಭದ ದೃಷ್ಟಿಯಿಂದ ಇವು ಸ್ವಲ್ಪವಾದರೂ ಆ ಪ್ರಕಾರಗಳಿಗೆ ಭಿನ್ನವಾಗಿವೆ. ಏಕೆಂದರೆ ವಸಾಹತು ಸಂದರ್ಭದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ವಿರೋಧಿಸುವ ಮತ್ತು ದೇಶೀ ನೆಲೆಗಳಿಗಾಗಿ ಹುಡುಕಾಟ ನಡೆಸುವ ಜರೂರತ್ತು ಬಹುತೇಕ ಎಲ್ಲಾ ದೇಶೀಯ ಲೇಖಕರಿಗಿತ್ತು. ಸಾಂಸ್ಕೃತಿಕ ರೂಪಗಳ ಬೇರು ತಳೆಯುವಿಕೆ ಮತ್ತು ಎರಡು ಭಾಷೆಗಳ ನಡುವಣ ಸಾಂಸ್ಕೃತಿಕ ಅವಸ್ಥಾಂತರಗಳ ಚಾರಿತ್ರಿಕ ಸಂದರ್ಭದ ಒಡಲಿನಿಂದ ತಲೆಯೆತ್ತಿದ ಕಾದಂಬರಿ, ಆಯಾ ಪ್ರದೇಶದ ಕಟ್ಟಲು ಒದಗುವ ಭಾಷೆ, ಉಪಮೆ, ರೂಪಕ, ಶೈಲಿ, ಜೀವನಕತೆಯೂ ಈ ಸಂಸ್ಕೃತಿಯದು. ಇನ್ನೂ ಖಚಿತವಾಗಿ ಹೇಳಬೇಕಾದರೆ ಕಾದಂಬರಿ ಬರವಣಿಗೆಯ ಮೂಲಕ ಆಧುನಿಕ ಸಂಸ್ಕೃತಿಯ ನಿರೂಪಣೆ ನಡೆಯಿತು. ಈ ವ್ಯತ್ಯಾಸದ ತಿಳಿವು ಇಲ್ಲಿ ಮುಖ್ಯವಾದುದು.

ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿಯೆಂಬ ಹಿರಿಮೆಗೆ ಪಾತ್ರವಾದ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' (1899) ಕೃತಿಯೂ ದೇಸೀ ನೆಲೆಯ ಜೀವನವಿಧಾನವನ್ನು ತನ್ನ ಕಥಾ ಸಂವಿಧಾನದಲ್ಲಿ ಹಾಸುಹೊಕ್ಕಾಗಿದೆ. ಇಲ್ಲಿ ವಿಡಂಬನೆಯೂ ಇದೆ. ಪ್ರಾದೇಶಿಕ ವಿವರಗಳೊಂದಿಗೆ ಸಮಕಾಲೀನ ಸಾಮಾಜಿಕ ಸಂದರ್ಭಗಳ ಚಿತ್ರಣವಿದೆ. ತಾವು ನಂಬಿಕೊಂಡಿರುವ ಮತ್ತು ಭಾವಿಸುತ್ತಿರುವ ಭಾರತೀಯ ಮೌಲ್ಯಗಳ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ನಡುವಿನ ಸೂಕ್ಷ್ಮ ತಿಕ್ಕಾಟವೂ ಇಲ್ಲಿದೆ. ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿಯು ಮಲೆನಾಡಿನ ಜೀವನ ಚಿತ್ರಣವನ್ನು ಆ ನೆಲದ ಪ್ರಾದೇಶಿಕ ವಿವರಗಳೊಂದಿಗೆ ನೀಡುವ ಅದ್ಭುತ

ಕಲಾಕೃತಿಯಾಗಿದೆ. ಏಕಕಾಲಕ್ಕೆ ಈ ಕೃತಿಯು ಕನ್ನಡ ಗದ್ಯಕ್ಕಿರುವ ಅಭಿವ್ಯಕ್ತಿ ಸಾಮರ್ಥ್ಯವನ್ನು ಮತ್ತು ದೇಶೀಯ ಸೊಗಡನ್ನು ನಿರೂಪಿಸಬಹುದಾದ ಸಾಧ್ಯತೆಗಳನ್ನು ತೋರಿಸಿಕೊಟ್ಟ ಕೃತಿಯಾಗಿದೆ. ಹೀಗೆ ಪ್ರಾದೇಶಿಕತೆಯೆನ್ನುವುದು ಒಂದು ಪ್ರದೇಶದ ಭೌಗೋಳಿಕ ಹಿನ್ನೆಲೆ, ಭಾಷಿಕತೆ, ಸಮಾಜದ ಆಚರಣೆಗಳು, ಸಾಂಸ್ಕೃತಿಕ ಅಂಶಗಳು ಮುಖ್ಯವಾಗಿ ಕಂಡುಬರುತ್ತವೆ. ಈ ಪ್ರಾದೇಶಿಕ ಅಂಶಗಳು ತನ್ನ ಪರಿಸರ ಪ್ರಪಂಚವನ್ನು ಮತ್ತೊಂದು ಪರಿಸರ ಪ್ರಪಂಚದಿಂದ ಪ್ರತ್ಯೇಕಗೊಳಿಸುತ್ತದೆ. ಆದರೆ ಮಾನವೀಯ ಮೌಲ್ಯಗಳು ಎಲ್ಲೆಡೆ ಕೆಲಸ ಮಾಡುತ್ತಿರುತ್ತವೆ.

ಓ.ಎಲ್.ನಾಗಭೂಷಣಸ್ವಾಮಿಯವರು ಕಾದಂಬರಿಯ ಕಥನವು “ಸಂವಿಧಾನದ ಯಾವುದೇ ವಿವರಣೆ ಪಾತ್ರ ಮತ್ತು ಕ್ರಿಯೆಯ ಪರಿಕಲ್ಪನೆಯೊಂದಿಗೆ ಬೆರೆತುಕೊಂಡೇ ಇರುವುದು ಅನಿವಾರ್ಯ. ಹಾಗಾಗಿ ಸಂವಿಧಾನವನ್ನು ತೀರ ಅಮೂರ್ತವಾಗಿಯೋ ಅಥವಾ ಕೃತಿಯ ಸಾರಾಂಶ ಎಂದೋ ವಿವರಿಸಲು ಸಾಧ್ಯ. ತೀರ ಸರಳವಾಗಿ ಹೇಳುವುದಾದರೆ, ನಿರ್ದಿಷ್ಟ ಭಾವನಾತ್ಮಕ ಕಲಾತ್ಮಕ ಪರಿಣಾಮಗಳನ್ನು ಸಾಧಿಸಲು ಕ್ರಿಯೆಗಳನ್ನು ಒಂದು ನಿರ್ದಿಷ್ಟ ವ್ಯವಸ್ಥೆಗೆ ಸಕಾರಣವಾಗಿ ಒಳಪಡಿಸಿ ರಚಿಸಿಕೊಂಡಿರುವ ಅಭಿವ್ಯಕ್ತಿ ವಿನ್ಯಾಸ ಕಥಾ ಸಂವಿಧಾನವಾಗಿದೆ.” (ಓ.ಎಲ್. ನಾಗಭೂಷಣಸ್ವಾಮಿ, ವಿಮರ್ಶೆಯ ಪರಿಭಾಷೆ, ಪುಟ. 243)

ಕಾದಂಬರಿ ಒಂದು ಸಂಕೀರ್ಣವಾದ ಕಥಾಸಂವಿಧಾನವನ್ನೂ ವಾಸ್ತವಿಕ ಜೀವನವನ್ನೂ ಪ್ರತಿನಿಧಿಸುವ ಪಾತ್ರ ಮತ್ತು ಘಟನೆಗಳನ್ನು ಅದು ಹೊಂದಿರಬೇಕು. ಆದುದರಿಂದ ತನ್ನ ಲಕ್ಷಣದಲ್ಲಿ ನಾವೆಲ್ ಪಾತ್ರ ಚಿತ್ರಣ, ಕಥಾ ಸಂವಿಧಾನಗಳನ್ನು ಹೊಂದಿದ, ವಾಸ್ತವಿಕ ನಿರೂಪಣೆಯುಳ್ಳ ಕಾಲ್ಪನಿಕ ರಚನೆ. ಭೂತ ಆಯಾ ವರ್ತಮಾನ ಕಾಲದ ಚಿತ್ರಣವಿರುವ ಸುದೀರ್ಘ ಕಥನವೆಂದೂ ಹೇಳಬಹುದು. ಈ ನೆಲೆಯಲ್ಲಿ ‘ಗೋರ್‌ಮಾಟಿ’ ಕಾದಂಬರಿ ರೂಪುಗೊಂಡಿದೆ.

ಕನ್ನಡದಲ್ಲಿ ಕತೆ, ಕಾವ್ಯ, ಪುರಾಣ, ಮಹಾಕಾವ್ಯ, ಮಹಾಪುರಾಣಗಳೆಂದು ವೈಭವೀಕರಿಸಿ ಬರೆದಿರುವ ನಿದರ್ಶನಗಳಿವೆ. ಆದಾಗ್ಯೂ ಅದರ ವ್ಯತಿರಿಕ್ತವಾಗಿ ಕನ್ನಡದ ದೇಸಿ ಮೂಲದಲ್ಲಿ ಸಾಂಸ್ಕೃತಿಕ ಪರಂಪರೆಯ ವಿವೇಕದ ಅಂತಃಸತ್ವ ಜೀವಂತವಾಗಿರುವಂತೆ ಕಟ್ಟುವ ಪ್ರತಿಭೆಗಳು ಕನ್ನಡದಲ್ಲಿದ್ದಾರೆ. ಒಂದು ಸಮುದಾಯವು ತನ್ನ ಶ್ರಮ ಮತ್ತು ಬದುಕಿನ ಕೌಶಲವನ್ನು ಸಿದ್ಧಿಸಿಕೊಂಡು ಜೀವನ ಮಾಡಿದ ನೆಲಮೂಲ ಸಂಸ್ಕೃತಿಯನ್ನು ಹೀಗೂ ನಿರೂಪಿಸಬಹುದು ಎನ್ನುವ ವಿಚಾರಧಾರೆಯನ್ನು ಕಾದಂಬರಿಕಾರರು ಗೋರ್‌ಮಾಟಿಯಲ್ಲಿ ಕಟ್ಟಿಕೊಟ್ಟಿರುವುದು ಈ ಕಾಲದ ಮಹತ್ವದ ವಿಚಾರವಾಗಿದೆ.

ಕಾಕಾಪುರವೆಂಬ ಊರು. ಆ ಊರಿನಲ್ಲಿ ಒಂದು ಲಂಬಾಣಿ ಕುಟುಂಬ. ಈ ಕುಟುಂಬದ ಮೂರು ತಲೆಮಾರುಗಳು ಕಂಡ ಬದುಕಿನ ತಲ್ಲಣಗಳನ್ನು, ನೋವಿನ ಸ್ಥಿತ್ಯಂತರಗಳನ್ನು ಕೇಂದ್ರೀಕರಿಸಿದೆ ಈ ಕಾದಂಬರಿ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರದ ಸಂದರ್ಭದಲ್ಲಿ ತಳಸಮುದಾಯಗಳ ಸಂಸ್ಕೃತಿಯು ರೂಪಾಂತರ ಪಡೆದು ಜಾಗತೀಕರಣದ ತೆಕ್ಕೆಗೆ ಸಿಲುಕಿ ಕರಗಿಹೋಗುವ ವಾಸ್ತವವಾದಿ ನೆಲೆಯಲ್ಲಿ ಕಾದಂಬರಿ ಚಿತ್ರಿತವಾಗಿದೆ. ಲಂಬಾಣಿಗಳೊಳಗಿನ ಜೀವಂತಿಕೆ, ಚೈತನ್ಯ, ಕನಸು, ಹಸಿವು, ಬಡತನ, ಅಪಮಾನ, ಛಲ, ದುಡಿಯಬೇಕೆಂಬ ಆಸಕ್ತಿ, ಒಳಸಂಚು, ಈರ್ಷೆ, ದ್ವೇಷ ಅಸೂಯೆ, ಸಣ್ಣತನಗಳು, ಅಸಹಾಯಕತೆ ಮುಂತಾದವು ಆ ಸಮುದಾಯದ ಬದುಕಿನ ಕ್ರಮಗಳಲ್ಲಿ ಹುದುಗಿವೆ. ಇವು ಈ ನೆಲದ ಸಾರ್ವತ್ರಿಕ ಗುಣಗಳಾಗಿ ಅನಾವರಣಗೊಂಡು ಕಾದಂಬರಿಗೆ ಹೊಸ ಆಯಾಮವನ್ನು ನೀಡಿವೆ. ಈ ನೆಲದ ಗೊತ್ತನಾಯ್ಕ ಭೂತ, ವರ್ತಮಾನ ಮತ್ತು ಭವಿಷತ್ ಕಾಲದಲ್ಲಿ ಗೊತ್ತುಮಾಡಿದ ಪ್ರತೀಕವಾಗಿ ಕಾದಂಬರಿಯಲ್ಲಿ ಚಿತ್ರಿತಗೊಂಡಿದ್ದಾನೆ. ಹಾಗೆಯೇ ಕೊನೆಗೊಂಡ ವರ್ತಮಾನದ ವಾಸ್ತವತೆಗೆ ಹತ್ತಿರವಾಗಿದ್ದಾನೆ.

ಈ ಕಾದಂಬರಿಯಲ್ಲಿ ಯಾವುದೇ ಸನ್ನಿವೇಶ, ಸಂದರ್ಭವನ್ನು ಗ್ರಹಿಸುವ ಮತ್ತು ಅಭಿವ್ಯಕ್ತಿಸುವ ನಿರಂತರ ಪ್ರತಿಕ್ರಿಯಾ ವ್ಯಾಪಾರದ ನೆಲೆಗಳು, ಇಷ್ಟು ಮಾತ್ರವಲ್ಲ; ಪ್ರಕ್ರಿಯಾತ್ಮಕ ಸ್ವರೂಪದ ಸಂಕೇತ ಮತ್ತು ಪ್ರತಿಮೆಗಳನ್ನು ಸೃಜಿಸುವ ಉತ್ತಮ ಮಾದರಿಗಳೂ ಇಲ್ಲಿವೆ. ಈ ಕಾದಂಬರಿ ವಸ್ತುವಿನ್ಯಾಸ, ಶಿಲ್ಪ, ರೂಪಕ, ನೀತಿಪ್ರಜ್ಞೆ, ಪಾತ್ರ, ಶೈಲಿ – ಹೀಗೆ ಹಲವು ಮುಖಗಳಲ್ಲಿ ಹರಡಿದೆ. ಸಾಂಸ್ಕೃತಿಕ ಸಂದರ್ಭಗಳ ನೆಲೆಗಳನ್ನು ಶೋಧಿಸುವುದಕ್ಕೆ ಅಧ್ಯಯನ ಯೋಗ್ಯವಾದ ಕಾದಂಬರಿಯಾಗಿದೆ.

ಗೊತ್ತನಾಯ್ಕ ಮತ್ತು ಅವನ ತಮ್ಮ ಕಟುವಾ ದುಡಿಮೆಗೆ ಮಾದರಿಯ ಸಹೋದರರಾಗಿ ಕಂಡುಬರುತ್ತಾರೆ. "ಗೊತ್ತನಾಯ್ಕ ಮತ್ತು ಅವನ ತಮ್ಮ ಕಟುವಾ ಸೇರಿ ಊರನಮಂದಿ ತಲಿಕೆಡಸಿದ್ರು. ಯಾರಮನಿಗೆ ಹ್ವಾದ್ರು ಒಂದೇ ಮಾತು: "ಲೇ ಬೆಪ್ಪ ಸೂಳಿಮಕ್ಕಳ್ರಾ, ಹೋಗ್ರಲೇ ನೋಡ್ರಿ ಬುದ್ದನಾಯ್ಕನ ಮಕ್ಕಳನ್ನ ಹ್ಯಾಂಗ ದುಡಿತಾರಂತ". ಗೊತ್ತನಾಯ್ಕನ ಓರಿಗೆ ಹುಡುಗರಿಗೆ ಒಂದು ತಲಿನೋವಾಗಿತ್ತು" (ಪುಟ. 17). ಮುಂದುವರಿದು... "ಬುದ್ದನಾಯ್ಕನ ಮಗ ಮದ್ವಿಯಾಗಿ ಹೊಸದೊಂದು ಬದುಕನ್ನ ಕಟ್ಕೊಳ್ಯಾಕ ಹೊಂಟ್ಯಾನ, ಅವನ ಮಾವನ ಮನಿಕಡಿಯೋರು ಕಷ್ಟಮಾಡೊ ಜನ, ದುಡದು ಉಣ್ಣತಾರ ಪರವಾ ಇಲ್ಲ ಅಂತ ಯೋಚನೆ ಮಾಡತೊಡಗಿದ" (ಪುಟ. 23). ಈ ಸಮುದಾಯದ ಬದುಕೇ ದುಡಿತನವಾಗಿದೆ. ಹಾಗಾಗಿ ಶ್ರಮಸಂಸ್ಕೃತಿಯ ಕಥನವೂ ಇಲ್ಲಿದೆ. ಈ ಕಾದಂಬರಿ ಆಹಾರ ಸಂಸ್ಕೃತಿಯ ಸಂಭ್ರಮದ ಭಾಗವಾಗಿಯೂ

ಇದೆ. “ಅಪ್ಪ ಇವತ್ತು ಸೇಲೂರ ಹಳ್ಳದಾಗ ಎಂತೆಂಥ ಏಡಿಗಳು ಸಿಕ್ಕವಾಂತಿ” ಖುಷಿಯಿಂದ ಜೋರ ಬಾಯಿಮಾಡಿ ಹೇಳಾಕು, ಅವಳತ್ತಿ ಜಿಂಗವ್ವ ಓಡಿಬರೊದಕ್ಕೂ ಸರಿಹೋತು (ಪುಟ. 22).

ಮದುವೆ ಎಂಬ ತಿಂಗಳ ಸಡಗರ ಭಾಗದಲ್ಲಿ ಲಂಬಾಣಿ ಸಮುದಾಯದ ವಿವಾಹದ ಸಂಪ್ರದಾಯವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ ಕಾದಂಬರಿಕಾರರು. ಇದಕ್ಕೆ ಸಾಕ್ಷಿಯೆಂಬಂತೆ ಗೊತ್ತನಾಯ್ಕ ಮತ್ತು ಬಾಣವ್ವ ವಿವಾಹದ ಸಂಭ್ರಮವೇ ಆಗಿದೆ. ಹೆಂಡತಿ ಬಾಣವ್ವ ತಾಡಪುರದ ಎಲ್ಲಾ ಸಂಬಂಧಗಳನ್ನು ಕಳಕೊಂಡು ಕಾಕಾಪುರ ಸೇರಿದಳು. ಅಂದರೆ ಸ್ತ್ರೀಯಾದವಳು ಮತ್ತೊಂದು ಮನೆಯ ನಂದಾದೀಪವನ್ನು ಬೆಳಗುವುದಕ್ಕೆ ಬರುವ ಹೆಣ್ಣುಮಕ್ಕಳ ವಾಸ್ತವತೆಯನ್ನು ಇಲ್ಲಿ ಗಮನಿಸಬಹುದು. ‘ಮಕ್ಕಳಿರಲವ್ವ ಮನೆತುಂಬ’ ಎನ್ನುವ ಜನಪದ ಆಶಯದಂತೆ ಈ ಕಾದಂಬರಿಯಲ್ಲಿ ಕೂಡ ಬಿಂಬಿತವಾಗಿದೆ. ಶಿಕ್ಷಣದ ಬಗೆಗೆ ಜಾಗೃತಿಯನ್ನು ಮೂಡಿಸುತ್ತದೆ. ಮಕ್ಕಳನ್ನು ಓದಿಸುವ ತಂದೆಯ ಕೊರಗು ಇದೆ. ಗೊತ್ತನಾಯ್ಕನ ಮೊದಲನೇ ಮಗ ನುಗ್ಲಗನನ್ನು ಶಾಲೆಗೆ ಕಳುಹಿಸಬೇಕೆಂಬ ಆಸೆ ಇತ್ತು. ಆದರೆ ಅವನು ಓದಲಿಲ್ಲ. ಅವನಿಗೆ ವಿದ್ಯೆ ಹತ್ತಲಿಲ್ಲವೆಂಬ ಕೊರಗೂ ಇದೆ. ಅದಕ್ಕಾಗಿ ಮಾಟಣಗೇರಿ ಅಂದಾನಪ್ಪ ಮಾಸ್ತರು, ಕರದು ಹೇಳಿದರೂ ನುಗ್ಲಗ ಓದಲಿಲ್ಲ. ಗೊತ್ತನಾಯ್ಕನ ಎರಡನೇ ಮಗ ಗೊಂದಾನಾಯ್ಕನನ್ನು ಶಾಲೆಗೆ ಸೇರಿಸಿದನು.

ಕಾಕಾಪುರದಲ್ಲಿ ದುಡಿದು ಉಣ್ಣುವ ಜನರು ಬಹಳಷ್ಟಿದ್ದರು. ಅದರಲ್ಲಿ ಕಳ್ಳತನ ಮಾಡುವ ಒಂದು ಸಮುದಾಯವೂ ಇತ್ತು. ಕಾಣು, ಲಂಗೂರ, ಚಕ್ರನಾಯ್ಕ, ಜೇನೂಬನನ್ನು ಬ್ರಿಟೀಷ್ ಸರ್ಕಾರದ ಪೊಲೀಸರು ಕಾಕಾಪುರಕ್ಕೆ ಬಂದು ಹುಡುಕಾಟ ನಡೆಸಿದ್ದರು. ಕಳ್ಳಭಟ್ಟಿ ಸಾರಾಯಿ ಮಾಡುತ್ತಿದ್ದ ಚೊಕ್ಲ, ಸುಗಣಾ, ಚೆನ್ವಿರಿ, ಚಾಮವ್ವ ಮೊದಲಾದರು ಕಾಕಾಪುರದಲ್ಲಿದ್ದರು. ಹೀಗೆ ಸಿಕ್ಕಸಿಕ್ಕವರನ್ನು ಎಳೆದುಕೊಂಡು ಹೋಗಿ ಜನರನ್ನು ಬಾಯಿ ಬಿಡುಸುತ್ತಿದ್ದರು.

ಕಟ್ಟಿಗೆ ಮಾರಿ ಜೀವನ ಮಾಡುವ ಈ ತಾಂಡಾದ ಜನರು ಶ್ರಮಸಂಸ್ಕೃತಿಯ ಭಾಗವಾಗಿದ್ದವರು. ಗೊತ್ತನಾಯ್ಕನ ಮಕ್ಕಳು ಹಂಪಾಪುರ ಪಟ್ಟಣಕ್ಕೆ ಹೊತ್ತುಕೊಂಡು ಮಾರಿ ಬರುವ ಸಂಗತಿಯನ್ನು ಇಲ್ಲಿ ಗಮನಿಸಬೇಕು. ಹಾಗೆಯೇ ಮೀನು ಹಿಡಿದು ತಿನ್ನುವ ಆಹಾರ ಸಂಸ್ಕೃತಿಯನ್ನು ಸಹ ನೋಡಬಹುದು.

ಕಾಕಾಪುರದಲ್ಲಿ ದೀಪಾವಳಿಯ ಹಬ್ಬದ ಸಡಗರವಂತು ಸೊಗಸಾಗಿದೆ; ವಿಚಿತ್ರ ಮೆರಗಿನಿಂದ ಕೂಡಿದೆ. ಹದಿಹರೆಯದ ಹುಡುಗ ಹುಡುಗಿಯರು ಜನಪದ ಆಟಗಳನ್ನು ಆಡುವುದನ್ನು ಕಾಣಬಹುದು. ಮುಖ್ಯವಾಗಿ ಗಂಡು ಹೆಣ್ಣುಮಕ್ಕಳು ಜೊತೆಗೂಡಿ

ಕಬಡ್ಡಿ ಆಡುವುದನ್ನು ಕಂಡು ಊರಿನ ಜನರು ಆಡಿಕೊಳ್ಳುತ್ತಿದ್ದರು. ಈ ಆಟವು ಇಲ್ಲಿ ಯಾವ ಭೇದವಿಲ್ಲದೆ ಐಕ್ಯವಾಗಿ ಆಡುವ ಪ್ರಸಂಗವಿಲ್ಲಿದೆ. ದೀಪಾವಳಿಯ ಅಮಾವಾಸ್ಯೆದಿನ ಟಗರನ್ನು ಬಲಿಕೊಡುವ ಸಂಪ್ರದಾಯವೂ ಇಲ್ಲಿದೆ. ವಿಶೇಷವೆಂದರೆ, ಟಗರನ್ನು ಬಲಿಕೊಟ್ಟು ಪ್ರತಿಯೊಬ್ಬರು ರಕ್ತದ ಮುಖನೋಡಿ ತಮ್ಮ ಎಡಗೈ ಕಿರುಬೆರಳನ್ನು ರಕ್ತದಲ್ಲಿ ಅದ್ದಿ ಬಲಿಪೂಜೆ ಮಾಡಿಕೊಳ್ಳುವ ವಿಚಿತ್ರವಾದ ಸಂಪ್ರದಾಯ ಈ ಕಾದಂಬರಿಯಲ್ಲಿದೆ. ಬಲಿಕೊಟ್ಟ ಮಾಂಸವನ್ನು ಪಾಲುಮಾಡಿಕೊಂಡು ಹಂಚಿ ತಿನ್ನುವ ಆಹಾರ ಸಂಸ್ಕೃತಿಯನ್ನು ಸಹ ಕಾಣಬಹುದು. ಈ ಹಬ್ಬದಲ್ಲಿ ಇಡೀ ರಾತ್ರಿ ಹಾಡುಗಾರಿಕೆಯನ್ನು ಹಾಡುವ ಇನ್ನೊಂದು ಸಂಪ್ರದಾಯ ಇಲ್ಲಿದೆ. ಹಾಡಿಗೆ ತಾಳ ಹಾಕಿಕೊಂಡು ನಿದ್ದೆ ಮಾಡದೇ ನಗಾರಿಯನ್ನು ಬಾರಿಸಿ ಬಾರಿಸಿ ದಣಿಯುತ್ತಿದ್ದರು. ಹಾಡಿನ ಮೂಲಕ ಕಥನ ಕಟ್ಟುವ ಗೋವಿಂದನಾಯ್ಕ ವಿಶೇಷವಾಗಿ ಕಾಣುತ್ತಾನೆ. ಹಾಗೆಯೇ ತಾಂಡಾದಲ್ಲಿ ಅಕ್ರಮ ಸಂಬಂಧವಿರುತ್ತವೇ ಎನ್ನುವ ಪ್ರಸಂಗವನ್ನು ಗೊತ್ತನಾಯ್ಕ ಮತ್ತು ಚಂಪಿಯ ಮೂಲಕ ಕಟ್ಟಿದ್ದಾರೆ. ಇಂತಹ ಅಕ್ರಮ ಸಂಬಂಧವನ್ನು ಖಂಡಿಸುವುದ್ಕೆಕ ಪಂಚಾಯಿತಿಯೂ ನಡೆಯುತ್ತದೆ. ಆದರೂ ಪಂಚಾಯಿತಿಯಲ್ಲಿ ವಾದವಿವಾದಗಳು ನಡೆಯುತ್ತವೆ. ತಾಂಡಾಗಳಲ್ಲಿ ಸಂಬಂಧಗಳ ಗಟ್ಟಿತನದ ಬಗೆಗೆ ಕಾದಂಬರಿಯನ್ನು ಲೇಖಕರು ಕಟ್ಟಿಕೊಟ್ಟಿದ್ದಾರೆ.

ಹೊಲ ಖರೀದಿಗೆ ಅಡ್ಡಗಾಲು ಹಾಕಿದವರು ಕಾಕಾಪುರದಲ್ಲಿದ್ದರು. ಗೊತ್ತನಾಯ್ಕನು ಜಮೀನು ಖರೀದಿಸಬೇಕಂತಲೇ ಛಲ ಭರಿತನಾಗಿದ್ದನು. ಅದಕ್ಕೆಲ್ಲ ಪಿತೂರಿ ಮಾಡುವ ಇನ್ನೊಂದು ವರ್ಗವೂ ಇತ್ತು. ಎಲೆಕ್ಷನ್ ಸುಳಿಯಲ್ಲಿ ಸಿಕ್ಕ ಗೊತ್ತನಾಯ್ಕ ಬಾಯಿಮುಚ್ಚಿಕೊಂಡಿದ್ದ. ಅವನ ಶತ್ರುಗಳ ಗುಂಪು ಸಹ ಇತ್ತು. ಸ್ವಾತಂತ್ರ್ಯ ಭಾರತದ ಆರಂಭದ ಘಟನೆಯನ್ನು; ಬ್ರಿಟಿಷ್ ಮಂದಿ ಹೋಗಿ ಪ್ರಜಾವ್ಯವಸ್ಥೆ ಬಂದಿರುವುದು ನೆನಪಿಸುತ್ತದೆ. ಕಾಕಾಪುರದ ಜನರಿಗೆ ಈ ಸ್ವಾತಂತ್ರ್ಯದ ಬಗೆಗೆ ತಿಳಿದಿರಲಿಲ್ಲ. ಸ್ವಾತಂತ್ರ್ಯ ಸಿಕ್ಕ ಕೆಲ ಘಟನೆಗಳು ಸಹ ಹಾದುಹೋಗುತ್ತವೆ. ಗಾಂಧಿಯನ್ನು ಕೊಂದ ನಾಥೂರಾಮ್ ಗೋಡ್ಸೆಯ ವಿಷಯ ರೇಡಿಯೋದೊಳಗೆ ಬುದ್ಧಿಜೀವಿಗಳು ಕೇಳಿಸಿಕೊಂಡಿರುವ ವಿವರಗಳು ಕಾಣಸಿಗುತ್ತವೆ. ಕೇಂಚೀರಯ್ಯ ಗಾಂಧಿಯ ಮೇಲೆ ಒಂದು ಹಾಡುಕಟ್ಟಿ ಜುಂಜಪ್ಪನ ಜಾತ್ರಿಯೊಳಗೆ ಭಜನೆ ಮಾಡಿದ ವಿಷಯವೂ ಇದೆ. ಇಲ್ಲಿ ಗಾಂಧೀಜಿಯ ಪ್ರಭಾವ ಜನರ ಮೇಲಿದೆ. ಈ ಘಟನೆ ಎಚ್.ನಾಗವೇಣಿ ಅವರ 'ಗಾಂಧಿಬಂದ' ಕಾದಂಬರಿಯ ಕೆಲವು ಘಟನೆಗಳನ್ನು ನೆನಪಿಸುತ್ತದೆ. ನಂತರ ಪಂಚಾಯಿತಿಯ ಎಲೆಕ್ಷನ್ ಆರಂಭವಾಗಿರುವ ಇತಿಹಾಸ ಇಲ್ಲಿ ಬಿಂಬಿತವಾಗಿದೆ.

1973ರ ಕರಾಳ ದಿನಗಳು ಈ ಕಾದಂಬರಿಯಲ್ಲಿ ಗೊತ್ತಾನಾಯ್ಕನ ಕುಟುಂಬದ ಮೇಲೆ ಪರಿಣಾಮ ಬೀರಿದೆ. ಬರಗಾಲ, ಬದುಕಿನ ದುಸ್ತರ ಹಾದುಹೋಗಿದೆ. ಬದಲಾದ

ಸಂದರ್ಭದಲ್ಲಿ ಲಂಬಾಣಿಗಳ ವೇಷಭೂಷಣದ ಮೇಲೆ ಪ್ರಭಾವ ಬೀರಿತು. ಕಾರಣ ಬ್ರಿಟೀಷರ ಶಿಕ್ಷಣದಿಂದಾಗಿ ಸಂಸ್ಕೃತಿಯನ್ನು ಕೊಂದುಹಾಕಿರುವ ಘಟನೆಗಳು ಇಲ್ಲಿ ಬಂದಿವೆ.

ಗೊತ್ತಾನಾಯ್ಕನ ಮಕ್ಕಳು ದೊಡ್ಡವರಾದರು. ಯಜಮಾನಿಕೆಯನ್ನು ಆತನ ಮಕ್ಕಳು ನಡೆಸುತ್ತಿದ್ದರು. ಗೊತ್ತಾನಾಯ್ಕನ ಮೊಮ್ಮಕ್ಕಳು ದೊಡ್ಡವರಾಗಿದ್ದರಿಂದ ಹೀಗೆ ವಂಶಾವಳಿ ಕೂಡ ಬೆಳೆಯಿತು. ಸಂಬಂಧಗಳಲ್ಲಿ ಉಂಟಾದ ಅನ್ಯಾಯದ ಘಟನೆಗಳು ಇಲ್ಲಿ ಬಂದಿವೆ. ಜೊತೆಗೆ ಧಾರ್ಮಿಕತೆಯ ಅಸ್ತಿತ್ವವೂ ಇದೆ. ಮನುಷ್ಯ ಮನುಷ್ಯತ್ವದ ಅಸ್ತಿತ್ವವೂ, ವಾಸ್ತವತೆಯೂ ಎದ್ದುಕಾಣುತ್ತದೆ.

ಗ್ರಹಿಕೆ ಮತ್ತು ಅಭಿವ್ಯಕ್ತಿಗಳ ವಿಸ್ತರಿತ ನೆಲೆಗಳ ಆಯಾಮವು ತನ್ನ ಪಾಡಿಗೆ ತಾನು ಇದ್ದು ಬಿಡುತ್ತದೆ. ಹೀಗಾಗಿ, ಚಾರಿತ್ರಿಕ ಧ್ವನಿ ಮತ್ತು ಭಾಷಿಕರೂಪಿಕೆಗಳನ್ನು ಗುರುತಿಸಲು ಒಟ್ಟು ಆ ಶತಮಾನಗಳ ಒಟ್ಟು ನೆಲೆಯನ್ನು ತಾತ್ವಿಕವಾಗಿ ಮುಷ್ಟಿಯಲ್ಲಿ ಹಿಡಿದು ನೋಡಲು ಸಾಧ್ಯವಾಗುತ್ತದೆ. ಹೀಗೆ ಸಾಧ್ಯವಾಗುವುದೇ ಉದ್ದೇಶಿತ ಅರ್ಥದ ನೆಲೆಗಳನ್ನು ಅದರ ಸ್ವರೂಪವನ್ನು ಚಿಂತಿಸುವುದಕ್ಕೆ ಬೇಕಾದ 'ಚಾರಿತ್ರಿಕರೂಪಿಕೆ' ಮತ್ತು 'ಧ್ವನಿರೂಪಿಕೆ'ಯಲ್ಲಿ ಶೋಧಿಸಲು ಸಾಧ್ಯವಾಗುತ್ತದೆ. ಇದು ಒಂದು ರೀತಿಯಲ್ಲಿ ಸಂಸ್ಕೃತಿಯ ಜೀವಂತ ನೆಲೆಗಳ ಹುಡುಕಾಟಕ್ಕೆ ಪ್ರತಿಕ್ರಿಯಿಸುವ ಕ್ರಮವೂ ಹೌದು. ಹಾಗಾಗಿ ಈ ಕಾದಂಬರಿಯಲ್ಲಿ ಈ ಒಳನೋಟಗಳನ್ನು ಗ್ರಹಿಸಬಹುದು.

ಹೀಗೆ ಲಂಬಾಣಿ ಸಮುದಾಯವು ಅನುಭವಿಸಿದ ಏಳುಬೀಳುಗಳು ಒಂದು ಕುಟುಂಬದ ಸುತ್ತ ಹಬ್ಬಿರುವುದನ್ನು ಕಾಣಬಹುದು. ಕಲಿಯುವಿಕೆ, ಕೆಲಸದ ಹುಡುಕಾಟ, ಹಳ್ಳಿಗಾಡಿನ ಜೀವನದ ಕತೆ, ಸಮುದಾಯದೊಳಗೆ ಇರುವ ಬಿರುಕುಗಳು, ಅಡ್ಡಪ್ರವೃತ್ತಿಗಳು, ಈ ಸಮುದಾಯದ ಸ್ಥಿರತೆ ಮತ್ತು ಅಸ್ಥಿರತೆಯ ದಾಖಲೆಯೂ ಇದೆ. ಲಂಬಾಣಿ ಸಮುದಾಯದ ಸಾಂಸ್ಕೃತಿಕ ಬದುಕನ್ನು ತಾತ್ವೀಕರಿಸಿ ಮೂಲಕೇಂದ್ರಿತವನ್ನಾಗಿಸಿಕೊಂಡು ಚಿತ್ರಿತವಾಗಿರುವ ಈ ಕಾದಂಬರಿ ಕನ್ನಡ ಸಾಹಿತ್ಯದ ಹೊಸಲೋಕವನ್ನು ತೆರೆದಿಡುತ್ತದೆ.

ಮೂಲ ಕೃತಿ

1. ಶಾಂತನಾಯ್ಕ ಶಿರಗಾನಹಳ್ಳಿ, ಗೋರ್‌ಮಾಟಿ (ಕಾದಂಬರಿ), ಜ್ಯೋತಿ ಪ್ರಕಾಶನ, ಮೈಸೂರು, 2007

ಪರಾಮರ್ಶನ ಗ್ರಂಥಗಳು

1. ಗಿರಡ್ಡಿ ಗೋವಿಂದರಾಜು, ಕಾದಂಬರಿ ವಸ್ತು ಮತ್ತು ತಂತ್ರ, ಬಾಪ್ಕೋ ಪ್ರಕಾಶನ, ಬೆಂಗಳೂರು, 1976

2. ನಾಗರಾಜ ಡಿ.ಆರ್., ಶಕ್ತಿ ಶಾರದೇಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, 2002
3. ನಾಯಕ್ ಜಿ.ಎಚ್., ಶತಮಾನದ ಕನ್ನಡ ಸಾಹಿತ್ಯ, ರಾಘವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ, 2000
4. ನಾಗಭೂಷಣಸ್ವಾಮಿ ಓ.ಎಲ್., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2003
5. ಓ.ಎಲ್. ನಾಗಭೂಷಣಸ್ವಾಮಿ, ವಿಮರ್ಶೆಯ ಪರಿಭಾಷೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2012
6. ಶಿವರಾಮ ಪಡಿಕ್ಕಲ್, ನಾಡು-ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, 2001
7. ಶಿವರಾಮ ಕಾಡನಕುಪ್ಪೆ, ಸಾಮಾಜಿಕ ನೆಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2003
8. ಶೇಷಗಿರಿರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಬೆಂಗಳೂರು, 2002
9. ಸಿದ್ಧಣ್ಣ ಬಿ. ಉತ್ನಾಳ್, ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಅನುಪಮ ಪ್ರಕಾಶನ, ಅಥಣಿ, 1997

ಡಾ. ಮಲ್ಲಯ್ಯ ಸಂಡೂರು, ಅಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಜ್ಞಾನ ಸರೋವರ, ನಂದಿಹಳ್ಳಿ-ಸಂಡೂರು- 583 119, ಮೊ. 94810 46934

ಡಾ. ಶಾಂತಾನಾಯಕ್‌ರ ಕಾವ್ಯಗಳ ಮಿಡಿತಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಟ್ಟೆ ಕೊಡುತ್ತದೆ

ಡಾ. ಪ್ರಭಾವತಿ ಪಾಟೀಲ್

ಎನ್ನುವುದಕ್ಕೆ ಡಾ.ಶಿರಗಾನಹಳ್ಳಿ ಶಾಂತಾನಾಯಕ್ ಅವರು ಸಾಕ್ಷಿಯಾಗಿ ನಿಂತಿದ್ದಾರೆ. ಏಕೆಂದರೆ ಅವರ ಬಾಲ್ಯದಲ್ಲಿಯೇ ಎದೆಗೆ ಬಿದ್ದ ಸಾಹಿತ್ಯದ ಬೀಜ ಇಂದು ಬೆಳೆದು ಹೆಮ್ಮರವಾಗಿ, ಮರ ಹೂ, ಹಣ್ಣು, ಕಾಯಿ ನೀಡುವಂತೆ ಈ ಸಾಹಿತ್ಯದ ಹೆಮ್ಮರ ನಾಟಕ, ಕಥೆ, ಕಾದಂಬರಿ, ಪ್ರಬಂಧದ ರೂಪದಲ್ಲಿ ಹೊರಹೊಮ್ಮಿವೆ. ಇವರು ಸಾಹಿತ್ಯ ಲೋಕಕ್ಕೆ ನೀಡಿರುವ ಕೊಡುಗೆ ಅಮೂಲ್ಯವಾದದ್ದು ಹಾಗೂ ಮೌಲಿಕವಾದದ್ದು. ಶ್ರೀಯುತರು ಓದಿನ ಪರಿಣಾಮದಿಂದ ನವ್ಯದ ವಾಸನೆ ಬೆನ್ನುಹತ್ತಿದ್ದರು. ನೆಲದ ನೋವುಗಳು ಬೀಜವಾಗಿ ಕಾಡುತ್ತಿರುವುದರಿಂದ ಹಾಗೂ ವಾಸ್ತವಲೋಕ ಸಹ್ಯಗೊಳ್ಳದೆ ಹೋದ ಕಾರಣ ವರ್ತಮಾನ ತಲ್ಲಣಿಸುವಂತೆ ಗ್ರಾಮೀಣ ಬುಡಕಟ್ಟುಗಳ ಸಂಕೀರ್ಣ ಲೋಕದ ಬಡತನ, ಅವಮಾನ, ಕೀಳರಿಮೆಯೇ ದ್ರವ್ಯವಾದ ನೆಲೆಯಿಂದ ಬಂದ ಲೇಖಕರು ದಲಿತಲೋಕದ ಈ ದ್ರವ್ಯಗಳನ್ನು ಅನುಭವಿಸಿ ಹಾಗೂ ಅರ್ಥೈಸಿಕೊಂಡು ಅವನ್ನೇ ತಮ್ಮ ಬರವಣಿಗೆಯ ವಸ್ತು ವಿಷಯಗಳನ್ನಾಗಿಸಿಕೊಂಡು ರೂಪಕ ಕೊಡುವ ಇವರ ಜಾಣ್ಮೆ ಶ್ಲಾಘನೀಯ ಇವರೊಬ್ಬ ಸೂಕ್ಷ್ಮ, ಸಂವೇದನಾಶೀಲ, ಸಾಮಾಜಿಕ ಕಳಕಳಿ ಹೊಂದಿರುವ ಲೇಖಕರು.

ಆಧುನಿಕ ಕನ್ನಡ ಕಾವ್ಯದ ಕ್ಷಿತಿಜ ವಿಸ್ತಾರಗೊಂಡಿದೆ. ಹೊಸ ಹೊಸ ಪ್ರಯೋಗಗಳು ವಸ್ತು, ವಿನ್ಯಾಸ ಪ್ರಯೋಗದಲ್ಲಿ ತನ್ನ ಸ್ವರೂಪದ ಗತಿಯನ್ನು ಕಾವ್ಯ ಕಟ್ಟಿಕೊಳ್ಳುವಿಕೆಯಲ್ಲಿ ಹೆಚ್ಚು ಬಳಸುತ್ತಿರುವುದು ಒಂದೆಡೆಯಾದರೆ, ವೈಯಕ್ತಿಕ ವಿಚಾರಗಳ ಮೂಲಕ ತಮ್ಮ ಅಂತರಂಗದ ಭಾವನೆಗಳಿಗೆ ಭಾಷೆಯ ಲಯವನ್ನು, ರೂಪಕ ಶಕ್ತಿಯನ್ನು ಬಳಸುತ್ತಿರುವುದನ್ನುಇನ್ನೊಂದೆಡೆ ಕಾಣುತ್ತಿದ್ದೇವೆ. ಈ ತಂತ್ರಜ್ಞಾನದ ಯುಗದಲ್ಲಿ ಸಾಹಿತ್ಯದ ಓದು, ಬರವಣಿಗೆ ಕಡಿಮೆ ಆಗಿದ್ದರು ಕನ್ನಡದಲ್ಲಿ ಸಾಕಷ್ಟು ಉತ್ತಮ ಕವಿತೆಗಳು

ಹೊರಹೊಮ್ಮಿ ಕಾವ್ಯಕ್ಷೇತ್ರ ಸಮೃದ್ಧಿಯಾಗಿದೆ. ಇದಕ್ಕೆ ಕಾರಣ ಮೊದಲಿನ ಹಾಗೆ ಗಣ, ಸಾಲುಗಳ ಮಿತಿಯಾಗಲಿ, ಪ್ರಸ್ತಾಪದ ಹೊಂದಾಣಿಕೆಯಾಗಲಿ ಯಾವುದೇ ರೀತಿ-ನೀತಿಗಳು ಕವಿಯ ಮೇಲೆ ಹೇರದೆ, ತಮ್ಮ ಆಲೋಚನೆಗಳಿಗೆ ಅಕ್ಷರರೂಪ ಕೊಡುವ ಪರಂಪರೆ ಮುಂದುವರಿಯುತ್ತಿರುವುದು. ಇಂತಹ ವಾತಾವರಣದಲ್ಲೇ ಗಟ್ಟಿಯಾಗಿ ನಿಲ್ಲುವ, ಉತ್ತಮ ಏನ್ನಬಹುದಾದ ಕವಿತೆಗಳು ಜನರ ಗಮನ ಸೆಳೆಯುತ್ತಿವೆ. ಈ ಹಿನ್ನೆಲೆಯಲ್ಲೇ ತಾವು ಹುಟ್ಟಿ ಬೆಳೆದ ನಿಸರ್ಗ, ತಮ್ಮ ಕೌಟುಂಬಿಕ ಹಿನ್ನೆಲೆ, ಸಾಮಾಜಿಕ ಅಸಮಾನತೆ, ಬದುಕಿನ ಅನುಭವದಲ್ಲಿ ಶಾಂತಾನಾಯಕ್ ಅವರ ಉತ್ತಮ ಕವಿತೆಗಳು ಅರಳಿನಿಂತಿವೆ.

2002ರಲ್ಲಿ ಪ್ರಕಟಗೊಂಡ ಮೊಟ್ಟಮೊದಲ ಹಾಗೂ ಮಹತ್ವದ ಕಾವ್ಯಸಂಕಲನ "ಮೀನು ಮತ್ತು ಹುಡುಗಿ" ವಸ್ತು, ಭಾಷೆ ಹಾಗೂ ಲಯದ ಮೂಲಕ ಕಟ್ಟಿದ ಕಾವ್ಯ ಗಟ್ಟಿಯಾಗಿ ನಿಲ್ಲುತ್ತದೆ ಎಂಬ ಮಾತಿಗೆ ಪೂರಕವಾಗಿ ಇಲ್ಲಿನ ಕವಿತೆಗಳಿವೆ. ಜೊತೆಗೆ ಪ್ರಥಮ ಸಂಕಲನದಲ್ಲಿ ನುಸುಳಬಹುದಾದ ವಾಚ್ಯ, ದ್ವಂದ್ವ, ಹಸಿತನಗಳಂತಹ ಲೋಪದೋಷಗಳು ಕಂಡುಬರುತ್ತವೆ. ಹಾಗೆ ಕವಿಯಲ್ಲೊಬ್ಬ ತುಂಟ ಕವಿ ಇದ್ದಾನೆ ಎನ್ನುವುದಕ್ಕೆ ಹಲವು ಕವಿತೆಗಳು ಸಾಕ್ಷಿಯಾಗಿ ನಿಂತಿವೆ. ಹೀಗೆ ವೈವಿಧ್ಯ ವಿಷಯಗಳನ್ನಾಧರಿಸಿದ ಈ ಕವನ ಸಂಕಲನ ಸಹ ಹೃದಯವನ್ನು ಆಲೋಚನೆಗೆ ಒಳಪಡಿಸುತ್ತದೆ. ಈ ಕವನ ಸಂಕಲನದ ಶೀರ್ಷಿಕೆ ಹೊತ್ತ ಕಾವ್ಯ "ಮೀನು ಮತ್ತು ಹುಡುಗಿ" ಇದೊಂದು ಹೃದಯಸ್ಪರ್ಶಿ ವಿಷಯವನ್ನೊಳಗೊಂಡ ಕಾವ್ಯ. ಒಬ್ಬ ಮೀನು ಮಾರುವ ಹುಡುಗಿಯ ಬದುಕು ಮತ್ತು ಭಾವನೆಗಳ ತಲ್ಲಣ ಹಾಗೂ ದಲಿತರ ಮತ್ತು ಧನಿಕರ ಮಧ್ಯೆ ನಡೆಯುವ ಸೂಕ್ಷ್ಮ ಸಂಘರ್ಷ ಎದ್ದು ಕಾಣುತ್ತದೆ. ಒಬ್ಬ ಮೀನು ಮಾರುವ ಹುಡುಗಿಗೆ ಬಾಲ್ಯದ ಸಿಹಿ ನೆನಪಿಲ್ಲ. ಮೀನು ಮಾರುವುದರಲ್ಲೇ ನಿರತವಾಗಿ ಪುಟ್ಟಿ-ಮೀನು-ತಾನು ನಿಶ್ಚಿತ ಅಂತ ದಿನಗಳು ದೂಡಿ ಈಗ ಬಾಲ್ಯದಾಟಿ ಯೌವ್ವನಕ್ಕೆ ಕಾಲಿಟ್ಟಿದ್ದಾಳೆ. ಯೌವ್ವನದಲ್ಲಿ ಧುಮ್ಮಿಕ್ಕಿ ಬರುವ ಭಾವನೆಗಳಿಗೆ ಸ್ಪಂದಿಸಲಾಗದೆ ಹೊಟ್ಟೆ ಹೊರೆಯುವುದಕ್ಕಾಗಿ ಮಳೆ, ಗಾಳಿ, ಬಿಸಿಲು, ಚಳಿ ಲೆಕ್ಕಿಸದೆ ತನ್ನ ಕಾಯಕದಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾಳೆ. ಆದರೆ ಶ್ರಮಿಕರು ಎಷ್ಟೇ ದುಡಿದರೂ ಅದರ ಲಾಭ ಕಬಳಿಸುವವರು ಧನಿಕರೆ ಎನ್ನುವುದು ಈ ಕವಿತೆಯ ಸ್ಥಾಯಿಭಾವವಾಗಿದೆ.

"ಕೊರಳ ತುಂಬಿ ಹಳದಿ ಲೋಹ ತೊಟ್ಟವಳು
ಮೂಗು ಮುಚ್ಚಿಕೊಂಡೆ ಕೇಳಿದಾಗ
ಪ್ಲಾಸ್ಟಿಕ್ ಬುಟ್ಟಿಗೆ ಹಾಕಿ

ಅವಳು ಕೊಟ್ಟ ಹತ್ತರ ನೋಟಿನ ಹಿಂದೆ ನಿಟ್ಟುಸಿರು ಬಿಡುತ್ತಾಳೆ"
ಎಷ್ಟೋ ನೋಟುಗಳು ಮುದುಡಿ ಮುದ್ದೆಯಾದವು
ಬಲೆ ಎಳೆದ ಬಂಧುಗಳಿಗೆ
ದಣಿವಿನ ತಾಣವಾಗಿ
ಮತ್ತದೆ ಹಳದೀ ಲೋಹಗಳ ಸ್ವತ್ತಾಗುತ್ತದೆ.

ಹೀಗೆ ಈ ಕವಿತೆ ಸಹ ಹೃದಯನನ್ನು ಆಲೋಚನೆಗೊಳಪಡಿಸುತ್ತದೆ. ಕವನದ ಕೊನೆಯ ಸಾಲು ಹಳಹಳಿಸುತ್ತಾಳೆ. ಹರೆಯ ಸೋರಿಹೋಗುತ್ತಿರುವದ ಕಂಡು, ಅಂದರೆ ಎಷ್ಟೋ ಸಲ ಶ್ರಮಿಕರು, ನಿರ್ಗತಿಕರ ಯೌವ್ವನದ ಬಯಕೆಗಳು ದಾರಿ ಹೋಕರ ಪಾಲಾಗುವುದನ್ನು ಕಂಡು ಮರಗುವ ಹುಡುಗಿಯ ಮನಃಸ್ಥಿತಿ ದಯನೀಯವಾಗಿದೆ. ಅದ್ಭುತ ರೂಪಕಶಕ್ತಿ ಇರುವ ಈ ಕಾವ್ಯ ನಮ್ಮನ್ನು ಆವರಿಸುತ್ತದೆ.

ಅದೇ ರೀತಿ ಇನ್ನೊಂದು ಕವನ "ಹೆಜ್ಜೆಗಳು" ಈ ಕವಿತೆ ಗುಲಾಮಗಿರಿ ಹಾಗೂ ಸ್ವಾತಂತ್ರ್ಯದ ನಡುವೆ ಹುಡುಕಾಟ ನಡೆಸುವ ವಿಷಯವನ್ನೊಳಗೊಂಡಿದೆ. ರಾಜ ಮಹಾರಾಜರುಗಳ ಆಳ್ವಿಕೆ ಸಂದರ್ಭದಲ್ಲಿ ಗುಲಾಮರಾದ ನಾವು ಆ ದಿನಗಳು ಇಂದಿಗೂ ಮರುಕಳಿಸುತ್ತಿವೆ. ಅದೇ ರೀತಿ ಬ್ರಿಟೀಷರ ದಬ್ಬಾಳಿಕೆಗೆ ಸಿಕ್ಕು ಹೆಣಗಿದ ಎಷ್ಟೋ ಜೀವಗಳು ನಮ್ಮನ್ನು ಸ್ವತಂತ್ರಗೊಳಿಸಲು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟರು. ಆದರೆ ಇಂದಿಗೂ ನಿಜವಾದ ಸ್ವತಂತ್ರ ನಮಗೆ ದೊರಕಿಲ್ಲ ಅನ್ನುವ ಪ್ರತಿರೋಧ ವ್ಯಕ್ತಪಡಿಸುವ ಕವಿಯ ಮನದ ಭಾವನೆ ಈ ಸಾಲುಗಳಲ್ಲಿ ನೋಡಬಹುದು.

"ಅಪ್ಪನ ಹೆಗಲ ಮೇಲೆಲ್ಲಾ
ಬ್ರಿಟಿಷರ ಕೆಂಪು ಕೆಂಪಾದ
ಬೂಟಿನ ಗುರುತು.
ನನ್ನ ಸ್ವತಂತ್ರಗೊಳಿಸಲು ಅಪ್ಪ
ಬ್ರಿಟಿಷರಿಗೆ ಬೆನ್ನು ಕೊಟ್ಟಿದ್ದ
ಅಪ್ಪಗೆ ತಿಳಿದಿರಲಿಲ್ಲಾ
ನನಗೆ ಸ್ವತಂತ್ರವೇ ಇಲ್ಲವೆಂದು.

ಹೆಜ್ಜೆಗಳು ಬೆಳೆಯುತ್ತಲೇ ಇವೆ
ಮುಗಿಲೆತ್ತರಕೆ

ನನ್ನ ಕುಬ್ಜಗೊಳಿಸಿ
ದೈತ್ಯರೂಪ ತಾಳಿ"

ಇಲ್ಲಿ ಚಿತ್ರಿತವಾಗಿರುವ ಸಾಲುಗಳು ಶೋಷಣೆಯ ಪ್ರತಿಬಿಂಬವಾಗಿವೆ. ಕವಿಯ ಕಲ್ಪನೆಯಲ್ಲಿ ಸ್ವತಂತ್ರ ಎಂದರೆ ಕೇವಲ ರಾಜಕೀಯ ನಾಯಕರ ಬೂಟಾಟಿಕೆಯಲ್ಲಿ ಸಚಿವಮಂಡಲ ಕಟ್ಟಿಕೊಂಡು ಸಾರ್ವಭೌಮರಂತೆ ಭ್ರಮಿಸಿ ರಾಜಕೀಯ ಪ್ರಭುತ್ವ ನೈತಿಕ ಅಧಃಪತನದತ್ತ ಸಾಗುತ್ತಿದೆ. ಆದರೆ ನಮ್ಮ ಹಿರಿಯರು ಒಳಗಣ್ಣಿನಿಂದ ಕಂಡ ಅಮೂರ್ತ ಕಲ್ಪನೆಯ ಸ್ವಾತಂತ್ರ್ಯ ನಮಗಿನ್ನು ದೊರೆತಿಲ್ಲ. ಆಳುವವರ ಇಬ್ಬಂದಿತನದಿಂದಾಗಿ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗಿದ್ದರಿಂದ ಕವಿಯ ಅಂತಃಪ್ರಜ್ಞೆಯ ದ್ಯೂತಕವಾಗಿ ಪ್ರತಿರೋಧ ವ್ಯಕ್ತಪಡಿಸುತ್ತಾ ಆತ್ಮಗೌರವ ಎತ್ತಿ ಹಿಡಿಯುವ ಸ್ವಾತಂತ್ರ್ಯಕ್ಕಾಗಿ ಕವಿ ಮನ ಆಶಿಸುತ್ತಿರುವುದನ್ನು ಈ ಕವಿತೆಯಲ್ಲಿ ಕಾಣಬಹುದು. ಜೊತೆಗೆ ಕವಿತೆಯಲ್ಲಿ ವಿಷಾದವೂ ಮೂಡಿ "ಹೆಜ್ಜೆಗಳು ಬೆಳೆಯುತ್ತಲೇ ಇವೆ. ಮುಗಿಲೆತ್ತರಕ್ಕೆ" ಎನ್ನುವ ನೋವಿನ ಛಾಯೆ ಮೂಡಿಸುತ್ತಿವೆ.

ಅದೇ ರೀತಿ ಇನ್ನೊಂದು ಕವಿತೆ "ಪಾಲು ಮತ್ತು ಮುದುಕ" ಪ್ರತಿಯೊಬ್ಬರ ಜೀವನದ ಸ್ವಾರಸ್ಯವನ್ನು ಬಿಂಬಿಸುವ ಈ ಕವಿತೆಯಲ್ಲಿ ವ್ಯಕ್ತಿಯೊಬ್ಬ ತನ್ನ ಅಮೂಲ್ಯ ಬದುಕಿನ ಸಾರವನ್ನೇ ಮರೆತು ತನ್ನ ಕುಟುಂಬಕ್ಕಾಗಿ ಹಗಲಿರುಳು ದುಡಿದು ಬದುಕಿಗಾಗಿ ಬವಣೆ ಪಟ್ಟು ಕೊನೆಗೆ ಕ್ಷಣಕ್ಷಣಕ್ಕೂ ವಾಸ್ತವದ ಕೊಂಡಿ ಕಳೆದುಕೊಳ್ಳುತ್ತಿರುವ ದಿನಗಳಲ್ಲಿ ತನ್ನೊಳಗಿನ ನೆನಪುಗಳ ಮೆಲುಕು ಹಾಕುವಾಗ ತನ್ನ ತಪ್ಪಿನ ಅರಿವಾಗಿ ಮುದುಕ ನೋವನುಂಗಿ ನಗುತ್ತಿದ್ದಾನೆ. ಆ ಮುದುಕನ ದೈನ್ಯಸ್ಥಿತಿಯನ್ನು ಈ ಕವಿತೆಯ ಕೆಲವು ಸಾಲುಗಳಲ್ಲಿ ಕಾಣಬಹುದು.

"ಛಲದಂಕ ಮಲ್ಲನಂತೆ ಹೊತ್ತು ಮೂಡುವ ಮುನ್ನ
ಹೊರೆ ಹೊತ್ತು ಗಳಿಸಿ ಉಳಿಸಿ
ಒಂದೊಂದಾಗಿ ಜೋಡಿಸಿ ಕಟ್ಟಿದ್ದು
ಒಂದೊಮ್ಮೆ ಕುಸಿದ ಕಸರತ್ತು.

ಪಾಲಿಗಾಗಿ ಪರದಾಡುತ್ತಿರುವ ಅವನ ಸಂತತಿ
ಕೈಗೆ ಕೈ ಮಿಲಾಯಿಸಿ ಹೊಡೆದಾಡುತ್ತಿರಲು
ಮೌನಿಯಾಗೆ ವೀಕ್ಷಿಸತೊಡಗಿದ
ಮುಸಿ ಮುಸಿ ಅಳುತ್ತಿರುವ ಹೆಂಡತಿ ಗೋಜಿಗೂ ಹೋಗದೆ"

ಹೀಗೆ ಪ್ರತಿಯೊಬ್ಬ ವ್ಯಕ್ತಿ ಬದುಕಿನ ಬಗ್ಗೆ ಆಲೋಚನೆಗೆ ತೊಡಗಿದಾಗ ತಾ ಕಲಿತ ವಿದ್ಯೆಯಾಗಲಿ, ಸಂಪಾದಿಸಿದ ಹಣ, ಬೆಳೆಸಿಕೊಂಡ ಸಖ್ಯ ಎಲ್ಲವೂ ಅಶಾಶ್ವತ ಅನಿಸುತ್ತದೆ. ಮಕ್ಕಳ ಮಮತೆ ತಂದೆಯ ಆಸ್ತಿ ಮೇಲೆ ಎಂದರಿತಾಗ ಮಗ ಹುಟ್ಟಿದ ದಿನ ತಂದೆ ನೆನೆದು ಸಂಭ್ರಮಿಸಿದ ಕ್ಷಣ ಕವಿ ಅದ್ಭುತವಾಗಿ ಕಟ್ಟಿರುವ ಸಾಲು

"ಮೀಸೆ ಹುರಿಮಾಡುತ,

ಕಂಚಿನ ತಟ್ಟೆ ಬಡಿದು

ಜಗಜಾಹಿರಾತು ಮಾಡಿ

ಬೆಲ್ಲ ಹಂಚಿದ ದಿನ ನೆನಪಾತು.

ಬೆಳೆದಂತೆ ದಾಯಾದಿಗಳಾದ ಮಕ್ಕಳ ಪರಿ" ಈ ಸಾಲುಗಳಲ್ಲಿ ಹೆತ್ತವರ ನೋವು ಎತ್ತಿ ತೋರಿಸುತ್ತವೆ.

ತಾವು ಓದಿ ಪ್ರಭಾವಿಸಿದ ಕವಿಯ ಪ್ರಭಾವವನ್ನು ದಾಖಲಿಸುವ ಪ್ರಯತ್ನ ಸಾಗಿರುವುದನ್ನು "ವರ್ಡ್ಸ್‌ವರ್ತನೊಂದಿಗೊಂದು ದಿನ" ಪಾಶ್ಚಾತ್ಯ ಸಾಹಿತ್ಯದಲ್ಲಿ ಪ್ರಭಾವ ಬೀರಿದ ದೊಡ್ಡ ಗುಂಪೇ ಇದೆ. ಅದರಲ್ಲಿ ಕವಿ ವರ್ಡ್ಸ್‌ವರ್ತ ಮುಖ್ಯವಾದವರು. ಇವರ ಕಾವ್ಯದ ಜೀವಾಳ ಪ್ರಕೃತಿ. ಹುಲ್ಲು, ಹೂ, ಕಾಮನಬಿಲ್ಲು, ಬೆಟ್ಟಗಳಸಾಲು, ಹಸಿರು, ಝರಿ ಇತ್ಯಾದಿ. ನೆನಪಿನ ತೋರಣವೇ ಈ ಕವಿತೆಯಲ್ಲಿ ಮೈ ದುಂಬಿದೆ. ವರ್ಡ್ಸ್‌ವರ್ತ್ ಏನು ಅನ್ನುವುದನ್ನು ಕೆಲವೇ ಸಾಲುಗಳಲ್ಲಿ ಅರ್ಥೈಸುಕೊಳ್ಳುವಂತೆ ಕವಿಯ ಪ್ರಯತ್ನ ನಡೆದಿದೆ.

"ಅವನಂತರಂಗದಲ್ಲೊಂದೇ ಮಾತು ಪ್ರಕೃತಿ

ಬರವಣಿಗೆಯುದ್ದಕ್ಕೂ ಸ್ವೀಕೃತಿ

ತುಕ್ಕು ಹಿಡಿದ ಮನಸ್ಸಿಗೆ ಆನಂದದ ತಾಣ

ಗ್ರಹಣ ಬಡಿದ ಮೆದುಳಿಗೆ ಸೋಪಾನ"

ಹೀಗೆ ಇನ್ನೂ ಅನೇಕ ಕವಿತೆಗಳು ವೈವಿಧ್ಯ ವಿಷಯಗಳಿಂದ ಕೂಡಿವೆ. ಕವಿ ತಮ್ಮ ಬಾಲ್ಯದಲ್ಲಿ ಪರಿಸರ ಬೀರಿದ ಪ್ರಭಾವ, ತಾವು ಕಂಡ ದೃಶ್ಯಗಳು, ವ್ಯಕ್ತಿಗಳು, ಸ್ಥಳಗಳಿಗೆ ರೂಪಕ ಶಕ್ತಿ ತುಂಬಿ ಕವಿತೆಗಳಾಗಿ ರೂಪಗೊಂಡಿವೆ. ಅವರ "ಕ.ವಿ.ವಿ. ಗ್ರಂಥಾಲಯದಲ್ಲೊಂದು ದಿನ" ತಮ್ಮ ವಿದ್ಯಾರ್ಥಿ ಜೀವನದಲ್ಲಿ ಮನಸ್ಸಿನ ತುಡಿತ, ಭಾವನೆಗಳೊಂದಿಗಿನ ಸಂಘರ್ಷ ಬದುಕು ಕಟ್ಟಿಕೊಳ್ಳಲು ಹೆಣಗುವ ಅನಿವಾರ್ಯತೆ ಅಮೋಘವಾಗಿ ಮೂಡಿಬಂದಿವೆ. ಅದೇ ರೀತಿ "ಸ್ಥಿತಿ ಮತ್ತು ನೆಲೆ" ತಮ್ಮ ಬಾಲ್ಯದ

ಬುತ್ತಿಯ ಬಿಚ್ಚಿ ಉಣ್ಣುವ ಸವಿ ಇಲ್ಲಿ ಮೂಡಿಬಂದಿದೆ. ಇನ್ನೊಂದು ಮಹತ್ವದ ಕವಿತೆ "ಮಾಳಿ" ಇದು ಕವಿಯ ಮನೆಯ ಪರಿಸರದಲ್ಲಿರುವ ಪ್ರಾದೇಶಿಕ ಬಳಕೆಯಾಗಿರುವ ಮಣ್ಣಿನ ದಿಬ್ಬವಾಗಿದೆ. ಅದರ ಸಹಚರ್ಯದಲ್ಲಿ ತನ್ನ ತಾಯಿ ಗುಡಿಸಲಿನ ಮುಂದೆ ಕುಳಿತು ಹೇಳುವ ಕತೆ, ಭಯ ಹುಟ್ಟಿಸುವ ಘಟನೆಗಳು, ಹೆಣ ಸುಡುವ ದೃಶ್ಯ, ಸೌಳ್ಳು ಮಣ್ಣು, ಕೆಸರೊಳಗೆ ಸಿಕ್ಕ ಮಣಕ, ಇಂತಹ ಅನೇಕ ಘಟನೆಗಳ ನೆನಪುಗಳ ಮೆರವಣಿಗೆ ಈ ಕವಿತೆಯಲ್ಲಿವೆ. ಒಟ್ಟಾರೆಯಾಗಿ ಶಾಂತಾನಾಯಕ್ ರ ಒಟ್ಟು ಕವಿತೆಗಳ ಆಶಯ ವೈಯಕ್ತಿಕ ನೆಲೆಯಿಂದ ಸಾರ್ವತ್ರಿಕದೆಡೆಗೆ ಕೈಚಾಚುತ್ತವೆ. ಹಾಗೆ ಕೆಲವು ಬಂಡಾಯ ಧೋರಣೆಯನ್ನು ವ್ಯಕ್ತಪಡಿಸುತ್ತವೆ. ಒಟ್ಟಾರೆ ಸಮಾಜಮುಖಿಯಾದ ಈ ಕವಿ ಜನಪರ ಕಾಳಜಿಯ ಆಶಯ ಹೊಂದಿದ್ದಾರೆ.

ಕಾವ್ಯ, ಸಾಹಿತ್ಯ ರಚನೆಯ ಪ್ರಾರಂಭಿಕ ಹಾದಿ ತುಳಿಯುವುದು ಸುಲಭ. ನಂತರ ಮುಂದಡಿ ಇಟ್ಟು, ಖಚಿತ ಗುರಿ ತಲುಪುವುದು ಕಠಿಣ. ಅದಕ್ಕೆ ಅಧ್ಯಯನ, ಸತತ ಪರಿಶ್ರಮ, ಸಾಧನೆ ಬೇಕು. ಅದರಂತೆ "ಮೀನು ಮತ್ತು ಹುಡುಗಿ" ಕಾವ್ಯ ಸಂಕಲನದಿಂದ ಆರಂಭವಾದ ಕಾವ್ಯ ಪಯಣ ಗುರಿಮುಟ್ಟುವ ಹಂತ ತಲುಪಿದ್ದು ಅವರ ಪರಿಶ್ರಮಕ್ಕೆ ಹಿಡಿದ ಕನ್ನಡಿಯಂತಿದೆ.

ಬಂಜಾರದ ವೇರಾಳು : ಪ್ರೊ ಶಾಂತನಾಯ್ಕ

ಡಾ. ವೇಷ್ಗಾರು ರಾಮಾಂಜಿನೇಯ (ಅಶ್ವ ರಾಮು)

ಯೋಧ, ವೀರ, ಶೌರ್ಯವಂತ, ಪ್ರತಾಪಿ ಎಂಬ ಅನ್ವರ್ಥವು ಈ ವೇರಾಳು ಕೃತಿಯು ಪ್ರತಿನಿಧಿಸುತ್ತದೆ. ಈ ಕೃತಿಯು ಇಡೀ ಲೇಖಕನ ಇತಿಹಾಸವನ್ನೇ ಮರು ಪ್ರಶ್ನಿಸುವ ಮತ್ತು ಮರುಶೋಧಿಸುವ ಕಾರ್ಯವನ್ನು ಕುರಿತು ತಿಳಿಸುವಲ್ಲಿ ಸಹಕಾರಿಯಾಗಿದೆ. ನಾವು ಓದುತ್ತಿರುವ ಇತಿಹಾಸ ನಮ್ಮದಲ್ಲ ನಮ್ಮವರಿಲ್ಲದ ಇತಿಹಾಸ ಅದು ನಿಜವಾದ ಇತಿಹಾಸ ಸಾಮಾನ್ಯ ಬದುಕಿನಲ್ಲಿ ಗುಡಿಸಿಲಿನಲ್ಲಿ ಅಡಗಿದೆ. ಅದನ್ನು ಮರೆಮಾಚಿ ಉಳ್ಳವರು ತಮ್ಮ ಪ್ರತಿಷ್ಟೆಗೆ ತಮ್ಮನ್ನು ನಾಯಕರನ್ನಾಗಿ ಬಿಂಬಿಸಿಕೊಳ್ಳುವ ನೆಲೆಯಲ್ಲಿ ನಿಜವಾದ ಇತಿಹಾಸ, ಮುಚ್ಚಿಹೋಗಿದೆ ಭೀಮಾನಾಯ್ಕ ನಂತಹ ಅದೇಷ್ಟೋ ವೀರರು, ಕಲಿಗಳು ಬುಡಕಟ್ಟು ಸಮುದಾಯಗಳಲ್ಲಿ ಎಲೆಮರೆಕಾಯಿಯಾಗಿದ್ದಾರೆ, ಸಾಮಾನ್ಯರ ಹೋರಾಟ, ತ್ಯಾಗ ಯಾವುದು ಮುಖ್ಯವಾಗಿಲ್ಲ, ಏಕೆಂದರೆ ಅವರ ಬಳಿ ಹಣವಿಲ್ಲ ಮತ್ತು ಅಧಿಕಾರವಿಲ್ಲ ಆದ ಕಾರಣ, ಬಂಜಾರ ಸಮುದಾಯದಲ್ಲಿ ಹೋರಾಡಿದ ಆಗೇ ಅದೇಷ್ಟೋ ಜನ ಭೀಮಾ ನಾಯ್ಕನ ಪ್ರತಿನಿಧಿಯಂತೆ ಹೋರಾಡಿ ಕಣ್ಮರೆಯಾಗಿದ್ದಾರೆ. ಪ್ರತಿ ಹಳ್ಳಿ, ಕೆರೆ, ಬೆಟ್ಟಗಳಲ್ಲಿ ಇರುವ ಚರಿತ್ರೆ ಅರಿತು ಇಂದಿನ ವಿದ್ಯಾವಂತ ಸಮುದಾಯ ಇತಿಹಾಸವನ್ನು ಪರಿಶೀಲಿಸಿ ತಮ್ಮ ಚರಿತ್ರೆಯನ್ನು ಬರೆಯುವ ಅನಿವಾರ್ಯತೆ ಮತ್ತು ತುರ್ತು ಇದೆ. ಇತಿಹಾಸ ಕಟ್ಟಬೇಕಾಗಿರುವ ತಳಸಮುದಾಯಗಳ ನೋಟದಿಂದ ಇದನ್ನೇ (ಸಬ್ಬಾನ್) ಓದುವ ಕ್ರಮದಲ್ಲಿ ಬುಡಕಟ್ಟು ಸಮುದಾಯಗಳ ಒಳಹೊಕ್ಕು ಅಲ್ಲಿನ ಚರಿತ್ರೆಯನ್ನು ಶೋಧಿಸುವ ಅವಶ್ಯಕತೆ ಇದೆ. ಸ್ಥಳೀಯ ನಾಯಕರನ್ನು ಗುರುತಿಸಿ ನಿಜವಾದ ಇತಿಹಾಸ ಅರಿಯುವ ಅಗತ್ಯವೂ ಇದೆ. ಇಲ್ಲದಿದ್ದರೆ ಬ್ರಿಟಿಷ್‌ರು ಹೇಳಿ ಬರೆಸಿದ ಇತಿಹಾಸವನ್ನೇ ನಂಬಿ, ನಮ್ಮ ಇತಿಹಾಸವನ್ನು ಮರೆತು ಬದುಕುವ ಮತ್ತೆ ಅವರ ಹಿರಿಮೆ ಗರಿಮೆಗಳನ್ನು ಶ್ರೇಷ್ಠವೆಂದು ನಂಬಿ ಬದುಕುವ ಸ್ಥಿತಿಯಾಗುತ್ತದೆ.

ಇತಿಹಾಸದೊಳಗೆ ನಮ್ಮ ಬುಡಕಟ್ಟು ಸಮುದಾಯಗಳ ಜನಸಾಮಾನ್ಯರ ಅಸ್ಮಿತೆ ಮತ್ತು ಅಸ್ತಿತ್ವವನ್ನು ಗುರುತಿಸುವ ಅನಿವಾರ್ಹತೆ ಬಗ್ಗೆ ಈ ಕೃತಿಯು ತಿಳಿಸುತ್ತದೆ.

ಸ್ವಾತಂತ್ರ್ಯ ದೊರೆತು 70 ವರ್ಷಗಳು ಕಳೆದರೂ ಸ್ವಾತಂತ್ರ್ಯಕ್ಕಾಗಿ ದುಡಿದು ಮಡಿದು ಸಾವಿರಾರು ಜನರು ಇತಿಹಾಸ ಪುಸ್ತಕದಲ್ಲಿ ದಾಖಲಾಗಬೇಕಿತ್ತು. ಅದರಲ್ಲಿ ವಿಶೇಷವಾಗಿ ಈ ದೇಶದ ಮೂಲನಿವಾಸಿಗಳ, ಅಲೆಮಾರಿ ಬುಡಕಟ್ಟು ಸಮುದಾಯಗಳ ವೀರರನ್ನು ದಾಖಲಿಸಬೇಕಿತ್ತು. ಆದರೆ ಭಾರತದ ಇತಿಹಾಸವನ್ನು ಕೆಲವು ಅಕ್ಷರ ಬಲ್ಲವರು ತಮಗೆ ಹೇಗೆ ಬೇಕು ಹಾಗೆ ಬರೆದಿರುವಂತ ನಿದರ್ಶನಗಳನ್ನು ಕಾಣಬಹುದು.

ಇತಿಹಾಸ ಉಳ್ಳವರ ಮತ್ತು ಇಲ್ಲದವರ ನಡುವಿನ ಸಂಘರ್ಷ ಎಂದು ಕಾರ್ಲ್‌ಮಾರ್ಕ್ಸ್ ಹೇಳುವಂತೆ', ಉಳ್ಳವರು ತಮ್ಮ ಸಂಪತ್ತಿನ ಬಲದಿಂದ ಅಕ್ಷರ ಬಲ್ಲವರನ್ನ ಕೊಂಡುಕೊಂಡು ತಮಗೆ ಬೇಕಾದಂತೆ ಇತಿಹಾಸವನ್ನು ಬರೆಯಿಸಿಕೊಂಡಿರುವುದರ ಕುರಿತು ಚರ್ಚಿಸಿರುವುದನ್ನು ಉದಾಹರಣೆಗಳ ಮೂಲಕ ಈ ವೇರಾಳು ಕೃತಿಯ ಲೇಖಕರು ವಿವರಿಸಿರುವುದು ವಿಶೇಷವಾಗಿದೆ. ಇತಿಹಾಸಕಾರ ಅಕ್ಷರಬಲ್ಲವನಾಗಿದ್ದರಿಂದಾಗಿ ಇಲ್ಲದವರು ಇತಿಹಾಸದ ಪುಟಗಳನ್ನು ಸೇರಲೇ ಸೇರುವುದೂ ಇಲ್ಲ. ಭಾರತ ಖಂಡ ಎಷ್ಟು ವಿಶಾಲವಾಗಿದೆಯೋ ಅಷ್ಟೇ ವಿಶಾಲವಾಗಿ ಬೇರೆ ಬೇರೆ ಜನಾಂಗವನ್ನು ಹೊಂದಿದೆ. ಭಾರತ ಸ್ವಾತಂತ್ರ್ಯಗೊಂಡನಂತರ 563ಕ್ಕಿಂತ ಹೆಚ್ಚು ಪ್ರಾಂತ್ಯಗಳು ರಾಜ್ಯಗಳಾಗಿ, ಭಾಷಾವಾರು ಪ್ರಾಂತ್ಯಗಳಾಗಿ ವಿಭಜನೆಗೊಂಡ ನಂತರ, ಭಾರತದ ಆದಿವಾಸಿಗಳು, ಬುಡಕಟ್ಟು ಜನರು ವಲಸೆ ಬಂದವರು ಅಲ್ಲಲ್ಲಿ ವಸತಿ ಉಳಿದರು. ಹೊಸ ನೀರಿಗೆ ನದಿಯಿಂದ ಮೀನುಗಳು ಹಳ್ಳಕ್ಕೆ ಏರುವಂತೆ ಏರಿ ನೀರಿನ ಹರಿವು ಕಡಿಮೆಯಾದಂತೆ ಅಲ್ಲಲ್ಲೇ ಗುಂಡಿಗಳಲ್ಲಿ ಉಳಿದು ಬಿಟ್ಟಂತೆ ಆದಿವಾಸಿ–ಬುಡಕಟ್ಟು ಜನರು ಅಲ್ಲಿಯೇ ನೆಲೆನಿಂತು ಉಳಿದುಕೊಂಡರು. ಉಳಿದು ಕೊಂಡವರು ತಮ್ಮ ಮೂಲವನ್ನು ಸಂಪೂರ್ಣವಾಗಿ ಮರೆತು ಉಳಿದುಕೊಂಡರು, ನಂತರ ಅವರ ಸ್ಥಿತಿ, ಮೀನು ಮೀನುಗಾರನ ಕೈಗೆ ಸಿಕ್ಕು ಪ್ರಾಣವನ್ನೆ ಕಳೆದುಕೊಂಡ ಮೀನಿನಂತೆ ಇವರು ಬಹುಸಂಖ್ಯಾತ ಜಾತಿ ಜನರ ನಡುವೆ ತಮ್ಮ ಆಸ್ಮಿತೆಗಾಗಿ ಹೋರಾಟವನ್ನೆ ಮಾಡಬೇಕಾಯಿತು. ಈ ಹೋರಾಟದಲ್ಲಿ ತಮ್ಮ ಸರ್ವಸ್ವವನ್ನೇ ಕಳೆದುಕೊಂಡರು. ಇದು ಸ್ವಾತಂತ್ರ್ಯ ನಂತರ ಭಾರತದ ಸತ್ಯವಾದರೆ, ಸ್ವಾತಂತ್ರ್ಯಪೂರ್ವದಲ್ಲಿ ಇಡೀ ಭಾರತದಲ್ಲೇ ದೊಡ್ಡ ವ್ಯಾಪಾರಿಯಾಗಿದ್ದ ಲಾಕಾ ಬಂಜಾರ–ಮಧ್ಯ ಪ್ರದೇಶದ ಈಗಿನ ಸಾಗರ ಜಿಲ್ಲೆಯಲ್ಲಿ ಇತಿಹಾಸವೆ ಅಚ್ಚರಿಯಾಗೊಳ್ಳಂತಹ ಅತಿದೊಡ್ಡ ಕೆರೆಯನ್ನು ನಿರ್ಮಿಸಿದ. ಆದರಿಂದಲೆ ಅದಕ್ಕೆ ಸಾಗರ ಎಂದು ಹೆಸರು ಬಂದಿತು. ಈಗ ಆ ಕೆರೆ 'ಲಾಕಾ ತಲಾಬ್' ಎಂದು ಖ್ಯಾತಿಗೊಂಡಿದೆ. ಆದರೆ ಈತನೆಂದೂ ಇತಿಹಾಸವನ್ನು ಸೇರಲಿಲ್ಲ.

ಗುರುಗೊಂವಿಂದಸಿಂಗ್‌ನ ತಲೆ ಮತ್ತು ದೇಹವನ್ನು ಕ್ರೂರಿ ಮೊಗಲ್ ಚಕ್ರವರ್ತಿ ಔರಂಗಜೇಬ್ ಬೇರ್ಪಡಿಸಿ ಗುರು ಗೋವಿಂದಸಿಂಗ್ ದೇಹಕ್ಕೆ ಅಗ್ನಿ ಸ್ಪರ್ಶ ಆಗಬಾರದೆಂದು ತೊಟ್ಟ ಪಣವನ್ನು ಹುಸಿಯಾಗಿಸಿದ. ಲಾಕಾಬಂಜಾರನ ತ್ಯಾಗಬಲಿದಾನವನ್ನು ಸಿಖ್ ಸಮುದಾಯವೂ ಗುರುತಿಸಿದೆ. ಗುರುಗೋವಿಂದ್ ಬಂಜಾರನ ಹೋರಾಟ, ಹೈದ್ರಾಬಾದ್ ನಿಜಾಮನನ್ನು ಎದುರಿಸಿದ ಜಮಣಿ ನಾಯ್ಕಣ್ ಯಾರ ಶೃತಿಗೂ ಬರಲೇ ಇಲ್ಲ ಎನ್ನುವುದನ್ನು ತಿಳಿಸಿದ್ದಾರೆ.

ರೇವಾನಾಯ್ಕ ಎಂಬ ಲಂಬಾಣಿ ಸಮುದಾಯದ ನಾಯಕ ನರ್ಮದಾ ನದಿ ಹತ್ತಿರದ ಪುಷ್ಕರಣಿಯನ್ನು ಕಟ್ಟಿಸಿರುವುದು ಚರಿತ್ರೆಯ ಪುಟಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಅವರ ಕುರಿತು ಎಲ್ಲಿಯೂ ದಾಖಲಾಗಿರುವುದಿಲ್ಲ. ಬಗ್ಗೆ ಮಾತನಾಡುವುದಿಲ್ಲ. ಅದೇ ಆ ಭಾಗದಲ್ಲಿ ಪ್ರಬಲವಾಗಿರುವ ಜನಾಂಗದಲ್ಲಿ ಆ ವ್ಯಕ್ತಿ ಜನಿಸಿದ್ದೆಯಾಗಿದ್ದರೆ ಅವನನ್ನು ವೈಭವೀಕರಿಸುವ ಹೆಚ್ಚು ಪ್ರಚಾರಗೊಳಿಸುವ ಒಂದು ವ್ಯವಸ್ಥಿತವಾದ ಒಂದು ವರ್ಗವನ್ನು ಕಾಣಬಹುದು. ಇಲ್ಲಿ ಬಹಳ ಮುಖ್ಯವಾಗುವುದು ಬಹುಸಂಖ್ಯಾತರು, ಶ್ರೀಮಂತರು ದಾಖಲಾಗುತ್ತಾರೆ. ಆದರೆ ಅಲ್ಪಸಂಖ್ಯಾತರು, ಭೂಮಿಯೇ ಇಲ್ಲದವರು, ಬಡವರು ಎಲ್ಲೂ ದಾಖಲಾಗುವುದಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಾಗ ಸಾವಿರಾರು ಜನ ಆದಿವಾಸಿಗಳು, ಬುಡಕಟ್ಟು ಜನರು ಜೈಲಿನಲ್ಲಿಯೇ ಇದ್ದರು. ಈ 2,50,000 ಆದಿವಾಸಿಗಳಿಗೆ ಸ್ವಾತಂತ್ರ್ಯ ಸಿಗಲು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಬರೋಬ್ಬರಿ 5 ವರ್ಷ 11 ದಿನಗಳು ಬೇಕಾದವು. ಪಂಡಿತ್ ಜವಾಹರ್‌ಲಾಲ್ ನೆಹರೂ ಜೈಲಿನಲ್ಲಿರುವ ಖೈದಿಗಳು ನಮ್ಮವರೇ ಸ್ವಾತಂತ್ರಕ್ಕಾಗಿ ಹೋರಾಡಿದ ವೀರಸೇನಾನಿಗಳು ಎಂದು ತಿಳಿಯಲು ಐದು ವರ್ಷಗಳು ಬೇಕಾಯಿತೆ? ಮೂಲನಿವಾಸಿಗಳು ಕಾಡಿನ ಸಂಪತ್ತನ್ನ ಕಾಪಾಡಿಕೊಳ್ಳುತ್ತಲೆ ಬರುತ್ತಿದ್ದಾರೆ. ಆದರೆ ಅದರ ಸಂಪತ್ತನ್ನು ಬೇರೆಯವರು ಅನುಭವಿಸುತ್ತಲೆ ಬರುತ್ತಿದ್ದಾರೆ. ಬುಡಕಟ್ಟು ಜನರ ಪರಿಸ್ಥಿತಿ ಸ್ವಾತಂತ್ರ್ಯ ಸಿಕ್ಕು 75 ವರ್ಷಗಳು ಉರುಳಿದರೂ ಸುಧಾರಿಸಿದೆಯೇ? ಬೀದಿಯಲ್ಲಿ ಈಗಲೂ ವಿವಿಧ ಜಾತಿಗೊಂದು ವೇಷಗಳನ್ನು ಹಾಕಿ ಪ್ರದರ್ಶನ ನೀಡುವ ಹಗಲುವೇಷ ಕಲಾಪರಂಪರೆ, ಬುರ‍್ರಕಥಾ ಪರಂಪರೆ ಹೊಂದಿರುವ ಬುಡ್ಗ ಜಂಗಮ ಸಮುದಾಯದ ಕಲಾವಿದರು, ದಾರಸೂಜಿ, ಪಿನ್ನ ಮಾರುವ ಶಂಕು ಜಾಗಟೆ ಇಟ್ಟುಕೊಂಡು ಭಿಕ್ಷಾಟನೆ ಮಾಡುತ್ತಿರುವ ಚೆನ್ನಾದಸರು, ಪಾಂಡವರ ವೃತ್ತಾಂತವನ್ನು ಹೇಳುವ ಹಂಡಿಜೋಗಿಗಳು ಎಷ್ಟು ಅಕ್ಷರಸ್ಥರಾಗಿದ್ದಾರೆ? ಅವರ ಮಕ್ಕಳು ಎಷ್ಟು ಮಂದಿ ಐಎಎಸ್, ಐಪಿಎಸ್ ಉತ್ತೀರ್ಣರಾಗಿದ್ದಾರೆ? ಇಂತಹ ಸಾವಿರಾರು ಉದಾಹರಣೆಗಳು ನಮ್ಮೆದುರಿಗಿದ್ದರೂ ಅವರ ಏಳಿಗೆ ಬಗ್ಗೆ ಇಂದು ನಾವು ಚರ್ಚಿಸಬೇಕಾಗಿದೆ.

ಬದುಕಿನ ಹೋರಾಟದಲ್ಲಿ ಕೆಲಸದ ಜಾಗದಲ್ಲಿಯೇ ಪ್ರಾಣ ಕಳೆದುಕೊಳ್ಳುವ ಸಾವಿರಾರು ಜನರಿಗೆ ನಾವು ಏಕೆ ಸತ್ತೆವು ಎನ್ನುವ ಅರಿವು ಇರದು. ತಾವು ಬದುಕಿರುವ

ಬದುಕಿನ ಹಿನ್ನೆಲೆ ಮುನ್ನೆಲೆಗಳನ್ನೇ ಅರಿಯದ ಜನರಿಗೆ ಸಾವಿನ ಅರಿವು ಇರುವುದಾದರೂ ಹೇಗೆ. ಈ ಜಗತ್ತಿನ ನಿಯಮ ಬಲುಸೋಜಿಗವಾಗಿದೆ. ಕೆಲವರು ಸುಖ ಅನುಭವಿಸುವ ಸಲುವಾಗಿಯೆ ಹುಟ್ಟಿದರೆ ಇನ್ನೂ ಕೆಲವರು, ಒಂದೋತ್ತಿನ ಊಟಕ್ಕಾಗಿ ಹೋರಾಡುತ್ತಿರುವುದು ಕಾಣಬಹುದಾಗಿದೆ.

ಈಗ ಆದಿವಾಸಿಗಳ ಬಳಿ ಕಾಡಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ಭೂಮಿಯನ್ನು ಮಾರಾಟ ಮಾಡಿರುವ ಸರ್ಕಾರಗಳಿಗೆ ಈ ಜನ ಇರುವುದೆ ಬೇಕಿಲ್ಲ. ಜನಾಂಗೀಯ ವೈರುಧ್ಯ ಬೆಳೆಸುತ್ತಿರುವ ಈ ಸಂದರ್ಭದಲ್ಲಿ ಬುಡಕಟ್ಟು ಜನಾಂಗಗಳು ಮೇಲೆ ಬರುವುದಾದರೂ ಹೇಗೆ? ಅವುಗಳ ಜೀವನ ಸಾಗಿಸುವ ಪರ್ಯಾಯ ಯೋಜನೆಗಳಾದರೂ ಯಾವುವು ಈ ರೀತಿ ಚರ್ಚಿಸುವ ಯೋಜಿಸುವ ಮನಸ್ಸುಗಳನ್ನು ಎದುರುನೋಡಿತ್ತಿರುವ ಅಲೆಮಾರಿ ಬುಡಕಟ್ಟು ಸಮುದಾಯಗಳು ಕಾಣಬಹುದು. ನಿಜವಾದ ಸಾಹಿತ್ಯ ಮತ್ತು ಸಂಸ್ಕೃತಿ, ದರ್ಶನ ಉಳಿದಿರುವುದೇ ಇಂತಹ ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ.

ಮುಖ್ಯವಾಗಿ ಈ ಕೃತಿಯ ಪ್ರಮುಖ ವೀರ ಸ್ವತಂತ್ರ ಸೇನಾನಿ ಭೀಮಾನಾಯ್ಕ ಆಂಧ್ರ ಪ್ರಾಂತ್ಯದ ಕಡೆಯಿಂದ ವ್ಯಾಪಾರಕ್ಕೆ ಬಂದ ಒಬ್ಬ ವ್ಯಾಪಾರಿ. ತಂದೆ-ತಾಯಿ ಬಂಧು ಬಳಗದ ಜೊತೆಗೆ ವಲಸೆ ಬಂದು ಟಿಪ್ಪುಸುಲ್ತಾನ್ ಮತ್ತು ಬಾದಷನ ಸ್ನೇಹ ಬೆಳೆಸಿಕೊಂಡು ವ್ಯಾಪಾರ ಮಾಡತೊಡಗಿದ್ದ. ಕಾಲಾಂತರದಲ್ಲಿ ತಮ್ಮ ವೃತ್ತಿ ಜೀವನಕ್ಕೆ ಧಕ್ಕೆಯಾಗುವುದೆಂದು ಬಂಜಾರ ಹಾಗೂ ಇತರೆ ಹಲವು ಬುಡಕಟ್ಟು ಜನರು ಕಾಡನ್ನು ಆಶ್ರಯಿಸಿದ್ದರೂ ಅವರನ್ನು 'ಕಳ್ಳರು' ಎಂದು ಹಣೆ ಪಟ್ಟಿಯನ್ನು ಕಟ್ಟಿ ಅವರನ್ನು ಕಾಡಿನಿಂದ ದೂರ ಉಳಿಯುವಂತೆ ಬ್ರಿಟೀಷರು ಮಾಡುತ್ತಿದ್ದರು. ಈ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡಿದ್ದ ಯುವಕ ಭೀಮನಾಯ್ಕ ಟಿಪ್ಪುಸುಲ್ತಾನ್‌ಗೆ ಯಾವುದೇ ಪರಿಸ್ಥಿತಿಯಲ್ಲಿ ಸಹಾಯಮಾಡಲು ತಯಾರಾಗುತ್ತಾನೆ. ಆಂತರೀಕ ಮತ್ತು ಬಾಹ್ಯ ಶತ್ರುಗಳ ನಡುವೆ ನಲಗಿ ಹೋಗಿದ್ದ ಟಿಪ್ಪುಗೆ ಅನಿವಾರ್ಯವಾಗಿ ಭೀಮನಾಯ್ಕ ಹತ್ತಿರವಾಗಿದ್ದ. ಸ್ನೇಹಿತರ ಸಹಾಯ ಸಿಗದೆ ಟಿಪ್ಪುಸುಲ್ತಾನ್ ಒಬ್ಬಂಟಿಯಾಗಿದ್ದ. ಅವನಿಗೆ ಹೊರಗಿನ ಸುದ್ಧಿಯನ್ನು ತರುವಂತಹ ಗೂಡಾಚಾರರ ಮೇಲು ನಂಬಿಕೆ ಹೋಗಿತ್ತು. ಅದೇ ಸಮಯದಲ್ಲಿ ದವಸ ಧಾನ್ಯಗಳನ್ನು ಸಾಗಿಸುತ್ತಿದ್ದ ಭೀಮ ಗುಪ್ತ ಮಾರ್ಗದಿಂದ ಅವನಿಗೆ ಆರು ತಿಂಗಳಿಗೆ ಬೇಕಾಗುವಷ್ಟು ಆಹಾರ ಧಾನ್ಯವನ್ನ ಕೋಟೆಯ ಒಳಗೆ ಸಾಗಿಸಿದ್ದ. ಭೀಮ ಮತ್ತು ಟಿಪ್ಪುಗೆ ಒಬ್ಬನೆ ಸಾಮಾನ್ಯ ಶತ್ರು ಬ್ರಿಟೀಷ್, ತಮ್ಮ ವ್ಯಾಪಾರಕ್ಕೆ ಗಂಡಾಂತರವಾಗಲಿರುವ ಬಂಜಾರರ ಲದೇಣಿಯಾವನ್ನು ಸಂಪೂರ್ಣವಾಗಿ ಧ್ವಂಸಮಾಡಿದ. ಆದರೆ ಬ್ರಿಟೀಷರ ಏಕಚಕ್ರಧಿಪತ್ಯವಾಗುತ್ತದೆ ಎಂಬ ನಂಬಿಕೆಯ ಮೇಲೆ,

ತಮ್ಮ ವ್ಯಾಪಾರವನ್ನ ಉಳಿಸಿಕೊಳ್ಳಲು 'ಅಪರಾಧಿ' ಪಟ್ಟಕಟ್ಟಿ ಹೊರಗೆ ಬರದಂತೆ ಮಾಡಿದ್ದರು. ಹಾಗೇನೆ ಸಣ್ಣಪುಟ್ಟ ರಾಜರನ್ನ ಬಗ್ಗುಬಡಿಯಬೇಕಾದರೆ ಅವರಿಗೆ ಸಹಾಯ ಮಾಡುವ ಪ್ರತಿಯೊಬ್ಬರಿಗೂ ತೊಂದರೆ ಕೊಟ್ಟು ದೂರ ಮಾಡುತ್ತಿದ್ದರು. ಇದು ಮುಂದುವರೆದು ಬಂದಿದ್ದರಿಂದಾಗಿಯೆ ಭೀಮನಾಯ್ಕನ ಬಗ್ಗೆ ಬ್ರಿಟೀಷರಿಗೆ ಅನುಮಾನಗಳು ಬಂದಿದ್ದವು. ಆಂತರಿಕ ರಹಸ್ಯ ಬಯಲಾದ ಕಾರಣ ಟಿಪ್ಪು ಮಾನಸಿಕವಾಗಿ ಆಘಾತಕ್ಕೆ ಒಳಗಾಗಿದ್ದ. ಅವನು ನಂಬಿದ ಸೇನಾಧಿಪತಿ ಮೀರ್‌ಸಾಧಕ್ ಬ್ರಿಟೀಷರ ಕೈಗೊಂಬೆಯಾಗಿದ್ದ. ದಿವಾನ್ ಪೂರ್ಣಯ್ಯ ಮೇಲೆನೂ ಕೂಡ ವಿಶ್ವಾಸ ಹೋಗಿತ್ತು. ಈ ಹಿನ್ನೆಲೆಯಲ್ಲಿ ಆತನಿಗೆ ಮಾನಸಿಕವಾಗಿ ಹತ್ತಿರವಾದವನು ಕೇವಲ ಒಬ್ಬ ಬಂಜಾರ, ಅವನು ಗೂಢಾಚಾರನೂ, ವ್ಯಾಪಾರಿಯಾಗಿದ್ದ, ಸೈನಿಕ ಪಾತ್ರವನ್ನು ಮಾಡಿದ್ದ ಎನ್ನುವುದಕ್ಕೆ ಈ ಕೃತಿ ಸಾಕ್ಷಿಯಾಗಿದೆ.

ಚರಿತ್ರೆಯಲ್ಲಿ ಭೀಮನಾಯ್ಕನ ತ್ಯಾಗ, ಬಲಿದಾನ ದಾಖಲಾಗದೆ ಇರುವುದು ಈ ದೇಶದ ದೊಡ್ಡದುರಂತವಾಗಿದೆ. ಇದನ್ನ ನಾವು ಇತಿಹಾಸದ ಅಪಯಶಸ್ಸು ಎಂದೆ ತಿಳಿಯಬೇಕಿದೆ. ಯಾವಾಗಲೂ ಇತಿಹಾಸವು ಉಳ್ಳವರ ಪರವಾಗಿಯೆ ಇರುತ್ತದೆ. ಬ್ರಿಟೀಷರಿಗೆ ಒಡೆದು ಆಳುವ ನೀತಿಯನ್ನು ಕಲಿಸಿದ ಮಂದಿಯ ಕೈಯಲ್ಲಿ ಲೇಖನಿಯಿತ್ತು. ಬ್ರಿಟೀಷರನ್ನು ಹೊಗಳಿ ಹೊನ್ನಶೂಲಕ್ಕೇರಿಸಿ ತಮ್ಮ ಬೇಳೆಕಾಳು ಬೇಯಿಸಿಕೊಂಡ ಕೆಲವು ಸ್ಥಳೀಯರು. ಹೀಗಾಗಿಯೆ ಬುಡಕಟ್ಟು, ಆದಿವಾಸಿ, ನಿರ್ಗತಿಕ ಜನಸಮುದಾಯಗಳ ಇತಿಹಾಸ ಹೊರಬಾರದೆ ಹೋಯಿತು. ಈ ಜನರ ಇತಿಹಾಸವನ್ನ ಅವರೆ ಖುದ್ದಾಗಿ ಬರೆದುಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಪ್ರೊ ಶಿರಗಾನಹಳ್ಳಿ ಶಾಂತನಾಯ್ಕರವರ ಈ ಕೃತಿಯು ಬಹಳ ಅಪರೂಪವಾಗಿದೆ. ಬಂಜಾರ ಜನಸಮುದಾಯವು ಸ್ವತಂತ್ರ ಪೂರ್ವದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದ ಭೀಮಾ ನಾಯ್ಕ ಎಂಬ ವೇರಾಳುವಿನ ನಾಟಕವು ನಮ್ಮ ಸ್ಥಳೀಯ ವೀರರಾದ ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣವರ ಜೀವನಗಾಥೆಯಂತೆ ಬಿಂಬಿತವಾಗಿದೆ. ಇದರ ಕುರಿತು ಇನ್ನೂ ಹೆಚ್ಚು ಸಂಶೋಧನೆಗಳು, ಹಾಗೂ ಅಧ್ಯಯನಗಳಾಬೇಕಿದೆ.

ಪ್ರೊ ಶಿರಗಾನಹಳ್ಳಿ ಶಾಂತನಾಯ್ಕ ಅವರು ಲಂಬಾಣಿ ಸಮುದಾಯದ ಪ್ರತಿಭಾವಂತ ವಿದ್ವಾಂಸರು ಹಾಗೂ ಲೇಖಕರು, ನಾಟಕಕಾರರು. ಕತೆ ಕಾದಂಬರಿ, ವೈಚಾರಿಕ ಹಾಗೂ ಕವಿತೆ ಎಲ್ಲಾ ಪ್ರಕಾರಗಳಲ್ಲಿಯೂ ಪರಿಣಿತಿ ಹೊಂದಿರುವ ಅವರು ಕತ್ತಲು ಕರಗುವ ಮುನ್ನ – 2004, ಗುಡ್ಡಜ್ಜ ಕಥಾಸಂಕಲನ – 1999, ಮೀನು ಮತ್ತು ಹುಡುಗಿ – 2002, ಮನು ಹಿಟ್ಲರ್ ಮತ್ತು ಅಂಬೇಡ್ಕರ್ ಒಂದು ಚಿಂತನೆ – 2004, ನಮ್ಮೊಳಗಿನ ಮನುಷ್ಯ – 2004, ಪಾತ್ರಗಳು (ನಾಟಕ)–2004, ಕೊಂಯ್ಯ ಮತ್ತು ಧೋತ್ರ–

2004, ಹಳೆಭಾವನೆಯ ಹೊಸಮನುಷ್ಯ- 2004 (ಕಾವ್ಯ), ಕಲ್ಲೆ ಕಲ್ಲೆ ಕತೆಹೇಳು - 2013 (ಕಥಾಸಂಕಲನ), ಕತ್ತಲು ಕರಗುವ ಮುನ್ನ - 2004 (ಕಾದಂಬರಿ), ಗೋರ್ ಮಾಟಿ (ಕಾದಂಬರಿ) - 2009, ಮಲಾಣ್ - 2018 (ಕಾದಂಬರಿ), ಲಮಾಣಿ ಚಿಮ್ಮಿ ಆತ್ಮಚರಿತೆ 2013 (ಕಾದಂಬರಿ), ಲಮಾಣಿ - 2010 (ಆತ್ಮಕಥನ ಕಾವ್ಯ), ಬರವಣಿಗೆ ಮತ್ತು ಸಿದ್ಧಾಂತಗಳು (ವೈಚಾರಿಕ ಲೇಖನಗಳು), ಚರಗ- ನಾಟಕ ಒಂದು ಹಗಲು ಎರಡ ರಾತ್ರಿಗಳು (ಕಾದಂಬರಿ), ಗೋರ್ ಬೋಲಿ - ಬಂಜಾರ ಭಾಷಾ ಮತ್ತು ಸಂಸ್ಕೃತಿ ನಿಘಂಟು (2019), ವೇರಾಳು ಹೀಗೆ ಎಲ್ಲಾ ಪ್ರಕಾರಗಳಲ್ಲಿ ಅಷ್ಟೆ ಪ್ರಬಲವಾದ ಅಭಿವ್ಯಕ್ತಿಯನ್ನ ಹೊರಸೂಸಿರುವ ಪ್ರೊ. ಶಿರಗಾನಹಳ್ಳಿ ಶಾಂತನಾಯ್ಕ ಇಂಗ್ಲಿಷ್‌ನಲ್ಲೂ ಕೂಡ ಅಷ್ಟೆ ಪ್ರಬಲವಾಗಿ ಬರೆಯುವ ಸಾಮರ್ಥ್ಯವನ್ನು ಉಳ್ಳವರಾಗಿದ್ದಾರೆ. ಸುಮಾರು ಎಂಟು ಇಂಗ್ಲಿಷ್ ಲೇಖನಗಳ ಸಂಗ್ರಹಗಳು, ಗೋರ್‌ವಾಟಿನ್ ಅನ್ ಎಂಡಿಂಗ್ ಜತ್ನಿ ಎನ್ನುವ ಕಾದಂಬರಿ, 'ಬಂಜಾರ ವಾರಿಯರ್' (ವೇರಾಳು) ಎನ್ನುವ ನಾಟಕವನ್ನು ಭಾರತೀಯ ಓದುಗರಿಗೆ ನೀಡಿದ್ದಾರೆ. ಇತ್ತೀಚೆಗೆ ಇವರು ಅಮೇರಿಕಾದ ಮ್ಯಾಡಿಸನ್ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಆಹ್ವಾನದ ಮೇಲೆ ಆದಿವಾಸಿ ಬಂಜಾರರ ಸಾಂಸ್ಕೃತಿಕ ಹಿನ್ನೆಲೆಗಳು ಹಾಗೂ ಆದಿವಾಸಿ ಶಿಕ್ಷಣ ವ್ಯವಸ್ಥೆಯ ಮೇಲೆ ಭಾಷಣವನ್ನು ಮಾಡಿದ್ದಾರೆ. ಇವರ ಕತೆಗಳಿಗೆ ಪಾ.ಪು ಪ್ರಶಸ್ತಿ, ಮುಂಬೈನ ಪತ್ರಿಕೆ ನೀಡುವ ಬಿಲ್ಲವ ಪ್ರಶಸ್ತಿ ಗುಲ್ಬರ್ಗ ವಿವಿ ರಾಜ್ಯೋತ್ಸವ ಪ್ರಶಸ್ತಿ ಹೀಗೆ ಅನೇಕ ಬಹುಮಾನಗಳಿಗೆ ಪಾತ್ರರಾಗಿ ಲಂಬಾಣಿ ಸಮುದಾಯದ ಬಹುಮುಖ್ಯ ಪ್ರತಿಭಾವಂತ ವಿದ್ವಾಂಸರಾಗಿದ್ದಾರೆ. ಹೀಗೆ ಮುಂದಿನ ದಿನಗಳಲ್ಲಿ ಅಲಕ್ಷಿತ ಸಮುದಾಯಗಳ ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಜೊತೆಗೆ ಅಲೆಮಾರಿ ಬುಡಕಟ್ಟುಗಳ ಅಭಿವೃದ್ಧಿಗೆ ಬಹುಮುಖ್ಯ ಅಸ್ತ್ರ ಶಿಕ್ಷಣಕ್ಕೆ ಒತ್ತು ಕೊಡುವ ಅಥವಾ ಸಮುದಾಯಗಳಲ್ಲಿ ಜಾಗೃತಿ ಮೂಡಿಸಬೇಕಿದೆ. ಹಾಗೇಯೇ ಪ್ರೊ ಶಾಂತನಾಯ್ಕರವರು ತಮಗೆ ಸಿಕ್ಕಂತ ಅಧಿಕಾರದ ಅವಧಿಯಲ್ಲಿ ತಮ್ಮಂತ ಅನೇಕ ಅಲೆಮಾರಿ ಬುಡಕಟ್ಟು ಸಮುದಾಯಗಳ ಪ್ರತಿಭಾವಂತ ವಿಧ್ಯಾರ್ಥಿಗಳು, ಪದವಿದರು ಉದ್ಯೋಗಗಳಲ್ಲಿ ಅವಕಾಶ ವಂಚಿತರಾಗುತ್ತಿದ್ದಾರೆ ಅಂತಹವರಿಗೆ ಬೆನ್ನುತಟ್ಟುವ ಪ್ರೊತ್ಸಾಹಿಸುವ ಕಾರ್ಯವನ್ನು ಮಾಡಿ ಪ್ರೊ ಶಾಂತನಾಯ್ಕರವರ ಹಾಗೆ ಬೆಳೆದಾಗ ಅವರ ವೃತ್ತಿ ಜೀವನಕ್ಕೆ ಸಾರ್ಥಕತೆ ಆಗುತ್ತದೆ ಎಂದು ತಿಳಿದು ಅವರಲ್ಲಿ ಮನವಿ ಮಾಡಿಕೊಳ್ಳುವೆ. ಅವರಂತೆ ಬುಡಕಟ್ಟು ಸಮುದಾಯಗಳಲ್ಲಿ ಹುಟ್ಟಿ ಬೆಳೆದ ಪ್ರೊ ಕೆ ಎಂ ಮೇತ್ರಿ ಗುರುಗಳು ತಮ್ಮ ವೃತ್ತಿ ಜೀವನದ ಜೊತೆಜೊತೆಗೆ ನೂರಾರು ಅಲೆಮಾರಿ, ಆದಿವಾಸಿ, ಬುಡಕಟ್ಟು ಸಮುದಾಯಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದುಕೊಂಡು ಅವರ ಅಭಿವೃದ್ಧಿಗೆ ಪೂರಕವಾಗಿ ಪ್ರಮಾಣಿಕವಾಗಿ ಕೆಲಸಮಾಡಿ ಸಮುದಾಯಗಳ

ಬೆನ್ನೆಲುಬಾಗಿ ಕಾರ್ಯನಿರ್ವಹಿಸಿ ನಮ್ಮಂತ ಅನೇಕ ಅಲೆಮಾರಿ ಬುಡಕಟ್ಟು ಸಮುದಾಯಗಳನ್ನು ಸಮಾಜದಲ್ಲಿ ಗುರುತಿಸುವಂತೆ ಮಾಡಿದ್ದಾರೆ ಜೊತೆಗೆ ಅವರಲ್ಲಿರುವ ಅಗಾಧವಾದ ಜ್ಞಾನಸಂಪತ್ತನ್ನು ವಿಶ್ವವಿದ್ಯಾಲಯಗಳಲ್ಲಿ ದಾಖಲಾಗುವಂತೆ ಮಾಡಿದ್ದಾರೆ. ಅಲೆಮಾರಿ ಬುಡಕಟ್ಟು ಸಮುದಾಯಗಳ ಅಂಬೇಡ್ಕರ್ ಎಂದರೆ ತಪ್ಪಾಗಲಾರದು. ಇಂತವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿರುವುದು ಈ ಕಾರ್ಯಕ್ರಮಕ್ಕೆ ಘನತೆ ಹೆಚ್ಚಿಸಿದೆ, ಹೀಗೆಯೇ ಪ್ರೊ ಶಾಂತನಾಯ್ಕರವರನ್ನು ಕೂಡ ಆ ನಿಟ್ಟಿನಲ್ಲಿ ಕನಸು ಕಾಣುವೆ ಮತ್ತು ಭಾವಿಸುವೆ.. ಜೈಭೀಮ್..

ಡಾ. ವೇಷ್ಗಾರು ರಾಮಾಂಜಿನೇಯ (ಅಶ್ವ ರಾಮು), ಅತಿಥಿ ಉಪನ್ಯಾಸಕರು, ಶ್ರೀ ಸರಳಾದೇವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ

ಡಾ. ಶಾಂತನಾಯ್ಕ ಶಿರಗಾನಹಳ್ಳಿ ಅವರ "ಕತ್ತಲು ಕರಗುವ ಮುನ್ನ" ಕಾದಂಬರಿ ವಿಮರ್ಶೆ

ಸುರೇಶ ನಾಯ್ಕ ಆರ್.

ಲೇಖಕರ ಪರಿಚಯ: ಡಾ. ಶಿರಗಾನಹಳ್ಳಿ ಶಾಂತನಾಯ್ಕ ಎನ್. ರವರು ದಿನಾಂಕ 01.01.1965 ರಂದು ತಂದೆ ಗಾಂಗ್ಯನಾಯ್ಕ ಅಲಿಯಾಸ್ ನಾಗ್ಯಾನಾಯ್ಕ ತಾಯಿ ಕೇಳಿಬಾಯಿ ಅವರ ಸುಪುತ್ರರಾಗಿ ಶಿರಗಾನಹಳ್ಳಿಯ ಲಂಬಾಣಿ ಸಮುದಾಯದಲ್ಲಿ ಜನಿಸಿದ ಇವರು ತಮ್ಮ ಶಿಕ್ಷಣವನ್ನು ಹರಪನಹಳ್ಳಿಯಲ್ಲಿಯು ಹಾಗೂ ಸ್ನಾತಕ, ಎಂ.ಎ ಇಂಗ್ಲೀಷ್ ಹಾಗೂ ಪಿಹೆಚ್.ಡಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪೂರ್ಣಗೊಳಿಸಿದ ಇವರು ತಮ್ಮ ಸಾಹಿತ್ಯಕ ಕೃಷಿಯನ್ನು ವಿದ್ಯಾರ್ಥಿ ಜೀವನದಲ್ಲೆ ಪ್ರಾರಂಭಿಸಿರುತ್ತಾರೆ ಇದು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ 150ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಪಡೆಯಲು ಸಹಾಯಕವಾಗಿರುತ್ತದೆ. ತಮ್ಮ ಉಪನ್ಯಾಸಕ ವೃತ್ತಿಯಲ್ಲಿ ಕ್ರಿಯಶೀಲರಾಗಿಯು ಸಾಮಾಜಿಕ ಏರಿಳಿತಗಳನ್ನು ತಮ್ಮ ಸಾಹಿತ್ಯಕ ದೃಷ್ಠಿಕೋನದ ಸ್ಪರ್ಶದಿಂದ ಆಧುನಿಕ ಕನ್ನಡ ಸಾಹಿತ್ಯಕ ಪರಿಶ್ರಮದ ಫಲಿತಾಂಶದ ರೂಪವಾಗಿ ಅನೇಕ ಕವನಗಳು, ನಾಟಕಗಳು, ಕಥಾಸಂಕಲನಗಳನ್ನು ಬಂಡಾಯದ ಸಾಹಿತ್ಯಿಕ ಧ್ವನಿಯಿಂದ ರಚನೆಮಾಡಿ ಸರ್ಕಾರಿ ಇಲಾಖೆಗಳು, ಪ್ರತಿಷ್ಠಾನಗಳು, ಸಮಾಜಸೇವಾ ಸಂಸ್ಥೆಗಳಿಂದ ಪ್ರಶಸ್ತಿಗಳನ್ನು ಮತ್ತು ಪ್ರಶಂಸೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

1. ಪೀಠಿಕೆ:

ಆಧುನಿಕ ಸಾಹಿತ್ಯ ಓದುಗರಿಗೆ ಮತ್ತು ಸಾಹಿತ್ಯದ ತಿಳುವಳಿಕೆ ಇಲ್ಲದ ನನ್ನಂತಹ ಓದುಗಾರಿಗೆ ಸಾಹಿತ್ಯದ ಅಮಲನ್ನು ಡಾ. ಶಿರಗಾನಹಳ್ಳಿ ಶಾಂತನಾಯ್ಕ ಎನ್. ರವರು ತಮ್ಮ ಕತ್ತಲು ಕರಗುವ ಮುನ್ನ ಕಾದಂಬರಿಯ ಮೂಲಕ ಗಹನವಾದ ಸಾಹಿತ್ಯಿಕ ಚಿಂತನೆಯನ್ನು ನನ್ನಾಳಕ್ಕಿಳಿಯುವ ಮುನ್ನ... ಹೆಪ್ಪುಗಟ್ಟಿದ ಬದುಕಿನ ಅನುಭವವನ್ನು ಕಿತ್ತಾಗ ಹೊರಹೊಮ್ಮಿದ ತಮ್ಮ ಅನಿಸಿಕೆಯನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ

ಎನ್ನವುದರ ಜೊತೆಗೆ ಸರ್ವಶ್ರೇಷ್ಠ ಕಾದಂಬರಿಕಾರನೆಂಬ ಬಿಗುಮಾನ ನನಗಿಲ್ಲಾ, ಎನ್ನುತಲೇ ನನ್ನಂತೆ ಅಪಮಾನ, ಅವಮಾನ ಮತ್ತು ಹೊಸ ಬದುಕಿನ ಒತ್ತಾಸೆಯೊಳಗೆ ಕನಸು ಕಮರಿದ ಜನರು ಹಾಗೂ ಜಾತಿ ವ್ಯವಸ್ಥೆಗೆ ಎದೆಯೊಡ್ಡಿದ ಯುವಕರು. ಜಾತಿಯ ಕಾರಣದಿಂದಲೇ ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಅನುಭವಿಸುವ ತಳಮಳವನ್ನು ಸರಳ ಧಾರವಾಡ ಭಾಷೆಯಲ್ಲಿ ಬಹು ಬೇಗನೆ ಮನಮುಟ್ಟುವುದರೊಂದಿಗೆ, ಪಾತ್ರಗಳು ಓದುಗರು ಕಥೆಯ ಭಾಗವಾಗಿ ಮತ್ತೆ-ಮತ್ತೆ ಓದಬೇಕೆನ್ನಿಸುವಂತಹ ಜನರ ಕಥೆ ಇದು.

2. ಪಾತ್ರಗಳು

ಮೈಸೂರು, ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, 2004ರಲ್ಲಿ ಕಾದಂಬರಿ ಮುದ್ರಿಸಲಾಗಿದೆ, ಈ ಕಾದಂಬರಿಯಲ್ಲಿ ಬರುವ ಪಾತ್ರಗಳ ಸಂಖ್ಯೆಗಳಿಗಿಂತಲು ಸನ್ನಿವೇಶಗಳು ಮತ್ತು ಶೀರ್ಷಿಕೆಗಳ ಮೂಲಕ ತಾವು ಅನುಭವಿಸಿದ ಕಷ್ಟಗಳನ್ನು ಮನಮುಟ್ಟುವುಂತೆ ಕಥಾ ವಸ್ತುವುನ್ನು ತಳ ಸಮುದಾಯದ ಪ್ರತಿಯೂಬ್ಬ ವ್ಯಕ್ತಿಯ ನೋವನ್ನು ಲಂಬಾಣಿ ಸಮುದಾಯದ ಪ್ರಭುವಿನ ಮೂಲಕ ಕಟ್ಟಿದ್ದಾರೆ.

ಈ ನೆನಪುಗಳೇ ಹೀಗೆ
ಹಳೆ ಮನೆಯ ಧೂಳಿನಂಗೆ
ಒಟ್ಟುಗೂಡುತ್ತವೆ ಗುಡ್ಡದಂಗೆ
ಹೆಪ್ಪು ಗಟ್ಟುತ್ತವೆ ಹಿಮಾಲಯದಂಗೆ

2.1 ಪ್ರಭು:

ಕಾದಂಬರಿಯ ಕಥಾನಾಯಕ ಬಾಲ್ಯದ ನೆನಪುಗಳ ಜೊತೆ ಪ್ರಸುತ್ತತೆಯಲ್ಲಿ ಜೀವಿಸುವ ಪ್ರಯತ್ನದಲ್ಲಿ ಮಾಡಿದ ಮತ್ತು ಮಾಡದ ತಪ್ಪುಗಳಿಂದ ತನ್ನ ಜೀವನ ಮತ್ತು ವೃತ್ತಿಯಲ್ಲಿ ಕಿರುಕುಳ, ಪ್ರೀತಿ, ಸ್ನೇಹ, ಮತ್ತು ನಾಯಕ ಪದೇ ಪದೇ ಮಾಡುವ ಪಾಪನೀವೇದನೆ ಯುಕ್ತವಯಸ್ಸಲ್ಲಿ ನಡೆಯುವ ಘಟನೆಗಳು

2.2 ಮಲ್ಲಿಕ : ಶಿರಗೂರಿನ ಸುಂದರಿ ಶ್ರೀಮಂತ ಡಾ.ಹಳ್ಳೆಪ್ಪ ಕುಟುಂಬದ ಕುಡಿ ತನ್ನ ಕಾಲೇಜಿನ ಸಮವಯಸ್ಸಿನ ತನ್ನ ಸಮುದಾಯದವನ್ನಲದ ಉಪನ್ಯಾಸಕನನ್ನು ಪ್ರೀತಿಸುವುದರೊಂದಿಗೆ ತನ್ನ ಅನೇಕ ಸಹಪಾಠಿಗಳ ಪ್ರೀತಿಯನ್ನು ದಿಕ್ಕರಿಸಿ, ಕೊನೆಗೆ ತನ್ನ ತಂದೆಯ ಇಚ್ಛೆಯಂತೆ ವಿವಾಹವಾದ ನಂತರವು ನಾಯಕನ ಪತನಕ್ಕೆ ಕಾರಣವಾಗುವ ನಾಯಕಿ

2.3 ಪ್ರೊ. ಕಂಪಣ್ಣ : ಪ್ರಭುವಿನ ಅಚ್ಚುಮೆಚ್ಚಿನ ಅಂತಿಮ ವರ್ಷದಲ್ಲಿ ಫೇಲ್ ಆಗಲು ಕಾರಣಕರ್ತ ಮೈಕ ಮುಂದೆ ಸಮಸಮಾಜದ ಆರ್ದಶದ ನುಡಿಗಳು ವೃತ್ತಿಯಲ್ಲಿ

ಉಪನ್ಯಾಸನಾಗಿದ್ದರು ತನ್ನ ಸಮುದಾಯದ ವಿಧ್ಯಾರ್ಥಿಗಳ ಹಿತಕ್ಕಾಗಿ ಏಕಲ್ಯವರನ್ನು ಸೃಷ್ಟಿಸುವ ಕಲಾಕಾರ ಗೋಮುಖಿ.

2.4 ಪಾಟೀಲ್ ಸಿರಂಗಣ್ಣ : ಹಣ, ಬಡತನ, ಅಸಹಾಯಕ ತಾಂಡದ ಹೆಣ್ಣಿನ ಜೀತಜೀವನ ಉಣ್ಣುವ ಹಾಗೂ ಮತ್ತು ಶೋಷಣೆ, ದಬ್ಬಾಳಿಕೆ ನಮ್ಮ ಹಕ್ಕೆನ್ನುವ ಜಾಮೀನದಾರ

2.5 ಪ್ರೊ. ಘಂಟಿಮಠ: ಪ್ರಭುವಿನ ಉಪನ್ಯಾಸಕ ವೃತ್ತಿಯ ಲೇಖಕ, ಸಾಮಾಜಿಕ ಚಟುವಟಿಕೆಗಳಿಲ್ಲಿ ಕ್ರಿಯಾಶೀಲ ಕನ್ನಡ ಮಾಸ್ತರ, ಪ್ರವಾಚಕ ಸಾಮರ್ಥ್ಯವಿಲ್ಲದ ಹಿರಿಜೀವ.

2.6 ಸಂಗಣ್ಣ: ಏಕಪುಸ್ತಕದ ಸ್ವಯಂ ಘೋಷಿತ ಖ್ಯಾತನಾಮ ಲೇಖಕ ಮತ್ತು ಮಾತುಗಾರ

2.7 ಪ್ರಿನ್ಸಿಪಾಲ ಪಾಪೇಶಿ ಪಾಟೀಲ್: ಹೆಸರಿನಂತೆಯೇ ಪಾಪ ದುಷ್ಟರ ಕೂಟದಲ್ಲಿನ ವಿಭೀಷಣ ಪ್ರಭುವಿನ ಪಾಲಿನ ಹನುಮಂತ

2.8 ಜಿಂಗಲಸ್ವಾಮಿ : ಛೇರ್ಮನ್ ಅಪ್ಪಿ ಕಾಲೇಜ್ ಸಭ್ಯ ಸಾಹುಕಾರ

2.9 ಸದ್ರಿ ಮೇಷ್ಟ್ರು, ಒಕ್ಕಣ್ಣಿನ ಕುತಂತ್ರಿ, ದಫಲಿಶೆಟ್ಟಿ, ಹೊಂಗಣ್ಣ ಜಾತಿಯ ಭೂತಹಿಡಿದ ಆ ಮೂವರ ಮಹಾದುಷ್ಟಕೂಟದ ಸದಸ್ಯರು

2.10 ಡೋಣ್ವಾಡ: ಪ್ರಭುವಿನ ಕಾಲೇಜ್‌ನ ಮತ್ತು ಶಿರಗೂರಿನ ಮಾಹಿತಿದಾರ ಒಂದು ಅರ್ಥದಲ್ಲಿ ಶಿರಗೂರಿನ ಮಾಹಿತಿ ಕೋಶ

2.11 ಕುಸಬಣ್ಣ : ಕಮಿನೀಷ್ಟ, ಜಾತ್ಯಾತೀತ ಜಾತಿವಾದಿ ಅಂತರಿಕ ರಾಷ್ಟ್ರೀಯ ದೇಶನಾಯಕ

2.12 ಪೆತ್ಲಪ್ಪ ಮತ್ತು ಭರಮಕ್ಕ : ಹದಿಮೂರು ಮಕ್ಕಳ ಜೀವ ಮತ್ತು ಜೀವನಕ್ಕೆ ನೌಗ ಹೊತ್ತವರು, ಪ್ರಭುವಿನ ಜನ್ಮದಾತರು

2.13 ಪಟಗಾರ : ಪ್ರಭುವಿನ ಮೋಹ ಮುಸುಕಿದ ಸಂಜೆಯ ನಿರ್ದೇಶಕ ಮತ್ತು ಸಾಧಕ ಮಿತ್ರ

2.14 ಸೂಫಿ: ಎಲ್ಲಾ ಕಥೆಗಳಲ್ಲಿ ಇರುವ ಸರಳಸುಂದರಿ ನಾಯಕಿಯ ಪ್ರತಿನಡೆಯ ಸಾಕ್ಷಿ ಮಲ್ಲಿಕಾಳ ಸ್ನೇಹಿತೆ

2.15 ದುರ್ಗೇಶೀ: ಸ್ನೇಹಿತೆ (ಸೂಫಿ) ಕೊಟ್ಟ ಮಲ್ಲಿಕಾಳ ಅಣ್ಣ

2.16 ರುದ್ರೇಶಿ: ಪ್ರಭುವಿನ ಚುಣಾವಣಾ ರಥದ ಮಾಲಿಕ

2.17 ಜತ್ತನಾಯ್ಕ : ಜೂವೂರ ತಾಂಡದ ಪಂಚಾಯಿತಿ ಸದಸ್ಯ ಸಿಟ್ಟಿಂಗ್ ಎಂ.ಎಲ್.ಎಯ ವಿರೋಧಿ

2.18 ಹಂಡು ಪಾಟೀಲ್: ಕ್ಷಣದೊಳಗೆ ಅಡಗಿದ ಕಾಲದಿಂದ ಪ್ರಭುವನ್ನು ರಕ್ಷಸಿದ ಸಂಜೀವಿನಿ ಸಹಪಾಠಿಗೆಳಯ

2.19 ಕೊಟ್ರಶೆಟ್ಟಿ : ಸುಮ್ಮಿಪಾಲಿನ ನಕ್ಷತ್ರಿಕ, ಪ್ರಭು ಮತ್ತು ಕಾಲೇಜ್‌ನ ಬೇತಾಳ

2.20 ವಸಂತ : ಸರ್ಕಾರಿ ಕಾಲೇಜಿನ ಉಪನ್ಯಾಸಕ ಮತ್ತು ಪ್ರಭುವಿನ ಸಂಜೆಯ ವಾಯುವಿಹಾರದ ಸಹ ಸದಸ್ಯ

2.21 ಉಮ್ಮಣ್ಣ, ಬೆಂಡಿ ಬಸವ ಮತ್ತು ಕುಳ್ಳಿ ಹೂಸ ದುಷ್ಟಕೂಟದ ಸದಸ್ಯರು

2.22 ಕುಂಬಾರ : ಮನ್ಮಥ ಉಪನ್ಯಾಸಕ

2.23 ರೋಜಿ: ಬೆಂಗಳೂರು ಲಾಲ್‌ಬಾಗ್ ಚೆಲುವಿ ಪ್ರಭುವಿನ ಜೀವನದ ಎರಡನೇ ನಾಯಕಿ

2.24 ದೇಗಲೊರಿನ ಪ್ರಿನ್ಸಿಪಾಲರು: ಸಭ್ಯ ಮಾನವೀಯ ಗುಣಗಳನ್ನು ಹೊಂದಿರುವ ಪ್ರಭುವಿನ ಪಾಲಿನ ತಂದೆ.

3. ಕಾದಂಬರಿಯ ಉದ್ದೇಶ:

ಮಾತುಗಳೆ ಇಲ್ಲದ ಮೌನದ ನಡುವೆ
ಭಾವನೆಗಳು ಹಾಡುಕಟ್ಟುತ್ತವೆ
ಬಟಾಬಯಲಾದ ಬೆಟ್ಟದಂತಹ ಬದುಕು
ತೆರೆದುಕೊಳ್ಳುತ್ತವೆ ಹಗಲು ವೇಷದ ಹುರುಪಿನಂದದಿ
ನನ್ನೊಳಗಿನ ಮನುಜ ದಿಕ್ಕುದೆಸೆ ಕಾಣದವ ಹೆಪ್ಪು ಗಟ್ಟದ ವ್ಯವಸ್ಥೆಯೊಳಗೆ
ಹೆಮ್ಮರವಾಗುಲೆ ಮುಗಿಲು ಮುಟ್ಟಿದವ
ಬತ್ತಿದ ಸೆಲೆಯೊಳಗೆ ಬೊಗಸೆ ನೀರ ಹುಡುಕುತ್ತಾ
ಬದುಕಿರಿವ ಜನರೆದೆಯೊಳಗೆ ನಿಜ ಮನುಷ್ಯನ ಹುದುಕುವವ

ತಾಂಡ ಜನರ ಮನೋಭಾವ, ನಿಸ್ವಾರ್ಥತೆ, ಕಷ್ಟ, ಶಿಕ್ಷಣದಲ್ಲಿನ ಜಾತಿವಾದ, ಯುವಕನ ಬದುಕನ್ನು ಕಟ್ಟುವ ಛಲ ಇವೆಲ್ಲವುಗಳ ದರ್ಶನವೇ ಈ ಕೃತಿಯ ಉದ್ದೇಶವೆಂದು ಓದುವಾಗ ನಮಗೆ ಮನದಟ್ಟಾಗುತ್ತದೆ. ಜಾತಿಯ ನೆಲೆಯಲ್ಲಿ ಆ ವಿದ್ಯಾರ್ಥಿ, ಉಪನ್ಯಾಸಕ, ಯುವಕ ಎಂಥ ಹಿಂಸೆಯನ್ನು ಅನುಭವಿಸುತ್ತನೆ ಹಾಗೂ ತಮ್ಮ ಜಾತಿಯ ಹಿತಕ್ಕಾಗಿ ಮೇಲೆತ್ತುವ ಚಟಕ್ಕಾಗಿ ವಿದ್ಯಾರ್ಥಿಯ ಜೀವನದ ಜೊತೆ ಅಕ್ಷರ ಪ್ರವೃತ್ತಿಯವರ ಶತಶತಮಾನಗಳಿಂದಲೂ ಆಡುವ ಆಟಗಳು, ಈ ಕಾದಂಬರಿಯ ಲೇಖಕರು ಇದು ಕಾಲ್ಪನಿಕ ಎಂದರು ಇದು ಸಮಾಜದ ನಿಜ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ.

4. ಕಾದಂಬರಿಯ ವಿಶ್ಲೇಷಣೆ ಹಾಗೂ ವಿರ್ಮಶೆ :

ಕೃತಿಯ ಸಾರವನ್ನು ಸಂಕ್ಷಿಪ್ತವಾಗಿ ಹೇಳುವುದು ಕಷ್ಟ ಸಾಧ್ಯವೆ ಸರಿ ಆದರೂ ಹೇಳಬೇಕೆಂದರೆ ಕೃತಿ ನಿರೂಪಕ ಕಳೆದುಹೋದ ಪ್ರಭುವಿನ ಮಾನ ಸನ್ಮಾನವನ್ನು ಪಡೆಯಲು ತಳ ವರ್ಗದ ಯುವಕ ಶಿಕ್ಷಣ ಪಡೆಯುವ ಹಾದಿಯಲ್ಲಿ ಅನುಭಾವಿಸುವ ಜಾತಿ ವ್ಯವಸ್ಥೆಯ ತಾರತ್ಯಮ್ಯ, ಕಥಾನಾಯಕನ ಪ್ರೇಮ ವ್ಯವಹಾರ, ವಿದ್ಯಾರ್ಥಿನಿಯರ ಜತೆಗಿರುವ ಸ್ನೇಹದಿಂದ ಇತರೆ ಉಪನ್ಯಾಸಕರಿಂದ ಜಾತಿನಿಂದನೆ, ಕುತಂತ್ರಗಳು ಪ್ರೇಮ ವಿಫಲತೆ ಚುನಾವಣೆ ಪರ್ವ ಹಣ ಮತ್ತು ಜಾತಿಯ ಕಾರಣದಿಂದ ಗರ್ವಭಂಗ ಮತ್ತೆ ಮತ್ತೆ ನಾಯಕ ತನ್ನ ಪತನದಿಂದ ಫಿನಿಕ್ಸ ಹಕ್ಕಿಯಂತೆ ಮತ್ತೆ ಆರಂಭಿಸುವು ಜೀವನ ತನ್ನ ಸಮುದಾಯದ ಹೆಣ್ಣಿನ ತಂದೆ ತಾಯಿ ಕಷ್ಟವನ್ನು ನೆನಪುಮಾಡುವುದು, ಪದೇ ಪದೇ ಭರವಸೆಯನ್ನು ಕಳೆದುಕೊಳ್ಳುವ ನಾಯಕ, ಹೆಣ್ಣುಗಳ ಕಾರಣದಿಂದಲೆ ಯುವಕ ತನ್ನ ಜೀವನದ ಪ್ರತಿ ಹಂತದಲ್ಲು ಕಷ್ಟವನ್ನು ಅನುಭವಿಸುವುದು ಕಥೆ ಪ್ರತಿಯೊಂದು ಹಂತದಲ್ಲಿ ತನ್ನ ಪಾಪ ನೀವೇದಾನೆ ಅಂತಿಮವಾಗಿ ಕಥಾನಾಯಕನ ಅಪಹರಣ ಮತ್ತು ಕೊಲೆಯ ಪ್ರಯತ್ನ ಅರೆಜೀವವಾಗಿ ತನ್ನ ಸಾವಿನ ಮಾಹಿತಿಯನ್ನು ನೀಡುವುದು ನಂತರ ಪ್ರಭುವಿನ ಕಥೆಯೇನು ಎನ್ನುವುದನ್ನು ಲೇಖಕರು ತಳಿಸುವುದಿಲ್ಲ ಇದು ಸಹ ಅಂತಿಮ ಕ್ಷಣದಲ್ಲಿ ಚಲನಚಿತ್ರದ ಪಾತ್ರದಂತೆ ತನ್ನ ಮುಂದಿನ ಭಾಗವಾಗಿ ಬರಬಹುದೆನೋ ಎನ್ನುವ ನೀರಿಕ್ಷೆಯಲ್ಲಿ.

ಇಲ್ಲಿ ಹೋದರೋ ಅವರು
ನಮ್ಮ ಬದುಕನ್ನ ನಿಮಗೆ ಕೊಡುತ್ತೇವೆ ಎಂದವರು
ಬದುಕೆ ಹೀಗಿರಬೇಕು. .ಅವಕಾಶವಾದಿಗಳು ಅವಕಾಶಹೀನರಿ
ಎಂಬ ಹಳೆಯ ಮಾತು ಅನ್ವಯಿಸದು

5. ಸಾಮಾಜಿಕ ದರ್ಶನ:

ಕಾದಂಬರಿಯ ಬಹುಪಾಲು ನಾವು ಕಾಣುವುದು ಜನರ ಸಾಮಾಜಿಕ ದರ್ಶನ, ಇದನ್ನು ಶಾಂತ ನಾಯ್ಕರು ತಮ್ಮ ಕೃತಿಯಲ್ಲಿ ಪ್ರಭುವಿನ ಮೂಲಕ ಪರಿಚಯಿಸುತ್ತಾರೆ. ಇದನ್ನರಿಯಲು ಈ ಕೃತಿಯನ್ನು ಓಮ್ಮಯಾದರು ಓದಿ ತಿಳಿಯಬೇಕು. ಓದುತ್ತಾ ಹೋದಂತೆಲ್ಲಾ ನಮ್ಮ ಮನಸ್ಸು ಪ್ರಭುವಿನೊಂದಿಗೆ ಪಯಣಿಸಿ. ಪ್ರಭುವಿನೊಳಗೆ ಹೊಕ್ಕಾಗ ಮಾತ್ರ ಜೀವನದ ಕಷ್ಟಗಳು ಕಾಣಸಿಗುತ್ತವೆ. ಅದರ ಜೊತೆಗೆ ಜಾತಿ-ಜಾತಿಗಳ ನಡುವಿನ ತಾರತಮ್ಯ, ಶೋಷಣೆ, ಶಿಕ್ಷಣದಲ್ಲಿ ಜಾತಿಯ ಪಾರುಪತ್ಯ, ಗುರು-ಶಿಷ್ಯರಲ್ಲಿ ಜಾತಿ ಸ್ನೇಹ, ಪರಜಾತಿಯ ಶಿಕ್ಷಕನ ಆರ್ಹತೆಗಿಂತ ಶಿಕ್ಷಕರಲ್ಲಿನ ಜಾತಿಯ ಮಮತೆ, ಹಂಡುವಿನ

ಗೆಳೆತನ, ಹಳೇ ಪ್ರೇಮದ ಹೊಸ ಗಾಯಗಳು ಬೆಂಬಿಡದ ನೆರಳು, ಕ್ಷಮಿಸುವ ಗುಣವಿಲ್ಲದ ಸಹಾಧ್ಯಾಪಕ ಜಾತಿ ನೊಣಗಳು.

ಗೂಡುಬಿಟ್ಟು ಹಾರುವುದಿಲ್ಲ ಪಾರಿವಾಳಗಳು,
ದೊಡ್ಡೂರಿನ ಮಂದಿಯ (ಜಾತಿ) ಬಂದೂಕುಗಳಿಗೆ ಹೆದರಿ
ರೆಕ್ಕೆ ಮುದುರಿ ಕೋಕ್ಕ ಕುಟ್ಟುತ (ಹಣೆಯಬರಕೆ) ಮರಕೆ

6. ಸ್ಪಂದಿಸುವ ಗುಣ:

ಕಥೆಯ ಪ್ರತಿಹಂತದಲ್ಲು ಪ್ರಭುವನ್ನು ಕಾಡುತ್ತಿದ್ದು ಪ್ರಮುಖವಾಗಿ ಎರಡು ವಿಷಯ. ಒಂದು ಜಾತಿ, ಇನ್ನೊಂದು ಪ್ರೀತಿಯ ಜಾತಿಜನ. ಜೀವನ ವ್ಯವಹಾರಕ್ಕಿಂತಲೂ ಹೆಚ್ಚು ಜಾತಿ ಜೀವಂತವೆನಿಸುತ್ತವೆ ಶಿಕ್ಷಣ ಸಂಸ್ಥೆಗಳಲ್ಲೂ ಜಾತಿಯ ಗುಂಪುಗಾರಿಕೆ, ಪ್ರಿನ್ಸಪಾಲ್ ರೂಪದ ಮಾನವೀಯ ಜನರು ಪ್ರತಿಭೆಗೆ ಒತ್ತುನೀಡುವುದು, ಜಾತಿಶಿಕ್ಷಕರ ವಿಕೃತ ನಡೆ ಜಾತಿಯ ಬೆಂಬಲದಿಂದ ವಿಜೃಂಭಿಸುವುದು ಮಾನವತೆಯು ನಾಗರೀಕನೆಂಬ ಶಿಕ್ಷಿತನಲ್ಲಿಲ್ಲಾ ಅದು ಅನಾಗರೀಕ ಎನ್ನುವ ಅಶಿಕ್ಷಿತನಲ್ಲಂದೆನುವುದನ್ನು ಕೃತಿಯು ಅಂತಿಮ ಕ್ಷಣದ ಪ್ರಭುವಿನ ರಕ್ಷಣೆಯೊಂದಿಗೆ ಖಾತ್ರಿಗೊಳ್ಳುತ್ತದೆ.

7. ಸುಖಾಂತ್ಯದ ಸುಳಿವು:

ಪ್ರಭುವಿನ ಹೋರಾಟ ಸುಖಾಂತ್ಯದ ಸುಳಿವು ಓದುಗನ ಭಾವಕೋಶದಲ್ಲಿ ನಗುವೊಂದನ್ನು ಮೂಡಿಸಿ ಪ್ರಭುವಿನ ಹೊಸ ಜೀವನದ ಸುಳಿವು ನನಸಾಗಿದ್ದರೆ ಚೆನ್ನಾಗಿರುತ್ತಿತ್ತು. ಲೇಖಕರು ಪ್ರಭುವಿನ ಯಾತನೆಯನ್ನು ಕೋನೆಗಾಣಿಸಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳಬಹುದಾಗಿದೆ

8. ಕೊನೆ ಮಾತು:

ಲೇಖಕರ ಕವಿತೆಗಳಲ್ಲಿ
ಕ್ಯಾಂಪಸ್ಸುಗಳ ಕೋತಿಗಳು..
ಜಾತಿ ಬೇಲಿಯ ಹೆಣೆದು ಇವನ್ಯಾರವ ಇವನ್ಯಾರವ..
ಧಮ್ಮದ ಮಲಿನಲಿ.. ಕಡಿಮೆ ಅಂಕ ಕರುಣಿಸುವ
ತನಗಾಗದ್ದು ಬೇರೆಯವರಿಗೆ ಸಾಧ್ಯವೆ. ಗುರುವ ಮೀರುವ ಶಿಷ್ಯನಿಲ್ಲ
ತಲೆ ತಿರುಕ ಪ್ರೊಪೆಸರ್ ಒಬ್ಬನ ಪ್ರಲಾಪ
ಅವರು ಸಾಯುವುದಿಲ್ಲ ಇವರು ಬಿಡುವುದೇ ಇಲ್ಲಾ
ಯಾತಕ್ಕಾಗಿ ಈ ಸಂಘರ್ಷ
ಸತ್ತವರ ಸಂತಾಪ ಸಭೆಯೊಳಗೆ ಮೊಸಳೆ ಕಣ್ಣಿರು

ಮಡಿದವರೆ ಅಮರ ಹುತಾತ್ಮರು ನೀವು ಎಂಬ ಹೆಗ್ಗಳಿಕೆ

ಬಿಸಿಲ ಗುದುರೆ ಬೆನ್ನೇರಿ

ಬದುಕನ್ನು ಹಿಡಿಯಲು ಹಠತೊಟ್ಟು

ಹಸಿದು ಸ್ಮಶಾನ ಸೇರಿದ (ಪ್ರಭು) ಅಜ್ಜ.

ಕೃತಿ ಹೇಳುವುದಾದರೆ ನನ್ನಂತಹ ಸಾಹಿತ್ಯದ ಅರಿವಿಲ್ಲದ ಆಸಕ್ತನಿಗೆ ಉತ್ತಮ ಕೃತಿ ಹೀಗೆ ಇದೆ ಎಂದು ವಿಮರ್ಶಿಸಲು ಸಾಧ್ಯವಿಲ್ಲ ಅದನ್ನು ಓದಿಯೇ ಪ್ರಭುವಿನ ಆಂತರಾಳವನ್ನು ಅನುಭವಿಸಬೇಕು, ಕಥೆಯ ಪಾತ್ರಗಳೊಳಗೆ ಹೊಕ್ಕಿ, ಕಥಾಗಾರನ ನಿರೂಪಣೆಯೊಳಗೆ ಮುಳಗಿ ಆಪಾತ್ರಗಳಲ್ಲೊಂದಾಗಿ ಅಲ್ಲೇ ನಾವು ಸ್ಥಿರವಾಗಬೇಕೆಂದು ಮನ ಬಯಸಿ ನಿಜವಾದ ಅನುಭೂತಿಯನ್ನು ನೀಡುವ ಕೃತಿಯಾಗಿದೆ.

ಮನಷ್ಯ ಮನುಷ್ಯತ್ವದೊಂದಿಗೆ ಜೀವಿಸಬೇಕಾಗಿದೆ, ಜಾತಿಯೊಂದಿಗೆಯಲ್ಲ ಅಂದಾಗ ಮಾತ್ರ ಸ್ನೇಹಪರವಾಗಿ ಜೀವಿಸಲು ಸಾಧ್ಯ. ಲೇಖಕರಲ್ಲಿ ಒಂದು ಮನವಿ ಏನೆಂದರೆ ಪ್ರಭುವಿನ ಮುಂದಿನ ಪ್ರಯಾಣಯಲ್ಲಿ ಮತ್ತು ಹೇಗೆ ಎಂದು ತಿಳಿಸಿದ್ದರೆ ಉತ್ತಮಾವಾಗಿತ್ತು.

ಸುರೇಶ ನಾಯ್ಕ ಆರ್ ಸಂಶೋದಾನರ್ಥಿ ಸಮಾಜಕಾರ್ಯ ಆಧ್ಯಾನ ವಿಭಾಗ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

ಒಂದು ಹಗಲು ಎರಡು ರಾತ್ರಿಗಳು

ಹೇಮೇಶ್ವರ ಕುರುಬರ

ಈ ಕಾದಂಬರಿ ನಾವು ಓದುತ್ತಾ ಹೋದಂತೆ ಹಲವಾರು ವಿಚಾರಗಳನ್ನು ತಿಳಿಯುತ್ತಾ ಹೋಗುತ್ತೇವೆ. ಇದರ ಹೆಸರು ಕೇಳಿದಾಗ ಎಂತಹ ಒಬ್ಬರಿಗೂ ಮನಸ್ಸಿನಲ್ಲಿ ನಾನಾ ರೀತಿಯ ವಿಚಾರಗಳು ಮನಸ್ಸಿನಲ್ಲಿ ಹುಟ್ಟುತ್ತವೆ.

ನಾವು ಪ್ರಪಂಚದಲ್ಲಿ ಪ್ರತಿಯೊಬ್ಬರಲ್ಲಿ ಶೃಂಗಾರ ಭಾವಗಳನ್ನು ಕಾಣುತ್ತಾ ಹೋಗುತ್ತೇವೆ. ಮಾನವರು ತಾವು ಪ್ರೀತಿ, ಪ್ರೇಮ, ಪ್ರಣಯಗಳು ಜೀವನದಲ್ಲಿ ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ.

ಪ್ರತಿಯೊಂದು ಕುಟುಂಬದಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆ ಮುಖ್ಯವಾಗಿ ಬೇಕಾಗುತ್ತದೆ. ಅದೇ ನಾನು ತೆಗೆದುಕೊಂಡ ಕಾದಂಬರಿಯಲ್ಲಿ ಹಳ್ಳಿಯ ಜೀವನ ನಡೆಸಿಕೊಂಡು ಪೇಟೆಯ ಜೀವನಕ್ಕೆ ಬಂದ ಹುಡುಗ ಪಟ್ಟಣಗಳಲ್ಲಿ ಖಾಸಗಿ ಸಂಸ್ಥೆಯಲ್ಲಿ ಆಂಗ್ಲಭಾಷೆಯಲ್ಲಿ ವಿದ್ಯಾಭ್ಯಾಸ ಮುಗಿಸಿದ ಹುಡುಗಿಯರ ನಡುವೆ ನಡೆಯುವ ಪ್ರೀತಿ, ಪ್ರಣಯಗಳು, ಎಲ್ಲರನ್ನೂ ಗೆಲ್ಲುವಂತಹ ಕೌಶಲ್ಯವುಳ್ಳವನು, ಏನೂ ಅರಿಯದ ಹಳ್ಳಿಯ ಹುಡುಗನಲ್ಲಿ ಅಡಗಿರುವಂತಹ ಕೌಶಲ್ಯಗಳು ಅವನತ್ತ ಕೈಮಾಡಿ ತೋರಿಸುತ್ತಿದ್ದವು.

ಪ್ರೀತಿ ಎನ್ನುವುದು ಯಾವುದೇ ರೀತಿಯಾಗಿ ಬಣ್ಣ, ಆಸ್ತಿ, ಅಂತಸ್ತು, ಕುಲ-ಜಾತಿಯಿಂದ ಹುಟ್ಟುವಂತದ್ದಲ್ಲ. ಇಲ್ಲಿ ಒಬ್ಬ ಹಳ್ಳಿಯ ಹುಡುಗನು ಅವನಿಗೆ ಗಮ್ಮಾರ ಎಂಬ ಹೆಸರಿನಿಂದ ಕರೆದು ನಮ್ಮ ಕಾದಂಬರಿಕಾರರಾದ ಎಸ್. ಶಾಂತಾನಾಯ್ಕರವರ ಕಾದಂಬರಿಯಲ್ಲಿ ಪ್ರತಿಯೊಂದು ಪದವು ಮನಸ್ಸಿಗೆ ತಟ್ಟುವಂತಹ ಪದಗಳಾಗಿ ಇರುವುದು, ಪ್ರತಿಯೊಂದು ಪಾತ್ರಗಳ ಹೆಸರು ಮರೆಯಲು ಆಗದಂತೆ ಕಾದಂಬರಿಯಲ್ಲಿ ನಾಮಕರಣ ಮಾಡಿರುವುದು ಕಾದಂಬರಿಕಾರರ ಆಶಯವಾಗಿದೆ.

ಇಲ್ಲಿ ನಾವು ಹಳ್ಳಿ ಜೀವನದ ಪರಿಸ್ಥಿತಿಯನ್ನು ನೋಡುತ್ತಾ ಹೋದರೆ ಅಲ್ಲಿ ಜೀವನ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿಯರ ನಡುವೆ ದಿನನಿತ್ಯ ಜೀವನದಲ್ಲಿ

ಅವರವರ ಕಾಯಕ್ಕೆ ಸಾಗುವುದು ಕಂಡು ಬರುತ್ತದೆ. ತಂದೆ ಹೇಳಿದ ಮಾತಿನಲ್ಲಿ ನಡೆಯುವಂತದ್ದು ಹಳ್ಳಿಜೀವನದಲ್ಲಿ ನಾವು ಕಾಣುತ್ತಾ ಹೋಗುತ್ತೇವೆ.

ತಂದೆಯ ಮಾತುಮೀರಿ ಮನೆಯಲ್ಲಿ ಭಯದ ವಾತಾವರಣ ಸೃಷ್ಟಿಸುವ ಹಳ್ಳಿಜೀವನದ ದಿನನಿತ್ಯದ ಜಂಜಾಟವನ್ನು ನಾವು ಕಾಣುತ್ತಾ ಹೋಗುತ್ತೇವೆ. ಅದೇ ರೀತಿಯಾದ ಈ ಕಾದಂಬರಿಕಾರರ ದೃಷ್ಟಿಯಲ್ಲಿ ಈ ಹುಡುಗನ ಜೀವನವನ್ನು ತನ್ನ ಜೀವನಕ್ಕೆ ಹೋಲಿಸಿ ಬರೆಯುವುದು ಕಾದಂಬರಿಕಾರರ ನಿಜವಾದ ಆಶಯ ಹೊರಗಡೆ ಚೆಲ್ಲುತ್ತದೆ,

ಅದೇ ರೀತಿಯಾಗಿ ಈ ಹಳ್ಳಿಯ ಹುಡುಗ ಮಿಸ್ಟರ್ ಗಮ್ಮಾರಗೆ ತಾನು ಉನ್ನತ ವಿದ್ಯಾಭ್ಯಾಸಕ್ಕೆ ತಾನು ತನ್ನ ತಂದೆ–ತಾಯಿಯನ್ನು ಬಿಟ್ಟು ಪ್ಯಾಟೆಗೆ ಬಂದು ಅಲ್ಲಿ ತಾನು ಎಲ್ಲಾ ವಿಷಯಗಳಲ್ಲಿ ಮುಂದಾಳತ್ವವನ್ನು ವಹಿಸಿಕೊಂಡು ಹಾಡುವುದು, ಕ್ರೀಡೆಗಳ ಚಟುವಟಿಕೆ, ನಾಟಕ, ಭಾಷಣ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಂದಾಳತ್ವವನ್ನು ವಹಿಸಿಕೊಂಡು ತಾನು ಹಾಡುವುದು ಕೇಳಿದರೆ ಅಲ್ಲಿರುವ ಎಲ್ಲರಿಗೂ ಇಷ್ಟವಾಗುವಂತಹ ಹುಡುಗನಾಗಿದ್ದ ಮಿ.ಗಮ್ಮಾರನು.

ಎಂ.ಎ.ಪದವಿಗೆ ಪೇಟೆಗೆ ಬಂದ ಗಮ್ಮಾರನು ತನ್ನ ಹಳ್ಳಿಯ ಜೀವನವನ್ನು ನೆನೆಸಿಕೊಂಡು, ಅಲ್ಲಿರುವ ಜನರ ಆಟಗಳನ್ನು ಕಂಡು, ತನ್ನ ನೆಮ್ಮದಿ ಜೀವನ ಹಳ್ಳಿಜೀವನ ಪೇಟೆಯಲ್ಲಿರುವ ಮಧ್ಯಮವರ್ಗದ ಜನರು ಅನ್ಯಾಯಗಳನ್ನು ಕಂಡು ಮರುಗುತ್ತಿದ್ದ.

ಪ್ಯಾಟೆ ಜನರ ನಡುವೆ ಜೀವನ ನಡೆಸುವುದು ಬಹಳ ಕಷ್ಟಕರ ಜೀವನ ಎಂಬುದು ಗಮ್ಮಾರನಿಗೆ ತಿಳಿದಿತ್ತು. ಅದನ್ನು ಕಂಡು ಗಮ್ಮಾರ ಎಚ್ಚೆತ್ತುಕೊಂಡಿದ್ದ ನಾನು ಯಾವ ರೀತಿಯಾಗಿ ಇದ್ದರೆ ನನಗೆ ಬೆಲೆ ಎಂಬುದು ತಿಳಿದುಕೊಂಡು ಅಲ್ಲಿನ ಜನರಿಗೆ ಹೊಂದಾಣಿಕೆಯಾಗಿ ಪ್ಯಾಟೆ ಜೀವನಕ್ಕೆ ಸರಿಯಾದ.

ಅಲ್ಲಿ ತಾನು ಹೋದ ಮೇಲೆ ಅಲ್ಲಿರುವ ಸ್ತ್ರೀ ಅಥವಾ ಹುಡುಗಿ ಗಮ್ಮಾರನ ಹೃದಯವನ್ನು ಸ್ಪರ್ಶವಾಗುತ್ತದೆ ಹಾಗು ಅವನು ಅವಳ ಮನಸ್ಸಿನ ನೋಟಕ್ಕೆ ಬಿದ್ದ ಮಿ.ಕ್ಯಾಟ್ಸ್‌ಗೆ ಜೋತುಬಿದ್ದು ಅಲ್ಲಿ ತನ್ನ ಪ್ರೀತಿಯನ್ನು ಅವಳಿಗೆ ಹೇಳದೆ ಒಬ್ಬನೇ ಅಂತರಾಳದಲ್ಲಿ ದಿನಾಲೂ ಪ್ರೀತಿಯನ್ನು ಸವೆಯುವುದು ಕಂಡುಬರುತ್ತದೆ.

ಗಮ್ಮಾರನಿಗೆ ಆ ಹುಡುಗಿ ಅಷ್ಟು ಸುಂದರಿಯಾಗಿ ಕಾಣದಿದ್ದರೂ ಅವಳ ಮುಖಭಾವಕ್ಕೆ, ನಡಿಗೆ, ನೋಟ, ಅವಳ ಮಾತುಗಳು ಅವನಿಗೆ ಹುಚ್ಚು ಹಿಡಿಸುವುದು ಹೆಚ್ಚಾಗಿರುವುದು ನಾವು ಕಾಣಬಹುದು.

ಗಮ್ಮಾರನಿಗೆ ಮಿ.ಕ್ಯಾಟ್ಸ್ ಮೇಲೆ ಪ್ರೀತಿ ಹೆಚ್ಚಾಗಿ ಮನಸ್ಸಿನಲ್ಲಿ ಅವಳನ್ನು ಮರೆಯಲು ಮನಸ್ಸು ಒಪ್ಪುವುದು ಬಹಳಷ್ಟು ಕಷ್ಟಕರವಾಗಿ ಕಂಡುಬರುತ್ತದೆ. ಅದೇ ರೀತಿಯಾಗಿ

ಜೀವನದಲ್ಲಿ ಹೆಣ್ಣು, ಹೊನ್ನು, ಮಣ್ಣು ಈ ಮೂರು ಬಹಳಷ್ಟು ಮುಖ್ಯವಾಗಿ ಬೇಕಾಗುತ್ತದೆ. ಈ ಮೂರು ಸಾವಿರಾರು ವರ್ಷಗಳ ಪುಣ್ಯವಿರಬೇಕು, ಹೆಣ್ಣು ಹೆಂಡತಿಯಾಗಿ ಬಂದು ಕೊನೆಯವರೆಗೆ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿ ಜೀವನ ನಡೆಸುತ್ತಾಳೆ. ಹೆಣ್ಣು ಜೀವನ ಸಂಗಾತಿಯಾಗಿ ಮನೆಯ ಜ್ಯೋತಿಯಾಗುತ್ತಾಳೆ. ತಂದೆ-ತಾಯಿಯನ್ನು ಬಿಟ್ಟು ಗಂಡ ಎಂಬವರ ಜೊತೆಯಲ್ಲಿ ಕೊನೆಯುಸಿರು ಇರುವವರೆಗೆ ಜೀವನ ನಡೆಸುವುದು ನಾವು ಕಾಣುತ್ತೇವೆ.

ಅದೇ ರೀತಿಯಾಗಿ ಗಮ್ಮಾರನು ತಾನು ಇಷ್ಟಪಟ್ಟ ಹುಡುಗಿ ಮಿ.ಕ್ಯಾಟ್ಸ್ ಜೊತೆಯಲ್ಲಿ ನಾನು ಜೀವನ ಸಾಗಿಸುವುದು ಬೇಕು ಎಂದು ಕೊನೆಯವರೆಗೆ ಜೀವನದಲ್ಲಿ ಬಾಳ್ವೆ ಮಾಡಬೇಕು ಎಂಬ ಆಸೆಯನ್ನು ಇಟ್ಟುಕೊಂಡವನು ಗಮ್ಮಾರ ಆದರೆ, ಮಿ.ಕ್ಯಾಟ್ಸ್ ಗಮ್ಮಾರನ ಕಂಡರೆ ಉರಿ ಉರಿಯಾಗಿ ನೋಡುವಳು ಮಿ.ಕ್ಯಾಟ್ಸ್ ಆದರೆ ಅವನಿಗೆ ಮನಸ್ಸಿನ ತುಂಬೆಲ್ಲಾ ಅವಳದೇ ನೆನಪು, ಅವಳದೇ ಗುಂಗಿನಲ್ಲಿದ್ದವನು ನಮ್ಮ ಗಮ್ಮಾರ.

ಗಮ್ಮಾರ ದೊಡ್ಡ ವಿಶ್ವವಿದ್ಯಾಲಯದಲ್ಲಿ ಓದುವ ಸಂದರ್ಭದಲ್ಲಿ ಅಲ್ಲಿ ಒಂದು ಶಿಬಿರಕ್ಕೆ ಹೋಗುವ ಅವಕಾಶಗಳು ಎಲ್ಲಾ ಗಮ್ಮಾರನಿಗೆ ಸಲ್ಲುತ್ತಿತ್ತು ಆದರೆ ಅಲ್ಲಿ ಮಂತ್ರಿ ಮಗನ ಹಣ ಬಲದಿಂದ ಅವನು ಕೂಡಾ ಶಿಬಿರಕ್ಕೆ ಹೋಗಬೇಕು ಎಂದು ತಂದೆಯಾದ ಮಂತ್ರಿಗೆ ಹೇಳಿ ವಿಶ್ವವಿದ್ಯಾಲಯದ ನೆರವಿನಿಂದ ಅವನು ತಯಾರಿ ನಡೆಸುತ್ತಾನೆ. ಶಿಬಿರಕ್ಕೆ ಹತ್ತುಜನ ಹೋಗಬೇಕು. ಇದರಲ್ಲಿ 5 ಗಂಡು, 5 ಹೆಣ್ಣು ಹೋಗಬೇಕು, ಶಿಬಿರಕ್ಕೆ ಹೋಗಲು ದೊಡ್ಡಮಟ್ಟದಲ್ಲಿ ವಿಶ್ವವಿದ್ಯಾಲಯದಲ್ಲಿ ಸಂದರ್ಶನ ಏರ್ಪಡಿಸಿ ಆಯ್ಕೆ ಮಾಡುವುದು. ಆದರೆ ಗಮ್ಮಾರ ಅಲ್ಲಿನ ಎಲ್ಲಾರ ಬೋಧಕ, ಬೋಧಕೇತರ ಸಿಬ್ಬಂದಿಗೆ ಬಹಳಷ್ಟು ಆತ್ಮೀಯನಾಗಿರುವುದು ಎಲ್ಲಾರಿಗೂ ಗೊತ್ತಿತ್ತು. ಆದರೆ ತನ್ನ ನೆಚ್ಚಿನ ಗುರುಗಳಿಗೆ ತುಂಬಾ ಆತ್ಮೀಯನಾಗಿರುವುದು ಎಲ್ಲಾರಿಗೂ ತಿಳಿದಿತ್ತು. ಹಾಡು, ನಾಟಕ, ಕತೆ, ಸಮಾಜಸೇವೆ ಇವೆಲ್ಲವೂ ಗಮ್ಮಾರನ ಕಾಯಕವಾಗಿತ್ತು.

ಶಿಬಿರಕ್ಕೆ ಒಂದು ತಿಂಗಳ ಕಾಲ ಎಲ್ಲಾ ತಯಾರಿಯನ್ನು ಗಮ್ಮಾರನು ನಡೆಸಿಕೊಂಡಿದ್ದ. ತಾನು ಮತ್ತು ತನ್ನ ಸ್ನೇಹಿತ ಇಂಜನಿಯರಿಂಗ್ ಓದುತ್ತಿದ್ದ ಗೆಳೆಯ ಇಬ್ಬರು ಶಿಬಿರಕ್ಕೆ ಹೋಗಲು ತಯಾರಿ ನಡೆಸಿದ್ದರು. ತಯಾರಿ ಮಾಡಿಕೊಂಡು ಹೊರಡಲು ಎಲ್ಲಾ ವ್ಯವಸ್ಥೆಯ ಜೊತೆಗೆ ರೆಡಿಯಾಗಿ 1992 ಡಿಸೆಂಬರ್ 25 ರಂದು ಇವರ ಪ್ರಯಾಣ ನಡೆಸಿದರು. ಅವರ ಜೊತೆ ಒಬ್ಬ ಶಿಕ್ಷಕರು ಹೊರಟರು. 5ಜನ ಗಂಡು, 5ಜನ ಹೆಣ್ಣು, ಒಬ್ಬ ಮೇಷ್ಟ್ರು ಸೇರಿಕೊಂಡು ರೈಲು ನಿಲ್ದಾಣದಲ್ಲಿ ಸೇರಿಕೊಂಡು ಅಲ್ಲಿಂದ ಪ್ರಯಾಣ ಬೆಳೆಸುವುದು. ಎಲ್ಲಾರ ಗುರಿಯಾಗಿತ್ತು. ಒಂದು ತಿಂಗಳ ಶಿಬಿರಕ್ಕೆ ಮಿ.ಕ್ಯಾಟ್ಸ್ ಕೂಡಾ ಆಯ್ಕೆ ಆಗಿ ಬಂದಿದ್ದರು. ಇದನ್ನು ನೋಡಿ ಇಡೀ ತಂಡ ದಂಗಾಗಿತ್ತು.

ಅವಳನ್ನು ನೋಡಿದ ಮಿ.ಗಮ್ಮಾರ ಹಲ್ಲುಕಿತ್ತ ಹಾವಿನಂಗ, ಪುಂಗಿ ಊದಿದರೆ ತಲೆ ಅಲ್ಲಾಡಿಸುವಂತೆ ಅವಳ ಹಿಂದೆ ಅಡ್ಡಾಡ ತೊಡಗಿದ.

ಮಿ.ಗಮ್ಮಾರ, ಮಿ.ಕ್ಯಾಟ್ಸ್ ಎಂದರೆ ಅದೇನು ಅವನಿಗೆ ಇಂಗುತಿಂದ ಮಂಗನಂತೆ ಆಡ್ತಿದ್ನೋ ಗೊತ್ತಿಲ್ಲಾ. ಅವಳಿಗೆ ಅವನ ಮನಸ್ಸು ಸೋತು ದಿನನಿತ್ಯ ಅವಳ ಗುಂಗಿನಲ್ಲಿ ತೇಲಾಡುವ ಹುಡುಗ ನಮ್ಮ ಮಿ.ಗಮ್ಮಾರ.

ಮಿ.ಕ್ಯಾಟ್ಸ್ ಮತ್ತು ಇನ್ನೂ ಉಳಿದವರು ಎಲ್ಲಾರೂ ಕೂಡಿ ಶಿಬಿರಕ್ಕೆ ಹೊರಟರು. ರೈಲಿನಲ್ಲಿ ಪ್ರಯಾಣ ಮಾಡುವಾಗ ನಮ್ಮ ಗಮ್ಮಾರನು ಸಂಗೀತವನ್ನು ಹಾಡಲು ಪ್ರಾರಂಭಿಸಿದ. ಇಡೀ ಬೋಗಿಯಲ್ಲಿದ್ದ ಜನರು ನಿಶ್ಯಬ್ಧವಾಗಿ ಹಾಡು ಕೇಳಲು ಮುಂದಾದರೂ ಅದನ್ನು ನೋಡಿದ ಅಲ್ಲಿರುವ ಮಿ.ಕ್ಯಾಟ್ಸ್‌ಗೆ ಮನಸ್ಸಿನಲ್ಲಿ ಮುಖ ಮತ್ತು ಮೂತಿ ತಿರುವಿ ತಿರುವಿ ಮಾಡುತ್ತಿದ್ದಳು. ಅವಳ ಜೊತೆಯಲ್ಲಿದ್ದ ನಾಲ್ಕು ಹುಡುಗಿಯರಿಗೆ ನಮ್ಮ ಗಮ್ಮಾರ ತುಂಬಾ ಇಷ್ಟವಾಗಿಬಿಟ್ಟ, ಬಹಳಷ್ಟು ಕಾಳಜಿಯನ್ನು ಅವನ ಮೇಲೆ ತೋರಿಸುವುದು ಹೆಚ್ಚಾಗಿತ್ತು. ಆದರೆ ಮಿ.ಕ್ಯಾಟ್ಸ್‌ಗೆ ಹೊಟ್ಟೆಯೊಳಗೆ ಉರಿ ಉರಿಯನ್ನು ಕಟ್ಟಿಕೊಂಡು ನಿಂತುಬಿಟ್ಟಿದ್ದಳು. ನಮ್ಮ ಗಮ್ಮಾರ ಅವಳನ್ನು ಪ್ರೀತಿಯಲ್ಲಿ ಮುಳುಗಿಸಬೇಕು ಎಂಬುದು ಅವನಿಗೆ ಹೆಚ್ಚಾಗಿತ್ತು. ಆದರೆ ಅವಳು ಇವನ ಪ್ರೀತಿಯ ಅಂಬಲಿಯನ್ನು ಸವಿಯಲು ಮೂಗು ಮುರಿಯುವುದು ಹೆಚ್ಚಾಗಿ ಕಂಡುಬರುತ್ತದೆ.

ಮಿ.ಗಮ್ಮಾರ ಶಿಬಿರದ 150 ಹುಡುಗಿಯರಿಗೆ ದೊಡ್ಡ ಹೀರೋ ಆಗಿದ್ದ, ಇವನ ಹಾಡು, ಕಥೆ, ನಾಟಕಕ್ಕೆ ಎಲ್ಲರೂ ಮಾರುಹೋಗಿದ್ದರು. ಇವನು ಅಷ್ಟು ಹುಡುಗಿಯರ ನಿದ್ದೆ ಕೆಡಿಸಿರುವುದು ಕಂಡುಬರುತ್ತದೆ. ಅವನ ಮೇಲೆ ಪ್ರೀತಿ ಉಕ್ಕಿ ಹರಿಯುವಂತೆ ಮಾಡಿದ್ದ ಗಮ್ಮಾರ. ಆದರೆ ಮಿ.ಕ್ಯಾಟ್ಸ್ ಕೋಪ ಇಳಿದು ಅವನ ಜೊತೆ ತುಂಬಾ ಸಲೀಸಾಗಿ ಮಾತನಾಡಿದಳು. ಎಲ್ಲಿ ನೋಡಿದರೂ ನಿಮ್ಮದೇ ಹೆಸರು.

ಶಿಬಿರದಲ್ಲಿ ತಾವು ಮಾರ್ಚ್‌ಫಾಸ್ಟ್ ಮಾಡಿ ಅಲ್ಲಿ ತೋರಿಸಿ ದಿನನಿತ್ಯದ ಊಟದ ಸವಿಯನ್ನು ನೆನಪಿಸಿಕೊಳ್ಳುತ್ತಾ ಮಿ.ಗಮ್ಮಾರ ತಾನು ರಚಿಸಿದ ಕವಿತೆಗಳು ಎಲ್ಲಾವು. ಮಿ.ಕ್ಯಾಟ್ಸ್‌ನ್ನು ಹೋಲಿಸಿ ರಚನೆ ಮಾಡಿತ್ತು.

ಇವರು ಶಿಬಿರ ಮುಗಿಸಿಕೊಂಡು ಎಲ್ಲಾರೂ ಮರಳಿ ತಮ್ಮ ಊರಿಗೆ ಪ್ರಯಾಣ ಬೆಳೆಸಿದರು. ಅಲ್ಲಿಂದ ಸೀದಾ ಗಮ್ಮಾರ ಮಿ.ಕ್ಯಾಟ್ಸ್ ಅವರ ಮನೆಗೆ ಹೋಗಿ ಅಲ್ಲಿ ತನ್ನ ಕುಟುಂಬದವರಿಗೆ ಅವರ ಮನೆಯಲ್ಲಿ ಒಂದು ----ಯನ್ನು ಖರೀದಿ ಮಾಡುತ್ತಾನೆ.

ಇಲ್ಲಿ ನಾವು ಹೆಣ್ಣಿನ ಮೇಲೆ ಆಕರ್ಷಣೆ ಸಹಜವಾದ ಮನಸ್ಸಿನ ಹಂಬಲವಾಗಿರುತ್ತದೆ. ವಯಸ್ಸಿನಲ್ಲಿ ಕ್ರಿಯೆಗಳು ನಡೆಯುವುದು, ಅವೆಲ್ಲ ಎಲ್ಲಾರಿಗೂ ನಿರಂತರ ಪ್ರಕ್ರಿಯೆ

ಆಗಿರುತ್ತದೆ. ಒಂದು ಹೆಣ್ಣು ಗಂಡುನ್ನ ಆಕರ್ಷಿಸುವುದು ಪ್ರಕೃತಿ ದತ್ತ ನಿರಂತರವಾದ ಪ್ರಕ್ರಿಯೆ ಆಗಿರುತ್ತದೆ.

ಇದೇ ರೀತಿಯಾಗಿ ಮಿ.ಗಮ್ಮಾರ ಮಿ.ಕ್ಯಾಟ್ಸ್‌ನ ಮೇಲೆ ಹೆಚ್ಚಾಗಿಯೇ ಪ್ರೀತಿಯ ಮಡಿಲಲ್ಲಿ ಬಿದ್ದು ಒದ್ದಾಡುವುದು ಈ ಕಾದಂಬರಿಯ ಮುಖ್ಯಘಟ್ಟವಾಗಿರುವುದು ಕಂಡುಬರುತ್ತದೆ.

ಪ್ರೀತಿಯನ್ನು ಗೆಲ್ಲಬೇಕು, ಗೆದ್ದು ಈಸಬೇಕು ಎಂಬುವುದು ನಮಗೆ ತಿಳಿದಿದೆ. ಪ್ರೀತಿಯಲ್ಲಿ ಎರಡು ಮನಸ್ಸುಗಳು ಒಂದಾಗಿ ಎರಡು ದೇಹಗಳು ಒಂದಾಗಿರಲು ಕಾಪಾಡಿಕೊಳ್ಳುವುದು ಪ್ರೀತಿಯ ನಿಜವಾದ ಧ್ಯೇಯ, ಉದ್ದೇಶವಾಗಿರುತ್ತದೆ. ಪ್ರೀತಿಯಲ್ಲಿ ಹೆಣ್ಣು, ಗಂಡು ಇಬ್ಬರು ಮನಸ್ಸು ಒಡೆದು ಹೋಗದಂತೆ ಇರಬೇಕು. ಒಮ್ಮೆ ಮನಸ್ಸು ಒಬ್ಬರಿಗೆ ಮೀಸಲಾಗಿ ಇದ್ದರೆ ಮತ್ತೆ ಹರಿದಾಡುವಂತೆ ಬಿಡಬಾರದು. ನಿಂತ ನೀರನ್ನು ನಂಬುವುದು ಮತ್ತು ಹರಿಯುವ ನೀರನ್ನು ನಂಬಲು ಅಸಾಧ್ಯ.

ಹೆಣ್ಣಿನ ಬಲೆ, ನೀರಿನ ಜಲೆ, ತಿಳಿದವರು ಯಾರೂ ಇಲ್ಲ ಎಂಬಂತೆ ಹೆಣ್ಣು ಒಂದು ಮಾಯೆ, ಸುಖದಲ್ಲಿ ಸಂತೋಷ ಸಿಗದಿದ್ದಾಗ ಸುಖಕ್ಕೋಸ್ಕರ ಇನ್ನೊಬ್ಬರನ್ನು ಹುಡುಕಿ ಹೋಗುವುದು ನಾವು ಕಾಣುತ್ತೇವೆ.

ಹೆಣ್ಣು ಊರು ತಿರುಗುವುದು ಒಳ್ಳೆಯದಲ್ಲ, ಗಂಡು ಮನೆಯಲ್ಲಿರುವುದು ಒಳ್ಳೆಯದಲ್ಲ. ಹೆಣ್ಣು ತಿರುಗಿ ಕೆಟ್ಟರೆ ಗಂಡು ಮನೆಯಲ್ಲಿ ಇದ್ದು ಕೆಡುತ್ತಾನೆ ಎಂಬುವುದು ಅರಿತುಕೊಳ್ಳಬೇಕು.

ನಾಯಕ ಮಿ.ಗಮ್ಮಾರ ಮತ್ತು 2ನೇ ಕ್ಯಾಂಪ್ ಅಥವಾ ಶಿಬಿರಕ್ಕೆ ಹೊರಟಿದ್ದರು. ಅಲ್ಲಿ ಕೂಡಾ ಮಿ.ಕ್ಯಾಟ್ಸ್ ಭಾಗವಹಿಸಿದಳು. ಅಲ್ಲಿ ಮತ್ತೆ ಮೂರು ಹುಡುಗಿಯರ ಜೊತೆ ಇದ್ದ ನಮ್ಮ ಗಮ್ಮಾರ ಇಲ್ಲಿ ಧಾರವಾಡ, ಹುಬ್ಬಳ್ಳಿಯಿಂದ ಬಂದವರು ಆದರೆ 70 ಜನರಲ್ಲಿ ಮುಖ್ಯವಾಗಿ ನಮ್ಮ ನಾಯಕನಾಗಿದ್ದ ಗಮ್ಮಾರ ನಾಯಕನಾಗಿದ್ದ ಮೊದಲ ಸ್ಥಾನದಲ್ಲಿ ಅವರೆಲ್ಲರ ಜವಾಬ್ದಾರಿಯನ್ನು ತೆಗೆದುಕೊಂಡವನು ನಮ್ಮ ಗಮ್ಮಾರ ಈ ಮೂರು ಹುಡುಗಿಯರು ಊಟವನ್ನು ಬಾಯಿಯಲ್ಲಿ ತಿನ್ನಿಸುವರು, ಕಾಳಜಿ ಮಾಡುವವರು. ಈ ಮೂವರು ರೈಲಿನಲ್ಲಿ ಪರಿಚಯಿತರು, ಬೆಳಗಾವಿಯ ಮಿಸ್ ಅಡವಿ, ಕುಬ್ಬಳ್ಳಿಯ ಮಿಸ್ ರೇವತಿ, ಮಿಸ್ ಸುಮತಿ ಇವರು ಮಿ.ಗಮ್ಮಾರನ ಮೇಲೆ ಪ್ರೀತಿ, ಅಭಿಮಾನ ಉಕ್ಕಿ ಹರಿಯುತ್ತಿತ್ತು, ಇದೆಲ್ಲ ಮಿ.ಕ್ಯಾಟ್ಸ್ ಮೇಲೆ ಮಾನಸಿಕ ಅತ್ಯಾಚಾರಕ್ಕೆ ಇಷ್ಟೆಲ್ಲಾ ನಮ್ಮ ಗಮ್ಮಾರ ಮಾಡುತ್ತಿದ್ದ.

ಆದರೆ ಮಿ.ಗಮ್ಮಾರನು ಕುಬ್ಬಳ್ಳಿಯಿಂದ ಬಂದ ಮಿಸ್ ರೇವತಿ ಬಿಳಿಗಣ್ಣಿನ ಬೆಡಗಿ ಮೇಲೆ ಮೋಹ ಹೆಚ್ಚಾಗಿ ಅವಳನ್ನು ಮನಸ್ಸಿನಲ್ಲಿ ತುಂಬಾ ಅಚ್ಕೊಂಡು ಅವಳನ್ನೇ

ಒಲಿಸಿಕೊಳ್ಳಲು ಮುಂದಾಗುತ್ತಾನೆ. ಆದರೆ ಅವಳ ಜೊತೆಯಲ್ಲಿ ಇದ್ದ ಮಿಸ್ ಅಡವಿ ಮತ್ತು ಮಿಸ್ ಸುಮತಿ ದೊಡ್ಡಸ್ತಿಕೆಯನ್ನು ಉಪಯೋಗಿಸಿಕೊಂಡು ಕಾಲನೂಕಿದರೆ ಮಿ.ಗಮ್ಮಾರ ಮಿ.ರೇವತಿ ಸಲುವಾಗಿ ವಿಪರೀತ ತಲೆಕೆಡಿಸಿಕೊಂಡಿರೋ ಹಾಗಿಗಿತ್ತು. ಮಿಸ್ ರೇವತಿ ಮತ್ತೊಬ್ಬರ ಹೆಗಲಮೇಲೆ ಬಂದೂಕು ಇಟ್ಟು ಇವನನ್ನು ಹೊಡೆದು ಉರುಳಿಸಲು ಯೋಜನೆ ಹಾಕ್ಕೊಂಡಿದ್ದು ಮಿ.ಗಮ್ಮಾರನ ತಲೆಕೆಟ್ಟು ಹೋಗಿತ್ತು.

ಆಕಡೆ ಮಿಸ್ ಕ್ಯಾಟ್ಸ್ ಆಟ ಆಡಿಸುತ್ತಿದ್ದಾಳೆ ಈಕಡೆ ಮಿಸ್ ರೇವತಿ. ಆಟ ಆಡಿಸುತ್ತಿದ್ದಾಳೆ. 'ಇವತ್ತೊಂದು ನಿರ್ಧಾರಕ್ಕೆ ಬರ್ಲೇ ಬೇಕು" ಎಂದು ಅಂದ್ಕೊಂಡವನೆ ಬಿಳಿದೊಗಲಿನವಳನ್ನು ಹಿಡಿದು ಕೇಳಿದಾಗ ಅವಳು ಅಡ್ಡಗೋಡೆಮೇಲೆ ದೀಪ ಇಟ್ಟಂತೆ "ಮಿ.ಗಮ್ಮಾರ ನೀವ್ಯಾಕೆ ಹಿಂಗ ಅಪ್‌ಸೆಟ್ ಆಗಿರ ರಿಯಲ್ಲ" ಆಯ್ಯಮ್ಮ ನೆತ್ತಿ ಮೇಲೆ ಹೊಡೆದಂಗೆ ಹೇಳಿ ಅವನೆದುರೆ ಮತ್ತೊಬ್ಬನೊಂದಿಗೆ ಜಂಬದಿಂದ ಭುಜಕ್ಕೆ ಭುಜವಾಗಿಸಿ ನಗತೊಡಗಿದ್ಲು, ಕ್ಯಾಂಪಿನಲ್ಲಿ ಮಿಸ್ ರೇವತಿ ಅವನ ಜೊತೆಗೂಡಿ ಊಟ ಮತ್ತು ನಗೆಪಟಾಕಿ ಬೀರುತ್ತಿದ್ದಳು. ಮಿ.ಗಮ್ಮಾರನಿಗೆ ಇವರನ್ನು ಹೇಗೆ ಅರ್ಥಮಾಡಿಕೊಳ್ಳುವುದು ಎಂಬುವುದು ಅವನಿಗೆ ತಿಳಿಯದಾಗಿತ್ತು. ಕ್ಯಾಂಪ್ ಮುಗಿಸಿಕೊಂಡು ಮತ್ತೆ ತಮ್ಮ ಊರಿಗೆ ವಾಪಸ್ಸು ಆಗುತ್ತಿದ್ದರು. ಮೊದಲು ಹೊರಟಾಗ ಎಲ್ಲಾ ಊರುಗಳನ್ನು ರೈಲು ಹಿಂದಕ್ಕೆ ಮಾಡಿ ಹೋಗುತ್ತಿತ್ತು. 2 ಸ್ಟಾಪ್ ಮಿಸ್ ರೇವತಿ ಕುಬ್ಬಳ್ಳಿ ನಿಲ್ದಾಣ ಬಂದೇ ಬಿಟ್ಟಿತ್ತು. ಅವಳು ಇಳಿದು ನೀವು ಇನ್ನೂ ಬಹಳ ಮುಂದು ಹೋಗ್ತಿದ್ದಾರೆ. ಇಳಿದು ಸುರಕ್ಷತೆಯಿಂದ ಹಾಸ್ಟಲ್‌ಗೆ ಹೋಗಿ ಎಂದು ಚುಚ್ಚುಮಾತಿನಿಂದ ಹೇಳಿದಳು. ಆದರೆ ಗಮ್ಮಾರ ತನ್ನ ಮನಸ್ಸಿನಲ್ಲಿ ತೇಲಾಡುತ್ತಿದ್ದ ಹಾಗಾದರೆ ಮುಂದಿನ ಭೇಟಿ ಯಾವಾಗ ಎಂದು ಮಿಸ್ ರೇವತಿಯನ್ನು ಕೇಳೇಬಿಟ್ಟ. ಆಗ ಅವಳು ನೋಡ್ಲೋಣ ಎಂದು ಹೇಳಿ ಹೊರಟಳು.

ಆದರೆ ಇತ್ತ ಮಿ.ಕ್ಯಾಟ್ಸ್ ಪ್ರಮಾಣಪತ್ರ ಗಮ್ಮಾರನ ಹತ್ತಿರ ಇದ್ದವು ಮತ್ತು ರೇವತಿಯವು ಕೂಡಾ ಇದ್ದವು. ಆದರೆ ಮಿ.ಕ್ಯಾಟ್ಸ್ ಯಾವುದೇ ರೀತಿಯಾಗಿ ಒಂದು ಮಾತು ಕೂಡಾ ಆಡಲಿಲ್ಲ. ತಗೊಂಡ ಬಾ ಎಂಬಂತೆ ತಲೆ ಅಲುಗಾಡಿಸಿ ಹೊರಟೇ ಬಿಟ್ಟಳು. ಫೋನ್ ಮಾಡಿ ನಮ್ಮ ಗಮ್ಮಾರ ಮಿ.ಕ್ಯಾಟ್ಸ್‌ಗೆ ಇಷ್ಟೆಲ್ಲಾ ಕೇಳಿದಾಗ ಅವಳು ಸರಿಯಾಗಿ ಮಾತಾಡಲು ಇಲ್ಲದಿದ್ದಾಗ ಸುಮ್ಮನೆ ಫೋನ್ ಇಟ್ಟ ಗಮ್ಮಾರ.

ಇತ್ತ ಮಿಸ್ ರೇವತಿ ಪತ್ರ ಬಂದಿತ್ತು ನನಗೆ ಕಾಲೇಜಿನಲ್ಲಿ ಸರ್ಟಿಫಿಕೆಟ್ ಕೇಳುತ್ತಾರೆ. ನನಗೆ ಬೇಕಾಗಿದೆ ತೆಗೆದುಕೊಂಡು ಬನ್ನಿ ಅಂತ ಪತ್ರ ಬರೆದಿದ್ದಳು. ಮಿ.ಗಮ್ಮಾರ ಕ್ಲಾಸ್ ಮುಗಿಸಿಕೊಂಡು ಸೀದಾ ಅವಳ ಕಾಲೇಜಿಗೆ ಹೋಗಿಬಿಟ್ಟ, ಅಲ್ಲಿ ವಯ್ಯಾರದಿಂದ ನಿಂತು ಗಮ್ಮಾರನಿಗೋಸ್ಕರ ಕಾಯುತ್ತಿದ್ದಳು. ಇವನು ಹೋದ ತಕ್ಷಣ ಮಿಸ್ ರೇವತಿ

ಬಲಗೈಯನ್ನು ಹಿಡಿದುಕೊಂಡು ತನ್ನ ಕಾಲೇಜಿನೊಳಕ್ಕೆ ಕರೆದುಕೊಂಡು ಹೋಗಿಬಿಟ್ಟಳು. ಅಲ್ಲಿ ತನ್ನ ಕಾಲೇಜಿನ ವಿದ್ಯಾರ್ಥಿಗಳ ಮುಂದೆ ಇನ್ನು ಬಿಗಿ ಹಿಡಿದುಕೊಂಡು ಅವನಿಗೆ ಹೊಟ್ಟೆ ಉರಿಸಲು ಮುಂದಾಗುತ್ತಾಳೆ. ಅವನು ನನ್ನ ಪ್ರೀತಿಸು ಎಂದು ಹೇಳುತ್ತಾನೆ ಎಂದು ಹೇಳಿದ್ದಕ್ಕೆ ಅವರಿಗೆ ಪಾಠ ಕಲಿಸಲು ಈ ರೀತಿಯಾಗಿ ನಿಮ್ಮನ್ನು ಕರೆದು ಕೈ ಹಿಡಿದುಕೊಂಡು ಹೊರಟಿದ್ದು ಎಂದು ಗಮ್ಮಾರನಿಗೆ ತಿಳಿಸಿ ಹೇಳಿದಳು. ಮಿಸ್ ರೇವತಿ ಗಮ್ಮಾರನು ಕರೆದು ಕಾಲೇಜಿನಲ್ಲಿ ಪ್ರೇಮಿಗಳು ಭೇಟಿಯಾಗುವ ಜಾಗ ಕಾಲೇಜಿನ ಟೇರಿಸ್ಸಿನ ಮೇಲೆ ಕರೆದುಕೊಂಡು ಹೋದಳು ಅಲ್ಲಿ ಹುಡುಗ-ಹುಡುಗಿ ಇಬ್ಬರೇ ತಮ್ಮ ಮನಸ್ಸಿನ ಮಾತುಗಳನ್ನು ಆಡಲು ಬಹಳ ಗೌಪ್ಯವಾದ ಜಾಗವಾಗಿತ್ತು. ಅಲ್ಲಿ ಹೋದಾಗ ಕಾಲೇಜಿನವರಿಂದ ನಮ್ಮ ಧ್ವನಿ ಕೇಳಿಯಾದಾಗ ಅವರಿಗೆ ಅದು ಯಾರು, ಅಲ್ಲಿ ಇರುವುದು, ಬನ್ನಿ ಕೆಳಕ್ಕೆ ಬನ್ನಿ ಅಂತ ಕರೆದರು. ಆ ಕಾಲೇಜಿನ ಪ್ರೊಫೆಸರ್ ಬಂದು ನೀವು ಯಾರು ಅಂತ ಕೇಳಿದಾಗ ನಮ್ಮ ಸಂಬಂಧಿಕರು ಎಂದು ನಿರ್ಭಯವಾಗಿ ಉತ್ತರಕೊಟ್ಟಳು. ಹಾಗಾ ಸಂಬಂಧಿಕರು ಎಂದರೆ ಅಂತ ಮತ್ತೆ ಕೇಳಿದರು. ನಮ್ಮ ಅತ್ತೆ ಮಗ ಎಂದು ಉತ್ತರ ನೀಡಿದಳು. ಆಗ ಅಲ್ಲಿಂದ ಕಾಲೇಜಿನ ಜವಾನ ಮುದಿಗೂಬೆ ಇವನಿಂದ ಈ ರೀತಿ ನಡೆದಿರುವುದು ಅವಳಿಗೆ ಗೊತ್ತಾಯಿತು. ಗಮ್ಮಾರನನ್ನು ನೀನು ನಿನ್ನ ಮನೆಗೆ ಕರೆದುಕೊಂಡು ಹೋಗಿ ಮಾತಾಡಬೇಕು ಇಲ್ಲಿಗೆ ಯಾಕೆ ಕರೆದುಕೊಂಡು ಬಂದೆ ಎಂದು ಕೇಳಿದರು. ಜವಾನ ಏನಯ್ಯ ನಿನ್ನ ಹೆಸರು ಎಂದು ಕೇಳಿದಾಗ ಆಗ ಗಮ್ಮಾರ ಎಂದು ಹೇಳಿದ. ಇಲ್ಲಿಗೆ ಯಾಕೆ ಬಂದಿದ್ದೆ ಎಂದು ಕೇಳಿದ ಇವಳ ಪ್ರಮಾಣಪತ್ರ ನೀಡಲು ಬಂದಿದ್ದೆ ಎಂದು ಹೇಳಿದನು. ಗಮ್ಮಾರದ ಹತ್ತಿರ ಇದ್ದ ಗ್ರಂಥಾಲಯ ಪುಸ್ತಕವನ್ನು ಕಸಿದುಕೊಂಡು ಇವು ಇಲ್ಲಿರುತ್ತವೆ ನಾಳೆ ಬಂದು ತೆಗೆದುಕೊಳ್ಳಿ ಎಂದು ಆ ಕಾಲೇಜಿನ ಜವಾನ ಹೇಳಿದ. ಐ.ಡಿ.ಕಾರ್ಡ್ ಕೇಳಿದ ಅವನ ಹತ್ತಿರ ಇರಲಿಲ್ಲ.

ಮಿಸ್ ರೇವತಿ ಒಂದು ಗಂಟೆಗಳ ಕಾಲ ಒಂದೇ ಸೀಟಿನಲ್ಲಿ ಕುಳಿತಿದ್ದರೂ ಒಂದು ಮಾತನ್ನೂ ಆಡಲಿಲ್ಲ. ಆದರೆ ಅವನಿಗೆ ಕೊಟ್ಟಿದ್ದ ಒಂದು ಪತ್ರವನ್ನು ಮನೆಗೆ ಹೋದಮೇಲೆ ಈ ಪತ್ರವನ್ನು ನೋಡು ಎಂದು ಅವಳು ಹೇಳಿದಳು.

ಆದರೆ ನಮ್ಮ ಗಮ್ಮಾರ ಮಿಸ್ ರೇವತಿ ಮೇಲೆ ಬಹಳಷ್ಟು ಪ್ರೀತಿಯ ಬಗ್ಗೆ ಅನೇಕ ಆಸೆಗಳನ್ನು ಹೊತ್ತು ನಮ್ಮ ಗಮ್ಮಾರ ಕುಳಿತಿದ್ದ. ಅದನ್ನು ಹೇಳಬೇಕು ಎಂದು ಕುಳಿತುಕೊಂಡಿದ್ದ ಸಮಯಕ್ಕೆ ಸರಿಯಾಗಿ ಮಿಸ್ ರೇವತಿ ಬಸ್ ಇಳಿಯುವ ನಿಲ್ದಾಣ ಬಂದೆ ಬಿಡುತ್ತೆ ಅವಳು ಇಳಿದು ಹೋದಳು. ಇದನ್ನು ನೀನು ವಾಪಾಸು ಹೋದಮೇಲೆ ತೆಗೆದು ಓದು ಅಂತಾ ಹೇಳಿದಳು. ಕ್ಯಾಂಪಿನಲ್ಲಿ ಕಲಿಸಿದ್ದ ಹಾಡು, ಅವನ ರೂಪ, ಅವಳನ್ನು ತಲೆಯಲ್ಲಿ ಗುಂಗು ಹಿಡಿಯುತ್ತಿತ್ತು. ಅದನ್ನೇ ಆ ಪತ್ರದಲ್ಲಿ ಅವನನ್ನು ವರ್ಣಿಸಿದಳು.

ನಮ್ಮ ಮಿ.ಗಮ್ಮಾರನ ಜೀವನದಲ್ಲಿ ಅದೇ ಎಷ್ಟು ಹುಡುಗಿಯರು ತನ್ನ ಜೀವನದಲ್ಲಿ ಬಂದು ಹೋಗಿದ್ದರು. ಅದರಲ್ಲಿ ಮರೆಯಾಗದಂತೆ ತನ್ನ ಮನಸ್ಸಿನೊಳಗೆ ಉಳಿದವರು ಮಿಸ್ ಕ್ಯಾಟ್ಸ್. ಒಂದು ತಿಂಗಳುಗಳ ಕಾಲ ಅವನ ಜೊತೆಯಲ್ಲಿ ಕಾಲ ಕಳೆದು ಸುಮಾರು ಒಂದು ತಿಂಗಳ ಕಾಲ ದೆಹಲಿಯ ಶಿಬಿರದಲ್ಲಿ ಮರೆಯಲಾಗದ ಮಾಣಿಕ್ಯವಾಗಿ ಅವನ ಮನಸ್ಸಿಗೆ ತುಂಬಾ ಹತ್ತಿರದವಳಾಗಿದ್ದವಳು. ಮಿಸ್ ಕ್ಯಾಟ್ಸ್ ತುಂಬಾ ನೆನಪಿನ ಹೃದಯದ ಕಣ್ಮಣಿಯಾಗಿದ್ದಳು.

ಆದರೆ ನಮ್ಮ ಮಿ.ಗಮ್ಮಾರನು ಅವಳ ನೆನಪಿನಲ್ಲಿ ಒಲಿದುಕೊಂಡಿದ್ದನು. ಇವನು ಅವಳ ಜೊತೆಯಲ್ಲಿ ಮಾತನಾಡಲು ಅವಳಪ್ಪನ ಫೋನಿಗೆ ಕರೆಮಾಡಿ ಮಾತಾಡುವುದು ಕಂಡುಬರುತ್ತಿತ್ತು. ಆದರೆ ನಮ್ಮ ಗಮ್ಮಾರನಲ್ಲಿ ಅವಳ ಬಗ್ಗೆ ಇಟ್ಟುಕೊಂಡಂತಹ ಅನೇಕ ವಿಚಾರಗಳು ಅವನಿಗೆ ಮುಗಿಬಿದ್ದವು. ಆದರೆ ನಮ್ಮ ಗಮ್ಮಾರನನ್ನು ಅವಳು ಪ್ರೀತಿಸೋದು ಗೊತ್ತಾಗಲಿಲ್ಲ. ಆದರೆ ನಮ್ಮ ಗಮ್ಮಾರ ನೆನಪಿನಲ್ಲಿ ತುಂಬಿ ತುಳುಕಾಡುತ್ತಿದ್ದ ಎಂಬುವುದು ನಮಗೆ ಮುಖ್ಯವಾಗಿ ಕಂಡುಬರುತ್ತದೆ. ಪ್ರೀತಿ ಬಲೆಯಲ್ಲಿ ಸಿಲುಕಿ ಮೀನಿನಂತೆ ಬಲೆಯಲ್ಲಿ ಒದ್ದಾಡುವಂತಹ ನಮ್ಮ ಗಮ್ಮಾರನು ಇವನ ಕೂಗು ಅವಳಿಗೆ ತಿಳಿಯದ ಮೌನ ಇವನಲ್ಲಿ ಆವರಿಸಿತ್ತು. ಪ್ರೀತಿಯ ಪ್ರಣಯದಲ್ಲಿರುವಂತಹ ವಯಸ್ಸು ಅದನ್ನು ಪ್ರಸ್ತಾಪಿಸಲು ಆಗುತ್ತಿಲ್ಲ. ನಮ್ಮ ಗಮ್ಮಾರನ ಜೀವನದ ಸಮಸ್ಯೆ ಮನಸ್ಸಿನ ಸಂದೇಶವನ್ನು ಹೇಳಲಾಗದೆ ಒಬ್ಬಂಟಿಯಾಗಿ ತಾನೇ ಅದನ್ನು ಅನುಭವಿಸುವುದು ಅವನ ದೃಷ್ಠಿಯಲ್ಲಿ ಮುಂದುವರೆಯುತ್ತದೆ. ಇತ್ತ ಅವನ ಕನಸು ನೆನಪಿನಲ್ಲಿ ಮಿಸ್ ಕ್ಯಾಟ್ಸ್ ಹಂಬಲ ನಿಲ್ಲುವಂತಹ ಪರಿಸ್ಥಿತಿಯಲ್ಲಿ ಇಲ್ಲದಂತಹ ಸಂದರ್ಭ ನಮ್ಮ ಗಮ್ಮಾರನಲ್ಲಿದೆ.

ಇವನಿಗೆ ನಾನೊಬ್ಬ ಹಳ್ಳಿಯ ಹುಡುಗ ಅವಳು ಮಧ್ಯಮ ಕುಟುಂಬದ ಹುಡುಗಿಯವಳು ನನ್ನ ನಡತೆ ಅವಳಿಗೆ ಸರಿಹೊಂದುವುದಿಲ್ಲ ಎಂಬ ಸಂಶಯವನ್ನು ಹೊತ್ತುಕೊಂಡು ಆಲೋಚಿಸುವ ವ್ಯಕ್ತಿ ನಮ್ಮ ಗಮ್ಮಾರನು ಸ್ಥಿತಿ.

ಇವಳು ಮೆಟ್ರೋ ಪಾಲಿಟಿಯನ್ ಸಂಸ್ಕೃತಿಯ ಸುಕುಮಾರಿ ಮಿಸ್ ಕ್ಯಾಟ್ಸ್ ನಾನು ಹಳ್ಳಿಯ ಗಮ್ಮಾರನಿಗೆ ಒಲಿಯಲಾರಳು ಎಂಬ ಆತಂಕದಲ್ಲಿ ನಮ್ಮ ಗಮ್ಮಾರನ ವಿಷಯವಾಗಿನೆ ಮಿಸ್ ಕ್ಯಾಟ್ಸ್ ಬಿಟ್ಟುಕೊಡುವ ಮನಸ್ಸು ನಮ್ಮ ಗಮ್ಮಾರನಿಗೆ ಇಲ್ಲ. ಇತ್ತ ಮಿಸ್ ಕ್ಯಾಟ್ಸ್ ಇವನ ಬಗ್ಗೆ ಯಾವ ಆಲೋಚನೆ ಹೊಂದಿಕೊಂಡಿರುವುದಿಲ್ಲ. ಇದರ ನಡುವೆ ಜೀವನ ಹೇಗೆ ನಡೆಯುವುದು ಎಂಬುದು ತಲೆಯನ್ನು ಕೆಡಿಸಿಕೊಂಡು ಕುಳಿತುಕೊಂಡವನು ನಮ್ಮ ಗಮ್ಮಾರನು. ಮನಸ್ಸು ಕೆಸರಿನೊಳಗೆ ಸ್ವಚ್ಛಂದವಾಗಿ ಅರಳುವ ಕಮಲದಂತೆ ಇದ್ದವನು ನಮ್ಮ ಗಮ್ಮಾರನ ಮನಸ್ಸು.

ಮತ್ತೆ ನಮ್ಮ ಗಮ್ಮಾರನಿಗೆ ಕರಿ ಮರಾಠಿ ಹುಡುಗಿ ಮಿಸ್ ಲೂಸಿ ಅವನಮೇಲೆ ಮನಸ್ಸಿಟ್ಟಳು. ಕ್ರೀಡೆಗೆ ಬಂದ ಗೆಳತಿ ಮಿಸ್ ಲೂಸಿಯಾ ತನ್ನ ಗೆಳೆಯ ಬಸ್ಯಾನ ತಲೆಕೆಡಿಸಿ ಮತ್ತೆ ಈಗ ಗಮ್ಮಾರನ ಮೇಲೆ ಮನಸ್ಸಾಗಿ ಇವನನ್ನು ಹುಚ್ಚು ಹಿಡಿಸಲು ಮುಂದಾಗುತ್ತಾಳೆ. ಆದರೆ ಇವಳು ಅಪ್ಪಟ ಕನ್ನಡಾಭಿಮಾನದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದಳು. ಕನ್ನಡವನ್ನು ನಿರರ್ಗಳವಾಗಿ ಮಾತಾಡುವ ಕೌಶಲ್ಯವನ್ನು ಹೊಂದಿರುವಳು ನಮ್ಮ ಮಿಸ್ ಲೂಸಿಯಾ. ಇವಳು ನಮ್ಮ ಗಮ್ಮಾರನ ಹಾಡು ಕೇಳಿ ನೀವು ತುಂಬಾ ಚೆನ್ನಾಗಿ ಹಾಡು ಹಾಡುತ್ತೀರಾ ಎಂದು ಹೇಳಿದಳು. ಆಗ ನಮ್ಮ ಗಮ್ಮಾರ ಬೆರಗಾದ ಅವಳ ಮೈ ಮಾಟಕ್ಕೆ. ನಮ್ಮ ಗಮ್ಮಾರ ಎಲ್ಲಾರನ್ನು ಬೇಗ ನಂಬುವ ಮತ್ತು ಇಷ್ಟಪಡುವಂತಹ ವ್ಯಕ್ತಿಯಾಗಿ ಮೊದಲು ಕಂಡುಬರುತ್ತಾನೆ. ಅವರನ್ನು ವರ್ಣಿಸುವ ರೀತಿ ಅವಳ ನಗು, ಕಣ್ಣಲ್ಲೇ ಕೊಲ್ಲುವ ಆ ಸೂಜಿಗಲ್ಲಂತೆ ಸೆಳೆವ ನೋಟ, ಎಷ್ಟೋ ಸಲ ಮನಸ್ಸಿಗೆ ಬೇಡ, ಬೇಡಾಂತ ಸಮಜಾಯಿಸಿದ್ರೂ ಮಾತು ಕೇಳದೆ ಅವಳ ಸಹವಾಸಕ್ಕೆ ಹೊಂಟೋಗಿತ್ತು. ಅಂತಹ ನಮ್ಮ ಗಮ್ಮಾರ "ಮತ್ತೆ ನಿಮ್ಮ ನಗು ಸುಮ್ಮನಿರೋರ ತಲೇನೂ ಹಾಳ ಮಾಡುತ್ತೆ ಕಣ್ರೀ" ಎಂದು ಗಮ್ಮಾರ ಅವಳ ತಲೆಗೆ ಎಣ್ಣೆ ಸವರಿ ಕಿವಿಯೊಳಗೆ ಉಸುರಿದ.

ಮಿಸ್ ಲೂಸಿ ಹಾಗಾದರೆ ನಾವು ನಿಮಗೆ ಇಷ್ಟ ಆಯ್ತು ಅನ್ನಿ, ಆಕೇನು ಮುಂದುವರಿದಳು ಹೀಗೆ ನಮ್ಮ ಗಮ್ಮಾರ ಹುಡುಗಿಯರ ಬಲೆಯೊಳಗೆ ಏನು ನೋಡಿದ ಬಿದ್ದು ಈಜು ಆಡಲು ಆಗದಂತೆ ಒದ್ದಾಡುವುದು ನಾವು ಕಾಣಬೇಕಾಗುತ್ತದೆ. ನಮ್ಮ ಗಮ್ಮಾರ ಶೃಂಗಾರ ಭಾವಕ್ಕೆ ಮರೆಯಾಗಿ ಹೋಗಿದ್ದ ಅವಳ ಗೆಳೆಯ ಬಸ್ಯಾ ಬಂದ, ಅವನನ್ನು ಪರಿಚಯ ಮಾಡಿಸಿದಳು. ಆದರೆ ನಮ್ಮ ಗಮ್ಮಾರ ಬೇರೆ ಲೋಕಕ್ಕೆ ಹೋಗಿರುವುದು ಕಂಡು ಬರುತ್ತದೆ. ನಮ್ಮ ಗಮ್ಮಾರನಿಗೆ ಮಿಸ್ ಲೂಸಿ ಅವನು ನನ್ನ ಹಿಂದೆ ಬಿದ್ದಿದ್ದಾನೆ. ಅವನನ್ನು ನಿರಾಕರಿಸಲು ಸಮಯ ಬೇಕಾಗುತ್ತದೆ. ಎಂದು ಹೇಳಿ ಮಿಸ್ ಲೂಸಿ ಚಪ್ಪಲಿ ಹರಿದು ಹೋಗುತ್ತವೆ. ಅವನ್ನು ಹೊಸ ಚಪ್ಪಲಿ ಕೊಡಿಸಲು ನಮ್ಮ ಗಮ್ಮಾರನಿಗೆ ಬೇಡಿ ಅವಳು ಹೊಸ ಚಪ್ಪಲಿ ಖರೀದಿ ಮಾಡುತ್ತಾಳೆ. ಖರೀದಿ ಮಾಡಿಕೊಂಡು ಕೈ ಕೊಟ್ಟಿದ್ದಳು ನಮ್ಮ ಗಮ್ಮಾರನಿಗೆ.

ನಮ್ಮ ಗಮ್ಮಾರನೇನು ಅಷ್ಟೊಂದು ಗಂಭೀರವಾಗಿ ಮಿಸ್ ಲೂಸಿ ಬಗ್ಗೆ ಆಲೋಚನೆ ಮಾಡಿರಲಿಲ್ಲಾ. ಆಕಸ್ಮಿಕ ಚಿಟ್ಟೆಗಳೆಲ್ಲಾ ಪ್ರೀತಿಗಳಾಗಿ ಮಾರ್ಪಾಡುವುದಿಲ್ಲ ಎನ್ನುವುದು ಗಮ್ಮಾರನಿಗೆ ಗೊತ್ತು,. ಆದರೆ ನಮ್ಮ ಗಮ್ಮಾರ ಅವರ ಮೇಲೆ ಸೇಡು ತೀರಿಸಿಕೊಳ್ಳಲು ಪ್ರತಿತಂತ್ರವನ್ನು ಹೂಡುತ್ತಿದ್ದ ನಮ್ಮ ಗಮ್ಮಾರನು ತನ್ನ ಹಿಂದೆ ಜೊತೆಯಾಗಿದ್ದ ಗೆಳೆಯರ ಸಮೂಹ ಹಾಗೇ ಇತ್ತು. ಅಲ್ಲಾ ಗಮ್ಮಾರ ನಿನಗಿರೋಷ್ಟು ಹುಡುಗಿಯರ ಪರಿಚಯ ನಮಗೇನಾರ ಇದ್ದಿದ್ದರೆ ಖಂಡಿತ ತುಂಬಾನೆ ಮಜಾ ಮಾಡ್ತಿದ್ವಿ ಎಂದು ತನ್ನ ಗೆಳೆಯರು

ಎಲ್ಲಾರೂ ಗಮ್ಮಾರನಿಗೆ ಹೇಳುತ್ತಾರೆ. ಗಮ್ಮಾರ ದೊಡ್ಡ ಮರವನ್ನು ಹತ್ತಿ ಕುಳಿತು ಬಿಡುತ್ತಾನೆ.

ಗಮ್ಮಾರನಿಗೆ ಒಂದು ಹೆಣ್ಣು ಹುಡುಗಿಯ ಮೇಲೆ ಪರೀಕ್ಷೆಯನ್ನು ಏರ್ಪಡಿಸುತ್ತಾರೆ. ಅದೇ ಮಿಸ್ ಗಾವಳಿ ಮೇಲೆ ಇವನ ಕಣ್ಣು ಹಾದುಹೋಗಿ ಒಳ್ಳೆ ತೊಂದರೆಯಲ್ಲಿ ಸಿಗಹಾಕ್ಕೊಂಡು ಬಿಡುತ್ತಾನೆ. ನಮ್ಮ ಗಮ್ಮಾರ ಹರಸಾಹಸ ಪಡುತ್ತಾನೆ. ಆದರೆ ಮಿಸ್ ಗಾವಳಿ ತುಂಬಾ ಗಂಡು ಬೇರು ಹೊತ್ತವಳು. ಇಬ್ಬರು ಬಸ್‌ನಲ್ಲಿ ಪ್ರಯಾಣ ಮಾಡಲು ಹೊರಟಾಗ ಆ ಬಸ್‌ನಲ್ಲಿ ಸೀಟು ಎಲ್ಲಾ ಭರ್ತಿಯಾಗಿರುತ್ತವೆ. ಕೊನೆಯಲ್ಲಿ ಮಿಸ್ ಗಾವಳಿಗೆ ಒಂದು ಸ್ಥಾನ ಇರುತ್ತದೆ. ಅಲ್ಲಿ ಒಂದು ಟೇಬಲ್ ಇರುತ್ತೆ ಅದರಮೇಲೆ ನಮ್ಮ ಗಮ್ಮಾರ ಕೂರುತ್ತಾನೆ. ಅವಳ ಎರಡು ಕಾಲು ಸಂಧಿಯಲ್ಲಿ ಇವನ ಎರಡು ಕಾಲುಗಳು ಇರುತ್ತವೆ. ಮತ್ತು ಇವನ ಕೈಗಳು ಅವಳ ತೊಡೆಯಮೇಲೆ ಇರುತ್ತವೆ. ನಮ್ಮ ಗಮ್ಮಾರನು ಮಿಸ್ ಗಾವಳಿ ಎಲ್ಲಾ ಭಾಗಗಳನ್ನು ಸ್ಪರ್ಶ ಮಾಡುವುದು ಕಂಡುಬರುತ್ತದೆ. ಅದಕ್ಕೆ ಅವಳು ರೇಗಿ ಅವನು ಮಾಡಿದ ಎಲ್ಲಾವುದನ್ನು ಎಲ್ಲಾರಿಗೂ ಅವರು ಹೇಳಿದಾಗ ಎಲ್ಲಾವನ್ನು ಕೂಗಾಡಲು ಅವಳಿಗೆ ಕೋಪ ಬರುತ್ತದೆ. ನಮ್ಮ ಗಮ್ಮಾರನಿಗೆ ಗೆಳೆಯರ ಮೇಲೆ ಕೋಪಗೊಂಡು ಈ ಹಾಳು ಸೂಳೇಮಕ್ಕಳ ಸಹವಾಸ ಬೇಡಂತ ಒಂದು ಎರಡು ವರ್ಷಗಳ ಕಾಲ ಪ್ರೀತಿ, ಪ್ರಣಯದಿಂದ ದೂರ ಉಳಿಯುತ್ತಾನೆ.

ಮಿ.ಗಮ್ಮಾರನಿಗೆ ಮತ್ತೆ ಯಾರು ನಿನಗೆ ಒಬ್ಬ ಹುಡುಗಿ ಸಿಗುತ್ತಿಲ್ಲ ಪ್ರೀತಿ ಮಾಡಲು ಅಂತೇಳಿ ಯಾರನ್ನು ಪರಿಚಯ ಮಾಡಿಕೊಟ್ಟು ಇಬ್ಬರು ಸೇರಿ ತಮ್ಮ ಮನಸ್ಸಿನಲ್ಲಿ ಮತ್ತೆ ಹೆಣ್ಣಿನ ಜೊತೆ ಬೆರತು ಪ್ರೀತಿಯಲ್ಲಿ ಸುಖದ ಸಂಪತ್ತಿಗೆಯಲ್ಲಿ ಒಂದಾದ ಅವಳು ಸುಖವನ್ನು ಉಣಬಡಿಸಿದಾಗ ಅವಳು ಸರಿ ಗೆಳತಿಯರ ಜೊತೆ ಆ ಸಮಯದ ಅನುಭವ ಗೆಳತಿಯರಲ್ಲಿ ಹಂಚಿಕೊಂಡು ಸಾಗುವುದು ಅಬ್ಬಾ ಎಂತಹ ತೊಳಲಾಟ. ಆಗ ಅಲ್ಲಿರುವ ಹುಡುಗಿಯರು ಅವನನ್ನು ಪರಿಚಯ ಮಾಡಿಕೊಡಲು ಕೇಳುತ್ತಾರೆ ಹಾಗೂ ಅವಳಿಗೆ ಕೋಪಗೊಂಡು ನನ್ನ ಹುಡುಗನು ನಿಮಗೆ ಬೇಕೆ ಎಂದು ಹೌ ಹಾರಿದಳು. ಅವಳ ಮನಸ್ಸಿನಲ್ಲಿ ಮರೆಯಲಾಗದ ಅನುಭವಗಳು ಅವಳಿಗೆ ಉಣಬಡಿಸಿದ್ದ ನಮ್ಮ ಗಮ್ಮಾರ. ಆದರೆ ಇದು ಬಹಳ ದಿನ ನಡೆಯುವುದಿಲ್ಲ. ಮತ್ತೆ ಇವಳು ಪರೀಕ್ಷೆಯಲ್ಲಿ ಫೇಲಾಗಿ ತನ್ನ ಊರು ಸೇರುತ್ತಾಳೆ. ಮತ್ತೆ ಅದೆಷ್ಟು ಹುಡುಗಿಯರು ನಮ್ಮ ಗಮ್ಮಾರನಲ್ಲಿ ಬರಲು ಹಾತೊರೆಯುವುದು ನೋಡಬೇಕು. ನೀವು ತುಂಬಾ ಹಿಂದಿ ಚಲನಚಿತ್ರದ ಹೀರೋ ಆಗಿ ಕಾಣಿಸುತ್ತೀರಾ ಅಂತ ಹೇಳುವುದು ಮತ್ತು ಅವನನ್ನು ಪ್ರೀತಿಯ ಬಲೆಯೊಳಗೆ ಸಿಲುಕುವುದು ಬಹಳಷ್ಟು ಮನಸ್ಸು ಅವನಲ್ಲಿ ಮೊಳಗಿತ್ತು.

ಮತ್ತೆ ನಮ್ಮ ಗಮ್ಮಾರನಿಗೆ ಮಿಸ್ ದಂಡೀನ ಯಾವಾಗ ಇವನ ಮೇಲೆ ಮೋಹಗೊಂಡಿದ್ಲೋ ಒಂದು ದಿನ ಅಟ್ಯಾಕಯಿಸ್ಕೊಂಡ್ಲು ಇವಳು ಬಹಳ ಸುಕುಮಾರಿ

ಅನ್ಕೊಳ್ಳಂಗಿಲ್ಲ. ಇವಳು ಬ್ಲಾಕ್‌ಮೇಲ್ ಮಾಡಿ ಪ್ರೀತಿ ಪಡೆಯುವಲ್ಲಿ ಇವಳದು ನನ್ನ ಪ್ರೀತಿನ ನೀನು ನನ್ನ ಮದ್ವೆ ಆಗಿ ಅಂತ ಹೇಳಲ್ಲ ಅಂತಾ ಹೇಳಿ ದಾದಾಗಿರಿ ತೋರ್ಸಿದ್ಲು. ಆದರೆ ನಮ್ಮ ಗಮ್ಮಾರನಿಗೆ ಇಷ್ಟ ಇರಲಿಲ್ಲ. ಆದರೆ ಅವಳು ಒತ್ತಾಯ ಮಾಡಿ ಪ್ರೀತಿ ಪಡೆಯಲು ಮುಂದಾಗುತ್ತಾಳೆ. ನಮ್ಮ ಗಮ್ಮಾರ ಅವಳ ಆಸೆಯನ್ನು ಈಡೇರಿಸಿ ಒಂದು ಕಾಡಿನೊಳಗೆ ಮುಂಜಾನೆಯಿಂದ ಸಂಜೆಯವರೆಗೆ ಎಲ್ಲಾ ಕಾರ್ಯ ಕೆಲಸ ಮುಗಿಸಿ ಅವಳನ್ನು ಬಿಡುತ್ತಾನೆ. ಆದರೆ ಅವಳು ಮತ್ತೆ ಮದುವೆ ಆಗಲು ಮಿಸ್ ದಂಡೀನ ಶತಾಯುಗತಾಯ ಪ್ರಯತ್ನಿಸಿದ್ಲು ಆದರೆ ಅದು ಆಗುವುದಿಲ್ಲ. ನಮ್ಮ ಗಮ್ಮಾರನಿಗೆ ಒಂದೇ ಇತ್ತು. ಈಜು ಪಳಗಿದೋನಿಗೆ ಆಳ ಎಷ್ಟಾದರೇನು ಎಲ್ಲೂ ಸುಳಿವು ಬಿಡದೆ ಎಲ್ಲಾ ವ್ಯವಹಾರಾನೂ ಮುಗಿಸಿದ್ದ. ಮಿಸ್ ದಂಡೀನಳನ್ನು ಬಿಟ್ಟನು. ಆದರೆ ಅವಳು ಗಮ್ಮಾರನ ಗಂಡಸುತನಕ್ಕೆ ಸವಾಲು ತಂದು ಅವನನ್ನು ಮದುವೆಯಾಗಲು ಪತ್ರದ ಬರವಣಿಗೆ ಕಳುಹಿಸುತ್ತಾಳೆ. ಪತ್ರವನ್ನು ಚಿಕ್ಕಮ್ಮನ ಮಗಳಿಗೆ ಹೇಳಿ ಬರೆಯಿಸಿ ಅವನಿಗೆ ಅಂಚೆಪೆಟ್ಟಿಗೆ ವಿಳಾಸಕ್ಕೆ ಪುಣ್ಯಕೋಟಿ ಹಾಡಿನ ಸಾಲುಗಳ ಮುಖಾಂತರ ಬರೆಯಿಸಿ ದೇವರ ವ್ರತಗಳ ಬಗ್ಗೆ ಹೊಗಳಿ ಹೇಳುತ್ತಾ ಅವಳನ್ನು ಕೈಬಿಡಬೇಡಿ ಎಂದು ಪತ್ರದಲ್ಲಿ ಬಂದಿರುತ್ತದೆ. ಅದನ್ನು ಓದಿ ನಮ್ಮ ಗಮ್ಮಾರ ಮಡಚಿ ಹೊರಗಡೆ ಎಸೆದ.

ಮತ್ತೆ ಪೋಸ್ಟ್ ಅಂತ ಧ್ವನಿ ಬರುತ್ತದೆ. ಆಗ ನಮ್ಮ ಗಮ್ಮಾರ ಮತ್ತೆ ಅದೇ ಮಿಸ್ ದಂಡೀನದೇ ಅಂತ ಅನ್ಕೊಂಡು ಹೋಗುತ್ತಾನೆ. ಆದರೆ ಅದು ವಿವಾಹ ಆಹ್ವಾನ ಪತ್ರಿಕೆ ಹಳೆಯ ವಿಳಾಸದಿಂದ ಈ ವಿಳಾಸಕ್ಕೆ ಬಂದಿರುತ್ತದೆ. ಅದು ಮೊಟ್ಟಮೊದಲು ಹೃದಯ ಸ್ಪರ್ಶ ಮಿ.ಕ್ಯಾಟ್ಸ್ ಮದುವೆ ಆಗ್ತಿದ್ದಾಳೆ ಅವನು ಕಟ್ಟಿದ ಕನಸುಗಳೆಲ್ಲಾ ನುಚ್ಚು ನೂರಾದವು. "ಮೆಟ್ರೋ ಪಾಲಿಟೆನ್ ಬುದ್ಧಿ ತೋರಿಸಿಯೇ ಬಿಟ್ಟಲ್ಲಾ ಕಡೆಗೂ" ಓದಿದ ಹುಡುಗ ಯಾರು? ಅವನ ಉದ್ಯೋಗ ಏನೇನೂ ಇರ್ಲಿಲ್ಲಾ. ವಿಳಾಸ ಬಿಟ್ಟರೆ ಮತ್ತೇನು ಕಾಣ್ತಿರಲಿಲ್ಲಾ. ಸ್ಮೃತಿಯೊಳಗೆ ರೀಲುಗಳೆಲ್ಲಾ ಹಿಂದಕ್ಕೆ ಓಡತೊಡಗಿದವು. ಪ್ರತಿಕ್ಷಣಗಳ ನೆನಪು ತಿಂಗಳಕಾಲ ಅವರು ಹೋಗಬೇಕಿದ್ದ ಕಾರ್ಯಕ್ಕೆ ಆರಂಭ ಮಾಡಿದ ಕ್ರಮ ಅವಳ ಕಾರು ಅವಳಪ್ಪ ಕಡೆಗೆ ಬಂದು ನಿಂತಿದ್ದ ಮಾತ್ರ ಶೂನ್ಯ. ಇದನ್ನು ನೋಡಿದ ತಕ್ಷಣ ನಮ್ಮ ಗಮ್ಮಾರನ ಹೃದಯದಲ್ಲಿ ಸಿಡಿಲು ಹೊಡೆದಂತೆ ಆಗಿತ್ತು. ಮಿ.ಕ್ಯಾಟ್ಸ್ ಹೇಳಿದ ಮಾತುಗಳೆಲ್ಲಾ ರೈಲಿನ ವೇಗದಂತೆ ತಲೆಯಲ್ಲಿ ಓಡುತ್ತಿದ್ದವು. ಅವಳು ಹೇಳಿದ ಮಾತು ಯೋಚನೆ ಮಾಡದಾದ ನಾನು ನಿನ್ನ ಇಷ್ಟಪಡಲ್ಲಾ, ನೀನು ಮಾಮೂಲು ಸಣ್ಣ ಹಳ್ಳಿಯವನು, ನಿನ್ನ ಆಲೋಚನೆಗಳು, ವರ್ತನೆ, ದುಡಿಮೆ, ಅಂತಸ್ತು ಎಲ್ಲಾ ಕೆಳಮಟ್ಟದ್ದು. ನಾನು ಹೊಸಜಗತ್ತನ್ನ ಕಂಡವಳು, ಹೊಸ ಸಂಸ್ಕೃತಿ, ಹೊಸ ನಡಾವಳಿ, ಹೊಸ ಬದಲಾವಣೆ ಈ ಮಾತುಗಳು ನಮ್ಮ ಗಮ್ಮಾರನಲ್ಲಿ ಯಾವಾಗಲೂ ತಲೆಯಲ್ಲಿ ನಿರಂತರ ಪ್ರಕ್ರಿಯೆಯಾಗಿದ್ದವು.

ಮಿ.ಗಮ್ಮಾರ ಎಲ್ಲಾವನ್ನು ಮರೆಯಲೇ ಬೇಕಾಗುತ್ತದೆ. ಥತ್ ಕೆಟ್ಟ ಸಂಸ್ಕೃತಿ. ಅವಳ ಹೆಚ್ಚುಗಾರಿಕೆ ನನ್ನಿಂದ ಸಹಿಸಿಕೊಳ್ಳೋದಕ್ಕೆ ಖಂಡಿತ ಆಗ್ತಿರಲಿಲ್ಲಪ. ಸಮಾಧಾನ ಪಟ್ಕೊಂಡು ಅವಳಂತರಾಳದ ಒಳ ಹೂರಣವನ್ನು ಕೆದಕ ತೊಡಗಿದ. ಆದರೂ ಅವನಿಗೆ ಸಮಾಧಾನವಾಗಲಿಲ್ಲ. ಅವಳು ಅವನ ಅಸ್ತಿತ್ವವನ್ನೇ ಅಲ್ಲಾಡಿಸಿದ್ದಳು. ನಮ್ಮ ಗಮ್ಮಾರ ಅವಳ ಮೇಲೆ ಮೋಹಿತನಾಗಿದ್ನೋ, ವ್ಯಾಮೋಹಿತನಾಗಿದ್ನೋ ಅವತ್ತು ಅವಳ ಮಾತುಗಳು. ಸತ್ಯ ಅನಿಸಿದ್ದವು ನಮ್ಮ ಗಮ್ಮಾರನಿಗೆ. ಲೋ ಗಮ್ಮಾರ ಈ ಹಂತದಲ್ಲಿ ಪ್ರೀತಿ ಹುಟ್ಟಲ್ಲ ಕಣಲೋ ಪೆದ್ದ, ಇದು ವಯಸ್ಸಿನ ಆಕರ್ಷಣೆ . ಗಂಡು ಮತ್ತು ಹೆಣ್ಣು ಹದಿಹರೆಯದೊಳಗೆ ತೀಟೆ ತೀರಿಸಿಕೊಳ್ಳೋದಕ್ಕೆ ಆತುರ ಪಡುತ್ತಾರೋ. ಅವಷ್ಟೆ. ನೀನೋ ಹಳ್ಳಿ ಗುಗ್ಗು, ಪಟ್ಟಣಶೆಟ್ಟಿಯುಳ್ಳವಳು, ನಿನ್ನಂತ ನೂರಾರು ಹುಡುಗರನ್ನು ತನ್ನ ಕೈಯಲ್ಲಿ ಇಟ್ಕೊಂಡು ತಿರುಗಿಸಿದವಳು. ಇದನ್ನು ಪ್ರೀತಿ ಅದ್ಕೊಂಡ್ಯೋ ಗೋವಿಂದ. ನಮ್ಮ ಗಮ್ಮಾರನಿಗೆ ಹೌದು ಇದು ನಿಜ ಇಂತೋರು ಯಾರಿಗೋ ಮನಸ್ಸು ಕೊಟ್ಟು ಯಾರಿಗೋ ಮೈ ಕೊಡುತ್ತಾರೆ ಎಂದು ಹೇಳುತ್ತಾರೆ. ಇಂತಹವರಿಗೆಯೆಲ್ಲಾ ಮೈಮನಸ್ಸುಗಳ ವ್ಯತ್ಯಾಸವನ್ನು ತಿಳಿದುಕೊಂಡಿರುವುದಿಲ್ಲ.

ತಮ್ಮ ಮನಸ್ಸು ಚಂಚಲವಾಗಿರುವುದು ಕಂಡು ನಮ್ಮ ಗಮ್ಮಾರನು ಅವಳ ಶ್ಯಾಲ, ಜಾಕೇಟ್ ಕೊಟ್ಟಿದ್ದು ಎಲ್ಲಾ ನೆನಪುಗಳು ಒಂದೇ ಆಗಿದೆ. ಆದರೆ ಅವಳನ್ನು ಮರೆಯಲು ಮುಂದಾಗುತ್ತಾನೆ. ನಮ್ಮ ಗಮ್ಮಾರನು ತನ್ನ ಪ್ರೀತಿಯಲ್ಲಿ ಆವಳು ಇಲ್ಲದಂತೆ ಮರೆಯಾಗಿರುವುದು ಕಂಡುಬರುತ್ತದೆ. ಆದರೆ ಏನು ಮಾಡುವುದು? ಎಲ್ಲಾ ಪಡೆದುಕೊಂಡು ಬಂದಿರಬೇಕು ಎಂದು ಮನಸ್ಸಿನೊಳಗೆ ಆಲೋಚನೆಯಲ್ಲಿ ತೊಡಗಿಕೊಂಡನು ಆದರೆ ಅವನು ಮತ್ತೆ ಬೇರೆ ಪುರುಷನ ಹೆಂಡತಿ ಅವಳು, ನಾನು ಯೋಚಿಸುವುದು ಒಳ್ಳೆಯದಲ್ಲ ಎಂದು ತಿಳಿದನು ನಮ್ಮ ಗಮ್ಮಾರನು. ಮನಸ್ಸಿನ ನೆನಪುಗಳು ದೂರಮಾಡಲು ಮುಂದಾಗುತ್ತಾನೆ ನಮ್ಮ ಹಳ್ಳಿಯ ಪೋರಾ ನಮ್ಮ ಗಮ್ಮಾರ.

ಹಳೇ ಗಾಯ ಕೆರೆಯುತ್ತಾ

ನಮ್ಮ ಗಮ್ಮಾರನು ಮದುವೆ ಮಾಡಿಕೊಂಡು ಮೂರು ಮಕ್ಕಳ ತಂದೆಯಾಗಿ ಕುಟುಂಬದಲ್ಲಿ ಬಿದ್ದಮೇಲೆ ಹಳೆಯ ಪ್ರೀತಿಯಲ್ಲಿ ಮೊಳಗುವುದು ಬಹಳ ವಿಚಿತ್ರವಾಗಿದೆ. ಫಸ್ಟ್‌ಲವ್ ಈಜ್ ಬೆಸ್ಟ್ ಲವ್, ಮೊದಲಪ್ರೀತಿ ಒಳ್ಳೆಯಪ್ರೀತಿ ಎಂಬುವುದು ನಮಗೆ ಶೃಂಗಾರದಲ್ಲಿ ಮೊಳಗಿ ಹೇಳಿದ ವ್ಯಕ್ತಿ ನಮ್ಮ ಗಮ್ಮಾರ. ಮದುವೆಯಾಗಿ ಮೂರು ಮಕ್ಕಳ ತಂದೆಯಾಗಿ ಅವರನ್ನು ಶಾಲೆಗೆ ಕಳುಹಿಸುವುದು, ಸಂಸಾರದಲ್ಲಿ ಎಲ್ಲವನ್ನೂ ನೋಡಿಕೊಳ್ಳುವುದು, ಸಮಯದ ಅಭಾವ ಅವನಿಗೆ ಗೊತ್ತಾಗುವುದಿಲ್ಲ. ಹೆಂಡತಿ, ಮಕ್ಕಳು, ಮನೆಯ ವ್ಯವಹಾರದ ಮಧ್ಯದಲ್ಲಿ ಮತ್ತೆ ಹಳೆಯ ಗೆಳೆಯರು ಕಂಡಾಗ

ಅವಳು ಮಿಸ್ ಕ್ಯಾಟ್ಸ್ ನೆನಪು ಮತ್ತೆ ಕಾಡುತ್ತದೆ. ನಮ್ಮ ಗಮ್ಮಾರ ಅವಳನ್ನು ಮೋಹಿಸಿ, ಅವಳಿಗೋಸ್ಕರ ಒಂದು ತಿಂಗಳಕಾಲ ಅಲೆದಾಡಿ ಅವಳನ್ನು ಹೃದಯಸ್ಪರ್ಶದಿಂದ ಅವಳನ್ನು ಮನಸ್ಸಿನಲ್ಲಿಟ್ಟುಕೊಂಡು ಪೂಜಿಸಿದವನು ನಮ್ಮ ಗಮ್ಮಾರ. ಮಿಸ್ ಕ್ಯಾಟ್ಸ್ ನಂಬರ್ ತೆಗೆದುಕೊಂಡು ಮೊದಲಸಲ ಕರೆ ಮಾಡಿದಾಗ ಆ ಸಂಖ್ಯೆಯಿಂದ ಕರೆ ಹೋಗಲ್ಲ, ಕಟ್ ಆಗುತ್ತದೆ. ನಮ್ಮ ಗಮ್ಮಾರ ಆತಂಕದಿಂದ ಅವಳೇನಾದರೂ ಸಂಖ್ಯೆ ತಪ್ಪಾಗಿ ಕೊಟ್ಟಳಾ ಎಂದು ಗಮ್ಮಾರನಿಗೆ ಅನುಮಾನ ಶುರುವಾಯಿತು. ಮತ್ತೆ ಅದೇ ಸಂಖ್ಯೆಯಿಂದ ಮರಳಿ ಕರೆ ಮಾಡುತ್ತಾನೆ. ಆಗ ಕರೆ ಸದ್ದು ಕೇಳಿಸುತ್ತದೆ. ನಮ್ಮ ಗಮ್ಮಾರ ಮನಸ್ಸಿನಲ್ಲಿ ಆತಂಕಗಳು ಶುರುವಾಗುತ್ತವೆ. ಕಡೆಗೂ ದೂರವಾಣಿ ಕರೆ ಎತ್ತಿ ಯಾರು ಅಂತ ಧ್ವನಿ ಬಂತು. "ನಾ ಮಿಸ್ ಕ್ಯಾಟ್ಸ್" ಅನುಮಾನದಿಂದಲೇ ಪ್ರಶ್ನಿಸಿದ ನಮ್ಮ ಗಮ್ಮಾರ. ಆಗ ಮಿಸ್ ಕ್ಯಾಟ್ಸ್ "ಹೌದು ನಾನೇ, ನೀವು" ಆ ಕಡೆಯಿಂದ ಅನುಮಾನದ ಮಾತಿನಿಂದ ಆಗ "ನಾನೂ ಗಮ್ಮಾರ" ಮೌನವಾಗಿ ಬಿಡುತ್ತಾನೆ.. "ಓ ನೀವಾ. ಎಲ್ಲಿದ್ದಿರಿ, ಇಷ್ಟು ವರ್ಷ ಆದಮೇಲೆ ನಿಮಗೆ ನಾವು ನೆನಪು ಆಗಿದೀವಿ ಸಂತೋಷವಾಗುತ್ತಿದೆ". ನಮ್ಮ ಗಮ್ಮಾರನಿಗೆ ನಿಲ್ಲುವುದಕ್ಕೆ ಆಗ್ತಿಲ್ಲಾ. ಕುಳಿತುಕೊಳ್ಳೋದಕ್ಕೆ ಆಗಿಲ್ಲ. "ರೀ ಗಮ್ಮಾರ ಹೇಗಿದ್ದೀರ. ಏನು ಕೆಲಸ, ಮದುವೆ ಆಯ್ತಾ, ಮಕ್ಕಳು ಎಷ್ಟು ಜನ"? ಒಂದೇ ಮಾತಿನಲ್ಲಿ ಎಲ್ಲಾ ಪ್ರಶ್ನೆಗಳು ಕೇಳಿಬಿಟ್ಟಳು ಒಂದೇ ಸಲಕ್ಕೆ. ನಮ್ಮ ಗಮ್ಮಾರನಿಗೆ ಮಾತುಗಳೇ ಬರುತ್ತಿಲ್ಲ. ನಮ್ಮ ಗಮ್ಮಾರ ನೀನು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ಆಗುವುದಿಲ್ಲ. ಈಗ ದೂರವಾಣಿ ಮೂಲಕ ನಿಧಾನವಾಗಿ ಎಲ್ಲಾ ಹೇಳುತ್ತೀನಿ ಎಂದು ಕರೆಯನ್ನು ಕಟ್ಟು ಮಾಡಲು ಹೋದಾಗ ಅವಳು ನಮ್ಮ ಗಮ್ಮಾರನ ದೂರವಾಣಿ ಕರೆಯಲ್ಲಿ ಮರವನ್ನು ಹತ್ತಿಸಿದಳು. ಅದನ್ನು ಕೇಳುತ್ತಾ ನಮ್ಮ ಗಮ್ಮಾರನಿಗೆ ತಡೆಯಲಾಗದ ಸಂತೋಷ ಉಕ್ಕಿಯೇರುತ್ತದೆ.

ನಮ್ಮ ಗಮ್ಮಾರನ ಜೀವನದಲ್ಲಿ ಸಂಸಾರವನ್ನು ಗಮನದಲ್ಲಿಟ್ಟುಕೊಂಡು ಜೀವನ ನಡೆಸುತ್ತಾ ಮತ್ತೆ ಗಾಯವನ್ನು ಕೆರೆಯುತ್ತಾ ಮುಂದೆ ಪ್ರೀತಿಯನ್ನು ನೆನೆದು ಜೀವನ ಅಭಿರುಚಿ ಮತ್ತಷ್ಟು ಶೃಂಗಾರ ರಸವನ್ನು ಭಾವದೊಳಗೆ ಮತ್ತಷ್ಟು ಉಲ್ಬಣಗೊಂಡಿತ್ತು. ಹೆಂಡತಿ-ಮಕ್ಕಳ ಮೇಲೆ ಕಬರು ಇಲ್ಲದೆ ದಿನನಿತ್ಯ ದೂರವಾಣಿ ಕರೆಯುತ್ತಾ ನಮ್ಮ ಗಮ್ಮಾರನ ಚಿತ್ತ ಮನೆಯಲ್ಲಿ, ಆಫೀಸ್‌ನಲ್ಲಿ ಮಿ.ಕ್ಯಾಟ್ಸ್‌ನ ಕರೆಯುತ್ತಾ ನಮ್ಮ ಗಮ್ಮಾರನ ದೂರವಾಣಿಯಲ್ಲಿ ತೇಲಾಡುತ್ತಾ ಹೋಗುತ್ತಾನೆ. ಒಂದು ಮಾಸಿಕ ಮುಗಿದ್ರು, ವರ್ಷಗಳೇ ಕಳೆದ್ರೂ ಮಾತು, ಮಾತು. ಅದು ಗಂಟೆಗಟ್ಟಲೆ ಮಾತಿನಲ್ಲಿ ತೇಲಾಟ ನೋಡಿದ ಜನರಿಗೆ, ಮನೆಯಲ್ಲಿ ಹೆಂಡತಿ ಮಕ್ಕಳಿಗೆ ವಾಂತಿ, ವಾಕರಿಕೆ ಆಗೋ ಹಂಗಿತ್ತು. ನಮ್ಮ ಗಮ್ಮಾರನ ಗತ್ತು ಫೋನಿನಲ್ಲಿತ್ತು.

ಹೆಂಡತಿ ಕೊನೆಗೆ ಜಗಳ ತೆಗೆಯುತ್ತ ಅವಳು ನನ್ನ ಸೌತಿ ಎಲ್ಲಿರುವಳು? ಅವಳ ಜಡಿ ಹಿಡಿದು ದರದರಾ ಎಳೆದು ತಂದು ಮಾನ ಹರಾಜು ಹಾಕುತ್ತೇನೆ ಎಂದು ಹೇಳುತ್ತಾಳೆ. ಇದನ್ನು ಕೇಳಿದ ನಮ್ಮ ಗಮ್ಮಾರ ಅವಳು ನಿನ್ನಂತ ಹಳ್ಳಿಯಲ್ಲಿ ಇಲ್ಲ, ಅವಳು ಪಟ್ಟಣದಲ್ಲಿ ಇದ್ದಾಳೆ ಎಂದು ನಮ್ಮ ಗಮ್ಮಾರನು ಅವಳು ಸ್ನೇಹಿತೆ ಅವಳಿಗೆ ಎರಡು ಮಕ್ಕಳಿದ್ದಾರೆ, ನೀನು ಸಂಶಯವನ್ನು ಪಡಬೇಡ ಎಂದು ಹೇಳುತ್ತಾನೆ. ನೀನು ಆಫೀಸಿಗೆ ಹೋಗಿ ಬಂದ ತಕ್ಷಣ ಫೋನ್, ಫೋನಿನಲ್ಲಿ ಮುಳುಗಿ ಬಿಡುತ್ತೀರಾ ಎಂದು ದೇವರ ಮೇಲೆ ಹೂವು ತಪ್ಪಿದರೆ ಆದರೆ ನಿಮ್ಮಿಬ್ಬರ ಮಾತು, ದೂರವಾಣಿ ಕರೆ ನಿಲ್ಲುವುದಿಲ್ಲ ಎಂದು ಹೇಳಿ ಅದನ್ನು ಕೇಳಿ ಕೇಳಿ ಹುಚ್ಚರ ಸಹವಾಸ ಅದ್ಯೊಂಡು ಸುಮ್ಮನಾಗಿದ್ಲು.

ನಮ್ಮ ಗಮ್ಮಾರನು ಮುಂದೆ ಮಿಸ್ ಕ್ಯಾಟ್ಸ್ ತನ್ನ ಮೊದಲ ಪ್ರೀತಿ, ಪ್ರಣಯದ ಬಗ್ಗೆ ಕಥೆ ಕಟ್ಟಿ ಹೇಳುತ್ತಾ ಹೋಗುತ್ತಾಳೆ, ಅದನ್ನು ನಮ್ಮ ಗಮ್ಮಾರನು ಆಲಿಸುತ್ತಾ ಹೋಗುತ್ತಾನೆ. ಶೃಂಗಾರ ರಸದಲ್ಲಿ ತೇಲಾಡಿದ ನಮ್ಮ ಮಿಸ್ ಕ್ಯಾಟ್ಸ್ ಪ್ರೀತಿಯ ಹಂಬದಿಂದ ಇದ್ದಳು. ಅವಳು ಪ್ರೀತಿಯನ್ನು ವಿವರಣೆಯನ್ನು ನೀಡುತ್ತಾ ಹೋಗುತ್ತಾಳೆ. ಇದನ್ನು ನಮ್ಮ ಗಮ್ಮಾರ ಆಲಿಸುತ್ತಾ ಆಫೀಸಿನಲ್ಲಿ ಬೈಗಳಿಗೆ ಹರಕೆಯಾಗುತ್ತಾನೆ.

ಮತ್ತೆ ಪುನರಾರಂಭ

ನಮ್ಮ ಗಮ್ಮಾರನ ಒಂದು ಹಗಲು ಎರಡು ರಾತ್ರಿಗಳು ಆರಂಭಗೊಳ್ಳುವುದು ಇಲ್ಲಿಂದ ನೋಡಿ ವರ್ಷಗಟ್ಟಲೆ ದೂರವಾಣಿ ಕರೆಯಲ್ಲಿ ಮಾತುಗಳು ಮುಂದುವರೆಯುತ್ತಾ ಹೋಗುತ್ತವೆ. ಎಂದು ಒಂದು ದಿನ ಕರೆಯಲ್ಲಿ ಮಿಸ್ ಕ್ಯಾಟ್ಸ್ ನಾನು ನಿಮ್ಮನ್ನು ನೋಡಬೇಕ್ರಿ ಎಂದು ಹೇಳಿದ, ನೋಡೋಣ ಎಂದು ಅವಳು ಹೇಳಿದಳು ಕಛೇರಿಯಲ್ಲಿ ಯಾರು ಇದ್ದಿಲ್ಲ ಆಗ ನಮ್ಮ ಗಮ್ಮಾರ ಕರೆ ಮಾಡಿದ ಯಾರು ಇಲ್ಲ ಇವತ್ತು ನಮ್ಮ ಕಛೇರಿಯಲ್ಲಿ ಆರಾಮವಾಗಿ ಮಾತಾಡುವುದು ಎಂದು ಹೇಳಿದ. ಆಯಿತು ಊಟ ಆಯಿತ ಎಂದು ಕೇಳಿದ. ಆಯಿತು ಎಂದು ಮಿಸ್ ಕ್ಯಾಟ್ಸ್ ಹೇಳಿದಳು. ಅದೇ ಮಾತು ಹಾಂ. ಹೂಂ. ಇದೇ ನಿರಂತರವಾಗಿ ಮಾತುಗಳು ಬೆಳೆದವು. ಮಾಮೂಲಾಗಿ ಪ್ರಶ್ನೆಗಳು ಒಂದರ ಮೇಲೊಂದ ಕೇಳುತ್ತ ಹೋದಳು ಮಿಸ್ ಕ್ಯಾಟ್ಸ್, ಅದಕ್ಕೆ ತಲೆದೂಗುತ್ತಾ ಹೋದ ನಮ್ಮ ಮಿ.ಗಮ್ಮಾರ.

ನಮ್ಮ ಮಿಸ್ ಕ್ಯಾಟ್ಸ್ ತನ್ನ ಮನಸ್ಸು, ಪ್ರಣಯವನ್ನು ಕವಿತೆ ಕಟ್ಟಿ ಹೇಳಿದಳು. ಹೆಣ್ಣಿನ ಅರ್ಥದಲ್ಲಿ ಕಾಮದ ಹಂಬಲ ಒಗಟಿನರ್ಥದಲ್ಲಿ ತಿಳಿಸಲು ಪ್ರಯತ್ನ ಪಡುತ್ತಾಳೆ ಮಿಸ್ ಕ್ಯಾಟ್ಸ್ ಆದರೆ ನಮ್ಮ ಗಮ್ಮಾರನಿಗೆ ಅದು ಯಾವುದು ಅರ್ಥವಾಗುವುದಿಲ್ಲ. ಆದರೆ ಈ ಪ್ರಕೃತಿಯಲ್ಲಿ ಜೀವಿಸುವ ಪ್ರತಿಯೊಂದು ಪ್ರಾಣಿ, ಪಕ್ಷಿಗಳು ಕಾಮವನ್ನು

ವ್ಯಕ್ತಪಡಿಸಲು ತಮ್ಮದೇ ಆದ ಆಚರಣೆಯನ್ನು ಹೊಂದಿರುತ್ತವೆ. ಅದೇ ನೋಡಿದಾಗ ಗಂಡು ನವಿಲು ತಾನು ಗರಿಗೆದರಿ ಕುಣಿದರೆ ಹೆಣ್ಣಿಗೆ ಅದರ ಕಾಮದ ವಾಸನೆ ಬಡಿಯುತ್ತದೆ. ಗಂಡಿನ ಧ್ವನಿಯೊಳಗೆ ಮೋಹಕ ಕೂಗಿರುತ್ತದೆ. ಅದು ಹೆಣ್ಣು ನವಿಲಿಗೆ ಅರ್ಥವಾಗುತ್ತದೆ. ಆದರೆ ನಮ್ಮ ಗಮ್ಮಾರನಿಗೆ ಮಿಸ್ ಕ್ಯಾಟ್ಸ್ ತನ್ನ ಕಾಮದ ಆಸೆಯನ್ನು ಕವಿತೆಯಿಂದ ಹೇಳಿದರೆ ಅದನ್ನು ಅರ್ಥೈಸಿಕೊಳ್ಳಲು ಬಹಳಷ್ಟು ತಡಕಾಡುತ್ತಾನೆ. ಮನುಷ್ಯ ಜಗತ್ತಿಗೆ ಪ್ರಕೃತಿ ಭಾಷೆಯಂತಹ ಸುಲಿದ ರಸಬಾಳೆಯನ್ನೇ ಅಷ್ಟ ರಸಗಳನ್ನು ಕೊಟ್ಟ ಮಾತಲ್ಲೇ ಅಭಿವ್ಯಕ್ತಿಸಲು ಅನುವು ಮಾಡಿಕೊಟ್ಟಿರುವಾಗ ಶಬ್ದಗಳ ಚೌಕಾಸಿ ಬೇಕಿಲ್ಲ ಅಥವಾ ಹೆಣ್ಣಿನ ಒಳಾಂತರಾಳದ ಮಾತುಗಳನ್ನು ಜಗವನ್ನರಿಯದಷ್ಟು ಪೆದ್ದನೆ ಈ ಗಂಡಸರು ಎಂದು ಮಿಸ್ ಕ್ಯಾಟ್ಸ್ ಶೃಂಗಾರ ರಸಕಾವ್ಯವನ್ನು ಕಟ್ಟುವ ನಿಪುಣೆ. ಇವನು ದೂರದಿಂದಲೇ ಹಲ್ಲು ಗಿಂಜುತ್ತ ಪೇಪರಿನ ಮೇಲೆ ಅವಳನ್ನು ವರ್ಣಿಸುವನು. ಅವಳು ಅನೇಕ ಅಂತರಾಳದ ಮಾತುಗಳನ್ನು ವರ್ಣಿಸಿದಳು ಆದರೆ ನಮ್ಮ ಗಮ್ಮಾರನಿಗೆ ಅರ್ಥವಾಗುವುದಿಲ್ಲ. ಆದರೆ ನಮ್ಮ ಗಮ್ಮಾರನು ಅವಳನ್ನು ಕುರಿತು ಅನೇಕ ಪದ್ಯಗಳನ್ನು ರಚಿಸಿದ್ದ. ಅದನ್ನು ಹೇಳಬೇಕೆಂದರೆ ಆಗುತ್ತಲಿಲ್ಲ. ಪರಸ್ತ್ರೀ ಅವಳು ಎಂದು ಹಿಂಜರಿದನು. ಕೊನೆಗೆ ಅವಳನ್ನು ಕುರಿತು ಬರೆದಿರುವ ಪದ್ಯಗಳು ಹೇಳೇ ಬಿಡುತ್ತಾನೆ. ಮಿಸ್ ಕ್ಯಾಟ್ಸ್ ಕೂಡಾ ಇವನ ಕವಿತೆ/ಪದ್ಯಗಳನ್ನು ಕೇಳಿ ವಾವ್ ಸೂಪರ್ ಎಂದಳು. ತದನಂತರ ಎರಡು ಗಂಟೆ ಬಿಟ್ಟು ಕರೆ ಮಾಡಿ ಕವಿಗಳೆ ನಿಮಗೊಂದು ಆಶ್ಚರ್ಯ ಕಣ್ರೀ ಅಂದ್ಲು. ಇದೇನಪ್ಪ ಅಚ್ಚರಿ, ಇವಳೇನಾರು ನಾನಿರುವ ಜಾಗಕ್ಕೆ ಬರ್ತಿದ್ದಾಳ ಅಥವಾ ಅಂದ್ಕೊಳ್ಳಿರುವಾಗಲೇ ರೀ ನನ್ನ ಕವಿತೆ ಕೇಳಿ ಅಂದಳು. ವಾರೆವಾ ಓದಿ ಓದಿ ಅಂತಾ ನಮ್ಮ ಗಮ್ಮಾರ ಕುತೂಹಲದಿಂದ ಹೇಳಿದ. ಆದರೆ ನಿಮ್ಮಷ್ಟು ಚೆನ್ನಾಗಿಲ್ಲ ಬೈಯ್ಯಬೇಡಿ ಎಂದು ಒಂದು ಪೇಪರ್, ಪೆನ್ನು ತಗೊಂಡು ಬರ್ಕೊಳ್ಳಿ ಎಂದು ಹೇಳಿ ಅವನನ್ನು ವರ್ಣಿಸುತ್ತಾ ಹೋದಳು. ಈ ಕವಿತೆಯಿಂದ ಗಮ್ಮಾರನಿಗೆ ನಾನು ಅವಳಿಗೆ ಇಷ್ಟವಾಗಿದ್ದೇನೆ ಎಂದು ತಿಳ್ಕೊಂಡು ತುಂಬಾ ಖುಷಿಯಾಗಿಬಿಟ್ಟ. ಆದರೆ ಮಿಸ್ ಕ್ಯಾಟ್ಸ್‌ಗೆ ಎರಡು ಮಕ್ಕಳು, ಗಮ್ಮಾರನಿಗೆ ಮೂರು ಮಕ್ಕಳು ಆದರೆ ತಮ್ಮ ಹಳೆಯ ನೆನಪುಗಳು ಮರೆಯಲಾಗದೆ ಇಬ್ಬರೂ ಒದ್ದಾಡುತ್ತಿದ್ದರು. ನಮ್ಮ ಗಮ್ಮಾರನಿಗೆ ಮಿಸ್ ಕ್ಯಾಟ್ಸ್ ಹೇಗಿರಬಹುದು ಈಗ ಅದೇ ಬಣ್ಣ, ಮೈಕಟ್ಟು ಕಲ್ಪನೆಯನ್ನು ಕಾಣತೊಡಗಿದ.

ಅವಳು ಆಗ ಹದಿಹರೆಯದ ವಯಸ್ಸು ಹದಿನೆಂಟು, ಅವಳು ಕಪ್ಪು, ಮೈಬಣ್ಣ ಅಷ್ಟೇನಾ ತೆಳ್ಳಗಲ್ಲದ ದೇಹ ಗಂಡಸು, ಸಹಜವಾಗಿಯೇ ಆಕರ್ಷಿಸುವ ಅವಳ ಮೈಕಟ್ಟು, ಮುಖಲಕ್ಷಣ ಕಣ್ಣುಗಳು ಚಿಟ್ಟೆಯಂತೆ ಪಟಪಟ ಬಡಿಯುತ್ತಿದ್ದಳು. ಇದನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಗಮ್ಮಾರ ಈಸಾರಿ ದೂರವಾಣಿ ಕರೆ ಬಂದರೆ ಕೇಳಬೇಕು

ಎಂದುಕೊಂಡ. ಅವಳಿಗೂ ಅಷ್ಟೇ ಕುತೂಹಲದಿಂದ ಕಾಯುತ್ತಿದ್ದಳು. ಗಮ್ಮಾರ ಬಗ್ಗೆ ಬಹಳಷ್ಟು ಪ್ರೀತಿಯಿಂದ ಇವನ ಮೈಕಟ್ಟು, ಇವನ ಬಣ್ಣ, ಕ್ಯಾಂಪಿನಲ್ಲಿ ಪ್ರತಿಯೊಂದು ಹುಡುಗಿಯರ ಬಾಯಲ್ಲಿ ಅವಳ ಹೆಸರು ಜಪ ಮಾಡುತ್ತಿದ್ದರು. ಹಾಡುಗಾರ ಎಂದಾಗ ಕೇಳಬೇಕೆ, ನಮ್ಮ ಗುಂಪಿನ ಹುಡುಗಿಯರ ಎದೆಯೊಳಗೆ ಗಮ್ಮಾರನೇ ನೆಲೆಸಿದ್ದ. ಮಿಸ್ ಕ್ಯಾಟ್ಸ್‌ಗೆ ಯಾರಾದರೂ ಗಮ್ಮಾರನ ಹೊಗಳಿದರೆ ಅವಳಿಗೆ ಸಹಿಸಿಕೊಳ್ಳುತ್ತಿರಲಿಲ್ಲ. ಆದರೂ ಅವನನ್ನು ಬಿಟ್ಟು ಸ್ವಲ್ಪ ಹೊತ್ತು ಇರುತ್ತಿರಲಿಲ್ಲ. ಅವನ ಹಿಂದೆ ಸುತ್ತಾಟ ಮಾಡುತ್ತಿದ್ದಳು. ಅವನ ಪಕ್ಕದಲ್ಲೇ ಕೂಡುವುದು, ಕಾರ್ಯಕ್ರಮ, ಹಾಡು, ನಾಟಕ, ಊಟ, ಬಸ್ಸಲ್ಲಿ ಜೊತೆಯಲ್ಲಿ ಅಡ್ಡಾಡುತ್ತಿದ್ದಳು. ಇದನ್ನು ಕಂಡು ಅಲ್ಲಿರುವವರು ಸ್ನೇಹ, ಪ್ರೀತಿ ಇನ್ನೂ ಕೆಲವರು ವ್ಯಾಮೋಹ ಅಂತ ಹೇಳಿ ಕಥೆ ಕಟ್ಟಿದ್ದರು. ಇವರು ಎಲ್ಲಾರಿಗೂ ಬೇಸರವಾಗಿ ಬಿಟ್ಟಿದ್ದರು. ಯಾವ ಕಾರಣಕ್ಕೆ ಎಂದರೆ ಕ್ಷಣಾಯಣ.

ನಮ್ಮ ಗಮ್ಮಾರನು ಮಿಸ್ ಕ್ಯಾಟ್ಸ್ ನೋಡಬೇಕು ಎಂದನು. ಬರೇ ಫೋನಿನಲ್ಲಿ ಮಾತಾಡುವುದು ಆಯಿತು, ಭೇಟಿಯಾಗಬೇಕು ಎಂದು ಹೇಳಿದಾಗ ಮಿಸ್ ಕ್ಯಾಟ್ಸ್ ಸರಿ ನಾನು ಒಂದು ದಿನ ಹೇಳುತ್ತೀನಿ ಎಂದು ಹೇಳಿದಳು. ಈಗ ಹೇಗಿದ್ದೀರ ಎಂದು ನಮ್ಮ ಗಮ್ಮಾರ ಕೇಳಿದ. ಈಗ ನಾನು ಬಹಳ ದಪ್ಪ ಆಗಿದ್ದೀನಿ ನೀನು ನನ್ನ ಗುರುತು ಹಿಡಿಯಲು ಆಗುವುದಿಲ್ಲ ಎಂದು ಹೇಳಿದಳು. ಮಿಸ್ ಕ್ಯಾಟ್ಸ್ ನಮ್ಮಿಬ್ಬರ ಭೇಟಿ ಇನ್ನೂ ಒಂದು ವಾರಗಳು ಅಂತ ಹೇಳಿದಳು. ಅದನ್ನು ಕೇಳಿದ ನಮ್ಮ ಗಮ್ಮಾರನಿಗೆ ಒಂದು ವಾರಗಳ ಕಾಲ ಏನೇನು ಕಲ್ಪನೆಯನ್ನು ಕಾಣತೊಡಗಿದ. ಗಮ್ಮಾರ ಸಾವಿರಾರು ಕನಸುಗಳನ್ನು ಕಾಣಲು ಆರಂಭಿಸಿದ. ಅವಳೇನೋ ಬಾ ಎಂದುಬಿಟ್ಟಳು. ಆದರೆ ನಮ್ಮ ಗಮ್ಮಾರನಿಗೆ ಮನೆ ಸಮಸ್ಯೆಯಿಂದ ಹೇಗಪ್ಪಾ ಮಾಡುವುದು ಎಂದು ಅಂದುಕೊಂಡು ಗಮ್ಮಾರ ಹೆಂಡತಿಗೆ ಏನೇನೋ ಸಾಬೂಬು ಹೇಳಿದ. ಇಲ್ಲ ನನಗೆ ಕೆಲಸ ಇದೆ ತಕ್ಷಣಕ್ಕೆ/ತುರ್ತಾಗಿ ಹೊರಡಬೇಕು ಎಂದು ವಾರದ ಮೊದಲು ತನ್ನ ಮನಸ್ಸಿನಿಂದ ಗಮ್ಮಾರ ಹೆಂಡತಿಯನ್ನು ತಯಾರು ಮಾಡಿ ಮೊದಲ ದಿನ ಸಂಜೆ ಬಸ್ಸಿಗೆ ಪ್ರಯಾಣ ಬೆಳೆಸಿದ. ಅವಳು ಹೇಳಿದ ದೂರವಾಣಿ ಸಂಖ್ಯೆಗೆ ಕರೆ ಮಾಡಿದ, ಅವಳ ಕಛೇರಿ ವಿಳಾಸ ಮಿಸ್ ಕ್ಯಾಟ್ಸ್ ಹೇಳಿದಳು. ಅಂತಹ ದೊಡ್ಡ ಪಟ್ಟಣದಲ್ಲಿ ಅವಳ ಕಛೇರಿ ಹುಡುಕುವುದು ಬಹಳ ಕಷ್ಟ ಅನಿಸಿತ್ತು.

ಮಿಸ್ ಕ್ಯಾಟ್ಸ್ ತನ್ನ ಡ್ರಸ್ ಮತ್ತು ತನ್ನ ಕೈನೆಟಿಕ್ ಹೊಂಡ, ಬಣ್ಣ ಕರಿದು ಅದರ ನಂಬರ್ ಕೆ.ಎ. 6373 ಎಂದು ಹೇಳಿದಳು. ಆಗ ನಮ್ಮ ಗಮ್ಮಾರನನ್ನು ಗುರುತು ಹಿಡಿಯೋದು ಹೇಗೆ ಎಂದು ಕೇಳಿದ್ಲು. ನಮ್ಮ ಗಮ್ಮಾರನು ನಾನು ಉದ್ದ ಗಿರೀನ ಅಂಗಿ-ಕರಿ ಪ್ಯಾಂಟ್ ಹಾಕ್ಕೊಂಡು ನೀವು ಹೇಳಿದ ಜಾಗದಲ್ಲೇ ನಿಂತಿರ್ತೀನಿ ಅಂತ

ಹೇಳಿದ. ಅವಳು 30 ನಿಮಿಷದೊಳಗೆ ಅವನ ಎದುರು ಬಂದು ನಿಲ್ಲುತ್ತಾಳೆ. ಅಲ್ಲಿ ತಾವು ಇಬ್ಬರು ಭೇಟಿಯಾಗಿ ಪರಿಚಯ ಮಾಡಿಕೊಂಡು ಕೈನೆಟಿಕ್ ಹೋಂಡದ ಮೇಲೆ ಅವಳ ಆಫೀಸಿಗೆ ಹೊರಟರು. ದೈಹಿಕವಾಗಿ ಅವಳು ಬಹಳಷ್ಟು ಬದಲಾವಣೆಯಾಗಿದ್ದಳು. ಗಜಗಾಮಿನಿಯಂತಾಗಿದ್ದಳು. ಅವಳ ಕಛೇರಿಯಲ್ಲಿ ಯಾರು ಇರುವುದಿಲ್ಲ, ಇವರಿಬ್ಬರು ಮಾತ್ರ. ಪಕ್ಕದಲ್ಲಿದ್ದ ಎರಡು ಮೂರು ಅಂಗಡಿಗಳು ಬಾಗಿಲು ಮುಚ್ಚಿದ್ದವು. ಇಬ್ಬರೂ ಹಗಲೆಲ್ಲಾ ಅದೇ ಮಾತುಗಳು ಮಾತಾಡತೊಡಗಿದರು. ಅವರು ವಾಪಸ್ಸು ಆದಾಗ ಸಂಜೆ 6 ಗಂಟೆಯಾಗಿತ್ತು. ತಮ್ಮ ಎಲ್ಲಾ ಹಳೆ ನೆನಪುಗಳು ಮೆಲುಕು ಹಾಕಿದ್ದರು. ಅವಳು ತನ್ನ ಕಾಮವನ್ನು ಹೇಳದೆ ಸನ್ನೆ ಮುಖಾಂತರ ಅವನ ಎದೆಯ, ತೊಡೆಯ ಮೇಲೆ ಕೈಯಿಟ್ಟು ಮಾತಾಡುತ್ತಿದ್ದಳು. ಆದರೆ ನಮ್ಮ ಗಮ್ಮಾರನು ಅವಳನ್ನು ಕಾಸ್ಮೊಪೊಲಿಟಿಯನ್ ಸಂಸ್ಕೃತಿಯಲ್ಲಿ ಬೆಳೆದವಳು ಇವಳಿಗೆ ಎಷ್ಟು ಹುಡುಗರು ಪ್ರಪೋಸ್ ಮಾಡಿದ್ದರು. ಯಾರೋ ಇವಳಿಂದೆ ಬಿದ್ದಿದ್ದರು ಅದನ್ನು ಮೆಲುಕು ಹಾಕುತ್ತಿದ್ದನು. ಮತ್ತೆ ದೆಹಲಿಯಲ್ಲಿ ಶಿಬಿರದಲ್ಲಿ ಕಳೆದ ಸಮಯವನ್ನು ನೆನೆಸಿಕೊಳ್ಳುತ್ತಿದ್ದನು. ನಮ್ಮ ಮಿಸ್ಟರ್ ಗಮ್ಮಾರನು ಇದರಲ್ಲಿ ಮೊಳಗಿರುವುದು ಇವಳ ಜೊತೆಯಲ್ಲಿ ಕಂಡುಬರುತ್ತದೆ.

ನಮ್ಮ ಗಮ್ಮಾರನು 20 ವರ್ಷಗಳ ನೆನಪು ಮೆಲುಕು ಹಾಕುತ್ತಾ ಅವಳು ಇವನಿಗೆ ಸಿಗಲಿಲ್ಲ. ಆದರೆ ಅವಳು ನಮ್ಮ ಗಮ್ಮಾರನ ಜೊತೆ ಕಾಮದಾಟ ನಡೆಸಲು ಮುಗಿ ಬೀಳುತ್ತಾಳೆ. ಆದರೆ ಗಮ್ಮಾರನು ಅದಕ್ಕೆ ಮನಸೋಲದೆ ಸುಮ್ಮನೆ ಕುಳಿತಿರುತ್ತಾನೆ. ಅವಳು ಗಮ್ಮಾರನಿಗೆ ನೀವು ಅವಾಗ ಹೇಗಿದ್ರೋ ಈಗಲೂ ಹಾಗೇ ಇದ್ದೀರಾ ಎಂದು ಮಿಸ್ ಕ್ಯಾಟ್ಸ್ ಹೇಳಿದಳು. ಅವನು ಅಂದ್ರೆ ಯಾವಾರ್ಥದಲ್ಲಿ ಬದಲಾವಣೆ ಬಯಸ್ತಿದ್ದೀರಾ ನೀವು? ಯಾವ ಅರ್ಥದಲ್ಲಿ ಅವಳು ಬಾಯಿ ಬಿಟ್ಟು ಹೇಳಲೇ ಇಲ್ಲ. ಮರ್ಮಾಂಗಕ್ಕೆ ನೇರವಾಗಿ ಘಾಸಿಗೊಳಿಸಿದ್ದಳು. ಆದರೆ ಅವನು ನೀವು ಹೀಗೆಲ್ಲಾ ಸಿಂಬಾಲಿಕ್ ಆಗಿ ಮಾತಾಡಿದರೆ ಹೇಗೆ? ನನಗೆ ಅರ್ಥವಾಗುವ ರೀತಿಯಲ್ಲಿ ಬಿಡಿಸಿ ಹೇಳಬೇಕು ಅಂದು ಹೇಳುತ್ತಾನೆ. ಅವನು ಅವಳ ಕಾಮದ ಆಸೆ ತೀರಿಸದ ಅವಳು ದಾಹದಿಂದ ಎಷ್ಟು ಒಗಟುಗಳು ಹಾಕಿ ಹೇಳಿದರೂ ಅವನಿಗೆ ಅರ್ಥವಾಗಲಿಲ್ಲ. ಅವನು ಸಮಯ ನೋಡಿ ಬಸ್ ನಿಲ್ದಾಣಕ್ಕೆ ಬಂದು ವಾಪಾಸ್ಸು ಊರಕಡೆ ಮರಳಿದನು.

ಅವಳು ಕಛೇರಿಯಿಂದ ಸೀದಾ ತಮ್ಮ ಮನೆಗೆ ಕರೆದು ಆಹ್ವಾನಿಸಿದಳು. ಅವಳು ಒಬ್ಬಳೆ ಆದರೂ ಇಂತಹ ಸಮಯ ಯಾರಿಗಾದರೂ ಸಿಕ್ಕರೆ ಇದನ್ನು ಉಪಯೋಗ ಮಾಡಿಕೊಳ್ಳುವ ಸಮಯದಲ್ಲಿ ಇವನು ಏನು ಕಾಣದ ಪೆದ್ದನಂತೆ ವರ್ತಿಸುತ್ತಾನೆ ಎಂದುಕೊಂಡಳು. ಅವಳು ಮೂಡಾಗಿ ಕಾಮದಿಂದ ಎಷ್ಟೆ ಕೈ, ಮೈ ಮುಟ್ಟಿ ಮಾತಾಡಿಸಿದರೂ ಅವನು ಅವು ಯಾವಕ್ಕೂ ಜಗ್ಗದೇ ಸುಮ್ಮನಾಗಿರುತ್ತಾನೆ. ತನ್ನ

ದೇಹದಿಂದ ಅವನ ದೇಹಕ್ಕೆ ಸ್ಪರ್ಶ ಮಾಡಿದರು ಅವನಿಗೆ ಏನು ಅದರಬಗ್ಗೆ ಗಮನ ಹರಿಸಲಿಲ್ಲ. ಅವಳು ಇವನ ಜೊತೆ ಕಾಮಕ್ಕೆ ಬಂದ ಶ್ವಾನದಂತೆ ಹಾತೋರಿದಳು, ಅವನಲ್ಲಿ ಕೂಡಾ ಒಳಗೊಳಗೆ ನಾಗರಹಾವಿನಂತೆ ಹೆಡೆಬಿಚ್ಚಿ ಬುಸುಗುಡುತ್ತಿತ್ತು. ಆದರೆ ಅವಳಿಗೆ ಇದೆ. ಆದರೆ ಇವನು ಬಿಚ್ಚದೆ ಮನಸ್ಸಲ್ಲಿ ಕೊರಗುತ್ತಾ ನಡೆದ. ಅವಳು ಅವನಿಗೋಸ್ಕರ ಟೀ ಶರ್ಟ್ ಕೊಡುಗೆ ನೀಡುತ್ತಾಳೆ. ಇವನು ಅವಳ ಮನೆಯಿಂದ ಬಸ್‌ನಿಲ್ದಾಣಕ್ಕೆ ಬಂದಮೇಲೆ ನಾನೊಬ್ಬ ಗಂಡಸು ಆಗಿ ಅವಳು ಅಷ್ಟು ಹಾತೋರಿದರೂ ನಾನು ಅವಳನ್ನು ಮುಟ್ಟುವುದಕ್ಕೆ ಹೋಗಲಿಲ್ಲ ಎಂದು ಮನಸ್ಸಿನಲ್ಲಿ ನೊಂದುಕೊಳ್ಳುತ್ತಾನೆ.

ಮತ್ತೆ ಅವೇ ಖಾಲಿ ಮಾತುಗಳು ಫೋನಲ್ಲಿ ಗಂಟೆಗಟ್ಟಲೇ ನಡೆದವು. ನಮ್ಮ ಗಮ್ಮಾರನಿಗೆ ಕಛೇರಿಯಲ್ಲಿ ಸದಾ ನೀನು ದೂರವಾಣಿ ಕರೆಯಲ್ಲಿ ಇರುತ್ತೀಯಾ ಫೈಲುಗಳು ಯಾವಾಗ ನೋಡುತ್ತೀಯಾ ಎಂದು ರೇಗಿಸುತ್ತಾರೆ. ಆಗ ಅವನು ಕೋಪಗೊಂಡು ನಾನು ನನ್ನ ಹೆಂಡತಿ ಜೊತೆಗೆ ಮಾತಾಡ್ತಿದ್ದೀನಿ ಎಂದು ಹೇಳಿಬಿಟ್ಟ ನಮ್ಮ ಗಮ್ಮಾರ.

ಮಿಸ್ ಕ್ಯಾಟ್ಸ್ ಗಮ್ಮಾರನಿಗೆ ಫೋನ್ ಮಾಡಿ ಒಂದು ವಿಷಯ ಹೇಳುತ್ತೀನಿ ಅಂತ ಹೇಳಿ, ಇವತ್ತು ಬೇಡ ನಾಳೆ ಹೇಳುತ್ತೀನಿ ಅಂದು ತಲೆಯಲ್ಲಿ ಹುಳ ಬಿಡುತ್ತಾಳೆ. ಅದಕ್ಕೆ ನಮ್ಮ ಗಮ್ಮಾರ ಬಹಳಷ್ಟು ಕೊರಗುವುದು, ಮರಗುವುದು ಕಾಣುತ್ತೇವೆ. ಆದರೆ ಅವಳು 15 ದಿನಗಳ ಕಾಲ ದೂರವಾಣಿ ಕರೆ ಮಾಡುವುದಿಲ್ಲ. ಅದನ್ನು ಕಂಡ ಕಛೇರಿಯಲ್ಲಿ ಇಬ್ಬರಿಗೂ ಜಗಳವೇನಾದರೂ ಆಯಿತೆ ದೂರವಾಣಿ ಕರೆ ಬರಲೇ ಇಲ್ಲ ಎಂದು ಮಾತಾಡತೊಡಗಿದರು. ಕಛೇರಿಯಲ್ಲಿ ಗಮ್ಮಾರನನ್ನು ನಗೆಪಾಟಲಿಗೆ ತೆಗೆದುಕೊಂಡಿದ್ದರು ನಮ್ಮ ಗಮ್ಮಾರ ಕೋಪದಿಂದ ಯಾರಾದರೂ ಫೋನ ಮಾಡಬೇಕು ಅಂದರೆ ನಸೀಬ ಬೇಕು. ಹಣೆಬರಹದಲ್ಲಿ ಪಡೆದುಕೊಂಡು ಬಂದಿರಬೇಕು ಅಂತ ಹೇಳಿದ ಅದನ್ನು ಕೇಳಿ ಕಛೇರಿಯ ಎಲ್ಲಾರೂ ಮುಚ್ಚಿಕೊಂಡು ಕುಳಿತರು.

ನಮ್ಮ ಕಾದಂಬರಿ ತಿರುವು ನಾವು ಇಲ್ಲಿಂದ ಕಾಣಹೋಗುತ್ತೀವಿ. 15 ದಿನಗಳ ಕಾಲದ ವಿಷಯ ಈಗ ತಾನು ಎಲ್ಲಾ ತಯಾರಿ ನಡೆಸಿ ಈಗ ಮಿಸ್ ಕ್ಯಾಟ್ಸ್ ನಮ್ಮ ಗಮ್ಮಾರನಿಗೆ ತಿಳಿಸುತ್ತಾಳೆ. ಅದನ್ನು ಕೇಳಿ ಗಮ್ಮಾರ ಅಲ್ಲಾ ಕಣ್ರೀ ಏನು ವಿಷಯ ಅಂತ ಹೇಳದೇ ನನಗೆ ನೀವೇ ಎಲ್ಲಾ ಒಗಟಿನ ಮಾತುಗಳು ಆಡಿದರೆ ಏನು ಪ್ರಯೋಜನ ಎಂದು ಕೇಳುತ್ತಾನೆ. ಆಗ ಅವಳು ತಪ್ಪಾಯಿತು ಕ್ಷಮಿಸಿ ಅಂತಾ ಹೇಳಿ ಮದುಮಗನನ್ನು ಬಿಟ್ಟು ಮದುವೆಗೆ ಹೋಗಿದ್ರಂತೆ, ಹಂಗಾಯಿತು ನೋಡಿ ನನ್ನ ಪರಿಸ್ಥಿತಿ. ಅಂತಾ ಮತ್ತೆ ತಾಳ್ಮೆ ಪರೀಕ್ಷೆ ಮಾಡಿದ್ದಳು. ಅವಳು ಸಣ್ಣ ಧ್ವನಿಯಲ್ಲಿ ಪಿಸುಮಾತಿನಿಂದ ನಾನು ಪ್ರವಾಸಕ್ಕೆ ಉತ್ತರ ಭಾರತದ ಕಡೆಗೆ ಹೊರಟಿದ್ದೇನೆ ಮಾತು ನಿಲ್ಲಿಸಿದಳು. ಬರಾಕೂರು ಸಿಟಿಯಲ್ಲಿ ನಮ್ಮ ತಂಡ ಸೇರಿಕೊಳ್ಳುತ್ತೆ ನಾನು ಎರಡು ದಿನ ಮುಂಚೆ ಪ್ರಯಾಣಿಸುವ

ಆಲೋಚನೆಯಲ್ಲಿದ್ದೇನೆ ಎಂದು ಅವಳು ಹೇಳಿದಳು. ಮತ್ತೆ ನೀವು ಹೇಗಾದರೂ ಮಾಡಿ ನನ್ನೊಟ್ಟಿಗೆ ಒಂದೇ ಬಸ್ಸಿನಲ್ಲಿ ಬಾರಕೊರ ವರೆಗೆ ಪ್ರಯಾಣಿಸಬೇಕು ಎಂದು ಅವನ ಮಾತಿಗೋಸ್ಕರ ಕಾದಳು. ಇವನು ನಾನು ಅಲ್ಲಿಗೆ ಬಂದು ಏನು ಮಾಡಲಿ ಎಂದು ಕೇಳುತ್ತಾನೆ. ಅವಳ ಕೋಪ ನೆತ್ತಿಗೆ ಏರಿಹೋಯಿತು. ನಿಮಗೆ ನಾನು ಹೇಳುವುದು ಅರ್ಥಾನೇ ಆಗುವುದಿಲ್ಲ ನಾನು ಏನು ಹೇಳ್ತಿದ್ದೀನಿ? ನೀವೇನು ಮಾತಾಡ್ತಿದ್ದೀರಾ? ಮಾತು ಖಾರವಾಗಿತ್ತು. ಆಯ್ತು ಮುಂದೆ ಮತ್ತೇನು ಹೇಳಿ ಅಂದ.

ನಾವಿಬ್ಬರು ಹೋಗ್ತಿರೋದು ಸ್ಲೀಪಿಂಗ್ ಕೋಚ್ ಎಂದು ಅವಳು ಹೇಳುತ್ತಾಳೆ. ಅದು ನಮ್ಮ ಗಮ್ಮಾರನಿಗೆ ಅರ್ಥಾನೇ ಆಗುವುದಿಲ್ಲ. ಅದನ್ನು ಬಿಡಿಸಿ ಹೇಳಿ ಅರ್ಥೈಸುತ್ತಾಳೆ. ಅದು ಬಸ್ಸಿನಲ್ಲಿ ಆರಾಮವಾಗಿ ಮಲಗಿ ಹೋಗುವುದು ಅಂತಾ ಹೇಳುತ್ತಾಳೆ. ಅದನ್ನು ಕೇಳಿ ರಕ್ತ ಮೇಲೆ ಚಿಮ್ಮಿ, ಉತ್ಸಾಹದ ಬುಗ್ಗೆ ಚಿಮ್ಮಿದಂತಾಗಿ ಮುಂದೆ ಒಂದೇ ಸೀಟಿನಲ್ಲಿ ನಾವಿಬ್ಬರು ಪ್ರಯಾಣಿಸುತ್ತಿದ್ದೇವೆ. ನಿಮ್ಮನ್ನು ನನ್ನ ಸ್ನೇಹಿತೆ ಅಂತ ಸ್ತ್ರೀಯರ ಹೆಸರು ಕೊಟ್ಟು ರಿಜರ್ವ್ ಮಾಡಿಸಿದ್ದೇವೆ. ಯಾವಾಗ ಎಲ್ಲಿಂದ ಎಂಬುವುದು ಪ್ರತಿಯೊಂದು ಮಾಹಿತಿ ನಿಮಗೆ ಕೊಡ್ತೀನಿ. ವಿಷಯ ಭದ್ರವಾಗಿರಬೇಕು ಎಂದು ಅವಳು ಹೇಳುತ್ತಾಳೆ. ಇದನ್ನು ಕೇಳಿ ಅವಳು ತಲೆಯೊಳಗೆ ಹುಳುಗಳನ್ನು ರಾಶಿಯಾಗಿ ಬಿಟ್ಟಳು ಎಂದು ಫೋನ್ ಇಟ್ಟನು. ಅವಳು ಮತ್ತೆ ಮೂರು ದಿನ ಫೋನ್ ಮಾಡಲಿಲ್ಲ. ಇವನು ಹುಚ್ಚನಂತೆ ತಲೆಯೊಳಗೆ ಆಲೋಚನೆ, ಆಸೆ, ಕನಸು ಕಾಣುತ್ತಾ ಹೋದನು.

ನಮ್ಮ ಕಾದಂಬರಿ ಇಲ್ಲಿಂದ ಪುನರಾರಂಭವಾಯಿತು ನೋಡಿ. ನಮ್ಮ ಗಮ್ಮಾರ ಮತ್ತು ಮಿಸ್ ಕ್ಯಾಟ್ಸ್ ಕೂಡುವ ಸಮಯ ಬಂದೇ ಬಿಡ್ತು ಇಬ್ಬರೂ ಕೂಡುವ ಸ್ಥಳವನ್ನು ನಾವು ಗಮನವಿಟ್ಟು ಆಲೋಚಿಸಬೇಕು. ನಮ್ಮ ಕಳ್ಳಾಟದ ಪ್ರಣಯಗಳು, ಪ್ರಸಂಗಗಳು ಪ್ರೀತಿಗೆ ಯಾವ್ದೇ ರೀತಿಯ ತೊಂದರೆಯಾಗದಂತೆ ನಮ್ಮ ಹೆಣ್ಣು ತಿರುಗುಬಾಣಗಳ ಹಾಗೆ ಕಾರ್ಯ ನಿರ್ವಹಿಸಿ, ತಮ್ಮ ಪ್ರೀತಿಯಲ್ಲಿ ಮುಳುಗಿಸಿಬಿಡುತ್ತಾರೆ. ಹೆಣ್ಣಿನ ಬಲೆಯಲ್ಲಿ ಬಿದ್ದರು ಈಜಾಡುವುದು ನಿರಂತರ, ನೀರಿನ ಜಲೆಯನ್ನು ತಿಳಿಯಲು ಸಾಧ್ಯವಿಲ್ಲ, ಹೆಣ್ಣು ಒಂದು ಮಾಯೆ, ಅದು ಆಡಿಸಿದಂತೆ ಆಡುವನು ನಮ್ಮ ಮಿಸ್ಟರ್ ಗಮ್ಮಾರನು.

ಮಿಸ್ ಕ್ಯಾಟ್ಸ್ ನಮ್ಮ ಗಮ್ಮಾರನಿಗೆ 20ನೇ ತಾರೀಖುಗೆ ನೀವು ನಮ್ಮ ಊರಿಗೆ ಬರಬೇಕು, ನಾನು ಹೇಳಿದ ಸ್ಥಳಕ್ಕೆ ಬರಬೇಕು ಎಂದು ಹೇಳುತ್ತಾಳೆ. ಅದೇ ಮೊದಲು ಬಂದ ಜಾಗ ಅಂತಾ ನಮ್ಮ ಗಮ್ಮಾರ ಕೇಳುತ್ತಾನೆ. ಆಗ ಅವಳು ಅವಸರ ಬೇಡ ಸಮಧಾನದಿಂದ ಕೇಳು ಅವಿವೇಕವನ್ನು ಪ್ರದರ್ಶನ ಮಾಡ್ತೀರಾ" ಅವನ ಮನಸ್ಸಿಗೆ ನಾಟುವಂತೆ ಹೇಳುತ್ತಾಳೆ. ಕ್ಷಮಿಸಿ ಅಂತ ನಮ್ಮ ಗಮ್ಮಾರ ಹೇಳುತ್ತಾನೆ. ಅಲ್ಲಿಗೆ ಬರೋದೇ

ಪೇಡ ಅಲ್ಲಿಂದ 40 ಕಿ.ಮೀ. ದೂರದಲ್ಲಿ ಚಾಮುಂಡಿ ದೇವಸ್ಥಾನವಿದೆ ಅಂತಾ ಹೇಳುತ್ತಾಳೆ. ಅಲ್ಲಿಗೆ ಬಸ್ ವ್ಯವಸ್ಥೆ ಇದೆಯಾ ಅಂತ ಮತ್ತೆ ಕೇಳುತ್ತಾನೆ. ಸಿಟ್ಟಿಗೆ ಬಂದು ಅವಳು ನಾನು ಹೇಳುವವರೆಗೆ ಸ್ವಲ್ಪ ಸಮಾಧಾನದಿಂದ ಕೇಳು ಅಂತೇಳಿ ನಾನಿರುವ ಬಸ್ಸು ಆ ದೇವಸ್ಥಾನಕ್ಕೆ ಬರೋಬರಿ ರಾತ್ರಿ ಒಂಬತ್ತುವರೆಗೆ ತಲುಪುತ್ತೆ. ನಾನು ಕಂಡಕ್ಟರಿಗೆ ದುಡ್ಡು ಕೊಟ್ಟು ಎಲ್ಲಾ ಹೇಳಿದ್ದೀನಿ. ನೀನು ಬಸ್ ಒಳಗೆ ಬೇಗ ಬಂದು ಬಿಡಬೇಕು, ತಡಮಾಡಬೇಡಿ.

ನಮ್ಮ ಗಮ್ಮಾರ ತನ್ನ ಹೆಂಡತಿಗೆ ಆಫೀಸ್ ಕೆಲಸದ ಮೇಲೆ ನಾನು ಹೋಗಬೇಕು ಅಂತಾ ಹೇಳಿ ಮನೆಯಲ್ಲಿ, ಆಫೀಸಿಗೆ ಅನ್ಯ ಕಾರ್ಯನಿಮಿತ್ತ ರಜೆ ಹಾಕಿ ಎರಡು ಮೂರು ದಿನ ಹೋಗುವ ಯೋಜನೆ ತಯಾರಿ ಮಾಡಿದ. ಎಲ್ಲಾ ಆಲೋಚನೆಯನ್ನು ಹೆಚ್ಚು ಗಮನದಲ್ಲಿಟ್ಟುಕೊಂಡು ಅವಳ ಜೊತೆಯಲ್ಲಿ ಹೋಗುವುದಕ್ಕೆ ಹಾತೊರೆಯುತ್ತಿದ್ದ ನಮ್ಮ ಗಮ್ಮಾರ. ಅವಳು ಹೇಳಿದ್ದ ಸಮಯಕ್ಕೆ ತಲುಪಿದನು. ಅವಳಿಗೋಸ್ಕರ ಮುಂಚಿತವಾಗಿ ಕಾಯುತ್ತಿದ್ದ 2.30 ಗಂಟೆ ಮೊದಲು ಬಸ್ಸಿಗಾಗಿ ಅವಳು ಹೇಳಿದ್ದ ಜಾಗಕ್ಕೆ ಬಂದೇಬಿಟ್ಟ. ಆದರೆ ನಮ್ಮ ಮಿಸ್ ಕ್ಯಾಟ್ಸ್‌ನ್ನು ಬಿಡಲು ಇವಳ ಗಂಡ ಬಂದಿದ್ದ. ಅವನು ತಕ್ಷಣಕ್ಕೆ ಕೇಳಿದರೆ ಯಾರೋ ಹೆಂಗಸು ಜೊತೆಗೆ ಬರ್ತಿದ್ದಾಳೆ ಅಂತ ತೋರಿಸೋದಕ್ಕೆ ಟಿಕೇಟು ಬಚ್ಚಿಟ್ಟುಕೊಂಡಿದ್ದಳು. ಇವಳ ಗಂಡ ಬಹಳ ಚತುರ ಬಸ್ ಬುಕ್ಕಿಂಗ್ ಕಛೇರಿಯಲ್ಲಿ ಒಮ್ಮೆ ಕೇಳಿಯೇ ಬಿಟ್ಟ ಇವರ ಜೊತೆಗೆ ಯಾರಿದ್ದಾರೆ? ಗುಮಾಸ್ತನು ನೋಡಿದ "ಹೆಂಗಸರಿದ್ದಾರೆ ಸಾರ್" ಅಂದ ಗುಮಾಸ್ತ. ಅವರು ಇಲ್ಲೇ ಬಸ್ಸು ಹತ್ತುತ್ತಾರೋ? ಅನುಮಾನದಿಂದ ಆತ ಕೇಳಿದ. ಇಲ್ಲ ಸಾರ್ ಅವರು ನಲವತ್ತು ಕಿ.ಮೀ. ದೂರದಲ್ಲಿ ಬಸ್ ಏರುತ್ತಾರೆ ಗುಮಾಸ್ತ ನಿರ್ಭಯವಾಗಿ ಉತ್ತರಿಸಿದ. ಇವಳನ್ನು ಬಸ್ ಹತ್ತಿಸಿ ಹೊರಟುಹೋದ. ಆಗ ಅವಳಿಗೆ ನಿಟ್ಟುಸಿರು ಬಿಟ್ಟು ಈಗ ಸಮಾಧಾನವಾಯ್ತು ನಮ್ಮ ನಾಟಕ, ಬಯಲಾಟ ಆಗಿ ಬಿಡುತ್ತೇನೋ ಎಂಬ ಭಯದಲ್ಲಿದ್ದಳು ಮಿಸ್ ಕ್ಯಾಟ್ಸ್.

ಅವಳು ಕನಸಿನಲ್ಲಿ ತೇಲಾಡುತ್ತಾ ಇದ್ದಳು ಒಂದೂವರೆ ತಿಂಗಳಿಂದ. ಬಸ್ಸು ಚಾಮುಂಡಿ ದೇವಸ್ಥಾನದ ಹತ್ತಿರ ಬಂದೇಬಿಟ್ಟಿತು. ಮಿಸ್ ಕ್ಯಾಟ್ಸ್ ಗಾಬರಿಯಿಂದ ಕಂಡಕ್ಟರ್ ಹತ್ತಿರ ಓಡಿದಳು. ಇಲ್ಲೇ ಇಲ್ಲೇ ನಿಲ್ಸಿ ಜೋರಾಗಿ ಕೂಗಿದಳು. ವೇಗವಾಗಿ ಹೊರಟಿದ್ದ ಬಸ್ಸು ಒಮ್ಮೆಲೇ ಗರಕ್ಕನೆ ನಿಂತುಬಿಡುತ್ತೆ. ಬಕಪಕ್ಷಿಯಂತೆ ಕಾಯುತ್ತಿದ್ದ ಗಮ್ಮಾರ ಬಸ್ಸಿನ ಜಾಗಕ್ಕೆ ಓಡಿದ. ಅವಳು ನಗುತ್ತಲೇ ಹೊರಗಡೆ ಇಣುಕಿ ತಾನು ಇರುವುದಾಗಿ ಅವನಿಗೆ ಗುರುತುಪಡಿಸಿದಳು.

ಅವಳು ಅರಳಿದೆ, ಅರಳಿದೆ ಮುದ್ದಾಡಿದ ತಾವರೆ ಅರಳಿದೇ, ಬಯಸಿದೇ ಬಯಸಿದೇ ಪ್ರಿಯತಮನಾಸರೆ ಬಯಸಿದೇ, ಹರೆಯದ ಕರೆ ಸರಿದಿದೆ ತೆರೆ, ಕೇಳದೆ ಈ ಮೊರೆ

ಬಾಳಿನಾದೊರೇ.. ಎಂದು ಖುಷಿಯಲ್ಲಿ ಬಸ್‌ನಲ್ಲಿ ಇಬ್ಬರ ಮಿಲನವು ಶುರು.

ಅವಳು ಇವನ ಬಸ್‌ನ ಅಟ್ಟದ ಮೇಲೆ ಏರಿ ತಮ್ಮ ತಮ್ಮ ಕಿಟಿಕೀಯ ಪರದೆ ಸರ–ಸರ ಎಳೆದುಬಿಟ್ಟಳು. ಅವಳು ಏರಿ ಅವನನ್ನು ಹತ್ತಲು ಹೇಳಿದಳು. ಬಂದೆಯ ಬಾಳಿನ ಬೆಳಕಾಗಿ, ಬಂದೆಯ ಪ್ರೇಮದ ಸಿರಿಯಾಗಿ, ನನಗಾಗಿ ನನ್ನ ಜೊತೆಯಾಗಿ ಎಂದು ಉಲ್ಲಾಸಗೊಂಡನು. ಅವಳು–ಇವನು ಮತ್ತೆ ಗುಸು ಗುಸು, ಪಿಸು ಪಿಸು, ಗಂಡ–ಹೆಂಡತಿ ಮಾತುಗಳಲ್ಲಿ ತೊಡಗಿದರು. ಇಬ್ಬರೂ ಒಂದೇ ಬೆಡ್‌ನಲ್ಲಿ ಮಲಗಿದ್ದರು. ಇಬ್ಬರ ದೇಹ ಸ್ಪರ್ಶಗೊಳ್ಳುತ್ತಿತ್ತು, ಹೃದಯವು ನೂರು, ಇನ್ನೂರು, ಮುನ್ನೂರು ಪಟ್ಟು ಬಡಿತ ಹೆಚ್ಚಾಗತೊಡಗಿತು. ಗಮ್ಮಾರನಿಗೆ ಮೈಯಲ್ಲಿ ಕರೆಂಟು ಪ್ರವೇಶವಾದಂತೆ ಆಗುತ್ತಿತ್ತು.

"ಯಮ್ಮೊ ಯಮ್ಮೋ ನೋಡ್ದೆ ನೋಡ್ದೆ ನೋಡಬಾರ್ದನ್ನ ನಾ ನೋಡ್ದೆ, ಯಮ್ಮೊ ಯಮ್ಮೋ ಮಾಡ್ದೆ ಮಾಡ್ದೆ ಮಾಡಬಾರ್ದನ್ನ ನಾ ಮಾಡ್ದೆ, ಬೆತ್ತಲೆಯ ಕತ್ತಲಲ್ಲಿ ಬೆಳಕಾಗಿ ನಾ ನೋಡ್ದೆ, ಬೆಳಕನ್ನು ಅಪ್ಪಿಕೊಂಡೆ ಅಪ್ಪಿಕೊಂಡು ತಪ್ಪು ಮಾಡ್ದೆ".

ಈ ರೀತಿಯಾಗಿ ರಾತ್ರಿಯಲ್ಲಿ ಬಸ್ಸಿನಲ್ಲಿ ಇಬ್ಬರಿಗೂ ಆಯಿತು. ಮಿಸ್ ಕ್ಯಾಟ್ಸ್ ನಮ್ಮ ಗಮ್ಮಾರನ ಮೇಲೆ ಕೈ ಹಾಕುತ್ತಾಳೆ. ಅದನ್ನೇ ಅವನು ಕಾಯುತ್ತಿದ್ದ ಗಮ್ಮಾರ ಅವಳನ್ನು ಬಿಗಿಯಾಗಿ ಅಪ್ಪಿಕೊಂಡು ಒಂದೇ ಒಂದು ಮುತ್ತು ಕೊಟ್ಟ. ಒಳ್ಳೆ ಹತ್ತಿಯ ಉಣ್ಣೆಯಂತಹ ಮೃದುಸ್ಪರ್ಶ ಇವನ ಕಬ್ಬಿಣದಂತಹ ಬಿಗಿತಕ್ಕೆ ನಲುಗಿ ಹೋಗುತ್ತಾಳೆ. ನಾನು ಬಹಳ ಮೃದು ಕಣ್ರೀ, ಹ್ಯಾಂಡಲ್ ವಿತ್ ಕೇರ್ ಅಂದ್ಲು. ಓಕೆ ಅಂದವನೆ ಅವಳ ಉಸಿರಿನ ಶಬ್ದವನ್ನು ಕಂಡು ಉದ್ದೀಪನಗೊಳಿಸಿದ ಅವಳ ನರನಾಡಿಗಳೆಲ್ಲವೂ ನಾಜೂಕಿನಿಂದ, ಸಂಪೂರ್ಣ ತೃಪ್ತಿಯಿಂದ ಅನುಭವಿಸತೊಡಗಿದಳು. "ಏಯ್ ಇದು ಬಸ್ಸು, ಬೆಡ್‌ರೂಂ ಅಲ್ಲ ಜೋಪಾನ" ಅಂದ್ಲು. "ಗೊತ್ತು ಅದಕ್ಕೆ ಬಹಳ ನಿಧಾನಕ್ಕೆ ವರ್ತಿಸುತ್ತಿದ್ದೇನೆ" ಅಂದ. "ಇದು ನಿಧಾನನ, ಒಳ್ಳೇ ಹಸಿದ ಹುಲಿಯಂತೆ ಆಕ್ರಮಣ ಮಾಡ್ತಿದ್ದೀರಾ, ನಾನು ಬಹಳ ಮೃದು. ಗಲ್ಲ ಉರೀತಾ ಇದೆ, ತುಟಿ ನೋವಾಗ್ತಾಯಿದೆ, ಎದೆ ಬೇಡಾ ಅಂತಾಯಿದೆ" ಸೋಗಲಾಡಿತನ ಪ್ರದರ್ಶಿಸಿದಳು. ಪ್ರೀತಿ ಹಳೆಯದಾದರೂ ಹೊಸಬಾಳು. ಇವರು ಇಳಿಯಬೇಕಾಗಿದ್ದ ನಿಲ್ದಾಣ ಬಂತು. ಅದು ನಡುರಾತ್ರಿ. ಆಗ ಇಬ್ಬರೂ ಲಗೇಜು ಅವನೇ ತೆಗೆದುಕೊಂಡು ಇಳಿಯುತ್ತಾನೆ. ಇಬ್ಬರೂ ಇಳಿದ ತಕ್ಷಣ ಅವಳು ನಾವಿಬ್ಬರೂ ಇಲ್ಲೇ ಉಳುಕೊಂಡು ಬಿಡೋಣ ಅಂತಾ ಎಲ್ಲಾ ತೊರೆದು ನಾಗರಿಕತೆಯ ಸೋಗನ್ನು ಬಿಟ್ಟು ಬರ್ತಿಯಾ ಕ್ಯಾಟ್ಸ್, ತತ್ವಜ್ಞಾನಿಯಂತೆ ಉಲಿಯತೊಡಗಿದ. ನಮಗೆ ಅಂತಸ್ತು, ಆಸ್ತಿ, ಹಣ, ಕೀರ್ತಿ ಇವನ್ನು ಹೇಳುತ್ತಿದ್ದ ಅವಳು ಇಂತಹ ಹಲವಾರು ಹದ್ದುಬಸ್ತಿಗೆ ಇಟ್ಟುಕೊಂಡಳು. ಇವನ ಮಾತು ಯಾವ ಲೆಕ್ಕ. ಇಬ್ಬರೂ ನಡುದಾರಿಯಲ್ಲಿ ಸಮಯ ರಾತ್ರಿ ಮೂರುಗಂಟೆಯಾಗಿರಬಹುದು. ಆ ಹೆದ್ದಾರಿ ದೊಡ್ಡ ದೊಡ್ಡ ನಗರಗಳಿಗೆ ಹೋಗುವ ವಾಹನಗಳೇ ಅಡ್ಡಾಡುತ್ತಿದ್ದವು. ರಸ್ತೆ ಪಕ್ಕದಲ್ಲಿ ಅವಳ ಕೈಯೊಳಗೆ ಕೈ

ಹಾಕಿಕೊಂಡು ಸುಖವನ್ನು ಅನುಭವಿಸಿದ, ಸುಖವನ್ನು ಪಡೆಯುತ್ತ ಸಾಗಿದ್ದ ಗಮ್ಮಾರ ನಾವು ಇಬ್ಬರೂ ನಮ್ಮ ಪ್ರೀತಿ ಮೊದಲು ಹೀಗೆ ಒಂದಾಗಿದ್ರೆ ನಮಗೆ ಚೆನ್ನಾಗಿರ್ತಿತ್ತು. ಇವತ್ತಿನ ಆ ಸುಖ ಸಿಗ್ತಿರಲಿಲ್ಲ. ಸುಮಾರು ಇಪ್ಪತ್ತು ವರ್ಷಗಳ ನಂತರ ನಾವಿಬ್ಬರೂ ನಮ್ಮದೇ ಲೋಕವನ್ನು ನಿರ್ಮಿಸಿಕೊಂಡು.. ಇದು ನಿಜವೇನ್ರೀ ಅವನ ಭುಜದ ಮೇಲೆ ತಲೆಯಾನಿಸಿ ಕೇಳಿದಳು. "ಯಾಕ್ರೀ ಇನ್ನೂ ಕನಸಿನೊಳಗೆ ಇದ್ದೀರಾ? ವಾಸ್ತವಕ್ಕೆ ಬನ್ನಿ, ನಾನು ನೀವು ಒಂದೇ ಬಸ್‌ನಲ್ಲಿ ಮಲಗಿ ಬಂದಿದ್ದು ನಿಜ. ಅಲ್ಲಿ ನಡೆದದ್ದು, ಇಲ್ಲಿ ನಡೆಯುತ್ತಿರುವುದು ಎಲ್ಲವೂ ಸತ್ಯ" ಮನವರಿಕೆ ಮಾಡಿದ.

ಗಮ್ಮಾರ ತನ್ನ ವೈಯಕ್ತಿಕ ಸಮಸ್ಯೆಗಳು ಕಛೇರಿ ಕೆಲಸ, ಮನೆಯ ಹೆಂಡತಿಯ ಮಾತುಗಳು ಇದರಲ್ಲಿ ಜೀವನ ಸಾಕುಸಾಕಾಗಿತ್ತು. ಇದನ್ನೆಲ್ಲಾ ಗಮ್ಮಾರ ಹೇಳುತ್ತಿರುವುದು ಕೇಳಿ ಮಿಸ್ ಕ್ಯಾಟ್ಸ್ ಗಮ್ಮಾರ ಇಲ್ಲಿ ಇರುವುದು ನಾವಿಬ್ಬರೂ ಮಾತ್ರ. ಅವೆಲ್ಲ ಪುರಾಣ ಬಿಟ್ಟುಬಿಡಿ ಎಂದಳು. ಹಳೆಯ ನೆನಪುಗಳನ್ನು ಮರೆತು ಬಿಡಬೇಕು ಎಂದು ಹೇಳುತ್ತಾ ದೊಡ್ಡ ನಗರದಲ್ಲಿ ಅವರಿಬ್ಬರು ಹೋಗಿದ್ದೆ ಗೊತ್ತಾಗಲಿಲ್ಲ. ಉಳಿದುಕೊಳ್ಳಲು ಯೋಚನೆ ಮಾಡುತ್ತಾ ಅವಳು ಅವನ ಮೇಲೆ ಹಾಕುತ್ತಾಳೆ. ಗಮ್ಮಾರ ನಾನು ಕರೆದುಕೊಂಡು ಹೋಗುತ್ತೇನೆ ಆದರೆ ನನ್ನ ಬೈಯ್ಯಬಾರದು ಅಂತಾ ಹೇಳಿದ. ಊರಿಗೆ ಬಸ್ಸು ನಗರಕ್ಕೆ ಬಂದಾಗ ಸಮಯ 5 ಗಂಟೆ ಆ ಊರು ತಲುಪಿದಾಗ ಮುಂಜಾನೆ ಏಳುಗಂಟೆಯಾಗಿತ್ತು. ಗಮ್ಮಾರ ಮಿಸ್ ಕ್ಯಾಟ್ಸ್ ಗಂಡ, ಮಿಸ್ ಕ್ಯಾಟ್ಸ್ ಗಮ್ಮಾರನ ಹೆಂಡತಿ. ಗಮ್ಮಾರನಿಗೆ ಆಕಾಶ ಮೂರೇ ಗೇಣಿ ಎಂಬಂತೆ ಕಂಡಿತು ಮೂಲೆಯಲ್ಲಿನ ಡಬ್ಬಲ್ ರೂಂ. ಹುಡುಗನೊಬ್ಬ ಒಂದು ಕಣ್ಣು ಸಂಶಯದಿಂದಲೇ ಅವರ ಸಾಮಾನುಗಳನ್ನು ಎಳ್ಕೊಂಡು ಬಂದ. ಇವರಲ್ಲಿ ಅಂತರ ಇರಲಿಲ್ಲ. ಕೋಣೆಯೊಳಗೆ ಹೋದ ತಕ್ಷಣ ಗಮ್ಮಾರ ಆ ಹುಡುಗ ಹೋಗುವುದನ್ನು ಕಾಯುತ್ತಿದ್ದ. ಅವಳು ಮುಟ್ಟಿದರೆ ಬೆಣ್ಣೆಯಂತೆ ಅವಳನ್ನು ಗಟ್ಟಿಯಾಗಿ ಬಿಗಿದು ಅಪ್ಪಿಕೊಂಡು ಬಿಡುತ್ತಾನೆ. ಅವಳು ದಯವಿಟ್ಟು ನಾನು ಹ್ಯಾಂಡಲ್ ವಿತ್ ಕೇರ್ ಅಂತಾ ಪ್ರಸ್ತಾಪಿಸುತ್ತಾಳೆ. ಆಯ್ತು ಮುದ್ದುಬಂಗಾರ ನೀನು ಬೆಣ್ಣೆ, ನಾನು ಬೆಂಕಿ ನನ್ನಿಂದ ನಿನ್ನ ಕರಗಿಸಿ ಬಿಡುತ್ತೇನೆ ಎಂದು ಅವಳ ಕೆನ್ನೆಯನ್ನು ಸೇಬು ಕಚ್ಚಿದಾಗೆ ಕಚ್ಚಿಬಿಡುತ್ತಾನೆ. ಅವಳು ಅಮ್ಮಾ.. ರೀ.. ಅಂತಾ ಕೂಗುತ್ತಾಳೆ. ನಿನಗೆ ಅವಸರ. ಕ್ಷಮಿಸಿ ನೋವಾಯ್ತು ಬಂಗಾರ ಎಂದು ಕೇಳುತ್ತಾನೆ. ಇಲ್ಲ ಎಂದು ಒಯ್ಯಾರ ಮಾಡಿದಳು. ಇಬ್ಬರೇ ಇರುವಂತಹ ಜಾಗ ಇದು, ನಮ್ಮಿಬ್ಬರದೇ ಜಗತ್ತು. ನಾನೀಗ ವಿದ್ಯುಕ್ತವಾಗಿ ನಿನ್ನ ಗಂಡ, ನೀನೀಗ ನನ್ನ ಹೆಂಡತಿ ಇಂತಹ ಸಮಯ ಮತ್ತೆಂದೂ ಬರುವುದಿಲ್ಲ. ಇದನ್ನು ನಾನೆಂದೂ ಮರೆಯುವುದಿಲ್ಲ ಅಂತಾ ಹೇಳಿ ಅವಳ ಮೇಲೆ ಹುಲಿಯಂತೆ ನುಗ್ಗಿದ ಅವಳು ಅಸಹಾಯಕ ಹಸುವಿನಂತೆ ಅವಳು ಸೋತು ಹೋಗಿದ್ದಳು. ಇಬ್ಬರೂ ಪರಸ್ಪರ ಒಪ್ಪಿಗೆಯಿಂದ ಒಂದಾಗಿದ್ದರು. ಕಣ್ಣು ಮುಚ್ಚಿ ಓಡುಗಚ್ಚಿದಳು. ಅವನು ಅವಳನ್ನು

ತೃಪ್ತಿಯ ಪರಾಕಾಷ್ಠತೆಗೆ ಒಯ್ಯುವ ಮುಂಚೆ ಅವನು ಸೋತುಹೋಗಿದ್ದನು. ಗಮ್ಮಾರನಂತಹ ಹಳ್ಳಿ ಹೈದ ಹೀಗೆ ಸೋತರೆ? ಮಣ್ಣಿನಲ್ಲಿ ಮಣ್ಣಾಗಿ, ಕಲ್ಲಲ್ಲಿ ಕಲ್ಲಾಗಿ ಒಳ್ಳೆ ಗೂಳಿಯಂತೆ ಗಟ್ಟಿ ದೇಹ, ರಾತ್ರಿ ನಿದ್ದೆಗೆಟ್ಟಿದ್ದು, ಎ.ಸಿ.ಯಲ್ಲಿ ಮಲಗಿಕೊಂಡು ಬಂದಿದ್ದ ಮೊದಲೇ ಅವನ ದೇಹ ಸ್ವಲ್ಪ ಸುಸ್ತಾಗಿತ್ತು. ಈ ಎಲ್ಲಾ ಕಾರಣಗಳು ಒಮ್ಮಿಂದೊಮ್ಮಿಗೆ ಸೇರಿಕೊಂಡು ಅವನನ್ನು ಸೋಲಿಸಿದ್ದವು.

ಆದರೆ ನಮ್ಮ ಗಮ್ಮಾರ ಏನೆಲ್ಲಾ ಆಸೆ ಕಟ್ಟಿಕೊಂಡು ಬಂದಿದ್ದ. ಮಿಸ್ ಕ್ಯಾಟ್ಸ್ ಇವನು ಏನೋ ದೊಡ್ಡದಾಗಿ ಮಾಡಿಬಿಡುತ್ತಾನೆ ಅಂತಾ ಬಂದರೆ ಇವನ ಕೈಯಲ್ಲಿ ಕಿಸಿಯೋದಾಗಲಿಲ್ಲ ಅಂದುಕೊಳ್ಳುತ್ತಾಳೆ. ಬಲವಾದ ನಂಬಿಕೆ ಇಟ್ಟಿದ್ದಳು. ರಾತ್ರಿ ಬಸ್ಸಿನೊಳಗೆ ಅವನ ವರ್ತನೆಯಿಂದ ಇವನೇನು ನನ್ನ ಬೆನ್ನು ಮೂಳೆ ಮುರಿಯುತ್ತಾನೆ ಅಂದುಕೊಂಡಿದ್ದಳು. ಇವನನ್ನು ಹೇಗಪ್ಪ ಕಂಟ್ರೋಲ್ ಮಾಡೋದು ಅಂತೆಲ್ಲಾ ಆಲೋಚಿಸಿದ್ದಳು. ಆದರೆ ಈಗ ಗುಡ್ಡದಂತೆ ರಾಗ ಮಾಡಿ ಅದೇನೋ ಹೇಳಿದಂಗೆ ಅವಳನ್ನು ಸುಖದ ಅತಿರೇಖದಿಂದ ಒಮ್ಮಿಂದೊಮ್ಮೆಗೆ ಪ್ರಪಾತಕ್ಕೆ ನೂಕಿದಂಗೆ ಆಗಿ ಸಪ್ಪಗೆ ಹಾಸಿಗೆ ಮೇಲೆ ಬಿದ್ದುಕೊಂಡಳು. ಅವನಿಗೆ ಹಿಂಸೆ ಅನಿಸತೊಡಗಿತು. ಅವಳನ್ನು ಮಾತಾಡಿಸುವುದಾದರೂ ಹೇಗೆ ನನ್ನ ಬಗ್ಗೆ ಏನೆಂದು ತಿಳಿದುಕೊಂಡಳೋ ಏನೋ. ಹೆಣ್ಣು ಲಂಗು ಲಗಾಮಿಲ್ಲದ ಹುಚ್ಚು ಕುದುರೆಯಂತೆ, ಅವಳನ್ನು ಬಗ್ಗಿಸಲು ಸರಿಯಾದ ಕಟ್ಟುಮಸ್ತಾದ ಒಳ್ಳೆಯ ಸವಾರಬೇಕು. ಆದರೆ ನಮ್ಮ ಗಮ್ಮಾರ ಅವಳ ಆಸೆ ತೀರಿಸುವಲ್ಲಿ ಅವಳನ್ನು ಸವಾರಿ ಮಾಡುವಲ್ಲಿ ಸೋತುಹೋಗಿದ್ದ. ಆದರೆ ಅವಳ ಸೌಂದರ್ಯ ಅವನಲ್ಲಿ ಚುಚ್ಚುತ್ತಾ ಇತ್ತು. ಅವಳ ದೈಹಿಕ ಪ್ರಕ್ರಿಯೆಗಳೆಲ್ಲಾ ಸರಿಹೊಂದಿಕೊಳ್ಳಲು ಮಾನಸಿಕವಾಗಿ ಸಿದ್ಧಳಾಗಲು ಅವಳಿಗೆ ಸಮಯ ಒಂದುಗಂಟೆ ಬೇಕಾಯಿತು. ಅವಳು ಮಾತಾಡದೆ ಎಲ್ಲವನ್ನು ಹೇಳುತ್ತಿರುವಂತೆ ಅವನ ಕಡೆಗೆ ಮಿಸ್ ಕ್ಯಾಟ್ಸ್ ನೋಡುತ್ತಾಳೆ. ಅವನ ನೋಟ ಬದಲಿಸಿ ನೀ ಹಿಂಗ ನೋಡಬ್ಯಾಡ ನನ್ನ, ನೀ ಹಿಂಗ ನೋಡಿದರೆ ನನ್ನ, ತಿರುಗಿ ನಾ ಹ್ಯಾಂಗ ನೋಡಲೇ ನಿನ್ನ? ದಾರೀಲೆ ನೆನೆದೆ ಕೈ ಹಿಡಿದೆ. ನೀನು ತಣ್ಣಾಗ ಅಂತ ನಾ ತಿಳಿದು ಬಿಡವೊಲ್ಲಿ ಇನ್ನೂ ನೀ ಬೂದಿಮುಚ್ಚಿದ ಕೆಂಡ ಇದಂತ ಹೊಳೆದು ಮುಗಿಲಿನ ಕತ್ತರಿಸಿ ನೆಲಕ ಬಿದ್ದರ ನೆಲಕ ನೆಲ್ಲಿ ಎಲ್ಲಿನಾ? ಆ ಗಾದಿ ಮಾತು ನಂಬಿ ನಾನು ದೇವರಂತ ತಿಳಿದೀ ಏನು ನೀನನ್ನ ಎಂಬಂತೆ ಮಿಸ್ ಕ್ಯಾಟ್ಸ್ ನೋಡಿ ಈ ರೀತಿ ನಮ್ಮ ಗಮ್ಮಾರನ ಸ್ಥಿತಿ, ರೂಂ ನಿಂದ ಹೊರಗಡೆ ಬಂದು ಗಾಳಿಯಲ್ಲಿ ನಿಂತುಕೊಂಡನು. ಕೆಳಗಡೆ ರೂಂ.ನಂಬರ್ 9 ಕ್ಕೆ ಕಾಫಿ ಕೊಡಲು ಹೇಳಿದ.

ಹೇಮೇಶ್ವರ ಕುರುಬರ, ಅತಿಥಿ ಉಪನ್ಯಾಸಕರು ವಿಜಯನಗರ, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ಸಣ್ಣಕತೆ ಮತ್ತು ಕಾದಂಬರಿಗಳ ತಾತ್ವಿಕತೆ

ಶ್ರೀದೇವಿ ಕೆರೆಮನೆ

1970 ದಶಕದ ನಂತರ ಕನ್ನಡ ಸಾಹಿತ್ಯ ಕ್ಷೇತ್ರದೊಳಗೆ ಕ್ರಾಂತಿಯನ್ನುಂಟು ಮಾಡಿದ ದಲಿತ-ಬಂಡಾಯ ಸಾಹಿತಿಗಳು ಈ ಕಾಲಘಟ್ಟವನ್ನು ತಮ್ಮ ಸಾಹಿತ್ಯ ಕ್ಷೇತ್ರವನ್ನಾಗಿ ಆಯ್ದುಕೊಂಡು ಅಪಾರವಾದ ಸಾಹಿತ್ಯ ರಾಶಿಯನ್ನು ಕೊಡುಗೆಯಾಗಿ ನಾಡಿಗೆ ಅರ್ಪಿಸಿದ್ದಾರೆ. ಈ ಕಾಲಘಟ್ಟದ ಸಾಹಿತಿಗಳಿಗೆ ಜಾತಿ, ಧರ್ಮ, ಮತದ ಭೇದವಿರಲಿಲ್ಲ ಬದಲಾಗಿ ತಮ್ಮ ಸಾಹಿತ್ಯದೊಳಗೆ ತಮ್ಮ ಸಮುದಾಯದವರ ನೋವು, ನಿಂದನೆ, ಅಪಮಾನ, ಮಹಿಳಾಶೋಷಣೆ, ವರ್ಗಸಂಘರ್ಷ, ಬಡತನ, ಹಸಿವು, ಒಳಪಿತೂರಿಗಳು ದಲಿತರನ್ನು ಸಮಾಜದಲ್ಲಿ ನಡೆಸಿಕೊಳ್ಳುತ್ತಿದ್ದ ರೀತಿ-ನೀತಿಯ ಬಗ್ಗೆ ಜನರಿಗೆ ಅರ್ಥವಾಗುವಂತೆ ಕಥೆ, ಸಣ್ಣಕಥೆ, ಕಾದಂಬರಿ, ನಾಟಕ ಮೊದಲಾದ ಪ್ರಕಾರಗಳ ದಲಿತ-ಬಂಡಾಯೋತ್ತರ ಕಾಲಘಟ್ಟದಲ್ಲಿ ಬರೆಯಲು ಆರಂಭಿಸಿದ ಶಿರಗಾನಹಳ್ಳಿ ಶಾಂತನಾಯ್ಕ ತಮ್ಮದೇ ಸಮುದಾಯದ ಕಳವಳವನ್ನು ಆತಂಕಗಳನ್ನು ಕುರಿತು ಸಾಹಿತ್ಯ ರೂಪಿಸುವ ಮೂಲಕ ಸಮುದಾಯಕ್ಕೆ ಹೊಸ ಭರವಸೆಯನ್ನು ಹುಟ್ಟಿಸಿದ್ದಾರೆ. ಲಂಬಾಣಿ ಸಮುದಾಯದ ಬರಹಗಾರರ ಅನುಕರಣೆ ಮಾಡದೇ ತಮ್ಮ ಅನುಭವದ ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ಲೇಖಕರು ಜನವರಿ 01 1965ರಂದು ಉತ್ತರ ಕರ್ನಾಟಕ ಭಾಗದ ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಶಿರಗಾನಹಳ್ಳಿ (ತಾಂಡ)ಯಲ್ಲಿ ಜನಿಸಿದರು. ಇವರ ತಂದೆ ಗಂಗ್ಯಾನಾಯ್ಕ ಅಲಿಯಾಸ್ ನಾಗ್ಯನಾಯ್ಕ, ತಾಯಿ ಕೇಳಬಾಯಿ. ಇವರು ಲಂಬಾಣಿ ಸಮುದಾಯದ ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಇವರು ತಮ್ಮ ಬಾಲ್ಯವನ್ನು ಶಿರಗಾನಹಳ್ಳಿ ತಾಂಡದಲ್ಲಿಯೇ ಕಳೆದರು. ಬಾಲ್ಯದ ವಿದ್ಯಾಭ್ಯಾಸವನ್ನು ಶಿರಗಾನಹಳ್ಳಿ, ದುಗ್ಗಾವತಿ, ಹರಿಹರ, ದಾವಣಗೆರೆಯಲ್ಲಿ ಮುಗಿಸಿದರು. ಇವರು ಮಾಧ್ಯಮಿಕ ಶಿಕ್ಷಣವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಸಮಾಜ ಕಲ್ಯಾಣ ಇಲಾಖೆಯ

ದಾವಣಗೆರೆ, ಹರಿಹರದ ವಸತಿ ಶಾಲೆಯಲ್ಲಿ ಮುಗಿಸಿದರು. ಶಾಂತನಾಯ್ಕರು ಪ್ರೌಢಶಿಕ್ಷಣ ಹಾಗೂ ಪದವಿ ಪೂರ್ವ ಶಿಕ್ಷಣವನ್ನು ಸಮಾಜ ಕಲ್ಯಾಣ ಇಲಾಖೆಯ ದಾವಣಗೆರೆ ಮತ್ತು ಹರಪನಹಳ್ಳಿಯ ವಸತಿಶಾಲೆಯಲ್ಲಿ ಮುಗಿಸಿದರು. 1990ರಲ್ಲಿ ಬಿ.ಎ. ಆನರ್ಸ್ ಪದವಿಯನ್ನು ಧಾರವಾಡದ ಕರ್ನಾಟಕದ ಕಾಲೇಜಿನಲ್ಲಿ ಪಡೆದರು. 1992ರಲ್ಲಿ ಸ್ನಾತಕೋತ್ತರ ಪದವಿಯನ್ನು ಕರ್ನಾಟಕದ ವಿಶ್ವವಿದ್ಯಾನಿಲಯದಿಂದ ಪಡೆದರು.

ಲೇಖಕರು ಆಂಗ್ಲಭಾಷೆಯಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಮುಗಿಸಿರುವುದು ವಿಶೇಷ. 2006 ಆಗಸ್ಟ್ 08ರಂದು ವಿಶ್ವವಿದ್ಯಾನಿಲಯದ ಯುಜಿಸಿ ಫೆಲೋಷಿಪ್‌ನಿಂದ ಪಿಎಚ್.ಡಿ. ಪದವಿ ಪಡೆದರು. ಹೀಗೆ ಶಿಕ್ಷಣನವನ್ನು ಪಡೆದ ಅನಂತರ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಕೆಲಸ ಹುಡುಕುತ್ತಾ ಹೊರಟರು. ಇವರು ತಮ್ಮ ಪಿಎಚ್.ಡಿ. ಪದವಿಯನ್ನು ಡಾ. ವೀಣಾಶಾಂತೇಶ್ವರ ಅವರ ಮಾರ್ಗದರ್ಶನದಲ್ಲಿ 'A Comparative Study of the novels of Shashi Deshpande and M.K. Indira' ಎಂಬ ವಿಷಯದಲ್ಲಿ ಪಡೆದಿದ್ದಾರೆ. ಇಂಗ್ಲೀಷ್ ಭಾಷೆಯನ್ನು ವೃತ್ತಿ ಬದುಕಿನ ಅಧ್ಯಯನಕ್ಕೆ ತೊಡಗಿಸಿಕೊಂಡರೂ ಕನ್ನಡ ಕವಿಗಳ ಸಾಹಿತ್ಯದ ಮೇಲಿನ ಆಸಕ್ತಿಯಿಂದ ಕನ್ನಡ ಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ.

ಲೇಖಕರು ಪಿಎಚ್.ಡಿ. ಪದವಿ ಪಡೆದ ಅನಂತರದಲ್ಲಿ 1993-94ರ ಸಾಲಿನಲ್ಲಿ ಉಪನ್ಯಾಸಕ ವೃತ್ತಿ ಆರಂಭಿಸಿದ ಇವರು ಮೊದಲಿಗೆ ಎಸ್.ಆರ್.ಜೆ.ವಿ. ಕಾಲೇಜು ಶಿಗ್ಗಾಂವಿಯಲ್ಲಿ ಕೈಗೊಂಡರು. 1994-95ರ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಳ್ನಾವರ್‌ನಲ್ಲಿ ಉಪನ್ಯಾಸಕ ವೃತ್ತಿ ಮಾಡಿದರು. 1993-94ನೇ ಸಾಲಿನಲ್ಲಿ ನಾಟಕ ನಿರ್ದೇಶಕರಾಗಿ ಸಾಕ್ಷರತಾ ಆಂದೋಲನದಲ್ಲಿ ಧಾರವಾಡ ಹಾಗೂ ಶಿಗ್ಗಾಂವಿ ತಾಲ್ಲೂಕಿನಲ್ಲಿ ಸೇವೆ ಸಲ್ಲಿಸಿದರು. 1995 ಮಾರ್ಚ್ 20ರ ಅವಧಿಯಲ್ಲಿ ಕಾರವಾರ ಆಕಾಶವಾಣಿಯಲ್ಲಿ ಉದ್ಘೋಷಕರಾಗಿ ಕಾರ್ಯನಿರ್ವಹಿಸಿದರು. ಅನಂತರ ದಿನಗಳಲ್ಲಿ ಉತ್ತರಕರ್ನಾಟಕದಲ್ಲಿಯೂ ಕಾರ್ಯನಿರ್ವಹಿಸಿದರು. 2003 ರ ಫೆಬ್ರವರಿ 11 ರಿಂದ ಇಂಗ್ಲೀಷ್ ಉಪನ್ಯಾಸಕರಾಗಿ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ನಿರ್ವಹಿಸಿದರು.

2003-2010ರವರೆಗಿನ ಕಾಲಘಟ್ಟದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಆಂಗ್ಲಭಾಷೆಯ ಅಧ್ಯಾಪಕರಾಗಿ ವೃತ್ತಿ ಬದುಕು ಆರಂಭಿಸಿದರು. ವೃತ್ತಿ ಬದುಕಿನೊಂದಿಗೆ ಸಾಕ್ಷರತಾ ಆಂದೋಲನ, ಕೋಮು ಸೌಹಾರ್ದ ಶಿಬಿರ, ಎನ್.ಎಸ್.ಎಸ್. ಮುಂತಾದ ಕಾರ್ಯಗಾರ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಭಾಗಿಯಾಗುತ್ತಾ ಎಲ್ಲರೊಳಗೆ ತಾನೊಬ್ಬರೆಂಬಂತೆ ಗುರ್ತಿಸಿಕೊಂಡರು.

ಲೇಖಕರಿಗೆ ಅರಸಿ ಬಂದ ಪ್ರಶಸ್ತಿಗಳು ಮತ್ತು ಬಹುಮಾನಗಳು ಹಲವು ಎನ್ನಬಹುದು. ಅವುಗಳೆಂದರೆ ಕರ್ನಾಟಕ ಯುವಜನ ಮತ್ತು ಕ್ರೀಡಾ ನಿರ್ದೇಶನಾಲಯ 1993ರಲ್ಲಿ ರಾಜ್ಯ ಮಟ್ಟದ ಉತ್ತಮ ಎನ್.ಎಸ್.ಎಸ್. ಸ್ವಯಂ ಸೇವಕ ಪ್ರಶಸ್ತಿ, 1999ರಲ್ಲಿ 'ಮಂಚವೆಂಬ ಮಾಯೆಯೊಳಗೆ' ಕತೆಗೆ ಉತ್ಥಾನ ಪತ್ರಿಕೆಯಿಂದ ಬಹುಮಾನ, 2001ರಲ್ಲಿ 'ಒಂದು ಸೂರಿನಡಿಯ ಎರಡು ಮನಸುಗಳು'ಗೆ ಕುಮಾರರಾಮ ಬಹುಮಾನ, 2003ರಲ್ಲಿ 'ಪಾತ್ರಗಳು' ನಾಟಕಕ್ಕೆ ಬಿ.ವಿ. ಕಾರಂತರ ಪ್ರತಿಷ್ಠಾನದ ಬಹುಮಾನ ಅದೇ ವರ್ಷ 2003ರಲ್ಲಿ ನಮ್ಮೊಳಗಿನ ಮನುಷ್ಯ' ನಾಟಕಕ್ಕೆ ಸಂಕ್ರಮಣ ಸಾಹಿತ್ಯ ಬಹುಮಾನ, 2004ರಲ್ಲಿ 'ನಮ್ಮೊಳಗಿನ ಮನುಷ್ಯ' ನಾಟಕಕ್ಕೆ ಮಾಸ್ಕೇರಿ ಎಂ.ಕೆ. ನಾಯಕ್ ಪ್ರತಿಷ್ಠಾನದ ಪ್ರಶಸ್ತಿ, 2006ರಲ್ಲಿ 'ಮನೆಯೆಂಬ ಮಾಯೆಯೊಳಗೆ' ಕಥೆಗೆ ಪಾಟೀಲ ಪುಟ್ಟಪ್ಪ ಪ್ರತಿಷ್ಠಾನ ಹಾನಗಲ್ ಪ್ರಶಸ್ತಿ ಹೀಗೆ ಹತ್ತು ಹಲವಾರು ಪ್ರಶಸ್ತಿಗಳು ಬಹುಮಾನಗಳನ್ನು ಇವರು ಸಂಪಾದಿಸಿದ್ದಾರೆ.

ಲೇಖಕರು ರಚಿಸಿರುವ ಸಾಹಿತ್ಯರಾಶಿ ಎಂದರೆ 1999ರಲ್ಲಿ 'ಗುಡ್ಡಜ್ಜ', 2004ರಲ್ಲಿ 'ಕೊಂಯ್ಯ ಮತ್ತು ಧೋತ್ರ' ಮತ್ತು 2011ರಲ್ಲಿ 'ಕಲ್ಲೇ ಕಲ್ಲೇ ಕಥೆ ಹೇಳು' ಸಣ್ಣಕತೆ ಸಂಕಲನಗಳು ಪ್ರಕಟವಾದವು. 2003ರಲ್ಲಿ ಬಂಡಾಯ ಪ್ರಾತಿನಿಧಿಕ 'ಮೀನು ಮತ್ತು ಹುಡುಗಿ', 'ಹಳೇ ಭಾವನೆಯ ಹೊಸ ಮನುಷ್ಯ' ಕವನಸಂಕಲನಗಳು ಪ್ರಕಟವಾದವು. 2004ರಲ್ಲಿ 'ಕತ್ತಲು ಕರಗುವ ಮುನ್ನ 2007ರಲ್ಲಿ 'ಗೋರ್‌ಮಾಟಿ' ಮತ್ತು 2012ರಲ್ಲಿ 'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಗಳು ಪ್ರಕಟವಾದವು. ಇವುಗಳಲ್ಲದೆ 2004ರಲ್ಲಿ 'ಪಾತ್ರಗಳು', 'ನಮ್ಮೊಳಗಿನ ಮನುಷ್ಯ ಮತ್ತು ಇತರ ನಾಟಕಗಳು' ಎಂಬ ನಾಟಕಗಳು ಬಿಡುಗಡೆಯಾದವು.

2004ರ ವೇಳೆಯಲ್ಲಿ 'ಹಳೇ ಭಾವನೆಯ ಹೊಸ ಮನುಷ್ಯ' ಎಂಬ ಕಾವ್ಯ ಪ್ರಕಟವಾಯಿತು. 2004ರಲ್ಲಿಯೇ 'ಮನು ಹಿಟ್ಲರ್ ಮತ್ತು ಅಂಬೇಡ್ಕರ್ ಒಂದು ಚಿಂತನೆ', 2010ರಲ್ಲಿ ಬರವಣಿಗೆ ಮತ್ತು ಸಿದ್ಧಾಂತಗಳು', 2007ರಲ್ಲಿ 'English as a language of empowerment and other essays' ಎಂಬ ವೈಚಾರಿಕ ಲೇಖನಗಳು ಪ್ರಕಟವಾದವು. ಇದಲ್ಲದೇ ವಿಶೇಷ ಪ್ರಕಾರದಿಂದ ರಚಿತವಾದ ಇವರ ಆತ್ಮಕಥನ ಕಾವ್ಯ 'ಲಮಾಣಿ'ಯೂ 2010ರಲ್ಲಿ ಪ್ರಕಟಗೊಂಡಿತು. ಹೀಗೆ ಲೇಖಕರು ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿಯೂ ರಚಿಸಿದ್ದಾರೆ.

ಲೇಖಕರು ತಮ್ಮ ವೃತ್ತಿ ಬದುಕಿನ ಬಿಡುವಿನ ನಡುವೆ ಆಕಾಶವಾಣಿ, ದೂರದರ್ಶನಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡುವ ಮೂಲಕ ವೃತ್ತಿಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. 03 ಮಾರ್ಚ್ 1988ರಲ್ಲಿ ಮೊದಲ ಬಾರಿಗೆ

ಧಾರವಾಡದ ಆಕಾಶವಾಣಿಯಲ್ಲಿ 'ಪ್ರೇಮವಾಹಿನಿ ಕವಿಗೋಷ್ಠಿ' ಕಾರ್ಯಕ್ರಮ ನಡೆಸಿಕೊಟ್ಟರು. 16 ಆಗಸ್ಟ್ 1989ರಲ್ಲಿ ಧಾರವಾಡ ಆಕಾಶವಾಣಿಯಲ್ಲಿ 'ಮರಳಿ ಹಳ್ಳಿಗೆ' ಚರ್ಚಾ ಕಾರ್ಯಕ್ರಮ ನಡೆಸಿಕೊಟ್ಟರು. 18 ಆಗಸ್ಟ್ 1988ರಲ್ಲಿ ಅದೇ ಧಾರವಾಡ ಆಕಾಶವಾಣಿಯಲ್ಲಿ '20ನೇ ಶತಮಾನದ ಅಂತ್ಯದಲ್ಲಿ ನನ್ನ ಹಳ್ಳಿ' ಭಾಷಣ ಕಾರ್ಯಕ್ರಮ, 09 ಫೆಬ್ರವರಿ 1993ರಲ್ಲಿ 'ವಿದ್ಯಾರ್ಥಿ ಜೀವನ ಬಂಗಾರದ ಜೀವನ' ಭಾಷಣ ಕಾರ್ಯಕ್ರಮ, 07 ಜುಲೈ 1992 'ರಸ್ತೆಯ ರಸಿಕರು' ಸಂದರ್ಶನ ಆಧಾರಿತ ಕಾರ್ಯಕ್ರಮ ನಡೆಸಿಕೊಟ್ಟರು.

08 ಸೆಪ್ಟೆಂಬರ್ 1992ರಲ್ಲಿ 'ಯುವಕರು ಮತ್ತು ವರದಕ್ಷಿಣೆ' ಭಾಷಣ ಕಾರ್ಯಕ್ರಮ, 22 ಆಗಸ್ಟ್ 1991ರಲ್ಲಿ 'ಭಾರತದ ಗ್ರಾಮೀಣಾಭಿವೃದ್ಧಿಯಲ್ಲಿ ಯುವಜನರ ಪಾತ್ರ' ಚರ್ಚೆ ಕಾರ್ಯಕ್ರಮ, 03 ಸೆಪ್ಟೆಂಬರ್ 1991ರಲ್ಲಿ 'ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು' ಭಾಷಣ ಕಾರ್ಯಕ್ರಮ, 04 ಸೆಪ್ಟೆಂಬರ್ 1990ರಲ್ಲಿ 'ಕರ್ನಾಟಕದಲ್ಲಿ ನಾಟಕ ಚಳವಳಿ ಎತ್ತ ಸಾಗಿದೆ' ಸಂದರ್ಶನ ಆಧಾರಿತ ಕಾರ್ಯಕ್ರಮ, 22 ಮಾರ್ಚ್ 1994ರಲ್ಲಿ 'ನಮ್ಮ ಚಲನಚಿತ್ರಗಳು' ಚರ್ಚೆ ಕಾರ್ಯಕ್ರಮ, 09 ಫೆಬ್ರವರಿ 1995ರಲ್ಲಿ 'ನಗರೀಕರಣ', ಭಾಷಣ ಕಾರ್ಯಕ್ರಮ ಹೀಗೆ ಹಲವಾರು ಕಾರ್ಯಕ್ರಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಲೇಖಕರು ಹಲವಾರು ರೇಡಿಯೋ ನಾಟಕಗಳನ್ನು ನಡೆಸಿಕೊಟ್ಟಿದ್ದಾರೆ. 10 ಡಿಸೆಂಬರ್ 1994ರಲ್ಲಿ 'ಹೆದರಿಸುವ ಆಟ' ನಾಟಕ ಕಾರ್ಯಕ್ರಮ, 02 ಡಿಸೆಂಬರ್ 1990ರಲ್ಲಿ 'ಹುಡುಕಾಟ' ನಾಟಕಗಳು ಧಾರವಾಡ ಆಕಾಶವಾಣಿಯಲ್ಲಿ ನಡೆಸಿದರು. 2003ರಲ್ಲಿ 'ನಮ್ಮೊಳಗಿನ ಮನುಷ್ಯ', 2006ರಲ್ಲಿ ಜಾಗತೀಕರಣವೋ ತಿಮ್ಮಜ್ಜಿ ಕೋಳಿಯೋ', 2008ರಲ್ಲಿ 'ನಾನು ಈಗಾಗಲೇ ಮಾರಾಟವಾಗಿದ್ದೇನೆ' ನಾಟಕಗಳು ಮೈಸೂರು ಆಕಾಶವಾಣಿಯಲ್ಲಿ ಪ್ರಸಾರಗೊಂಡಿದೆ. ದೂರದರ್ಶನದ ಮೂಲಕ 2003ರಲ್ಲಿ 'ಹೈಟೆಕ್ ಹುಡುಕಾಟ', 'ನೀರು' 2007ರಲ್ಲಿ 'ನಮ್ಮೊಳಗಿನ ಮನುಷ್ಯ' ನಾಟಕಗಳು ಪ್ರಸಾರವಾದವು.

ಲೇಖಕರು, ರೇಡಿಯೋ, ದೂರದರ್ಶನ ನಾಟಕಗಳಲ್ಲದೇ ಬೀದಿ ನಾಟಕಗಳಲ್ಲಿ ಸಹ ಅಭಿನಯಿಸಿದ್ದಾರೆ. 12 ಜೂನ್ 2002ರಲ್ಲಿ ಉತ್ತರ ಕನ್ನಡ ಜಿಲ್ಲೆ ವಾರ್ತಾ ಮತ್ತು ಪ್ರಚಾರ ಇಲಾಖೆ ನಡೆಸಿಕೊಟ್ಟ 'ವಾರ್ತಾ ಜಾತ್ರೆ'ಗಾಗಿ ರಚಿಸಿ ನಿರ್ದೇಶಿಸಿದ ಬೀದಿ ನಾಟಕಗಳು 'ಪರಿಸರ ರಕ್ಷಿಸಿ' ಉಳುವಿ ಜಾತ್ರೆಯಲ್ಲಿಯೂ 'ಮಾಟ' ಶಿರ್ಶಿಯ ಮಾರಿಕಾಂಬ ಜಾತ್ರೆಯಲ್ಲಿಯೂ 'ಕುಡಿ–ಬ್ಯಾಡ್ರೋಯಪ್ಪ ಕದ್ರಾ' ನಾಟಕವನ್ನು ಮಲ್ಲಾಪುರದ ಸುತ್ತಮುತ್ತಲಿನ ಪ್ರದೇಶದಲ್ಲಿ ಅಭಿನಯಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉತ್ತರ ಕನ್ನಡ ಇವರಿಗಾಗಿ ನಿರ್ದೇಶಿಸಿದ ಬೀದಿ ನಾಟಕ 'ಎಲ್ಲಿದೆ ಕನ್ನಡ?' ನಾಟಕವನ್ನು ಹೊನ್ನಾವರ

ಭಾಗದಲ್ಲಿಯೂ ಉತ್ತರ ಕನ್ನಡ ಜಿಲ್ಲೆಯ ಕಾರ್ಮಿಕ ಇಲಾಖೆಗಾಗಿ ನಿರ್ದೇಶಿಸಿದ ಬೀದಿನಾಟಕ 'ಹಾರೋ ಹಕ್ಕಿಗೊಂದು ಕನಸು' ನಾಟಕ ಕಾರವಾರದಲ್ಲಿಯೂ ಉತ್ತರ ಕನ್ನಡ ಜಿಲ್ಲೆಯ ಕದಂಬೋತ್ಸವ ಹಾಗೂ ಕರಾವಳಿ ಉತ್ಸವ 2002ಕ್ಕೆ ನಿರ್ದೇಶಿಸಿದ ನಾಟಕ 'ಹುಡುಕಾಟ' ಹಾಗೂ ಉತ್ತರ ಕನ್ನಡ ಜಿಲ್ಲೆ ಸಮಾಜ ಕಲ್ಯಾಣ ಇಲಾಖೆಗಾಗಿ ನಿರ್ದೇಶಿಸಿದ ಬೀದಿ ನಾಟಕ 'ಒಂದೇ ನಾವೆಲ್ಲಾ' ದಾಂಡಲಿಯಲ್ಲಿಯೂ ಪ್ರಸಾರಗೊಂಡಿವೆ.

ಲೇಖಕರು, ನಿರ್ದೇಶಕರು ಮಾತ್ರವಲ್ಲ ಚತುರ ಅಭಿನಯಕಾರರು ಹೌದು. ಇದಕ್ಕಾಗಿಯೇ ಇವರು ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. 'ಸರ್ವೇಜನೋ ಸುಖಿನೋಭವಂತು', 'ರಾಜರಿನ್ನೂ ಸತ್ತಿಲ್ಲಾ', 'ಜೈಸಿದ್ಧನಾಯಕ', 'ಧಪನ್', ಸಾಹೇಬರ ನಾಯಿ', 'ಬಂಗಾರದ ಕೊಡ', 'ಸಂತ್ಯಾಗ ನಿಂತಾಗ ಕಬೀರ', 'ಹುಡುಕಾಟ ಮತ್ತು ನೀರು' ಮುಂತಾದವುಗಳು. ಈ ಕ್ಷೇತ್ರ ಮಾತ್ರವಲ್ಲದೆ ಸಿನಿಮಾ ರಂಗದಲ್ಲಿಯೂ ತಮ್ಮ ಅಭಿನಯ ಚತುರತೆ ಮೆರೆದಿದ್ದಾರೆ. ಅವರು ಅಭಿನಯಿಸಿದ ಚಲನಚಿತ್ರದಲ್ಲಿ 'ಝೂಡಿರೋ ಪಂಕೇರು'. ಇದೊಂದು ಲಂಬಾಣಿ ಭಾಷೆಯ ಚಲನಚಿತ್ರವಾಗಿದ್ದು ಹಾಸ್ಯ ಕಲಾವಿದರಾಗಿ ಅಭಿನಯಿಸಿದ್ದಾರೆ. 'ಮಿ. ಸುನೀಲ್' ಎಂಬ ಟೆಲಿ ಚಿತ್ರದಲ್ಲಿಯೂ ತಮ್ಮ ಅಭಿನಯ ಕೌಶಲ್ಯ ಮೆರೆದಿದ್ದಾರೆ.

ಲೇಖಕರು ಪತ್ರಿಕೆಯ ಮೂಲಕ ಕೆಲವು ಲೇಖನಗಳನ್ನು ಪ್ರಕಟಿಸಿದ್ದಾರೆ. ಅವುಗಳೆಂದರೆ 20 ಸೆಪ್ಟೆಂಬರ್ 1997ರಲ್ಲಿ 'ಸುಳ್ಳಿನ ಸರದಾರರು ಮತ್ತು ಸಮಾಜ', 24 ಅಕ್ಟೋಬರ್ 1997ರಲ್ಲಿ 'ಮಾನವ ಈ ಜಗದೊಡೆಯನಾಗಲು', 5 ಡಿಸೆಂಬರ್ 1997ರಲ್ಲಿ 'ಬದುಕಿನ ಅನಿವಾರ್ಯತೆಗಳು', ಎಂಬ ಲೇಖನಗಳು 'ಕರಾವಳಿ ಮುಂಜಾವು' ಪತ್ರಿಕೆಯಲ್ಲಿ ಪ್ರಕಟವಾದರೆ 'ದಲಿತ ಮಹಿಳೆ ಒಂದು ಚಿಂತನೆ', 'ವಿಮರ್ಶಕನೆಂಬ ಭೂತ ಪ್ರಶಸ್ತಿ ಎಂಬ ಫಲ' ಎಂಬ ಲೇಖನಗಳು 'ಛಂದಸ್ಮೃತಿ' ಪತ್ರಿಕೆಯಲ್ಲಿ ಪ್ರಕಟಗೊಂಡಿವೆ. 'ಮನು, ಹಿಟ್ಲರ್ ಮತ್ತು ಅಂಬೇಡ್ಕರ್ ಒಂದು ಚಿಂತನೆ', 15 ಸೆಪ್ಟೆಂಬರ್ 2001ರಲ್ಲಿ 'ಒಂದು ಬದುಕು ಆಹಾರ ಚಿಂತನೆ ಒಂದಿಷ್ಟು' 24 ಅಕ್ಟೋಬರ್ 2001ರಲ್ಲಿ 'ಹೌದು ಮನುಷ್ಯನೆ ಬದುಕು ಹೀಗಿದೆ' ಎಂಬ ಲೇಖನಗಳು 'ಸಮಸ್ತರು' ಪತ್ರಿಕೆಯಲ್ಲಿ ಪ್ರಕಟಣೆಗೊಂಡಿದೆ.

ಲೇಖಕರು ತಮ್ಮ ವೃತ್ತಿ ಬದುಕಿನಲ್ಲಿ ತೊಡಗಿಸಿಕೊಂಡ ಇನ್ನಿತರ ಚಟುವಟಿಕೆಗಳ ರೂಪುಗಳೆಂದರೆ 02 ನವೆಂಬರ್ 1988ರಲ್ಲಿ ಗುಜರಾತಿನ ಕೇವಾಡಿಹಳ್ಳಿಯಲ್ಲಿ ಯುವಕರಿಗೆ ನಡೆಸಿಕೊಟ್ಟ 'ಕೋಮು ಸೌಹಾರ್ದ ರಾಷ್ಟ್ರೀಯ ಶಿಬಿರ, 1992–93ನೇ ಸಾಲಿನಲ್ಲಿ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪರೇಡಿನಲ್ಲಿ ಎನ್.ಎಸ್.ಎಸ್. ಪ್ರತಿನಿಧಿಯಾಗಿ ಭಾಗವಹಿಸಿದ್ದರು. 1994ರಲ್ಲಿ ಜಾಮಿಯ ಮಿಯಾ ಇಸ್ಲಾಮಿಯ ವಿಶ್ವವಿದ್ಯಾನಿಲಯ

ದೆಹಲಿ ಎನ್.ಎಸ್.ಎಸ್. ಬೆಳ್ಳಿಹಬ್ಬದ ಸಮಿತಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಶಿಬಿರದಲ್ಲಿ ಭಾಗವಹಿಸಿದರು. 1996ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡಿದ್ದ ಕಥಾಕಮ್ಮಟದಲ್ಲಿ ಭಾಗವಹಿಸಿದರು.

2000ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ನಡೆಸಿದ 'ಸಮತಾ ಸಂಭ್ರಮ ಕವಿಗೋಷ್ಠಿ'ಯಲ್ಲಿ ಭಾಗವಹಿಸಿದ್ದರು. 2001ರಲ್ಲಿ ಕಾರವಾರ ಜಿಲ್ಲಾ ಆಡಳಿತವತಿಯಿಂದ ಸಮಾಜ ಕಲ್ಯಾಣ ಇಲಾಖೆ ಆಚರಿಸಿದ ಡಾ. ಬಾಬಾ ಸಾಹೇಬರ್ 110ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ 'ಡಾ. ಅಂಬೇಡ್ಕ ಬದುಕು ಬರಹ' ಕುರಿತು ಉಪನ್ಯಾಸ ಕಾರ್ಯಕ್ರಮ ನೀಡಿದರು. 2001ರಲ್ಲಿ ಕಾರವಾರ ಜಿಲ್ಲೆಯ ಬನವಾಸಿಯಲ್ಲಿ ಜರುಗಿದ ಕದಂಬೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದರು. 25 ಆಗಸ್ಟ್ 2001ರಂದು ದಾವಣಗೆರೆ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹರಪನಹಳ್ಳಿಯಲ್ಲಿ ಏರ್ಪಡಿಸಿದ್ದ 'ಕಾವ್ಯ ಕಾವೇರಿ' ಕಾರ್ಯಕ್ರಮದಲ್ಲಿ ಕನ್ನಡ ಗೀತೆ ಗಾಯನದಲ್ಲಿ ಭಾಗವಹಿಸಿದರು. ಮತ್ತೆ 17 ಮಾರ್ಚ್ 2002ರಲ್ಲಿ ಸಮತಾ ಸಂಭ್ರಮ ಕವಿಗೋಷ್ಠಿ ಬೆಳಗಾವಿಯಲ್ಲಿ ಜರುಗಿದಾಗ ಭಾಗವಹಿಸಿದರು.

2003ರಲ್ಲಿ ನಡೆದ ಪ್ರೊ. ಕಾಳೇಗೌಡ ನಾಗವಾರರ ಸಾಹಿತ್ಯ ಕುರಿತ ವಿಚಾರ ಸಂಕಿರಣದಲ್ಲಿ ಭಾಗವಹಿಸಿದರು. 28 ಫೆಬ್ರವರಿ 2002ರಲ್ಲಿ ಶ್ರೀ ಗುರುದೇವ ಪ್ರೌಢಶಾಲೆಯಲ್ಲಿ ಮಂಜುಗುಣಿ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. 19 ಅಕ್ಟೋಬರ್ 2002ರಲ್ಲಿ ನಾಟಕ ಅಕಾಡೆಮಿ ನಾಪೋಕ್ಲುವಿನಲ್ಲಿ ಹಮ್ಮಿಕೊಂಡಿದ್ದ ನಾಟಕ ರಚನಾ ಶಿಬಿರದಲ್ಲಿ ಪಾಲ್ಗೊಂಡಿದ್ದರು. 2002ರಲ್ಲಿ ಗಡಿನಾಡ ಉತ್ಸವ, ಕರಾವಳಿ ಉತ್ಸವ ಕಾರವಾರ ಜಿಲ್ಲೆಯಲ್ಲಿ ಜರುಗಿದಾಗ ಭಾಗವಹಿಸಿದರು. 2003ರಲ್ಲಿ 'ಕುವೆಂಪು ಅವರ ನಾಟಕಗಳಲ್ಲಿ ವೈಚಾರಿಕತೆ' ಪ್ರಬಂಧ ಮಂಡನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಏರ್ಪಡಿಸಿದ್ದ ಕುವೆಂಪು ಶತಮಾನೋತ್ಸವದಲ್ಲಿ ಭಾಗವಹಿಸಿದರು. 2003 'ಸುಮತಾ ಸಂಭ್ರಮ' ಕವಿಗೋಷ್ಠಿಯಲ್ಲಿಯೂ 2004ರಲ್ಲಿ ಅಂತರ್ ವಿಶ್ವವಿದ್ಯಾನಿಲಯಗಳ ರಾಷ್ಟ್ರೀಯ ಯುವ ಮೇಳ ಗ್ವಾಲಿಯರ್‌ನಲ್ಲಿ ನಡೆದಾಗ ಮೈಸೂರು ವಿಶ್ವವಿದ್ಯಾನಿಲಯ ತಂಡದ ನಾಯಕತ್ವ ವಹಿಸಿದರು.

2004 ಮಾರ್ಚ್ ಸಿಐಐಎಲ್‌ನಲ್ಲಿ 'ಭಾಷಾಂತರ ಮತ್ತು ಭಾಷಾ ವಿಜ್ಞಾನ' ವಿಷಯ ಕುರಿತು ಪ್ರಬಂಧ ಮಂಡನೆ, 2004 ಮಾಚ್ 28ರಲ್ಲಿ ಸಿಐಐಎಲ್ ನಡೆಸಿದ ಕನ್ನಡೇತರರಿಗೆ ಪಾಠ ತಯಾರಿಕೆ ಶಿಬಿರದಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದರು. 2004 ರ 'ಕನ್ನಡ ವ್ಯಾಕರಣ ರಚನೆ' ಶಿಬಿರದಲ್ಲಿಯೂ 2008ರ ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪರೇಡಿಗೆ ಕರ್ನಾಟಕದಿಂದ ಎನ್.ಎಸ್.ಎಸ್. ವಿದ್ಯಾರ್ಥಿಗಳ ತಂಡದ

ಜವಾಬ್ದಾರಿ ಹೊತ್ತು ಹೋಗಿದರು. 2007ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಧಾರವಾಡದಲ್ಲಿ ನಡೆಸಿದ 'ಯುವ ಬರೆಹಗಾರರ ಕಾವ್ಯ ಕಮ್ಮಟ'ದಲ್ಲಿ ಕಥೆ ವಾಚನ ಮಾಡಿದ್ದರು. 2000ರ ಕರ್ನಾಟಕ ಸಾಹಿತ್ಯ ಅಕಾಡೆಮಿ ರಾಯಚೂರಿನಲ್ಲಿ ನಡೆಸಿದ ಯುವ ಕವಿಗೋಷ್ಠಿಯಲ್ಲಿ ಕವನ ವಾಚನ ಮಾಡಿದರು. ಹೀಗೆ ಹಲವಾರು ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗಿಯಾಗಿದ್ದರು.

ಲೇಖಕರು ತಮ್ಮ ಕಲಿಕಾ ಅನುಭವವನ್ನು ಕಿರಿಯ ಸಂಶೋಧಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವ ಸೇವೆಗೆ ಬಳಸಿಕೊಂಡಿದ್ದಾರೆ. ಅಲಗಪ್ಪ ವಿಶ್ವವಿದ್ಯಾನಿಲಯ, ತಿರುಪತಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯ, ವಿನಾಯಕ ಮಿಷನ್ ಮಧುರೈ ಕಾಮರಾಜ ವಿಶ್ವವಿದ್ಯಾನಿಲಯ, ದ್ರಾವಿಡ ವಿಶ್ವವಿದ್ಯಾನಿಲಯ, ಕುಪ್ಪಂಗಳಲ್ಲಿ ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದರು. ಅದು ಮಾತ್ರವಲ್ಲದೆ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ದ್ರಾವಿಡ ವಿಶ್ವವಿದ್ಯಾನಿಲಯದ ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದಾರೆ.

ಒಟ್ಟಾರೆ ಲೇಖಕರು ತಮ್ಮ ಬದುಕಿನುದ್ದಕ್ಕೂ ತಮ್ಮ ಅನುಭವ ಮತ್ತು ಕಲಿಕೆಯನ್ನು ಲಂಬಾಣಿ ಸಮುದಾಯದೊಡನೆ ಮೇಳೈಸಿಕೊಂಡು ಸಾಹಿತ್ಯ ರಚಿಸಿ ಸಮುದಾಯಕ್ಕೊಂದು ಸಾಹಿತ್ಯಿಕ ನೆಲೆ ಕಲ್ಪಿಸುವ ಪ್ರಯತ್ನ ಮಾಡಿದ್ದಾರೆ. ಪ್ರೊ. ಸಣ್ಣರಾಮ, ಡಾ. ಸಂಗ್ರಾಮ್, ಕೃಷ್ಣನಾಯಕ್ ಮತ್ತು ಬಿ.ಟಿ. ಲಲಿತನಾಯಕ್ ಅವರ ಸಾಲಿನಲ್ಲಿ ಕಾಣಬರುವ ಮತ್ತೊಂದು ಹೆಸರು ಶಿರಗಾನಹಳ್ಳಿ ಶಾಂತನಾಯ್ಕರವರು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಲವಾರು ಮೂಲಗಳಿಂದ ಪ್ರಬುದ್ಧವಾಗಿರುವ ಸಣ್ಣಕತೆ ಮತ್ತು ಕಾದಂಬರಿ ಪ್ರಕಾರಗಳು 1970ರ ದಲಿತ ಬಂಡಾಯ ಕಾಲಘಟ್ಟದಲ್ಲಿ ವಿನೂತನ ದಾರಿಯಲ್ಲಿ ಸಾಗಿತು. ಜಾತಿ, ವರ್ಗ ಶೋಷಣೆಯ ವಿರುದ್ಧ ಶ್ರಮಜೀವಿಗಳನ್ನು ಅಣಿಗೊಳಿಸುವುದು ಈ ಕಾಲ ಘಟ್ಟದಲ್ಲಿ ಪ್ರಮುಖ ನೆಲೆಯಾಯಿತು. ಈ ಸಾಹಿತ್ಯದಲ್ಲಿ ಕಲೆಗಾರಿಕೆಗಿಂತಲೂ ವಾಸ್ತವ ಬದುಕಿನ ಬರ್ಭರತೆ ಮುಖ್ಯವಾಯಿತು. ಬದುಕಿನ ಏಳಿಗೆಗೆ ಅಡ್ಡಿಯಾಗಿರುವ ಶೋಷಣೆ, ಜಾತಿ ಅಸ್ಪೃಶ್ಯತೆ, ಧರ್ಮ, ಪ್ರಭುತ್ವ, ಲಿಂಗಭೇದ, ವರ್ಗ ಸಂಘರ್ಷಗಳನ್ನು ಕುರಿತು ಚರ್ಚಿಸಿತು.

ಇಂತಹ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯನ್ನು ಏಕಕಾಲಕ್ಕೆ ಸಂಘಟಿಸುವ ಕಾಲದಲ್ಲಿ ಮುಸ್ಲಿಂ ಸಂವೇದನೆ, ದಲಿತ ಸಂವೇದನೆ, ಮತ್ತು ಮಹಿಳಾಸಂವೇದನೆಗಳು ಹೊಸ ಹಾದಿ ತೋರಿದವು. ಇದರ ನಡುವೆ ತಮ್ಮ ಸಮುದಾಯದ ನೋವು ಸಂಕಷ್ಟವನ್ನು ಬಹಿರಂಗ ಪಡಿಸಲು, ಸಮಾಜದೊಳಗೆ ತಮಗೊಂದು ನೆಲೆಯನ್ನು ಕಂಡು ಕೊಳ್ಳುವ ತವಕ ಮಾಡಿದ ಸಮುದಾಯವೇ ಲಂಬಾಣಿ ಸಮುದಾಯವಾಗಿದೆ. ಈ ಅಲೆಮಾರಿ

ಬುಡಕಟ್ಟು ಜನರು ದಲಿತ-ಬಂಡಾಯ ಸಾಹಿತ್ಯದ ಜೊತೆಗೆ ತಮ್ಮ ಸಮುದಾಯದ ಸಂಸ್ಕೃತಿ, ಶೋಷಣೆ, ದಬ್ಬಾಳಿಕೆಯನ್ನು ಸಾಹಿತ್ಯರೂಪದಲ್ಲಿ ಹಿಡಿದಿಡುವ ಕೆಲಸ ಮಾಡಿದ್ದರು.

ದಲಿತ-ಬಂಡಾಯ ಕಾಲಘಟ್ಟದಲ್ಲಿ ಡಾ. ಸಂಗ್ರಾಮ್ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರ ವ್ಯಕ್ತಿತ್ವ ಕುರಿತು ಸಾಹಿತ್ಯ ಲೇಖನ ಬರೆಯುವ ಮೂಲಕ ಲಂಬಾಣಿ ಬರಹಗಾರರೊಬ್ಬರು ಸಾಹಿತ್ಯ ರಂಗ ಪ್ರವೇಶಿಸಿದರು. ಅನಂತರ ಪಿ.ಕೆ. ಖಂಡೋಬಾ. ಡಾ. ಡಿ.ಬಿ. ನಾಯಕ್ ಬಿ.ಟಿ. ಲಲಿತಾ ನಾಯಕ್, ಹರಿಲಾಲ್ ಪವರ್, ಸಣ್ಣರಾಮ, ಕೃಷ್ಣನಾಯಕ್, ದಿ. ಬೆನಕನಹಳ್ಳಿ ಜಿ. ನಾಯಕ್ ಮೊದಲಾದವರು ಸಾಹಿತ್ಯ ಪ್ರವೇಶಿಸಿದರು. ಶಿರಗಾನಹಳ್ಳಿ ಶಾಂತನಾಯ್ಕ ಅವರು ಪ್ರಸಕ್ತ 1999 ರಿಂದ ಸಾಹಿತ್ಯ ಲೋಕವನ್ನು ಪ್ರವೇಶಿಸಿದರು. ಇವರು ಲಂಬಾಣಿ ಸಮುದಾಯದವರ ಬದುಕು, ಸಂಸ್ಕೃತಿಯನ್ನು ತಮ್ಮ ಕಥನ ಸಾಹಿತ್ಯ ಕೃತಿಗಳಲ್ಲಿ ಹಿಡಿದಿಡುವ ಕೆಲಸ ಮಾಡಿದ್ದಾರೆ.

ಈ ಸಮುದಾಯದ ಬರಹಗಾರರಲ್ಲಿ ಪ್ರಮುಖವಾಗಿ ಬಿ.ಟಿ. ಲಲಿತನಾಯಕ್ ಅವರು 1986ರಲ್ಲಿ 'ಗತಿ' ಕಾದಂಬರಿಯು 1989ರಲ್ಲಿ 'ಹಬ್ಬ ಮತ್ತು ಬಲಿ' ಸಣ್ಣಕತೆ ಸಂಕಲನವು ಪ್ರಕಟವಾಯಿತು. ಬಿ.ಹೀರಾನಾಯ್ಕರು 1977ರಲ್ಲಿ 'ಹಾತಿರಾಂ ಬಾವಾಜಿ' ಕಾದಂಬರಿಯನ್ನು ಪ್ರಕಟಿಸಿದರು. ಸಣ್ಣರಾಮ ಅವರು 'ಅಳುವ ನುಂಗಿನಗಿಸೊಮ್ಮೆ' 'ಕಾಯುತ್ತಿದ್ದಾರೆ' ಮತ್ತು 'ಕಾಮದಹನ' ಎಂಬ ಮೂರು ಕಥಾಸಂಕಲನವನ್ನು ಪ್ರಕಟಿಸಿದರು. ಕೃಷ್ಣನಾಯಕ್ ಅವರು 'ಕತ್ತಲು ಕರಗುವಪರಿ' ಮತ್ತು 'ಲವ್ವೆನಿಯಾ' ಎಂಬ ಎರಡು ಕಥಾಸಂಕಲನವನ್ನು ಪ್ರಕಟಿಸಿದರು. ಹೀಗೆ ಹಲವು ಪ್ರಕಾರದ ಸಾಹಿತ್ಯ ಲಂಬಾಣಿ ಬರಹಗಾರರಿಂದ ರಚನೆಯಾದವು.

ಪ್ರಸ್ತುತ ಶಿರಗಾನಹಳ್ಳಿ ಶಾಂತನಾಯ್ಕ ಅವರ ಸಣ್ಣಕತೆ ಮತ್ತು ಕಾದಂಬರಿಯನ್ನು ನನ್ನ ನಿಬಂಧದಲ್ಲಿ ಸಂಶೋಧನೆ ಕಾರ್ಯಕ್ಕೆ ಒಳಪಡಿಸಲಾಗಿದೆ. ಜಾತಿವ್ಯವಸ್ಥೆ, ಬಡತನ, ಹಸಿವು, ಶೋಷಣೆ, ವರ್ಗಹೋರಾಟ, ಮಹಿಳಾಶೋಷಣೆ, ಗ್ರಾಮೀಣ ಬದುಕು ಮತ್ತು ಆಚರಣೆ ಹಾಗೂ ಆಧುನಿಕತೆ ವಿಷಯಗಳು ಇವರ ಕಥನ ಸಾಹಿತ್ಯದಲ್ಲಿ ನಿರೂಪಣೆಗೊಂಡಿರುವ ಬಗೆಯನ್ನು ಅಧ್ಯಯನ ಮಾಡಲಾಗಿದೆ.

ಜಾತಿವ್ಯವಸ್ಥೆ

ಜಾತಿವ್ಯವಸ್ಥೆಯು ಮನುಷ್ಯ ಹೆಣೆದುಕೊಂಡಿರುವ ಒಂದು ಮಾನಸಿಕ ದೌರ್ಬಲ್ಯದ ಬಲೆಯಾಗಿದೆ. ಮಾನವ ಹುಟ್ಟಿದ ಕೂಡಲೇ ಒಂದು ಜಾತಿಯ ಸಂಕೋಲೆಯೊಳಗೆ ಬಂಧಿಯಾಗಿರುತ್ತಾನೆ. ಜಾತಿವ್ಯವಸ್ಥೆ ಒಂದು ಅಮೂರ್ತವಾದ ನೆಲೆಯಾಗಿದೆ. ಸಮಾಜದಲ್ಲಿ ಜಾತಿಯೇಬೇರೆ, ಅಸ್ಪೃಶ್ಯತೆಯೇ ಬೇರೆಯಾದರೂ ಅಸ್ಪೃಶ್ಯತೆಗೆ ಜಾತೀಯತೆಯೇ

ಮೂಲವಾಗಿದೆ. ಇಂತಹ ವಿಷಕಾರಕ ವ್ಯವಸ್ಥೆಯೊಳಗೆ ಸಿಲುಕಿಕೊಂಡ ಲಂಬಾಣಿ ಸಮುದಾಯ ಅನುಭವಿಸಿದಂತಹ ಅಪಮಾನದ ಬಗ್ಗೆ ಲೇಖಕರು ಸಣ್ಣಕತೆ ಮತ್ತು ಕಾದಂಬರಿಗಳ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ಲೇಖಕರು ಮೊದಲ ಕಾದಂಬರಿ 'ಕತ್ತಲು ಕರಗುವ ಮುನ್ನ'ದಲ್ಲಿ ವಸ್ತು ಆಧುನಿಕತೆಯ ನಿರುದ್ಯೋಗವೇ ಆಗಿದ್ದರೂ ಈ ಕಾದಂಬರಿಯಲ್ಲಿ ಇರುವಷ್ಟು ಜಾತಿ ಶೋಷಣೆ ಬೇರೆ ಯಾವ ಕಥನ ಸಾಹಿತ್ಯದಲ್ಲಿಯೂ ಕಂಡು ಬರುವುದಿಲ್ಲ. ಈ ಕಾದಂಬರಿಯಲ್ಲಿ ಕಂಡು ಬಂದಿರುವ ಜಾತಿವ್ಯವಸ್ಥೆಯ ಸಂದರ್ಭ "ಅವನ ಹೆಸರ ಕೇಳಿದ ಮೇಷ್ಟ್ರುಗಳು ಮಾರಿಸಿಂಡರಿಸಿಕೊಂಡು ಲೇ ನಿಮಗೆ ಏನಾಗ್ಯತ್ರಲೇ, ಅಲ್ನೋಡ್ರಿ ಅಂವ ಅದ್ಯಾವದೋ ಕೆಟ್ಟ ಜಾತಿಯೋನು ನಿಮ್ಮನ್ನು ತುಳಿದು ಮ್ಯಾಲ ಹೊಂಟಾನ ಅಂದು ಪ್ರಭು ಮೇಲಿನ ತಮ್ಮ ಸಿಟ್ಟನ್ನ ಕಡಮಿಮಾಡ್ಕೊಂತಿದ್ರು". ಈ ಮಾತಿನಲ್ಲಿ ಶಿಕ್ಷಕರಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕಾದಂತಹ ಅಧ್ಯಾಪಕರಲ್ಲಿರುವ ಜಾತಿಸೂತಕ ಮನಸ್ಸಿನ ಬಗ್ಗೆ ತಿಳಿಸುತ್ತದೆ.

ತಳಜಾತಿಗೆ ಸೇರಿದ ಯುವಕ ಅಧ್ಯಾಪಕನೊಬ್ಬ ತನ್ನಲ್ಲಿರುವ ಕಲಿಕೆಯ ಆಸಕ್ತಿ, ಕಲಿಸುವ ಶ್ರದ್ಧೆ ಹಾಗೂ ಕೌಶಲ್ಯಗಳಿಂದ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಅಧ್ಯಾಪಕನಾಗಿ ಬೆಳೆಯುತ್ತಿರುವುದನ್ನು ಸಹಪಾಠಿ ಅಧ್ಯಾಪಕರು ಸಹಿಸಿಕೊಳ್ಳಲು ಸಾಧ್ಯವಾಗದೆ ತಮ್ಮ ಸಿಟ್ಟನ್ನು ಹೊರಹಾಕಿದ ಸಂದರ್ಭವಾಗಿದೆ. ಇಂತಹ ಸಿಟ್ಟು, ಆಕ್ರೋಶಗಳು ಸಮಾಜದೊಳಗೆ ಸಾಮಾನ್ಯವಾದರೂ ಅಧ್ಯಾಪಕರಲ್ಲಿರುವುದು ಅಸಮಾಧಾನವನ್ನುಂಟು ಮಾಡಿದೆ. ಅವಿದ್ಯಾವಂತರ ಜಾತಿತಾರತಮ್ಯತೆಗಿಂತಲೂ ಇದು ಸಾವಿರಾರುಪಟ್ಟು ನೋವುಂಟು ಮಾಡುವ ತಾರತಮ್ಯವಾಗಿದೆ.

ಮೇಲ್ಜಾತಿಯ ಜನರು ತಳಜಾತಿಯ ಜನರನ್ನು ಅವಹೇಳನ ಮಾಡಲು ನಿಖರವಾದ ಕಾರಣಗಳ ಅವಶ್ಯಕತೆಬೇಕಾಗಿಲ್ಲ. ಆ ಸಮುದಾಯಕ್ಕೆ ಸಂವಿಧಾನದಿಂದ ದೊರಕುವ ಸವಲತ್ತುಗಳು ಸಹ ಜಾತಿವ್ಯವಸ್ಥೆಯ ಕೂಪದೊಳಗಿರುವುದು ವಿರ್ಪಯಸವಾಗಿದೆ. ಅಂತಹದೇ ಒಂದು ಸಂದರ್ಭ "ನೋಡು ಪ್ರಭು ನಾವು ಎಷ್ಟೇ ಆದ್ರೂ ಕೆಳಗಿನ ಜಾತಿಯೋರು ಮೀಸಲಾತಿ ಪಡೆದು ಖಾಲಿಪುಕ್ಕಟೆ ಸ್ಕಾಲರ್‌ಶಿಪ್ ತಗೊಂಡು ಶಿಕ್ಷಣ ಪಡಿಯಾಕ ಹತ್ತೀವಿ ಅಂತಂದು ಇಲ್ಲಿ ಮೇಷ್ಟ್ರು, ಹುಡ್ರು ನಮ್ಮ ಬಗ್ಗೆ ಆಡಿಕೊಳ್ತಾರ" ಈ ಮಾತಿನಲ್ಲಿ ತಳಸಮುದಾಯದ ಶೋಷಿತ ವಿದ್ಯಾರ್ಥಿಯ ಅಳಲು ವ್ಯಕ್ತವಾಗಿದೆ.

ತಳಸಮುದಾಯಕ್ಕೆ ಸಂವಿಧಾನದಿಂದ ದೊರಕುತ್ತಿರುವ ಮೀಸಲಾತಿ ಕುರಿತು ಅಸಮಾನಧಾನಗೊಂಡಿರುವ ಮೇಲ್ವರ್ಗದ ಜನರು ಆ ಮೀಸಲಾತಿ ವಿಷಯವನ್ನು ಮುಖ್ಯವಾಗಿಟ್ಟುಕೊಂಡು ಶೋಷಣೆ ಮಾಡುವುದು ಅಸಮಂಜಸವಾಗಿದೆ. ಇಂತಹ

ಕ್ರೌರ್ಯಗಳು ಪ್ರಸ್ತುತ ಸಂದರ್ಭದಲ್ಲಿ ಸದ್ದಿಲ್ಲದೆ ಹೊಗೆಯಾಡುತ್ತಿವೆ. ಮೀಸಲಾತಿ ಇರುವಾಗಲೇ ತಳಸಮುದಾಯವರ ಸ್ಥಿತಿ ಚಿಂತಾಜನಕದಂತೆ ಕಂಡು ಬರುವಾಗ ನಮ್ಮ ಪೂರ್ವಿಕರ ಬದುಕನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲದಂತಾಗಿದೆ. ಈ ವ್ಯವಸ್ಥೆಯು ಶಿಕ್ಷಣ ಮಟ್ಟದಲ್ಲಿ ಯಥೇಚ್ಚವಾಗಿ ಬೇರು ಬಿಟ್ಟಿರುವುದು ದುರಂತವಾಗಿದೆ.

ತಳಸಮುದಾಯದವರಿಗೆ ಸಂವಿಧಾನದ ಮೀಸಲಾತಿಗಳು ಅಸಮಂಜಸವಾಗಿದೆ. ಇಂತಹ ಬೆಳವಣಿಗೆಗಳು ಸಮಾನತೆ ತತ್ವಕ್ಕೆ ವಿರುದ್ಧವಾಗಿದೆ. ಎಂದು ಹೋರಾಟ ಮಾಡಿದಂತಹ ಸಂದರ್ಭವಿದೆ. "ಇಡೀ ವಿಶ್ವವಿದ್ಯಾಲಯದ ಹುಡ್ರೆಲ್ಲಾ ಈ ಜಾತಿಯವರಿಗ ಯಾಕ ಮೀಸಲಾತಿ ಅಂತೇಳಿ ಸಿಕ್ಕಲೆಲ್ಲಾ ಬೆಂಕಿ ಹಚ್ಚುವುದು ಮಾರಾಮಾರಿ ಆರಂಭಿಸಿದ್ರು" ಈಮಾತಿನಲ್ಲಿ ನಾಗರೀಕತೆಯ ಸಮಾಜದೊಳಗೆ ಅನಾಗರೀಕತೆ ಬೆಳೆಸಿಕೊಂಡು ಅಸಮರ್ಥವಾದ ಆಲೋಚನೆಯಿಂದ ಮಾನವೀಯ ಮೌಲ್ಯಗಳನ್ನು ಮರೆತು ಸಮಾಜದಲ್ಲಿ ಅಶಾಂತಿಯನ್ನುಂಟು ಮಾಡಿದ ರೀತಿಯನ್ನು ತಿಳಿಸುತ್ತದೆ. ಸಮಾಜದೊಳಗೆ ಇಂತಹ ಘಟನೆಗಳು ಸಹಕಾರ, ಸಹಬಾಳ್ವೆಯ ತತ್ವಗಳಿಗೆ ಮಾರಕಗಳಾಗಿವೆ. ಮೀಸಲಾತಿ ಇರುವ ಕಾಲದಲ್ಲಿಯೇ ತಳಸಮುದಾಯದ ಬದುಕು ಶೋಷಣೆಯ ಗೂಡಾಗಿರುವಾಗ ಜಾತಿವ್ಯವಸ್ಥೆ ವಿನಾಶ ಪೂರ್ವ ಕಲ್ಪಿತವಾಗಿದೆ.

ಜಾತಿಯ ಕಾರಣಕ್ಕಾಗಿ ತಳಸಮುದಾಯದ ಅಧ್ಯಾಪಕ ಪ್ರಭುವಿನ ತರಗತಿ, ನೆಮ್ಮದಿ ಕೆಡಿಸಿದ ಪ್ರಸಂಗ ಈ ಕಾದಂಬರಿಯಲ್ಲಿ ಪ್ರಮುಖವಾಗಿದೆ. "ಹುಡ್ರನೆಲ್ಲಾ ನನ್ನ ವಿರುದ್ಧ ಚಾಡಿ ಹೇಳಾಕ ಹಚಿದ್ರು, ಪಾಠ ಕೆಡಿಸೋ ಯತ್ನ ಮಾಡಿದ್ರು, ನನ್ನ ಹೆದರಿಸಿ ನೌಕರಿ ಬಿಟ್ಟು ಓಡಿಸೋ ಹುನ್ನಾರ ನಡಸಿದ್ರು ಇದಕ್ಕಿಂತ ಭಯಾನಕ ಲೋಕ ನನ್ನೂರೊಳಗೆ ಇರೋದರಿಂದ ನನಗ ನಾನು ಇರೋ ಪರಿಸರಾನೆ ಪಾಡ ಅನಿಸಾಕಹತ್ತು" ಈ ಮಾತಿನಲ್ಲಿ ಲೇಖಕರು ಸ್ವಅನುಭವ ಕಟ್ಟಿಕೊಂಡುವಂತೆ ಪ್ರಭುವಿನ ಪಾತ್ರವನ್ನು ಕಟ್ಟಿಕೊಟ್ಟಿದ್ದಾರೆ.

ತಳಸಮುದಾಯದಲ್ಲಿ ಕಡುಬಡತನದಿಂದ ಜೀವನ ಮಾಡುತ್ತಿದ್ದ ನಾಯಕ ಪ್ರಭು ವಿದ್ಯಾವಂತನಾಗಿ ಖಾಸಗಿ ಕಾಲೇಜಿನಲ್ಲಿ ಅಧ್ಯಾಪಕರ ವೃತ್ತಿ ಆರಂಭಿಸಿದನು. ಅವನ ಪ್ರತಿಭೆ, ವೃತ್ತಿ ಮೇಲಿನ ಪ್ರೀತಿಯು ವಿದ್ಯಾರ್ಥಿಗಳ ಆಸಕ್ತಿಯನ್ನು ಕೆರಳಿಸಿ ಪ್ರಭು ವಿದ್ಯಾರ್ಥಿಗಳ ನಡುವಿನ ಒಡನಾಟ ಉತ್ತಮವಾಯಿತು. ಈ ಒಡನಾಟವನ್ನು ಸಹಿಸಿಕೊಳ್ಳಲಾಗದ ಸಹಪಾಠಿ ಅಧ್ಯಾಪಕ ಮಿತ್ರರು ಕೆಲ ಕಿಡಿಗೇಡಿ ವಿದ್ಯಾರ್ಥಿಗಳಿಗೆ ಬೆಂಬಲ ನೀಡುವ ಮೂಲಕ ತರಗತಿ ಹಾಳು ಮಾಡುವ ಪ್ರಯತ್ನ ಮಾಡುತ್ತಿದ್ದರು. ಇಂತಹ ಘಟನೆಗಳು ವೃತ್ತಿಯಲ್ಲಿ ಸಹಜವಾಗಿದರೂ ತಳಸಮುದಾಯದ ಅಧ್ಯಾಪಕರಿಗೆ ನಿರಂತರವಾಗಿದೆ. ಜಾತಿವ್ಯವಸ್ಥೆಯ ವಿನೂತನ ಶೋಷಣೆಗೆ ಈ ವಿಧಾನವು ಪುಷ್ಠಿದಾಯಕವಾಗಿರುವುದು ಅಸಮಾಧಾನವನ್ನು ಉಂಟುಮಾಡುತ್ತದೆ.

ಲೇಖಕರು ಜಾತಿವ್ಯವಸ್ಥೆಯ ಕ್ರೌರ್ಯದ ಬಗ್ಗೆ ಪ್ರಸ್ತಾಪಿಸುವಾಗ ಪ್ರೀತಿಯೊಳಗಿನ ಜಾತಿವ್ಯವಸ್ಥೆಯನ್ನು ಕುರಿತು ಚರ್ಚೆ ಮಾಡುತ್ತಾರೆ. ಕಾಲೇಜು ಅಧ್ಯಾಪಕ ಪ್ರಭು ಮತ್ತು ವಿದ್ಯಾರ್ಥಿನಿ ಮಲ್ಲಿಕಾ ಇವರಿಬ್ಬರ ನಡುವಿನ ಪ್ರೇಮವನ್ನು ಜಾತಿಯ ತಕ್ಕಡಿಯಲ್ಲಿ ತೂಗಿದ ಸಂದರ್ಭವಿದೆ. "ಅಲ್ಲ ಪ್ರಭು ನೀ ನೋಡಿದ್ರ ನಮ್ಮ ತಾವ ಮಾತಾಡುಕು ನಾಲಾಯಕ್, ಅಂತೋನು ಡಾಕ್ಟರ್ ಹುಡುಗಿ ಬಳಿ ತೊಗಲಿಗ ಮುಳ್ಳಾಗಿ ಏನೇನೂ ಅನಾಹುತ ಮಾಡಿಯಂತಲ್ಲಾ ಏನ್ಸಮಾಚಾರ ನಿಮ್ಮಂತ ಮಂದಿ ಜೀವನಾನೆ ಅಂತಹದ್ದು ಕುಳ್ಳಿ ಕಿತ್ತ ತಿನ್ನೊ ಹಂಗ ನೋಡಿ ಹೇಳಿದ" ಈ ಮಾತಿನಲ್ಲಿ ತಳಜಾತಿ ಜನರ ಬದುಕು ಮೇಲ್ಜಾತಿ ಹುಡುಗಿಯರೊಂದಿಗಿನ ಪ್ರೇಮಸಲ್ಲಾಪಗಳಾಗಿದ್ದು ಇವು ನಿಮಗೆ ಅನರ್ಹವಾದವು ಎಂಬ ಮಾತಿನ ದಾಟಿಯನ್ನೊಳಗೊಂಡಿದೆ.

ತಳಸಮುದಾಯದವರಾದ ನೀವು ನಮ್ಮ ಮುಂದೆ ನಿಂತು ಮಾತನಾಡುವ ಅರ್ಹತೆಯೇ ಇಲ್ಲ. ಇಂತಹ ನಿಕೃಷ್ಟ ಸ್ಥಿತಿಯಲ್ಲಿ ಬದುಕುತ್ತಿರುವ ನಿಮಗೆ ಪ್ರೇಮ, ಪ್ರೀತಿ ಅಸಂಭವವಾಗಿದೆ. ಎಂದು ಆಶ್ಚರ್ಯದಲ್ಲಿ ಮಾತನಾಡುವ ಕುಳ್ಳಿ ಪ್ರಭುವನ್ನ ಜಾತಿ ಅಪಚಾರ ಮಾಡಿದನೆಂಬ ಸಿಟ್ಟಿನಲ್ಲಿ ನೋಡುತ್ತಿದ್ದನು. ಆದರೆ ಪ್ರಸ್ತುತ ಸಂದರ್ಭದಲ್ಲಿ ಅಂತರ್ಜಾತಿ ವಿವಾಹಗಳು ಬೆಳೆದು ಬಂದಿವೆಯಾದರೂ ಇಂತಹ ಶೋಷಣೆಗಳು ನಿಲ್ಲದಿರುವುದು ಅಸಮಾಧಾನವಾಗಿದೆ.

ಲೇಖಕರ 'ಗೋರಮಾಟಿ' ಕಾದಂಬರಿಯು ಲಂಬಾಣಿ ಸಮುದಾಯದ ಬದುಕನ್ನೇ ಮುಖ್ಯ ವಸ್ತುವಾಗಿಟ್ಟುಕೊಂಡು ರಚನೆಯಾದ ಕಾದಂಬರಿಯಾಗಿದೆ. ಈ ಕಾದಂಬರಿಯೊಳಗೆ ಮಹಿಳೆ ಮತ್ತು ಪುರುಷರ ನಡುವಿನ ಲೈಂಗಿಕಾಸಕ್ತಿ ಅಧಿಕವಾಗಿರುವುದು ಮುಖ್ಯವಾಗಿದೆ. ಈ ಲೈಂಗಿಕತೆಯೊಳಗೆ ಜಾತಿವ್ಯವಸ್ಥೆ ಅಡಕವಾಗಿರುವುದು ದುರಂತವಾಗಿದೆ. "ಸೋನ್ಯಾನಾಯ್ಕ ಅವನ ಪಾಪದ ಕೊಡ ತುಂಬತಂತೇನೆ. ಎಲ್ಲಿಂದಲೋ ಬಂದ ಪರದೇಶಿ ನಮ್ಮ ಹೆಂಗಸರ ಮ್ಯಾಲ ಕಣ್ಣ ಹಾಕ್ತಾನಂದ್ರ ಏಟ ಧೈರ್ಯ ಇರಬೇಕು. ಇವತ್ತಿನವರಿಗೆ ನಮ್ಮ ಗಡ್ಡಿ ಮ್ಯಾಲ ಯಾರು ಬೆಟ್ಟಮಾಡಿಲ್ಲ. ಯಾವನಾರು ಬೆಟ್ಟತೊರ್ಸಿದ್ರ ಅವನ ಬೆಳ್ಳ ಕತ್ತರಿಸೊ ಕುಲದೋರು ನಾವು ಹುಲಿಗಳ ವಂಶ ನಮ್ದು" ಈ ಮಾತಿನಲ್ಲಿ ಅನ್ಯ ಕುಲದ ಮನುಷ್ಯ ತಮ್ಮ ತಾಂಡದ ಮಹಿಳೆಯೊಂದಿಗೆ ಹೊಂದಿರುವ ಸಂಪರ್ಕವನ್ನು ಜಾತಿ ಅಪಚಾರದ ಸಂಕೋಲೆಯಲ್ಲಿ ಬಂಧಿಸಿದ ಸಂದರ್ಭವಾಗಿದೆ.

ಗೋರಮಾಟಿ ಕಾದಂಬರಿಯು ಲಂಬಾಣಿ ಸಮುದಾಯದ ಸುತ್ತ ಹೆಣೆದಿರುವ ಕಥೆಯಾದ್ದರಿಂದ ಇಲ್ಲಿ ಮೇಲ್ಜಾತಿಯ ಸಂಪರ್ಕವಿಲ್ಲ. ಆದರೂ ಕೆಲವೊಂದು ಕಡೆ ಮೇಲ್ವರ್ಗದವರ ನಡುವೆ ಸಂಪರ್ಕವಿದೆ. ಈ ಕಾದಂಬರಿಯಲ್ಲಿ ಲಂಬಾಣಿ ಸಮುದಾಯದೊಳಗಿನ ಕುಲ ಜಾತಿಯ ಸಂಕೇತವಾಗಿ ಕಾರ್ಯ ನಿರ್ವಹಿಸಿದೆ.

ಗೊತ್ತಾನಾಯ್ಕ ಬೇರೊಂದು ತಾಂಡದಿಂದ ಕಾಕಾಪುರ ತಾಂಡಕ್ಕೆ ವಲಸೆ ಬಂದ ಬುದ್ಧನಾಯ್ಕನ ಮಗ. ಈ ಕಾರಣದಿಂದಾಗಿ ಗೊತ್ತಾನಾಯ್ಕನನ್ನು ಅನ್ಯ ಸಮುದಾಯದವನಂತೆ ಪರಿಗಣಿಸಿ ಅವನ ಮೇಲೆ ಜಾತಿ ತಾರತಮ್ಯ ಮಾಡಿರುವುದು ದುರಂತವಾಗಿದೆ.

ಮೇಲ್ಜಾತಿಯವರು ಮಾಡೋ ಜಾತಿ ತಾರತಮ್ಯತೆಗಿಂತ ಸ್ವ ತಾಂಡದವರೂ ತಾಂಡದೊಳಗೆ ಮಾಡುವ ತಾರತಮ್ಯತೆ ಅತ್ಯಂತ ಕ್ರೂರವಾಗಿದೆ. "ಗೊತ್ತಾನಾಯ್ಕ, ಕಡುವಾ, ಪಾಮಿ, ಮೂವರೆ ಒಂದು ಕಡೀಗಿದ್ರ, ಇಡೀ ಊರಿಗ ಊರೆ ಒಂದ್ಕಡೆ. ಆ ಶೆಟ್ಟಿ ಗೊತ್ತಾನಾಯ್ಕನಿಗೆ ಹೊಲ ಹೆಂಗ ಕೊಡ್ತಾನ ನೋಡಾನು ನಮ್ಮಗ್ಗಾಗ್ಲಿಲ್ಲಿದ್ರು ಪರವಾಗಿಲ್ಲ, ಆ ಮಗನಿಗೆ ಮಾತ್ರ ಆಗಬಾರದು". ಈ ಮಾತಿನಲ್ಲಿ ಅನ್ಯತಾಂಡದಿಂದ ವಲಸೆ ಬಂದವನಿಗೆ ನಮ್ಮ ತಾಂಡದೊಳಗೆ ಬದುಕು ಕಟ್ಟಿಕೊಳ್ಳಲು ಅವಕಾಶ ಕೊಡಬಾರದೆಂದು ತಾಂಡಕೇಂದ್ರಿತವಾಗಿ ಜಾತಿ ವ್ಯವಸ್ಥೆ ಮಾಡುತ್ತಿರುವುದಾಗಿದೆ. ಊರಿಗೆ ಊರೇ ಗೊತ್ತಾನಾಯ್ಕನ ವಿರುದ್ಧವಾಗಿ ನಿಂತಿರುವುದನ್ನು ಕಂಡರೆ ತಾಂಡದೊಳಗಿನ ಜಾತಿವ್ಯವಸ್ಥೆಯ ಕ್ರೂರತೆ ಎದ್ದು ಕಾಣುತ್ತದೆ. ಗೊತ್ತಾನಾಯ್ಕನು ಲಂಬಾಣಿ ಸಮುದಾಯದವನೆ ಆದರೂ ಆತನನ್ನು ತಳಸಮುದಾಯದಲ್ಲೇ ತಳಜಾತಿಯವನಂತೆ ಕಂಡಿರುವುದು ವಿರ್ಪಯಾಸವಾಗಿದೆ. ಶ್ರಮದಾಯಕ ದುಡಿಮೆಗಳಿಗೆ ಜಾತಿ ಪೋಷಣೆ ಮಾಡುವ ಪ್ರಯತ್ನಗಳು ಸಮಾಜದೊಳಗೆ ನಿರಂತವಾಗಿದೆ.

ಹಳ್ಳಿಗಳಲ್ಲಿ ಹೊಲ, ಮನೆ, ಕೋಳಿ, ನಾಯಿ, ಹೋಣಿ ಮುಂತಾದ ವಿಷಯಗಳನ್ನೆ ನೆಪವಾಗಿಟ್ಟುಕೊಂಡು ಜಗಳ ಶುರುಮಾಡುವುದು ಸಾಮಾನ್ಯ ವಿಚಾರವಾಗಿದೆ. ಆದರೆ ಮನುಷ್ಯ ಇವುಗಳನ್ನು ಮೀರಿದಂತೆ ನಡೆದಾಡುವ ನೆಲ, ಕುಡಿಯುವ ನೀರು, ಸೇವಿಸುವ ಗಾಳಿ ಈ ವಿಷಯಕ್ಕಾಗಿ ಕಾದಾಡುವುದರಲ್ಲಿ ಜಾತಿ ಬಿಟ್ಟರೆ ಬೇರೆ ಯಾವ ಭೇದ ಭಾವ ಕಂಡು ಬರುವುದಿಲ್ಲ. "ನುಗ್ಲಾಗ ಎಲ್ಲಿತ್ತೊ ಸಿಟ್ಟು ಬಂಡಿ ಹಿಂದ ಇದ್ದೋನು ಓಡಿಬಂದ. ನನ್ನ ಹೊಲ್ದಾಗ ಸಾವರ ಮಂದಿ ಅಡ್ಡಾಡ್ಲಿ, ನೀ ಅಡ್ಡಾಡೋದು ಬ್ಯಾಡಲೆ ಮಗನೆ ಏರುಧ್ವನಿಯಿಂದ ಗದರಿಸಿದ". ಈ ಮಾತಿನಲ್ಲಿ ಗೊತ್ತಾನಾಯ್ಕನ ಮೇಲಿರುವ ವೈಷಮ್ಯತೆಯನ್ನು ತೋರುವುದಾದರೂ ಆತ ಅನ್ಯ ತಾಂಡದವನೆಂಬ ಜಾತಿವ್ಯವಸ್ಥೆ ಅಡಗಿದೆ.

ಮೊದಲೇ ತಿಳಿಸಿರುವಂತೆ ಗೊತ್ತಾನಾಯ್ಕ ಕಾಕಾಪುರ ಲಂಬಾಣಿ ತಾಂಡಕ್ಕೆ ವಲಸೆ ಬಂದ ಕುಟುಂಬದವನು. ಇವನ ತಂದೆ ಬುದ್ಧನಾಯ್ಕ ಅಲೆಮಾರಿಗಳಾಗಿ ಹಲವಾರು ತಾಂಡಗಳನ್ನು ಬಳಸಿ ಕೊನೆಯಲ್ಲಿ ಕಾಕಾಪುರತಾಂಡ ಸೇರಿದನು. ಪ್ರಾರಂಭದಿಂದಲ್ಲೂ ನಿಷ್ಠೆ ಮತ್ತು ಪ್ರಮಾಣಿಕತೆಯಿಂದ ಇಡೀ ಕುಟುಂಬ ದುಡಿದುದ್ದರ

ಪರಿಣಾಮವಾಗಿ ತಾಂಡದೊಳಗೆ ಹಂತ–ಹಂತವಾಗಿ ಬೆಳೆಯತೊಡಗಿದರು. ಇವರ ಬೆಳವಣಿಗೆಯನ್ನು ಸಹಿಸದ ಕೆಲವು ವಿರೋಧಿಗಳು ತಾಂಡದೊಳಗೆ ಅನ್ಯ ಜಾತಿಯವನಂತೆ ಕಾಣಲಾರಂಭಿಸಿದರು. ಈ ಎಲ್ಲ ವೈರುಧ್ಯಗಳಿಂದಾಗಿ ಗೊತ್ತಾನಾಯ್ಕ ಸ್ವ ಲಂಬಾಣಿ ತಾಂಡದೊಳಗೆ ಶೋಷಿತನಾದನು. ಇದರಿಂದಾಗಿ ತಾಂಡದ ಜನರು ಈತನನ್ನು ಪರೋಕ್ಷವಾಗಿ ಜಾತಿ ವ್ಯವಸ್ಥೆ ಚೌಕಟ್ಟಿನಲ್ಲಿ ಬಂಧಿಸಲ್ಪಟ್ಟರು.

ಲೇಖಕರ 'ಲಮಾಣಿ ಚಿಮ್ಮಿ ಆತ್ಮಚರಿತೆ' ಕಾದಂಬರಿಯು ಲಂಬಾಣಿ ತಾಂಡದೊಳಗ ಪ್ರಮಾಣಿಕ ಹುಡುಗಿಯಾಗಿದ್ದ ಚಿಮ್ಮಿಯ ಜೀವನದ ಕಥೆಯಾಗಿದೆ. ತಾಂಡದೊಳಗೆ ಅನ್ಯ ತಾಂಡದಿಂದ ಬಂದ ರಂಗೋಲಿಯು ಲಿಂಗಾಯ್ತ್ರ ರಾಘವನ ಹತ್ತಿರ ಮುಂಗಡ ಹಣ ಕೇಳುವಾಗ ರಂಗೋಲಿ ಮೇಲೆ ಯಾವುದೇ ವಿಶ್ವಾಸ ಹೊಂದಿರದ ರಾಘವನ ಮಾತುಗಳಲ್ಲಿ ಜಾತಿ ವ್ಯವಸ್ಥೆಯ ಛಾಯೆ ಅಡಗಿದೆ. "ನಿನ್ನ ನಂಬಾಕ ಆದಿತೇನ್ವೆ ರಂಗೋಲಿ. ಮುನ್ನೂರ ರೂಪಾಯಿ ಅಂದ್ರ ವಸಿ ಆತೇನು. ಹ್ವಾದಸಲ ತಗೊಂಡ ಹೋಗಿ, ಕಡು ಕಿಸದದ್ದು ಆಟಿ ಐತೆ. ನೀನು ಮದ್ಲೆ ತಂಜಾವರಿ ಮನುಷ್ಯ ಮಕಕ ಮುಟ್ಟೆ ತಗೊಂಡು ಹೊಡದಂಗ ಹೇಳದ ರಾಘವ" ಈ ಮಾತಿನಲ್ಲಿ ತಾಂಡದ ಜನರಲ್ಲಿ ನಂಬಿಕಸ್ಥ ಹುಡುಗಿ ಚಿಮ್ಮಿಯೊಬ್ಬಳೆ ಆಗಿರುವಾಗ ರಂಗೋಲಿ ಲಿಂಗಾಯ್ತ್ರ ರಾಘವನಿಗೆ ಅಸ್ಪೃಶ್ಯನಾಗಿ ಕಂಡು ಬಂದಿದ್ದಾನೆ.

ಲಂಬಾಣಿಗರಲ್ಲಿ ದುಡಿಮೆ ಒಪ್ಪಿಗೆಯಾಗುತ್ತಿರುವಂತೆ ತಾಂಡವದೊಳಗಿನ ತಮ್ಮ ಬಡತನವನ್ನು ಮರೆಮಾಚಲು ಮುಂಗಡ ಹಣ ಪಡೆಯುವುದು ವಾಡಿಕೆಯಾಗಿದೆ. ಲಂಬಾಣಿಗಳಿಗೆ ಚಿಮ್ಮಿಯ ಪ್ರಾಮಾಣಿಕತೆ ಜಮೀನ್ದಾರರಿಂದ ಹಣ ವಸೂಲಿ ಮಾಡುವ ಮೂಲವಾಗಿದೆ. ಆದರೆ ರಂಗೋಲಿಯ ಮೇಲೆ ಯಾವುದೇ ನಂಬಿಕೆ ಇಲ್ಲದ ರಾಘವ ಅವನನ್ನು 'ತಂಜಾವರಿ ಮನುಷ್ಯ' ಎಂದು ಉಲ್ಲೇಖಿ ಮಾಡುವ ಮೂಲಕ ಜಾತಿ ವ್ಯವಸ್ಥೆಯೊಳಗೆ ಬಂಧಿಸಿದ್ದಾನೆ.

ಲೇಖಕರ ಮೂರು ಕಾದಂಬರಿಗಳಲ್ಲಿ ಜಾತಿವ್ಯವಸ್ಥೆ ಇರುವಂತೆ ಮೂರು ಸಣ್ಣಕತೆ ಸಂಕಲನಗಳಲ್ಲಿ ಇದೆ. 'ಗುಡ್ಡಪ್ಪ' ಸಂಕಲನದಲ್ಲಿನ 'ಬ್ರೇಡ್, ಬೇಕರಿ ಮತ್ತು ಅವನು' ಎಂಬ ಕಥೆಯೊಳಗೆ ಇರುವ ಪರೋಕ್ಷವಾದ ಜಾತಿ ತಾರತಮ್ಯತೆಯ ಸಂದರ್ಭ "ನಮ್ಮೂರಾಗ ಗೌಡ್ರು ಕೂಲಿಮಾಡೋ ಜನರಿಗೆ ಸಾಲಕೊಟ್ಟು, ವಾಪಾಸ ಕೊಡದಕ್ಕ ಮೈಮ್ಯಾಲ ಬಾಸಾಳ ಮೂಡೋ ಹಂಗ ಹೊಡ್ದದ್ದನ್ನ ನೋಡಿ". ಎಂದು ಹೇಳುವಲ್ಲಿ ಮೇಲ್ಜಾತಿ ಒಡೆಯರು ತಮಗಿಂತ ತಳಮಟ್ಟದ ಜನರನ್ನು ಜಾತಿಯ ಸಂಕೇತವಾಗಿ ಕ್ರೂರ ದಂಡನೆಗೆ ಗುರಿಪಡಿಸಿರುವ ಬಗ್ಗೆ ತಿಳಿಸುತ್ತದೆ. ತಳಸಮುದಾಯಕ್ಕೆ ಹಣಕಾಸು ಸಮಸ್ಯೆಯಿರುವುದರಿಂದ ಹಣಕ್ಕಾಗಿ ಜಮೀನ್ದಾರರೂ. ಲಿಂಗಾಯಿತರುಗಳನ್ನು

ಅವಲಂಬಿಸಿದರು. ಈ ಭೂ ಒಡೆಯರು ಹಣವನ್ನು ವಾಪಾಸ್ಸು ಪಡೆಯುವಾಗ ಕ್ರೂರ ಶಿಕ್ಷೆಗೆ ಒಳಪಡಿಸುತ್ತಿದ್ದರು. ಈ ಶಿಕ್ಷೆಯು ಜಾತಿ ಉಲ್ಲೇಖದಿಂದಲ್ಲೆ ನೀಡಲಾಗುತ್ತಿತ್ತು. ವಾಸ್ತವಿಕವಾಗಿ ಈ ಕ್ರೂರ ದಂಡನೆಗಳು ತಳಸಮುದಾಯದವರ ಮೇಲೆ ನಿರಂತರವಾಗಿ ನಡೆಯುತಿತ್ತು.

'ಓಡಿ ಹೋದವರು' ಕಥೆಯೊಳಗೆಯೂ ಜಮೀನ್ದಾರರಿಂದ ಕ್ರೂರ ಹಿಂಸೆಗೆ ಗುರಿಯಾದ ಪ್ರಸಂಗವಿದೆ. ಚಂದ್ರಗೌಡ, ಹನುಮನಗೌಡ, ವೀರಭದ್ರಗೌಡ ಇವರ ಉಪಟಳವನ್ನು ವರ್ಣಿಸುವಾಗ ತಳಸಮುದಾಯದವರಿಗೆ ಜಾತಿತಾರತಮ್ಯತೆಯಿಂದ ನೀಡಲಾಗುತ್ತಿದ್ದ ಶಿಕ್ಷೆ ಸಂದರ್ಭ "ಯಾರೋ ಅವರ ಹೋಲ್ದಾಗ ಕಳ್ಳತನ ಮಾಡಿದರೆ. ಸೊಪ್ಪಿನ ದಂಟಿನ ಬಣಿವಿಯೊಳಗ ಜೀವಂತ ಹಾಕಿಸಿ ಬೆಂಕಿ ಹತ್ತಿಸಿದ ನೀಚ ಜನ ಅವರು" ಈ ಮಾತಿನಲ್ಲಿ ಯಜಮಾನ ವ್ಯವಸ್ಥೆಯಲ್ಲಿನ ಕ್ರೂರ ಮನೋಭಾವವನ್ನು ಪರಿಚಯಿಸಿದೆ. ತಳಸಮುದಾಯದ ಜನರು ಬಡವರಾಗಿರುವುದರಿಂದ ಒಂದು ಹೊತ್ತಿನ ಊಟಕ್ಕೂ ಪರದಾಡುವಂತಿತ್ತು. ಆದುದರಿಂದ ಇವರು ತಮ್ಮೂರಿನಗೌಡರ ಮನೆ, ತೋಟಗಳಲ್ಲಿ ಕಳ್ಳತನ ಮಾಡುತ್ತಿದ್ದರು. ಈ ಕಳ್ಳತನ ಗೌಡರ ಅರಿವಿಗೆ ಬಂದರೇ ಅವರ ಪರಿಸ್ಥಿತಿ ಚಿಂತಾಜನಕವಾಗಿರುತ್ತಿತ್ತು ಅಮಾನವೀಯವಾಗಿ ಉಗ್ರವಾದ ಶಿಕ್ಷೆ ನೀಡುವುದರ ಮೂಲಕ ಜಾತಿತಾರತಮ್ಯ ಮಾಡುತ್ತಿದ್ದರು.

'ಕೊಂಯ್ಯ ಮತ್ತು ಧೋತ್ರ' ಸಂಕಲನದಲ್ಲಿ 'ಜೋಗ್ಯಾ ಮತ್ತು ಬೆದರು' ಕಥೆಯೊಳಗೆ ಜೋಗ್ಯಾ ಕಡುಬಡತನದ ಕುಟುಂಬದಲ್ಲಿ ಬೆಳೆದವನು. ಇವನಿಗೆ ತೊಡಲು ಉತ್ತಮವಾದ ಬಟ್ಟೆ ಇರಲಿಲ್ಲ. ಆದ್ದರಿಂದ ಇವನು ಗೌಡರ ಮನೆಯ ಮೇಲಿನ ಬೆದರು ಗೊಂಬೆಗೆ ತೊಡಿಸಿದ ಬಟ್ಟೆಯನ್ನು ಕಂಡು ಆಸೆಪಟ್ಟನು. ಆ ಸಂದರ್ಭ "ಥು ನಿಮ್ಮವ್ನ, ನಿಮ್ಮ ಜಾತಿ ಚಾಳಿ ಎಲ್ಲಿ ಬಿಡ್ತೀರಿ, ನೀವೆಲ್ಲಾ ಒಂದೆ, ಹೋಲ್ದಾನ ತೆನಿತೆನಿನೇ ಬಿಡಂಗಿಲ್ಲ, ಕುರುಬರ ಗೊಂಡನ ಮಂದೆಯೊಳಗಿಂದ ಹತ್ತಕುರಿ ಕದ್ದ ನಿಮ್ಮ ಹಟ್ಟಿ ಮಂದಿ ರಾತ್ರೋರಾತ್ರಿ ಒಂದ ಎಲಬಿಲ್ದಂಗ ಅದೆಂಗ ತಿಂದ ಹಜಂ ಮಾಡ್ಕೊಂಡ್ರಲೇ, ಥು ನಿಮ್ಮ ದೇವ್ರ ಗುಟ್ಟದ ಸೂಳಿಮಕ್ಕಳ್ರಾ" ಈ ಮಾತಿನಲ್ಲಿ ಜೋಗ್ಯಾ ಗೌಡರ ಬೆದರಿಗೆ ತೊಡಿಸಿದ ಬಟ್ಟೆಗೆ ಆಸೆ ಪಟ್ಟು ಸಿಕ್ಕಿ ಬಿದ್ದಾಗ ಗೌಡರು ಜೋಗ್ಯಾನ ಮೂಲಕ ಇಡೀ ತಳಸಮುದಾಯವನ್ನೆ ಅವಹೇಳನ ಮಾಡಿರುವುದಾಗಿದೆ. ಒಂದು ಬಟ್ಟೆ ತುಂಡಿನ ಕಾರಣಕ್ಕಾಗಿ ಜನಾಂಗವನ್ನು ಅವನ ಕಸುಬನ್ನು ಶೋಷಣೆ ಮಾಡಿರುವುದು ಅಸಮಂಜಸವಾಗಿದೆ. ತಳಸಮುದಾಯದವರು ಆರ್ಥಿಕವಾಗಿ ಹಿಂದುಳಿದವರಾಗಿದ್ದರಿಂದ ತಮ್ಮ ಅವಶ್ಯಕತೆಗಳ ಪೂರೈಕೆಗಾಗಿ ಕಳ್ಳತನದ ಮಾರ್ಗವನ್ನು ಅನುಸರಿಸಿದ್ದರು. ಇದು ಅಂದಿನ ವಾಸ್ತವಿಕತೆಗೆ ಬಹು ಮುಖ್ಯವಾದ ಕಸುಬಾಗಿತ್ತು. ಅಂದಿನ ಕಾಲದಲ್ಲಿ

ತಳಸಮುದಾಯವರು ಬಡತನಕ್ಕಾಗಿ ಕಳ್ಳತನ ಮಾಡಿದರೆ ಇಂದಿನ ಕಾಲದಲ್ಲಿ ಎಲ್ಲರೂ ತಮ್ಮ ಸ್ವಾರ್ಥಕ್ಕಾಗಿ ಕಳ್ಳತನದ ಮಾರ್ಗ ಹಿಡಿದಿದ್ದಾರೆ. ಆದರೆ ಅಂದಿನ ಕಾಲದಂತೆ ಜಾತಿ ಅವಹೇಳನ ಇಂದಿನ ವ್ಯವಸ್ಥೆಯಲ್ಲಿಲ್ಲದಿರುವುದು ಸಮಾಧಾನಕರವಾಗಿದೆ.

'ಕೊಂಯ್ಯ ಮತ್ತು ಧೋತ್ರ' ಕಥೆಯಲ್ಲಿ ಕೊಂಯ್ಯನು ತನ್ನ ಬಡತನದ ಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಗೌಡರ ಮನೆಯಲ್ಲಿ ಜೀತದಾಳಾಗಿ ದುಡಿಯುತ್ತಿದ್ದನು. ಕೊಂಯ್ಯನು ಹಗಲು-ರಾತ್ರಿ ಒಂದು ಮಾಡಿ ದುಡಿದರೂ ಉತ್ತಮವಾದ ಧೋತ್ರವನ್ನು ಕೊಂಡುಕೊಳ್ಳಲು ಸಾಧ್ಯವಾಗಿರಲಿಲ್ಲ. ಅದಕ್ಕಾಗಿ ಕೊಂಯ್ಯನು ಗೌಡರ ಹೆಣದ ಮೇಲೆ ಹೊದಿಸಿದ ವಸ್ತ್ರವನ್ನು ಕದ್ದು ತಂದು ತೊಟ್ಟು ಮಲಗಿದನು, ಇದನ್ನು ಕಂಡ ಕಿರಿಯಗೌಡರು ಕೊಂಯ್ಯನ ಕುರಿತು "ಹಾಳಾದ ಸೂಳಿಮಗ ಧೋತ್ರ ಮುಟ್ಟಿ ಮೈಲಿಗ ಮಾಡಿದ್ನೋ ಇವ್ನವ್ವನ ದುಡದು ಕುಡಿತಾರ, ಒಂದ ಅರವಿ ತಗೋಳಾಗ ಅಗಂಗಿಲ್ಲಾ ಕಂಡೋರ ಅರಿವಿ ಮ್ಯಾಲ ಕಣ್ಣ ಹಾಕ್ತಾರಂತ ಅಂದವನೆ ಮನಸಿಗೆ ಹ್ಯಾಂಗ ಬಂತೋ ಹಂಗ ಹೊಡದು ಅಂಗಾತ ಕೆಡವಿದ". ಈ ಮಾತಿನಲ್ಲಿ ಕೊಂಯ್ಯನ ದುಷ್ಟಟವನ್ನು ಗೌಡರು ಅವಹೇಳನ ಮಾಡುವುದರೊಂದಿಗೆ ಒಂದು ಸಮುದಾಯವನ್ನು ಜಾತಿವ್ಯವಸ್ಥೆಯ ಚೌಕಟ್ಟಿನೊಳಗೆ ನಿಂದಿಸಿರುವುದು ಕಂಡು ಬರುತ್ತದೆ.

'ಕಲ್ಲೇ ಕಲ್ಲೇ ಕಥೆ ಹೇಳು' ಸಂಕಲನದಲ್ಲಿನ 'ಹೋರಾಟದ ಕೊನೆಗೊಂದು ದಿನ' ಕಥೆಯೊಳಗೆ ತಾಂಡದ ಜನರು ಭೀಮ್ಲನ ಸಾವಿನ ಬಗ್ಗೆ ಆಲೋಚನೆಯಲ್ಲಿ ತೊಡಗಿರುವಾಗಲೆ ಪೋಲೀಸರು ತಾಂಡದೊಳಕ್ಕೆ ಬಂದಿದ್ದರು. ಬಂದವರು ತಾಂಡದ ಜನರನ್ನು ವಿಚಾರಣೆ ಮಾಡಿದಾಗ ಭಯಭೀತರಾದ ತಾಂಡದವರು ನಿರುಪಯುಕ್ತರಂತೆ ವರ್ತಿಸಿ ದೂರ ಸರಿಯುತ್ತಾರೆ. ಈ ವರ್ತನೆಗೆ ಮೇಲ್ವರ್ಗದವರು ತಾಂಡದ ಬಡವನ ಸಾವನ್ನು ಜಾತಿ ವ್ಯವಸ್ಥೆಯಡಿಯಲ್ಲಿ ನೋಡಿರುವುದು ಕಂಡು ಬರುತ್ತದೆ. ಜಾತಿ ವ್ಯವಸ್ಥೆಯ ಒಳಗೆ ತಳ ಸಮುದಾಯವನ್ನು ತುಚ್ಛವಾಗಿ ಕಾಣಲು ರೀತಿ "ಹಣ ಅಧಿಕಾರದ ಮುಂದ ಹೋರಾಟ ಮಾಡೋ ಪುಟಗೋಸಿ ಹುಡ್ರು ಬಿರುಗಾಳಿ ತಡಿಯಾಕೆ ಹೊಂಟ ಸಾಹಸ ಮಾಡ್ತಿಂಗಿತ್ತು." ಈ ಮಾತಿನಲ್ಲಿ ಗೌಡರ ವಿರುದ್ಧ ಭೀಮ್ಲನ ಸಾವಿಗೆ ನ್ಯಾಯ ಕೇಳಿದ ದೇವ್ಲನೆ ಕೊಲೆಗಾರ ಎಂದು ಭೀಮ್ಲನ ಗೆಳೆಯನ ಹೆಂಡ್ತಿ ರೂಪ್ಲಿಯ ಮೂಲಕ ಹೇಳಿಸಿರುವುದು ಬಡವನ ಸಾವಿಗೆ ಬೆಲೆ ಇಲ್ಲವೆಂದೂ ಅವನೊಬ್ಬ ತಳಜಾತಿಯವನೆಂಬ ಕಾರಣಕ್ಕೆ ಎಂಬುದು ಸ್ಪಷ್ಟವಾಗಿದೆ. ಹಣವಂತರಾದ ಮೇಲ್ವರ್ಗದವರು ಒಬ್ಬ ತಳಸಮುದಾಯದವನ ಸಾವಿಗೆ ಕವಡೆ ಕಾಸಿನ ಬೆಲೆ ನೀಡದೇ ಹಣ ಅಧಿಕಾರದ ಬಲದಿಂದ ಕಾನೂನು ಕೊಂಡುಕೊಂಡು ಅನ್ಯಾಯ ಮಾಡಿದ ಪ್ರಸಂಗವಾಗಿದೆ. ಇಲ್ಲಿ ಸತ್ತಿರುವುದು ತಳಸಮುದಾಯದ ಬಡವ ಎಂಬುದು ಗಮನಿಸಬೇಕಾದ ವಿಷಯವಾಗಿದೆ.

'ಮರದಾಚೆ ಕುಲ ಇಣುಕಿದೊಡೆಂತಯ್ಯ' ಕಥೆಯಲ್ಲಿ ಸುಬ್ರಮಣ್ಯಕಿಣಿ ಮನೆ ಆರಂಭವಾಗುವ ಮುನ್ನವೇ ಜಾಗದ ಸಮಸ್ಯೆ ಎದುರಾಯಿತು. ಈ ಸಮಸ್ಯೆಯನ್ನು ಪಕ್ಕದ ಮನೆಯವರು ಸುಬ್ರಮಣ್ಯಕಿಣಿಗೆ ಜಾಗ ಬಿಟ್ಟು ಕೊಡುವ ಮೂಲ ಸೌಹರ್ದತೆ ತೋರಿದರು. ಹೊಸದರಲ್ಲಿ ಅನ್ಯೋನ್ಯವಾಗಿಯೇ ಇದ್ದವರು ಪಕ್ಕದ ಮನೆಯವರು ತಮಗಿಂತಲೂ ಕೀಳು ಎಂದು ತಿಳಿದೊಡನೆ ಕೆಂಡಮಂಡಲವಾಗಿ ಮಾಡಿದ ಅವಂತಾರಗಳ ಸಂದರ್ಭ "ಬೆಳೆದು ಅವರದೇ ಸರಹದ್ದು ಗೋಡೆಯಾಚೆ ಇಣುಕಿದ ಕರಿಬೇವಿನ ಕುಡಿಗಳನ್ನು ಕ್ರೂರವಾಗಿ ಕಡಿದು ಹಾಕಿದ ಸುಮ, ಬಾಳೆಯ ಗೊನೆ ಬಾಗುತ್ತಿದ್ದಂತೆ ಗಿಡ ಎಳೆದು ಎಳೆಗೊನೆಯನ್ನು ಕಿತ್ತು ಕುಲದ ಸೇಡು ತೀರಿಸಿಕೊಂಡಳು." ಈ ಮಾತಿನಲ್ಲಿ ಜಾತಿವ್ಯವಸ್ಥೆಯು ಕೇವಲ ಮನುಷ್ಯನನ್ನು ಮಾತ್ರವಲ್ಲ ಗಿಡ, ಮರ, ಬಳ್ಳಿ, ಪ್ರಾಣಿ ಹೀಗೆ ಜೀವಸಂಕುಲವನ್ನೇ ಬಲಿ ಪಡೆದುಕೊಳ್ಳುತ್ತದೆ. ಎಂದರೆ ಅದರ ವ್ಯಾಪ್ತಿಯನ್ನು ಅರ್ಥೈಸಿಕೊಳ್ಳಬೇಕಾದ ಅವಶ್ಯಕತೆ ಇದೆ.

ಸುಬ್ರಮಣ್ಯಕಿಣಿಯ ಪತ್ನಿ ಸುಮಕಿಣಿ ಪಕ್ಕದ ಮನೆಯವರು ನೆಟ್ಟ ಕರಿಬೇರಿನಗಿಡ, ಬಾಳೆಗಿಡದ ಮೇಲೆ ಜಾತಿಯ ಸಂಕೋಲೆ ತೊಡಸಿರುವುದು ವಿಪರ್ಯಾಸವಾಗಿದೆ. ಇಂತಹ ಘಟನೆಗಳಿಂದ ತಿಳಿಯಬಹುದಾದ ವಿಷಯವೆಂದರೆ ಮೇಲ್ಜಾತಿ ಜನರಿಗೆ ಸಾವಿನ ಸಂದರ್ಭದಲ್ಲಿಯೂ ಕನಿಕರ ತೋರಬಾರದೆಂಬ ವಾಸ್ತವ ಸತ್ಯವಾಗಿದೆ. ಜಾತಿಗೂ ಸಸ್ಯಕ್ಕೂ ಎಲ್ಲಿಂದ ಎಲ್ಲಿಯಾ ಸಂಬಂಧ? ಮನುಷ್ಯ ಕೇಂದ್ರಿತವಾದ ಜಾತಿ ಇತ್ತೀಚಿಗೆ ಸಸ್ಯ ವರ್ಗಕ್ಕೂ ತಟ್ಟಿರುವುದು ಅಸಮಾಧಾನವನ್ನು ಉಂಟುಮಾಡಿದೆ.

ಸಮಾಜದೊಳಗೆ ಜಾತಿವ್ಯವಸ್ಥೆಯ ಬೇರು ಎಲ್ಲಿಂದ ಬಂದಿದ್ದು ಎಂಬುದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೇಳಿಕೆ ಎಂದರೆ "ಅಸ್ಪೃಶ್ಯತೆಯ ಮೂಲ ಜಾತಿವ್ಯವಸ್ಥೆಯಲ್ಲಿ, ಜಾತಿ ವ್ಯವಸ್ಥೆಯ ಮೂಲ ವರ್ಣಾಶ್ರಮ ಧರ್ಮದಲ್ಲಿದೆ. ವರ್ಣಾಶ್ರಮ ಧರ್ಮದ ಮೂಲ ಬ್ರಾಹ್ಮಣವಾದವಾಗಿದೆ. ಬ್ರಾಹ್ಮಣವಾದದ್ದು ಮೂಲಸರ್ವಾಧಿಕಾರದಲ್ಲಿದೆ ಅಥವಾ ರಾಜಕೀಯದಲ್ಲಿದೆ" ಎಂದು ಸ್ಪಷ್ಟಪಡಿಸಿದ್ದಾರೆ. ಇದು ಜಾತಿ ವ್ಯವಸ್ಥೆಯ ಸಮಾಜಕ್ಕೆ ಸೂಕ್ತವಾದ ನುಡಿಯಾಗಿದೆ. ಒಟ್ಟಾರೆಯಾಗಿ ಜಾತಿವ್ಯವಸ್ಥೆಯು ತಳಸಮುದಾಯದವರ ಶೋಷಣೆಯ ವಿಧಾನವಾಗಿ ಸೃಷ್ಟಿಗೊಂಡಿದೆ.

3.2 ಬಡತನ-ಹಸಿವು

ಬಡತನ ಎಂದರೆ ಯಾವ ವ್ಯಕ್ತಿಗೆ ತನ್ನ ಕನಿಷ್ಠ ಅವಶ್ಯ ಕತೆಗಳಾದ ಆಹಾರ, ವಸತಿ ಮತ್ತು ಬಟ್ಟೆ ಇವುಗಳನ್ನು ಪೂರೈಸಿಕೊಳ್ಳಲು ಸಾಧ್ಯವಿಲ್ಲವೋ ಅಂತಹ ವ್ಯವಸ್ಥೆಗೆ ಬಡತನ ಎಂದು ಕರೆಯುತ್ತಾರೆ. ದಲಿತರಲ್ಲಿ ಹಸಿವಿನ ಕ್ರೂರತೆ, ಬಡತನದ ಕರಾಳತೆಯು ಹೆಚ್ಚಾಗಿ ಕಂಡು ಬರುತ್ತದೆ. ಮಾನವನಲ್ಲಿರುವ ಸಹಜವಾದ ಬಯಕೆ ನೆಮ್ಮದಿಯ

ಜೀವನ ಮಾಡುವುದು ಆದರೆ ಹಸಿವು ಎನ್ನುವುದಿದ್ದರೆ ಬದುಕೆ ನರಕವಾಗುತ್ತದೆ. ಹಸಿವಿನಿಂದ ನೊಂದ ಜೀವಗಳು ಹಸಿವನ್ನು ನಿವಾರಿಸಿಕೊಳ್ಳಲು ಯಾವ ಕೆಲಸಕ್ಕಾದರೂ ಸಿದ್ಧರಿರುತ್ತಾರೆ. ಎಲ್ಲ ವರ್ಗದವರಿಗಿಂತ ಬಡತನದ ನೆರಳಿನಲ್ಲಿ ಬದುಕುವ ದಲಿತರಿಗೆ ಹಸಿವು ಒಂದು ಶಾಪವೇ ಆಗಿದೆ. ಇಂತಹ ಶಾಪದಿಂದ ವಿಮೋಚನೆ ಪಡೆಯಲು ದಲಿತರು ನಾನಾ ರೀತಿಯ ಕಾರ್ಯನಿರ್ವಹಿಸಲು ಬದ್ಧರಾಗಿರುತ್ತಾರೆ.

ಲೇಖಕರ 'ಕತ್ತಲು ಕರಗುವ ಮುನ್ನ' ಕಾದಂಬರಿಯಲ್ಲಿ ಸಹಪಾಠಿ ಅಧ್ಯಾಪಕ ಮಿತ್ರರಿಂದ ಅಪಮಾನಕ್ಕೆ ಒಳಗಾಗಿದ್ದ ಕಾದಂಬರಿಯ ನಾಯಕ ಪ್ರಭು ಹತಾಶೆಯಿಂದ ಊಟ ಬಿಟ್ಟು ದಿನಗಳೇ ಕಳೆದು ಹೋಗಿದ್ದರಿಂದ ಹಸಿವಿನಿಂದ ಕಂಗಾಲಾಗಿದ್ದಾನೆ. ಹಸಿವಿನಿಂದ ನೊಂದಿರುವ ಪ್ರಭುವಿಗೆ ಊಟ ಮಾಡಲು ಹಣವಿಲ್ಲ. ಅಧ್ಯಾಪಕ ವೃತ್ತಿ ತ್ಯಜಿಸಿ ವಾರಗಳೇ ಕಳೆದುದರಿಂದ ಹಣಕ್ಕೆ ತುಟ್ಟಿಯಾಗಿತ್ತು. ಇಂತಹ ಸಂದರ್ಭದಲ್ಲಿ ಹೋಟೆಲ್‌ಗೆ ಬಂದ ಪ್ರಭು "ಕಿಸೆ ತಡಕಾಡಿದ ಮೂಲ್ಯಾಗ ಚಿಲ್ಲರೆ ಬಡೀತು ಚಹನಾರು ಕುಡದ್ರ ಆತು ಅಂದ್ಕೊಂಡ. ಮೂರ ದಿನದಿಂದ ಹೊಟ್ಟಿಗ ಏನೂ ಇಲ್ದೆ ಬಹಳ ಹಸದಿತ್ತು" ಈ ಮಾತಿನಲ್ಲಿ ನಾಯಕ ಪ್ರಭು ಅಧ್ಯಾಪಕರ ಕಿರುಕುಳದಿಂದ ಬೇಸತ್ತು ಕೆಲಸ ಬಿಟ್ಟು ಹಣವಿಲ್ಲದ ಪರಿಸ್ಥಿತಿಯೊಳಗೆ ಊರಿಗೆ ಹೋಗಲು ಮನಸ್ಸು ಬಾರದೆ ತನ್ನೊಳಗೆ ತನ್ನ ಸ್ಥಿತಿಯ ಬಗ್ಗೆ ಅಸಹ್ಯ ಪಟ್ಟುಕೊಳ್ಳುತ್ತಾನೆ. ಒಂದು ಸಲ ಮರುಕ ಪಟ್ಟ ಸಂದರ್ಭದೊಳಗೆ ಊಟ ಮಾಡಲು ಹಣವಿಲ್ಲದೆ ಹಸಿವನ್ನು ತಡೆಯಲು ಸಾಧ್ಯವಾಗದೆ ನರಳುವ ಸಂದರ್ಭದಲ್ಲಿ ಬಡತನ-ಹಸಿವಿನ ಮಹತ್ವ ವ್ಯಕ್ತಗೊಂಡಿದೆ.

ವಿದ್ಯಾಭ್ಯಾಸ ಕೊಡಿಸುವ ತವಕದಲ್ಲಿ ದಲಿತರು ಎಲ್ಲೆ ಮೀರಿ ದುಡಿಯುವ ಸಂದರ್ಭವೂ ದಲಿತರಿಗೆ ಶಿಕ್ಷಣದ ಮೇಲಿನ ಪ್ರೀತಿಯನ್ನು ತೋರಿಸುತ್ತದೆ. ತಮ್ಮ ಬಡತನದ ನಡುವೆ ಮನೆಯ ಮಗನೊಬ್ಬ ಓದುವ ಆಸಕ್ತಿ ತೋರಿಸಿದರಿಂದ ಸಂತೃಪ್ತರಾದ ತಳಸಮುದಾಯದವರು ಅದಕ್ಕಾಗಿ ಪಟ್ಟ ಪಾಡಿನ ಸಂದರ್ಭ "ಅವನು ಮೆಟ್ರಿಕ್ ಓದೊ ಮುಂದ ಫೀ ತುಂಬಾಕ ರೊಕ್ಕ ಇಲ್ಲದಕ ಅವನ ಅಣ್ಣಂದಿರು ಎಷ್ಟೋ ವರ್ಷಗಳಿಂದ ಮುಳ್ಳಿನ ಗಿಡ ಬೆಳದಿದ್ದ ಬಸರನ ಗದ್ದೆಯನ್ನು ಮುಳ್ಳು ಕಡಿಯಾಕ ಗುತ್ತಿಗಿ ಹಿಡಿದು ಕಡದು ರೊಕ್ಕ ಕೊಟ್ಟಿದ್ದು, ಪಟೇಲ ಸಿರಂಗಣ್ಣನ ಗದ್ದಿ ನಾಟಿ ಹಚ್ಚಾಕ ಗುತಗಿ ಹಿಡದು ನಾಟಿ ಹಚ್ಚಿದು" ಈ ಮಾತಿನಲ್ಲಿ ಪ್ರಭವಿನ ವಿದ್ಯಾಭ್ಯಾಸಕ್ಕಾಗಿ ಅವನ ಕುಟುಂಬದವರ ತ್ಯಾಗ ಮೆಚ್ಚುವಂತಹದ್ದು.

ತಾಂಡದೊಳಗೆ ಬದುಕುವ ಲಂಬಾಣಿಗರು ಆರ್ಥಿಕವಾಗಿ ಸಂಕಷ್ಟಕ್ಕೆ ಗುರಿಯಾಗಿರುತ್ತಾರೆ. ಆದರೂ ಇವರಲ್ಲಿ ಓದುವ ಆಸಕ್ತಿ ಹಂಬಲವೂ ಸುಧೀರ್ಘವಾಗಿರುತ್ತದೆ. ಅದಕ್ಕಾಗಿ ಇರುವ ಒಂದು ವಾರಗಟ್ಟಲೇ ಮಾಡುವ ಕೆಲಸವನ್ನು

2–3 ದಿನಗಳಲ್ಲಿ ಮುಗಿಸಿ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಸೇರಿಸುತ್ತಾರೆ. ಇದು ಲಂಬಾಣಿಗರಲ್ಲಿ ಓದುವ ಬಗ್ಗೆ ಇರುವ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಶಿಕ್ಷಣಕ್ಕಾಗಿ ತಮ್ಮ ಬಡತನವನ್ನೂ ಮರೆಯುವ ಮುಗ್ಧಜೀವಿಗಳು.

ಲೇಖಕರು ಲಂಬಾಣಿ ತಾಂಡದೊಳಗೆ ಅಡಗಿರುವ ಬಡತನ ಮತ್ತು ಹಸಿವಿನ ಜೊತೆಗೆ ಇತರ ಅನಿಷ್ಟ ಪದ್ಧತಿಯನ್ನು ಕುರಿತು ಕಥಾ ನಾಯಕ ಪ್ರಭುವಿನ ಪಾತ್ರದ ಮೂಲಕ ತಿಳಿಸಿರುವ ಸಂದರ್ಭ "ಬಡತನ ದಾರಿದ್ರ್ಯ ಅನಕ್ಷರತೆ ನಮ್ಮ ಹಳ್ಳಿಗಳಲ್ಲಿ ತಾಂಡವ ಆಡಾಕ ಹತ್ತಿತ್ತು. ಎಲ್ಲಿ ನೋಡಿದರೂ ಹರಕು ಅಂಗಿ, ಸೀರೆ, ಎಣ್ಣೆ ಕಾಣದೆ ತರಗಲೆಯಾಗಿರುವ ಕೂದಲು ಬಿಟ್ಕೊಂಡು ತಮ್ಮ ಅಸಹಾಯಕತೆಯನ್ನು ಪ್ರದರ್ಶಿಸುವ ಮಂದಿ ನಮ್ಮ ಮಾತುಗಳನ್ನು ಮುಗ್ಧರಾಗಿ ಕೇಳ್ತಿದ್ರು. ಈ ಮಾತಿನಲ್ಲಿ ಬಡತನದಿಂದಾಗಿ ತಳಸಮುದಾಯ ಹೊಂದಿರುವ ಬದುಕನ್ನು ತೋರಿಸುವ ಪ್ರಯತ್ನವಾಗಿದೆ.

ಲಂಬಾಣಿ ಸಮುದಾಯದ ಜನರು ಅನಕ್ಷರಸ್ಥರೂ ಹೌದು ಬಡವರು ಹೌದು ಶಿಕ್ಷಣ ಪಡೆಯಲು ತಕ್ಕ ಮಟ್ಟಿನ ಸೌಲಭ್ಯಗಳ ಕೊರತೆ ಇರುವುದರಿಂದ ಶಿಕ್ಷಣದಿಂದ ವಂಚಿತರಾಗಿದ್ದಾರೆಂದು ಹೇಳಬಹುದು. ಕೂಲಿ ಮಾಡಿ ಬದುಕುವ ಜನರಾದ್ದರಿಂದ ದಾರಿದ್ರ್ಯ ಇವರನ್ನು ಹಿಂಬಾಲಿಸಿದೆ. ಇವರು ತೊಡುವ ಬಟ್ಟೆಯು ಸಹ ಇವರ ಬದುಕಿನಷ್ಟೆ ವಿಕಾರವಾಗಿಯೂ ತುಂಡು–ತುಂಡಾಗಿಯೂ ಇರುವುದನ್ನು ಕಾಣಬಹುದು. ಇಂತಹ ಬಡತನದ ನಡುವೆಯೂ ಈ ಜನರು ಮುಗ್ಧರಾಗಿ ಮೇಲ್ವರ್ಗದವರ ಮಾತುಗಳನ್ನು ಶಿರಸಾವಾಯಿಸಿ ಪಾಲಿಸುವುದು ಮಾತ್ರ ಅಸಮಾಧಾನವಾಗಿದೆ.

ಲೇಖಕರ 'ಗೋರಮಾಟಿ' ಕಾದಂಬರಿಯಲ್ಲಿ ಬಡತನ ಮತ್ತು ಹಸಿವಿನ ಬಗೆಗೆ ಉಲ್ಲೇಖಗಳು ಸಾಮಾನ್ಯವಾಗಿವೆ. ಲಂಬಾಣಿಗರು ತಮ್ಮ ಬಡತನ ಮತ್ತು ಹಸಿವಿನ ಪೊರೆ ಮುಚ್ಚುಲು ನಾನಾ ವಿವಿಧ ಕಸಬುಗಳಿಗೆ ತಮ್ಮನ್ನು ತಾವು ಬಳಸಿಕೊಂಡಿದ್ದರು. ಇವರು ತಮ್ಮ ಬಡತನದ ನಿವಾಹರಣೆಗೆ "ಜೀನಗ ಹಗಲ ಹೊತ್ತ್ಯಾಗ ಮನಿಯಾಗ ಮಕ್ಕೊಂಡು ರಾತ್ರಿ ಕಳ್ಳತನ ಮಾಡಾಕ ಹೊರಗ ಬಿಳ್ತಿದ್ರು. ಕುರಿ ಮಂದ್ಯಾಗಿನಿಂದ ಕುರಿಹತ್ಕೊಂಡ ಬಂದು ಕಡದು ರಾತ್ರೋರಾತ್ರಿ ಹಸಿ ಬಿಸಿ ಮಾಂಸ ತಿಂದು ಎಲಬನ್ನ ತಿಪ್ಯಾಗ ಹುಗಿತಿದ್ರ" ಈ ಮಾತಿನಲ್ಲಿ ಬಡತನದಿಂದಾಗಿ ಊಟಕ್ಕೆ ಸಂಕಟ ಪಡುತ್ತಿದ್ದ ಕೆಲವು ಲಂಬಾಣಿಗರು ಹಗಲು ಹೊತ್ತು ಕಳ್ಳತನ ಮಾಡುವ ಕಾರ್ಯಕ್ಕೆ ಇಳಿದ್ದರು.

ಅಲೆಮಾರಿ ವ್ಯಾಪಾರಿಗಳಾಗಿದ್ದ ಲಂಬಾಣಿಗರು ಕಾಲ ಬದಲಾದಂತೆ ಕಳ್ಳತನ ಮಾಡುವ ಕೆಲಸದಲ್ಲಿ ತೊಡಗಿಕೊಂಡಿದ್ದರು. ಇವರು ತಮ್ಮ ಸ್ವಾರ್ಥಸಾಧನೆಗಾಗಿ ಕಳ್ಳರಾಗಿರಲಿಲ್ಲ ಬದಲಾಗಿ ತನ್ನ ಕುಟುಂಬವನ್ನು ಕಿತ್ತು ತಿನ್ನುತ್ತಿದ್ದ ಹಸಿವು ಮತ್ತು ಬಡತನವನ್ನು ಕಡಿಮೆ ಮಾಡಿಕೊಳ್ಳಲು ಈ ದಾರಿ ಅನುಸರಿಸಿದ್ದರು. ಮೇಲ್ಜಾತಿಯ

ಯಾಜಮಾನರು ಕಡಿಮೆ ಕೂಲಿ ಕೊಟ್ಟು ಹೆಚ್ಚು ದುಡಿಸಿಕೊಳ್ಳುತ್ತಿದ್ದರು ಮಾತ್ರವಲ್ಲ, ಕೂಲಿ ಮಾಡುವ ಸ್ತ್ರೀಯರನ್ನು ತಮ್ಮ ಕಾಮ ತೃಷೆಗೆ ಬಳಸಿಕೊಳ್ಳುತ್ತಿದ್ದರು. ಈ ಕಾರಣಕ್ಕಾಗಿ ಕೆಲವು ಲಂಬಾಣಿ ಕುಟುಂಬದವರು ಕೂಲಿಗೆ ಮಹಿಳೆಯನ್ನು ಕಳುಹಿಸುತ್ತಿರಲಿಲ್ಲ. ಈ ಕಾರಣದಿಂದಾಗಿ ಮನೆಯಲ್ಲಿ ದಾರಿದ್ರ್ಯ ಮನೆ ಮಾಡಿತ್ತು. ಇಂತಹ ದಾರಿದ್ರ್ಯ ನಿರ್ವಹಣೆಗೆ ಕಳ್ಳತನ ಅನಿವಾರ್ಯವಾಗಿತ್ತು.

ಲಂಬಾಣಿ ಸಮುದಾಯದೊಳಗೆ ಬಡತನ ಮತ್ತು ಹಸಿವನ್ನು ಸುಧಾರಿಸಿಕೊಳ್ಳಲು ನಾನಾ ನಮೂನೆಯ ಕೆಲಸ ಮಾಡುತ್ತಿದ್ದರು. ಇಂತಹ ಕೆಲಸಕ್ಕೆ ಗೊತ್ತಾನಾಯ್ಕನ ಕುಟುಂಬವು ಹೊರತಾಗಿರಲಿಲ್ಲ ಗೊತ್ತಾನಯ್ಕನ ತಾಯಿ ತುಂಬು ಕುಟುಂಬವನ್ನು ಮನೆಯಿಂದ ಉಟ್ಟ ಬಟ್ಟೆಯಲ್ಲಿಯೇ ಹೊರದೂಡಿದ್ದರ ಪರಿಣಾಮ ಗೊತ್ತಾನ ಕುಟುಂಬದಲ್ಲಿ ಬಡತನ, ಹಸಿವು ಮನೆ ಮಾಡಿತು. ಅದನ್ನು ನಿವಾರಿಸಿಕೊಳ್ಳಲು ಈ ಕುಟುಂಬದವರು "ಇಡೀ ಪ್ಯಾಟಿಸುತ್ತಿ ಕಟಗಿ ಬೇಕೆನ್ರವ್ವ ಕಟಗಿ ಅಂತ ಗೊತ್ತಾ ಒಂದು ಓಣಿ. ಬಾಣಿ ಮತ್ತು ಅವಳ ಮಗ ಮತ್ತೊಂದು ಓಣಿ ತಿರಗಾಡಿ ಜುಕ್ಕು ಜುಲಮಿಯಿಂದ ಮೂರು ಹೊರಿಗಳನ್ನು ಹನ್ನೆಲ್ದ ಆಣಿಗ ಮಾರಿಂದ ಬಿಡುಗಡೆ ಪಡಿತ್ತಿದ್ರು". ಈ ಹೊತ್ತಿನಲ್ಲಿ ಗೊತ್ತಾನಾಯ್ಕನ ಪರಿವಾರ ತಮ್ಮ ತುತ್ತಿನ ಚೀಲ ತುಂಬಿಸಲು ಮಾಡಿದ ಕೆಲಸದ ಬಗ್ಗೆ ತಿಳಿಸುತ್ತದೆ.

ಗೊತ್ತಾನಾಯ್ಕ ದುಡಿಮೆಗಾರ ಆದರೆ ತಾಂಡದೊಳಗೆ ಅವನಿಗೆ ಮತ್ತು ಅವನ ಕುಟುಂಬದವರಿಗೆ ಕೆಲಸವಿಲ್ಲ. ಕಾರಣ ತಾಂಡದೊಳಗಿನ ವೈಷಮ್ಯತೆ ಎಂದು ಹೇಳಬಹುದು. ಇಂತಹ ಪರಿಸ್ಥಿತಿಯಲ್ಲಿ ತಮ್ಮ ಕುಟುಂಬಕ್ಕೆ ಎದುರಾದ ಸವಾಲುಗಳನ್ನು ನಿವಾರಿಸಿಕೊಳ್ಳಲು ಪಟ್ಟಣ ಪ್ರದೇಶದಲ್ಲಿ ಸೌದೆ ವ್ಯಾಪಾರ ಮಾಡುತ್ತಿದ್ದ ಸಂದರ್ಭವಾಗಿದೆ. 'ಕೂತು ತಿನ್ನವನಿಗೆ ಕುಡಿಕೆ ಹಣ ಸಾಲದು' ಎಂಬ ತತ್ವ ತಿಳಿದಿದ್ದ ಗೊತ್ತಾನಾಯ್ಕ ತನ್ನ ಪರಿವಾರವನ್ನೆಲ್ಲ ದುಡಿಮೆಗೆ ಕಳುಹಿಸಿ ತಾಂಡದೊಳಗೆ ಎಲ್ಲರಿಗಿಂತಲೂ ಎತ್ತರಕ್ಕೆ ಬೆಳೆದನು.

ಲಂಬಾಣಿಗರು ತಮ್ಮ ಅನ್ನಕ್ಕೂ ಪರಿತಪಿಸಿದ ಸಂದರ್ಭದಲ್ಲಿ ಕಾಡಿನಲ್ಲಿ ದೊರೆತ ಹಣ್ಣುಗಳು, ಗೆಡ್ಡೆಗಳು ಹಾಗೂ ಎಲೆಗಳನ್ನು ತಿಂದು ಜೀವಿಸಿರುವುದು ಅವರ ಶೋಚನೀಯವಾದ ಬದುಕನ್ನು ತಿಳಿಸುತ್ತದೆ. ಇವರು ಉಗಣ್ಣಿ ಬಳ್ಳಿಯ ಕುಡಿ, ಚೆಪ್ಪಲ ಚೆಂಡಹಣ್ಣು ಹೀಗೆ ನಾನಾ ವಿಧದ ಸಸ್ಯಗಳನ್ನು ತಮ್ಮ ಬಡತನ ಮತ್ತು ಹಸಿವಿಗೆ ಬಳಸಿಕೊಂಡಿರುವುದು ದುರಂತವಾಗಿದೆ. "ನೆಲದ ಮೇಲಿನ ಹುಲ್ಲೊಂದು ಬಿಟ್ಟು ಕೋಲಾಣಿ ಸಪ್ಪನ್ನ ಬುಡಸಮೇತ ಕಿತ್ಕೊಂಡು ಬಂದು ಮೆಣಸಿನಕಾಯಿ ಇಲ್ಲದೆ ಬೇಯಿಸಿ ಉಂಡಿ ಕಟ್ಟಿ ಕಟ್ಟಿ ಅದನ್ನೆ ಗಬಗಬ ಅಂತ ತಿಂದು ಸಾಕಷ್ಟು ನೀರು ಕುಡಿದು ಮಲಗ್ತಿದ್ರು". ಈ ಮಾತಿನಲ್ಲಿ ತಳಸಮುದಾಯದ ವಾಸ್ತವಿಕ ಬದುಕಿನ ಅನಾವರಣವನ್ನು ಮಾಡಲಾಗಿದೆ.

ಲಂಬಾಣಿ ತಳಸಮುದಾಯದ ಕೂಲಿಗಾರರು ಅವತ್ತಿನ ಕೂಲಿ ಅಂದಿಗೆ ಸರಿಯಾಗುವಂತೆ ದುಡಿಮೆ ಮಾಡುತ್ತಿದ್ದರು. ಮಕ್ಕಳ ಸಂಖ್ಯೆ ಜಾಸ್ತಿ ಇರುವ ಕುಟುಂಬಗಳಲ್ಲಿ

ಅವತ್ತಿನ ಕೂಲಿಯೂ ಸಾಕಾಗುತ್ತಿರಲಿಲ್ಲ. ಯಜಮಾನ ವ್ಯವಸ್ಥೆಯ ದಬ್ಬಾಳಿಕೆಯ ನಡುವೆ ತಮ್ಮ ಬದುಕು ಅತಂತ್ರವಾಗಿ ಹೋಗಿತ್ತು. ಇಂತಹ ವ್ಯವಸ್ಥೆಯೊಳಗೆ ಬದುಕು ಕಟ್ಟಿಕೊಳ್ಳಲು ಪರಿತಪಿಸುತ್ತಿದ್ದ ಲಂಬಾಣಿಗರಿಗೆ ಬಡತನ ಮತ್ತು ಹಸಿವು ಘೋರ ಶಾಪವಾಗಿತ್ತು. ಇವರು ತಮ್ಮ ಹಸಿವನ್ನು ಸುಧಾರಿಸಿಕೊಳ್ಳಲು ಕಾಡುಗಳನ್ನು ಆಶ್ರಯಿಸಿದ್ದರೂ ಕಾಡಿನಲ್ಲಿರುವ ಸಸ್ಯ ಸಂಪತ್ತನ್ನು ತಮ್ಮ ಆಹಾರದ ಉಗ್ರಾಣವನ್ನಾಗಿ ಮಾಡಿಕೊಂಡಿರುವುದು ಸ್ಪಷ್ಟವಾಗಿದೆ.

ಲಂಬಾಣಿ ಸಮುದಾಯದ ಜನರು ತಮ್ಮ ಬಡತನದ ಕ್ರೂರತೆಯನ್ನು ಸರಿದೂಗಿಸಲು ದುಡಿಮೆ ಮಾಡುತ್ತಿದ್ದರು. ದುಡಿಮೆ ಮಾಡಿದರೂ ಇವರ ಬದುಕಿಗೆ ಆಸರೆ ಇಲ್ಲದಿರುವುದು ವಿಪರ್ಯಾಸವಾಗಿದೆ. ಕಾಫಿ ಸೀಮೆ ಸಾವುಕಾರರು ಧಿಮಾಕಿನಿಂದ ಲಂಬಾಣಿಗರನ್ನು ಸುಲಿಗೆ ಮಾಡುತ್ತಿದ್ದ ಸಂದರ್ಭ. "ಜಮೀನ್ದಾರಕಿ ಅಮಲಿನ್ಯಾಗೆ ತಾವು ಮಾಡಿದ್ದೆ ಕಾರುಬಾರು ಅಂತ ತಿಳ್ಕೊಂಡು ಜನರನ್ನ ಸುಲಿಗೆ ಮಾಡ್ತಿದ್ರು. ಸರಿಯಾಗಿ ಕೂಲಿ ಕೊಡದ ಮುಂಜಾನಿಂದ ಸಂಜಿ ಮಟಾನು ಕಷ್ಟದ ಕೆಲಸ ಮಾಡಿಸಿಕೊಳ್ತಿದ್ರು". ಈ ಮಾತಿನಲ್ಲಿ ಬಡತನದಿಂದ ನೊಂದಿದ ಲಂಬಾಣಿ ಸಮುದಾಯಕ್ಕೆ ತುತ್ತಿನ ಚೀಲದ ಮೇಲೆ ಜಮೀನ್ದಾರರ ದಬ್ಬಾಳಿಕೆನ್ನು ತಿಳಿಸುವ ಸಂದರ್ಭವಾಗಿದೆ.

ಲಂಬಾಣಿಗರ ಕುಟುಂಬದ ಗಾತ್ರ ಹಿರಿದ್ದಾರಿಂದ ಕೂಲಿಯ ಹಣ ಒಂದು ಹೊತ್ತಿನ ಊಟಕ್ಕೂ ಸಾಕಾಗುತ್ತಿರಲಿಲ್ಲ. ಇದರಿಂದಾಗಿ ಎಷ್ಟೋ ಜನರು ಕಾಫಿ ಸೀಮೆಯಲ್ಲಿ ದುಡಿದು ಕುಟುಂಬಕ್ಕೆ ಹಣ ನೀಡುವ ಉದ್ದೇಶದಿಂದ ಕಾಫಿ ನಾಡಿಗೆ ವಲಸೆಹೋಗುತ್ತಿದ್ದರು. ಆದರೆ ಅಲ್ಲಿನ ಚಿತ್ರಣ ಲಂಬಾಣಿಗರ ಊಹೆಗೂ ಮೀರಿದಾಗಿತ್ತು. ಕಡಿಮೆ ವೇತನ ನೀಡಿ ಹೆಚ್ಚು ದುಡಿಸಿಕೊಳ್ಳುವ ಜನರೊಂದು ಕಡೆಯಾದರೆ ಕೂಲಿಯೇ ನೀಡದೆ ದುಡಿಸಿಕೊಂಡು ಹಿಂಸೆ ಮಾಡುತ್ತಿದ್ದ ಜಮೀನ್ದಾರರೂ ಒಂದು ಕಡೆಗಿದ್ದರು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಲಂಬಾಣಿಗರು ತಮ್ಮ ಬಡತನ ಮತ್ತು ಹಸಿವನ್ನು ಸುಧಾರಿಸಿಕೊಳ್ಳುತ್ತಿದ್ದರು.

ಲೇಖಕರ 'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಯಲ್ಲಿ ತಾಂಡದ ಪ್ರತಿಯೊಬ್ಬರ ಜೀವನವು ಮೇಲ್ವರ್ಗದವರ ಭೂಮಿಯನ್ನೇ ಆಶ್ರಯಿಸಿದವು. ಬಡವರಾಗಿದ್ದ ಲಂಬಾಣಿಗರಿಗೆ ತುಂಡು ಭೂಮಿಯು ಉಪಯೋಗಕ್ಕೆ ಇರಲಿಲ್ಲ. ತಮ್ಮ ಸಂಕಷ್ಟದ ದಿನಗಳಲ್ಲಿ ಜಮೀನ್ದಾರರಿಗೆ ಅಡಮಾನವಿಟ್ಟು ಆ ಭೂಮಿಯ ಋಣವನ್ನೂ ಕಳೆದುಕೊಂಡಿದ್ದರು. "ಬಡವರು ಬಡವರಾಗೆ ಇದ್ದರು. ಕೂಲಿಗಳಿಗೆ ಊರು-ತಾಂಡದ ಜನಕ್ಕೆ ಅವರ ಸುತ್ತಲ ಜಮೀನ್ದಾರ ಲಿಂಗಾಯ್ತರು, ಕುರುಬರುಗಳೇ ಗತಿ". ಈ ಮಾತಿನಲ್ಲಿ ಲಂಬಾಣಿ ಸಮುದಾಯದವರ ಆದಾಯದ ಮೂಲ ಯಾರಾಗಿದರೆಂಬುದನ್ನು ಪರಿಚಯಿಸುತ್ತದೆ.

ಲಂಬಾಣಿಗರು ಬಡವರು ಬಡವರಾಗಿಯೇ ಬದುಕು ನಡೆಸುತ್ತಿದ್ದರು. ಇವರ ಬಡತನ ಹಂಗು ಹರಿದುಕೊಳ್ಳಲು ಆದಾಯ ಮೂಲವಾಗಿ ತಾಂಡದ ಸುತ್ತ ಮುತ್ತಲ ಮೇಲ್ಜಾತಿ ಒಡೆಯರು ಇದ್ದರು. ಈ ಮೂಲಗಳನ್ನು ಹೊರತು ಪಡಿಸಿದರೆ ಆದಾಯದ ಮೂಲವಾಗಿದ್ದು ಕಾಫಿಸೀಮೆಯಾಗಿದೆ.ಅದಕ್ಕಾಗಿಲಂಬಾಣಿಗರುಇವರುಕೊಟ್ಟಷ್ಟುಕೂಲಿಗೆ ಮುಂಜಾನೆಯಿಂದ ಸಂಜೆ ತನಕ ಗಂಡು-ಹೆಣ್ಣು ಎಂಬ ಭೇದವಿಲ್ಲದೆ ದುಡಿಯುತ್ತಿದ್ದರು. ಆದರೂ ಇವರಿಗೆ ಹಸಿವಿನ ಭಾದೆ ಮಾತ್ರ ಹೋಗಿರಲಿಲ್ಲ. ಈ ಜಮೀನ್ದಾರರೂ, ಲಿಂಗಾಯಿತರು ಕುರುಬರುಕೆಲವೊಮ್ಮೆಹಣಕೊಡುತ್ತಿದ್ದರೂಮತ್ತೊಮ್ಮೆದವಸ-ಧಾನ್ಯಕೊಟ್ಟುಮುಗಿಸುತ್ತಿದ್ದರು. ಈ ಎಲ್ಲ ಕಾರಣಗಳಿಂದಾಗಿಯೂ ಇವರು ಬಡವರಾಗಿಯೇ ಉಳಿದಿದ್ದರು.

ಲಂಬಾಣಿಗರಿಗೂ ಮತ್ತು ಭೂ ಒಡೆಯರಿಗೂ ಇರುವ ಬಡತನದ ಅಂತರ ವಿಶೇಷವಾಗಿದೆ. ದುಡಿಸಿಕೊಳ್ಳುವವರು ಹಾಗೂ ದುಡಿಯುವವರ ನಡುವಿನ ವ್ಯತ್ಯಾಸವನ್ನು ಕಾರ್ಲ್‌ಮಾರ್ಕ್ಸ್ ಕೈಗಾರಿಕಾ ಕ್ರಾಂತಿಯ ನೆಲೆಯಲ್ಲಿ ಪರಿಚಯಿಸಿದ್ದರು. ಆದರೆ ಚಿಮ್ನಿ ಭೂ ಮಾಲೀಕರು ಮತ್ತು ತಳಸಮುದಾಯದವರ ನಡುವಿನ ಬದುಕನ್ನು ಬಡತನದ ಹಿನ್ನಲೆಯಲ್ಲಿ ನೋಡುವ ಕೆಲಸ ಮಾಡಿದ್ದಾಳೆ. "ನಮ್ಮಂತ ಕೂಲಿಗಳ ಪಾಡು ನರಕ, ಮುಂಜಾನೆ ಸೂರ್ಯ ತಾಯಿ ಗರ್ಭದಿಂದ ಉದಯಿಸಿ ಕಣ್ಣುಜ್ಜಿಕೊಂಡು ಜಗತ್ತು ನೋಡುವ ಮುನ್ನವೆ ನಮ್ಮಂತ ಬಡವರ ಬದುಕು ಆರಂಭವಾಗಿರುತ್ತೆ". ಈ ಮಾತಿನಲ್ಲಿ ನೊಂದಿರುವ ಚಿಮ್ನಿಯು ತನ್ನ ಸಮುದಾಯದವರ ದಿನನಿತ್ಯದ ಬದುಕನ್ನ ಕಂಡು ಮರುಗುವ ಸಂದರ್ಭವಾಗಿದೆ.

ಈ ಕಾದಂಬರಿಯಲ್ಲಿ ಬಡತನದಿಂದಾಗಿ ಲಂಬಾಣಿಗರಲ್ಲಿ ದುಡಿಮೆಯ ಅವಶ್ಯಕತೆ ಹೆಚ್ಚಾಯಿತು. ಈ ಅವಶ್ಯಕತೆಯನ್ನು ಸರಿದೂಗಿಸಲು ಲಂಬಾಣಿಗರು ಅಸಂಖ್ಯಾತ ಮಕ್ಕಳನ್ನು ಪಡೆದರು. ಆದರೆ ಬಡತನದಿಂದ ಮಾತ್ರ ವಿಮುಕ್ತಿ ಕಾಣಲಿಲ್ಲ. ಇವರು ತಮ್ಮ ಬಡತನವನ್ನು ಸರಿದೂಗಿಸಿಕೊಳ್ಳಲು ಮುಂಜಾನೆ ಸೂರ್ಯೋದಯವಾಗುವುದರೊಳಗೆ ಎದ್ದು ಮನೆ ಕೆಲಸ ಮುಗಿಸಿ ಮಕ್ಕಳಿಗೆ ಊಟ ಬೇಯಿಸಿಟ್ಟು ಕೆಲಸಕ್ಕೆ ಹೋದರೆ ಬರುವುದು ಸೂರ್ಯ ಅಸ್ತವಾದ ಮೇಲೆಯೇ ಆಗಿದೆ. ಆದರೂ ಇವರು ತಮ್ಮ ಬಡತನ ಮತ್ತು ಹಸಿವನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ದುಡಿಮೆ ಅಧಿಕವಾಗಿ ಪ್ರತಿಫಲ ಮಾತ್ರ ನಿಲುಕದ ರೀತಿಯಲ್ಲಿ ದೊರಕುತ್ತಿರುವುದು ಈ ಎಲ್ಲ ಅನಾಹುತಕ್ಕೂ ಕಾರಣವಾಗಿದೆ. ಈ ವ್ಯವಸ್ಥೆಯನ್ನು ಚಿಮ್ನಿ ತುಂಬಾನೆ ಭಾವುಕಳಾಗಿ ವಿರೋಧಿಸುತ್ತಿದ್ದಾಳೆ.

ಶ್ರಮಜೀವಿಗಳಾದ ಲಂಬಾಣಿಗರು ಅಲ್ಲೆ ದುಡಿದು ಹಾಗಲೇ ತಿನ್ನುವ ಬಡವರು, ಇವರಲ್ಲಿ ಉಳಿತಾಯದ ಪ್ರವೃತ್ತಿ ಮರೀಚಿಕೆಯಾಗಿತ್ತು. ಪ್ರತಿದಿನ ದುಡಿದ ಹಣವನ್ನು

ಇಲ್ಲವೆ ದವಸವನ್ನು ಅಂದಿನ ಊಟಕ್ಕೆ ಉಪಯೋಗಿಸಿಕೊಂಡು ಮುಂದಿನ ದಿನಕ್ಕೆ ಆಲೋಚನೆ ಮಾಡುತ್ತಾ ಆಕಾಶ ನೋಡುತ್ತಿದ್ದರು. ಭಯಂಕರವಾದ ಕಷ್ಟದ ದಿನಗಳಲ್ಲಿ ತನ್ನೂರಿನ ಜಮೀನ್ದಾರರಿಂದ ಹಣ ಸಾಲ ಮಾಡಿ ತಮ್ಮ ಜೀವನಕ್ಕೆ ವಿನಿಯೋಗಿಸಿಕೊಳ್ಳುವ ನಿರ್ಗತಿಕರಾಗಿದ್ದಾರೆ. "ರೂಪಾಯಿ ನೋಟುಕಗಳೆಂದರೇನು ದೊಡ್ಡ ಮೊತ್ತ. ಕೂಲಿ ಹೋದರೆ ಕಾಳು ಸಿಗ್ತಿತ್ತೆ ವಿನಃ ಕಾಸಿಲ್ಲ. ಹಣಬೇಕೆಂದ್ರೆ ಸಾವುಕಾರರಿಗೆ ಸಲಾಂ ಹೊಡದು ವಾರಗಟ್ಟಲೇ ಹಿಂದೆ ಸುತ್ತಾಡಬೇಕು" ಈ ಮಾತಿನಲ್ಲಿ ಜಮೀನ್ದಾರರು ಲಂಬಾಣಿಗರಿಗೆ ಮಾಡುತ್ತಿದ್ದ ಕೂಲಿಯ ತಾರತಮ್ಯತೆಯನ್ನು ತಿಳಿಸಲಾಗಿದೆ.

ಜಮೀನ್ದಾರರೂ ಬಡವರಾಗಿದ್ದ ಲಂಬಾಣಿಗರನ್ನು ತಮ್ಮ ಗುಲಾಮರೆಂಬಂತೆ ಭಾವಿಸಿಕೊಂಡಿರುವುದಾಗಿದೆ. ಇವರ ಹೊಲ, ಗದ್ದೆ, ತೋಟಗಳಲ್ಲಿ ದುಡಿಯುವ ಲಂಬಾಣಿಗರಿಗೆ ಹಣದ ಬದಲಾಗಿ ದವಸ-ಧಾನ್ಯವನ್ನು ನೀಡುವುದರ ಮುಖಾಂತರ ವೇತನದಲ್ಲಿ ವಂಚನೆ ಮಾಡಿ ಅವರನ್ನು ಮತ್ತಷ್ಟೂ ಬಡವರನ್ನಾಗಿ ಮಾಡುತ್ತಿದ್ದರು. ಇವರಲ್ಲಿ ಅನಿವಾರ್ಯ ಕಾರಣಕ್ಕೆ ಹಣದ ಅಭಾವ ಉಂಟಾದಾಗ ಮುಂಗಡವಾಗಿ ಹಣ ಪಡೆಯಲು ಜಮೀನ್ದಾರರ ಹಿಂದೆ ಗುಲಾಮರಂತೆ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಿಸಿಕೊಂಡಿದ್ದರು. ಇಂತಹ ಬದುಕಿನಿಂದಾಗಿ ಲಂಬಾಣಿಗರ ಬದುಕು ಬಡತನ ಮತ್ತು ಹಸಿವಿನಿಂದಲೇ ತುಂಬಿ ಹೋಗಿತ್ತು.

ಲೇಖಕರ ಕಾದಂಬರಿಗಳಲ್ಲಿ ಕಂಡು ಬರುವಷ್ಟು ಬಡತನ, ಹಸಿವಿನ ಚಿತ್ರಣವು ಸಣ್ಣಕತೆ ಸಂಕಲನಗಳಲ್ಲಿ ಕಡಿಮೆ ಎಂದು ಹೇಳಬಹುದು. 'ಗುಡ್ಡಜ್ಜ' ಸಂಕಲನದ 'ಬಿದರ ಮತ್ತು ಛತ್ರದೂಟ' ಕಥೆಯಲ್ಲಿ ಹಾಸ್ಟೆಲ್ ಊಟದಿಂದ ಅಸಮಾನಧಾನಗೊಂಡ ಬಿದರ ಮನೆಯ ಊಟವನ್ನು ಕಂಡೂ ಬೇಸರ ವ್ಯಕ್ತಪಡಿಸಿದನು. ಜ್ವಾಳದ ಮುದ್ದಿ, ಹುಳ್ಳಿ, ಹುಳಕ ಬದ್ನಿಕಾಯಿ ಸಾರು ಹಾಸ್ಟೆಲ್ ವಿದ್ಯಾರ್ಥಿಗಳ ನಿತ್ಯದ ಆಹಾರವಾಗಿದ್ದರಿಂದ ಬಿದರನಿಗೆ ಊಟದ ಮೇಲೆ ಆಸಕ್ತಿ ಕಡಿಮೆ ಮಾಡಿತ್ತು. "ಗಂಜಿಯೂ ಗತಿ ಇಲ್ಲದ ಮನಿ ಕಡೀಗ ಮನಸು ಮಾಡ್ತಿರಲಿಲ್ಲಾ. ವಾರಕೊಂದು ಸಲ ದಾವಣಗೇರಿ ಸಂತೀಗ ಬರೋ ಊರಮಂದಿ ಕೈಯಾಗ ನಾಕಾಣಿ, ಎಲ್ಡ ರೊಟ್ಟಿ ಮಾಡಿ ತಿಂಗಳಿಗೋ, ಎಲ್ಡ ತಿಂಗಳಿಗೋ ಕಳಿಸ್ತಿದ್ದ ಬಿದರನ ಅವ್ವ" ಈ ಮಾತಿನಲ್ಲಿ ಲಂಬಾಣಿ ಬಿದರನ ಕುಟುಂಬದ ಬಡತನದ ಪರಿಸ್ಥಿತಿಯನ್ನು ಪರಿಚಯಿಸಲಾಗಿದೆ.

ಕುಟುಂಬದೊಳಗೆ ಊಟಕ್ಕಾಗಿ ಸಂಕಟ ಪಡುವ ಸ್ಥಿತಿ ಇದ್ದುದರಿಂದ ಬಿದರನ ಮನೆಯವರು ಪುಗ್ಸಟ್ಟೆ ಊಟ ಸಿಗುವ ಸರ್ಕಾರಿ ಹಾಸ್ಟೆಲ್‌ಗೆ ವಿದ್ಯಾಭ್ಯಾಸದ ನೆಪದಿಂದ ಸೇರಿಸಿದರು. ಹೊಟ್ಟೆ ತುಂಬಾ ಊಟ ಮೈತುಂಬಾ ಬಟ್ಟೆ ಸಿಗುತ್ತೇ ಎಂದು ಕನಸು ಹೊತ್ತು ಬಂದ ಬಿದುರನಿಗೆ ಜ್ವಾಳದ ಮುದ್ದೆ, ಹುಳ್ಳಿ, ಹುಳುಕು ಬದ್ನಿನಾಯಿ ಸಾರು

ಮಾನಸಿಕವಾಗಿ ಗಾಯ ಮಾಡಿತು. ಈ ಬದುಕಿನಿಂದ ದೂರ ಸಾಗಿ ತನ್ನವರ ಗೂಡು ಸೇರುವ ಮನಸ್ಸು ಮಾಡಿದರೆ ಅಲ್ಲಿ ಊಟಕ್ಕೂ ಗತಿ ಇಲ್ಲದ ಪರಿಸ್ಥಿತಿ ಕಣ್ಮುಂದೆ ಬಂದಿತು. ಈ ಎರಡು ರೀತಿಯ ಜಂಜಾಟದಿಂದ ಬಿದರ ಹಾಸ್ಟೆಲ್ ಸುತ್ತ ಮುತ್ತಲಿನ ಮದುವೆ ಊಟಕ್ಕೆ ಹೋಗುವ ತಯಾರಿ ಮಾಡಿದನು. ಬಿದರನಂತಹ ಪರಿಸ್ಥಿತಿ ಇಡೀ ತಳಸಮುದಾಯದೊಳಗಿರುವುದು ಅವರಲ್ಲಿರುವ ಬಡತನ ಒಂದು ಕಾರಣವಾದರೆ ಹಸಿವು ಮತ್ತೊಂದು ಕಾರಣವಾಗಿದೆ.

'ಘಾತ' ಕಥೆಯಲ್ಲಿ ಚಿಕ್ಕವನಾಗಿಂದಲ್ಲೂ ದುಡಿಮೆ ಮಾಡಿ ಬದುಕುವುದನ್ನು ರೂಢಿಸಿಕೊಂಡಿದವನು ಸಿಂಗ. ಸಿಂಗನ ಕುಟುಂಬ ಅಲ್ಲಿಯೇ ಕೂಲಿ ಅಲ್ಲಿಯೇ ಅನ್ನ ಎಂಬ ಪರಿಸ್ಥಿತಿಯೊಳಗೆ ಜೀವನ ಕಟ್ಟಿಕೊಂಡಿತ್ತು. ಬಡತನದ ಸಂದಿಗ್ಧ ಪರಿಸ್ಥಿತಿಯೊಳಗೆ ಹಸಿವನ್ನು ಸಮಾನಂತರವಾಗಿ ಕಾಪಾಡಿಕೊಂಡು ಬಂದಿದ್ದ ಸಿಂಗನಿಗೆ ಮದುವೆ ಮಾಡಿದ್ದು ಬಡತನದ ಕೂಪದೊಳಗೆ ಹಸಿವನ್ನು ಬಲಿಕೊಟ್ಟಂತೆ ಆಯಿತು. ಸಿಂಗನ ದುಡಿಮೆ ಒಂದು ಹೊತಿನ ಕೂಳಿಗೂ ಎಟಕುತ್ತಿರಲಿಲ್ಲ ಇದರಿಂದಾಗಿ ನಿತ್ಯ ಮನೆಯೊಳಗೆ ಜಗಳ ನಡೆಯುತ್ತಿತ್ತು. "ತನ್ನ ಬಡತನದ ಬಯಕೆಗಳನ್ನ ತಣಿಸಲಾರ್ದಕ್ಕ, ಸಣ್ಣ-ಪುಟ್ಟ ಕಳ್ಳತನ ಮಾಡಿ ಸಿಕ್ಕಿದ್ದ. ಕೋಳಿ ಕದಿಯೋದ್ರಾಗ ಸಿಂಗ ಎತ್ತಿದ ಕೈ. ಮೆಣಸಿನಕಾಯಿ ಸುಗ್ಗಿಗ ರಾತ್ರೋರಾತ್ರಿ ಮೆಣಸಿನಕಾಯಿ ಹರದು ಚಹಾದ ಅಂಗಡಿಗಳಿಗೆ ಮಾರ್ತಿದ್ದ" . ಈ ಮಾತಿನಲ್ಲಿ ಲಂಬಾಣಿ ಸಮುದಾಯಕ್ಕೆ ಸೇರಿದ ಸಿಂಗ ತನ್ನ ಕುಟುಂಬದ ಬಡತನವನ್ನು ತಗ್ಗಿಸಲು ಕೈಗೊಂಡ ಕಾರ್ಯಗಳ ಬಗ್ಗೆ ತಿಳಿಸಲಾಗಿದೆ.

ದುಡಿಮೆಗಾರನಾಗಿದ್ದ ಸಿಂಗ ಕಳ್ಳನಾದುದ್ದಕ್ಕೆ ಅವನ ಕುಟುಂಬದಲ್ಲಿನ ಬಡತನ ಪ್ರಮುಖ ಕಾರಣವಾಗಿದೆ. ಇಬ್ಬರೂ ಬದುಕುತ್ತಿದ್ದ ಮನೆಗೆ ಮೂರನೆಯವಳ ಪ್ರವೇಶ ಆಹಾರಕ್ಕೆ ಹಾಹಾಕಾರ ಪಡುವಂತೆ ಮಾಡಿತು. ಈ ಪರಿಸ್ಥಿತಿಯನ್ನು ಸುಧಾರಿಸಲು ಸಿಂಗನಿಗೆ ಕಳ್ಳತನ ಬಿಟ್ಟರೆ ಬೇರೆ ಮಾರ್ಗವೇ ಇರಲಿಲ್ಲ. ಜಮೀನ್ದಾರರ ತೋಟದಲ್ಲಿ ದುಡಿದವರಿಗೆ ಕೂಳು ಬಿಟ್ಟರೆ ಕಾಸು ಸಿಗುತ್ತಿರಲಿಲ್ಲ. ಬೇರೆ ಕಡೆ ಕೆಲಸ ಮಾಡಲು ಮುಂಜಾನೆಯಿಂದ ಸಂಜೆವರೆವಿಗೂ ಒಂದೇ ಕಡೆಯೇ ಇರಬೇಕಾದ ಪರಿಸ್ಥಿತಿ ಎಲ್ಲ ಒತ್ತಡಗಳು ಹಾಗೂ ಕುಟುಂಬದೊಳಗಿದ್ದ ಬಡತನ ಮತ್ತು ಹಸಿವು ಅನಿವಾರ್ಯವಾಗಿ ಕಳ್ಳನನ್ನಾಗಿ ಪರಿವರ್ತಿಸಿತು.

'ಬ್ರೇಡ್, ಬೇಕರಿ ಮತ್ತು ಅವನು' ಕಥೆಯಲ್ಲಿ ತಳಸಮುದಾಯಕ್ಕೆ ಸೇರಿದ ಬಡ ಹುಡುಗಿಯೊಬ್ಬಳು ತನ್ನ ತಂದೆಯ ವಯಸ್ಸಿನ ವ್ಯಕ್ತಿಯೊಂದಿಗೆ ಹಣೆಮಸೆ ಹಂಚಿಕೊಂಡಿದ್ದು ಬಡತನದ ಕಾರಣಕ್ಕಾಗಿಯೇ ಎಂಬುದು ಸ್ಪಷ್ಟವಾಗಿದೆ. ಈ ದುರಂತವನ್ನು ಕಂಡೋಡನೆಯೇ ನಮ್ಮ ಮನಸ್ಸಿನಲ್ಲಿ ಮೂಡುವ ಪ್ರಶ್ನೆ ಬಡತನ ಅಷ್ಟೊಂದು ಕ್ರೂರ

ಶಕ್ತಿಯೇ? ಎಂಬುದಾಗಿದೆ. ಇಂತಹ ಬಡತನದಿಂದಾಗಿ ತಳಸಮುದಾಯದ ಹದಿಹರೆಯಾದ ಹುಡುಗಿಯರ ಪಾಡು ಘೋರವಾದ ನರಕವಾಗಿದೆ. "ರೊಕ್ಕದ ಆಸಿಗ ಈ ಮಂದಿ ಏನೆಲ್ಲಾ ಮಾಡ್ತಾರ. ಸ್ವಂತ ಮಗಳನ್ನ ನಾಳೆ ನಾಡಿದ್ದು ಸಾಯೋ ಮುದ್ಕಗ ಗಂಟ ಕಟ್ತ್ಯಾರ. ಆ ಹುಡುಗಿ ಅಸಿಗ ಬೆಂಕಿ ಇಟ್ಟಾರೆ." ಈ ಮಾತಿನಲ್ಲಿ ಬಡತನವೆಂಬ ಮಾರಿಯಿಂದ ದೂರಸರಿಯಾಲು ತಳಸಮುದಾಯದವರು ತಮ್ಮ ಕರುಳಬಳ್ಳಿಯನ್ನೆ ಬಲಿಪಶು ಮಾಡುತ್ತಿದ್ದುದರ ಬಗ್ಗೆ ತಿಳಿಸಲಾಗಿದೆ.

ಬಡತನದ ಬೇಗುದಿಗೆ ಬಿದ್ದು ನರಳುತ್ತಿರುವ ತಳಸಮುದಾಯದ ಲಂಬಾಣಿಗರಿಗೆ ವರದಕ್ಷಿಣೆ ಕೊಟ್ಟು ಮದುವೆ ಮಾಡಲು ಅಸಕ್ತರಾಗಿದ್ದುದರಿಂದ ತಮ್ಮ ಮಗಳಿಗೆ ಕನ್ಯೆ ದಕ್ಷಿಣೆ ಕೊಡುವವರೊಂದಿಗೆ ವಯಸ್ಸಿನ ಅಂತರವನ್ನು ಕಾಣದೆ ಮದುವೆ ಮಾಡುತ್ತಿದ್ದರು. ಈ ರೀತಿಯ ಮದುವೆಗಳಿಗೆ ಆ ಸಮುದಾಯದವರಿಗೆ ಕಾರಣವಾಗಿದ್ದು ಬಡತನವಾಗಿದೆ. ಲೇಖಕರು ಈ ಕಥೆಯ ಸಾಲುಗಳಲ್ಲಿ ಬಡತನದ ವಿಕೃತತೆಯನ್ನು ತಿಳಿಸುವಾಗ ಒಬ್ಬ ಸ್ತ್ರೀಯಂತೆ ಆಲೋಚನೆ ಮಾಡಿರುವುದು ಕಂಡು ಬಂದಿದೆ. ಇಂತಹ ವ್ಯವಸ್ಥೆ ಪ್ರಸ್ತುತ ಸಮಾಜದಲ್ಲೂ ಸದ್ದಿಲ್ಲದೆ ನಡೆಯುತ್ತಿದೆ.

ಲೇಖಕರ 'ಕೊಂಯ್ಯ ಮತ್ತು ಧೋತ್ರ' ಸಂಕಲನದ 'ಜೋಗ್ಯಾ ಮತ್ತು ಬೆದರು' ಕಥೆಯಲ್ಲಿ ಬಡಕುಟುಂಬದೊಳಗೆ ಜನಿಸಿದ ಜೋಗ್ಯಾನಿಗೆ ಊಟಕ್ಕೆ ಬಟ್ಟೆಗೆ ಸರಿಯಾದ ವ್ಯವಸ್ಥೆ ಇರಲಿಲ್ಲ. ಈ ಕಾರಣದಿಂದಾಗಿ ಜೋಗ್ಯಾ ದಿನಲೂವೇ ಗೌಡರ ಮನೆಯ ಮುಂದೆ ನಿಂತು ಗೌಡರ ಸಾಕು ನಾಯಿಗೆ ಹಾಕಲಾದ ಅನ್ನವನ್ನು ಬಿಟ್ಟ ಬಾಯಿ ಬಿಟ್ಟಂತೆ ಜೋಲ್ಲು ಸುರಿಸುತ್ತಾ ನೋಡುತ್ತಾ ನಿಂತಿದ್ದನು. "ಒಂದು ಪತ್ರಾವಳಿಯೊಳಗೆ ಏನಾರ ಚೂರು ಪಾರ ತಿಂದ ಉಳಿದಿದ್ದನ್ನ ದೂರದಿಂದ್ಲೆ ನಿಂತು, ನಾಯಿ ಮುಂದ ಬಿಸಾಡೋ ಹಂಗ ಬಿಸಾಡಿ ಹೊಕ್ಕಿದ್ರು, ಅದೇ ಮಹಾಪ್ರಸಾದ ಅಂತ ಜೀವನದಾಗ ಕಂಡರಿಯದ ಮೃಷ್ಟಾನ್ನ ಸಿಕ್ಕಂಗ ಖುಷಿಯಿಂದ ಸಾವಿರ ಜನ್ಮದ ಹಸಿವನ್ನು ಹಿಂಗಿಸಿಕೊಳ್ಳೊ ಹಂಗ ಗಬಗಬಾಂತ ತಿಂದು ಬಿಡ್ತಿದ್ದ". ಈ ಮಾತಿನಲ್ಲಿ ಜೋಗ್ಯಾನ ಹಸಿವಿನ ಪರಾಕಷ್ಟೆ ಮಾತ್ರವಲ್ಲ ಅವನ ಕುಟುಂಬದೊಳಗಿನ ಬಡತನವನ್ನು ಪರಿಚಯಿಸುವಂತಿದೆ.

ಜೋಗ್ಯಾನ ಕುಟುಂಬ ಆರ್ಥಿಕವಾಗಿ ಹಿಂದುಳಿದವರಾಗಿದ್ದುದರಿಂದ ಇವರಿಗೆ ಕೂಳು, ಕಾಸು ಕನಸಿನ ಮಾತಾಗಿತು. ಆದರೆ ಜೋಗ್ಯಾ ಹೊಟ್ಟೆ ತುಂಬ ಉಣ್ಣುವ ಹಂಬಲವಿರುವ ಚಿಕ್ಕ ಬಾಲಕ. ತನ್ನ ಮನೆಯಲ್ಲಿರುವ ಬಡತನದ ಪರಿಸ್ಥಿತಿಯನ್ನು ಅರಿತುಕೊಳ್ಳಲಾಗದ ವಯಸ್ಸು ಆತನದು. ಇಂತ ಪರಿಸ್ಥಿತಿಯೊಳಗೆ ಗೌಡರ ಮನೆಯ ನಾಯಿಗೆ ನೀಡಲಾಗಿದ ರೊಟ್ಟಿಯನ್ನು ಬಿಟ್ಟ ಬಾಯಿ ಬಿಟ್ಟಂತೆ ನೋಡುತ್ತಾ ನಿಂತನು. ನಾಯಿ ಮುಂದೆ ಬಿಸಾಕಿದ್ದ ರೊಟ್ಟಿ ಚೂರನ್ನಾ ಇವನ ಮುಂದೆ ಬಿಸಾಕಿದರೆ ಅದನ್ನೆ

ಮಹಾ ಪ್ರಸಾದ ಅಂತ ತಿಳಿದುಕೊಂಡು ಜೀವನದಲ್ಲಿ ಕಂಡಿರದಂತಹ ಮೃಷ್ಟಾನ್ನ ಸಿಕ್ಕಿದ ಖುಷಿಯಿಂದ ತನ್ನ ಸಾವಿರ ವರ್ಷದ ಹಸಿವನ್ನಾ ನಿಂಗಿಸಿಕೊಳ್ಳುವಂತೆ ನೋಡುತ್ತಾ ನಿಂತಿದ್ದನು. ಜೋಗ್ಯಾನ ಇಂತಹ ಅವಾಂತರ ಇಡೀ ಲಂಬಾಣಿ ಸಮುದಾಯವನ್ನೆ ಆವರಿಸಿಕೊಂಡಿದ್ದು ಮಾತ್ರ ಸುಳ್ಳಾಗಿರಲಿಲ್ಲ.

'ಕೊಂಯ್ಯ ಮತ್ತು ಧೋತ್ರ' ಕಥೆಯಲ್ಲಿ ಕೊಂಯ್ಯ ಒಬ್ಬ ಲಂಬಾಣಿ ಸಮುದಾಯದೊಳಗೆ ಬಡವನಾಗಿದನು. ಇವನಿಗೆ ಆಹಾರದಷ್ಟೆ ಬಟ್ಟೆಯೂ ತೀರ ಅವಶ್ಯಕವಾದ ವಸ್ತುವಾಗಿತ್ತು. ಆದರೆ ಊಟಕ್ಕೆಯೇ ದುಡಿದ ದುಡ್ಡೆಲ್ಲ ವಿನಿಯೋಗವಾಗಿದ್ದರಿಂದ ಒಂದು ಒಳ್ಳೆಯ ಬಟ್ಟೆ ತೊಡುವುದಕ್ಕೂ ಸಾಧ್ಯವಾಗದೆ ನಿಸ್ಸಹಯಕನಾಗಿದನು. ಇಂತಹ ಪರಿಸ್ಥಿತಿಯೊಳಗೆ ಸಿಕ್ಕಿ ನರಳುತ್ತಿದ್ದ ಕೊಂಯ್ಯನು ಗೌಡರ ಮನೆಯ ಹೆಣದ ಮೇಲಿದ್ದ ಬಟ್ಟೆಯನ್ನು ಕದ್ದು ತಂದು ತೊಟ್ಟುಕೊಂಡಿದ್ದನು. ಇದನ್ನು ಕಂಡ ಗೌಡರು ಕೊಂಯ್ಯನನ್ನು ಥಳಿಸಿದ ಸಂದರ್ಭ "ಯಪ್ಪ ಹೊಡಿಬ್ಯಾಡ್ರೋ ಉಡಾಕ ಇಲ್ಲಿದ್ದಕ ಹೆಣದ ಮ್ಯಾಲಿಂದು ಕೆಲ್ಸಕ ಬರಂಗಿಲ್ಲಾ ಅಗಸರು ಬರಾಕ ಮುಂಚೆ ನಾನೆ ಮುಟ್ಟಿದ್ರೆ ವಾಪಾಸ ಇಸ್ಕೊಳೊದಿಲ್ಲಾ ಅಂತಂದು ಉಟ್ಕೊಂಡೆ ಅಂತ ಕನವರಿಸ ತೊಡಗಿದ". ಈ ಮಾತಿನಲ್ಲಿ ತನ್ನ ಬಡತನದ ಹರುಕು ಮುಚ್ಚಿಕೊಳ್ಳಲು ಕೊಂಯ್ಯ ಮಾಡಿದ ಅವಾಂತರಕ್ಕೆ ತಂದುಕೊಂಡ ವಿಪತ್ತನ್ನು ತಿಳಿಸಲಾಗಿದೆ.

ಬಡತನದ ಬೆಂಕಿಯಲ್ಲಿ ಬಿದ್ದು ನರಳುತ್ತಿದ್ದ ಕೊಂಯ್ಯನಿಗೆ ಗೌಡರ ಏಟನ್ನು ತಡೆದುಕೊಳ್ಳುವಷ್ಟು ಶಕ್ತಿ ದೇಹದಲ್ಲಿರಲಿಲ್ಲ. ಆದರೆ ತನ್ನ ಬಡತನದಿಂದಾಗಿ ಗೌಡರಿಗೆ ಸೇರಿದ ಬಟ್ಟೆ ಕದ್ದು ಸಿಕ್ಕಿ ಬಿದ್ದಿದರಿಂದ ಅನಿವಾರ್ಯವಾಗಿ ಗೌಡರ ಶಿಕ್ಷೆಯನ್ನು ಅನುಭವಿಸಬೇಕಿತ್ತು. ಈ ದಂಡನೆ ಕೊಂಯ್ಯನಂತಹ ಮುಗ್ಧ ಜೀವಿಗಳಿಗೆ ನೀಡುವುದಕ್ಕಿಂತ ಬಡತನದ ಬೇಗುದಿಗೆ ನೂಕಿದ ಸಮಾಜಕ್ಕೆ ತಳಸಮುದಾಯದವರು ನೀಡಬೇಕಾಗಿದೆ. ಪರಿಸ್ಥಿತಿಗೆ ಹೊಂದಿಕೊಂಡು ಬದುಕುವ ಅನಿವಾರ್ಯತೆ ಲಂಬಾಣಿ ಸಮುದಾಯಕ್ಕೆ ಅವಶ್ಯಕವಾಗಿರುವುದರಿಂದ ಇಂತಹ ಶೋಷಣೆಗೆ ಮನ್ನಣೆ ದೊರಕುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ.

'ಕಲ್ಲೇ ಕಲ್ಲೇ ಕಥೆ ಹೇಳು' ಸಂಕಲನದ 'ಹನ್ಮಜ್ಜನೂ ಎಡವಿಲ್ಲದೂರೋ? ಕಥೆಯಲ್ಲಿ ಹನ್ಮಜ್ಜ ಒಬ್ಬ ಚಪ್ಪಲಿ ಹೊಲೆಯುವ ಕಾಯಕ ಮಾಡುವವನು. ಗೌಡರ ಹರಿದ ಚಪ್ಪಲಿ ಹೊಲೆದು ಕೊಡುತ್ತಾ ಅವರಿಂದ ಸಿಗುತ್ತಿದ್ದ ಕಾಸು, ಕಾಳಿನಿಂದ ತನ್ನ ಬದುಕನ್ನು ಕಟ್ಟಿಕೊಂಡಿದ್ದನು. ಸಂಡಣಿಗಿ ತಾಂಡದ ಜನರಿಗೆ ಚಪ್ಪಲಿಯ ಅರಿವೇ ಇರಲಿಲ್ಲ. ಆದರೂ ಹನ್ಮಜ್ಜ ಈ ವೃತ್ತಿಯಿಂದಲೇ ಬದುಕು ನಡೆಸುತ್ತಿದದ್ದು ಆಶ್ಚರ್ಯವಾಗಿದೆ. "ಮುಳ್ಳತುಳಿದು ತಗಿಯಾಕು ಟೇಮಿಲ್ಲದೆ ಅಣಿ ಬೆಳದು ಪಾದ ಪೂರ್ತಿ ಇಡದೆ ಕುಂಟ್ಕಂಡು ಅಡ್ಡಾಡೋ

ಜೀವ್ಲಾನಾಯ್ಕ ಅವನ ತಮ್ಮ ಡೇಬರ, ಹಿಂದ್ಲೋಣಿ ಕಿಮ್ನನಾಯ್ಕ ತಮ್ಮ ಬಡತನಕ್ಕೆ ಹಿಡಿಶಾಪ ಹಾಕ್ತಿದ್ರು". ಈ ಮಾತಿನಲ್ಲಿ ಜೀವ್ಲಾನಾಯ್ಕ ಡೇಬರ ಮತ್ತು ಕಿಮ್ನನಾಯ್ಕ ಇವರು ಕಾಲಿಗೆ ನಾಟುಕೊಂಡಿರುವ ಮುಳ್ಳನ್ನು ತೆಗೆಯುವುದಕ್ಕೂ ಸಮಯವಿಲ್ಲದಂತೆ ದುಡಿಮೆಗೆ ನೂಕಿದ ಪರಿಸ್ಥಿತಿಯನ್ನು ಶಪಿಸುತ್ತಿರುವುದಾಗಿದೆ.

ಈ ಕಥೆಯಲ್ಲಿ ಚಪ್ಪಲಿಯ ಅರಿವಿಲ್ಲದ ಸಂಡಣಿಗಿತಾಂಡದ ಜನರಿಗೂ ಹನ್ಮಜ್ಜನ ಬದುಕಿಗೂ ಇರುವ ಬಡತನದ ಸಾಮ್ಯತೆಯನ್ನು ತಿಳಿಸುವುದಾಗಿದೆ. ಬಡತನದಿಂದಲೇ ಜೀವನ ಸಾಗಿಸುತ್ತಿರುವ ಜೀವ್ಲಾನಾಯ್ಕ ಮತ್ತು ಡೇಬರ ಎಂಬ ಸಹೋದರರಿಬ್ಬರು ತಮ್ಮ ಬದುಕಿನ ಬಗ್ಗೆ ಶಾಪವಾಕುತ್ತಿದ್ದರೆ ಹನ್ಮಜ್ಜ ಮಾತ್ರ ಚಪ್ಪಲಿ ಹೊಲೆಯುವ ಕಾಯಕದೊಳಗೆ ಸಂತೃಪ್ತಿ ಪಡೆದುಕೊಂಡಿದ್ದು ಮಾತ್ರ ದುರಂತವಾಗಿದೆ. ಲೇಖಕರು ಈ ಕಥೆಯೊಳಗೆ ಬಡತನ ಮತ್ತು ಹಸಿವಿನ ಕ್ರೂರ ಶಕ್ತಿಗಳನ್ನು ಇಬ್ಬರು ವ್ಯಕ್ತಿಗಳ ನಡುವೆ ಇಟ್ಟು ನೋಡಿರುವುದು ವಿಶಿಷ್ಟವಾಗಿದೆ. ಒಂದು ದೃಷ್ಟಿಯೊಳಗೆ ಹನ್ಮಜ್ಜನೂ ಬಡವನೇ ಆಗಿದ್ದಾನೆ. ಗೌಡರ ಚಪ್ಪಲಿ ಅರಿದರೇ ಮಾತ್ರ ಹನ್ಮಜ್ಜನ ಹಸಿವಿನ ಚೀಲ ತುಂಬುತ್ತಿತ್ತು. ಇಲ್ಲವಾದರೆ ಅವತ್ತಿನ ದಿನ ಹೊಟ್ಟೆಗೆ ತಣ್ಣೀರಿನ ಬಟ್ಟೆಯೇ ಗತಿಯಾಗಿರುತ್ತಿತ್ತು.

'ಹೋರಾಟದ ಕೊನೆಗೊಂದು ದಿನ' ಕಥೆಯಲ್ಲಿ ಬಡತನವನ್ನು ಎದುರಿಸಲು ಭೀಮ್ಲನು ಗೌಡರ ಸತ್ತದನವನ್ನು ಕಷ್ಟಪಟ್ಟು ತಾಂಡದೊಳಗೆ ಹೊತ್ತು ತಂದು ಇಡೀ ತಾಂಡದ ಹಸಿವು ನಿಗಿಸಿದ್ದು ವಾಸ್ತವ ಸತ್ಯವಾಗಿದೆ. ತಳಸಮುದಾಯದವರು ತಮ್ಮ ಹಸಿವಿನ ಬವಣೆಯನ್ನು ಸರಿದೂಗಿಸಲು ಕಳ್ಳತನ, ಕೂಲಿ ಮಾಡುತ್ತಿದದ್ದು ಒಂದು ಕಡೆಯಾದರೆ ಸತ್ತದನವನ್ನು ತಿನ್ದು ಬದುಕು ಸಾಗಿಸುತ್ತಿದದ್ದೂ ಮತ್ತೊಂದು ಕಡೆಯಲ್ಲಿನ ಪರಿಸ್ಥಿತಿಯಾಗಿದೆ. ಇಂತಹ ಪರಿಸರದೊಳಗೆ ಬದುಕುತ್ತಿದ್ದ ಲಂಬಾಣಿಗಳು ತಮ್ಮ ತಾಂಡವನ್ನು ಊರ ಹೊರಗೆ ನಿರ್ಮಿಸಿಕೊಳ್ಳುತ್ತಿದ್ದರು. "ಎಲ್ಲಿಂದಲೋ ಬಂದವರು ನಾವು ಹಕ್ಕಿ ಪಕ್ಷಿಗಳ ಹಂಗ ನೀರು ಆಹಾರ ಎಲ್ಲಿ ಸಿಗತೈತೋ ಅಲ್ಲಿ ಬೀಡು ಬಿಡೋರು. ನಾವು ಹಕ್ಕಿಗಳಂಗ ಅಂತ ಮುದುಕ ಪೀರ್ಯಾ ಅಂದ". ಈ ಮಾತಿನಲ್ಲಿ ಲಂಬಾಣಿ ಜನರು ಅಸ್ಪಶ್ಯರಂತೆ ಊರ ಹೊರಗೆ ಬದುಕು ಕಟ್ಟಿಕೊಳ್ಳುತ್ತಿದದ್ದು ಮಾತ್ರವಲ್ಲ ತಮ್ಮ ಬಡತನದಿಂದಾಗಿ ನೀರು. ಆಹಾರ ಸಿಗುವ ಸ್ಥಳಗಳಲ್ಲಿ ಪಕ್ಷಿಗಳಂತೆ ಜೀವನ ನಡೆಸುತ್ತಿದ್ದರು.

ಸಾಮಾಜಿಕವಾಗಿ ಶೋಷಣೆಗೆ ಗುರಿಯಾಗಿದ್ದ ಲಂಬಾಣಿಗರು ಸದಾಕಾಲ ಊರ ಹೊರಗೆ ತಾಂಡಗಳ ರೂಪದಲ್ಲಿ ಬದುಕು ಕಟ್ಟಿಕೊಳ್ಳತ್ತಿದ್ದರು. ಇವರು ತಮ್ಮ ಹಸಿವಿನ ಚೀಲವನ್ನಾ ಹಾಗೂ ಬಡತನದ ಹರಕನ್ನು ಮುಚ್ಚಿಕೊಳ್ಳುವುದಕ್ಕಾಗಿ ನೀರು, ಆಹಾರ ಸಿಗುವ ಸ್ಥಳಗಳಲ್ಲಿಯೇ ಹೆಚ್ಚಾಗಿ ವಾಸಮಾಡುತ್ತಿದ್ದರು. ಲಂಬಾಣಿಗರ ಬದುಕು ಮನುಷ್ಯ ಸಂಕುಲತೆಯಿಂದ ವಿರುದ್ಧ ದಿಕ್ಕಿನಲ್ಲಿರುವ ಪಕ್ಷಿ ಸಂಕುಲದ ಕಡೆಗೆ ಸಾಗಿತ್ತು ಎನ್ನುವುದನ್ನು

ತನ್ನ ಸ್ವ ಅನುಭವದ ಮೂಲಕ ಪೀರ್ಯಾ ಕಟ್ಟಿಕೊಟ್ಟಿದ್ದಾನೆ. ಇಂತಹ ದುರಂತವಾದ ಬದುಕಿನ ಬಗ್ಗೆ ದಲಿತ-ಬಂಡಾಯ ಸಾಹಿತ್ಯ ಸಂದರ್ಭದಿಂದಲೂ ಪ್ರತಿಭಟನೆ ನಡೆದುಕೊಂಡು ಬಂದಿದ್ದರೂ ಅಲೆಮಾರಿಯ ಬದುಕು, ಶೋಷಣೆಯ ಜೀವನ ಕಡಿಮೆಯಾಗದೇ ಇರುವುದು ವಿರ್ಪಯಾಸವಾಗಿದೆ.

ಹೀಗೆ ಬಡತನದ ಬೆಂಕಿಗೆ ಬಿದ್ದ ತಳಸಮುದಾಯದವರಿಗೆ ಹಸಿವು ಕಳ್ಳತನದ ದಾರಿ ತೋರಿಸಿ ಅಸ್ಪೃಶ್ಯತೆಯ ಕೂಪಕ್ಕೆ ನೂಕಿದ್ದೂ ದುರಂತವಾಗಿದೆ. ಕ್ರೂರ ಜಂತುವಿನಂತೆ ಕಾಡುತ್ತಿರುವ ಹಸಿವಿನ ಬಗ್ಗೆ ಮಹಾರಾಷ್ಟ್ರದ ದಲಿತ ಕವಿ ನಾಮದೇವ್ ಢಸಾಳ್ ಅವರ ಹೇಳಿಕೆ

"ಹಸಿವೆಯೇ
ಒಮ್ಮೊಮ್ಮೆ ನೀನು ಇಲಿಯಾಗುತ್ತೀ, ಬೆಕ್ಕಾಗುತ್ತೀ
ಮಗದೊಮ್ಮೆ ಸಿಂಹವಾಗುತ್ತೀ
ದುರ್ಬಲವಾದ ನಾವು ಹೇಗೆ ತಾನೆ ನಿನಗೆ
ಮುಖಾಮುಖಿಯಾಗಬಲ್ಲೆವು?
ನೀನು ಶುರು ಮಾಡಿದ ಆಟ ಮುಂದುವರೆಸಬಲ್ಲೆವು?
ಎಂದು ತಮ್ಮ ವಿಷಾದವನ್ನು ತೋಡಿಕೊಂಡಿದ್ದಾರೆ.

3.3. ಶೋಷಣೆ

ಎರಡು ಸಮುದಾಯದ ನಡುವೆ ಅಥವಾ ಇಬ್ಬರೂ ವ್ಯಕ್ತಿಗಳ ಅಥವಾ ಕುಟುಂಬಗಳ ನಡುವೆ ಕ್ಷುಲಕ ಕಾರಣಗಳಿಂದಾಗಿ ಜರುಗುವ ಜಗಳಗಳಿಗೆ ಸಂಘರ್ಷ ಎನ್ನುವರು. ಸಂಘರ್ಷದ ಹಿಂದೆ ಶೋಷಣೆ ಅಡಗಿರುತ್ತದೆ. ಎಲ್ಲಿ ವ್ಯಕ್ತಿಯ ವ್ಯಕ್ತಿತ್ವಕ್ಕೆ ಅಥವಾ ಸಮುದಾಯಕ್ಕೆ ಅವಹೇಳನ ಮಾಡಿ ಪ್ರಗತಿಗೆ ಧಕ್ಕೆ ಉಂಟಾಗುತ್ತದೋ ಅದನ್ನು ಶೋಷಣೆಗೆ ಎನ್ನುವರು. ಶೋಷಣೆ ಮತ್ತು ಸಂಘರ್ಷಗಳು ಒಂದೇ ತಾಯಿಯ ಅವಳಿ ಶಿಶುಗಳಿದ್ದಂತೆ. ಸಮಾಜದಲ್ಲಿ ವ್ಯಕ್ತಿಗೋ ಅಥವಾ ಸಮುದಾಯಕೋ ಶೋಷಣೆ ನಡೆಯುತ್ತಿದ್ದರೆ. ಅದರ ಹಿಂದೆಯೇ ಪ್ರತಿಭಟನೆ, ಹೋರಾಟದ ಮುಖಾಂತರ ಸಂಘರ್ಷ ಬಲಗೊಂಡಿರುತ್ತದೆ.

ಲೇಖಕರ ಕಾದಂಬರಿ ಮತ್ತು ಸಣ್ಣಕತೆ ಸಂಕಲನಗಳಲ್ಲಿ ಶೋಷಣೆಗೆ ಸಂಬಂಧಿಸಿದಂತಹ ಪ್ರಸಂಗಗಳನ್ನು ಕಾಣಬಹುದು. ಇವರ 'ಕತ್ತಲು ಕರಗುವ ಮುನ್ನ' ಕಾದಂಬರಿಯಲ್ಲಿ ತಳಸಮುದಾಯದ ವಿದ್ಯಾರ್ಥಿಗಳು ಸಂವಿಧಾನದಿಂದ ಪಡೆಯಲಾಗಿದ್ದ ಮೀಸಲಾತಿ ಸೌಲಭ್ಯವನ್ನುಮೇಲ್ಜಾತಿಯಶಿಕ್ಷಕರುಮತ್ತುವಿದ್ಯಾರ್ಥಿಗಳುಅಣಕಿಸುವುದನ್ನು

ವಿದ್ಯಾರ್ಥಿಯಾದ ಪ್ರಭುವಿನ ಮಿತ್ರ ಹೇಳಿದ್ದು ಹೀಗೆ "ನೋಡು ಪ್ರಭು ನಾವು ಎಷ್ಟೇ ಆದ್ರೂ ಕೆಳಗಿನ ಜಾತಿಯೋರು ಮೀಸಲಾತಿ ಪಡೆದು ಖಾಲಿಪುಕ್ಕಟ್ಟೆ ಸ್ಕಾಲರ್‌ಶಿಪ್ ತಗೊಂಡು ಶಿಕ್ಷಣ ಪಡಿಯಾಕ ಹತ್ತೀವಿ ಅಂತಂದು ಇಲ್ಲಿ ಮೇಷ್ಟ್ರು, ಹುಡ್ರು ನಮ್ಮ ಬಗ್ಗೆ ಆಡಿಕೊಳ್ತಾರಲ್ಲ". ಈ ಮಾತಿನಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರಲ್ಲಿಯೇ ತಳಸಮುದಾಯದವರ ಬಗ್ಗೆ ಇರುವಂತಹ ಅಸಮಾಧಾನದ ಕೀಳಿರಿಮೆಯನ್ನು ತಿಳಿಸುವುದಾಗಿದೆ.

ಆದಿಕಾಲದಿಂದಲೂ ಶೂದ್ರರು ಶಿಕ್ಷಣ ಸೌಲಭ್ಯದಿಂದ ವಂಚಿತರಾಗಿದ್ದರು. ಸ್ವಾತಂತ್ರ್ಯದ ಅನಂತರದಲ್ಲಿ ಶಿಕ್ಷಣ ಆಯೋಗಗಳ ವರದಿಯ ಅನುಗ್ರಹದಿಂದ ತಳ ಸಮುದಾಯಕ್ಕೆ ಶಿಕ್ಷಣ ನೀಡುವ ಅವಶ್ಯಕತೆ ಸಂವಿಧಾನದ ತಿದ್ದುಪಡಿಯಿಂದ ಲಭಿಸಿತು. ಸಂವಿಧಾನದಲ್ಲಿ ತಳಸಮುದಾಯ ಶಿಕ್ಷಣಕ್ಕೆ ಕೆಲವೊಂದು ಮೀಸಲಾತಿ ನೀಡಿ ಪ್ರಗತಿಗೆ ಕಾರಣವಾಗಿದೆ. ಈ ಮೀಸಲಾತಿ ಮೇಲ್ಜಾತಿಗೆ ಅಸಮಧಾನ ಉಂಟುಮಾಡಿತು. ಈ ಅಸೂಯೆಯನ್ನು ತಾಳಲಾರದೆ ತಳಸಮುದಾಯುವರನ್ನು ಸಿಕ್ಕ-ಸಿಕ್ಕಲ್ಲಿ ವಿದ್ಯಾರ್ಥಿಗಳಿಂದ ಅಧ್ಯಾಪಕರವರೆವಿಗೂ ಶೋಷಣೆ ಮಾಡಿದ ಸಂದರ್ಭವಾಗಿದೆ. ಆದರೆ ಈ ಶೋಷಣೆಗೆ ಯಾವುದೇ ವಿರೋಧ ಕಂಡು ಬಂದಿಲ್ಲ. ಕಾರಣ ಸಮಾಜದಲ್ಲಿನ ಪರಿಸ್ಥಿತಿ ತಳಸಮುದಾಯವನ್ನು ಉಭಯ ಸಂಕಟಕ್ಕೆ ಸಿಲುಕಿಸಿತು.

ಈ ಸಮಾಜದೊಳಗೆ ಶ್ರೀಮಂತರಿಗೆ ಒಂದು ನ್ಯಾಯ ಬಡವರಿಗೊಂದು ನ್ಯಾಯ ಎಂಬ ತಾರತಮ್ಯತೆ ಇರುವ ಪ್ರಸಂಗ ಒಂದು ಇಲ್ಲಿದೆ. ಬಡವರು, ತಳಸಮುದಾಯಕ್ಕೆ ಸೇರಿದ ಹುಡುಗರು ಹುಡುಗಿಯರೊಂದಿಗೆ ಓಡಾಡುವುದು ತಪ್ಪು, ಇದು ಸಮಾಜ ಶೋಷಣೆಯ ಕೆಲಸವೆಂದು ಭೋದಿಸುವ ಅಧ್ಯಾಪಕರು ತಮ್ಮ ಮೇಲ್ಜಾತಿ ಹುಡುಗರು ಅಡ್ಡಾಡುವುದನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಇಂತಹ ಸಂದರ್ಭದಲ್ಲಿ ತಳಸಮುದಾಯದವರ ಶೋಷಣೆ ಮಾಡುತ್ತಿದ್ದ ಪರಿ ಎಂದರೆ "ಹೊಂಟ ನೋಡ್ರಿ, ಮಗನಿಗ ತಿನ್ನಾಕ ಕೂಳಿಲ್ಲ ಹುಡುಗಿಯರ ಹಿಂದ ಅಡ್ಯಾಡ್ತನ. ಅಂತ ಚುಚ್ಚ ಮಾತಾಡ್ತಿದ್ರು". ಈ ಮಾತಿನಲ್ಲಿ ಗಂಜಿಗೂ ಗತಿ ಇಲ್ಲದವನಿಗೆ ಹುಡುಗಿಯ ಜೊತೆ ಸ್ನೇಹ ಸಲುಗೆ ಬೆಳಸಿಕೊಳ್ಳುವ ಅಹಂಕಾರ ಎಂದು ಸಮುದಾಯ ಕೇಂದ್ರಿತವಾಗಿ ಶೋಷಣೆ ಮಾಡಿರುವುದಾಗಿದೆ.

ಮೇಲ್ಸಮುದಾಯದ ಜನರು ತಳಸಮುದಾಯದ ಸ್ವಾತಂತ್ರ್ಯ ಜೀವನವನ್ನು ಕಂಡು ಸಹಿಸಿಕೊಳ್ಳಲಾಗದೆ ಅವರ ತಲೆಗೊಂದು ಕಳಂಕವಿಟ್ಟು ಸಮುದಾಯದಿಂದ ಇಡೀದು, ಜಾತಿ, ಕುಲ, ಕುಟುಂಬದ ಪರಿಸ್ಥಿತಿ ಈ ಎಲ್ಲ ಕಾರಣದಡೀ ಶೋಷಣೆ ಮಾಡಿರುವುದು ಅಸಮಂಜಸವಾಗಿದೆ. ಒಬ್ಬ ಮಿತ್ರನ ಸ್ವಾಭಿಮಾನಕ್ಕೆ ಧಕ್ಕೆಯನ್ನುಂಟು ಮಾಡುವ ಪ್ರಯತ್ನ ಸ್ವತಃ ಅಧ್ಯಾಪಕ ಮಿತ್ರರಿಂದಲೇ ನಾಯಕ ಪ್ರಭುವಿನ ಮೇಲೆ ನಿರಂತರವಾಗಿದಿದ್ದು ದುಃಖಕರವಾಗಿದೆ. ಇಂತಹ ಸನ್ನಿವೇಶಕ್ಕೆ ಪ್ರಭು ಬೇಸರದಿಂದ ಕೆಟ್ಟ ಜನರಿರೋ ಈ

ಹಾಳು ವ್ಯವಸ್ಥೆಯೊಳಗೆ ತಳಸಮುದಾಯದವರು ಬದುಕಲು ಸಾಧ್ಯವೇ? ಎಂದು ಅನುಮಾನದಿಂದಲೇ ಮೌನವಾಗಿ ಸಂಘರ್ಷದ ಮನಸ್ಸು ಮಾಡಿದ್ದು ವಿರ್ಪಯಾಸವಾಗಿದೆ.

ತಳಸಮುದಾಯಕ್ಕೆ ಸೇರಿದವನಾದ ನಾಯಕ ಪ್ರಭು ವಿದ್ಯಾರ್ಥಿಗಳ ಒಲುಮೆಯಿಂದ ಕಾಲೇಜು ವಾತಾವರಣದಲ್ಲಿ ಭಾರೀ ಎತ್ತರಕ್ಕೆ ಬೆಳೆದಿದ್ದನು ಇವನ ಈ ಏಳಿಗೆಯನ್ನು ಸಹಿಸಿಕೊಳ್ಳಲಾಗದ ಮೇಲ್ಜಾತಿ ಅಧ್ಯಾಪಕರು ಇವನ ವಿರುದ್ಧ ಮ್ಯಾನೇಜ್‌ಮೆಂಟ್ ಸದಸ್ಯರ ಮುಂದೆ ಇಲ್ಲ ಸಲ್ಲದ ಆರೋಪ ಮಾಡಿದರು. ಇವರ ಆರೋಪದಲ್ಲಿ ಕಾಲೇಜು ವಿದ್ಯಾರ್ಥಿನಿ ಮಲ್ಲಿಕಾಳೊಂದಿಗಿನ ಗೆಳೆತನವೇ ಮೊದಲ ಆರೋಪವಾಗಿತ್ತು. ಈ ಎಲ್ಲ ಆರೋಪಗಳಿಂದ ಮ್ಯಾನೇಜ್‌ಮೆಂಟ್ ಸದಸ್ಯರು ಒಂದು ದೊಡ್ಡ ನಿರ್ಧಾರವನ್ನೆ ಮಾಡಿದ್ದರು. “ಕಮಿಟಿ ಮೀಟಿಂಗ್ ದಿನ ಸೆಕ್ರೆಟ್ರಿ, ಮೆಂಬರು, ಛೇರ್ಮನ್ನರುಗಳು ಮುಲಾಜಿಲ್ದೆ ನನ್ನ ತಗದಹಾಕೊ ನಿರ್ಣಯ ತಗೊಂಡೆ ಬಿಟ್ರು. ಯಾರೊಬ್ಬರು ನನ್ನ ಸಮರ್ಥಿಸಲಿಲ್ಲಾ ನಾನು ನಿಂತ ನೆಲ ಕಾಲ ಬುಡಕ ಕುಸದು ಪಾತಾಳಕ ಇಳಿತಿರೊ ಹಂಗಾತು”. ಈ ಮಾತಿನಲ್ಲಿ ತಳಸಮುದಾಯದವನೆಂಬ ಕಾರಣಕ್ಕಾಗಿ ಮೇಲ್ಜಾತಿಯ ಅಧ್ಯಾಪಕರು ಮಾಡಿದ ಆರೋಪದಿಂದಾಗಿ ಪ್ರಭು ಕೆಲಸ ಕಳೆದುಕೊಂಡ ಎಂಬುದು ಸ್ಪಷ್ಟವಾಗಿದೆ.

ದಿನದಿಂದ ದಿನಕ್ಕೆ ವಿದ್ಯಾರ್ಥಿಗಳ ವಿಶ್ವಾಸದಿಂದ ಕಾಲೇಜಿನಲ್ಲಿ ಬೆಳೆಯುತ್ತಿದ್ದ ಅಧ್ಯಾಪಕ ಪ್ರಭುವಿನ ಏಳಿಗೆಯನ್ನು ಸಹಿಸಿಕೊಳ್ಳದ ಮೇಲ್ಜಾತಿ ಅಧ್ಯಾಪಕರು ಮ್ಯಾನೇಜ್‌ಮೆಂಟ್ ಸದಸ್ಯರಿಗೆ ಲಿಖಿತ ರೂಪದಲ್ಲಿ ಆರೋಪ ಮಾಡಿದರು. ಇವರ ಆರೋಪಕ್ಕೆ ಪುಷ್ಠಿ ದೊರಕಿಸಿಕೊಡಲು ತಮ್ಮ ಬೆಂಬಲಿಗ ವಿದ್ಯಾರ್ಥಿಗಳ ಮುಖಾಂತರ ತಮ್ಮ ಕಾರ್ಯಸಾಧನೆಗೆ ಕೈಹಾಕಿದರು. ವಿದ್ಯಾರ್ಥಿಗಳು ಮತ್ತು ಸಹಪಾಠಿ ಅಧ್ಯಾಪಕರು ನೀಡಿದ ಆರೋಪ ಪಟ್ಟಿಯನ್ನು ನಿಜವೆಂದು ನಂಬಿದ ಸಂಸ್ಥೆಯ ಸದಸ್ಯರು ಯುವ ಅಧ್ಯಾಪಕ ಪ್ರಭುವನ್ನು ಕೆಲಸದಿಂದ ಅಮಾನತುಗೊಳಿಸಿದರು. ತಳಸಮುದಾಯದಲ್ಲಿ ಹುಟ್ಟಿ ಬಡತನದ ಬದುಕು ಬಾಳುತ್ತಿದ್ದ ಪ್ರಭುವಿಗೆ ಮುಂದಿನ ಭವಿಷ್ಯತ್ ನೆನೆದು ನಿಂತ ನೆಲ ಕುಸಿದಂತಾಯಿತು. ಆದರೂ ಪ್ರಭು ಯಾವುದೇ ರಿತಿಯ ಸಂಘರ್ಷಕ್ಕೆ ಇಳಿಯಲಿಲ್ಲ ಕಾರಣ ಸಮಾಜದೊಳಗೆ ಎಲ್ಲ ತಳಸಮುದಾಯದವರ ಪರಿಸ್ಥಿತಿ ನನ್ನ ಪರಿಸ್ಥಿತಿಯೇ ಎಂದು ಭಾವಿಸಿಕೊಂಡು ತನ್ನೊಳಗೆಯೇ ಸಮಾಧಾನ ಮಾಡಿಕೊಂಡಿದ್ದು ತಳಸಮುದಾಯದ ಅಸಹಾಯಕತೆಯನ್ನು ತೋರಿಸುತ್ತದೆ.

ಲೇಖಕರು ‘ಗೋರಮಾಟಿ’ ಕಾದಂಬರಿಯೊಳಗೆ ಲಂಬಾಣಿ ಸಮುದಾಯದ ತಾಂಡದಲ್ಲಿ ನಡೆದಿರುವ ಶೋಷಣೆ ‘ಕತ್ತಲು ಕರಗುವ ಮುನ್ನ’ ಕಾದಂಬರಿಗಿಂತ ತೀರ ಭಿನ್ನ ನೆಲೆಯಿಂದ ಕೂಡಿದೆ. ಕಾಕಾಪುರ ತಾಂಡದೊಳಗೆ ಅನ್ಯ ತಾಂಡದಿಂದ ವಲಸೆ ಬಂದ ಬುದ್ಧನಾಯ್ಕ ಮತ್ತು ಅವನು ಕುಟುಂಬದವರು ದಿನದಿಂದ ದಿನಕ್ಕೆ ಏಳಿಗೆ

ಹೊಂದಿದ್ದನ್ನು ಸಹಿಸಿಕೊಳ್ಳಲಾಗಲಿಲ್ಲ. ಅವನ ಶ್ರಮದಾಯಕ ದುಡಿಮೆಯನ್ನು ನೋಡಿ ತಮ್ಮೊಳಗೆ ಅಸೂಯೆ ಪಡುತ್ತಿದ್ದ ಜನರು ಅವನನ್ನು ಕುರಿತು "ನೀನು ಮನ್ನೆ ಮನ್ನೆ ಬಂದು ಠಿಕಾಣಿ ಹೋಡದೋನು ಅಲ್ಲೇನೊ ಮಗನೆ ಇಷ್ಟ ಬೇಗನೆ ನಿನಗೆ ಸೊಕ್ಕಬಂದ ಬಿಡ್ತಾ. ಇಬ್ಬರ ಮಕ್ಕಳು ದುಡಿತಾವಂತ ಕೊಂಬಬಂದಾವ ಬಗಲಾಗ". ಈ ಮಾತಿನಲ್ಲಿ ಬುದ್ಧನಾಯ್ಕನ ಏಳಿಗೆಯನ್ನು ಸಹಿಸಿಕೊಳ್ಳದ ಪಾಪೂನಾಯ್ಕನು ವ್ಯಂಗ್ಯ ಭಾವದಲ್ಲಿ ಶೋಷಣೆಗೆ ಗುರಿಪಡಿಸಿದ್ದಾಗಿದೆ.

ಕಾಕಪುರ ತಾಂಡಕ್ಕೆ ವಲಸೆ ಬಂದಿದ್ದ ಬುದ್ಧನಾಯ್ಕನು ತನ್ನಿಬ್ಬರೂ ಮಕ್ಕಳ ಶ್ರಮದಾಯಕ ದುಡಿಮೆಯ ಬಲದಿಂದ ತಾಂಡದೊಳಗೆ ಶ್ರೀಮಂತನಾಗಿದ್ದನು. ಇವನ ಶ್ರೀಮಂತಿಕೆಯ ಸಿರಿಯನ್ನು ಕಂಡು ಅಸಮಧಾನಗೊಂಡ ಪಾಪೂನಾಯ್ಕನು ಬುದ್ಧನಾಯ್ಕನನ್ನು ಕುರಿತು ಚುಚ್ಚಿ ಮಾತನಾಡುತ್ತಾ ಅವಹೇಳನ ಮಾಡಿದನು. ತಾಂಡದೊಳಗಿನ ಇಂತಹ ಹುನ್ನಾರಗಳು ಬುದ್ಧನಾಯ್ಕನ ಮನೆಯವರ ಮೇಲೆ ಮಾನಸಿಕವಾದ ಗಾಯ ಮಾಡಿದ್ದವು. ಇಂತ ಗಾಯಗಳು ತಳಸಮುದಾಯದವರಿಗೆ ಅನಿವಾರ್ಯವಾಗಿ ಬಂದ ಆಪತ್ತುಗಳೆಂದು ತಿಳಿದು ಪ್ರತಿಭಟನೆ, ಸಂಘರ್ಷಗಳ ಕಡೆ ಮುಖಮಾಡದೆ ತಮ್ಮೊಳಗೆ ಸಮಾಧಾನ ತಂದುಕೊಳ್ಳುತ್ತಿದ್ದರು. ಶೋಷಣೆ ನಡೆದಾಗ ಸಂಘರ್ಷಕ್ಕೆ ಇಲಿಯುವುದು ಶೋಷಿತನಿಗೆ ಅನಿವಾರ್ಯ ಆದರೆ ಸಂಘರ್ಷವಿಲ್ಲದ ಇವರ ಬದುಕು ರುಚಿ ಇಲ್ಲದ ಊಟದಂತಿತ್ತು.

ತಾಂಡದೊಳಗೆ ಒಂಟಿ ಬಾಳು ಬಾಳುತ್ತಿದ್ದ ಬುದ್ಧನಾಯ್ಕ ತನಗಾಗುತ್ತಿದ್ದ ಅವಮಾನವನ್ನು ಸಹಿಸಿಕೊಳ್ಳಲಾಗದೆ ಒಂದು ದಿನ ತನ್ನ ಮನಸ್ಸಿನೊಳಗಿದ ನೋವನ್ನು ತಾಂಡದವರ ಮುಂದಿಟ್ಟನು. ನೀವೇ ತಾಯಿ-ತಂದೆ ಇದ್ದಂಗೆ ನನಗೆ, ನನ್ನ ಸಂಬಂಧಿಕರು ನನ್ನಿಂದ ದೂರ ಇದ್ದಾರೆ ನಾವೆಲ್ಲರೂ ಒಂದೇ ಸಮುದಾಯಕ್ಕೆ ಸೇರಿದ ತಾಂಡದವರು ನೀವೇ ನನ್ನ ಅಣ್ಣ-ತಮ್ಮಂದಿರೆಂದು ಅಳಲು ತೋಡಿಕೊಂಡನು ಬುದ್ಧನಾಯ್ಕ. ಇವನ ಕಣ್ಣೀರಿಗೆ ಬೆಲೆ ಕೊಡದ ಪೂಜಾರಿ ಪಾಪೇಸಿ ಮಾತ್ರ ಕೋಪದಿಂದ "ದಿನ ದಿನಕ್ಕೂ ಈ ಮಗ ಬುದ್ಧ ಬೆಳಿಯಾಕ ಹತ್ಯಾನಲ್ಲ. ಎಲ್ಲಿಂದ್ಲೋ ಬಂದ ಪರದೇಶಿ ಈ ಊರಾಗ ಭಾಳ ಆಳಕ್ಕೆ ಬೇರೆಬಿಡ್ತಿದ್ದಾನ ಇವನ ಬೇರಗಳನ್ನು ಹೆಂಗಾನ ಮಾಡಿ ತುಂಡಮಾಡಾಕು. ಭೂಮಿಯೊಳಗೆ ಚಾಚ್ಕೊಳದಂಗೆ ತಡಿಬೇಕು". ಈ ಮಾತಿನಲ್ಲಿ ಅನ್ಯ ತಾಂಡದಿಂದ ವಲಸೆ ಬಂದು ಕಾಕಾಪುರದೊಳಗೆ ಬೆಳೆಯುತ್ತಿದ್ದ ಬುದ್ಧ ನಾಯ್ಕನನ್ನು ಹೇಗಾದರೂ ಮಾಡಿ ಹತ್ತಿಕ್ಕಬೇಕು ಎಂಬ ನಿರ್ಧಾರವಾಗಿದೆ.

ತಳಸಮುದಾಯದೊಳಗೆ ಶೋಷಣೆ ಸುಡುವ ಬೆಂಕಿಯಂತೆ ಸುತ್ತಲು ಆವರಿಸಿಕೊಂಡು ಲಂಬಾಣಿಗರನ್ನು ನುಂಗಿಹಾಕುತ್ತಿತ್ತು. ಇಂತ ಶೋಷಣೆಯ ಬೆಂಕಿಗೆ

ಬುದ್ಧನಾಯ್ಕನ ಕುಟುಂಬ ಒಳಗಾಗಿದ್ದೂ ಮೇಲ್ವರ್ಗದ ಪೂಜಾರಿ ಪಾಪೇಸಿಯ ಅಸೂಯೆಯಿಂದ ಎಂಬುದು ಸ್ಪಷ್ಟವಾಗಿದೆ. 'ಎಲ್ಲಿಂದ್ಲೋ ಬಂದ ಪರದೇಶಿ' ಎಂದು ಸಂಬೋಧಿಸಿದ ಪೂಜಾರಿ ಪಾಪೇಸಿ ಮಾನಸಿಕವಾಗಿ ಬುದ್ಧನ ಕುಟುಂಬವನ್ನು ನನ್ನ ತಾಂಡದಲೊಬ್ಬ ಎಂದು ಒಪ್ಪಿಕೊಳ್ಳದೇ ಇರುವುದು ವ್ಯಕ್ತಗೊಂಡಿದೆ. ಇಂತಹ ಶೋಷಣೆಯ ವಿರುದ್ಧ ಹೋರಾಟ ಮಾಡಲು ಶಕ್ತನಲ್ಲದ ಬುದ್ಧನಾಯ್ಕ ತನ್ನೊಳಗೆ ಕೊರಗುವ ಸಂದರ್ಭವು ಪ್ರತಿಯೊಬ್ಬ ಲಂಬಾಣಿಗರ ಜೀವನವನ್ನು ಸಂಕೇತಿಸುತ್ತದೆ.

ಕಾಕಪುರ ತಾಂಡಕ್ಕೆ ಅನ್ಯ ತಾಂಡದೊಳಗಿಂದ ಬಂದ ಬುದ್ಧನಾಯ್ಕನ ಮಗ ಗೊತ್ತಾನಾಯ್ಕನಿಗೆ ಸಮಾಜದೊಳಗೆ ಮಾರ್ಯದೆ ಇಲ್ಲದಂತೆ ಮಾಡುವ ಪ್ರಯತ್ನ ನೆಡೆದಿತ್ತು. ಅದೇ ವೇಳೆಗೆ ಸರಿಯಾಗಿ ಪಂಚಾಯ್ತಿ ಎಲೆಕ್ಷನ್ ಬಂದು ಬಿಟ್ಟಿತ್ತು. ಮಾಜಿ ಛೇರ್ಮನ್ ತೆಂಬ್ರಳ್ಳಿ ಮರಿಸಿದ್ದಯ್ಯನು ನಾಮಪತ್ರ ಕೊಡುವುದಕ್ಕಾಗಿ ಖುದ್ದಾಗಿ ಗೊತ್ತಾನಾಯ್ಕನನ್ನು ಕರೆಯುವುದಕ್ಕೆ ಆಲೆಮನೆಗೆ ಬಂದಿದನು. ಈ ವಿಷಯವನ್ನು ತಿಳಿದ ಸೋನ್ಯ ಮತ್ತು ಅವನ ಗೆಳೆಯ ಪುಜಾರಿಪಾಪೇಸಿ ಮಾಡಿದ ಅಪರಾಧವೆಂದರೆ "ನಿನ್ನೆ ಮನ್ನೆ ಈ ಊರಿಗೆ ಬಂದೋನು ಅನ್ನೊದು. ನಮ್ಮಪ್ಪಂದಿರು-ಅಜ್ಜಂದಿರು ಅವರಪ್ಪಂದಿರು ಬಾಳಿ ಬದುಕಿದ ಊರು. ನಿನ್ನೆ ಮನ್ನೆ ಬಂದೋನ ಕೈಯಾಗ ಅಧಿಕಾರ ಕೊಟ್ರ ಏನಾದೀತಂತ ಪೂಜರಿಪಾಪುಗನಾಯ್ಕ ಗೊಣಗಿದ". ಈ ಮಾತಿನಲ್ಲಿ ಗೊತ್ತಾನಾಯ್ಕನು ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದನ್ನು ತಡೆಯಲು ಅವನ ಮೂಲಸ್ಥಾನವನ್ನು ಕುರಿತು ಅವಹೇಳನ ಮಾಡಿರುವುದು ಕಂಡು ಬಂದಿದೆ.

ಚುನಾವಣೆಗೆ ಸ್ಪರ್ಧಿಸದಂತೆ ತಡೆಯಲು ಅವನ ವಿರೋಧಿ ಪಾಳೆಯಾದಾಗ ಗಾಢವಾದ ಚರ್ಚೆ ನಡೆದಿತ್ತು. ಅವನನ್ನು ಗೆಲ್ಲಿಸಿದರೆ ನಿಮ್ಮ ಹೆಂಡತಿಯರು ಅವನ ಹತ್ತಿರ ಹೋಗುವುದನ್ನು ಶುರು ಮಾಡುತ್ತಾರೆ. ಅವನ ಮಕ್ಕಳ ಉಪಟಳ ಜಾಸ್ತಿ ಆಗುತ್ತದೆ. ಈ ರೀತಿಯಾಗಿ ಅಪಪ್ರಚಾರ ಮಾಡುತ್ತಿದ್ದರು. ಈ ಎಲ್ಲ ಅಪಚಾರದ ಹಿಂದೆ ಗೊತ್ತಾನಾಯ್ಕನ ಮೇಲಿರುವ ಶೂದ್ರತೆಯ ಪರಿಕಲ್ಪನೆಯೇ ಮೂಲ ಕಾರಣವಾಗಿದೆ. 'ನಿನ್ನೆ ಮನ್ನೆ ಬಂದೋನ ಕೈಯಾಗ ಅಧಿಕಾರ ಕೊಟ್ರ ಏನಾದೀತಂತ' ಎಂಬ ಮಾತಿನಲ್ಲಿ ಶೋಷಣೆ ಮಾಡಿರುವುದು ಸ್ಪಷ್ಟವಾಗಿದೆ. ಈ ಶೋಷಣೆಗೆ ಮುಂದೊಂದು ದಿನ ಸಂಘರ್ಷವು ಕಾಲ ಕಳೆದಂತೆ ಅನಿವಾರ್ಯವಾಗಿ ನಡೆದು ಬಂದಿತು.

ಲೇಖಕರು ರಚಿಸಿರುವ 'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಯೊಳಗೆ ಶೋಷಣೆಗಳು ಅಧಿಕವಾಗಿಲ್ಲ. ಈ ಕಾದಂಬರಿಯ ವಸ್ತು ಲಮಾಣಿ ಹೆಣ್ಣು ಮಗಳ ಶೋಕದ ಕಥೆಯಾಗಿರುವುದರಿಂದ ಧಾರ್ಮಿಕ ಮೂಢನಂಬಿಕೆಗಳಿಗೆ ನಡೆದ ಶೋಷಣೆ ಹೆಚ್ಚಾಗಿದೆ. ಆದರೂ ಈ ಕಾದಂಬರಿಯೊಳಗೆ ಅಲ್ಲೊಂದು-ಇಲ್ಲೊಂದು ಶೋಷಣೆಗಳಿಗೆ

ಸಂಘರ್ಷದ ಹಂಬಲವಿದ್ದರೂ ಎಲ್ಲಿಯೂ ಪ್ರತಿಪಾದನೆ ಆಗಿಲ್ಲ. ಬದಲಾಗಿ ಆ ನೋವನ್ನು ತಮ್ಮೊಳಗೆ ಉಂಡು ಶಪಿಸುತ್ತಾ ಮರೆತು ಬಿಡುವ ವಾತಾವರಣವಿದೆ. "ಏಯ್, ಆ ಸಂತುನ ಹುಡುಗರ ಉಪಟಳ ತಾಂಡದಾಗ ಭಾಳ ಆಗ್ಯೆತಿ ಬಿಡು. ಮಂಗುನ ಹುಡುಗಿಯರೇ ಅವರನ್ನ ಹದ್ದು ಬಸ್ತಿಗ ತರಬೇಕೆ ವಿನಃ ಯಾವನ ಕೈಯಿಂದೂ ಆಗಲ್ಲ. ಆ ಮಗ ಮಂಗು ಗೊಟಕ್ ಅನಬೇಕು ಮಜ ಇರುತ್ತೆ". ಈ ಮಾತಿನಲ್ಲಿ ತಾಂಡದ ಜನರು ಸಂತು ಮತ್ತು ಅವನ ಮಕ್ಕಳ ಮೇಲ್ಲಿದ್ದ ಅಸೂಯೆಯನ್ನು ಶೋಷಣೆಯ ಮೂಲಕ ಹೊರಹಾಕಿದ್ದಾಗಿದೆ.

ಊರಿನವರು ಮಾತು ಕೇಳಿ ಸ್ವಂತ ಅಣ್ಣ ಸಂತುನಾಯ್ಕನ ಮೇಲೆ ಜಗಳಕ್ಕೆ ಬಿದ್ದಿದ ಮಂಗ್ಲ್ಯಾನಾಯ್ಕ. ಇವನ ಅಸಮಾಧಾನಕ್ಕೆ ಕಾರಣ ಸಂತುನಿಗೆ ಗಂಡು ಮಕ್ಕಳು ಇದ್ದುದರಿಂದ ದುಡಿಮೆ ಮಾಡಿ ಹೊಲ, ಮನೆ ಖರೀದಿ ಮಾಡಿದ್ದರು ಮಾತ್ರವಲ್ಲ ತಾಂಡದ ಜನರಿಗಿಂತ ಶ್ರಿಮಂತರಾಗಿದ್ದರು. ಈ ಏಳಿಗೆಯನ್ನು ಸಹಿಸಲಾಗದ ತಾಂಡದ ಜನ ಅದರಲ್ಲೂ ಮಂಗ್ಲ್ಯಾನ ಎರಡನೆ ಹೆಂಡತಿಯ ದೂರದ ಸಂಬಂಧಿ ಪೂರ್‍ಯನು ಸಂತುವಿನ ಮೇಲೆ ಮಂಗ್ಲ್ಯಾನನ್ನು ಎತ್ತಿ ಕಟ್ಟಿದನು. ಇದರಿಂದಾಗಿ ಅಣ್ಣ-ತಮ್ಮಂದಿರಲ್ಲಿ ದ್ವೇಷ ಮೂಡಿ ಒಳಜಗಳಗಳು ದಿನಸಿತ್ಯ ನಡೆಯುತ್ತಿದ್ದವು. ಇದರಿಂದ ಬೇಸತ್ತಿದ್ದ ಸಂತು ಮಕ್ಕಳಿಂದ ಮಂಗ್ಲ್ಯಾನಿಗೆ ಪ್ರಜ್ಞೆ ಹೋಗೋ ಹಾಗೇ ಶಿಕ್ಷಿಸಿದನು. ಈ ಘಟನೆಯನ್ನು ತಮ್ಮ ಒಳಪ್ರತಿಷ್ಠೆಯಾಗಿ ತೆಗೆದುಕೊಂಡ ತಾಂಡದ ಜನರು ಸಂತು ಮತ್ತು ಅವನ ಮಕ್ಕಳನ್ನು ದುರಂಕಾರಿಗಳೆಂಬಂತೆ ಶೋಷಣೆ ಮಾಡುವುದರ ಮೂಲಕ ತಾಂಡದೊಳಗೆ ತುಚ್ಛವಾಗಿ ಕಾಣಲಾರಂಭಿಸಿದರು.

ಒಬ್ಬ ಲಂಬಾಣಿ ಪುರುಷನಿಗೆ ಸರಿಸಮಾನವಾಗಿ ದುಡಿಮೆ ಮಾಡುತ್ತಿದ್ದಳು ಚಿಮ್ನಿ. ಇಂತ ಹುಡುಗಿಗೆ ಹೃದಯದೊಳಗೆ ರಂಧ್ರ ಇರುವ ಕಾಯಿಲೆ ಬಂದ ಮೇಲೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಅಸ್ವಾಸ್ಥಳಾಗಿದ್ದಳು. ದಿನದಿಂದ ದಿನಕ್ಕೆ ಮೈಯಲ್ಲಿದ್ದ ಶಕ್ತಿ, ದುಡಿಮೆಯ ಉತ್ಸಾಹ ಕ್ಷಿಣೀಸುತ್ತಿರುವುದನ್ನು ಗಮನಿಸಿದ ತಾಂಡದ ಜನರು ತಮ್ಮೊಳಗೆಯೇ ನಾನಾ ನಮೂನೆಯಲ್ಲಿ ಆಲೋಚಣೆ ಮಾಡತೊಡಗಿದರು. ಈ ವೇಳೆಗೆ ಮನೆಯ ಹಿರಿಯಳಾಗಿದ್ದ ಚಿಮ್ನಿಗೆ ಮದುವೆ ಮಾಡುವ ಆಲೋಚನೆ ಮಾಡಿದ್ದು ಅವಳ ದೇಹಸ್ಥಿತಿಯಲ್ಲಾದ ಬದಲಾಣೆಯಿಂದ ನಿಂತುಹೋಗುವಂತಾಯಿತ್ತು. ಈ ಘಟನೆಗೆ ಊರ ಜನರು ಏಕಾಏಕೀ ಮಾತನಾಡಿದ್ದು ಎಂದರೆ "ದೊಡ್ಡವಳೆ ಹಿಂಗೆ ಸಣೋಳು ಹ್ಯಾಂಗೋ ಅವರ ಮನಿ ಸವಾಸನೆ ಬ್ಯಾಡಂತ ಅವರ ಬ್ಯಾರೆ ಕಡೀಗ ಹೆಣ್ಣು ನೋಡಿ ಮದ್ವಿ ಮಾಡ್ಕಂಡಿದ್ರು". ಈ ಮಾತಿನಲ್ಲಿ ಚಿಮ್ನಿಯ ಕಾಯಿಲೆಯ ಬಗ್ಗೆ ಅರಿವಿಲ್ಲದ ಜನರು ಅವಳ ಸ್ವಭಾವವನ್ನು ತಪ್ಪಾಗಿ ಅರ್ಥೈಸಿದಲ್ಲದೇ ಅವಳ ತಂಗಿಯ ನಡುವಳಿಕೆಗೆ ಹೋಲಿಕೆ ಮಾಡಿ ನೋಡಿದ ಸಂದರ್ಭವಾಗಿದೆ.

ಚಿಮ್ನಿಯ ಅನಾರೋಗ್ಯದ ಕಾರಣ ಆಕೆಯ ಚಿಕ್ಕಪ್ಪ ಅವಳ ಬದಲಾಗಿ ರಾಮಿಯನ್ನು ಮದುವೆ ಮಾಡಿಕೊಳ್ಳುವಂತೆ ತಿಳಿಸುತ್ತಾನೆ. ಅಕ್ಕ ಚಿಮ್ನಿಯನ್ನು ನೋಡಲು ಬಂದವರಿಗೆ ತಂಗಿ ರಾಮಿಯನ್ನು ತೋರಿಸಿ ಮದುವೆಗೆ ಒತ್ತಾಯಿಸಿದ್ದು ಹಲವಾರು ಅನುಮಾನಗಳಿಗೆ ದಾರಿ ತೋರಿಸುತ್ತದೆ. ಆದರೆ ಚಿಮ್ನಿಗೆ ಒದಗಿರುವ ರೋಗದ ಗುಟ್ಟು ತಾಂಡದಲ್ಲಿರುವವರಿಗೆ ಗೊತ್ತಿಲ್ಲ. ಅಕ್ಕನ ರೋಗದ ನೆಪದಿಂದ ಒಂದು ಕುಟುಂಬವನ್ನೇ ಅನುಮಾನದಿಂದ ನೋಡಿದಲ್ಲದೇ ಕೊನೆಗೂ ಮದುವೆಯಾಗದೇ ಬೇರೆ ಕಡೆ ಮದುವೆಯಾಗಿದ್ದು ಶೋಷಣೆಯಾಗಿ ಕಂಡುಬಂದಿದೆ. ಆದರೆ ಸಮಾಜದಲ್ಲಿ ಇಂತಹ ಶೋಷಣೆಗಳಿಗೆ ಸಂಘರ್ಷದ ವಾತಾವರಣವಿರುವುದಿಲ್ಲ ಬದಲಾಗಿ ಮೌನ ರೋಧನದ ಹತಾಶೆಯ ಭಾವ ಇರುತ್ತದೆ. ಲೇಖಕರು ಕಾದಂಬರಿಗಳ ವಸ್ತುವೂ ಬೇರೆ-ಬೇರೆಯಾಗಿದ್ದರೂ ಶೋಷಣೆಯ ಕೇಂದ್ರ ಬಿಂದುಗಳು ಲಂಬಾಣಿಗರೇ ಆಗಿದ್ದಾರೆ. ಈ ಸಮಾಜದೊಳಗಿರುವ ಶೋಷಣೆಗೆ ಲಂಬಾಣಿಗರು ಮೌನವಾಗಿಯೇ ಸಂಘರ್ಷ ಮಾಡಿದ್ದಾರೆ. ಅಂದರೆ ಭಯ, ಆತಂಕದ ಕಾರಣದಿಂದಾಗಿ ಉಕ್ಕಿ ಬಂದ ರೋಷವನ್ನಾ ತಮ್ಮೊಳಗೆ ಅದಿಮಿಟ್ಟುಕೊಂಡು ಶಾಂತಭಾವದಿಂದಲೇ ವರ್ತಿಸಿರುವುದು ಕಾದಂಬರಿಯಲ್ಲಿದೆ.

ಲೇಖಕರ 'ಗುಡ್ಡಜ್ಜ' ಸಣ್ಣಕತೆ ಸಂಕಲನದ ಒಳಗೆ ತಾಂಡದ ಶೋಷಣೆ, ಪುರುಷರ ಶೋಷಣೆಗೆ, ಜಾತಿಶೋಷಣೆಯ ಉಲ್ಲೇಕಗಳು ವಿರಳವಾಗಿವೆ. ಮಹಿಳಾ ಶೋಷಣೆ, ಗ್ರಾಮೀಣಬದುಕು ಈ ಹಿನ್ನೆಲೆಯ ಕಥೆಗಳು ಹೆಚ್ಚಾಗಿ ವ್ಯಾಪ್ತಿಸಿಕೊಂಡಿರುವುದರಿಂದ ಶೋಷಣೆಗಳು ಕಡಿಮೆ ಇವೆ. "ಶಿವಲೀಲಾ ಅಂಬೋ ಹುಡ್ಗಿ" ಕಥೆಯೊಳಗೆ ಲಂಬಾಣಿ ತಾಂಡಕ್ಕೆ ಸೇರಿದ ಅಡೆವಪ್ಪ ತನ್ನ ಕಾಲೇಜಿನ ಮೇಲ್ಜಾತಿ ಯುವತಿಯರಿಗೆ ತಮ್ಮ ಜಾತಿಯ ಯುವತಿಯರನ್ನು ಹೋಲಿಕೆ ಮಾಡುವ ಮೂಲಕ ಪರೋಕ್ಷವಾಗಿ ಸ್ವಸಮುದಾಯ ಶೋಷಣೆ ಮಾಡಿರುವುದು ವ್ಯಕ್ತವಾಗಿದೆ. "ಹಾಳಾದ ದೇವ್ರು, ಹುಡಗ್ಯಾರಿಗ ಒಂದ ನಮೂನಿ ಬಣ್ಣ, ಒಂದ ನಮೂನಿ ಮಕ, ಮೂಗು ಕೊಟ್ಟಿರ್ತಾನ. ಈ ಪುಡ್ರಿಗ ಒಂದು ಥರಾ, ಅದ್ರಾಗೂ ನಮ್ಮ ಮಂದಿಯೊಳಗಂತು ಮಾರಿ ಅನ್ನೋದು ಎಕ್ಕಡದ ಅಟ್ಟಿ ಇದ್ದಂಗ ಇರ್ತತೆ ಅಂದ್ಕೊಂತ". ಈ ಮಾತಿನಲ್ಲಿ ಹುಡುಗ-ಹುಡುಗಿಯರ ನಡುವಿನ ದೈಹಿಕ ರಚನೆಯ ವ್ಯತ್ಯಾಸದ ಬಗ್ಗೆ ಅಡೆವೆಪ್ಪ ಅಸಮಾಧಾನ ವ್ಯಕ್ತಪಡಿಸುವ ಸಂದರ್ಭವಾಗಿದೆ.

ಕರ್ನಾಟಕ ಕಾಲೇಜಿನಲ್ಲಿ ಓದುವುದಕ್ಕಾಗಿ ಅಡೆವಪ್ಪ ಹರಿದು ಹೋಗಿರುವ ಬ್ಯಾಗ್ ಅನ್ನ ಯಾರಿಗೂ ಕಾಣಿಸದ ಹಾಗೇ ಮರೆ ಮಾಚಿಕೊಂಡು ಆರ್ಟ್ಸ್ ಓದುವುದಕ್ಕೆ ದಾವನಗೇರಿ ಬಿಟ್ಟು ಹರಪನಹಳ್ಳಿಗೆ ಬಂದಿದ್ದನು. ಆ ಕಾಲೇಜಿನಲ್ಲಿ ಸೈನ್ಸ್ ಓದುವ ಕೆಂಪಾಗಿರೋ ಹುಡುಗಿ ಗೀತಾಳನ್ನು ಕಂಡು ಅವಳ ಬಣ್ಣನ ತಮ್ಮ ತಾಂಡದ

ಹುಡುಗಿಯರಿಗೆ ಹೋಲಿಕೆ ಮಾಡುತ್ತಾ ಅವಹೇಳನದ ಮಾತನಾಡಿದನು. ದೇವರು ಶ್ರೀಮಂತರು, ಮೇಲ್ಜಾತಿಯವರಿಗೆ ಒಂದು ರೀತಿಯ ಬಣ್ಣ ತಳಜಾತಿಯವರಿಗೆ ಒಂದು ರೀತಿಯ ಬಣ್ಣ ಎಂದು ಅಸಮಾಧಾನಗೊಂಡು ತಮ್ಮ ಲಂಬಾಣಿ ತಾಂಡದೊಳಗೆ ಹುಡುಗಿಯರ ಮುಖ 'ಎಕ್ಕಡದ ಅಟ್ಟೆ ಇದ್ದಂಗ ಇರ್ತತೆ' ಎಂದು ಜರಿಯುವ ಮೂಲಕ ಸ್ವತಾಂಡದವರನ್ನೇ ಅವಹೇಳನ ಮಾಡಿದನು. ಇಂಥ ಘಟನೆಗಳು ಲಂಬಾಣಿ ಸಮುದಾಯಕ್ಕೆ ಅನಾವಶ್ಯಕವಾಗಿ ಬಂದ ಅವಾಂತರಗಳು ಎಂದು ಹೇಳಬಹುದು.

'ಬ್ರೆಡ್ ಬೇಕರಿ ಮತ್ತು ಅವನು' ಕಥೆಯಲ್ಲಿ ತನ್ನ ವಯಸ್ಸಿಗಿಂತ ಎರಡರಷ್ಟು ಹಿರಿಯನಾದ ವ್ಯಕ್ತಿಯನ್ನು ಮದುವೆಯಾಗಿ ಮಾನಸಿಕವಾಗಿ ಅಸ್ವಸ್ಥಗೊಂಡು ದುರಂತ ಸಾವಿಗೀಡಾದವಳ ಕಥೆ ದುರಂತವಾಗಿದೆ. ಇವಳ ಸಾವಿಗೆ ನಾನಾ ವಿಧದ ರೂಪು ಕೊಟ್ಟು ಸತ್ತವಳ ಆತ್ಮಕ್ಕೂ ಶಾಂತಿ ಇಲ್ಲದಂತೆ ಮಾಡಿದ ಶೋಷಣೆಯ ಮುಖ ಕರಾಳವಾಗಿದೆ. "ಮತ್ತಿನ್ನೇನು ಮಾಡ್ಯಾಳು? ಮುದ್ಕ ಗಂಡ ಯವನೋ ಕಾಲೇಜ ಮಾಸ್ತರಂತ. ಗುಟ್ಟಿಂದ ಬೆಟ್ಟಿ ಆಕ್ತಿದ್ಲಂತ". ಅವನಿಗೆ ತಲಿಸಿಡಿತಿರೋ ಅನುಭವ ಆಗತೊಡಗಿತು. ಆ ಮುದ್ಕ ಒಂದು ದಿನ ಇಬ್ರನ್ನೂ ಹಿಡ್ದನಂತ. ಸಹಿಸಿಕೊಳ್ಳದ ಮಳ್ಳಿ ನೇಣು ಹಾಕ್ಕೊಂಡು ಸತ್ಲಂತ". ಈ ಮಾತಿನಲ್ಲಿ ಹುಡುಗಿಯು ಕಾಲೇಜು ಅಧ್ಯಾಪಕನ ಜೊತೆಗೆ ಅನೈತಿಕ ಚಟುವಟಿಕೆಯಲ್ಲಿ ಭಾಗಿಯಾಗಿದ್ದಳೆಂದು ಶೋಷಣೆ ಮಾಡುತ್ತಿರುವುದಾಗಿದೆ.

ಧಾರವಾಡದಲ್ಲಿದ್ದ ಬೇಕರಿಯೊಂದರಲ್ಲಿ ಮುದುಕ ಮತ್ತು ಹದಿಹರೆಯದ ವಯಸ್ಸಿನ ಹುಡುಗಿ ದಿನನಿತ್ಯ ವ್ಯಾಪಾರದಲ್ಲಿ ತೊಡಗಿದರು. ಆ ಬೇಕರಿಗೆ ಕಥೆಯ ನಾಯಕ ಪ್ರೊಫೆಸರ್ ಶಂಕರ್‌ಸಿಂಗ್ ಟೀ, ಕಾಫಿಗೆ ಹೋಗಿ ಬರುತ್ತಿದ್ದ. ಒಂದು ದಿನ ಆ ಹುಡುಗಿಯನ್ನು ವಿಚಾರಿಸಿದಾಗ ಆತ ಅವಳ ಗಂಡ ಎಂಬುದು ಖಾತ್ರಿಯಾಗಿ ಮಾನಸಿಕವಾಗಿ ನೊಂದುಕೊಂಡನು. ತಳಸಮುದಾಯದಲ್ಲಿ ಬಡತನದಿಂದ ಎಳೆಯ ವಯಸ್ಸಿನ ಹುಡುಗಿಯರು ಅನುಭವಿಸುವ ಕಷ್ಟ ಕಂಡು ಮರುಗಿದನು. ಆದರೆ ಒಂದೆರಡು ದಿನಗಳ ನಂತರ ಬೇಕರಿ ಕಡೆ ಹೋದಾಗ ಬೇಕರಿ ಮುಚ್ಚಿತ್ತು. ಪಕ್ಕದಲ್ಲೇ ಇದ್ದ ಟೀ ಅಂಗಡಿಯಲ್ಲಿ ಟೀ ಕುಡಿಯುವಾಗ ಅಪರಿಚತ ವ್ಯಕ್ತಿಯೊಬ್ಬ ಬೇಕರಿ ಹುಡುಗಿಯ ನಡವಳಿಕೆಯ ಬಗ್ಗೆ ಇಲ್ಲ ಸಲ್ಲದ ಆರೋಪ ಮಾಡಿ ಶೋಷಣೆ ಮಾಡುತ್ತಿದ್ದನು. ಸಮಾಜದೊಳಗೆ ತಳಸಮುದಾಯದವರ ಮೇಲೆ ನಡೆಯುತ್ತಿರುವ ಶೋಷಣೆಗೆ ನಿಖರವಾದ ಕಾರಣಬೇಕಿಲ್ಲ ಅವರನ್ನು ನಾನಾ ವಿಧಾನಗಳಿಂದಲ್ಲೂ ಶೋಷಣೆ ಮಾಡಬಹುದು ಎಂಬುದಕ್ಕೆ ಈ ಸಂದರ್ಭ ಒಂದು ನಿದರ್ಶನವಾಗಿದೆ.

ಲೇಖಕರ 'ಕೊಂಯ್ಯ ಮತ್ತು ಧೋತ್ರ' ಸಂಕಲನದ 'ಮಂಚವೆಂಬೊ ಮಾಯಾ ಕನ್ನಡಿ' ಎಂಬ ಕಥೆಯಲ್ಲಿ ಪಿಕ್ಲಿಯು ಕೇವಲ ಒಂದು ಮಂಚದ ಕಾರಣಕ್ಕಾಗಿ ತನ್ನ

ಮತ್ತು ಸಾಬಿಯ ನಡುವಿನ ಅನೈತಿಕ ಚಟುವಟಿಕೆಯನ್ನು ಊರ ಮುಂದೆ ಹರಾಜು ಮಾಡಿಸಿಕೊಂಡು ಶೋಷಣೆಗೆ ಗುರಿಯಾದ ಕಥೆ ವಿರ್ಪಯಾಸವಾಗಿದೆ. "ಹೋಗೆ ಚಿನಾಲಿ ರಂಡಿ, ನೀ ಏನ ಮಾರಾಣಿ ಅಲ್ಲ, ಸಾಬನ ದೌಲತ್ತಿನ ಮ್ಯಾಲ ಮರಿತಿದಿ ಹೋಗ ಅಂತ ದಿಂಬಮ್ಮಳ ಪಿಕ್ಲಿ ಇತಿಹಾಸಕ್ಕೂ ಬಾಯಿ ಹಾಕಿದ್ಲು" ಈ ಮಾತಿನಲ್ಲಿ ದಿಂಬಮ್ಮ ಮಂಚದ ವಿಷಯಕ್ಕಾಗಿ ಪೀಕ್ಲಿಯ ನಡುವಳಿಕೆಯನ್ನು ಶೋಷಣೆಯ ಮನದಂಡದಲ್ಲಿ ಅಳೆದಿರುವುದು ಕಂಡು ಬಂದಿದೆ.

ದಿಂಬಮ್ಮಳ ಮಗಳ ಮದುವೆಗೆ ಪೀಕ್ಲಿಯ ಮಂಚ ಬಹುಮುಖ್ಯವಾಗಿತ್ತು. ಆದ್ದರಿಂದ ಮಂಚ ಕೇಳಲು ಪೀಕ್ಲಿ ಮನೆಗೆ ಬಂದಾಗ ದಿಂಬಮ್ಮನ ಮೇಲಿದ್ದ ಹಳೆ ವೈಷಮ್ಯದಿಂದಾಗಿ ಮಂಚ ಕೊಡಲು ನಿರಾಕರಿಸಿದಳು. ಈ ಸಿಟ್ಟು ಅವಳ ಶೋಷಣೆಗೆ ಪರೋಕ್ಷವಾಗಿ ಕಾರಣವಾಯಿತು. ಮಂಚ ಕೊಡಲು ನಿರಾಕರಿಸಿದ ಪೀಕ್ಲಿಯು ಸಾಬಿಯೊಂದಿಗೆ ಇಟ್ಟುಕೊಂಡಿದ್ದ ಅನೈತಿಕ ಚಟುವಟಿಕೆಯನ್ನು ಎತ್ತಾಡುವ ಮೂಲಕ ಪೀಕ್ಲಿಯನ್ನು ಶೋಷಣೆಗೆ ಗುರಿಪಡಿಸಿದಳು. ಆದರೆ ಪೀಕ್ಲಿ ಇವಳ ಮಾತಿಗೆ ತಿರುಗೇಟು ನೀಡುತ್ತಾ 'ಲೇ ನಿನಗ ತೋರಿಸ್ತೀನಿ ನನ್ನ ದೌಲತ್ತು ಬಾರೆ ನನ ಸೌತಿ' ಎಂದು ಬೈಯುವ ಮೂಲಕ ದಿಂಬಮ್ಮ ವಿರುದ್ಧ ಸಂಘರ್ಷಕ್ಕಿಳಿದಳು. ಈ ರೀತಿಯ ಘಟನೆಗಳು ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಆ ಭಾಗದಲ್ಲಿ ನಡೆಯುವ ಶೋಷಣೆಗೆ ಕೆಲವೊಂದು ಕಡೆ ಸಂಘರ್ಷ ವಿಕೋಪವಾಗಿರುತ್ತದೆ. ಮತ್ತೊಂದು ಕಡೆ ಮೌನವಾಗಿ ತಟಸ್ಥವಾಗಿರುತ್ತದೆ.

'ಜೋಗ್ಯಾ ಮತ್ತು ಬೆದರು' ಕಥೆಯಲ್ಲಿ ಹಟ್ಟಿ ಕೊಂಬನ ಮಗಳು ಕಣ್ಣೀಲಿ ತೆಂಗಿನ ತೋಟಕ್ಕೆ ಹೋಗಿದ್ದ ಅವಳವ್ವನಿಗೆ ಮಧ್ಯಾಹ್ನದ ರೊಟ್ಟಿ ಕೊಟ್ಟು ಬರುವುದಕ್ಕೆ ಖಂಡೇಗೌಡ್ರ ತೋಟಕ್ಕೆ ಹೋಗಿದ್ದಳು. ವಾಪಾಸ್ ಬರುವಾಗ ಒಂದು ಕಾಯಿ ತಗೆದುಕೊಂಡು ಅಂಗಿಯೊಳಗೆ ಬಚ್ಚಿಟ್ಟುಕೊಳ್ಳುವಾಗ ಗೌಡರ ಸೊಸೆ ಮಾಯಕ್ಕನಿಗೆ ಸಿಕ್ಕಿಕೊಂಡಳು. ಸಿಕ್ಕ ಕಣ್ಣೀಲಿನ ಗೌಡರ ಮುಂದೆ ತಂದಾಗ "ಗೌಡ ಹುಡುಗಿ ಅನ್ನೊ ಖಬರಿಲ್ಲದೆ ಮೂರ ನಾಮ ಹಚ್ಚಿಕೊಳ್ಳಾಗ ಎಕ್ಕಡದ ಹಾರ ಹಾಕಿ ಊರಾಗ ಮೆರವಣಿಗೆ ಮಾಡಿದ್ದ. ಇಡೀ ಊರಿಗ ಊರೆ ಗಾಬಾಗಿ ಬಾಯಿ ಮುಚ್ಕೊಂಡು ನೋಡ್ತಿದ್ರು" ಈ ಮಾತಿನಲ್ಲಿ ಮೇಲ್ಜಾತಿಯ ಊರಗೌಡನು ಹುಡುಗಿ ಅನ್ನೊ ಕನಿಕರವಿಲ್ಲದೆ ಕ್ರೂರ ಶಿಕ್ಷೆಗೆ ಗುರಿಪಡಸಿ ಶೋಷಣೆ ಮಾಡುತ್ತಿದ್ದರೂ ಊರ ಜನರು ಮೂಕರಾಗಿದುದ್ದದನ್ನು ತಿಳಿಸುತ್ತದೆ.

ಮೇಲ್ಜಾತಿಯ ಗೌಡರು ತಳಸಮುದಾಯದವರಿಗೆ ಸಣ್ಣ-ಪುಟ್ಟ ಆರೋಪಕ್ಕೆ ಕ್ರೂರ ಶಿಕ್ಷೆ ನೀಡಿ ತಮ್ಮ ಜಾತಿಯ ದರ್ಪ ಮೆರೆಯುತ್ತಿದ್ದದು ಅಂದಿನ ಕಾಲದಲ್ಲಿ ನಿರಂತರವಾಗಿತ್ತು. ಕಣ್ಣೀಲಿ ತೆಂಗಿನ ಕಾಯಿ ಕದ್ದುದಕ್ಕೆ ಚಪ್ಪಲಿ ಹಾರ ಹಾಕಬೇಕಾದ ಅವಶ್ಯಕತೆ ಇರಲಿಲ್ಲ. ಆದರೆ ಗೌಡರನ್ನು ಕಂಡರೆ ತಳಸಮುದಾಯದಲ್ಲಿ ಭಯದ

ವಾತಾವರಣ ಸೃಷ್ಟಿಸುವುದಕ್ಕಾಗಿ ಈ ರೀತಿಯ ಪ್ರಯೋಗಗಳು ದಲಿತರ ಮೇಲೆ ನಿರಂತರವಾಗಿದ್ದವು. ಇಂತಹ ಶೋಷಣೆಯ ವಿರುದ್ಧ ತಿರುಗಿ ಬೀಳುವ ಚೈತನ್ಯ ತಳಸಮುದಾಯದವರಿರಲಿಲ್ಲ. ಏಕೆಂದರೆ ಇವರ ಆದಾಯದ ಮೂಲಗಳೆಂದರೇ ಗೌಡರ ಮನೆ, ತೋಟ, ಹೊಲ, ಗದ್ದೆಗಳಾಗಿರುವುದರಿಂದ ಸಂಘರ್ಷ ಮರೀಚಿಕೆಯಾಗಿ ಉಳಿದೀತು.

'ಕಲ್ಲೇ ಕಲ್ಲೇ ಕಥೆ ಹೇಳು' ಸಂಕಲನದಲ್ಲಿನ 'ಹಳೆತಲಿಗಳು' ಕಥೆಯೊಳಗೆ ತಳಸಮುದಾಯದವರ ಬದುಕಿನ ಮುಖವನ್ನು ಪರಿಚಯಿಸುತ್ತಾ ಹೆಂಡತಿ ಹೇಗಾದ್ರೂ ದುಡಿದು ಕೊಂಡು ಬರಲಿ ಅವಳನ್ನ ಪುಸಲಾಯಿಸಿ ಇಲ್ಲವೇ ಹೊಡೆದು ಹೆದರಿಸಿ ಕಾಸು ಕಿತ್ತಿಕೊಂಡು ಇಸ್ಪೀಟು. ಅಡ್ಡೆಗಳಾದ ಹನ್ನಪ್ಪನ ಗುಡಿ, ಸೇವಾಭಾಯನ ಮಟ್ಟೋ ಶಾಲೆ ಕಟ್ಟೆಗೆ ಹೋಗಿ ಆಡುತ್ತಿದ್ದರು. ಕಾಸು ಇದ್ರೆ ಆಡುತ್ತಿದ್ರೂ ಇಲ್ಲವಾದರೆ ನೋಡುತ್ತಾ ಕಾಲಹರಣ ಮಾಡುತ್ತಿದ್ರೇ ಹೊರತು ಹೊಲದ ಕೆಲಸ ಮಾಡುತ್ತಿರಲಿಲ್ಲ. ಸಾರಾಯಿ ಕುಡಿಯುವುದಕ್ಕೆ ಹೊಲಕ್ಕೆ ರಾಗಿ, ಜೋಳ ಹಾಕುತ್ತೀವಿ ಎಂದು ಸಾಲ ಪಡೆದು ಮಜಾ ಮಡುತ್ತಿದ್ದರು. ಸಾಲ ತೀರಿಸದೆ ಇದ್ದಾಗ ಸಾವುಕಾರ "ಲೇ ನಿನ್ನವ್ವ ಬೇವರ್ಸಿ ಸೂಳಿಮಗನ. ತಗೊಂಡಾಗ ಎಂಥ ಚೆಂದದ ಗಿಲಿಟ್ ಮಾತಾಡ್ದೆ. ಈಗ ನಿನ್ನ ಹೇಣ್ತೀನ ಯಾವನಿಗಾರು ಅಡ ಇಟ್ಟು ದುಡ್ಡ ಕಟ್ಟು". ಈ ಮಾತಿನಲ್ಲಿ ಸಾಲ ಪಡೆದ ದಲಿತರನ್ನು ಸಾಲಕೊಟ್ಟ ಸಾವುಕಾರರು ಶೋಷಣೆ ಮಾಡುತ್ತಿದ್ದ ಬಗೆಯನ್ನು ಪರಿಚಯಿಸುತ್ತದೆ.

ತಳಸಮುದಾಯದವರಿಗೆ ಶೋಕಿ ಎನ್ನುವುದು ಹುಟ್ಟು ಗುಣವಾಗಿತ್ತು. ಕೈಯಲ್ಲಿ ದುಡ್ಡು ಇಲ್ಲದೇ ಇದ್ರು ತಮ್ಮ ದುಷ್ಚಟಗಳಿಗೇನು ಕಡಿಮೆ ಇರಲಿಲ್ಲ. ಈ ದುಷ್ಚಟಗಳಿಗೆ ದುಡಿಮೆ ಮಾಡಿದ ಹೆಂಡತಿಯ ಹತ್ತಿರ ಕಿತ್ತು ತರುತ್ತಿದ್ದರೂ ಇಲ್ಲದೇ ಊರ ಸಾವುಕಾರರ ಹತ್ತಿರ ಸುಳ್ಳು ಹೇಳಿ ಸಾಲ ಮಾಡುತ್ತಿದ್ದರು. ಸಾಲ ಹಿಂದಿರುಗಿಸಲಾಗದೇ ಕದ್ದು ಮುಚ್ಚಿ ಓಡಾಡುತ್ತಿದ್ದರೂ ಸಾವುಕಾರರಿಗೆ ನೇರವಾಗಿ ಸಿಕ್ಕಿ ಬಿದ್ದಾಗ ಸಾವುಕಾರ 'ನಿನ್ನ ಹೇಣ್ತಿನ ಯಾವನಿಗಾರು ಅಡಇಟ್ಟು ದುಡ್ಡಕಟ್ಟು' ಎಂದು ಅಪಮಾನ ಮಾಡುತ್ತಿದ್ದನು. ಈ ಮಾತಿಗೆ ವಿರೋಧ ವ್ಯಕ್ತಪಡಿಸುವ ಹಾಗೇ ಇರಲಿಲ್ಲ ಕಾರಣ ದಲಿತರಿಗೆ ತಮ್ಮ ತಪ್ಪಿನ ಅರಿವಿತು. ಹೀಗೆ ಸಾವುಕರರು, ಮೇಲ್ಜಾತಿ ಜನರು ನಾನಾ ವಿಧಾನಗಳಿಂದ ತಳಜಾತಿಯವರನ್ನು ಶೋಷಣೆ ಮಾಡುತ್ತಿದ್ದರು.

'ಹೋರಾಟದ ಕೊನೆಗೊಂದು ದಿನ' ಕಥೆಯಲ್ಲಿ ಭೀಮ್ಲ ತನ್ನ ಭೂಮಿಯನ್ನು ಮರಳಿ ಕೊಡುವಂತೆ ಸಾವುಕಾರ ಗೌಡನನ್ನು ಕೇಳಿದನು. ಭೀಮ್ಲ ಒಬ್ಬ ತಳಸಮುದಾಯದ ಬಡವ ಹಾಗೂ ನಿರ್ಗತಿಕ ತನ್ನ ಎರಡು ತುಂಡು ಭೂಮಿಯೊಳಗೆ ಬದುಕು ಕಟ್ಟಿಕೊಳ್ಳುವ ತವಕದಿಂದಿದ್ದನು. ಆ ಕಾರಣದಿಂದಾಗ ಭೀಮ್ಲ ದೃಢ ನಿರ್ಧಾರ ಮಾಡಿದವನಂತೆ

ಗೌಡನ ಮುಂದೆ ನಿಂತು ತನ್ನ ಭೂಮಿಯನ್ನು ಕೇಳಿದಾಗ ಗೌಡ ಹೇಳಿದ್ದು "ನಿಮ್ಮಪ್ಪ ಹಿಂದೆ ನಮ್ಮಪ್ಪನ ಹತ್ರ ಸಾಲ ತಗೊಂಡಾನ ಅದಕ್ಕ ನಾ ಹೊಲ ಹಾಕೊಂಡೀನಿ" ಈ ಮಾತಿನಲ್ಲಿ ಊರಗೌಡರು ತಳಸಮುದಾಯವರಿಗೆ ಜಮೀನಿನ ವಿಚಾರವಾಗಿ ಮಾಡುತ್ತಿದ್ದ ಶೋಷಣೆಯನ್ನು ತಿಳಿಸುತ್ತದೆ.

ತಾಂಡದೊಳಗೆ ತಲ-ತಲಾಂತರಗಳಿಂದಲೂ ಗೌಡರ ಶೋಷಣೆ ನಡೆಯುತ್ತಿತ್ತು ತೀರಾ ಕಡು ಬಡವನನಾಗಿದ್ದ ಭೀಮ್ಲ ನೆರೆಹೊರೆಯವರ ಸಹವಾಸದಿಂದ ಜಮೀನಿನಲ್ಲಿ ದುಡಿಯುವ ಕನಸು ಕಂಡನು. ಈ ಕನಸು ನನಸಾಗಿಸಲು ತನ್ನ ಜಮೀನನ್ನು ಪಡೆಯಲು ನಿರ್ಧರಿಸಿದಾಗ ತಮ್ಮ ಸುಪರ್ದಿಗೆ ಒಳಪಡಿಸಿಕೊಂಡಿದ ಗೌಡನನ್ನು ಕೇಳಿದಾಗ ಗೌಡನು 'ನಿಮ್ಮಪ್ಪನ ಸಾಲಕ್ಕೆ ಹೊಲನ ಜಪ್ತಿ ಮಾಡಿಕೊಂಡಿದ್ದು' ಎಂದನು. ಇವರಿಗೆ ಉಳುವ ಅವಕಾಶ ನೀಡಬಾರದೆಂದು ನಿಶ್ಚಿಯಿಸಿದ ಊರಿನಗೌಡ ತಳಸಮುದಾಯದವರನ್ನು ಕೂಲಿ ಆಳುಗಳಂತೆ ನಿರಂತರವಾಗಿ ಶೋಷಣೆ ಮಾಡುವ ಗುರಿಹೊಂದಿದನು. ಆದರೆ ದೇವ್ಲ, ಪೀರಜ್ಜನ ಸಹವಾಸದಿಂದ ಗೌಡನ ವಿರುದ್ಧ ಸಂಘರ್ಷಕ್ಕಿಳಿದು ಪ್ರಾಣ ಬಿಟ್ಟನು ಭೀಮ್ಲ.

ಹೀಗೆ ಸಮಾಜದೊಳಗೆ ಇರುವ ತಳಸಮುದಾಯದವರ ಮೇಲಿನ ಶೋಷಣೆಯನ್ನು ಲೇಖಕರು ತಮ್ಮ ಕೃತಿಗಳಲ್ಲಿ ವಿವಿಧ ರೀತಿಯಲ್ಲಿ ಅಭಿವ್ಯಕ್ತ ಪಡಿಸಿರುವುದು ಉತ್ತಮವಾಗಿದೆ. ಲೇಖಕರು ಎಲ್ಲಿಯೂ ಈ ಶೋಷಣೆಗಳಿಗೆ ವಿರೋಧವಾದ ದಂಗೆ, ಪ್ರತಿಭಟನೆ, ಉಗ್ರ ಹೋರಾಟ ಮಾಡಿರುವ ಬಗ್ಗೆ ಉಲ್ಲೇಖ ಮಾಡದೇ ಇರುವುದು ಲಂಬಾಣಿಗರ ಮುಗ್ಧತೆಗೆ ಧಕ್ಕೆ ತರಬಾರದು. ಅವರು ಅಸುಳೆಯಂತೆ ಇದ್ದರು ಎಂಬುದನ್ನು ತಿಳಿಸುವುದೇ ಆಗಿದೆ. ಲೇಖಕರ ಸಣ್ಣಕತೆ ಮತ್ತು ಕಾದಂಬರಿಗಳೆರಡರಲ್ಲಿಯೂ ಶೋಷಣೆಗಳಿವೆ ಈ ಶೋಷಣೆಗಳಿಗೆ ಪೂರಕವಾದ ಸಂಘರ್ಷಗಳು ನಡೆಯದೇ ಇರುವುದು ವಿರ್ಪಯಾಸವಾಗಿದೆ.

3.4 ವರ್ಗಹೋರಾಟ

ಯಾವುದೇ ಒಂದು ವರ್ಗ ಮತ್ತೊಂದು ವರ್ಗವನ್ನು ಜಾತಿ ಸೂಚಕವಾಗಿ ಸಂಸ್ಕೃತಿ ಆಚರಣೆಯ ಬಗ್ಗೆ ಆಕ್ಷೇಪ ಅಥವಾ ಶೋಷಣೆ ಮಾಡಿದಾಗ ಅದರ ವಿರುದ್ಧ ದನಿ ಎತ್ತಿ ನ್ಯಾಯ ಸಮ್ಮತ ನಿರ್ಣಯ ಪಡೆಯುವ ಒಂದು ವ್ಯವಸ್ಥೆಗೆ 'ವರ್ಗಹೋರಾಟ' ಎಂದು ಕರೆಯುತ್ತಾರೆ. ಇಂತಹ ಹೋರಾಟಗಳು ಸಮಾಜದೊಳಗೆ, ತಾಂಡದೊಳಗೆ ಅಧಿಕವಾಗಿ ತಳ ಮೂಲದ ಜನರಿಗೆ ಎದುರಾಗುತ್ತಿರುವುದು ವಿಪರ್ಯಾಸವಾಗಿದೆ. ಸಮಾಜದೊಳಗೆ ತಮ್ಮ ಅಸ್ಥಿತ್ವಕ್ಕಾಗಿ ಹೋರಾಟ ಮಾಡುವ ದಲಿತರನ್ನು ಕುರಿತು ಡಾ.

ಅರವಿಂದ ಮಾಲಗತ್ತಿ ಅವರ ಹೇಳಿಕೆ "ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸಿ ಕೀಳು ವೃತ್ತಿಗೆ ಅವಲಂಬಿತವಾಗಿ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿ ಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ" ಎಂದು ಹೇಳಿದ್ದಾರೆ.

ತಳಸಮುದಾಯದವರು ವರ್ಗ ಹೋರಾಟ ನಡೆಸಲು ಕಾರಣ ಏನೆಂಬುದನ್ನು ಬಿ. ಬಸವಲಿಂಗಪ್ಪನವರು ಹೀಗೆ ಸ್ಪಷ್ಟೀಕರಿಸಿದ್ದಾರೆ. "ದಲಿತರ ಹೀನಾಯ ಸ್ಥಿತಿಗೆ ಕೇವಲ ಬಡತನ, ಅಜ್ಞಾನಗಳಷ್ಟೇ ಕಾರಣವಲ್ಲ ತಾವಿರುವ ಹಿಂದೂ ಧರ್ಮದ ವ್ಯವಸ್ಥೆಯೇ ಕಾರಣ" ಎಂಬುದಾಗಿ ವ್ಯವಸ್ಥೆಯ ವಿರುದ್ಧ ಕಿಡಿಕಾರಿದ್ದಾರೆ.

ಲೇಖಕರ 'ಕತ್ತಲು ಕರಗುವ ಮುನ್ನ' ಕಾದಂಬರಿಯೊಳಗೆ ತಳಸಮುದಾಯದವರು ಮಾಡಿದ ಹೋರಾಟದ ಬಗ್ಗೆ ಉಲ್ಲೇಖಗಳಿವೆ. ಇಡೀ ಕಾದಂಬರಿ ತಳಮೂಲದ ಜನಾಂಗದ ಸುತ್ತ ಸುತ್ತುವುದರಿಂದ ಇಂತಹ ಘಟನೆಗಳು ಸಾಮಾನ್ಯವಾಗಿವೆ. ಪ್ರೊ ಕಂಪಣ್ಣ ಎಂಬ ವಿಚಾರವಾದಿ ದಲಿತರನ್ನು ಹೋರಾಟದ ಕಡೆಗೆ ತರಲು ತಮ್ಮ ಭಾಷಣದಲ್ಲಿ ಕಿಚ್ಚು ಮೂಡಿಸಿದ್ದು ಹೀಗೆ. "ಏಯ್ ಮೂಢ ಮನುಷ್ಯರೆ ಮಂಡಲ್ ವರದಿ ನೀವೇನು ಬೇಡಾ ಅಂತಂದು ಹೋರಾಡಾಕ ಹತ್ತಿರಲ್ಲಾ ಇದು ನಿಮಗ ನಿಮ್ಮ ಉಪಯೋಗಕ್ಕ, ಶತಶತಮಾನಗಳಿಂದ ಶೂದ್ರರಾಗಿ ಅತಿಶೂದ್ರರಾಗಿ ಚಿಪ್ಪಿನೊಳಗೆ ಕುಬ್ಜರಾಗಿ ಜೀವ ಸವೆಸುತ್ತಾ ಬಂದಿರೊ ನಿಮಗ ಅದೇ ಬದುಕು ಪಸಂದ ಕಂಡೈತೋಹ್ಯಾಂಗ ಮಠದಾಗ ಕುತ್ಕೊಂಡು ಕೆತ್ತಾಬಾಜಿ ಮಾಡೊ ಮಂದಿಗ ಹೇಳದೆ ಕೇಳದೆ ದುಡಿದಿದ್ದೆಲ್ಲಾವನ್ನ ಒಯ್ದು ಕೇಳ್ದಿದ್ರು" ಈ ಮಾತಿನಲ್ಲಿ ಕಂಪಣ್ಣ ದಲಿತರಿಗೆ ಸಂವಿಧಾನದಲ್ಲಿರುವ ಮೀಸಲಾತಿಗಳು ಮತ್ತು ಅದನ್ನು ಉಪಯೋಗಿಸಿಕೊಳ್ಳುವ ಬಗ್ಗೆ ತಿಳಿಸುತ್ತಿರುವುದಾಗಿದೆ.

ಕಾದಂಬರಿಯೊಳಗೆ ಮೀಸಲಾತಿಯ ಸೌಲಭ್ಯದಿಂದಾಗಿ ಅವಮಾನ ಅನುಭವಿಸಿದ್ದ ಪ್ರಭುವಿಗೆ ಕಂಪಣ್ಣನವರ ಭಾಷಣ ಆವೇಶದ ಜೊತೆಗೆ ಕೆಚ್ಚನ್ನು ಉಂಟುಮಾಡಿತು. ಪ್ರಭುವಿಗೆ ಅರಿವಿಲ್ಲದೆ ಕಂಪಣ್ಣ ಪರಕಾಯ ಪ್ರವೇಶ ಮಾಡಿದ್ದರು. ಇವರ ಭಾಷಣದಿಂದಾಗಿ ಯೂನಿವರ್ಸಿಟಿಯೊಳಗ ಪ್ರತಿಭಟನೆ ವಿಕೋಪಕ್ಕೆ ಹೋಗಿತ್ತು. ಇಷ್ಟು ದಿನ ತಮ್ಮ ಸ್ಥಿತಿಗೆ ಅಂಜಿ ಬದುಕುತ್ತಿದ್ದ ತಳಸಮುದಾಯದವರಿಗೆ ಕಂಪಣ್ಣನ ಭಾಷಣ ಹೊಸ ಹಾದಿ ತೋರಿದಂತಾಯಿತು. ಪ್ರಭು ಮಾತ್ರ ಮೊದಲ ಸಾಲಿನೊಳಗ ಕುಂತು ಪಾಠ ಕೇಳಾಕ ಮುಂದಾದನು. ಇವನ ಭಾಷಣದಿಂದ ಮನಸ್ತಾಪಗೊಂಡ ಮೇಲ್ಜಾತಿಯವರು ಧಾಂದಲೆ ಎಬ್ಬಿಸಿ ಭಾಷಣ ತಡೆಯೋ ಪ್ರಯತ್ನ ನಡೆಸಿದರು.

ತಳಸಮುದಾಯದ ಪ್ರಭು ತರಗತಿಯಲ್ಲಿ ಪಾಠ ಮಾಡುವಾಗ ಅವನ ಪಾಠವನ್ನು ತಡೆಯುವ ಪ್ರಯತ್ನಗಳು ಮೇಲ್ಜಾತಿ ಅಧ್ಯಾಪಕರಿಂದ ನಡೆಯುತ್ತಿತ್ತು. ಗಂಡ್ರುಗೊಳಿಯಂತ

ಪಿಡ್ಡು ಮಾಸ್ತರು ಪ್ರಭುವಿಗೆ ಸುಮ್ಸುಮ್ಮನೆ ಕಾಟ ಕೊಡಬೇಕು ಅಂತ ಕಾಲೇಜಿನಲ್ಲಿ ನಾಲ್ಕು ಅಕ್ಷರ ಗೊತ್ತಿಲ್ಲದ ಪಿಳ್ಯ ಎನ್ನುವ ದುರಂಕಾರಿ ಹುಡುಗನನ್ನು ತಲೆತಿಕ್ಕಿ ಕಳುಹಿಸಿದನು. "ಗ್ರಾಮರ್‌ನೊಳಗ ತಲಿಹರಟೆ ಪ್ರಶ್ನೆ ಕೇಳೋ ಹಂಗ ಮಾಡಿದ್ದ ಅವನದೆ ಕೈವಾಡ ಅಂತ ಗೊತ್ತಾಗಿದ್ದೆ ಅಲ್ಲೆ ಅವನ ಬೇರುಗಳನ್ನು ಕಿತ್ತ ಬಿಸಾಕಿದ್ದೆ". ಈ ಮಾತಿನಲ್ಲಿ ಇಂಗ್ಲೀಷ್ ಗ್ರಾಮರ್‌ನಲ್ಲಿ ಇಲ್ಲದ ಸಲ್ಲದ ಪ್ರಶ್ನೆ ಕೇಳಿದ ಪುಂಡು ಹುಡುಗನಿಗೆ ಅದೇ ಗ್ರಾಮರ್ ಮೂಲಕ ಉತ್ತರ ಕೊಟ್ಟು ಬಾಯಿ ಮುಚ್ಚಿಸಿದ ಸಂದರ್ಭವಾಗಿದೆ.

ಕಾಲೇಜಿನಲ್ಲಿ ದಿನದಿಂದ ಬೆಳೆಯುತ್ತಿದ್ದ ಪ್ರಭುವಿನ ಏಳಿಗೆಯನ್ನು ಸಹಿಸಲಾರದ ಪಿಡ್ಡು ಮಾಸ್ತರನು ಪಿಳ್ಯ ಎನ್ನುವ ಹುಡುಗನಿಗೆ ಬೆಂಬಲ ನೀಡಿ ಪ್ರಭುವಿನ ತರಗತಿಯನ್ನು ನಿಲ್ಲಿಸುವ ಪ್ರಯತ್ನ ಮಾಡಿದನು. ಈ ಹುಚ್ಚು ಪ್ರಯತ್ನ ಪಿಡ್ಡು ಮಾಸ್ತರದು ಎಂದು ಗೊತ್ತಾದ ಮೇಲೆ ಹುಡುಗನಿಗೆ ಗ್ರಾಮರ್ ಒಳಗೆ ಪ್ರಶ್ನೆ ಕೇಳಿ ಗಾಬರಿ ಪಡಿಸಿದನು. ಮುಂದೆ ಇದೇ ರೀತಿ ತರಲೆ ಪ್ರಶ್ನೆಗಳನ್ನು ಕೇಳದಂತೆ ತಾಕಿತ್ತು ಮಾಡಿದನು. ಇವನ ಬೆದರಿಕೆಯಿಂದ ಹೆದರಿ ಹೋದ ಹುಡುಗ ಮುಂದಿನ ತರಗತಿಯಲ್ಲಿ ಗೈರು ಹಾಜರಾಗಿದನು. ಈ ಮೂಲಕ ಪ್ರಭು ತನ್ನ ವಿರುದ್ಧದ ಪಿತೂರಿಗೆ ಸಮರ್ಥವಾದ ಹೋರಾಟ ಮಾಡಿದನು.

ತಳಸಮುದಾಯದಿಂದ ಅಧ್ಯಾಪಕ ವೃತ್ತಿ ಹರಸಿ ಬಂದಿದ್ದ ಪ್ರಭುವಿಗೆ ವಿದ್ಯಾರ್ಥಿನಿಯ ಪ್ರೇಮ, ಮತ್ತು ವೃತ್ತಿ ಬದುಕು ಎರಡನ್ನು ಉಳಿಸಿಕೊಳ್ಳುವುದು ಉಭಯ ಸಂಕಟವಾಗಿತ್ತು. ಪ್ರಭು ನಾ ಏನು ಮಾಡಲಿ ಹೇಳು ಮಲ್ಲಿಕಾ ನೀ ಇಲ್ಲದೆ ಒಂದು ಘಳಿಗೆಯೂ ಒಂದೊಂದು ವರ್ಷದಂತೆ ಕಾಣುತ್ತಿದೆ. ಈ ಬಯಲು ಬೆಳಕು-ರಾತ್ರಿ, ಸೂರ್ಯ ಚಂದ್ರ ಯಾವುದಕ್ಕೂ ಅರ್ಥನೆ ಇಲ್ಲಾದಂತಾಗಿದೆ. ನಾನು ನಿನ್ನ ಜಾತಿಯೊಳಗೆ ಹುಟ್ಟಿರಬೇಕಾಯಿತು ಎಂದಾಗ ಮಲ್ಲಿಕಾ ಸ್ವ ಸಮುದಾಯದ ವಿರುದ್ಧ ಕಿಡಿಕಾರಿದ್ದು ಹೀಗೆ "ನೀವು ಹುಟ್ವದಿದ್ದೆ ಚಲೋ ಆತು. ಈ ಮಂದಿ ನಾಲಾಯಕ್ ಇವರಿಗೆ ತಮ್ಮದೊಂದೆ ಜಾತಿ ಬೋ ಶ್ರೇಷ್ಠ ತಾವೇ ಘನ ಪಂಡಿತರು. ಅನ್ನೊಂಡರ ಹುಟ್ಟು ನಮ್ಮ ಕೈಯಾಗಿದ್ರ ನಾನು ನಿಮ್ಮ ಜನರೊಳಗೆ ಹುಟ್ಟಿ ಸದಾ ನಿಮ್ಮನ್ನು ಬಿಡದಂಗೆ ಹಿಂದಿಂದೆ ಇರ್ತಿದ್ದೆ". ಈ ಮಾತಿನಲ್ಲಿ ತಮ್ಮ ಸಮುದಾಯಕ್ಕಿಂತ ನಿಮ್ಮ ಸಮುದಾಯವೇ ಮೇಲು, ಹುಟ್ಟು ಸ್ವ ಇಚ್ಛೆ ಆಗಿದ್ದರೆ ನಾನು ನಿಮ್ಮ ಜಾತಿಯಲ್ಲೇ ಹುಟ್ಟುತ್ತಿದ್ದೆ ಎಂದು ಸ್ವಸಮುದಾಯದ ವಿರುದ್ಧ ಹೋರಾಟ ಮಾಡಿರುವುದಾಗಿದೆ.

ಮಾನವೀಯತೆಗೆ ಬೆಲೆ ಕೊಡದೇ ಸದಾಕಾಲ ನಾವೇ ಶ್ರೇಷ್ಠರು ಉಳಿದವರು ಕನಿಷ್ಠರು ಎಂಬ ಅರ್ಥದಲ್ಲಿ ಮಾತನಾಡುವ ಮೇಲ್ಜಾತಿಯ ಧೋರಣೆಯ ವಿರುದ್ಧ ಮಲ್ಲಿಕಾ ಹೋರಾಡುತ್ತಿದ್ದಾಳೆ. ಇವಳ ಈ ಹೋರಾಟಕ್ಕೆ ಪ್ರಭು ತಳಸಮುದಾಯಕ್ಕೆ

ಸೇರಿದವನು ಅವನೊಂದಿಗಿನ ಪ್ರೀತಿಯನ್ನು ಉಳಿಸಿಕೊಳ್ಳಲು ಹೋರಾಟ ಅನಿವಾರ್ಯವಾಗಿತ್ತು. ಜೊತೆಗೆ ಮಲ್ಲಿಕಾಳಿಗೆ ಸ್ವಸಮುದಾಯದ ನೀತಿ ಬೇಸರವನ್ನು ಉಂಟುಮಾಡಿತ್ತು. 'ಈ ಮಂದಿ ನಾಲಾಯಕ್ ಇವರಿಗೆ ತಮ್ಮದೊಂದೆ ಜಾತಿ ಬೋ ಶ್ರೇಷ್ಟ' ಎಂಬ ವಾಕ್ಯದಲ್ಲಿ ತಳಸಮುದಾಯದವರನ್ನು ಹೀಯಾಳಿಸುವ ಇವರಿಗೆ ಸಮಾಜದೊಳಗೆ ಯಾವುದೇ ಗೌರವ, ಮನ್ನಣೆ ಇಲ್ಲ ಆದರೆ ನಾವೇ ಘನ ಪಂಡಿತರು ಎಂದು ಭಾವಿಸಿಕೊಂಡಿದ್ದಾರೆ. ಇವರ ಈ ಗುಣಕ್ಕೆ ನನ್ನ ಧಿಕ್ಕಾರವಿದೆ, ಹುಟ್ಟು ನಮ್ಮ ಕೈಯಾಗೆ ಇದ್ದಿದ್ರೆ ನಾನು ನಿಮ್ಮ ಜಾತಿಯಲ್ಲಿ ಹುಟ್ಟಿ ನಿನ್ನ ಜೊತೆನೆ ಇರುತ್ತಿದ್ದೆ ಎಂದು ತನ್ನ ಮನದಾಳದ ನೋವನ್ನು ಬಿಚ್ಚಿಟ್ಟಿದ್ದಾಳೆ.

ಲೇಖಕರ 'ಗೋರಮಾಟಿ' ಕಾದಂಬರಿಯಲ್ಲಿ ಲಂಬಾಣಿ ತಾಂಡದೊಳಗೆ ನಡೆಯುವ ಶೋಷಣೆಯಿಂದ ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿ ಹೋರಾಟ ಮಾಡುವ ಪ್ರಸಂಗವಿದೆ. ತಮ್ಮ ಬದುಕಿಗಾಗಿ ಹೋರಾಟ ಮಾಡುವುದು ಬುದ್ಧನಾಯ್ಕನ ಪಾತ್ರದ ಮೂಲಕ ಕಂಡು ಬಂದಿದೆ. ಚೆಲುವಾಪುರದ ಬ್ರಾಹ್ಮಣರಿಗೆ ಇದ್ದ ತುಂಡು ಭೂಮಿಯನ್ನು ಬರೆದುಕೊಟ್ಟು ನೆಲೆಇಲ್ಲದೆ ಊರೂರು ತಿರುಗಿ ಕೊನೆಗೆ ಕಾಕಾಪುರ ತಾಂಡಕ್ಕೆ ಬಂದ ಬುದ್ಧನಾಯ್ಕ ಅಲ್ಲಿಯೇ ನೆಲೆ ನಿಲ್ಲಲು ಬಯಸಿದನು. ಆದರೆ ಹೊಸ ಬದುಕು ಕಟ್ಟಿಕೊಳ್ಳಲು ಅವಕಾಶ ಕೊಡದಂತೆ ಮಾಡುವ ಪ್ರಯತ್ನಗಳು ನಡೆದವು. "ಇದ್ದ ಊರಾಗ ಇರೋರಲ್ಲಾ ಬಿದ್ದ ಗ್ವಾಡಿ ಕಟ್ಟೋರಲ್ಲ ಉಪ್ಪು ಮಾರ್ತಾ ಎತ್ತಗಳ ಮ್ಯಾಲ ಸಾಮಾನ ಹೇರ್ಕೊಂಡು ಊರೂರು ಅಲಿಯೊ ಅಲೆಮಾರಿಗಳು. ಆದ್ರ ಯಾವನೊ ಒಬ್ಬ ಮುದುಕ ಕಾಕಪುರದಾಗ ಶಾಶ್ವತವಾದ ತಾಂಡಕಟ್ಟೋ ಯೋಚನೆ ಮಾಡಿದ" ಈ ಮಾತಿನಲ್ಲಿ ಲಂಬಾಣಿಗರು ಬದುಕು ಕಟ್ಟಿಕೊಳ್ಳಲು ಮಾಡಿರುವ ಹೋರಾಟಗಳ ಉಲ್ಲೇಖವಿದೆ.

ಪೂರ್ವಕಾಲದಿಂದಲ್ಲೂ ಅಲೆಮಾರಿಗಳಂತೆ ಬದುಕುತ್ತಿದ್ದ ಲಂಬಾಣಿಗಳು ಉಪ್ಪು ಮಾರುವ ವ್ಯಾಪಾರಿಗಳು. ಇವರು ಕಾಲಕಳೆದಂತೆ ಸಣ್ಣ-ಪುಟ್ಟ ಗುಂಪುಗಳಾಗಿ ಒಡೆದು ಚೆಲುವಾಪುರದಲ್ಲಿ ನೆಲೆ ನಿಂತಿದ್ದರು. ಆದರೇ ಅಲ್ಲಿನ ಬ್ರಾಹ್ಮಣರ ಕಿರುಕುಳ ತಾಳಲಾರದೇ ಇದ್ದ ತುಂಡು ಭೂಮಿಯನ್ನು ಬಿಟ್ಟು ಬದುಕಿಗಾಗಿ ಮತ್ತೆ ಹೋರಾಟ ಶುರು ಮಾಡಿದರು. ಪಾಳೆಗಾರರು, ರಾಜರಿಂದ ಇಡೀದು ಬ್ರಿಟಿಷರವರಗಿನ ಆಡಳಿತವನ್ನು ಕಂಡಿದ್ದ ಸಿದ್ದನಾಯ್ಕ ಬುದ್ಧನಾಯ್ಕ, ಕೆಂಚೀರಯ್ಯ ಕಾಕಾಪುರದಾಗ ಗುಡಿಸಲು ಹಾಕ್ಕೊಂಡಿದ್ರು, ಕಾಲ ಸರಿದಂತೆ ಹತ್ತು-ಇಪ್ಪಾತಾಗಿ ಇಪ್ಪತ್ತು ನಲ್ವತ್ತು ಮನಿಗಳಾಗಿ ಕಾಕಾಪುರ ಲಂಬಾಣಿಗಳ ತಾಂಡವಾಯಿತು.

ಮೇಲ್ಜಾತಿಯವರ ಕ್ರೌರ್ಯದಿಂದ ಬದುಕು ಕಳೆದುಕೊಂಡಿದ್ದ ಕಾಕಪುರದ ಜನರಿಗೆ ಮೇಲ್ಜಾತಿಯವರಾದ ಬ್ರಾಹ್ಮಣರು, ಗೌಡರು, ಲಿಂಗಾಯಿತರು ಇವರುಗಳ ಸಹವಾಸ

ಸಾಕಾಗಿತ್ತು. ಹೊಲ ಕೊಂಡುಕೊಳ್ಳುವ ವಿಚಾರದಲ್ಲಿ ಗೊತ್ತಾನಾಯ್ಕನಿಗೂ ತಾಂಡದ ಜನರಲ್ಲಿ ಭಾರೀ ಸ್ಪರ್ಧೆ ಏರ್ಪಟ್ಟಿತ್ತು. ತಾಂಡದೊಳಗೆ ತನಗೆ ಯಾರು ಬೆಂಬಲವಿಲ್ಲ ಎಂದು ತಿಳಿದಿದ್ದ ಗೊತ್ತಾನಾಯ್ಕನು ತನ್ನ ಬೆಂಬಲಕ್ಕಾಗಿ ಕೇಪ್ಪಂದಭಟ್ಟರನ್ನು ಕರೆದು ಬಂದಿದ್ದ. ಈ ವಿಚಾರದಿಂದ ಸಿಟ್ಟಿಗೆದ್ದ ಪಾಪೇಸಿ, ಸೋನ್ಯಾ, ಕಿಷುಣ ಗಲಾಟೆ ಎಬ್ಬಿಸಿದರು. ಆಗ ತಾಂಡದ ನಾಯಕ "ನಮ್ಮ ಲಮಾಣಕ್ಯರ ಪಂಚಾಯ್ತಿಯೊಳಗೆ ಭಟ್ರದೇನ ಕೆಲಸನೋ ಹುಡುಗ ಹಟ್ಟಿನಾಯ್ಕ ಸಿದ್ದ ಗೊಣಗಿದ". ಈ ಮಾತಿನಲ್ಲಿ ನಮ್ಮನ್ನು ವಿರೋಧಿಗಳಂತೆ ಕಾಣುವ ಮೇಲ್ಜಾತಿಯ ಭಟ್ಟರಿಗೆ ತಳಸಮುದಾಯದೊಳಗೆ ಪ್ರವೇಶ ನಿರಾಕರಿಸುವುದಾಗಿದೆ.

ಕಾಕಾಪುರದ ತಾಂಡದೊಳಗೆ ದಿನದಿಂದ ಬೆಳೆಯುತ್ತಿದ್ದ ಗೊತ್ತಾನಾಯ್ಕನ ಏಳಿಗೆಯನ್ನು ಸಹಿಸಲಾರದ ತಾಂಡದ ಜನರು ಅವನ ವಿರುದ್ಧ ಒಳಪಿತೂರಿ ನಡೆಸಿ ಪಂಚಾಯ್ತಿ ಸೇರಿಸಿದರು. ಐದಳ್ಳಿ ಹಟ್ಟಿಗೌಡರು ಸೇರಿದ್ದ ಪಂಚಾಯ್ತಿಯೊಳಗೆ ಗೊತ್ತಾ ತನ್ನ ಪರವಾಗಿ ಮಾತಾಡಲು ಮೇಲ್ಜಾತಿಯ ಭಟ್ಟರನ್ನು ಕರೆದಿದ್ದನು. ಈ ನಿರ್ಧಾರದಿಂದ ಕೋಪಗೊಂಡ ತಾಂಡ ಜನರು ಗೊತ್ತಾನ ವಿರುದ್ಧ ಸಿಡಿದು ನಿಂತರು. ಲಂಬಾಣಿಗರ ಮಧ್ಯ ಮೇಲ್ಜಾತಿಯವರ ಪ್ರವೇಶವಿಲ್ಲ. ನಮ್ಮ ಗುಡಿಯೊಳಗೆ ಯಾರು ನಾರ್ಮದರಿಲ್ಲ. ಎಲ್ಲರೂ ಗಂಡಸರೆ, ಹುಲಿ ಇದ್ದ ಹಾಗೇ ಇದ್ದಿವೀ. ಎಂದು ಭಟ್ಟರ ಪ್ರವೇಶವನ್ನು ಪ್ರಬಲವಾಗಿ ವಿರೋಧಿಸುವ ಮೂಲಕ ತಮ್ಮ ಬದುಕಿಗಾಗಿ ನಾವೇ ಹೊಣೆ ಹೊರುವುದಾಗಿ ಹೋರಾಟ ಮಾಡಿದರು.

ಕಾಕಪುರದೊಳಗೆ ಎಲ್ಲಿಂದಲೋ ಬಂದಿದ್ದ ಗೊತ್ತಾನಾಯ್ಕನ ಮೇಲೆ ತಾಂಡದವರಿಗೆ ದ್ವೇಷವಿತ್ತು. ಇವರ ಈ ಅಸೂಯೆಯ ನಡುವೆ ದಿನದಿಂದ ದಿನಕ್ಕೆ ಬೆಳೆಯುತ್ತಾ ಹೋದಂತೆ ತಾಂಡದ ಜನರ ದೌರ್ಜನ್ಯ ಅಧಿಕವಾಗಿತ್ತು. ಹೊರಗೆ ಗಲಾಟೆ ಜೋರಾಗುತ್ತಿದಂತೆ ಗೊತ್ತಾನ ರಕ್ತ ಕುದಿಯ ತೊಡಗಿತು. ಆದರೂ ಸಹಿಸಿಕೊಂಡು ತಾಂಡದೊಳಗೆ ತಮ್ಮ ಅಸ್ಥಿತ್ವವನ್ನು ಉಳಿಸಿಕೊಳ್ಳಲು ನಿರಂತರವಾಗಿ ಹೋರಾಟ ಮಾಡುತ್ತಿದನು. "ಗೊತ್ತಾ ಬಾಣವ್ವ ಮನಿತನ ಕಟ್ಟಾಕ ಹತ್ತಿದಾಗಿಂದ ಕಾಕಾಪುರದ ಜನ ನಾನಾ ನಮೂನಿ ತೊಂದರೆ ಕೊಡ್ತಾನೆ ಬಂದಿದ್ರು. ಬಹಳ ಸಣ್ಣ ಬುದ್ಧಿಯ ನೀಚಜನ". ಈ ಮಾತಿನಲ್ಲಿ ಕಾಕಾಪುರದ ಜನರಿಂದ ನಿರಂತರವಾಗಿ ಶೋಷಣೆಗೆ ಒಳಪಟ್ಟಿದ ಗೊತ್ತಾ, ಬಾಣವ್ವ ಬದುಕಿಗಾಗಿ ಹೋರಾಟ ಮಾಡಿರುದಾಗಿದೆ.

ಬುದ್ಧನಾಯ್ಕ ಚೆಲುವಾಪುರ ಬಿಟ್ಟು ಕಾಕಾಪುರ ಸೇರಿದ ದಿನದಿಂದ ಶುರುವಾಗಿದ್ದ ವೈಷಮ್ಯ ಗೊತ್ತಾನಾಯ್ಕನವರೆಗೂ ಮುಂದುವರಿದಿತ್ತು. ಗೊತ್ತಾ, ಬಾಣವ್ವರಿಗೆ ತಾಂಡದ ಜನ ಹೊಟ್ಟೆ ಉರಿಯಿಂದ ದುಡಿಯೋದನ್ನು ಬಿಟ್ಟು ಬರೀ ಕಾಲು ಎಳೆಯೋ ಕೆಲಸನೇ ಮಾಡುತ್ತಿದ್ದರು. ಒಂದು ಖಂಡಗ ಜ್ವಾಳ ಬೆಳೆದರೆ ಏಯ್ ಅವನದು ಒಂದು ಖಂಡಗ

ಜೋಳ ಬೆಳೆದಂತಲ್ಲೋ ಎಂದು ಮಾತಾಡಿಕೊಳ್ಳುತ್ತಿದ್ದರು. ಇವೆಲ್ಲವನ್ನು ದಾಟಿ ಬೆಳೆಯುತ್ತಿದ್ದ ಗೊತ್ತಾನ ಬದುಕು ಮುಳ್ಳಿನ ಮೇಲಿನ ನಡಿಗೆಯಾಗಿತ್ತು. ಇದನ್ನೆಲ್ಲ ಕಂಡು ರೋಸಿ ಹೋಗಿದ್ದ ಬಾಣವ್ವ ಏನಾದರೂ ಆಗಲಿ ಕೇಸು ಕೊಟ್ಟು ಬಿಡಾನ ನಡಿರೀ ಬೇವರ್ಸಿಗಳು ಪೋಲಿಸರಿಂದ, ವಕೀಲರಿಂದ ಛೀಮಾರಿ ಹಾಕಿಸಿಕೊಳ್ಳಲ್ಲಿ ಎಂದು ತನ್ನ ನಿರ್ಧಾರ ಹೇಳಿದಳು. ಈ ರೀತಿಯಾಗಿ ತಮ್ಮ ಬದುಕಿಗಾಗಿ ಗೊತ್ತಾ, ಬಾಣವ್ವನವರು ಹೋರಾಟ ಮಾಡಿದ್ದಾರೆ.

ಲೇಖಕರ 'ಲಮಾಣಿ ಚಿಮ್ಮಿ ಆತ್ಮಚರಿತೆ' ಕಾದಂಬರಿಯಲ್ಲಿ ಥಾವು ಲದೇಣಿಯಾ ಹೇರ ಕಂಡ ಬರಾಕ ಮೊದಲು ಆಂಧ್ರಪ್ರದೇಶದ ಯಾವುದೇ ಮೂಲೆಯಿಂದ ಕರ್ನಾಟಕದ ಬಳ್ಳಾರಿ ಪ್ರವೇಶಿಸಿ ಅಲ್ಲೇಲ್ಲೋ ಅಪ್ಪೆ ಬಳ್ಳ ತಾಂಡದ ಹತ್ತಿರ ಥಾವುನ ಅಪ್ಪನೂ ಅಜ್ಜನೂ ಜಮೀನು ಮಾಡ್ಕಂಡಿದ್ದರು. ಬ್ರಿಟಿಷರ ಹತ್ತಿರ ಗುಲಾಮಗಿರಿ ಮಾಡಿಕೊಂಡು ಒಳ್ಳೆಯ ಬಂಗಾರದ ನಾಣ್ಯಗಳನ್ನು ಗಿಟ್ಟಿಸಿಕೊಂಡು ಒಂದು ಐವತ್ತು ಹೆಕ್ಕರೆ ಕಾಡನ್ನು ಕಡಿದು ಒಳ್ಳೆಯ ಜಮೀನು ಮಾಡಿಕೊಂಡು ಶ್ರೀಮಂತನಾಗಿದ್ದನು. "ಮೂಡಲ ಸೀಮಿಯಿಂದ ಲದೇಣಿಯಾ ಮಾಡ್ಕಂಡ ಬಂದ ಸಾವಿರಾರು ಲಂಬಾಣಿಗಳು ದಿಕ್ಕು ದೆಸೆಯಿಲ್ಲದೆ ಹ್ವಾದ್ರ. ಚಿನ್ನುನಾಯ್ಕನ ತಾತ ಥಾವ್ರ್ಯ ಮಾತ್ರ ಇರೋ ನಾಕ ಮಂದಿ ಕಟ್ಕಂಡ ಪನಾಡ ಪಕ್ಷಿಯಂಗೆ ಅಲ್ಲಿ ಇಲ್ಲಿ ಅಲಿಯೋದ್ಯಾಕಂತ. ಕಾಟೇಬಾರಿ ತಾಂಡದಾಗ ಉಳ್ಕೊಂಡ". ಈ ಮಾತಿನಲ್ಲಿ ಮೂಡಲ ಸೀಮೆಯಿಂದ ವಲಸೆ ಬಂದ ಥಾವ್ರ್ಯನಾಯ್ಕ ನಾಲ್ಕು ಜನರ ಕಟ್ಟಿಕೊಂಡು ಪನಾಡಪಕ್ಷಿಯಂತೆ ಕಾಟೇಬಾರಿ ತಾಂಡದಲ್ಲಿ ಬದುಕಿದ ಬಗ್ಗೆ ತಿಳಿಸುತ್ತದೆ.

ಲಂಬಾಣಿ ಜನರು ಮೇಲ್ಜಾತಿಯವರ ದೌರ್ಜನ್ಯದಿಂದ ಮತ್ತು ಬ್ರಿಟಿಷರ ಆಡಳಿತದ ಪ್ರಭಾವದಿಂದಾಗಿ ಊರೂರು ಅಲೆಯುತ್ತಾ ಜೀವನಕ್ಕಾಗಿ ಹೋರಾಟ ಮಾಡುತ್ತಿದ್ದರೆ ಥಾವ್ರ್ಯನಾಯ್ಕ ಮಾತ್ರ ಅಲ್ಲಿಯೇ ಕಾಟೇಬಾರಿ ತಾಂಡದೊಳಗೆ ಬದುಕು ಕಟ್ಟಿಕೊಳ್ಳಲು ಪನಾಗ ಪಕ್ಷಿಯಂತೆ ಸುತ್ತುವರಿದು ನಾಲ್ಕು ಜನರಿದ್ದ ತಾಂಡವನ್ನು ನಾಲ್ವತ್ತು ತಾಂಡಗಳಾಗಿ ಪರಿವರ್ತಿಸಿದ್ದು ಸಾಧನೆಯಾಗಿದೆ. ಕಾಟೇಬಾರಿ ತಾಂಡಾದಾಗ ಥಾವುಗೆ ನಾಲ್ಕು ಜನ ಮಕ್ಕಳು ಇದ್ದರು. ಕಾಟೇಬಾರಿಗೆ ಬಂದು ಹರಸಾಹಸ ಮಾಡಿ ನಾಲ್ಕು ಜನ್ಮಕ್ಕೂ ಆಗುವಷ್ಟು ಜಮೀನು ಮಾಡಿದನು. ತಮ್ಮ ತಾಂಡದಲ್ಲಿನ ಜನರ ಬದುಕಿಗಾಗಿ ಪ್ರತಿನಿತ್ಯ ಹೋರಾಟ ಮಾಡುತ್ತಿದ್ದ ಥಾವ್ರ್ಯನಾಯ್ಕ ಲಂಬಾಣಿ ಜನರ ನಡುವೆ ತಾಂಡದ ನಾಯಕನಾಗಿದ್ದನು.

ಹೃದಯ ಕಾಯಿಲೆಯಿಂದ ನರಳುತ್ತಿದ್ದ ಚಿಮ್ಮಿ ತನ್ನ ಬದುಕಿನ ಬಗ್ಗೆ ನಾನಾ ವಿಧಾನದ ಆಲೋಚನೆಯಲ್ಲಿ ತೊಡಗಿದಳು. ಮುಂದಿನ ದೀಪಾವಳಿಗೆ ರಾಮಿ

ಮದ್ವಿಯಾದರೆ ಸಾಂತಿ ದೊಡ್ಡವಳು ಆಕೆಯ ಮದುವೆ ಆದ ಮೇಲೆ ಅವಳ ಹಿಂದಿರುವ ತಂಗಿಯರ ಮದುವೆಯಾಗುತ್ತದೆ. ನಾನು ಸತ್ತು ತಂಗಿಯರೆಲ್ಲ ಮದುವೆಯಾಗಿ ಹೋದ ಮೇಲೆ ಅವ್ವ ಒಬ್ಬಳೆ ಖಾಲಿ ಮನೆಯೊಳಗೆ ಉಳಿಯುತ್ತಾಳೆ. ಮಾತ್ರವಲ್ಲ ಚಿಕ್ಕಮ್ಮನ ಅಡಿಯಾಗುತ್ತಾಳೆ ಎಂದು ಆಲೋಚಿಸುತ್ತಾ "ಇರೋ ಆಸ್ತಿಯನ್ನೆಲ್ಲಾ ಗಂಡು ಮಕ್ಕಳಿಗೆ ಹೋದ್ರೆ ಮನಿ ಬಿಟ್ಟು ಬೀದಿಯೊಳಗೆ ಹುಚ್ಚು ನಾಯಿಯಂತೆ ಅವ್ವ ಬದುಕಬೇಕಾಗುತ್ತೆ". ಈ ಮಾತಿನಲ್ಲಿ ಅಪ್ಪನ ಎರಡನೆಯ ಹೆಂಡತಿಯ ಗಂಡು ಮಕ್ಕಳಿಗೆ ಆಸ್ತಿ-ಪಾಸ್ತಿಯ ಪಾಲಾದರೆ ಮುಂದೆ ಅವ್ವನ ಬದುಕಿನ ಹೋರಾಟ ಹೇಗೆ ಎಂಬುದನ್ನು ತಿಳಿಸುವುದಾಗಿದೆ.

ತಾಂಡದೊಳಗೆ ಮಂಗ್ಲ್ಯಾನ ಮನೆಯನ್ನು ಚಿಕ್ಕಮ್ಮನ ಗಂಡು ಮಕ್ಕಳು ತಮ್ಮ ವಶಕ್ಕೆ ಪಡೆದುಕೊಂಡರೆ ಅವ್ವನ ಬದುಕು ಅತಂತ್ರವಾದಂತೆ ಎಂದು ಚಿಮ್ನಿ ತನ್ನ ತಾಯಿಯ ಬದುಕಿನ ಬಗ್ಗೆ ಆಲೋಚಿಸುತ್ತಿದ್ದಾಳೆ. ಹದಿನಾರು ಅನಾಥ ಹೆಣ್ಣುಮಕ್ಕಳಿಗೆ ತವರಿನ ಬಾಗಿಲು ಶಾಶ್ವತವಾಗಿ ಮುಚ್ಚಿದಂತಾಗುತ್ತದೆ. ಚಿಕ್ಕಮ್ಮನ ಹೆಣ್ಣುಮಕ್ಕಳಿಗೆ ತಮ್ಮಂದಿರು, ತಾಯಿ-ತಂದೆಯ ಪ್ರೀತಿ ಸಿಗುತ್ತದೆ. ಆದರೆ ನನ್ನ ತಾಯಿ-ತಂಗಿಯರಿಗೆ, ಮನೆಯಲ್ಲಿ ಯಾವುದೇ ಸ್ಥಾನವಿಲ್ಲದಂತಾಗುತ್ತದೆ. ಅವರ ಬದುಕಿಗೆ ಒಂದು ನೆಲೆ ತಂದುಕೊಡುವುದು ನನ್ನ ಕರ್ತವ್ಯವೆಂದು ಭಾವಿಸಿರುವ ಚಿಮ್ನಿ ತಾಯಿ ಮತ್ತು ತಂಗಿಯರ ಬದುಕಿಗಾಗಿ ಹೋರಾಟ ಮಾಡುವುದಾಗಿದೆ. ಅದಕ್ಕಾಗಿಯೆ ಚಿಮ್ನಿ ತಾನು ಸಾಯಿಯುವುದಕ್ಕಿಂತ ಮುಂಚಿತವಾಗಿ ನ್ಯಾಯ ದೊರಕಿಸಿಕೊಡಲು ಕಾದಂಬರಿಯೊಳಗೆ ಹೋರಾಟ ಮಾಡುತ್ತಲೇ ಸಾಯುತ್ತಾಳೆ.

ಲೇಖಕರ 'ಗುಡ್ಡಜ್ಜ' ಸಂಕಲನದಲ್ಲಿನ 'ಗುಡ್ಡಜ್ಜ' ಕಥೆಯಲ್ಲಿ ಗುಡ್ಡಜ್ಜ ಹುಟ್ಟಿದ ಊರು. ತಾಯಿ ತಂದೆ ಕುರಿತು ತಲೆ ಕೆಡಿಸಿಕೊಂಡಿರಲಿಲ್ಲ. ಮದುವೆ ಆಗಿಲ್ಲ ಎನ್ನುವ ವಿಷಯ ಅವನಲ್ಲಿ ಕಾಡುತ್ತಿತ್ತಾದರೂ ಅವನು ಹಾಲು ಕೇಳಿ ಬರುವ ಹೆಂಗಸರ ಮೇಲೆ ಕೆಂಡಕಾರಿ ಸಮಾಧಾನ ತಂದುಕೊಳ್ಳುತ್ತಿದ್ದನು. ಮರಿಯಪ್ಪನ ಮನೆಯ ರಾಗಿಮುದ್ದೆ ತಿಂದು ಕುರಿ ಹಾಲು ಕುಡಿದು ಕೊಬ್ಬಿದ ಇವನು ಹೆಣ್ಣಿನ ಮ್ಯಾಲಿನ ಮೋಹ ಕಳೆದುಕೊಂಡು ಕುರಿದೊಡ್ಡಿನೆ ತನ್ನ ಹೆಂಡತಿ ಅಂತ ತಿಳಿದುಕೊಂಡಿದನು. ಈ ರೀತಿಯ ಬದುಕು ಕಟ್ಟಿಕೊಂಡಿದ್ದ ಗುಡ್ಡಜ್ಜ ತನ್ನ ಜೀವನಕ್ಕಾಗಿ ಹೋರಾಟಕ್ಕೆ ಬಿದ್ದಿದನು. "ದುಡದ ದುಡ್ಡು ಗಂಟಕಟ್ಟಿ, ಕೈ ಪೆಟಗಿಯೊಳಗಿಟ್ಟು ಬೀಗ ಹಾಕ್ಕೊಂಡು ಅಡ್ಡಾಡ್ತಿದ್ದ. ವರ್ಷಕ್ಕೊಂದು ದೊಡ್ಡಕುರಿ ಮತ್ತದರ ಮರಿ, ಉಂಡೂಟ. ಕಂಬಳಿ ಅವನ ಪಗಾರ." ಈ ಮಾತಿನಲ್ಲಿ ಹಳ್ಳಿಯಲ್ಲಿ ಅನಾಥನಂತೆ ಬದುಕು ನಡೆಸುತ್ತಿದ್ದ ಗುಡ್ಡಜ್ಜ ದುಡಿದ ದುಡ್ಡು ಅನ್ನು ಕಾಪಾಡಿಕೊಳ್ಳುವುದಕ್ಕಾಗಿ ಹೋರಾಟ ಅನಿವಾರ್ಯವಾಗಿತ್ತು.

ಮದುವೆ ಇಲ್ಲದೆ ದುಡಿದ ದುಡ್ಡನೆಲ್ಲ ಗುಡ್ಡಜ್ಜನ್ನು ಹರಿಹರ, ದಾವಣಗೇರಿಗೆ ಹೋಗಿ ಅವನ ಮಾವನ ಮಗಳು ಇದ್ದಳಂತ ಹೇಳಿ ಅವಳಿಗೆ ಕೊಟ್ಟು ಬರುತ್ತಿದ್ದನು. ಹಿರಿಮಗಳು ಕೆಂಚಿಯ ಮದುವೆ ಕನಸು ಕಾಣುತ್ತಿದ್ದ ಯಂಕವ್ವ ಗುಡ್ಡಜ್ಜನ ಪೆಟ್ಟಿಗೆಯಲ್ಲಿಟ್ಟಿದ್ದ ಗಂಟಿಗೆ ಆಸೆ ಬಿದ್ದು ಅವನ ವಯಸ್ಸಿನ ದಾಹ ಇಳಿಸೋ ನಿರ್ಧಾರ ಮಾಡಿದಳು. ಆದರೆ ಬುದ್ಧಿವಂತನಾಗಿದ್ದ ಗುಡ್ಡಜ್ಜ ತಾನು ದುಡಿದ ದುಡ್ಡನೆಲ್ಲ ಒಂದು ಪೆಟ್ಟಿಗೆಯಲ್ಲಿ ಭದ್ರವಾಗಿಟ್ಟು ತನ್ನ ಮುಂದಿನ ಜೀವನಕ್ಕಾಗಿ ಹೊರಾಟ ಮಾಡುತ್ತಿದ್ದನು. ತಳಸಮುದಾಯದವರ ಹೋರಾಟದ ಮುಖಗಳು ಕಾದಂಬರಿಯಲ್ಲಿ ಮತ್ತು ಸಣ್ಣಕತೆ ಸಂಕಲನದೊಳಗೆ ವಿಶಿಷ್ಟವಾಗಿ ನಿರೂಪಣೆಗೊಂಡಿದೆ.

'ಉಡಾ' ಕಥೆಯಲ್ಲಿ ಲಂಬಾಣಿ ತಾಂಡದೊಳಗೆ ಬಡವನಾಗಿದ್ದ ನಿಗರನು ಪದ್ದಿ ಹನ್ಮಂತಿ. ಲಂಗಡಿ ಜೊತೆ ಸೇರಿಕೊಂಡು ಪ್ರತಿದಿನ ದನ ಮೇಯಿಸುತ್ತಿದ್ದನು. ದನ ಮೇಯಿಸುವಾಗ ನಿಗರನ ಕಲ್ಯಾಣಿ ಎಂಬ ಆಕಳು ಗನಿಯ ಹೊಲಕ್ಕೆ ಮೇಯಲು ಹೋಗುತ್ತಿತ್ತು ಇದನ್ನು ಕಂಡ ಲಂಗಡಿ ಓಡಿಯೋ ನಿಗರ ಓಡು ಗನಿಗೆನಾದರೂ ಗೊತ್ತಾದರೆ ನಿನ್ನ ಹೆಣ ಬೀಳಿಸುತ್ತಾನೆ. ಎಂದು ಮಾತಾಡಿಕೊಳ್ಳುತ್ತಾ ತಮ್ಮ ಬದುಕು ಸಾಗಿಸುತ್ತಿದರು. ಆಟದ ನಡುವೆ ಮೈಮರೆತು ದನ ಬಿಟ್ಟಿದನ್ನು ಮರೆತಿದ್ದ ನಿಗರನು ಬುದ್ನಾನ ಮಾತಿಗೆ ಪ್ರತಿರೋಧ ತೋರಿಸಿದ್ದು ಹೀಗೆ. "ಲೇ ಗನಿ ಹೊಲ್ದಾಗ ಆಕಳ ಮೇಯಾಕತ್ತಿತ್ತು ಹೌದಲ್ಲ. ಹೇಳ್ತೀನಿ ತಡಿ' ಅಂದ ಹೂಂ ಹೊಲ್ದಾಗ ಹೋಗಿತ್ತೇನು ನಿನಗ ಮ್ಯಾರಿ ಮ್ಯಾಲ ಮೇಯಾಕತ್ತಿದ್ದನ್ನ ಹೊಡ್ಕೊಂಡೀನಿ ಅಂದ". ಈ ಮಾತಿನಲ್ಲಿ 'ಗನಿ ಹೊಲದ ಕಡೆಗೆ ದನ ಬಿಟ್ಟು ಮೇಯಿಸುತ್ತಿದ್ದೀಯಾ' ಎಂದು ಬುದ್ನಾ ಪ್ರಶ್ನಿಸಿದಾಗ 'ಇಲ್ಲ' ಎಂದು ಪ್ರತಿಕ್ರಿಯೆ ನೀಡಿರುವುದು ಹೋರಾಟದಂತೆ ಕಂಡು ಬಂದಿದೆ.

ತಳಸಮುದಾಯವನಾದ ಗನಿಗ ಬದುಕು ಕಟ್ಟಿಕೊಳ್ಳಲು ದನ ಕಾಯುವ ವೃತ್ತಿ ಮಾಡುತ್ತಿದ್ದನು. ಇವನು ಶಿರ್ನಳಿಯೊಳಗೆ ಚಟುವಟಿಕೆಯ ಬಾಲಕನಾಗಿದ್ದು ಯಾರಿಗೂ ಹೆದರಿಕೊಳ್ಳದ ಸ್ವಭಾವ ಅವನದು. ಇಂತಹ ನಿರ್ಭಯಿಯಾದ ನಿಗರನಿಗೆ ಬುದ್ನಾ ಹೊಲಕ್ಕೆ ದನ ಬಿಟ್ಟು ನೀ ಆಟ ಆಡಕ ಹೋಗಿದ್ದಿಯಾ ಎಂದಾಗ ದನ ಮೇಯುವುದಕ್ಕೆ ಹೋಗುತ್ತಿತ್ತು ಈಗ ಎರಿ ಮೇಲೆ ಮೇಯುತ್ತಿದೆ ಹೋಗಲೇ ಎಂದು ಪ್ರತಿಕ್ರಿಯೆ ನೀಡುತ್ತಿರುವುದು ತನ್ನ ಅಸ್ತಿತ್ವಕ್ಕಾಗಿ ನಿಗರ ಮಾಡಿದ ಹೋರಾಟವಾಗಿದೆ.

'ಕೊಂಯ್ಯ ಮತ್ತು ಧೋತ್ರ' ಸಂಕಲನದಲ್ಲಿನ 'ಶರೀರ ಗೂಡು ಹೋಗದ ಮುನ್ನ' ಕಥೆಯಲ್ಲಿ ಪಿ.ಯು.ಸಿ. ಫೇಲಾಗಿ ಊರು ಸೇರಿದ ಜಂಬೂರನ ಬಗ್ಗೆ ತಲೆ ಕೆಡಿಸಿಕೊಳ್ಳದ ಸಿದ್ದಮ್ಮ ದುಡಿದು ದೊಡ್ಡಗೌಡರ ಸಾಲಕ್ಕೆ ಒತ್ತೆ ಇಟ್ಟಿದ್ದ ಹೊಲ ಬಿಡಿಸಿಕೊಂಡಿದಳು. ಜಂಬೂರ ಹತ್ತ ಹುಡ್ರನ ಕಟ್ಕೊಂಡವನೆ ಸಂಘ ರಿಜಿಸ್ಟರ್ ಮಾಡಿಸಿ ಸರ್ಕಾರದಿಂದ

ಏನೇನು ಸವಲತ್ತು ಸಿಗತ್ತೈತೊ ಅದನ್ನೆಲ್ಲಾ ಪಡೆಯಲು ಪ್ರಯತ್ನ ಮಾಡಿದನು. ಇದನ್ನು ಸಹಿಸಿಕೊಳ್ಳದ ಊರಗೌಡ ಜಂಬೂರನ ಮೇಲೆ ಕಳ್ಳತನದ ಆರೋಪ ಮಾಡಿ ಊರಿಂದ ಬಹಿಷ್ಕಾರ ಮಾಡಿದನು. ಈ ಆರೋಪಕ್ಕೆ ಜಂಬೂರ ಹೋರಾಟ ಮಾಡಿದ್ದು ಹೀಗೆ "ಹಗಲು-ರಾತ್ರಿ ಹೋಲ್ದಾಗ ಮನಿಯಾಗ ದುಡಿದು ಒಂದೊಂದೆ ಜವಾಬ್ದಾರಿ ಕಳ್ಕೊಬೇಕು. ಈಗ ಅವನ ವಿಚಾರ ಪೂರ ತನ್ನ ಮನೆಯ ಆರ್ಥಿಕ ಪ್ರಗತಿ ಕಡೆಗೆ ಹರಿಯಿತು. ನೀರಾವರಿ ಹೊಲಕ್ಕೆ ತರಕಾರಿ ಹಣ ತರೊ ಬೆಳೆಗಳನ್ನ ಬೆಳಸಿ ಎರಡು ಹೆಣ್ಣು ಹುಡ್ರನ ದಾಟಿಸಿದ" ಈ ಮಾತಿನಲ್ಲಿ ಜಂಬೂರನ ಹೋರಾಟ ಹಿಂಸೆಯ ಮಾರ್ಗದಲ್ಲಿಲ್ಲ ಬದಲಾಗಿ ಪ್ರಗತಿಯ ಮಾರ್ಗದಲ್ಲಿದೆ. ಕಳ್ಳತನದ ಆರೋಪ ಮಾಡಿದ ಗೌಡನಿಗೆ ಸರಿಸಮನಾಗಿ ಬದುಕಿ ತನ್ನ ಶಕ್ತಿ ತೋರಿಸುವ ಆಲೋಚನೆಯಾಗಿದೆ.

ತಳಸಮುದಾಯದವನಾಗಿದ್ದ ಜಂಬೂರು ಶಿಕ್ಷಣ ಕಲಿತು ಸರ್ಕಾರದ ಸವಲತ್ತು ಪಡೆದುಕೊಂಡು ಹಳ್ಳಿಯ ಉದ್ಧಾರ ಮಾಡುವ ಕನಸು ಕಂಡಿದನು. ಆದರೆ ಗೌಡರ ದಬ್ಬಾಳಿಕೆ ಅವನನ್ನು ಕಳ್ಳತನದ ಆಪಾದನೆಗೆ ಗುರಿ ಪಡಿಸಿತು. ತನ್ನ ತಾಯಿ ಸಿದ್ದಮ್ಮ ಉಳಿಸಿಕೊಂಡಿದ್ದ ಭೂಮಿಯಲ್ಲಿ ತರವಾರಿ ಬೆಳೆಯನ್ನು ಬೆಳೆಯುವುದರ ಮೂಲಕ ತನ್ನ ಕುಟುಂಬವನ್ನು ಉನ್ನತಿಗೆ ಏರಿಸಿದನು. ಈ ಬೆಳವಣಿಗೆ ಗೌಡನ ವಿರುದ್ಧವಾಗಿಯೇ ಆದರೂ ಹಿಂಸಾತ್ಮಕವಾಗಿರಲಿಲ್ಲ ಬದಲಾಗಿ ಪ್ರಗತಿದಾಯವಾಗಿತ್ತು. ತನ್ನ ಕುಟುಂಬವನ್ನು ಗೌಡನ ಮಟ್ಟಕ್ಕೆ ತರುವುದರ ಮೂಲಕ ತಮ್ಮ ಬದುಕಿಗೆ ಹೋರಾಟ ಮಾಡಿದನು.

'ಕೊನೆಯ ಸಾಕ್ಷಿ' ಕಥೆಯಲ್ಲಿ ಬಸ್ ಚಾಲಕ ಹುಸೇನ್‌ನ ಮೇಲೆ ಬಸ್ ಅಪಘಾತದ ಆರೋಪಿ ಹೋರಿಸಿ ಸರ್ಕಾರದಿಂದ ಪರಿಹಾರ ಪಡೆಯುವ ನಿರೀಕ್ಷೆಯಲ್ಲಿ ಪ್ರಯಾಣಿಕರಿದ್ದರು. ಆದರೆ ಹುಸೇನ್‌ಗೆ ತನ್ನ ಕುಟುಂಬದವರ ಮುಂದಿನ ತುತ್ತಿನ ಚೀಲ ತುಂಬಿಸುವ ಮಾರ್ಗದ ಹುಡುಕಾಟದಲ್ಲಿ ತನ್ನ ಬದುಕಿಗಾಗಿ ಹೋರಾಟ ಮಾಡುತ್ತಿದ್ದನು. ನ್ಯಾಯಾಲಯದ ಮುಂದೆ ಅಪರಾಧಿಯಂತೆ ನಿಂತಿದ ಹುಸೇನ್‌ನು ನಾಣಯ್ಯನನ್ನು ಕಂಡೊಡನೆ ತನ್ನ ಬದುಕಿನ ದೇವರೆ ಬಂದವನಂತೆ ಭಾವುಕನಾದನು. "ಡ್ರೈವರ ಹುಸೇನಿ ನಿಜವಾಗ್ಲೂ ಕೊಳಕು ಹರಕು ಬಟ್ಟೆ ಉಟ್ಕೊಂಡು ಸಾಬ್ ನಂದುಕೆ ಹೇಣ್ತೇದು ಮಕ್ಕಳು ಭವಿಷ್ಯ ನಿಮ್ದು ಕೈಯಾಗ್ಯೆತೆ, ನೀವೆ ಕೊನೆ ಸಾಕ್ಷಿ, ನೀವು ಹ್ಯಾಂಗಂತಿರೊ ಹಂಗೆ ಜಡ್ಡ ಸಾಹೇಬ ನ್ಯಾಯ ಹೇಳ್ತಾನ ನನ್ನ ಉಳಿಸಿ ಅಂತ ಹೇಳಿ ನನ್ನ ಕಾಲಿಗ ಬಿದ್ದು ಉರಳಾಡಿದ". ಈ ಮಾತಿನಲ್ಲಿ ಡ್ರೈವರ ಹುಸೇನಿ ತನ್ನ ಹೆಂಡತಿ ಮಕ್ಕಳ ಮುಂದಿನ ಭವಿಷ್ಯ ನೆನೆದು ನ್ಯಾಯಾಲಯ ಮುಂದೆ ಬದುಕಿಗಾಗಿ ಹೋರಾಟ ಮಾಡುತ್ತಿರುವುದಾಗಿದೆ.

ಬಸ್ಸಿನ ತಾಂತ್ರಿಕ ದೋಷದಿಂದಾಗಿ ಡ್ರೈವರ್ ಹುಸೇನಿಯ ನಿಯಂತ್ರಣ ತಪ್ಪಿ ಬಸ್ಸು ಅಪಘಾತಕ್ಕೆ ಒಳಗಾಯಿತು. ಈ ಅಪಘಾತ ಹುಸೇನಿಯ ಕರ್ತವ್ಯ ನಿರ್ಲಕ್ಷ್ಯತೆಯಿಂದ ಆದ ಅನಾಹುತ ಎಂಬುದು ಪ್ರಯಾಣೀಕರ ವಾದವಾಗಿದೆ. ಈ ವಿಷಯ ನ್ಯಾಯಾಲಯದಲ್ಲಿ ಸಾಬೀತಾದರೆ ಹುಸೇನನಿಗೆ ಜೈಲು ಶಿಕ್ಷೆಯಾದರೆ ಪ್ರಯಾಣಿಕರಿಗೆ ಪರಿಹಾರ ಧನ ಸಿಗುತ್ತದೆ. ಆದರೆ ಹುಸೇನಿಯ ಕುಟುಂಬ ಬೀದಿ ಪಾಲಾಗುತ್ತದೆ. ತನ್ನ ಕುಟುಂಬದ ಉಳಿವಿಗಾಗಿ ಹುಸೇನಿ ಹೋರಾಟ ಮಾಡುತ್ತಿದ್ದಾನೆ. ಕೊನೆಗೆ ನಾಣಯ್ಯನವರ ಉದಾರತೆಯಿಂದ ಡ್ರೈವರ್ ನಿರಾಪರಾಧಿಯಾಗಿ ಬಿಡುಗಡೆ ಪಡೆದನು ಇದರಿಂದಾಗಿ ಹುಸೇನಿಯ ಬದುಕಿನ ಹೋರಾಟಕ್ಕೆ ಅಂತ್ಯ ನೀಡಿದಂತಾಯಿತು.

'ಕಲ್ಲೇ ಕಲ್ಲೇ ಕಥೆ ಹೇಳು' ಸಂಕಲನದ 'ಹೋರಾಟದ ಕೊನೆಗೊಂದು ದಿನ' ಕಥೆಯಲ್ಲಿ ಭೀಮ್ಲನು ಗೌಡರ ಸುಪರ್ದಿಯಲ್ಲಿದ್ದ ತನ್ನ ಜಮೀನ್ನ ಉಳಿಸಿಕೊಳ್ಳುವುದಕ್ಕಾಗಿ ಪ್ರತಿದಿನ ಹೋರಾಟ ಮಾಡುತ್ತಿದನು. ಇವನ ಹೋರಾಟದಲ್ಲಿ ದೇವ್ಲ ಪೀರನ ಬೆಂಬಲವಿತ್ತು. ತಾಂಡದೊಳಗೆ ಗೌಡನ ವಿರುದ್ಧ ಯಾರು ದನಿ ಎತ್ತಿದವರಿಲ್ಲ ಇವರುಗಳ ನಡುವೆ ದನಿ ಎತ್ತಿದವರಿಗೆ ಗೌಡರ ಆಳುಗಳಾದ ಸರ್ಪ, ಭರಮರು ಅಮಾಯಾಕವಾಗಿ ವರ್ತಿಸುತ್ತಿದ್ದರು. ಆ ಸಂದರ್ಭ "ಎ. ನಾಮರ್ದಗಳ ಒಂಟಿ ಹೆಣ್ಣನ್ನ ಎಳಿತಿರಲ್ರೋ, ಅಕಿ ಎನ ತಪ್ಪಮಾಡ್ಯಾಳ ನಿಮ್ಮ ಗೌಡನ ಎದುರು ಮಾತಾಡಿದ್ದು, ಅಕಿ ಗಂಡ ಅವನ ಮ್ಯಾಲ ನಿಮ್ಮ ದೇನಿದ್ರು ಅಂದ". ಈ ಮಾತಿನಲ್ಲಿ ಊರಿನ ಗೌಡರ ದೌರ್ಜನ್ಯದಿಂದ ರೋಷಿ ಹೋದ ಲಂಬಾಣಿ ಜನರು ಅವನ ಅಧಿಕಾರ ವಿರುದ್ಧ ದಂಗೆ ಮಾಡುವುದರೊಂದಿಗೆ ತಮ್ಮ ಬದುಕಿಗಾಗಿ ಹೋರಾಟ ಮಾಡುತ್ತಿರುವುದಾಗಿದೆ.

ತಳಸಮುದಾಯದವರನ್ನು ಕ್ರೂರ ಪಶುಗಳಂತೆ ಕಾಣುವ ಗೌಡನ ಪ್ರಭುತ್ವವನ್ನು ವಿರೋಧಿಸುವ ಮನಸ್ಸಿದರೂ ಬದುಕಿನ ಕಾರಣಕ್ಕಾಗಿ ತಮ್ಮಲ್ಲೇ ನೋವುಂಡು ಜೀವಿಸುತ್ತಿರುವ ಲಂಬಾಣಿಗರು ಬದಲಾವಣೆಗಾಗಿ ಪರಿತಪಿಸುತ್ತಿದ್ದಾರೆ. ಭೀಮ್ಲ ಮಾಡಿದ ಹೋರಾಟಕ್ಕೆ ಗೌಡನು ಪ್ರತಿರೋಧ ತೋರಿಸಲು ಮುಗ್ಧ ಮನಸ್ಸಿನ ಸೋಮ್ಲಿಯನ್ನು ಕುರಿಯಂತೆ ಎಳೆದು ತಂದ ಆಳುಗಳನ್ನು ಜನರು ವಿರೋಧಿಸುವ ರೀತಿಯನ್ನು ಗಮನಿಸಿದಾಗ ತಳಸಮುದಾಯದವರಲ್ಲಿ ಮೂಡಿರುವ ಹೋರಾಟದ ಭಾವ ತಿಳಿಯುತ್ತದೆ. ಸಪ್ಲ, ದೇವ್ಲರ ನಾಯಕತ್ವದಲ್ಲಿ ಭೀಮ್ಲ ಗೌಡನ ವಿರುದ್ಧ ಪ್ರತಿಭಟನೆ ಮಾಡಿದಂತೆ ತಳಸಮುದಾಯದ ಎಲ್ಲರೂ ಪ್ರತಿಭಟಿಸಿದರೆ ಗೌಡರ ದಬ್ಬಾಳಿಕೆಯಿಂದ ಮುಕ್ತಿ ಪಡೆಯಬಹುದೆಂಬುದು ತಿಳಿಯುತ್ತದೆ.

'ಅವನಂತರಾಳದ ಮಾತುಗಳು' ಕಥೆಯಲ್ಲಿ ತಳ ಸಮುದಾಯದ ಚೊಂಚಜ್ಜ ತಮ್ಮ ಮನೆಯಿಂದ ರೊಟ್ಟಿ ಮಾಡಿಕೊಂಡು ಹೋರಾಟಗಾರರಿಗೆ ಕೊಟ್ಟು ಪೋಲೀಸರು

ಬರುವ ಸುಳಿವು ಸಿಕ್ಕರೆ ಹೇಳುವುದಾಗಿ ಹೇಳಿದ್ದನಂತೆ. ಹೆಂಡತಿ ಜುಂಜವ್ವ ನಸುಕಿನಲ್ಲಿ ಮೊಸರು ರೊಟ್ಟು ತಿಂಡಿಗಳನ್ನು ಕಟ್ಟಿಕೊಂಡು ಹೋಗುವುದು. ಬಿಸಿಲು ಎರುವುದರೊಳಗೆ ಎತ್ತುಗಳ ಮೈ ತೊಳೆದು ಕಾಡಿಗೆ ಅಟ್ಟಿ ಹುಲ್ಲು ಮೇವು ಮಾಡಿ ಹಾಲು ಮಾರಲು ಹೋಗುತ್ತಿದದ್ದು ಹೀಗೆ ಬದುಕನ್ನು ನಿಷ್ಠೆಯಿಂದ ಬದುಕಿದ ದೇಶಭಕ್ತ ಕುಟುಂಬ ಇರುವ ತಾಂಡದೊಳಗೆ ಅಸಂಸ್ಕೃತಿ ಬೆಳೆಸುಗೊಂಡು ಬದುಕಿಗಾಗಿ ಹೋರಾಟ ಮಾಡುತ್ತಿದ್ದ ಕುಟುಂಬಗಳು ಒಂದು ಕಡೆಗಿತ್ತು. ಉಲ್ಲೇಖ "ದುರಗವ್ವನ ಗುಡಿಯಲ್ಲಿ ನಾಲ್ಕು ಜನ ಪಡ್ಡೆ ಹುಡುಗರು ಗುಂಪಾಗಿ ಇಸ್ಪೀಟಿನ ಆಟ ಪ್ರಾರಂಭವಾಯಿತೆಂದರೆ ಹೆಂಡಿರ ಕೊರಳ ತಾಳಿ ಮನೆಯೊಳಗಿನ ಕಾಳುಕಡ್ಡಿ ಯಾವುದೂ ಉಳಿಯುತ್ತಿರಲಿಲ್ಲ". ಈ ಮಾತಿನಲ್ಲಿ ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿನ ತಾಂಡದ ವ್ಯವಸ್ಥೆಗೂ ಸ್ವಾತಂತ್ರ್ಯ ಅನಂತರದ ತಾಂಡದ ವ್ಯವಸ್ಥೆಗೂ ಇರುವ ತಾರತಮ್ಯತೆಯನ್ನು ಹೇಳುವುದಲ್ಲದೆ ಇಂದಿನ ಜನರು ಬದುಕಿಗಾಗಿ ಮಾಡುತ್ತಿರುವ ಹೋರಾಟದ ಬಗೆಗೂ ತಿಳಿಸುತ್ತದೆ.

ಸ್ವಾತಂತ್ರ್ಯ ಕಾಲದಲ್ಲಿ ಶಿಸ್ತು ಬದ್ಧವಾದ ಜೀವನ ಮಾಡಿ ಆದರ್ಶವಾಗಿದ್ದ ಲಂಬಾಣಿ ಸಮುದಾಯವೂ ಇಂದು ಗೌಡರ ದಬ್ಬಾಳಿಕೆಗೆ ಮತ್ತು ತಮ್ಮಲ್ಲಿನ ದುಷ್ಚಟಗಳಿಂದಾಗಿ ಬದುಕಿಗಾಗಿ ಹೋರಾಟ ಮಾಡುವ ದುರಂತ ತಂದು ಕೊಂಡಿದ್ದಾರೆ. ಆದಿ ಕಾಲದಿಂದಲೂ ಮೇಲ್ಜಾತಿಯವರ ಶೋಷಣೆಗೆ ಗುರಿಯಗಿ ಬದುಕುತ್ತಿರುವ ತಳಸಮುದಾಯದ ಇಂದಿನ ಕಾಲದಲ್ಲಿಯೂ ಅದೇ ಪರಿಸ್ಥಿತಿಯೊಳಗೆ ಬಂಧನವಾಗಿರುವುದು ವಿರ್ಪಯಾಸವಾಗಿದೆ. ಲಂಬಾಣಿ ತಾಂಡದಲ್ಲಿನ ದುಷ್ಚಟಗಳು ಅತಿರೇಕವಾಗಿ ಹೆಂಡಿಯರ ಮಾಂಗಲ್ಯ ಗೌಡರ ಮನೆ ಪೆಟ್ಟಿಗೆ ಸೇರುವಂತೆ ಮಾಡಿವೆ. ಹಳ್ಳಿಗೆ ಬಂದ ಆಟವನ್ನು ನೋಡಿ, ಕಳಕಳಿಯಿಂದ ತನ್ನ ಓರಿಗೆಯವರೊಂದಿಗೆ ಚೊಂಚಜ್ಜ ತನ್ನ ಮನಸಿನಾಳದ ನೋವನ್ನು ತೋಡಿಕೊಂಡಿದ್ದನು. ಇದು ಸಹ ಬಂದು ವರ್ಗದವರ ಹೋರಾಟವಾಗಿ ಲಂಬಾಣಿ ಸಮುದಾಯವನ್ನು ವ್ಯಾಪಿಸಿದೆ.

'ಭೂಮಿಯಲ್ಲಿ ದುಡಿಯುವ ಆ ದುಡಿಮೆಯ ಫಲವನ್ನು ನೀಡುವ ಜನಗಳ ವರ್ಗವೇ ಶೋಷಿತವರ್ಗ' ಎಂದು ಡಾ.ಬಿ.ಎಸ್.ಗೀತಾ ಅವರು ತಿಳಿಸಿದ್ದಾರೆ. ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರು ದಲಿತರಿಗೆ ಶೋಷಣೆಯಿಂದ ದೂರವಾಗುವ ಮಾರ್ಗವನ್ನು ಹೀಗೆ ತಿಳಿಸಿದ್ದಾರೆ. "ರಾಜಕೀಯ ಅಧಿಕಾರವು ಎಲ್ಲ ಬಗೆಯ ಪ್ರಗತಿಯ ಬಾಗಿಲುಗಳ ಬೀಗಗಳನ್ನು ತೆರೆಯುವ ಮಾಸ್ಟರ್ ಕೀಲಿ ಆಗಿದೆ. ಆ ಕೀಲಿಯನ್ನು ನೀವು ವಶಪಡಿಸಿಕೊಳ್ಳಿ" ಎಂದು ತಳಸಮುದಾಯದವರಿಗೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ. ಈ ಎಲ್ಲ ಮಾತುಗಳು ತಳಸಮುದಾಯದ ನೈಜ ಬದುಕಿನ ಸ್ಥಿತಿಗತಿಯ ಬಗ್ಗೆ ತಿಳಿಸುವುದಾಗಿದೆ.

3.5 ಮಹಿಳಾ ಶೋಷಣೆ

ಮಹಿಳೆ ಎಂದರೆ 'ಇಡೀ ಕುಟುಂಬವನ್ನು ಹೆಣ್ಣು ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಗೆಳತಿಯಾಗಿ, ಹೆಂಡತಿಯಾಗಿ, ಸಂಬಂಧಗಳ ವಿವಿಧ ಮುಖಗಳ ಮೂಲಕ ಕುಟುಂಬ ಪ್ರೀತಿಯನ್ನು ಹರಡುತ್ತಾ ಬದುಕು ಸಲಹುವವಳು ಅವಳೇ ಮಹಿಳೆ. ಈ ರೀತಿಯಾಗಿ ಪುರುಷನ ಬದುಕಿನಲ್ಲಿ ಬಂದು ತನ್ನ ಪ್ರೀತಿಯನ್ನಾ ತ್ಯಾಗ ಮಾಡುವ ಸಹನ ಮೂರ್ತಿಯ ಮೇಲಿನ ದೌರ್ಜನ್ಯವೇ ಮಹಿಳಾ ಶೋಷಣೆ ಆಗಿದೆ.

ರಂಜಾನ್ ದರ್ಗಾ ಅವರು ಕುಟುಂಬದೊಳಗಿನ ಮಹಿಳೆಯರ ಬಗ್ಗೆ ಮಾತನಾಡುತ್ತಾ "ಹೆಣ್ಣು ಗಂಡಿನ ಸಹಚರ ಭಾವದಿಂದ ಮಾತ್ರ ಕುಟುಂಬಗಳು ಉಳಿಯಲು ಸಾಧ್ಯ. ನಾಗರೀಕತೆಗಳು ಉಳಿಯಲು ಸಾಧ್ಯ ಇಲ್ಲದಿದ್ದರೆ ಮಾನವನ ಕಾಲ ವಿನಾಶದ ಅಂಚಿಗೆ ಹೋಗುವುದರಲ್ಲಿ ಸಂಶಯವಿಲ್ಲ" 'ಹೆಣ್ಣು ಸಂಸಾರದ ಕಣ್ಣು ಪುರುಷ ಅವಳ ಸಹಪಾಠಿ' ಅನ್ನೊ ಅರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ.

ಮಹಿಳೆಯರ ಬಗೆಗಿನ ವ್ಯಾಖ್ಯಾನ "ಯಾವ ಮಹಿಳೆ ಬದುಕಿನ ಎಲ್ಲ ರೀತಿಯ ಸಮಸ್ಯೆಗಳಿಗೆ ಮುಖಾ ಮುಖಿಯಾಗಿ ಜಾಗೃತಿಯ ಮಾರ್ಗ ಕಂಡು ಕೊಂಡು ಯಶಸ್ವಿಯಾಗುತ್ತಾಳೋ ಅವಳೇ ನಿಜವಾದ ಸ್ತ್ರೀ" ಎಂಬ ವಾದವಿದೆ. ಇಂತಹ ಮಹಿಳೆಯನ್ನು ಪುರುಷ ಸಮಾಜ ಅಸ್ಪೃಶ್ಯಳಂತೆ ಕಾಣುತ್ತಿದೆ.

"ಅಸ್ಪೃಶ್ಯಳೆಂದೇ ಗುರುತಿಸಲ್ಪಟ್ಟಿದ ಮಹಿಳೆ ತಾನು ಬೆಳೆದು ಒಂದು ವರ್ಗದ ಅನುಭವಗಳನ್ನು ಕಟ್ಟಿಕೊಡುವಲ್ಲಿ ಸಮರ್ಥಳಾಗುತ್ತಿದ್ದಾಳೆ". ಎಂದು ಮಹಿಳೆಯ ಸಾಮರ್ಥ್ಯದ ಬಗ್ಗೆ ಡಾ.ಎಚ್.ಎಲ್ ಪುಷ್ಪಾ ಅವರು ವ್ಯಾಖ್ಯಾನಿಸಿದ್ದಾರೆ.

ಲೇಖಕರ 'ಕತ್ತಲು ಕರಗುವ ಮುನ್ನ', 'ಗೋರಮಾಟಿ' ಮತ್ತು ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಗಳಲ್ಲಿ ಮಹಿಳಾಶೋಷಣೆಯ ಸಂದರ್ಭಗಳು ಅಧಿಕವಾಗಿವೆ. 'ಗೋರಮಾಟಿ' ಮತ್ತು 'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಗಳು ಲಂಬಾಣಿ ತಾಂಡದೊಳಗೆ ಮಹಿಳಾ ನೆಲೆಯ ವಸ್ತುವನ್ನೊಳಗೊಂಡಿದ್ದು ಲೈಗಿಂಕ ಶೋಷಣೆಯ ಸಾಲು-ಸಾಲು ಆಕರಗಳು ದೊರೆಯುತ್ತವೆ.

'ಕತ್ತಲು ಕರಗುವ ಮುನ್ನ' ಕಾದಂಬರಿಯಲ್ಲಿ ಗೌಡರ ಹಾವಳಿಯಿಂದ ತಾಂಡದ ಜನರಿಗೆ ಬಾರೀ ಬೇಸರವಾಗಿತ್ತು. ಪಟೇಲ ಸಿರಂಗಣ್ಣನ ಗದ್ದೆ ನಾಟಿ ಮಾಡಿಕೊಂಡು ಜೀವನ ಮಾಡುತ್ತಿದ್ದ ಲಂಬಾಣಿ ಜನರಿಗೆ ದಿಂಬೇಗೌಡನ ಹಾವಳಿ ಅಧಿಕವಾಗಿತ್ತು. "ತಾಂಡದ ಹುಡುಗಿಯರನ್ನ ಹೆಂಗಬೇಕೂ ಹಂಗ ಬಳಸಿಕೊಳ್ತಿದ್ದ. ಯಾ ಹುಡುಗಿ ಮದ್ಲು ಸಾಲದಾಟತಾಳೋ ಅಕೀನ ಪಕ್ಕದ ದೊಡ್ಡ ಜ್ವಾಳದ ಹೊಲಕ್ಕೆ ಒಯ್ದು

ತೀಟೆತೀರಿಸಕೊಂಡು ಒಂದೆರಡ ರೂಪಾಯಿ ಇನಾಮು ಕೊಟ್ಟು ಗದಮುತ್ತಿದ್ದ" ಈ ಮಾತಿನಲ್ಲಿ ಚಟುವಟಿಕೆಯಿಂದ ಕೂಲಿ ಕೆಲಸ ಮಾಡುವ ಹುಡುಗಿಯನ್ನು ಗೌಡರು ತಮ್ಮ ತೀಟೆಗೆಬಳಸಿಕೊಂಡು ಹಣಕೊಟ್ಟು ಕೈತೊಳೆದುಕೊಳ್ಳುತ್ತಿದ್ದರು.

ತಳಸಮುದಾಯದವರಾದ ಲಂಬಾಣಿಗರು ಕೂಲಿ ಮಾಡಿ ಜೀವನ ಮಾಡುತ್ತಿದ್ದರು. ಇವರ ಕೂಲಿಯ ಸ್ಥಳಗಳು ಸುತ್ತಮುತ್ತಲ ದಿಂಬೇಗೌಡ, ಪಟೇಲಸಿರಂಗಣ್ಣ ಇವರುಗಳಿಗೆ ಸೇರಿದ ಹೊಲ, ಗದ್ದೆ ತೋಟಗಳಾಗಿದ್ದವು. ಆ ಕಾರಣದಿಂದಾಗಿ ಲಂಬಾಣಿ ಜನರು ಮತ್ತು ಮಹಿಳೆಯರು ಮೇಲ್ಜಾತಿ ಯಜಮಾನರ ಕಿರುಕುಳದ ಬಗ್ಗೆ ಪ್ರತಿರೋಧ ಮಾಡುವ ಸ್ಥಿತಿಯಲ್ಲಿರಲಿಲ್ಲ. ಪಾಪಾಪೂರದ ತೆವರೆಗೌಡ ಅಚ್ಚೇರ ರಾಗಿಯೊಳಗೆ ಅರ್ಧಪಾವಿನಷ್ಟು ಮಣ್ಣು ಸೇರಿಸಿ ಕೂಲಿ ಕೊಡುತ್ತಿದ್ದನು. ಈ ಕೂಲಿಗಾಗಿ ಅವರಿಂದಾಗುತ್ತಿದ್ದ ಅತ್ಯಾಚಾರವನ್ನೆಲ್ಲ ಸಹಿಸಿಕೊಂಡು ಬದುಕುತ್ತಿದ್ದರು.

ಕಾಲೇಜಿನೊಳಗೆ ಪ್ರಭು ಮತ್ತು ಮಲ್ಲಿಕಾಳ ಪ್ರೇಮ ಎಲ್ಲರಿಗೂ ತಿಳಿದಿರುವ ವಿಷಯವಾಗಿತ್ತು. ಪ್ರೇಮದ ವಿಷಯ ತಿಳಿದಿದ್ದ ಜಿಂಡಾಲು ಮತ್ತು ಅವನ ಚೇಲಾಗಳು ಪ್ರಭುವನ್ನು ಕುರಿತು ನೀವು ಗುರುಗಳು ಪಾಠ ಹೇಳಿ ಕೊಡುತ್ತೀರಿ ಅಂತ ನಮ್ಮ ಅಕ್ಕ-ತಂಗಿಯರನ್ನು ನಿಮ್ಮ ಹತ್ತಿರ ಕಳುಹಿಸಿದರೆ ಪ್ರೇಮಪಾಠ ಹೇಳಿ ಕೊಡುತ್ತಿರಲ್ಲ ಎಂದು ಗಡಸು ಧ್ವನಿಯಲ್ಲಿ ಹೇಳಿದನು. ಮಧ್ಯಾಹ್ನ ನಿಮ್ಮ ರೂಮಿನೊಳಗೆ ಇದ್ದಳಲ್ಲ ಆಕಿ ನನ್ನ ತಂಗಿ ಮಲ್ಲಿಕಾ ಅಷ್ಟೊತ್ತಿನ ವೇಳೆಯಲ್ಲಿ ಒಬ್ಬಳೇ ಹುಡುಗೀನ ರೂಮಾಲಿ ಇಟ್ಟುಕೊಂಡು ಏನು ಮಾಡುತ್ತಿದ್ದಿರೀ ಎಂದು ಬಾಯಿಗ ಬಂದಹಾಗೆ ಮಾತನಾಡಿದನು. ಮಾತ್ರವಲ್ಲ "ಈ ಬೆವರ್ಸಿ ರಂಡಿಯರಿಗೆ ಇದ್ದ ಊರ ಹುಡಗರೇನಾಗ್ಯರೋ, ಎಲ್ಲಿಂದಲೋ ಬಂದ ಪರದೇಶಿ ನನಮಕ್ಕಳು ಮಾಜಾ ಮಾಡಾಕ ಬರ್ತಾರಲ್ಲ" ಈ ಮಾತಿನಲ್ಲಿ ಜಿಂಡಾಲು ತಳಸಮುದಾಯದವರನ್ನು ಪ್ರೀತಿಸಿದ ಸ್ವಸಮುದಾಯದ ಹುಡುಗಿಯರ ಬುದ್ಧಿವಂತಿಕೆ, ನಡವಳಿಕೆಯನ್ನು ಅವಹೇಳನ ಮಾಡುತ್ತಿರುವುದು.

ತಳಸಮುದಾಯದವನಾದ ನಾಯಕ ಪ್ರಭು ಮೇಲ್ಜಾತಿಯ ಹುಡುಗಿ ಮಲ್ಲಿಕಾಳನ್ನು ಪ್ರೀತಿಸುತ್ತಿರುವುದನ್ನು ಸಹಿಸಿಕೊಳ್ಳದ ಜಿಂಡಾಲು ಆ ಹುಡುಗಿಯನ್ನು ಹೆಣ್ಣು ಅಂತ ಕನಿಕರವಿಲ್ಲದೆ 'ರಂಡೆ', 'ಬೇವರ್ಸಿ'ಗಳೆಂಬ ಪದ ಪ್ರಯೋಗದ ಮೂಲಕ ಅವಹೇಳನ ಮಾಡಿರುವುದು ಅಸಂಬಂಧ್ಧವಾಗಿದೆ. ಇವನ ಮಾತುಗಳಿಂದ ಸಿಟ್ಟಿಗೆದ್ದ ಪ್ರಭು ಬಾಯಿ ಬಿಗಿಹಿಡಿದು ಮಾತನಾಡು ಜಿಂಡಾಲು, ನೀನು ಇಷ್ಟು ಕೆಳಮಟ್ಟದಲ್ಲಿ ಆಲೋಚಿಸಬೇಡ ನಾನು ನಿನ್ನಷ್ಟು ನೀಚ ಕೆಲಸಕ್ಕೆ ಇಳಿದಿಲ್ಲ. ಹೌದು ನಾನು ಆಕಿಯನ್ನು ಪ್ರೀತಿಸುತ್ತಿದ್ದೇನೆ ಮುಂದೆ ಮದುವೆ ಆಗುತ್ತೇನೆ ನೀ ಏನು ಮಾಡುತ್ತೀಯ? ಎಂದು ಏರುಧ್ವನಿಯಲ್ಲಿ ಹೇಳಿದನು. ಅವನ ಮಾತಿನಿಂದ ಗಾಬರಿಗೆ ಬಿದ್ದ ಹನುಮೇಶಿ, ಜಿಂಡಾಲು ಮತ್ತು

ಅವನ ಚೇಲಾಗಳು ಜಾಗ ಖಾಲಿ ಮಾಡಿದರು. ಇಂತಹ ಸಂದರ್ಭಗಳು ಸಮಾಜದೊಳಗೆ ಒದಗಿ ಬರುವುದು ಅನಿವಾರ್ಯವಾಗಿದೆ. ಆದರೆ ಇವುಗಳಿಗೆ ಯಾವುದೇ ಮನ್ನಣೆ ಕೊಡದೇ ಸ್ತ್ರೀಯರಿಗೆ ಗೌರವ ಕೊಡುವುದು ಮುಖ್ಯವಾಗುತ್ತದೆ.

ತರಗತಿಯೊಳಗೆ ಪ್ರಭು ತನ್ನ ಪ್ರೀತಿಯ ಅವಾಂತರಗಳನ್ನು ನೆನೆದು ಪರಿತಪಿಸುವಾಗ 'ಎ ಮಾಸ್ಟರ್ ನಿನ್ನ ಪರಿಚಯ ಹೇಳೋ ಮಹಾರಾಯ' ಅಂತ ಏಕ ವಚನದಲ್ಲಿ ಮಾತನಾಡಿದನು ಶೆಟ್ಟಿ. ತರಗತಿಯ ಪಾಠದ ನಡುವೆ ಸುಮ್ಮಿ ಎನ್ನುವ ಹುಡುಗಿಯನ್ನಾ ಹೀಯಾಳಿಸಿದ್ದರಿಂದ ಪ್ರಭು ಮತ್ತು ಶೆಟ್ಟಿಯ ನಡುವೆ ಸಣ್ಣದಾಗಿ ಮಾತುಕತೆ ನೆಡೆದಿತ್ತು. ಶೆಟ್ಟಿಯ ನಡವಳಿಕೆಯಿಂದ ಗಾಬರಿಕೊಂಡಿದ್ದ ಪ್ರಭು ಅಪ್ಪ ಮಹಾರಾಯ ನಿನಗೆ ಕೈ ಮುಗಿತೀನಿ ಹೊರಗೆ ಹೋಗು ಎಂದು ವಿನಂತಿಸಿದನು. ಈ ಎಲ್ಲ ಅವಾಂತರದ ಅನಂತರದಲ್ಲಿ ಕ್ಷಮೆ ಕೇಳಲು ಬಂದ ಶೆಟ್ಟಿ ತನ್ನ ನಡವಳಿಕೆಗೆ ಸಮರ್ಥನೆ ಕೊಟ್ಟಿದ್ದು ಹೀಗೆ "ಏನ ಮಾಡೋದ ಸಾರ್, ಸಾವುಕಾರ ಹುಡ್ರು ಚೆಂದನ ಹುಡುಗಿರಯನ್ನ ಹಾರ್ಸಿಕೊಂಡು ಹೋಗಿ ಮಜಾ ಮಡ್ತಾರ. ಅವರ ಹತ್ರ ಇರೋ ಬೈಕು, ರೊಕ್ಕ ಮಳ್ಳ ಮಾಡಸ್ತಾವೆ" ಈ ಮಾತಿನಲ್ಲಿ ಹುಡುಗಿಯರು ಹಣ, ಬೈಕು ಇದ್ದವರ ಜೊತೆ ಸುತ್ತಾಡಲು ಕಾಲೇಜುಗಳಿಗೆ ರಜೆ ಹಾಕುತ್ತಾರೆ ಇಂತಹ ಹುಡುಗಿಯರನ್ನು ಸಾವುಕಾರ ಹುಡುಗರು ಮಜಾ ಮಾಡುತ್ತಾರೆಂದು ಸ್ತ್ರೀಯರನ್ನು ಶೋಷಣೆ ಮಾಡಿರುವುದಾಗಿದೆ.

ಮೊದಮೊದಲು ಶೆಟ್ಟಿಯ ನಡುವಳಿಕೆಯ ಬಗ್ಗೆ ಅರಿವಿಲ್ಲದ ಪ್ರಭುವಿಗೆ ಶೆಟ್ಟಿಯ ಮಾತುಗಳು ನಿಜ ಎನ್ನಿಸುತ್ತಾ ಹೋಯಿತು. ಆದರೆ ಕಾಲ ಕಳೆದಂತೆ ಇವನ ಮಾತಿನಲ್ಲಿ ಯಾವುದೇ ಹುರುಳು ಇಲ್ಲವೆಂಬುದು ಸ್ಪಷ್ಟವಾದಾಗ ಅವನ ನಿಕೃಷ್ಟವಾದ ಮನಸ್ಸಿನ ಬಗ್ಗೆ ಬೇಸರಗೊಂಡನು. ಗ್ರಾಮೀಣ ಪ್ರದೇಶದಿಂದ ಹಿಡಿದು ನಗರ ಪ್ರದೇಶದವರೆವಿಗೂ ಸ್ತ್ರೀ ಶೋಷಣೆ ವಿಭಿನ್ನವಾಗಿದೆ. ಕೆಲವು ಕಡೆಯಲ್ಲಿ ದೈಹಿಕವಾಗಿ ಮಾಡುವ ಶೋಷಣೆಯಾದರೆ ಮತ್ತೊಂದೆಡೆ ಮಾನಸಿಕವಾಗಿ ಮಾಡಿದ ಶೋಷಣೆಯಾಗಿದೆ. ಒಟ್ಟಿನಲ್ಲಿ ಎರಡು ರೀತಿಯ ಶೋಷಣೆಗಳು ಸ್ತ್ರೀಯರ ಮೇಲೆಯೇ ಎಂಬುದು ಸ್ಪಷ್ಟವಾಗಿದೆ. ಶೆಟ್ಟಿ ಹೇಳಿದ ರೀತಿಯಲ್ಲಿಯೂ ಶೋಷಣೆಗಳು ಸ್ತ್ರೀಯರ ಮೇಲೆ ಅಧಿಕವಾಗಿವೆ. ಆದರೂ ಸ್ತ್ರೀಯರು 'ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ' ಮತ್ತೆ-ಮತ್ತೆ ಇದೇ ರೀತಿ ಶೋಷಣೆಗೆ ಗುರಿಯಾಗುತ್ತಿರುವುದು ವಿಪರ್ಯಾಸವಾಗಿದೆ.

ಪ್ರತಿಯೊಂದು ಹಂತದ ಒಳಗೆ ಹಣ, ಜಾತಿ, ಧರ್ಮ ಪಂಗಡಗಳದ್ದೆ ಪ್ರಧಾನ ಸ್ಥಾನಮಾನವಾಗಿದೆ. ರಾಜಕೀಯದ ಕೊಳಕು ಮನಸ್ಸುಗಳು ಸಮಾಜವನ್ನು ಸುತ್ತುವರಿದುಕೊಂಡಿದ್ದು ಪುರುಷರ ದೌರ್ಜನ್ಯಕ್ಕೆ ಮಿತಿ ಇಲ್ಲದಂತಾಗಿದೆ. ತಳಸಮುದಾಯದಲ್ಲಿ ಬದುಕುವ ಮಹಿಳೆಯರಿಗೆ ಮೇಲ್ಜಾತಿಯ ಪುರುಷ ಸಮಾಜ

ನೀಡುತ್ತಿದ್ದ ಗೌರವ ಅಸಮಾಧಾನಕಾರವಾಗಿದೆ. "ಮೇಲ್ಜಾತಿಯವರು ನಡೆಸೋ ದಬ್ಬಾಳಿಕೆ ಊರೊಳಗ ಎಷ್ಟು ಹೆಂಗಸರನ್ನ ತಡವಿ ಅತ್ಯಾಚಾರ ಮಾಡಿಲ್ಲ. ಕಾಲ ಬದಲಾಗಿ ಕಾನೂನು ಬಂದ್ರು ಕೂಲಿಗ ಹಚ್ಚಂಗಿಲ್ಲಾ ಅಂತ ಹೆದರಿಕೆ ಹುಟ್ಟಿಸೋದು ನಿಂತಿಲ್ಲಾ" ಈ ಮಾತಿನಲ್ಲಿ ಮೇಲ್ಜಾತಿಯ ಪುರುಷ ಸಮಾಜ ತಳಸಮುದಾಯದ ಮಹಿಳೆಯರನ್ನು ಬಳಸಿಕೊಳ್ಳುತ್ತಿದ್ದ ರೀತಿಯ ಬಗ್ಗೆ ತಿಳಿಸಲಾಗಿದೆ. ತಳಸಮುದಾಯದವರ ಶೋಷಣೆಯ ಬಗ್ಗೆ ಚಿಂತಿಸುತ್ತಾ ನಾಯಕ ಪ್ರಭು ಮಹಿಳೆಯರ ಬಗ್ಗೆ ಆಲೋಚನೆ ಮಾಡುತ್ತಾ ಅವರ ಸ್ಥಿತಿಗತಿ ಕುರಿತು ಮರುಗುತ್ತಾನೆ. ಮೇಲ್ಜಾತಿ ಪುರುಷರ ದಬ್ಬಾಳಿಕೆಗೆ ಎಷ್ಟೋ ಮಂದಿ ಮಹಿಳೆಯರು ಶೀಲ ಕಳೆದುಕೊಂಡು ಗೌರವ ಇಲ್ಲದ ಬದುಕು ಬದುಕುತ್ತಿದ್ದರೆ. ಮೇಲ್ಜಾತಿಯ ಪುರುಷರನ್ನು ವಿರೋಧಿಸುವ ಮಹಿಳೆಯರಿಗೆ ಕೂಲಿಗೆ ಕರೆಯುವುದಿಲ್ಲ. ಕೂಲಿ ಕೊಡುವುದಿಲ್ಲ ಅಂತ ಬೆದರಿಕೆ ಹುಟ್ಟಿಸಿ ಅವರ ಮೇಲೆ ತಮ್ಮ ಕಾಮದ ಕ್ರೌರ್ಯವನ್ನು ತೋರಿಸಿರುವುದರ ಬಗ್ಗೆ ಉಲ್ಲೇಖ ಮಾಡಲಾಗಿದೆ. ಇಂತಹ ಕ್ರೌರ್ಯಗಳ ವಿರುದ್ಧ ಕಾನೂನು ಬಂದರೂ ಸ್ತ್ರೀಯರ ಮೇಲೆ ನಿರಂತರವಾಗಿ ಅತ್ಯಾಚಾರ ನಡೆಯುತ್ತಿರುವುದು ಕಾನೂನಿಗೆ ಶಕ್ತಿ ಇಲ್ಲ ಎಂಬುದನ್ನು ಸಾಬೀತು ಪಡಿಸುತ್ತದೆ.

'ಗೋರಮಾಟಿ ಕಾದಂಬರಿಯಲ್ಲಿ ದೊಡ್ಡ ಚಂಡಾಳಿಯಾದ ಮೀಟಿಬಾಯಿ ಬಾಣವ್ವನಿಗೆ ಕೊಡಬಾರದ ಹಿಂಸೆಯನ್ನೆಲ್ಲ ಕೊಟ್ಟಿದ್ದಳು. ಬಾಣವ್ವ ಬದುಕಿನ ಜೊತೆಗೆ ಗುದ್ದಾಡುತ್ತಾ ಗುದ್ದಾಡುತ್ತಾ ತಾಯಿಯಾಗ ತೊಡಗಿದಳು. ಒಂದು ದಿನನೂ ನೆಲದ ಮೇಲೆ ಕುಳಿತುಕೊಳ್ಳದ ಹಾಗೇ ಗಾಣಕ್ಕೆ ಕಟ್ಟಿದ ಎತ್ತಿನ ಹಾಗೆ ದುಡಿಯ ತೊಡಗಿದಳು. ಆದರೆ ಬಾಣವ್ವನನ್ನು ಮಕ್ಕಳು ಹೇರುವ ಯಂತ್ರದಂತೆ ಬಳಸಿಕೊಂಡ ಮೀಟಿಬಾಯಿ ಶೋಷಣೆ ಮಾಡುತ್ತಿದ್ದಳು. "ಪ್ರತಿ ವರ್ಷ ಒಂದೊಂದರಂಗ ಆರೇಳ ವರ್ಷದಾಗ ಮೂರು ಹೆಣ್ಣು ನಾಕ ಗಂಡು ಮಕ್ಕಳಾಗಿದ್ವು ಬಾಣಿಗೆ ಅಷ್ಟೊತ್ತಿಗಾಗಲೆ ಪಾಮಿ ಮದ್ವಿಯಾಗಿತ್ತು". ಈ ಮಾತಿನಲ್ಲಿ ಲಂಬಾಣಿ ಸಮುದಾಯದೊಳಗೆ ಸ್ತ್ರೀಯರನ್ನು ಸಂತಾನಾಭಿವೃದ್ಧಿಗೆ ಮಾತ್ರ ಬಳಸಿಕೊಂಡು ಶೋಷಣೆ ಮಾಡಿರುವುದರ ಬಗ್ಗೆ ತಿಳಿಸಲಾಗಿದೆ.

ಬಾಣವ್ವ ಗೊತ್ತಾನಾಯ್ಕನ ಹೆಂಡತಿ. ಅವಳು ಹೊಲ, ಮನೆಕಟ್ಟಿ ಎತ್ತು ಹಸುಗಳನ್ನ ಸಾಕುತ್ತಾ ಬೆಳೆದಂತೆ ಅಸಂಖ್ಯಾ ಮಕ್ಕಳ ತಾಯಿಯಾಗಿ ವಾಸ್ತವ ಬದುಕಿನಲ್ಲಿ ಶೋಷಣೆಗೆ ಗುರಿಯಾಗಿದ್ದಳು. ಮನೆ ತುಂಬ ಊಟ ಮಾಡುವ ಮಕ್ಕಳು, ದುಡಿಯಲು ಎತ್ತು ಇಲ್ಲ, ವಾಸವಾಗಿರಲು ಸರಿಯಾದ ಮನೆ ಇಲ್ಲ ತುಂಡು ಭೂಮಿನೂ ಇಲ್ಲದ ಪರಿಸ್ಥಿತಿಯಲ್ಲಿ ಬಾಣವ್ವ ತಾಂಡದ ಮಹಿಳೆಯರಿಗೆ ಸರಿಸಮನಾವಾಗಿ ಬದುಕಲು ಗಂಡ ಗೊತ್ತಾನಾಯ್ಕನೊಂದಿಗೆ ಸರಿಸಮಾನವಾಗಿ ದುಡಿಯುತ್ತಿದ್ದಳು.

ಬುದ್ಧಾನ ಹಿರಿಯ ಮಗ ಗೊತ್ತಾನಾಯ್ಕನ ಹೆಂಡತಿ ಬಾಣವ್ವ ನಾಲ್ಕು ಗಂಡು ಮಕ್ಕಳನ್ನು ಹೆತ್ತು ಮನೆಗೆ ನೆರವಾಗುತ್ತಿದ್ದುನ್ನು ಕಂಡು ಮೀಟಬಾಯಿಗೆ ಅಸೂಯೆ ಉಂಟಾಯಿತು. ಆದರೆ ಗೊತ್ತಾನ ತಮ್ಮ ಕಟುವಾನಾಯ್ಕನಿಗೆ ಒಂದರ ಮೇಲೆ ಒಂದರಂತೆ ಆರು ಹುಡುಗಿಯರಾದರು. ಕಡೆಗೆ ಒಂದು ಗಂಡು ಮಗು ಹುಟ್ಟಿ ನಾಲ್ಕು ವರ್ಷ ಆಗುವಷ್ಟುರಲ್ಲಿ ಮಗು ಸತ್ತು ಹೋಯಿತ್ತು. ಕಟುವಾ ಮತ್ತು ಅವನ ಹೆಂಡತಿ ಚಾಂವಿಬಾಯಿಗೆ ಗೊತ್ತಾನನ್ನು ಕಂಡು ಹೊಟ್ಟೆ ಉರಿಯತೊಡಗಿತ್ತು. ಮೀಟಿಬಾಯಿಗ ಎಲ್ಲಿಲ್ಲದ ಸಿಟ್ಟು ಬಂದು "ಥು ಹಾಳಹೆಂಗಸರು, ನನ್ನ ಮಗನಿಗೆ ಗಂಡು ಮಕ್ಕಳನ್ನೆ ಹೆತ್ತು ಕೊಡ್ಲಿಲ್ಲಾ ಅವ್ವನ ಕರ್ಮಾನೆ ಹಂಗೇನೊ ನಾನು ಹಂಗೇ ಬಿಡೊಳಲ್ಲ". ಈಮಾತಿನಲ್ಲಿಕಟುವಾನಿಗೆಗಂಡುಸಂತಾನಕೊಡದತನ್ನ ಸೊಸೆಯಂದಿರಾದ ಚಾಂವಿಬಾಯಿ ಮತ್ತು ಬಸಂತಿಯರ ಮೇಲೆ ಕೋಪ ಮಾಡಿಕೊಂಡಿರುವುದಾಗಿದೆ.

ಕಟುವಾ ಮತ್ತು ಚಾಂವಿಬಾಯಿಗೆ ಗಂಡು ಮಕ್ಕಳಾಗಲಿಲ್ಲ ಎಂದು ಮೀಟಿಬಾಯಿ ಕಟುವಾನಿಗೆ ಬಸಂತಿಯನ್ನು ಎರಡನೆ ಹೆಂಡತಿಯಾಗಿ ತಂದಳು. ಆದರೆ ಬಸಂತಿ ಮತ್ತು ಕಟುವಾ ದಂಪತಿಗಳಿಗೂ ಗಂಡು ಮಗು ಆಗಲಿಲ್ಲ ಇದರಿಂದ ಸಿಟ್ಟಿಗೆ ಬಿದ್ದ ಮೀಟಿಬಾಯಿ ತನ್ನ ಸೊಸೆಯರಿಬ್ಬರನ್ನು ಶೋಷಣೆ ಮಾಡಿರುವುದು ಅಸಂಬದ್ಧವಾಗಿದೆ. ಇಷ್ಟಕ್ಕೆ ತೃಪ್ತಿ ಪಟ್ಟುಕೊಳ್ಳದ ಮೀಟಿಬಾಯಿ ಕಟುವಾನಿಗೆ ಮೂರನೇ ಮದುವೆ ಮಾಡುವ ನಿರ್ಧಾರಕ್ಕೆ ಬಂದಳು. ಸಿಟ್ಟಿನಿಂದ ನೂರು ಬರಲಿ ನೂರು ಹೋಗಲಿ ನನ್ನ ಮಗನಿಗೆ ಇನ್ನೊಂದು ಮದುವೆ ಮಾಡುವುದು ನಿಶ್ಚಯವೆಂದು ಹೇಳುವಲ್ಲಿ 'ಹೆಣ್ಣಿಗೆ ಹೆಣ್ಣೆ ಶತ್ರು' ಎಂಬ ಗಾದೆಯನ್ನು ನೆನಪಿಸುತ್ತದೆ. ಆದರೂ ಮಹಿಳೆಯರಿಗೆ ಈ ರೀತಿಯ ಶೋಷಣೆ ನಿರಂತರವಾಗಿರುವುದು ವಿಪರ್ಯಾಸವಾಗಿದೆ.

ಲಮಾಣಿಗರು ಊರೂರು ಅಲೆದು ಕೂಲಿನಾಲಿ ಮಾಡಿ ಜೀವನ ಮಾಡುತ್ತಿದರು. ಆದರೂ ಮಹಿಳೆಯರಿಗೆ ಸರಿಯಾದ ಸ್ಥಾನಮಾನ ನೀಡಿರಲಿಲ್ಲ. ಸ್ತ್ರೀಯರು ಪುರುಷರ ಬೋಗದ ವಸ್ತುಗಳೆಂದು ಭಾವಿಸಿ ಹಾಗೆಯೇ ಬಳಸಿಕೊಳ್ಳುತ್ತಿದ್ದರು. ಹಿಂದೂ ಸಂಸ್ಕೃತಿಯಲ್ಲಿ ಅತ್ತಿಗೆ ಎಂದರೆ ಮಾತೃ ಪ್ರತಿರೂಪವೆಂದು ಪೂಜ್ಯನೀಯ ಭಾವದಲ್ಲಿ ನೋಡುತ್ತಿರುವಾಗ ಲಂಬಾಣಿಗರು ಚಿಂಪಿಯನ್ನೊ ಮಹಿಳೆಯನ್ನು ಕಾಮದೃಷ್ಠಿಯಲ್ಲಿ ನೋಡಿದ ಸಂದರ್ಭ. "ಅತ್ಲಾಗ ಅವಳ ಗಂಡ ಹಾಸಗಿ ಹಿಡಿದು ತಿಂಗಳಾಗಿಲ್ಲಾ ಆಕೀಗ ಮೈದನ ಆಗೋರು ಆಕಿ ಹೊಲಕ ಗಳೇಕ ಹೋದಂಗಮಾಡಿ ಗೆಳೆತನ ಮಾಡೊ ಯೋಚನೆ ಮಾಡಿದ". ಈ ಮಾತಿನಲ್ಲಿ ತಾಯಿ ಸ್ವರೂಪಿಣಿ ಅತ್ತಿಗೆಯ ಜೊತೆ ತಮ್ಮ ಕಾಮತೃಪ್ತಿ ಪಡೆಯಲು ಪ್ರಯತ್ನಿಸಿದ ಸಂದರ್ಭವನ್ನು ತಿಳಿಸಲಾಗಿದೆ.

ಚೆಂಪಿಯ ಗಂಡ ಅನಾರೋಗ್ಯದಿಂದ ಹಸಿಗೆ ಹಿಡಿದಿರುವಾಗ ಆತನ ತಮ್ಮಂದಿರು ಚೆಂಪಿಯ ಮೇಲೆ ತಮ್ಮ ಕಾಮತೃಷೆ ತೀರಿಸಿಕೊಳ್ಳುವ ಯೋಚನೆ ಮಾಡಿದ್ದರು. ಲಂಬಾಣಿಗರಲ್ಲಿ ಸ್ತ್ರೀಯರೊಂದಿಗೆ ಗೆಳೆತನ ಬೇರೆ ಅರ್ಥವನ್ನೇ ಪಡೆದುಕೊಂಡಿತ್ತು. ಚೆಂಪಿಯ ಮೈದುನನಾಗುವ ಪೂಜಾರಿ ಪಾಪುನಾಯ್ಕ ಹೊಲದ ಕಡೆಗೆ ಬಂದಾಗ ಮಾನಸಿಕವಾಗಿ ಹಿಂಸೆ ಮಾಡುತ್ತಿದ್ದನು. ಮತ್ತೊಂದು ಕಡೆಯಿಂದ ಚೆಂಪಿಯ ಮನೆ ಹತ್ತಿರದ ಕೆಂಚೀರಯ್ಯ ಒಂದು ಕೈ ನೋಡೆ ಬಿಡಾನ ಅಂತ ಪ್ರಯತ್ನಿಸಿದ್ದನು. ಇದರಿಂದಾಗಿ ಚೆಂಪಿಗೆ ಲಂಬಾಣಿ ತಾಂಡದೊಳಗೆ ಮಾರ್ಯದೆ ಇಲ್ಲದಂತಾಗಿತ್ತು.

ಹೊಲದಲ್ಲಿ ಒಂದಾಳು ಎತ್ತರ ಬೆಳೆದು ನಿಂತಿದ್ದ ತೊಗರಿ ಬೆಳೆಯನ್ನು ನೋಡಲು ಚೆಂಪಿ ಹೊಲಕ್ಕೆ ಬಂದಿದ್ದಳು. ಅದೇ ಹೊತ್ತಿಗೆ ಸರಿಯಾಗಿ ಕಿಷುಣಾ ಅವರ ಹೊಲ ದಾಟ ತನ್ನ ಹೊಲಕ್ಕ ರಾಗಿ ತೆನೆಯನ್ನು ಕಟ್ಟಾಕ್ಕೆ ಹೋಗುತ್ತಿದ್ದನು. ಅತ್ತಿಗೆಯಾಗಬೇಕಿದ್ದ ಚೆಂಪಿನ ನೋಡಿ "ಚೆಂಪಿ ನೀ ಬಹಳ ಸುಂದರವಾಗಿದ್ದೀಯಾ, ನಿನ್ನಂತೋಳು ಸೀಗಬೇಕಾರ ಏಳು ಜನ್ಮದ ಪುಣ್ಯಾನ ಮಾಡಬೇಕು ಅಂತ ಕಣ್ಣು ಮಿಟಕಿಸಿದ ಚೆಂಪಿ ಮೈ ಮುಳ್ಳಾಗಿತ್ತು". ಈ ಮಾತಿನಲ್ಲಿ ಒಂಟಿ ಹೆಣ್ಣಿನ ಜೊತೆ ಗಂಡು ಅಸಭ್ಯವಾಗಿ ನಡೆದುಕೊಳ್ಳುವ ಸಂದರ್ಭವನ್ನು ತಿಳಿಸಲಾಗಿದೆ.

ಚೆಂಪಿಯ ಮೈದುನ ಕಿಷುಣ ಒಂಟಿ ಹೆಣ್ಣು ಎಂದು ತಿಳಿದು ಏನು ಅತ್ತಿಗೆ ಒಬ್ಬಳೇ ಬಂದ್ದೀಯಾ, ಎಲ್ಲಿ ಸಾಣು? ಎಂದು ಆಕೆಯನ್ನು ಮಾತಿಗೆ ಎಳೆದನು. ಆದರೆ ಚೆಂಪಿಗೆ ಗಂಡ ಸಾಣುನಾಯ್ಕ ಬಂದರೆ ನನ್ನ ಮೇಲೆ ಅನುಮಾನಿಸಬಹುದೆಂಬ ಭಯದಿಂದಲೇ ಮಾತು ಆರಂಭಿಸಿದಳು ಆದರೆ ಕಿಷುಣ ಅವಳ ಕಡೆ ಮೋಹಕ ನೋಟ ಬೀರಿದಾಗ ಗಾಬರಿಯಾಗಿ ನನ್ನ ಗಂಡ ಬರುವುದರೊಳಗೆ ಇಲ್ಲಿಂದ ಜಾಗ ಖಾಲಿ ಮಾಡು ಇಲ್ಲದಿದ್ದರೆ ನಿನಗೆ ಸರಿಯಾಗಿ ಸಾಸ್ತಿ ಮಾಡಿಸುತ್ತೇನೆಂದು ತಿರುಗಿ ಬಿದ್ದಳು. ಆದರೂ ಚೆಂಪಿಯ ಮನದೊಳಗೆ ಭಯ ಅಡಕವಾಗಿತ್ತು. ತನ್ನ ಮೇಲೆ ನಡೆಯುವ ಮಾನಸಿಕ ಶೋಷಣೆಯಿಂದ ತಪ್ಪಿಸಿಕೊಳ್ಳಲು ಮಾಡಬೇಕಾದ ಪ್ರಯತ್ನವನ್ನೆಲ್ಲ ಮಾಡಿ ಬಸವಳಿದಿರುವ ಚೆಂಪಿಗೆ ದಾರಿತೋರದಂತಾಯಿತ್ತು. ಚೆಂಪಿಯಂತೆ ಸಮಾಜದೊಳಗೆ ಅನೇಕ ಮಹಿಳೆಯರ ಗೋಳು ಕೇಳುವವರಿಲ್ಲದಂತಾಗಿದೆ.

'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಯಲ್ಲಿ ಲಂಬಾಣಿ ತಾಂಡದೊಳಗೆ ಮಹಿಳೆಯರಿಗೆ ಗಂಡು ಮಗು ಹೆತ್ತರೆ ಮಾತ್ರ ತಾಂಡದಲ್ಲಿ ಅವಳಿಗೆ ಸೂಕ್ತವಾದ ಸ್ಥಾನಮಾನ, ಗೌರವ ಸಿಗುತ್ತಿತ್ತು. ಗಂಡು ಮಗುವಿಗೆ ಜನ್ಮ ನೀಡಿದವಳ ಸ್ಥಿತಿ ತಾಂಡದೊಳಗೆ ಪಶುವಿಗಿಂತಲೂ ಕಡೆಯಾಗಿರುತ್ತಿತ್ತು. ಕಾದಂಬರಿಯೊಳಗೆ ಮಂಗ್ಲ್ಯಾನ ಹೆಂಡತಿ ಚೆನ್ನಿ ಅಸಂಖ್ಯಾತ ಹೆಣ್ಣು ಮಕ್ಕಳಿಗೆ ಜನ್ಮ ನೀಡಿದಳು. ಇದರಿಂದಾಗಿ ಬೇಸರಗೊಂಡಿದ್ದ

ಮಂಗ್ಲ್ಯಾನು ತನ್ನ ಅಣ್ಣ ಸಂತುನಾಯ್ಕನ ಸಂಸಾರ ನೋಡಿ ಅಸೂಯೆಯಿಂದ ಹೊಟ್ಟೆ ಉರಿಯ ತೊಡಗಿತು. "ಇವ್ನನವ ಹಡಬಿ ಹೆಂಗ್ಸು ಚಿನ್ನಿ ಹೊಟ್ಟ್ಯಾನ ಚೀಲದಾಗ ಅದೆಷ್ಟು ಹೆಣ್ಣು ಬೋಳ್ಬಾರನ್ನ ತುಂಬ್ಕೊಂಡಾಳೋ ತಿಳಿವಲ್ದು. ಹಿಂಗೇ ಬಿಟ್ರೆ ಇನ್ನೆಷ್ಟು ಹೆಣ್ಣು ಹಡಿತಾಳೋ". ಈ ಮಾತಿನಲ್ಲಿ ಮಂಗ್ಲ್ಯಾನು ಗಂಡು ಮಗುವಿಗೆ ಜನ್ಮ ನೀಡದೆ ಹೆಣ್ಣು ಮಗುವಿಗೆ ಜನ್ಮ ನೀಡಿದ ಚಿನ್ನಿಯನ್ನು ಅಪಮಾನಿಸುತ್ತಿರುವುದಾಗಿದೆ.

ಲಂಬಾಣಿಗರು ಗಂಡು ಮಗುವಿನ ಜನ್ಮದ ಬಗ್ಗೆ ಅಪಾರವಾದ ಆಕಾಂಕ್ಷೆಯನ್ನು ಹೊಂದಿದ್ದರು. ಮುಪ್ಪಿನ ಕಾಲದಲ್ಲಿ ಗಂಡು ಮಗನಲ್ಲದೆ ಹೆಣ್ಣು ಮಕ್ಕಳು ಆಶ್ರಯ ನೀಡುವುದಿಲ್ಲ ಎಂಬ ಬಲವಾದ ನಂಬಿಕೆಯಿಂದ ಗಂಡು ಮಗುವಿನ ಬಗ್ಗೆ ಅಪಾರ ನಿರೀಕ್ಷೆ ಹೊಂದಿದ್ದರು. ಮಂಗ್ಲ್ಯಾನಿಗೆ ದುಡಿಯಲು ಬಲವಿಲ್ಲದ ಕಾರಣ ಮನೆಯ ಆಶ್ರಯಕ್ಕೆ ಗಂಡು ಮಗು ಬೇಕೆಂದು ಚಿನ್ನಿಗೆ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದನು. ಕೊನೆಗೆ ಮಂಗ್ಲ್ಯಾನು ತನ್ನಿಷ್ಟದಂತೆ ತಾಂಡದಲ್ಲಿ ರಂಗೋಲಿ ಮಾರುತಿದ್ದ ರತ್ನಾನಾಯ್ಕನ ತಂಗಿ ಪಿಂಕಿಯನ್ನು ಮದುವೆ ಮಾಡಿಕೊಂಡು ಬಂದನು. ಈ ಮೂಲಕ ಲಂಬಾಣಿ ತಾಂಡದೊಳಗೆ ಸ್ತ್ರೀಯರ ಶೋಷಣೆ ನಿರಂತರವಾಗಿತ್ತು.

ತಾಂಡದೊಳಗೆ ಹೆಂಗಸರು ಮಧ್ಯರಾತ್ರಿ ದೆವ್ವಗಳು, ಏಳುವ ಹೊತ್ತಾದರೂ ಅಡುಗೆ ಮಾಡಿ ಆಟವಾಡಿ ಆಯಾಸಗೊಂಡು ಮಲಗಿದ್ದ ಮಕ್ಕಳನ್ನ ಎಬ್ಬಿಸಿ ಸಂತೈಸಿ ಊಟ ಮಾಡಿಸಿ ಮಲಗಿಸಬೇಕಿತ್ತು. ಮುಂಜಾನೆಯಿಂದ ಸಂಜೆವರೆಗೂ ಬೆಂಕಿಯ ಮುಂದೆ ಅವಳೇ ಸಾಯಬೇಕಾಗಿತ್ತು. ಈ ಎಲ್ಲ ಕಷ್ಟಗಳ ನಡುವೆ ಕುಡಿದು ಬಂದು ದಂಡಿಸುವ ಗಂಡರಿಂದ ತಮ್ಮ ಜೀವವನ್ನ ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಇತ್ತು. ಇದರಿಂದ ಬೇಸತ್ತಿದ ಮಹಿಳೆಯರು "ಯಾಕಾರು ಹೆಣ್ಣು ಜನ್ಮ ಕೊಟ್ಯೋ ಭಗವಂತ, ಹಾಳಾದ್ದು, ಆಸರಕಿ, ಬ್ಯಾಸರಕಿ ಅನ್ನೋದ ಇಲ್ಲ ಈ ಜೀವಕ್ಕ ಗಂಡಸು ಒಲಿಮುಂದ ಬರಂಗಿಲ್ಲ. ಯಾಕಂದ್ರ ಸಮಾಜದಾಗ ಅದು ಕೀಳು. ಈ ಮಾತಿನಲ್ಲಿ ಲಂಬಾಣಿ ಪುರುಷರ ದೌರ್ಜನ್ಯದಿಂದ ಬೇಸತ್ತಿರುವ ಮಹಿಳೆಯರು ತಮ್ಮ ಹೆಣ್ಣು ಜನ್ಮದ ಬಗ್ಗೆ ಶಪಿಸುತ್ತಿರುವುದಾಗಿದೆ.

ಲಂಬಾಣಿ ಮಹಿಳೆಯರು ತಮ್ಮ ರೋಧನೆಯನ್ನು ತೋಡಿಕೊಳ್ಳುವುದಕ್ಕೆ ಆಗದೆ ಮಾನಸಿಕವಾಗಿ ಅಸ್ವಸ್ಥರಾಗಿದ್ದರು. ಗಂಡಸರು ದುಡಿಯದೆ ಇರುವುದು ಮನೆಯಲ್ಲಿ ಗಂಜಿಗೂ ಗತಿ ಇಲ್ಲದ ಪರಿಸ್ಥಿತಿ ಇತ್ತು. ಇಂತ ಸಂದಿಗ್ಧ ಪರಿಸ್ಥಿತಿಯೊಳಗೆ ಮಹಿಳೆಯರು ದೈಹಿಕವಾಗಿ ಶೋಷಣೆಗೆ ಗುರಿಯಾಗಿದರು. ಕೂಲಿಗಾಗಿ ನಾಕೈದು ಮೈಲಿ ದೂರ ನಡೆದುಕೊಂಡು ನಡೆದು ಬರುತ್ತಿದ್ದರೂ ಪುರುಷರ ಹಿಂಸೆಯಿಂದ ಬಿಡುಗಡೆವಿಲ್ಲದಿರುವುದು ಅವಳಿಗೆ ಮಾನಸಿಕ

ಬೇಸರವನ್ನುಂಟುಮಾಡಿತ್ತು.ಇಂತಹಪರಿಸ್ಥಿತಿಯಿಂದನೊಂದಿರುವಜೀವಿಗಳಿಗೆ ಮನೆಯಲ್ಲಿಯೂ ದುಡಿಯಬೇಕು ಹೊಲದಲ್ಲಿಯೂ ದುಡಿಯಬೇಕಾಗಿತ್ತು. ಇವರು ತಮ್ಮ ನೆಮ್ಮದಿಯನ್ನು ಸ್ಮಶಾನದಲ್ಲಿ ಎಂದು ನಿಶ್ಚಯಿಸಿಕೊಂಡಿದ್ದರು. ಆದರೂ ಶೋಷಣೆ ತಪ್ಪಿಲ್ಲದಿರುವುದು ಬಾರೀ ಅನಾಹುತವಾಗಿದೆ.

ಲಂಬಾಣಿ ಮಹಿಳೆಯರು ಬೆಳ್ಳಿ ಚುಕ್ಕಿ ಪೂರ್ವದಿಕ್ಕಿನಲ್ಲಿ ಹುಟ್ಟಿದಾಗಲೇ ಒಲೆಯೊಳಗಿನ ಬೂದಿ ತೆಗೆದು ನೀರು ಬಿಸಿಮಾಡಿ ರೊಟ್ಟಿ ಮಾಡಿಟ್ಟು ತಾವು ತಿಂದುಕೊಂಡು ಕೂಲಿಗೆ ಮೇಲ್ಜಾತಿಯವರ ತೋಟಗಳಿಗೆ ಹೋಗುತ್ತಿದ್ದರು. ಅಲ್ಲಿಂದ ಆರಂಭವಾಗುತ್ತಿದ್ದ ಇವರ ಬದುಕು ಸಂಜೆಯವರೆವಿಗೂ ನಿರಂತವಾಗಿಯೇ ನಡೆಯುತ್ತಿತ್ತು. ಇಂತಹ ಸಂದರ್ಭದಲ್ಲಿ ನಾಟಿ ಮಾಡುವಾಗ "ಬೀಜದ ಚೀಲ ಸೊಂಟದ ಮೇಲಿಂದ ಜಾರಿದರೆ ಮೇಲೆತ್ತಿ ಕಟ್ಟಲು ಗಂಡಸರನ್ನು ಕರೆದರೆ ಅವನು ಮುಟ್ಟಬಾರದ ಜಾಗವನೆಲ್ಲಾ ಸವರಿ ಅಸಾಯಕತೆಯ ಉಪಯೋಗ ಪಟ್ಕೋತ್ತಾನೆ". ಈ ಮಾತಿನಲ್ಲಿ ಮಹಿಳೆಯರ ಅಸಹಾಯಕತೆಯನ್ನು ಪುರುಷರು ತಮ್ಮ ಕಾಮದೃಷ್ಟಿಗೆ ಬಳಸಿಕೊಳ್ಳುತ್ತಿದ್ದ ರೀತಿಯ ಬಗ್ಗೆ ತಿಳಿಸುತ್ತದೆ.

ಲಂಬಾಣಿ ತಾಂಡದೊಳಗೆ ಇಂತಹ ಘಟನೆಗಳು ಸಾಮಾನ್ಯವಾಗಿ ದಿನನಿತ್ಯ ನಡೆಯುತ್ತಿದ್ದವು. ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡು ಬದುಕುವ ಮಹಿಳೆಯರಿಗೆ ಪ್ರತಿದಿನವೂ ಅಪಮಾನ ಮಾಡಲಾಗುತ್ತಿತ್ತು. ಈ ಅಪಮಾನದ ಬಗ್ಗೆ ಪ್ರಶ್ನೆ ಮಾಡುವ ಧೈರ್ಯ ಮಹಿಳೆಯರಲ್ಲಿ ಇಲ್ಲದಿರುವುದು ಪುರುಷ ಸಮಾಜ ತನ್ನ ದೌರ್ಜನ್ಯ ಎಸಗಲು ಕಾರಣವಾಯಿತು. ಇಂತ ಘಟನೆಗಳು ಒಬ್ಬರು ಮಾಡಿದ ತಪ್ಪಿಗಾಗಿ ಇಡೀ ಪುರುಷರನ್ನೆ ದೂಷಿಸುವಂತೆ ಮಾಡಿರುವುದು ವಿರ್ಪಯಾಸವಾಗಿದೆ. ಇಂತಹ ಶೋಷಣೆಯ ಬಗ್ಗೆ ಮಹಿಳೆಯರು ಮುಂದಾದರೂ ಎಚ್ಚರಿಕೆ ವಹಿಸಬೇಕಾಗಿರುವುದು ಅಗತ್ಯವಾಗಿದೆ.

ಲೇಖಕರ 'ಗುಡ್ಡಜ್ಜ' ಸಂಕಲನದ 'ಬ್ರೆಡ್ ಬೇಕರಿ ಮತ್ತು ಅವನು' ಕಥೆಯಲ್ಲಿ ಬಡತನದ ಬೇಗುದಿಯಲ್ಲಿದ್ದಲಂಬಾಣಿಸಮುದಾಯದಕುಟುಂಬಒಂದುಆರ್ಥಿಕ ಅಸಮತೋಲನದಿಂದಾಗಿ ತಮ್ಮ ಮಗಳನ್ನು ವಯಸ್ಸಾದ ಮುದುಕನಿಗೆ ಕೊಟ್ಟು ವಿವಾಹ ಮಾಡಿ ಮಹಿಳೆಯನ್ನು ಶೋಷಣೆಗೆ ಒಳಪಡಿಸಿರುವುದು ವಿಪರ್ಯಾಸವಾಗಿದೆ. "ಬಡತನದ ಧಗಿಯೊಳಗೆ ಬೆಂದ ತಂದಿ–ತಾಯಿ, ಮಗಳ ಮನಸಾಕ್ಷಿಯನ್ನ ಕೊಂದು, ಅವಳಿಗೆ ಇಷ್ಟ ಇಲ್ಲದ ಅವನ ಜೋಡಿ ಬದುಕು ಅಸಾಧ್ಯ ಆದ್ರೂ ಒತ್ತಾಯ ಮಾಡಿ ಮದ್ವಿ ಮಾಡಿದಾಗ ಆತ್ಮವಂಚನೆಯಿಂದ, ಮುಳ್ಳಿನ ಹಾಸಗಿ ಮ್ಯಾಲ ಮಲಗೋ ಹಂಗ" ಈ ಮಾತಿನಲ್ಲಿ ಬಡತನದಿಂದಾಗಿ ಸ್ವಂತ ಮಗಳ ಜೀವನವನ್ನು ನಾಶಮಾಡಿದ ತಂದೆ–ತಾಯಿಯ ಪರಿಸ್ಥಿತಿ ಕುರಿತು ತಿಳಿಸಲಾಗಿದೆ.

ತಳಸಮುದಾಯದ ಹುಡುಗಿಗೆ ಇಷ್ಟವಿಲ್ಲದ ಮದುವೆ ಮಾಡಿ ಹುಡುಗಿಯ ಬದುಕಿಗೆ ಅಂತ್ಯ ಹಾಡಿದ ತಂದೆ-ತಾಯಿಗಳು ಈ ಕಥೆಯಲ್ಲಿ ಶೋಷಿತರಾಗಿದ್ದಾರೆ. ಇಪ್ಪತ್ತರ ಹರೆಯದ ಹುಡುಗಿಗೆ ಎಪ್ಪತ್ತು ದಾಟಿದ ಮುದುಕನೊಂದಿಗೆ ಬಡತನದ ಕಾರಣದಿಂದ ಮದುವೆ ಮಾಡಿದ್ದರು. ಮುದುಕನೊಂದಿಗಿನ ಮದುವೆ ಹುಡುಗಿಗೆ ಮಾನಸಿಕ ವೇದನೆಯಾಗಿ ನೇಣು ಬಿಗಿದುಕೊಂಡು ಸಾವನ್ನಾಪ್ಪಿದಳು. ಈ ದುರಂತದ ಹಿಂದೆ ಆಕೆಯ ಮನೆತನದಲ್ಲಿನ ಬಡತನ ಮತ್ತು ಪುರುಷ ಸಮಾಜದ ದಬ್ಬಾಳಿಕೆ ಆ ಮುಗ್ಧ ಜೀವವನ್ನು ಬಲಿ ತೆಗೆದುಕೊಂಡಿರುವುದಾಗಿದೆ. ಅನಕ್ಷರಸ್ಥರಾಗಿರುವ ಲಂಬಾಣಿಗಳು ಇಂತಹ ಘಟನೆಗಳಿಂದಾಗಿ ತಮ್ಮ ಬದುಕಿಗೆ ಬೆಂಕಿ ಇಟ್ಟುಕೊಳ್ಳುತ್ತಿದ್ದರು. ಕಥಾ ನಾಯಕ ಶಂಕರ್ ಬೇಕರಿ ಹುಡುಗಿಯ ದುರಂತದಿಂದ ಮನ ನೊಂದು ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿ ಕಂಡು ಅಸಮಾಧಾನಗೊಂಡನು.

'ಓಡಿ ಹೋದವರು' ಕಥೆಯಲ್ಲಿ ಊರಗೌಡ ಹಟ್ಟಿಗೌಡನ ಸೊಸೆ ಜೀತದಾಳು ಭರಮನ ಜೊತೆ ಓಡಿ ಹೋಗಿರುವುದು ತಾಂಡದಾಗ ಭಾರಿ ಸುದ್ಧಿಯಾಗಿತ್ತು. ಬಡವರ ಹೆಣ್ಣು ಮಕ್ಕಳು ದುಡಿಯಲು ಗೌಡರ ತೋಟಗಳಿಗೆ ಹೋದಾಗ ಸುಂದರವಾದ ಹುಡುಗಿಯರನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಅವರ ಮೇಲೆ ತಮ್ಮ ಕಾಮದ ಕ್ರೌರ್ಯ ನಡೆಸಿ ದುಡ್ಡು ಕೊಟ್ಟು ಹೋಗುತ್ತಿದ್ದರು. ಇಂತಹದೇ ಸಂದರ್ಭ "ಬಡವರ ಹೆಣ್ಣು ಮಗಳು ಅವರ ಕೂಲಿಗೆ ಹೋದರೆ ಮರ್ಯಾದೆಯಿಂದ ಮನೆ ಸೇರುತ್ತಿರಲಿಲ್ಲ" ಎಂಬ ಮಾತಿನಲ್ಲಿ ತಳಸಮುದಾಯದ ಹೆಣ್ಣುಮಕ್ಕಳನ್ನು ಊರಗೌಡರು ಬಳಸಿಕೊಳ್ಳುತ್ತಿದ್ದುದರ ಬಗ್ಗೆ ತಿಳಿಸಲಾಗಿದೆ.

ನಮ್ಮೂರ ಗೌಡರು ಬಸವಿ, ಭದ್ರ ಮತ್ತು ಅವನ ಗೆಳೆಯ ಚಾರ್ಲಿಯ ಜೊತೆ ಗೆಳೆತನ ಮಾಡಿ ಬಡ ಹೆಣ್ಣುಮಗಳನ್ನು ಕಾಮತೃಷೆಗೆ ಬಳಸಿಕೊಳ್ಳುತ್ತಿದ್ದರು. ಗೌಡ, ಅವನ ಹಾಗೆ, ಅವನ ಕಿರಿಯ ತಮ್ಮಂದಿರು ಸಹ ಅಣ್ಣನ ದರ್ಪದಾಗ ತಮ್ಮ ಅಂದಿನ ಸೊಕ್ಕು ತೋರಿಸುತ್ತಾ ಊರಿನೊಳಗೆ ಗೂಳಿ ಹಾಗೇ ಮೆರೆಯುತ್ತಿದ್ದರು. ಇವರು ಪದ್ದಿ, ರಾಮಿ, ಲಚ್ಚಿ, ಒಬ್ಬರಾ ಇಬ್ಬರಾ ಊರಿನ ಎಲ್ಲಾ ಹೆಣ್ಣುಮಕ್ಕಳ ರುಚಿಯನ್ನು ಗೌಡ ಮತ್ತು ಗೌಡನ ತಮ್ಮಂದಿರು ನೋಡಿದರು. ಚಂದ್ರೇಗೌಡ, ಹನುಮನಗೌಡ, ವೀರಭದ್ರಗೌಡ ಅಂದರೆ ತಾಂಡದ ಮಹಿಳೆಯರಿಗೆ ಕಾಮಪಿಶಾಚಿಗಳಂತೆ ಕಾಣುತ್ತಿದ್ದರು.

'ಕೊಂಯ್ಯ ಮತ್ತು ಧೋತ್ರ' ಸಂಕಲನದ 'ದೇವರ ಬಂಗಾರ' ಕಥೆಯಲ್ಲಿ ಸೌದತ್ತಿ ಎಲ್ಲಮ್ಮನ ಜೋಗತಿಯಾಗಿ ದೇವರ ಸೇವೆಯ ಹೆಸರಿನಲ್ಲಿ ತಳಸಮುದಾಯದ ಹುಡುಗಿಯರನ್ನು ಶೋಷಣೆ ಮಾಡಲಾಗುತ್ತಿತ್ತು. ಹುಡುಗಿಯರಲ್ಲಿ ಮನೆಯ ಹಿರಿಮಗಳು ಬೆಳೆದು ಋತುಮತಿ ಆದಾಗಿನಿಂದ ಅವಳನ್ನು ದೇವಿಯ ಹರಕೆಯೆಂಬ ಹೆಸರಲ್ಲಿ

ಅಮಾನವೀಯವಾಗಿ ನಡೆಸಿಕೊಳ್ಳುವ ಪದ್ಧತಿ ಉತ್ತರ ಕರ್ನಾಟಕ ಭಾಗದಲ್ಲಿದೆ. "ಯಲ್ಲಮ್ಮನ ಹೆಸರ ಹೇಳಿ ಭಂಡಾರ ಹಚ್ಚಿ ಗೆಜ್ಜೆ ಪೋಣಿಸಿದ ಮ್ಯಾಲ ಮುಗದ ಹೋತ ಕತಿ, ಕಂಡ ಕಂಡ ಗಂಡಸರ ಪಾದ ಪೂಜೆ ಮಾಡ್ತಾ ಊರಿಂದೂರಿಗ ಅಲಿತಾ ಬದುಕನ್ನೋ ಕರ್ಮ ಕಾಂಡದೊಳಗ ಒಂದಾಗಿ ಬಿಡ್ತಿದ್ಲು" ಈ ಮಾತಿನಲ್ಲಿ ದೇವರ ಹೆಸರಿನಲ್ಲಿ ನಡೆಯುವ ಮಹಿಳೆಯ ಶೋಷಣೆಯ ಬಗ್ಗೆ ತಿಳಿಸಲಾಗಿದೆ.

ತಳಸಮುದಾಯ ಹುಡುಗಿಯರ ಮೇಲೆ ನಡೆಯುವ ಶೋಷಣೆ ಕ್ರಮಗಳಲ್ಲಿ ದೇವದಾಸಿ ಪದ್ಧತಿಯು ಒಂದಾಗಿದೆ. ಬಡತನದಿಂದ ನೊಂದ ಕುಟುಂಬದೊಳಗೆ ಮನೆಯ ಹಿರಿಯ ಹುಡುಗಿ ಋತುಮತಿ ಆಗುತ್ತಿದ್ದಂತೆ ಆಕೆಯನ್ನು ಎಲ್ಲಮ್ಮನ ಹೆಸರೇಳಿ ಅರ್ಪಿಸುವುದಾಗಿದೆ. ಸೇವೆ ಎಂದರೆ ದೇವರ ಹೆಸರಿನಲ್ಲಿ ಮೇಲ್ಜಾತಿ ಪುರುಷರೊಂದಿಗೆ ಲೈಂಗಿಕ ಸಂಪರ್ಕ ಹೊಂದುವುದಾಗಿದೆ. ಇಂತಹ ಸೇವಾ ಪದ್ಧತಿಯು ತಳಸಮುದಾಯವರಲ್ಲಿ ಅಧಿಕವಾಗಿ ಕಂಡು ಬರುತ್ತಿತ್ತು. ಈ ಸೇವೆಯಿಂದಾಗಿ ಅದೆಷ್ಟೋ ತಳಮೂಲದ ಹುಡುಗಿಯರ ಬದುಕು ಬರಡಾಗಿ ಜೀವನ ಅತಂತ್ರವಾಗಿರುವುದರ ಬಗ್ಗೆ ಪತ್ರಿಕೆಯಲ್ಲಿ ಓದಿದರೂ ಸಮಾಜದಲ್ಲಿ ಇಂತ ಮಹಿಳೆಯರಿಗೆ ಸೂಕ್ತವಾದ ಸ್ಥಾನಮಾನ ದೊರಕದಿರುವುದು ದುರಂತವಾಗಿದೆ.

'ಮಂಚವೆಂಬೊ ಮಾಯಾ ಕನ್ನಡಿ' ಕಥೆಯಲ್ಲಿ ಪೀಕ್ಲಿ ತನ್ನ ಕಾಮದ ತೃಪ್ತಿಗಾಗಿ ಗಂಡ ಅತ್ತೆ, ಮಾವರನ್ನು ಮರೆತ್ತಿರುವ ಸಂದರ್ಭವಾಗಿದೆ. ಒಂದು ಕಡೆ ಹೆಣ್ಣಿನ ಮೇಲೆ ಪುರುಷ ಸಮಾಜ ಮಾಡುತ್ತಿರುವ ಲೈಂಗಿಕ ದೌರ್ಜನ್ಯ ಕಂಡುಬಂದರೆ ಮತ್ತೊಂದು ಕಡೆ ಹೆಣ್ಣೇ ತನ್ನ ಸ್ವಾರ್ಥಕ್ಕಾಗಿ ಲೈಂಗಿಕ ಅಪೇಕ್ಷೆಯನ್ನು ಪಡೆದಿರುವುದು ದುರಂತವಾಗಿದೆ. "ಅಕಿ ಮೈ ಮ್ಯಾಲ ಕೇಜಿ ಗಟ್ಟಲೆ ಬಂಗಾರ ಹಾಕಿ ಸಾಬಿ, ಸುಖದಾಗ ಪೀಕ್ಲಿ ನಾಮರ್ಧಗಂಡನ್ನ ಕೈಲಾಗದ ಅತ್ತಿ ಮಾವಂದಿರನ್ನ ತನ್ನ ಮನಿ ಮಂದಿನೆಲ್ಲಾ ಮರ್ತ ಬಿಟ್ಲು". ಈ ಮಾತಿನಲ್ಲಿ ಮಹಿಳೆಯೇ ಸ್ವ ಇಚ್ಚೆಯಿಂದ ಲೈಂಗಿಕತೆಗೆ ಒಳಗಾಗಿ ಗಂಡ, ಅತ್ತೆ, ಮಾವ ಮನೆಯನ್ನು ಮರೆತು ಹೋಗಿದ್ದರ ಬಗ್ಗೆ ತಿಳಿಸುತ್ತದೆ.

ಊರೂರು ತಿರುಗಿ ಕೂಲಿ ಮಾಡುವ ಕೊಂಡನಾಯ್ಕ ಮತ್ತು ಜಿಂಪಿ ದಂಪತಿಗಳ ಮಗಳು ಪೀಕ್ಲಿ. ಪೀಕ್ಲಿ ಗಂಡ ಜೋಕನಾಯ್ಕ, ಅತ್ತೆ ಚಿಂಕಿಬಾಯಿ ಇವರದು ಒಂದು ಪುಟ್ಟದಾದ ಸಂಸಾರವಾಗಿತ್ತು. ಪೀಕ್ಲಿ ಬಂಗಾರದ ಆಸೆಗೆ ಬಿದ್ದು ಲಂಗೂರ ಸಾಬಿ ಜೊತೆ ಓಡಿ ಹೋಗಿದ್ದಳು. ಸಾಬಿಯ ಸರಸದಲ್ಲಿ ಪೀಕ್ಲಿ ಸುಖ ಸಂಪತ್ತಿಗೆ ಮೇಲೆ ಮೆರೆಯುತ್ತಿದ್ದಳು. ದಿನಗಳು ಕಳೆದ ಹಾಗೇ ಪೀಕ್ಲಿ ಅವ್ವ ಜಿಂಪಿ, ಅವಳಪ್ಪ ಕೊಂಡನಾಯ್ಕ ಮಕ್ಕಳು ಮರಿ ಎಲ್ಲರೂ ಹಂಪಳ್ಳಿ ಸೇರಿಕೊಂಡರು. ಪೀಕ್ಲಿ ತಳಸಮುದಾಯದ

ಮಹಿಳೆಯರಿಗೆ ಬೇರೆ ರೀತಿಯಲ್ಲೇ ಆಲೋಚಿಸಿದ ತನ್ನ ಸುಖಕ್ಕಾಗಿ ಇಡೀ ಕುಟುಂಬವನ್ನೇ ಬಲಿ ಪಡೆದಿದ್ದಳು.

'ಕಲ್ಲೇ ಕಲ್ಲೇ ಕಥೆ ಹೋಳು' ಸಂಕಲನದ 'ಹೋರಾಟದ ಕೊನೆಗೊಂದು ದಿನ' ಕಥೆಯಲ್ಲಿ ಊರಗೌಡರು ತಳಸಮುದಾಯದ ಹೆಂಗಸರು ಮತ್ತು ಹುಡುಗಿಯರನ್ನು ಎತ್ತಿಕೊಂಡು ಹೋಗಿ ತಮ್ಮ ತೀಟೆ ತೀರಿಸಿಕೊಂಡು ಐದು ಹತ್ತು ದುಡ್ಡು ಬಿಸಾಕಿ ಹೋಗುತ್ತಿದ್ದರು. ಇವರ ದೌರ್ಜನ್ಯಕ್ಕೆ ಇಡೀ ತಾಂಡವೇ ಭಯದಿಂದ ನಡುಗುತ್ತಿತ್ತು. ಇವರು ಮಾಡುತ್ತಿದ್ದ ದೌರ್ಜನ್ಯ ಸಂದರ್ಭ "ಜಂಬೇಗೌಡ, ಅವರಜ್ಜ ಐದ ಹುಡ್ಗಿರನ್ನ ಇಟ್ಟುಕೊಂಡು ಅವರ ಜೀವನ ಹಾಳ ಮಾಡಿದ್ರ, ಅವರಪ್ಪ ಮದ್ವಿ ಆದವಳು ಚೆಂದ ಕಂಡ್ರ, ತನಗೆ ಬೇಕು ಅಂತಿದ್ನಂತ". ಈ ಮಾತಿನಲ್ಲಿ ಜಂಬೇಗೌಡ, ಮತ್ತು ಅವರಜ್ಜ ತಾಂಡದ ಮಹಿಳೆಯರನ್ನು ಕಾಮತೃಷೆಯಿಂದ ಶೋಷಿಸುತ್ತಿದ್ದರ ಬಗ್ಗೆ ತಿಳಿಸಲಾಗಿದೆ.

ಜಂಬೇಗೌಡ ತಾಂಡದೊಳಗೆ ಮಾಡುತ್ತಿದ್ದ ಸ್ತ್ರೀ ಶೋಷಣೆಯನ್ನು ಕುರಿತು ಮಾತನಾಡುವಾಗ ಲಂಬಾಣಿ ಹಿರಿಯ ಜೀವವೊಂದು ಅವನ ಅಜ್ಜನ ಕ್ರೌರ್ಯವನ್ನು ಹೇಳಿರುವುದಾಗಿದೆ. ಜಂಬೇಗೌಡನ ಅಜ್ಜನ ಕಾಲದಿಂದಲ್ಲೂ ಲಂಬಾಣಿ ಮಹಿಳೆಯರ ಮೇಲೆ ನಿಂತರವಾಗಿ ಅತ್ಯಾಚಾರ ನಡೆಯುತ್ತಲೇ ಬರುತ್ತಿತ್ತು. ಈ ಅತ್ಯಾಚಾರಕ್ಕೆ ಬಲಿಯಾದ ಮಹಿಳೆಯರಿಗೆ ತಾಂಡದೊಳಗೂ ಅದೇ ಭಾವನೆಯ ಶೋಷಣೆ ಎದುರಾಗುತ್ತಿತ್ತು. ಇದರಿಂಂದಾಗಿ ಲಂಬಾಣಿ ಮಹಿಳೆಯರು ಮಾನಸಿಕವಾಗಿ ಅಸ್ವಸ್ಥರಾಗಿದ್ದರು. ಸುಂದರವಾಗಿರುವ ಹುಡುಗಿರನ್ನು ಹೊತ್ತುಕೊಂಡು ಹೋಗುವುದು ಅಂದಿನ ಸಮಾಜದಲ್ಲಿ ಸಾಮ್ಯಾನವಾಗಿತ್ತು ಆದರೆ ಯಾರು ಪ್ರಶ್ನೆ ಮಾಡುತ್ತಿರಲಿಲ್ಲ.

'ಕಲ್ಲೇ ಕಲ್ಲೇ ಕಥೆ ಹೇಳು' ಕಥೆಯಲ್ಲಿ ಜಾಜಿ ಎನ್ನುವ ಹುಡುಗಿ ವಯಸ್ಸಿನ ಅಂತರವನ್ನು ತಿಳಿಯದೇ ಸಂಪಣ್ಣ ಎಂಬುವನೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿಕೊಂಡಿದ್ದ ಪರಿಣಾಮ ಶವವಾಗಿ ಬದುಕಿಗೆ ಅಂತ್ಯವಾಗಿಸಿಕೊಂಡ ಕಥೆಯಾಗಿದೆ. ದೀಪಾವಳಿ ಸಡಗರದಲ್ಲಿ ಜಾಜಿ ಹೊಸ ಬಟ್ಟೆ ತೊಟ್ಟಿಕೊಂಡು ಓಡಾಡುವುದನ್ನು ನೋಡಿದನು. ಸಿಟಿಯೊಳಗಿರುವ ಸುಂದರಿಯರಿಗಿಂತ ನಮ್ಮ ಜಾಜಿ ಸುರದ್ರೂಪಿ ಎಂದು ಹೇಳಿ ಅವಳ ಮನಸ್ಸಿನಲ್ಲಿ ಮನೆ ಮಾಡಿದನು. "ರಾತ್ರಿ ಮಕ್ಕೊಂಡಿದ್ದ ಜಾಜಿ ಮುಂಜಾನಿ ಹೆಣ ಆಗಿದ್ದು, ಆಕ ನಡು ವಯಸ್ಸಿನ ಗೆಣೆಯ, ಸಂಪಾಗಿ ಅಳ ಇಡಿ ದೇಹವನ್ನ ಹಗಲು ರಾತ್ರಿ ಇಂಚಿಂಚು ಸವಿದ ಸಂಪಣ್ಣ" ಈ ಮಾತಿನಲ್ಲಿ ಬಾಲಕಿ ಜಾಜಿ ತನ್ನ ಗೆಳೆಯನಂತಿದ್ದ ಸಂಪಣ್ಣನಿಂದ ಅತ್ಯಾಚಾರವಾಗಿ ಸಾವನ್ನಾಪ್ಪಿದ ಕಥೆಯಾಗಿದೆ.

ದೀಪಾವಳಿ ಹಬ್ಬ ಮುಗಿದು ತಿಂಗಳಾದರೂ ಜಾಜಿ ಮುಟ್ಟಾಗದೆ ಇದುದ್ದರಿಂದ ಹೆದರಿಕೊಂಡಿದ್ದಳು. ಇದರ ನಡುವೆ ರಾಗಿ ಕೊಯ್ಯೋದು, ಬಟ್ಟೆ ಒಗೆಯೊದು, ದನ,

ಎತ್ತು ಮೇಯಿಸೋದು ಮಾಡಿ ದೈಹಿಕವಾಗಿ ಬಸವಳಿದಿದ್ದಳು. ಈ ಎಲ್ಲ ಕಷ್ಟಗಳ ನಡುವೆ ತನ್ನ ಮೇಲಾದ ಅತ್ಯಾಚಾರವನ್ನೇ ಮರೆತು ಬಿಟ್ಟಳು. ಅವಳ ಮರೆವಿನಿಂದಾಗಿ ರಾತ್ರಿ ಮಲಗಿದ ಜಾಜಿ ಬೆಳ್ಳಿಗೆ ಆಗುವುರೊಳಗೆ ಸಾವನ್ನಪ್ಪಿದಳು. ಈ ವಿಚಾರದಿಂದ ಕುಗ್ಗಿ ಹೋಗಿದ್ದ ಜಾಜಿ ಅಪ್ಪ ಹಾಸಿಗಿ ಹಿಡಿದುಕೊಂಡವನು ವಾರ ಕಳೆದರೂ ಮೇಲೆ ಎಳಲೇ ಇಲ್ಲ. ಅಷ್ಟರೊಳಗೆ ಜಾಜಿಯ ನೆನಪು ಅರಳಿ, ಬತ್ತಿ, ಬಾಡಿ ಮಣ್ಣಲ್ಲಿ ಮಣ್ಣಾಗಿದ್ದಳು. ಈ ರೀತಿಯಾಗಿ ಎಷ್ಟೋ ಮಕ್ಕಳು ದುರಂತವಾಗಿ ಅಂತ್ಯವಾಗುತ್ತಿರವುದು ಪ್ರಸ್ತುತ ಸಂದರ್ಭದಲ್ಲಿಯೂ ನಡೆಯುತ್ತಿರುವುದು ವಿಪರ್ಯಾಸವಾಗಿದೆ.

ಸಮಾಜದೊಳಗೆ ತಳಸಮುದಾಯದ ಮಹಿಳೆಯರು ನಾನಾ ವಿಧಾನಗಳ ಮೂಲಕ ಶೋಷಣೆಗೆ ಬಲಿಯಾಗುತ್ತಿದ್ದರೂ ಅವರಿಗೆ ಸಮಾಜದಲ್ಲಿ ಸ್ಥಾನಮಾನ ದೊರಕದೆ ಇರುವುದು ದುರಂತವಾಗಿದೆ. ದೇ.ಜವರೆಗೌಡರು ಮಹಿಳಾ ದಾಸ್ಯತನ ಕುರಿತು "ಮಹಿಳಾ ದಾಸ್ಯಕ್ಕೆ ಪುರೋಹಿತಶಾಹಿ ಕಾರಣವೇ ಹೊರತು ಕ್ರಿಶ್ಚಿನ್ ಧರ್ಮವಲ್ಲವೆಂಬುದು ಜಾರ್ಜ್‌ಸ್ಯಾಂಡ್ ನಿರ್ಧಾರ. ಈ ಮಾತು ಎಲ್ಲ ದೇಶಗಳಿಗೂ ಅನ್ವಯಿಸುತ್ತದೆ" ಎಂದು ವ್ಯಾಖ್ಯಾನಿಸಿದ್ದಾರೆ.

"ಭಾರತೀಯ ಧಾರ್ಮಿಕ ಸಾಮಾಜಿಕ ಸನ್ನಿವೇಶಗಳಲ್ಲಿ ಒಂದೆಡೆ ಪೂಜ್ಯ ಗೌರವಕ್ಕೆ ಇನ್ನೊಂದೆಡೆ ತಾರತಮ್ಯ. ಅಸಮಾನತೆ, ಶೋಷಣೆಗೆ ಒಳಗಾದ ಸ್ತ್ರೀ ಸೃಜನಶೀಲತೆ ರಚನಾ ಕೌಶಲ್ಯಗಳಲ್ಲಿ ಸಮ ಸ್ಕಂದಳೇ" ಎಂದು ವ್ಯಾಖ್ಯಾನಿಸಿದ್ದಾರೆ.

3.6 ಗ್ರಾಮೀಣ ಬದುಕು ಮತ್ತು ಆಚರಣೆ

ಗ್ರಾಮೀಣ ಪ್ರದೇಶದಲ್ಲಿನ ಜನರ ಬದುಕು, ಆರ್ಥಿಕ ಸ್ಥಿತಿಗತಿ, ಆಚರಣೆಗಳು, ನಂಬಿಕೆಗಳು, ಸಂಪ್ರದಾಯಗಳು ನಾನಾ ಪ್ರಕಾರಗಳಿಂದ ಕೂಡಿರುತ್ತದೆ. ನಗರ ಪ್ರದೇಶದ ಸಂಸ್ಕೃತಿಗೂ ಗ್ರಾಮೀಣ ಪ್ರದೇಶದ ಸಂಸ್ಕೃತಿಗೂ ಅಜಗಜಾಂತರ ಅಂತರವಿದೆ. ಗ್ರಾಮೀಣ ಬದುಕು ತುಂಬ ಕಠಿಣವಾಗಿದ್ದು ನಗರ ಪ್ರದೇಶದಷ್ಟು ಸೌಲಭ್ಯಗಳನ್ನು ಒಳಗೊಂಡಿರುವುದಿಲ್ಲ. ಆದರೂ ಗ್ರಾಮೀಣ ಪರಿಸರದಷ್ಟು ಸುಂದರವಾದ ವಾತಾವರಣ ನಗರ ಪ್ರದೇಶದಲ್ಲಿ ಇರುವುದಿಲ್ಲ.

ಗ್ರಾಮೀಣ ಜನರ ವಿಧಿ–ವಿಧಾನಗಳು, ಆಚರಣೆಗಳು, ವಿಶಿಷ್ಟವಾಗಿರುವಂತೆ ಲಂಬಾಣಿ ಸಮುದಾಯದ ಆಚರಣೆಗಳು, ಸಂಪ್ರದಾಯಗಳು ವಿಶಿಷ್ಟವಾಗಿದೆ. ಇಂತಹ ಆಚರಣೆಗಳು ಲೇಖಕರ ಕಥನ ಸಾಹಿತ್ಯದಲ್ಲಿ ವಿಶಿಷ್ಟವಾದ ಮೆರಗು ಪಡೆದಿವೆ. ಗ್ರಾಮೀಣ ಬದುಕಿನ ಕಥೆ ಮತ್ತು ಆಚರಣೆಯ ಬಗ್ಗೆ ಶಿರಗಾನಹಳ್ಳಿ ಶಾಂತನಾಯ್ಕರ 'ಕತ್ತಲು ಕರಗುವ ಮುನ್ನ' 'ಗೋರಮಾಟಿ' ಮತ್ತು 'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಗಳಲ್ಲಿ ವಿಶೇಷವಾಗಿ ಅಡಕವಾಗಿರುವುದು ವಿಶೇಷವಾಗಿದೆ.

'ಗೋರಮಾಟಿ' ಮತ್ತು 'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಗಳು ಉತ್ತರ ಕರ್ನಾಟಕ ಭಾಗದ ತಾಂಡದಲ್ಲಿನ ಬದುಕು ಮತ್ತು ಆಚರಣೆಯ ಬಗ್ಗೆ ಹೆಚ್ಚು ಮಾಹಿತಿ ನೀಡುವ ವಸ್ತುವನ್ನು ಒಳಗೊಂಡಿದೆ. 'ಕತ್ತಲು ಕರಗುವ ಮುನ್ನ' ಕಾದಂಬರಿಯಲ್ಲಿ ಕಥಾನಾಯಕ ಪ್ರಭು ತನ್ನೂರಿನ ಬಾಲ್ಯದ ಸವಿಯನ್ನು ನೆನಪಿಸಿಕೊಂಡಾಗ ಮಾತ್ರ ಗ್ರಾಮೀಣ ಬದುಕಿನ ಚಿತ್ರಣ ನಿರೂಪಣೆಗೊಂಡಿದೆ. ಆ ವರ್ಣನೆಯಲ್ಲಿ ಲಂಬಾಣಿ ಸಮುದಾಯದ ಅಸಲಿ ಜೀವನವನ್ನು ಕಟ್ಟಿಕೊಡುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಕತ್ತಲು ಕರಗುವ ಮುನ್ನ ಕಾದಂಬರಿಯಲ್ಲಿ ಬಡತನದ ಬದುಕು ಸಾಗಿಸೋ ತಳಸಮುದಾಯದ ಜನರು ಜಮೀನ್ದಾರರ ಅವಹೇಳನದಿಂದ ಅತಂತ್ರ ಸ್ಥಿತಿಯ ಜೀವನ ಸಾಗಿಸುತ್ತಿದ್ದರು. ಗುಡಿಸಲಿನ ಒಳಗೆ ಮಕ್ಕಳು, ಒಂದೆರಡು ಎತ್ತು, ಎಮ್ಮೆ, ಕರು, ಆಡು, ನಾಯಿಗಳ ಜೊತೆಗೆ ವಾಸಮಾಡುತ್ತಿದ್ದರು. ಪ್ರತಿದಿನ ಕೂಲಿ ಮಾಡಿಯೇ ಬದುಕಬೇಕು ಇಲ್ಲವಾದರೆ ಆವತ್ತಿನ ದಿನ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿಯಾಗಿರುತ್ತಿತ್ತು. "ಒಂದು ಹೊತ್ತು ಕೂಳಿಗಾಗಿ ಪರಿತಪಿಸಿದ ಆ ದಿನಗಳು, ಜಾತಿ ಹಗರಣದಿಂದಾಗಿ ಕಳ್ಕೊಂಡ ಅವಕಾಶಗಳು ಉಳ್ಳವರ ಮದ್ವಿಯೊಳಗೆ ನನಗೆ ಗೊತ್ತಿಲ್ಲದ ಪದಾರ್ಥಗಳನ್ನು ಉಂಡು ಸಿಕ್ಕಾಗ ಕಂಬಕ್ಕ ಬಿಗಿಸಿಕೊಂಡು ಹೊಡ್ತಾ ತಿಂದದ್ದು". ಈ ಮಾತಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮೇಲ್ಜಾತಿ ಜನರಿಂದ ತಳಸಮುದಾಯದ ಜನರಿಗಾಗುತ್ತಿದ್ದ ದೌರ್ಜನ್ಯದ ಬಗ್ಗೆ ತಿಳಿಸುತ್ತದೆ.

ಜೀವೂರ ತಾಂಡದಾಗ ತಮ್ಮದೇ ಆದ ಒಂದು ಗುಡಿಸಲು ಕಟ್ಟಿಕೊಂಡು ಹೊಲ, ಮನೆ ಇಲ್ಲದ ಸ್ಥಿತಿಯೊಳಗೆ ತಲೆ ಎತ್ತಿ ನಿಲ್ಲುವ ಛಲದಿಂದ ಪೆತ್ಲೆಪ್ಪನಾಯ್ಕ ಹಗಲು ರಾತ್ರಿ ಒಂದು ಮಾಡಿ ದುಡಿಯುತ್ತಿದ್ದನು. ಈ ಸ್ಥಿತಿಯ ಬದುಕು ನಡೆಸುತ್ತಿದ್ದ ತಂದೆಯನ್ನು ಕಂಡು ಪ್ರಭು ಖಾಸಗಿ ಕಾಲೇಜೊಂದರಲ್ಲಿ ಉದ್ಯೋಗ ಸಂಪಾದಿಸಿಕೊಂಡಿದ್ದನು. ಆದರೆ ಮೇಲ್ಜಾತಿ ಅಧ್ಯಾಪಕರ ಕುತಂತ್ರದಿಂದಾಗಿ ಉದ್ಯೋಗ ಕಳೆದುಕೊಂಡ ಪ್ರಭು ತನ್ನ ವಾಸ್ತವ ಬದುಕನ್ನು ನೆನೆದು ಮರುಗಿದನು.

ಗ್ರಾಮೀಣ ಪ್ರದೇಶದ ಜನರು ಅನಕ್ಷರಸ್ಥರಾಗಿದ್ದು ಓದು-ಬರಹದ ಅರಿವಿಲ್ಲದವರು ಈ ಕಾರಣದಿಂದಾಗಿ ಊರಿನ ಸಾವುಕಾರರು, ಗೌಡರು, ಪಾಟೇಲರು ಸಾಲ ಕೊಡುವಾಗ ಖಾಲಿ ಪತ್ರಕ್ಕೆ ಹೆಬ್ಬೆಟ್ಟು ಒತ್ತಿಸಿಕೊಂಡು ಸಾಲ ನೀಡುತ್ತಿದ್ದರು. ಅವಿದ್ಯಾವಂತರಾಗಿದ್ದ ಲಂಬಾಣಿ ಜನರಿಗೆ ಸಾವುಕಾರರ ಮಾತು ವೇದ ವಾಕ್ಯವಾಗಿತ್ತು. ಇವರು ಕೇಳಿದಷ್ಟು ದುಡ್ಡು ಕೊಟ್ಟು ಅವರ ಉಳುಮೆಯ ಭೂಮಿಯನ್ನು ಬರೆಸಿಕೊಳ್ಳುತ್ತಿದ್ದರು. "ನಮ್ಮೂರಮಂದಿ ಹತ್ತಹದಿನೈದ ರೂಪಾಯಿ ಸಾಲ ತಗೊಂಡು ಹೆಬ್ಬಟ್ಟು ಒತ್ತಿದ್ಕ ಊರಪಕ್ಕದ ಮಂಗಳೂರ ಸಾವುಕಾರ ಒಂದಕ್ಕ ಎಲ್ಡರಂತೆ ಹಚ್ಕೊಂಡು ಅಸಲು

ಬಡ್ಡಿಯನ್ನು ಜಡದು ಹೊಲ ಅಡುಹಾಕಿದ್ರು ಸಾಲ ತೀರದಂಗ ಮಾಡಿ ಹೊಲಗಳನ್ನೆ ನುಂಗಿ ಹಾಕಲಿಲ್ವೆ" ಈ ಮಾತಿನಲ್ಲಿ ಸಾವುಕಾರರು ಅವಿದ್ಯಾವಂತ ಲಂಬಾಣಿಗರಿಗೆ ಮಾಡಲಾಗುತ್ತಿದ್ದ ಮೋಸದ ಬಗ್ಗೆ ತಿಳಿಸಲಾಗುತ್ತದೆ.

ಜೀವೂರ ತಾಂಡದೊಳಗೆ ಲಂಬಾಣಿ ಜನರಿಗೆ ಸಾಲ ಕೊಡುತ್ತಿದ್ದ ಸಾವುಕಾರರಿಂದ ನಿರಂತರವಾಗಿ ಶೋಷಣೆ ನಡೆಯುತ್ತಿತ್ತು. ಆದರೆ ಇಂತ ಶೋಷಣೆಯ ವಿರುದ್ಧ ಜೀವೂರ ತಾಂಡದವರು ಎಂದು ಹೋರಾಟ ಮಾಡಲಿಲ್ಲ. ಇಂದಿನ ಕಾಲದಲ್ಲಿಯೂ ದುಡಿಯುವ ಲಂಬಾಣಿಗರಿಗೆ ಕೂಲಿ ಹಣವನ್ನು ಎಣಿಸಲು ಬರುವುದಿಲ್ಲ. ಆ ಕೂಲಿ ಕೊಡುವ ಸಾವುಕಾರರು ನಾಲ್ಕು ಬಾಟಲು ಹೆಂಡ ಕೊಟ್ಟು ತಪ್ಪು ಲೆಕ್ಕ ಹಾಕಿ ಕೂಲಿ ಕೊಡುವುದರಲ್ಲಿಯೂ ಮೋಸ ಮಾಡುತ್ತಿದ್ದರು. ಈ ಎಲ್ಲ ಮೋಸಗಳಿಂದಾಗಿ ಜೀವೂರ ತಾಂಡದ ಜನರಿಗೆ ಅಸ್ಥಿತ್ವವೇ ಇಲ್ಲದಂತಾಗಿ ಅಲೆಮಾರಿ ಬದುಕು ನಡೆಸತೊಡಗಿದರು.

ಜೀವೂರ ತಾಂಡದೊಳಗೆ ಬದುಕುತ್ತಿದ್ದ ಜನರು ಅಜ್ಞಾನಿಗಳಾಗಿದ್ದರಿಂದ ಅವರಿಗೆ ಗಂಡು ಮಕ್ಕಳ ಮೇಲೆ ಭಾರೀ ಆಸಕ್ತಿ ಹೊಂದಿದ್ದರು. ಅದಕ್ಕಾಗಿ ಅವರು ಎರಡು-ಮೂರು ಮದುವೆ ಮಾಡಿಕೊಂಡು 10-12 ಮಕ್ಕಳನ್ನು ಪಡೆಯುತ್ತಿದ್ದರು. ಮಕ್ಕಳು ದೇವರ ಪ್ರಸಾದ ಎಂಬ ಅಜ್ಞಾನದ ಉತ್ತರವನ್ನು ನೀಡುತ್ತಿದ್ದ ತಾಂಡಾ ಜನರು ಹೆಣ್ಣು ಮಕ್ಕಳ ಬಗ್ಗೆ ತೀವ್ರವಾದ ವಿರೋಧಿಗಳಾಗಿದ್ದರು. "ಪೆತ್ಲಪ್ಪನ ಪೌರುಷದ ಫಲಕ್ಕ, ನಮ್ಮವ್ವ ಹದಿಮೂರ ಮಂದಿಗೆ ಜನ್ಮ ಕೊಟ್ಟಿದ್ಲು. ಹದಿಮೂರು ಜೀವ ಉಳಸಾಕ ಅಪ್ಪ ಹಗಲು ರಾತ್ರಿ ಒಂದ ಮಾಡಿ ದುಡಿತ್ತಿದ್ದ. ಹಕ್ಕಿಗೂಡಿನಂತ ಮನಿಯಾಗ ಹದಿನೈದು ಜೀವ ಉಸಿರಾಡ್ತಿದ್ವು" ಈ ಮಾತಿನಲ್ಲಿ ಕಥಾನಾಯಕ ಪ್ರಭು ಸ್ವಕುಟುಂಬದ ಬಗ್ಗೆ ಪರಿಚಯಿಸುತ್ತಾ ತಮ್ಮ ಗ್ರಾಮೀಣ ಬದುಕನ್ನು ತಿಳಿಸುವುದಾಗಿದೆ.

ಜೀವೂರ ತಾಂಡದಾಗ ವಾಸವಾಗಿದ್ದ ಪ್ರಭುವಿನ ತಂದೆಹೆಸರು ಪೆತ್ಲಪ್ಪ, ತಾಯಿ ಭರಮಕ್ಕ. ಇವರಿಗೆ ಹದಿನಾರು ಜನ ಮಕ್ಕಳು. ಈ ಹದಿನಾರು ಜನರ ಜೀವ ಉಳಿಸುವುದಕ್ಕಾಗಿ ಪೆತ್ಲಪ್ಪ ಹಗಲು ರಾತ್ರಿ ಒಂದು ಮಾಡಿ ದುಡಿಯುತ್ತಿದ್ದನು. ಹಕ್ಕಿ ಗೂಡಿನಂತ ಮನಿಯಾಗ ಹದಿನೈದು ಜೀವಗಳು ಉಸಿರಾಡುತ್ತಿದ್ದವು. ರೆಕ್ಕೆ ಬಲಿತ ಹಕ್ಕಿ ಗೂಡಿನಿಂದ ಹಾರುವ ಹಾಗೇ ಹಾರಿಹೋಗುವಂತಿರಲಿಲ್ಲ. ಬದಲಾಗಿ ತಂದೆ-ತಾಯಿಗಳ ಜೊತೆ ಕೂಲಿ ಮಾಡಲು ಹೋಗಬೇಕಾಗಿತ್ತು. ಇಂತಹ ಪರಿಸ್ಥಿತಿಯೊಳಗೆ ಲಂಬಾಣಿಗರಿಗೆ ಶಿಕ್ಷಣ ಕನಸಾಗಿತ್ತು. ಇಷ್ಟು ಜನ ಮಕ್ಕಳಲ್ಲಿ 2-3 ಜನರು ಓದಿದರೆ ಅದೇ ದೊಡ್ಡ ವಿಷಯವಾಗಿತ್ತು.

'ಗೋರಮಾಟಿ' ಕಾದಂಬರಿಯಲ್ಲಿ ಗ್ರಾಮೀಣ ಬದುಕಿನೊಂದಿಗೆ ಲಂಬಾಣಿ ತಾಂಡದ ಸಂಪ್ರದಾಯ, ಆಚರಣೆಗಳು ಅಧಿಕವಾಗಿವೆ. ಕಾಕಾಪುರದಲ್ಲಿ ಬದುಕು ಆರಂಭವಾಗುವುದೆ

ಪೂರ್ವ ದಿಕ್ಕಿನಲ್ಲಿ ಮೂಡೋ ಬೆಳ್ಳಿ ಚುಕ್ಕಿಯಿಂದ. ರಾಗಿ ಬೀಸಿಕೊಂಡು ರೊಟ್ಟಿ ಮಾಡಿಕೊಂಡು ಹೊಟ್ಟೆ ತುಂಬ ತಿಂದುಕೊಂಡು ಕೂಲಿಗೆ ಹೋದರೆ ಮತ್ತೆ ಮನೆ ಸೇರುತ್ತಿದ್ದುದು ರಾತ್ರಿಯೇ ಆಗಿರುತ್ತಿತ್ತು. ಇಂತಹ ವಾತಾವರಣದ ಈ ಕಾಕಾಪುರದ ಪರಿಸರ ಎಂದರೆ "ನಲ್ವತ್ತುಮನಿ ಲಮಾಣಿಗಳು ಕಾಕಾಪುರದ ಸುತ್ತಿದ ಅಡವಿಯಿಂದ ಕಟಗಿಕಡಿದು ಹತ್ತ ಮೈಲಿ ದೂರದ ಹಂಪೂರಪಟ್ಟಣಕ್ಕ ಹೊತ್ಕೊಂಡೋಗಿ ಮಾರಿಬರ್ತಿದ್ರು, ಕಾಡ ಕಡಮಿಆದಿಂದ ಅವರು ಸಾವುಕಾರ್‍ರ ಹೊಲಗಳಿಗೆ ದುಡಿಯಾಕ ಹೊಂಟ್ರು" ಈ ಮಾತಿನಲ್ಲಿ ಕಾಕಾಪುರ ತಾಂಡದ ಪರಿಸರ ಹಾಗೂ ಜನರ ಜೀವನ ಶೈಲಿಯನ್ನು ಪರಿಚಯಿಸಲಾಗಿದೆ.

ಕಾಕಾಪುರದಾಗ 40 ಮನೆಗಳಿದ್ದು ಅಲ್ಲಿನ ಲಂಬಾಣಿ ಜನರು ಸುತ್ತ ಮುತ್ತಲ ಕಾಡಿನಲ್ಲಿ ಸೌದೆ ಕಡಿದು ಪಕ್ಕದ ಹಂಪೂರಪಟ್ಟಣಕ್ಕೆ 10 ಮೈಲಿ ಹೊತ್ತಿಕೊಂಡು ಹೋಗಿ ಮಾರಿಕೊಂಡು ಬರುತ್ತಿದ್ದರು. ಕಾಡುಗಳಲ್ಲಿ ಸೌದೆ ಕಡಿಮೆಯಾದ ಮೇಲೆ ಅಕ್ಕಪಕ್ಕ ಜಮೀನ್ದಾರರ ಹೊಲ, ಗದ್ದೆ, ತೋಟಗಲ್ಲಿ ಕೂಲಿಗೆ ಹೋಗುತ್ತಿದ್ದರು ಕಾಕಾಪುರದ ದೊಡ್ಡಕೆರೆ ತುಂಬಿದಾಗ ಮೂರುವರ್ಷಕ್ಕಾಗುವ ಭತ್ತ, ಕಬ್ಬು, ಶೇಂಗಾ ಬೆಳೆದುಕೊಳ್ಳತ್ತಿದ್ದರು. ಹೀಗೆ ಕಾಕಾಪುರದ ಜನರು ತಮ್ಮ ಬದುಕನ್ನು ಕಟ್ಟಿಕೊಂಡಿದ್ದರು.

ಲಂಬಾಣಿ ತಾಂಡದೊಂದಿಗೆ ನಡೆಯುವ ಮದುವೆ ಆಚರಣೆ ಸಂಪ್ರದಾಯಗಳು ಅವರ ಗ್ರಾಮೀಣ ಬದುಕಿನ ಒಂದು ಭಾಗವಾಗಿ ಕಂಡು ಬಂದಿದೆ. ಕಾಕಾಪುರದ ತಾಂಡ ಬಿಟ್ಟ ಮದುವೆ ದಿಬ್ಬಣ ತಾಂಡವಪುರದ ಸೇರುವ ಹೊತ್ತಿಗೆ ಸಂಜೆಯಾಗಿತ್ತು. ತಾಂಡವಪುರದ ಹುಡುಗಿಯರು ಮದುವೆ ಮನೆಯ ಹತ್ತಿರ ಸೇರಿಕೊಂಡಿದರು. ಮದುಮಗನನ್ನು ಹಾಗೂ ಗಂಡಿನ ಕಡೆಯವರನ್ನು ಗೇಲಿಮಾಡುವ ಲಂಬಾಣಿಗರ ಸಂಪ್ರದಾಯ ಮದುವೆ ಸಡಗರಕ್ಕೆ ಹೊಸದೊಂದು ಮೆರಗು ನೀಡುತ್ತದೆ. "ಮದುಮಗನೆ ನಿನ್ನ ಜಾತಿ ಯಾವುದು. ನಿನ್ನ ತಾಯಿ ಬಹಳ ನಿಧಾನ. ನಿಮ್ಮ ತಂಗಿ ಬರಿಹಲ್ಲ ಕಿರಿತಾಳೆ ಹಾಡಿನಲ್ಲೆ ಮದುಮಗನ ಇಡೀ ಕುಟುಂಬದರನ್ನ ಬೈಯ್ಯುತ್ತಿದ್ದರು". ಈ ಮಾತಿನಲ್ಲಿ ಮದುವೆ ಮನೆಯಲ್ಲಿ ಸಡಗರವನ್ನು ತರಲು ಮದುಮಗ ಮತ್ತು ಆತನ ಕುಟುಂಬವನ್ನು ಹಾಡಿನ ಮೂಲಕ ಗೇಲಿ ಮಾಡುವುದಾಗಿದೆ.

ಲಂಬಾಣಿಗರ ಮದುವೆಯಲ್ಲಿ ಹುಡುಗನ ತಾಯಿ ಕಟ್ಟಿಕೊಟ್ಟಂತಹ ಅಕ್ಕಿಹಿಟ್ಟು ಬೆಲ್ಲವನ್ನು ಜನರೆಲ್ಲರಿಗೂ ಹಂಚಿದ ಮೇಲೆ ತಾಂಡಪುರದ ಹಟ್ಟಿನಾಯ್ಕನ ಮನೆಯ ಮುಂದೆ ಹೋಗಿ ಅವನಿಗೆ ಕೊಡಬೇಕಾದ ದಕ್ಷಿಣೆ ಕೊಟ್ಟು ಹಟ್ಟಿ ಹಿರಿಯ ಕೇಳಿದ ಪ್ರಶ್ನೆಗೆ ಮದುಮಗ ಉತ್ತರ ಹೇಳಬೇಕು. ಹೀಗೆ ಲಂಬಾಣಿ ಸಂಪ್ರದಾಯದೊಳಗೆ ಮದುವೆ ಕಾರ್ಯಗಳು ಗೋರ್‌ಬಾಲಿ ಭಾಷೆಯ ಶಾಸ್ತ್ರ ಸಂಪ್ರದಾಯಗಳೊಂದಿಗೆ

ನಡೆಯುತ್ತಿದ್ದವು. ರಾತ್ರಿ ಕೆಲವು ಶಾಸ್ತ್ರಗಳು ಮುಗಿಯುತ್ತಿದ್ದರೆ ಬೆಳಗಿನ ಜಾವ ಕೆಲವೊಂದು ಸಂಪ್ರದಾಯಗಳು ನಡೆಯುತ್ತಿದ್ದವು. ಅನಂತರ ಎಲ್ಲರೊಂದಿಗೆ ಹೆಂಡ, ಸರಾಯಿ, ಕಳ್ಳ ಪಚ್ಚಿ ತಿನ್ನುವುದರ ಮೂಲಕ ಲಂಬಾಣಿಗರ ಮದುವೆ ಶಾಸ್ತ್ರಕ್ಕೆ ತೆರೆ ಬೀಳುತ್ತಿತ್ತು.

ಕಾಕಾಪುರದಾಗ ದೀಪಾವಳಿಯೊಂದು ವಿಚಿತ್ರ ಮೆರಗು ಇರುತ್ತಿತ್ತು. ಹರೆಯದ ಹುಡುಗಿಯರು ತಿಂಗಳಾಗುವ ಮೊದಲು ಪ್ರತಿದಿನ ಸಂಜೆ ಊಟ ಮಾಡಿದ ಮದುವೆ ಮೇಲೆ ದೀಪಾವಳಿಗೆಂದು ದೇವರಿಗೆ ದೀಪ ಬೆಳಗಿಸಲು ಎಣ್ಣೆ ತೆಗೆದುಕೊಂಡು ತಾಂಡದ ದುರ್ಗವ್ವನ ಗುಡಿ ಮುಂದೆ ಸೇರುತ್ತಿದ್ದರು. ಮನೆಗೆ ಒಬ್ಬರು ಇಬ್ಬರು ಹುಡುಗಿಯರು ಒಂದು ರಾತ್ರಿ ಹನ್ನೆರಡು ಗಂಟೆಯ ಮಧ್ಯ ರಾತ್ರಿಯವರೆವಿಗೂ ತಮ್ಮ ಭಾಷೆಯ ರಾಗಬದ್ಧ ಹಾಡಿಗೆ ತಕ್ಕನಾದ ನೃತ್ಯ ಮಾಡುತ್ತಿದ್ದರು. "ಆ ಹುಡುಗಿಯರ ಡಾನ್ಸ್ ನೋಡಾಕ ಬಂದ ಗಂಡ ಹೈಕ್ಳು ನಾವೇನ ಬರಿ ಅವರನ್ನ ನೋಡೋದ ನಡ್ರಲೇ ಅಂತ, ಕಲ್ಲು, ದಿಬ್ಬ ಲೆಕ್ಕಿಸ್ದೆ ಚಂದ್ರನ ಬೆಳಕಿನೊಳಗೆ ಒಲಿಯಾಲಿನ ಬೂದಿ ತಂದು ಅಡ್ಡಗೆರಿ ಹಾಕಿ ಕಬ್ಬಡಿ ಆರಂಭಿಸುತ್ತಿದ್ರು" ಈ ಮಾತಿನಲ್ಲಿ ಲಂಬಾಣಿಗರು ತಮ್ಮ ದೀಪಾವಳಿ ಹಬ್ಬದ ದಿನ ಆಚರಿಸುತ್ತಿದ್ದ ವಿಧಿ ವಿಧಾನದ ಬಗ್ಗೆ ಪರಿಚಯಿಸುತ್ತದೆ.

ಲಂಬಾಣಿ ಹುಡುಗಿಯರು ದೀಪಾವಳಿ ಸಡಗರ ಸವಿಯಲು ನೃತ್ಯ ಮಾಡಿದರೆ ಪುರುಷರು ಬೆಳದಿಂಗಳ ಸವಿ ಸವಿಯಲು ಬೂದಿ ತಂದು ಅಡ್ಡಗೆರೆ ಹಾಕಿ ಕಬ್ಬಡಿ ಆಟ ಆರಂಭಿಸುತ್ತಿದ್ದರು. ಒಂದೊಂದು ದಿನ ಹುಡುಗರು ಹುಡುಗಿಯರು ಸೇರಿ ಕಬ್ಬಡಿನೋ ಇಲ್ಲ ಒಬ್ಬರ ಮೇಲೆ ಒಬ್ಬರು ಹತ್ತುವ 'ಅಂಡೋಲ್ ಪಂಡೋಲ್' ಆಟ ಆಡುತ್ತಿದ್ದರು. ದೀಪಾವಳಿ ಆರಂಭವಾದ ದಿನದಿಂದ ತಾಂಡದಲ್ಲಿ ಎಲ್ಲರು ಹೊಸಬಟ್ಟೆ ತೊಟ್ಟಿಕೊಂಡು ಬಲಿಪಾಡ್ಯದ ದಿನದವರೆಗೂ ಸಡಗರದಿಂದಲೇ ತಮ್ಮ ವಿಧಿ-ವಿಧಾನಗಳನ್ನು ಶ್ರದ್ಧಾ ಭಕ್ತಿಯಿಂದ ಮಾಡುತ್ತಿದ್ದರು.

'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಯಲ್ಲಿ ಲಂಬಾಣಿ ಜನರು ತಮ್ಮ ಬದುಕು ಕಟ್ಟಿಕೊಳ್ಳಲು ಕಾಡು ಮೇಡು ಎನ್ನದೇ ಅಲೆಯುತ್ತಾ ತುತ್ತಿನ ಚೀಲ ತುಂಬಿಸುವ ಪ್ರಯತ್ನ ಮಾಡುತ್ತಿದ್ದರು. ಲಂಬಾಣಿಗರು ತಮ್ಮ ಮೂವತ್ತು ವರ್ಷದ ಜೀವನದಲ್ಲಿ ಯಾವುದೇ ಬದಲಾವಣೆಯನ್ನು ಹೊಂದಿರದೇ ಹಳೆಯ ದಾರಿಯಲ್ಲಿಯೇ ನಡೆಯುತ್ತಿದ್ದರು. "ಹತ್ತ ಮೈಲಿ ದೂರದವರಿಗೆ ದೊಡ್ಡರ ಹಿಂದೆ ಹೋಗಿ ಶೇಂಗಾ ಆರ್ಸಿ ಹೊಲದ ಮಾಲೀಕನಿಂದ ಛೀ! ಥು ಅನ್ನೋಕೊಂಡು ಬದುಕಿನ ಬಂಡಿ ಸಾಗೋದಕ್ಕೆ ತಾನು ಸಾಕಾರಿಯಾಗಿದ್ದನ್ನ ಮರಿಯಾಕ ಆಗದೆ ಒಳಗೊಳಗೆ ತಮ್ಮಂಥವರ ಬದುಕೇಕೆ ಹೀಗೆಂದು ತಡಬಡಿಸುತ್ತಾನೆ". ಈ ಮಾತಿನಲ್ಲಿ ಕಥಾನಿರೂಪಕ ತಾನು ಅನುಭವಿಸಿದ ಬದುಕನ್ನು ಮೆಲಕು ಹಾಕುತ್ತಾ ಲಂಬಾಣಿಗರ ಬದುಕನ್ನು ವಿವರಿಸುವುದಾಗಿದೆ.

ಕಾಟೇಬಾರಿ ತಾಂಡದ ಜನರು ಮೂವತ್ತು ವರ್ಷಗಳಿಂದಲೂ ಯಾವುದೇ ಬದಲಾವಣೆ ಇಲ್ಲದಂತೆ ಬದುಕುತ್ತಿದ್ದರು. ಇವರು ತನ್ನ ಕೂಲಿಗಾಗಿ ಹತ್ತು ಮೈಲಿ ದೂರ ಹೋಗುವಾಗ ತಮ್ಮ ಮಕ್ಕಳನ್ನು ಕೂಲಿಗೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಶೇಂಗಾ ಆರಿಸುವುದು, ನಾಟಿ ಮಾಡುವುದು ಭತ್ತ ಕೊಯ್ಯುವುದು ಇವರ ಕೆಲಸಗಳಾಗಿದ್ದವು. ಹೀಗೆ ಮಾಡುವಾಗ ಸರಿಯಾಗಿ ಮಾಡದೇ ಊರಿನ ಸಾವುಕಾರರಿಂದ ಬೈಯಿಸಿಕೊಳ್ಳುತ್ತಿದ್ದರು. ಇದು ಕಾಟೇಬಾರಿ ಜನರ ದಿನನಿತ್ಯದ ಬದುಕಾಗಿತ್ತು.

ಲಂಬಾಣಿ ಜನರು ಮೂಢನಂಬಿಕೆಯ ಆರಾಧಕರಾಗಿದ್ದು ಮಾಟ ಮಂತ್ರದ ಬಗ್ಗೆ ನಂಬಿಕೆ ಇಟ್ಟಿದ್ದರು. ಚಿಮ್ನಿಯ ಹೃದಯದ ಒಳಗೆ ಇರುವ ರಂಧ್ರದ ವಿಷಯ ತಿಳಿಯದ ಮಂಗ್ಲ್ಯಾನು ಅವಿದ್ಯಾವಂತ ಜನರು ಹೇಳಿದಂತೆ ಕೇಳುತ್ತಿದ್ದನು. ಇದರಿಂದಾಗಿ ಚಿಮ್ನಿಗೆ ದೆವ್ವ ಹಿಡಿದಿದೆ ಎಂದು ಸುಳ್ಳು ಸುದ್ದಿಯಿಂದಾಗಿ ಮಾಡಿದ ಅವಾಂತರವೆಂದರೆ 102"ನಾಕೈದು ಸಲ ಮಂತ್ರ ಹೇಳಿ ಥೂ ಅಂತೇಳಿ ಬೂದಿ ಊದಿದ. ಚಿಟಿಕೆ ಬೂದಿಯನ್ನು ಹಣೆಗ ಹಚ್ಚಿ, ಆಟು ಮೈಗ ಸವರಿ ಚಿಟಗಿಯನ್ನು ಬಾಯೊಳಗ ಇಡ್ಕೋಳಾಕ ಕೊಟ್ಟು ಎಲ್ಲೋ ಹೆದರ್‍ಯಾಳಿ ಪೋರಿ ಏನಗಲ್ಲ" ಈ ಮಾತಿನಲ್ಲಿ ಲಂಬಾಣಿ ತಾಂಡದ ಮೂಢನಂಬಿಕೆಯ ಬಗ್ಗೆ ಅಂದರೆ ಮಾಟ-ಮಂತ್ರದ ಬಗ್ಗೆ ತಿಳಿಸಲಾಗಿದೆ.

ಚಿಮ್ನಿಗೆ ದೆವ್ವ ಹಿಡಿದುಕೊಂಡಿದೆ ಎಂದು ಭಯಬೀತನಾಗಿದ್ದ ಮಂಗ್ಲ್ಯಾನಿಗೆ ಧೈರ್ಯ ತುಂಬಲು ಸಂತುನಾಯ್ಕನು ತಮ್ಮ ಸ್ವಾಭಿಮಾನ ಬಿಟ್ಟು ಚಿಮ್ನಿಯನ್ನು ಉಪಚರಿಸಿದನು. ಸಂತು ನಾಯ್ಕ ಚಿಮ್ನಿಗೆ ದೆವ್ವ ಹಿಡಿದಿದ್ದರೆ ಅದನ್ನು ಬಿಡಿಸುವುದಾಗಿ ಹೇಳಿ ನಾಲ್ಕು ಐದು ಬಾರೀ ಲಂಬಾಣಿ ಭಾಷೆಯಲ್ಲಿ ಮಂತ್ರ ಹೇಳಿದ ಥೂ ಅಂತ ಮುಖಕ್ಕೆ ನೀರು ಎರಚಿದ ಒಲೆಯಾಳಗಿನ ಬೂದಿ ತಗೆದು ಹಣೆಗಿಟ್ಟ ಸ್ವಲ್ಪ ಬಾಯಿಗಿಟ್ಟು ತುಪಾರಿದು ಮೈಗೆಲ್ಲ ಸವರಿಕೊಳ್ಳುವಂತೆ ಹೇಳಿ ಹುಡುಗಿ ಹೆದರಿಕೊಂಡಿದ್ದಾಳೆ ಬೆಳ್ಳಿಗೆ ಆಗುವುದೊಳಗೆ ಬಿಟ್ಟು ಹೋಗುತ್ತೆ ಎಂದು ಹೇಳಿ ಮನೆ ಕಡೆಗೆ ಹೊರಟನು. ಪ್ರಸ್ತುತ ಕಾಲದಲ್ಲಿಯೂ ಇಂತಹ ಸಂಪ್ರದಾಯಗಳು ಗ್ರಾಮೀಣ ಭಾಗದಲ್ಲಿವೆ.

ಲಂಬಾಣಿ ಸಮುದಾಯದಲ್ಲಿ ದೀಪಾವಳಿ ಹಬ್ಬಕ್ಕೆ ವಿಶೇಷವಾದ ಮಹತ್ವವನ್ನು ನೀಡುತ್ತಿದ್ದರು. ಲಂಬಾಣಿಗರು ದೀಪಾವಳಿ ಹಬ್ಬವನ್ನು ಮೂರುದಿನಗಳ ಕಾಲ ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಿದ್ದರು. ಗುರೂಜಿ, ಹನುಮಾಜಿ, ಬಾಲಾಜಿ ದೇವರುಗಳನ್ನು ದೀಪಾವಳಿಯ ಹಬ್ಬದ ದಿನದಲ್ಲಿ ಪೂಜಿಸುತ್ತಿದ್ದರು. ದೀಪಾವಳಿಯ ಮೂರನೆಯ ದಿನದಂದು ಪಿತೃಗಳಿಗೆ ಪೂಜೆ ಮಾಡುತ್ತಿದ್ದರು. "ಒಂದಿಬ್ಬರು ಕೂಲಿ ಬಿಟ್ಟು, ಗ್ವಾಡಿನೆಲ್ಲಾ ಬಳದು, ನೆಲ ಸಗಣಿಯಿಂದ ಸಾರಿಸಿ ಎಮ್ಮಿ ಗ್ವಾತ ಹೊಯ್ದು ಮಣ ಕಾಲ್ಮಟ ಆಗಿದ್ದ

ಗುಂಡಿಗಳಿಗೆ ಕೆರಿಮುಂದಿಂದ ಜರಗ ತಂದು ಹಾಕಿದ್ರು. ಎತ್ತಿನ ಮನಿಯೊಳಗಂತು ಸೊಂಟದ ಮಟಗುಂಡಿಗಳಿದ್ವು ಅವನ್ನ ತುಂಬಿಸಿ ಅಂಗಳಾವೆಲ್ಲಾ ಸ್ವಚ್ಛಗೊಳಿಸಿ ವಾತಾವರಣವನ್ನೇ ಬದಲಾಯಿಸಿದರು". ಈ ಮಾತಿನಲ್ಲಿ ದೀಪಾವಳಿ ಹಬ್ಬ ಆಚರಿಸಲು ಲಂಬಾಣಿಗಳು ಮಾಡಿಕೊಳ್ಳುತ್ತಿದ್ದ ತಯಾರಿ ಬಗ್ಗೆ ತಿಳಿಸುತ್ತದೆ.

ತುಂಬಾ ಶ್ರದ್ಧಾ, ಭಕ್ತಿಯಿಂದ ಮಾಡುತ್ತಿದ್ದ ದೀಪಾವಳಿ ಹಬ್ಬದಲ್ಲಿ ಯಾವುದೇ ಕೆಡುಕಾಗದಂತೆ ಮುತುವರ್ಜಿವಹಿಸುತ್ತಿದ್ದರು. ಈ ಹಬ್ಬಕ್ಕಾಗಿ 2 ದಿನ ಮುಂಚಿತವಾಗಿ ಕೂಲಿ ಬಿಟ್ಟು ಮನೆಯಗೋಡೆಯನ್ನು ತಾರಿಸಿ, ಮನೆಗೆ ಸುಣ್ಣ ಹೊಡೆದು, ಸಗಣಿ ಸಾರಿಸಿ ಮನೆಯನ್ನು ಸಿಂಗಾರಗೊಳಿಸುತ್ತಿದ್ದರು. ಮನೆಯಲ್ಲಿರುವ ಎಲ್ಲ ವಸ್ತುಗಳನ್ನು ತೊಳೆದು ಶುಚಿಗೊಳಿಸುತ್ತಿದ್ದರು. ಹಬ್ಬದ ದಿನದಂದು ಪೂರ್ವಿಕರಿಗೆ ಪೂಜೆ ಸಲ್ಲಿಸುತ್ತಿದ್ದರು. ಗುರೂಜಿ, ಬಾಲಾಜಿ ಹನುಮಾಜೀ ದೇವರುಗಳಿಗೆ ಪೂಜೆ ಮಾಡುತ್ತಿದ್ದರು. ಹೀಗೆ ಕಾಟೀಬಾರಿ ತಾಂಡದಲ್ಲಿ ದೀಪಾವಳಿ ಹಬ್ಬವನ್ನಾ ವಿಶೇಷವಾಗಿ ಆಚರಿಸುತ್ತಿದ್ದರು.

ಲೇಖಕರ ಗುಡ್ಲಪ್ಪ ಸಂಕಲನದಲ್ಲಿನ ಬಿದರ ಮತ್ತು ಛತ್ರಮೂಟ ಕಥೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಲಂಬಾಣಿಗರ ವಿವಿಧ ಜೀವನಕ್ರಮವನ್ನು ತಿಳಿಸಲಾಗಿದೆ. ಬಿದರನ ವಿದ್ಯಾಭ್ಯಾಸಕ್ಕಾಗಿ ಅವನ ಪೋಷಕರು ನಲ್ವತ್ತು ಮೈಲಿ ದೂರ ಇರುವ ಶಿರ್ನಾಳ ಶಾಲೆಗೆ ಸೇರಿಸಿದರು. ಮನೆ ಬಿಟ್ಟು ಮಬಿದರ ಶಿರ್ನಾಳ ಹಾಸ್ಟಲ್‌ಗೆ ಓದುವುದಕ್ಕೆ ಹೋಗುವಾಗ ತಾಯಿ ಕರಳು ಹರಿಸಿದ್ಲು ಹೀಗೆ "ಸರಿಗ ಓದ ಮಗಾ, ನೀನಾರ ಹೊಟ್ಟೆ ತುಂಬ ಉಂಡಿದ್ರ ಸಾಕು, ನೀನ ನೌಕರಿ ಹಿಡಿಯೋತಂಕ ನಾವೇನು ಬದಕಿರಂಗಿಲ್ಲಾ" ಈ ಮಾತಿನಲ್ಲಿ ಓದಿ ಉದ್ಯೋಗ ತೆಗೆದುಕೊಂಡು ಚೆನ್ನಾಗಿ ಬದುಕು ನಮ್ಮ ಹಾಗೆ ಕೂಲಿ ಮಾಡಿ ಬದುಕು ಸಾಗಿಸುವುದು ಬೇಡ ಎಂದು ತಿಳಿಸುವುದಾಗಿದೆ.

ಈ ಮೇಲಿನ ವಾಕ್ಯವು ವಾಸ್ತವಿಕ ಗ್ರಾಮೀಣ ಬದುಕನ್ನು ಕೇಂದ್ರೀಕರಿಸಿದೆ. ಇಂದಿಗೂ ಗ್ರಾಮೀಣ ಭಾಗದಲ್ಲಿ ದೂರದ ಊರಿಗೆ ಮಕ್ಕಳನ್ನು ಕಳುಹಿಸುವಾಗ ತಾಯಿ ಹೃದಯ ಭಾವುಕವಾಗುವುದು ಪ್ರಸ್ತುತದಲ್ಲಿಯೂ ನಡೆಯುತ್ತದೆ. ಅದೇ ರೀತಿ ಕತೆಯಲ್ಲಿ ಬಿದರನ ತಾಯಿ ಕೈಗೆ ನಾಕಾಣಿ ಕೊಟ್ಟು ಚೆನ್ನಾಗಿ ಓದಿ ವಿದ್ಯಾವಂತನಾಗಿ ಬುದ್ಧಿವಂತನಾಗಿ ಉದ್ಯೋಗ ಸಂಪಾದಿಸಿಕೊಂಡು ಸಿರಿವಂತನಾಗಿ ಬದುಕು. ನಾವು ನಿನ್ನ ಜೊತೆ ಇರುವುದಿಲ್ಲ ಎಂದು ಹರಸುತ್ತಾ ಕಣ್ಣೀರಿಟ್ಟಳು.

'ಕೆಂಚವ್ವನ ಸೀರಿ ಕನಸು' ಕಥೆಯಲ್ಲಿ ಕೆಂಚವ್ವನ ಅತ್ತೆ ಕೆಂಚಜ್ಜಿಗೆ ಸರ್ಕಾರಿ ನ್ಯಾಯಬೆಲೆ ಅಂಗಡಿಯಿಂದ ಗರಿಗರಿಯಾದ ಕಾಟನ್ ಸೀರೆಯನ್ನು ಕೊಟ್ಟಿದರು. ಆ ಸೀರೆಯನ್ನು ಇಂದಿರಾಗಾಂಧಿ ಸೀರೆ ಎಂದು ಕರೆಯುತ್ತಿದ್ದರು. ಇಂತ ರೇಷ್ಮೆ ಸೀರೆಯನ್ನು ಕೆಂಚಜ್ಜಿ ಸತ್ತ ಮೇಲೆ ತಂದು ತನ್ನ ಪೆಟ್ಟಿಗೆಗೆ ಹಾಕಬೇಕು ಎಂದು ಕೆಂಚವ್ವ ನಾನಾ ತರದ

ಕನಸು ಕಾಣುವ ಕಥೆ ಹಳ್ಳಿ ಜೀವನದ ಪ್ರತೀಕದಂತಿದೆ. ಇಲ್ಲಿಯ ಗ್ರಾಮೀಣ ಬದುಕು "ಒಲ್ಯಾನ ಬೂದಿ ತಗದು, ಸಣ್ಣ ಪಾತ್ರಿ ಒಲಿಮ್ಯಾಲಿಟ್ಟು ಒಂದು ಚಂಬು ನೀರ ಸುರವಿ, ಹಸಿರ ಕಾರ್ಡಿನೋರ ಕೊಟ್ಟ ಸಕ್ಕರಿ ಚೀಲದಾಗಿಂದ ಸುರವಿ ಲೋ ಬೀರಾ ಒಲಿಮುಂದೆ ಕಟಗಿ ಹಾಕು ನಾ ಹಾಲ ಹಿಂಡಕೊಂಡ ಬರ್ತೀನಿ ಅಂತ ವಾಟಿ ತಗೊಂಡು ಹೊರಟಳು". ಈ ಮಾತಿನಲ್ಲಿ ಹಳ್ಳಿ ಮಹಿಳೆಯರ ದಿನನಿತ್ಯದ ಚಟುವಟಿಕೆಯನ್ನು ಪರಿಚಯಿಸುವುದಾಗಿದೆ.

ಕೆಂಚಜ್ಜಿಯ ಸೀರೆ ಕನಸಿನೊಳಗೆ ಮುಳುಗಿ ಹೋಗಿದ್ದ ಕೆಂಚವ್ವ ಮುದುಕಿ ಕೇಳಿದ ಚಹಾ ಮಾಡಲು ಒಲಿಯೊಳಗಿಂದ ಬೂದಿತೆಗೆದು ಸೌದೆ ಹೊಟ್ಟಿ ಬೆಂಕಿ ಹಚ್ಚಿದಳು. ಮಗನಿಗೆ ಒಲೆ ಮುಂದೆ ಸೌದೆ ತರಲು ಹೇಳಿ ತಾನು ಹಾಲು ತರಲು ಸಣ್ಣವ್ವನ ಮನೆಯ ಕಡೆಗೆ ಹೊರಟಳು. ಈ ಕಾಯಕ ಗ್ರಾಮೀಣ ಭಾಗದ ಜನರಿಗೆ ಮುಂಗೋಳಿ ಕೂಗುತ್ತಿದ್ದಂತೆ ಆರಂಭವಾಗುತ್ತದೆ. ಮನೆಯ ಮುಂದಿನ ಕಸಗುಡಿಸಿ, ರಂಗೋಲಿ ಇಟ್ಟು ಅನಂತರ ಅಡುಗೆ ಮಾಡಿ ತಾವು ಕೂಲಿಗೆ ಹೋಗುವ ಪದ್ಧತಿ ಇಂದಿಗೂ ನಡೆಯುತ್ತಿದೆ. ನಗರ ಪ್ರದೇಶದ ಜನರಿಗೆ ಈ ರೀತಿಯ ತಂಟೆ – ತಕಾರಾರು ಇರುವುದಿಲ್ಲ. ಈ ಸಮಾಜದ ನಿಜವಾದ ಸಂಸ್ಕೃತಿ ಪಾಲಕರೆಂದರೆ ಗ್ರಾಮೀಣ ಜನರು ಎಂದು ಹೇಳಬಹುದು. ತಮ್ಮ ದಿನನಿತ್ಯದ ಚಟುವಟಿಕೆಯನ್ನು ತುಂಬಾ ಶ್ರದ್ಧೆ ಭಕ್ತಿಯಿಂದ ಮಾಡುವ ಕಾಯಕ ಜೀವಿಗಳು ಇವರು.

'ಕೊಂಯ್ಯ ಮತ್ತು ಧೋತ್ರ' ಸಂಕಲನದ ಬೂದುಗನ ಪ್ಲಾಸ್ಟಿಕ್ ಬೂಟುಗಳು ಕಥೆಯಲ್ಲಿ ತನ್ನ ಮಾವನ ಮಗಳಿಗೆ ಬೂಟು ತೋರಿಸಬೇಕೆಂಬ ಆಸೆ ಇಟ್ಟುಕೊಂಡ ಬೂದುಗ ಕೊನೆಗೆ ನಿರಾಸೆ ಮುಖ ಹೊತ್ತಿಕೊಂಡ ಕಥೆಯಾಗಿದೆ. ಹೊಲದಲ್ಲಿ ಕಬ್ಬು ಬೆಳೆಯಲು ಬೂದುಗನ ತಂದೆ ಮನೆ ಮುಂದೆ ಕಬ್ಬು ತಂದು ರಾಶಿ ಹಾಕಿಸಿದನು. ಊರಿನ ಹುಡುಗರು ಕಬ್ಬಿನ ಆಸೆಗಾಗಿ ಬೂದುಗನೊಂದಿಗೆ ಗೆಳೆತನ ಜಾಸ್ತಿ ಮಾಡಿಕೊಂಡಿದ್ದರು. "ಲೇ ಬೂದುಗ ಯಾವನಾರ ಒಂದಗಣ್ಣು ತಗೊಂಡ್ರ ಎಕ್ಕಡದಿಂದ್ಲೆ ಹೊಡದ ಬಿಡು ಒಂದ ಕುರಿ ಕಡದ್ರೆನಾಗಂಗಿಲ್ಲ ಅಂದ". ಈ ಮಾತಿನಲ್ಲಿ ಕಬ್ಬನ್ನು ಯಾರು ಮುಟ್ಟದ ಹಾಂಗೆ ನೋಡಿಕ್ಕೊ ಎಂದು ಬೂದುಗ ಅಪ್ಪ ಪ್ರತ್ರೇಶಿ ತಾಕಿತ್ತು ಮಾಡಿದ ಸಂದರ್ಭವಾಗಿದೆ.

ಬೂದುಗನು ತನ್ನ ಸ್ನೇಹಿತರೊಂದಿಗೆ ಆಟವಾಡುತ್ತಿದ್ದನು. ಆಗ ಗುಡಿಸಲಿನೊಳಗಿಂದ ಬುತ್ತಿ ಕಟ್ಟಿಕೊಂಡು ಹೊರಗೆ ಬಂದ ಬೂದುಗನ ಅಪ್ಪ ಪ್ರತ್ರೇಶಿಯು ಹುಡುಗರ ಗುಂಪನ್ನು ಕಂಡು 'ಲೇ ದೂರ ಹೋಗ್ರೋ ಒಂದು ಕಬ್ಬಿನ ತುಂಡಿಗೂ ಆರುವರಿ ಪೈಸೆ ಬಿದ್ದೈತೆ' ಎಂದು ಕೂಗಿದನು. ಮಗನ್ನಾ ಕುರಿತುಲೇ ಬೂದುಗ ಕಬ್ಬಿನ ರಾಶಿಯನ್ನಾ ಜೋಪಾನವಾಗಿ ಕಾಪಾಡು ಎಂದು ಗದರಿ ಹೋದನು. ಅಲ್ಲಿಯೇ ಇದ್ದ ಹುಡುಗರನ್ನು

ಕಂಡು ಪತ್ರೇಶಿ ಕೋಪದಿಂದ ಮತ್ತೇ ಮಗನ ಕಡೆಗೆ ತಿರುಗಿ ಬೂದುಗ ಯಾವನ್ಯಾರ ಒಂದು ಗಿಣ್ಣು ತೆಗೆದುಕೊಂಡರು ಚಪ್ಪಲಿಯಲ್ಲಿ ಹೊಡೆದು ಬಿಡು ಮುಂದೆ ಆಗೋದನ್ನ ನಾ ನೋಡಿಕೊಳ್ಳುತ್ತೇನೆ' ಎಂದು ಗದರಿ ಹೋದನು.

'ಪಲಾಯನದಂದು' ಕಥೆಯಲ್ಲಿ ಗ್ರಾಮೀಣ ಪ್ರದೇಶದ ಜನರು ದನ, ಹಸು, ಕುರಿ, ಆಡು, ಎಮ್ಮೆ, ಮೇಯಿಸುವಾಗ ತಮ್ಮ ಹೊಲಗಳನ್ನು ಬಿಟ್ಟು ಸೊಂಪಾಗಿ ಬೆಳೆದಿರುವ ಮೇವಿನ ಕಡೆ ತಿನ್ನಲು ಬಿಟ್ಟು ತಮ್ಮ ಪಾಡಿಗೆ ಬೇರೆ ಕುರಿ, ದನ ಹೆಸರಿಸುವುದರಲ್ಲಿ ನಿರತರಾಗಿರುತ್ತಾರೆ. ಹೊಲದ ಮಾಲೀಕ ಬಂದು ಮೇಯುವ ದನಕ್ಕೂ, ಮೇಯಲು ಬಿಟ್ಟು ಹುಡುಗರು, ಮನೆಯವರಿಗೆ ಇಡೀ ಶಾಪ ಹಾಕುತ್ತಾ ಓಡಿಸುವ ಪ್ರಸಂಗಗಳು ಹಳ್ಳಿಯ ಕಡೆ ಸಾಮಾನ್ಯವಾಗಿವೆ. "ಏಯ್, ನಿನ್ನವ್ವನ ಮುದಿಯ ಮ್ಯಾರಿ ಮ್ಯಾಲ ಈಡಾಗಿ ಬೆಳೆದಿರೊ ಹುಲ್ಲು ಮೇಯೋದ ಬಿಟ್ಟು ಜ್ವಾಳಕ ಭಾಯಿ ಹಾಕ್ತಿ ಅಂದವನೆ ಮುಗದಣ ಅಳಕೊ ಹಂಗ ಜೋರಾಗಿ ಜಗ್ಗಿದ" ಈ ಮಾತಿನಲ್ಲಿ ಬಯಲಿನಲ್ಲಿ ಬಿಟ್ಟ ದನವು ಜ್ವಾಳ ಮೇಯಲು ಹೋದಾಗ ಗದರಿಸುವ ಹಳ್ಳಿ ಜನರು ದನ ಕಾಯುವ ಕಾಯಕದ ಬಗ್ಗೆ ತಿಳಿಸುತ್ತದೆ.

ಬಂದೂಕನು ತನ್ನ ಕೈಯಾಗಿನ ಕರಿ ಎತ್ತು ಕೊಸರಿಕೊಂಡು ಏರಿ ಪಕ್ಕದ ಬ್ರಾಹ್ಮಣರ ಹೊಲದಲ್ಲಿ ಮೇಯಲು ಮುನ್ನುಗ್ಗಿದ್ದರಿಂದ ಬೇಸರಗೊಂಡನು. ದನದ ಮೇಲೆ ಸಿಟ್ಟು ತಂದುಕೊಂಡ ಬಂದೂಕನು ಏರಿ ಮೇಲೆ ಸೊಂಪಾಗಿ ಬೆಳೆದಿರುವ ಹುಲ್ಲು ಮೇಯೋದು ಬಿಟ್ಟು ಬ್ರಾಹ್ಮಣರ ಜೋಳಕ್ಕೆ ಬಾಯಿ ಹಾಕುತ್ತೀಯಲ್ಲಾ ಎಂದು ಮೂಗುದಾರ ಹಿಡಿದು ಜೋರಾಗಿ ಎಳೆದನು. ಈ ರೀತಿಯ ಆವಾಂತರದ ಚಟುವಟಿಕೆ ಹಳ್ಳಿ ಕಡೆ ಸಾಮಾನ್ಯವಾಗಿರುತ್ತದೆ. ಬೆಳೆ ಕಳೆದುಕೊಂಡವರು ನಡೆಸೋ ಪಂಚಾಯ್ತಿಯನ್ನು ನೋಡಲು ಒಂದು ಸೊಬಗಿರುತ್ತದೆ. ಈ ಎಲ್ಲ ರಸದೌತಣ ಹಳ್ಳಿಗಾಡಿನ ಹೊರತಾಗಿ ಬೇರೆ ಎಲ್ಲೂ ಸಿಗುವುದಿಲ್ಲ.

'ಕಲ್ಲೇ ಕಲ್ಲೇ ಕಥೆ ಹೇಳು' ಸಂಕಲನದ 'ಬೆತ್ತಪ್ಪನ ಮಗ ಜುಲ್ಪನೂ' ಕಥೆಯಲ್ಲಿ ಮನೆಗೆ ವಿದ್ಯಾವಂತ ಅತ್ತಿಗೆ ಬರುತ್ತಾಳೆಂದು ಸಣ್ಣ ಹುಡುಗ ಜುಲ್ಪ ತನ್ನ ಮನದೊಳಗೆ ಅನುಭವಿಸಿದ ಸಂತಸ ಕ್ಷಣಗಳು ಗ್ರಾಮೀಣ ಭಾಗದ ಮುಗ್ಧ ಜನರ ಮನಸ್ಸನ್ನು ತಿಳಿಸುತ್ತದೆ. ಆ ಸಂತಸದಿಂದಾಗಿ ಅವನ ಮನ ನಲಿದಾಡಿದ ಬಗೆ ಎಂದರೆ, "ಎರಡು ತಾಟಗಳನ್ನು ಬೂದಿಯಿಂದ ತಿಕ್ಕಿದ. "ಇಲ್ಲಪ್ಪ ನಾ ಬರಂಗಿಲ್ಲಾ ಇವತ್ತು ನನಗೆ ಕೆಲ್ಸ ಐತಿ ನೀನಾ ಓಡು ಅಂದವನೆ. ತಟ್ಟೆಯನ್ನು ತಿಕ್ಕಿ ನೀರುಹಾಕಿ ತೊಳದ ಯಾಕಲೆ ಈ ಕೆಲ್ಸ ದೂಡಾಕ ಹತ್ತಿ, ನಿಮ್ಮವ್ವ ಬರಂಗಿಲ್ಲೇನು ಅಂದ. ಇಲ್ಲೋಲೆ ನಮ್ಮವ್ವ ನಮ್ಮ ಇರೂಪಣ್ಣ ನಮ್ಮ ಸಾಲಿ ಕಲ್ತ ಅತ್ತಿಗಿ ಎಲ್ಲಾರೂ ದ್ಯಾವೂರಿಗ ಹೋಗ್ಯಾರ ಮಧ್ಯಾಹ್ನ ಸಿದ್ನಿಂಗ

ಬಂದ ಹೇಳಿದ ನಮ್ಮ ಸಾಲಿಕಲ್ತ ಅತ್ತಿಗಿ ನಮ್ಮ ಮನಿಗ ಬರಾಕ ಹತ್ಯಾಳಂತ" ಈ ಹೇಳಿಕೆಯಲ್ಲಿ ಜುಲ್ಪಾನು ವಿದ್ಯೆ ಕಲಿತ ಅತ್ತಿಗೆ ಮನೆಗೆ ಬರುತ್ತಾಳೆ ಎಂದು ತೋರಿದ ಮುಗ್ಧತೆಯ ಬಗ್ಗೆ ತಿಳಿಸಲಾಗಿದೆ.

ಜುಲ್ಪಾ ತನ್ನ ಹಿರಿಯ ಅಣ್ಣ ವಿರೂಪಾಕ್ಷನಿಗೆ ಹೆಣ್ಣು ನೋಡಲು ಬೆತ್ತಪ್ಪ ಮತ್ತು ಅವ್ವ ಹೋಗಿದ್ದಾರೆ ಎಂಬುದು ಪಕ್ಕದ ಮನೆಯವರಿಂದ ತಿಳಿಯಿತು. ಅಣ್ಣ–ಅತ್ತಿಗೆ ಬರುತ್ತಾರಲ್ಲ ಎಂಬ ಸಂತಸದಲ್ಲಿ ಜುಲ್ಪಾ ಅಂದಿನ ಮನೆಯ ಕೆಲಸವನ್ನೆಲ್ಲಾ ತಾನೇ ಮಾಡಿ ಮುಗಿಸುವ ನಿರ್ಧಾರಕ್ಕೆ ಬಂದು ಕೆಲಸ ಮುಗಿಸಲು ಪ್ರಯತ್ನಿಸಿದನು. ಜುಲ್ಪಾನ ಅಕ್ಕ ಪಾರೋತಿಗೂ ಹೇಳದೆ ಗೌಪ್ಯವಾಗಿ ಇಡಲು ಪ್ರಯತ್ನಿಸಿದನು. ಈ ರೀತಿಯ ಮುಗ್ಧತೆ ಹಳ್ಳಿಯ ಹುಡುಗರಲ್ಲದೆ ಮತ್ತೆ ಯಾರಲ್ಲಿಯೂ ಇರುವುದಿಲ್ಲ. ವಿದ್ಯಾವಂತ ಅತ್ತಿಗೆಯ ಮೇಲಿನ ಪ್ರೀತಿ, ಮಮಕಾರ ಜುಲ್ಪಾನಲ್ಲಿ ಉಂಟು ಮಾಡಿದ ಬದಲಾವಣೆ ಕಥೆಯೊಳಗೆ ವಿಶೇಷವಾಗಿದೆ.

'ಚೊಕ್ಕನ ರೊಟ್ಟಿ ಕನಸು' ಕಥೆಯಲ್ಲಿ ಚೊಕ್ಕ ಮುಂಜಾನೆಯೇ ಊಟ ಮಾಡಿದ್ದ ರಾಗಿ ಅಂಬಲಿಯು ಊರನ್ನು ಐದಾರು ಸುತ್ತು ಸುತ್ತಿ ಮುಂದಿನ ದೀಪದ ಕಂಬ ದಾಟುತ್ತಿದ್ದಂತೆ ಕರಗಿ ಹೋಗಿತ್ತು. ಅವನ ಚಿಕ್ಕಮ್ಮನ ಮಗಳು ಚಿಂಚಲಿ ಅಂಗೈಯಾಗಿನ ರೊಟ್ಟಿ ನೋಡಿ ತಾನು ರೊಟ್ಟಿ ತಿನ್ನಬೇಕು ಅಂತ ಆಸೆಪಟ್ಟನು. ಅದೇ ವೇಳೆಗೆ ಬಂದ ಚಿಂಚಲಿ ತಮ್ಮ ಗಕ್ಕನೇ ನಿಂತು ಚೊಕ್ಕನ ಕೈ ಬಾಯಿಯ ಕ್ರಿಯೆಯನ್ನು ತದೇಕ ಚಿತ್ತದಿಂದ ನೋಡುತ್ತಾ ನಿಂತುಕೊಂಡನು. "ಕೊಲಾಣಿ ಸಪ್ಪಿನ ಪಲ್ಯೆ ಬಿಸಿ ಬಿಸಿ ರೊಟ್ಟಿ ಉಂಡು ಎಷ್ಟೋ ದಿನಗಳಾಗಿದ್ದು ಎಷ್ಟು ಬ್ಯಾಡ ಅಂತಂದ್ರು ಮನಸ್ಸು ತಡಿಲೇ ಇಲ್ಲಾ. ಏ ಚಿಂಚಲಿ ನಿನಿಗ ಅಕ್ಕ ಅಂತೀನಿ, ಬಂದ ಗುಕ್ಕು ರೊಟ್ಟಿ ಕೊಡ್ತೀಯಾ? ಅಂತ ಕೇಳಿದ" ಈ ಮಾತಿನಲ್ಲಿ ಚೊಕ್ಕ ರೊಟ್ಟಿಗಾಗಿ ಹೇಗೆಲ್ಲಾ ಪರಿತಪಿಸುತ್ತಿದ್ದ ಎಂಬುದನ್ನು ತಿಳಿಸಲಾಗಿದೆ.

ರಾಗಿ ಅಂಬಲಿಯನ್ನು ಕುಡಿದು ಬೇಸತ್ತು ಹೋಗಿದ್ದ ಚೊಕ್ಕನಿಗೆ ರೊಟ್ಟಿ, ಕೊಲಾಣಿ ಸೊಪ್ಪಿನ ಪಲ್ಯೆ ತಿನ್ನಬೇಕೆಂಬ ಆಸೆ ಉಂಟಾಯಿತು. ಆದರೆ ಮನೆಯಲ್ಲಿನ ಬಡತನ ಮತ್ತು ಅವನ ತಾಯಿ ಚೊಕ್ಕನ ಆಸೆಯನ್ನು ರಾಗಿ ಅಂಬಲಿಗೆ ಸೀಮಿತಗೊಳಿಸಿದಳು. ಆದರೂ ರೊಟ್ಟಿ ಮೇಲಿನ ಪ್ರೀತಿ ಮಾತ್ರ ಅವನಿಂದ ದೂರ ಆಗಿರಲಿಲ್ಲ. ಅದಕ್ಕಾಗಿ ಅವನು ತಂಗಿಯಾಗಬೇಕಿದ್ದ ಚಿಂಚಲಿಯನ್ನು 'ಅಕ್ಕ' ಎಂದು ಸಂಬೋಧಿಸುವ ಮಟ್ಟಕ್ಕೆ ಅವನಲ್ಲಿದ್ದ ರೊಟ್ಟಿಯ ಹುಚ್ಚು ಬೆಳೆಸಿತ್ತು. ಇಂತಹ ಬಡತನ ಗ್ರಾಮೀಣ ಭಾಗದಲ್ಲಿ ಅಧಿಕವಾಗಿ ಕಂಡುಬರುತ್ತದೆ. ಇಂತಹ ಆಸೆ–ಆಕಾಂಕ್ಷೆಗಳು ಹಳ್ಳಿಯ ಮುಗ್ಧ ಮಕ್ಕಳಲ್ಲಿಯೇ ಅಧಿಕವಾಗಿರುವುದು ವಾಸ್ತವಾಂಶವಾಗಿದೆ.

ಗ್ರಾಮೀಣ ಪ್ರದೇಶದ ಬದುಕು, ಜೀವನ ಶೈಲಿ, ಮುಗ್ಧತೆ, ನಂಬಿಕೆ, ಆಚರಣೆ, ಸ್ನೇಹ–ಪ್ರೀತಿ, ಜಗಳ, ಒಳಪಿತೂರಿ, ಅಸೂಯೆ ಎಲ್ಲವೂ ಗ್ರಾಮೀಣ ಜನರಲ್ಲಿ ಸಾಮಾನ್ಯವಾದ ಸಂಗತಿಗಳಾಗಿವೆ. ಆದರೂ ಅವರಲ್ಲಿ ಯಾವುದೂ ಅತಿರೇಕವಾಗಿರುವುದಿಲ್ಲ. ಅತಿರೇಕಕ್ಕೂ ಹೋಗುವುದಿಲ್ಲ ಎಂಬುದು ಅಲ್ಲಿನ ವಾತಾವರಣದಲ್ಲಿದ್ದವರಿಗೆ ತಿಳಿದಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಶ್ರಮಜೀವಿಗಳು ಎಂದರೆ ಮಹಿಳೆಯರು. ಮನೆಯಿಂದ ಹಿಡಿದು ಕೂಲಿ ಮಾಡುವವರೆವಿಗೂ ಇವರ ಶ್ರಮ ಮೆಚ್ಚುವಂತಹದ್ದಾಗಿದೆ.

ಗ್ರಾಮೀಣದಲ್ಲಿ ಮಹಿಳೆಯ ಪ್ರಾಮುಖ್ಯತೆ ಕುರಿತು "ಗ್ರಾಮೀಣ ಮಹಿಳೆ ಸಾಂಪ್ರದಾಯಿಕವಾಗಿ, ಆರ್ಥಿಕವಾಗಿ ಲೈಂಗಿಕವಾಗಿ ಪುರುಷರ ಕುಡಿತದ ಚಟದಿಂದಾಗಿ ಸಾಮಾಜಿಕವಾಗಿ ಮತ್ತು ಪ್ರತಿಫಲವಿಲ್ಲದ ದುಡಿತದಿಂದಾಗಿ ಶೋಷಣೆಗೆ ಒಳಗಾಗುತ್ತಾರೆ" ಎಂದು ವ್ಯಾಖ್ಯಾನಿಸಲಾಗಿದೆ.

3.7 ಆಧುನಿಕತೆ

ಆಧುನಿಕ ಸಮಾಜಗಳು ಹಿಂದಿನ ಸಮಾಜಗಳಿಕ್ಕಿಂತ ಹಲವು ರೀತಿಯಲ್ಲಿ ಭಿನ್ನವಾಗಿವೆ. ಇದಕ್ಕೆ ನಾಗರೀಕತೆ, ಜನಸಂಖ್ಯೆಯ ಹೆಚ್ಚಳ ರೂಢಿ, ಸಂಪ್ರದಾಯಗಳು, ನೈತಿಕ ಮತ್ತು ಸಾಮಾಜಿಕ ಮೌಲ್ಯಗಳ ಕುಸಿತ, ಗುರಿ ಸಾಧನೆಗಾಗಿ ಅನುಸರಿಸುವ ಮಾರ್ಗಕ್ಕಿಂತ ಗುರಿ ಮುಟ್ಟುವುದೇ ಲೇಸು ಎಂಬ ಜನರ ದೋರಣೆ ಇತ್ಯಾದಿಗಳು ಸಮಾಜದಲ್ಲಿ ಹಲವಾರು ಮಾರ್ಪಾಡುಗಳನ್ನು ತರುವಲ್ಲಿ ಪ್ರಬಲ ಅಂಶಗಳಾಗಿ ಕಂಡು ಬಂದಿರುತ್ತವೆ.

ಆಧುನಿಕ ಸಮಾಜವು ವಿಜ್ಞಾನ ಮತ್ತು ತಂತ್ರಜ್ಞಾನಗಳ ಯುಗವಾಗಿದೆ. ವಿಜ್ಞಾನವು ಒಂದು ಪ್ರಕ್ರಿಯೆಯಾಗಿದ್ದು ತಂತ್ರಜ್ಞಾನವು ಇದರ ಉತ್ಪನ್ನವಾಗಿದೆ. ತಂತ್ರಜ್ಞಾನವು ಒಂದು ವಿಶಿಷ್ಟ ವೈಜ್ಞಾನಿಕ ಕೌಶಲ್ಯವಾಗಿದ್ದು ಮನುಷ್ಯನ ಆರ್ಥಿಕ ಬಯಕೆಗಳನ್ನು ತೃಪ್ತಿಗೊಳಿಸಲು ಇದನ್ನು ವಿಸ್ತಾರವಾಗಿ ಬೆಳೆಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಆಧುನಿಕ ಜೀವನವು ಹಲವಾರು ಗ್ರಾಮೀಣ ಕುಟುಂಬಗಳನ್ನು ಹೆಚ್ಚು ಹೆಚ್ಚು ಆಕರ್ಷಿಸುತ್ತಿವೆ. ಹಳ್ಳಿಯ ಜನರು ಗ್ರಾಮಾಂತರದ ರೂಢಿ ಸಂಪ್ರದಾಯ, ಪದ್ಧತಿಗಳು, ಆಚರಣೆಗಳು, ಮತ್ತು ಧಾರ್ಮಿಕ ನಂಬಿಕೆಗಳೊಂದಿಗೆ ಬೆಳೆದು ಬಂದಿರುತ್ತಾರೆ. ಆದರೆ, ಮೋಸ, ವಂಚನೆ, ಕಳ್ಳತನ, ಸ್ವಾರ್ಥ ಮತ್ತು ಅನೈತಿಕ ವ್ಯವಹಾರಗಳು ಆಧುನಿಕತೆಯ ಕುರುಹುಗಳಾಗಿ ಕಂಡು ಬಂದಿದ್ದು, ಗ್ರಾಮೀಣ ಜನರಿಗೆ ಸಾಮಾಜಿಕ ಶಾಪಗಳಾಗಿವೆ.

ಆಧುನಿಕ ಜೀವನದೊಳಗೆ 'ಪ್ರಜಾಪ್ರಭುತ್ವ'ದ ದುಸ್ತರಕ್ಕೆ ಕಾರಣವಾದ ಅಂಶಗಳನ್ನು ಕುರಿತು ಮಹಾರಾಷ್ಟ್ರದ ದಲಿತ ಕವಿ ನಾಮದೇವ್ ಢಸಾಳ್ ಅವರ ಹೇಳಿಕೆ "ಶಾಸಕಾಂಗ,

ಕಾರ್ಯಾಂಗ, ನ್ಯಾಯಾಂಗಗಳ ಸಮತೋಲ ಶಕ್ತಿಯ ಸಂವಿಧಾನವೊಂದು ನಮ್ಮ ನಡುವೆ ಇದ್ದು ಅದನ್ನು ದುರ್ಬಲಗೊಳಿಸುವ, ಅಮಾನ್ಯ ಮಾಡುವ ಹುನ್ನಾರಗಳು ಸುತ್ತಲೂ ನಡೆಯುತ್ತಿವೆ. ಸಾಮಾಜಿಕ ನ್ಯಾಯ, ಭಾತೃತ್ವ, ಸಮಾನತೆಗಳ ಆಶಯಗಳನ್ನು ಛಿದ್ರಗೊಳಿಸುತ್ತಾ ಮೇಲುಕೀಳಿನ ತಾರತಮ್ಯತೆಯ ವಿಧಿ ವಿಧಾನಗಳು ದಿನದಿಂದ ದಿನಕ್ಕೆ ಹೆಚ್ಚು ಬಲಯುತವಾಗುತ್ತಿವೆ" ಎಂದು ವ್ಯಾಖ್ಯಾನಿಸಿದ್ದಾರೆ. ಲೇಖಕರ 'ಕತ್ತಲು ಕರಗುವ ಮುನ್ನ' ಕಾದಂಬರಿಯು ಪರಿಪೂರ್ಣವಾಗಿ ಆಧುನಿಕತೆಯ ವಿಷಯಾಂಶಗಳಿಂದ ಕೂಡಿದ ಕಥಾ ವಸ್ತುವನ್ನೊಳಗೊಂಡಿದೆ. ಈ ಕಾದಂಬರಿಯಲ್ಲಿ ವಿದ್ಯಾರ್ಥಿ ಜೀವನದಿಂದ ಅಧ್ಯಾಪಕ ವೃತ್ತಿಗೆ ಸಾಗಿದ ತಳಸಮುದಾಯದ ಯುವಕನ ಬದುಕಿನ ವಿವಿಧ ಮಜಲುಗಳನ್ನು ಒಳಗೊಂಡಿದೆ. "ಯುನಿವರ್ಸಿಟಿಯೊಳಗೆ ಹರತಾಳ ವಿಕೋಪಕ್ಕೆ ಹೋಗಿತ್ತು. ನಾಲ್ಕೈದು ಬಸ್ಸುಗಳು ಸುಟ್ಟಿದ್ರು. ಹುಬ್ಬಳ್ಳಿ ರಸ್ತೆಯೊಳಗಿನ ಕಾಲೇಜೊಂದರ ಹುಡುಗಿ ಹೋರಾಟದ ಹೆಸರಿನೊಳಗೆ ಬೆಂಕಿ ಹಚ್ಚಿಕೊಂಡಿದ್ದಲು" . ಈ ಮಾತಿನಲ್ಲಿ ಆಧುನಿಕತೆಯ ರುದ್ರ ತಾಂಡವವನ್ನು ತಿಳಿಸಲಾಗಿದೆ.

ಪ್ರೊ. ಕಂಪಣ್ಣನವರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಮಂಡಲ್ ವರದಿಯ ಬಗ್ಗೆ ಮಾತನಾಡಿದ್ದರಿಂದ ವಿದ್ಯಾರ್ಥಿಗಳಿಂದ ಪ್ರತಿಭಟನೆಗಳು ಶುರುವಾಯಿತು. ಈ ಪ್ರತಿಭಟನೆಯು ವಿಕೋಪಕ್ಕೆ ತಿರುಗಿ ನಾಲ್ಕು-ಐದು ಬಸ್ಸುಗಳಿಗೆ ಬೆಂಕಿ ಹಚ್ಚಲಾಯಿತು. ಈ ಘಟನೆಯ ನಡುವೆ ಹುಬ್ಬಳ್ಳಿ ರಸ್ತೆಯಲ್ಲಿರುವ ಕಾಲೇಜಿನ ಒಬ್ಬ ಹುಡುಗಿ ಹೋರಾಟದ ಹೆಸರಿನಲ್ಲಿ ಬೆಂಕಿ ಹಚ್ಚಿಕೊಂಡು ಪ್ರಾಣಬಿಟ್ಟಳು. ಈ ಎಲ್ಲಾ ಘಟನೆಗಳನ್ನು ಅವಲೋಕಿಸಿದಾಗ ಆಧುನಿಕತೆಯ ಸ್ಪರ್ಶ ಇರುವುದು ಖಾತ್ರಿಯಾಗುತ್ತದೆ.

ಅನಾದಿ ಕಾಲದಿಂದಲೂ ಬೆಳೆದುಕೊಂಡು ಬಂದಿರುವ ಪ್ರೀತಿಗೆ ವಿಶೇಷವಾದ ಮೆರುಗು ಬಂದಿದ್ದು ಮಾತ್ರ ಅಧುನಿಕ ಕಾಲದಲ್ಲಿ ಎಂದು ಹೇಳಿದರೆ ತಪ್ಪಿಲ್ಲ. ನಾಗರೀಕತೆ ಮುಂದುವರೆದಂತೆ ಆಧುನಿಕತೆ ಮನುಷ್ಯನನ್ನು ಹೊಸ-ಹೊಸ ಆಲೋಚನೆಯ ಕಡೆ ಕರೆದುಕೊಂಡು ಹೋಯಿತ್ತು. ಮನುಷ್ಯನ ಆಲೋಚನೆಗಳು ಬೆಳೆದಂತೆ ಪ್ರೇಮಕ್ಕೆ ವಿಶಿಷ್ಟವಾದ ಗೌರವ ಸ್ಥಾನಮಾನಗಳು ಲಭಿಸಿದವು. ಈ ಕಾದಂಬರಿಯಲ್ಲಿ ಕಥಾನಾಯಕ ಪ್ರಭು ತನ್ನ ಕಾಲೇಜು ವಿದ್ಯಾರ್ಥಿನಿ ಮಲ್ಲಿಕಾಳ ಪ್ರೇಮಶಾಪಕ್ಕೆ ಸಿಲುಕಿಕೊಂಡಿದ್ದು "ನಿಮ್ಮ ಎದಿಯೊಳಗೆ ಒಂಚೂರು ನನ ಬಗ್ಗೆ ಕರುಣೆ ಪ್ರೀತಿ ಇದ್ರ ಇದನ್ನ ತಿನ್ಲೆಬೇಕು. ಇಲ್ಲಾಂದ್ರ ವಾಪಾಸಬಿಸಾಕಬೇಕು ಅಂತ ಮನಸ್ಸಿನೊಳಗೆ ಅಂಡ್ಕೊಂಡವಳೆ ಯಾರಿಗೂ ಗೊತ್ತಾಗದಂಗ ನನ್ನ ಕಡೀಗ ಬಿಸಾಕಿದ್ಲು" ಈ ಮಾತಿನಲ್ಲಿ ಕಥಾನಾಯಕ ಪ್ರಭುವಿನ ಮೇಲೆ ಮಲ್ಲಿಕಾ ಪ್ರೇಮ ಪರೀಕ್ಷೆ ಮಾಡಿದ ಪರಿಯನ್ನು ತಿಳಿಸುವುದಾಗಿದೆ.

ಕರ್ನಾಟಕ ಕಾಲೇಜುವತಿಯಿಂದ ಊರೂರು ಅಲೆದು ಜನಜಾಗೃತಿ ಕಾರ್ಯಕ್ರಮ ಮಾಡುತ್ತಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಜಾಗೃತಿಯಲ್ಲಿ ಭಾಗವಹಿಸಿದರು. ವಿದ್ಯಾರ್ಥಿಗಳೆಲ್ಲ ನಾಟಕ, ಭಾಷಣ ಮಾಡಿ ದನಿದ್ದದರಿಂದ ಎಲ್ಲರಿಗೂ ಮಂಡಕ್ಕಿಯನ್ನು ಉಪಾಹಾರವಾಗಿ ನೀಡಲಾಗಿತ್ತು. ಆ ಸಂದರ್ಭದಲ್ಲಿ ಮಲ್ಲಿಕಾ ಹಸಿರು ಮೆಣಸಿನಕಾಯಿ ತಿನ್ನುವ ಮೂಲಕ ಪ್ರಭುವಿನಲ್ಲಿ ಪ್ರೇಮ ನಿವೇದನೆ ಮಾಡಿದಳು. ಪ್ರಭುವಿನ ಒಪ್ಪಿಗೆಗೆ ಅವನ ಹತ್ತಿರಕ್ಕೆ ಒಂದು ಮೆಣಸಿನಕಾಯಿ ಎಸೆಯುವುದರ ಮೂಲಕ ನನ್ನ ಮೇಲೆ ಪ್ರೀತಿ ಇದ್ದರೆ ತಿನ್ನಿ ಎಂದು ಕಣ್ಸನ್ನೆಯಲ್ಲಿ ತಿಳಿಸಿ ಒಪ್ಪಿಗೆ ಪಡೆದಳು. ಆಧುನಿಕ ಶೈಲಿಯ ಪ್ರೀತಿ ಪ್ರಪಂಚ ಇಂಥ ಘಟನೆಗಳು ವಿಚಿತ್ರವಾಗಿದೆ.

ಆಧುನಿಕ ಸಮಾಜದಲ್ಲಿ ಸಾಮಾನ್ಯ ಜನರಿಗೆ ಒದಗಿಸಲಾಗಿರುವ ವರವೆಂದರೆ ಚುನಾವಣೆ ಆಗಿದೆ. ಈ ಚುನಾವಣೆಯು ಆಧುನಿಕ ಸಮಾಜದೊಳಗೆ ಬಡವರ ಪಾಲಿನ ಅಕ್ಷಯ ಪಾತ್ರೆಯಾಗಿದೆ. ಚುನಾವಣೆ ಸಂದರ್ಭದಲ್ಲಿ ಪ್ರಚಾರಕ್ಕೆ ಬರುವ ಜನರಿಗೆ ದುಡ್ಡು, ಊಟ, ತಿಂಡಿಯ ಜೊತೆಗೆ ಹೆಂಡದ ಓಕುಳಿಯೂ ನಡೆಯುತ್ತದೆ. ಕಥೆಯಲ್ಲಿ ಪ್ರಭುವಿನ ಸ್ನೇಹಿತ ಪಟಗಾರ ಶಿರಗೂರ ತಾಲ್ಲೂಕಿಗೆ ನಡೆಯುವ ಎಂ.ಎಲ್.ಎ. ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಪ್ರಭುವಿನಿಂದ ನಾಮಿನೇಷನ್ ಮಾಡಿಸಿಯೇ ಬಿಟ್ಟನು. "ಎಲೆಕ್ಷನ್ ಅನ್ನೋದು ಬಡವರ ಪಾಲಿಗ ಬರೋ ಐದ ವರ್ಷದ ಚೌಡಿ ಹಬ್ಬದಂಗಿತ್ತು. ಎಷ್ಟು ಸಿಗತ್ತೈತೊ ಅಷ್ಟನ್ನ ಹಿರ್‍ಕೊಬೇಕನ್ನೋ ವಿಚಾರ ಪ್ರತಿಯೊಬ್ಬರದಾಗಿತ್ತು". ಈ ಮಾತಿನಲ್ಲಿ ಚುನಾವಣಾ ಸಂದರ್ಭದಲ್ಲಿ ಜನರು ಅಭ್ಯರ್ಥಿಯ ಎದುರು ಇಡಲಾಗುತ್ತಿದ್ದ ಬೇಡಿಕೆ ಬಗ್ಗೆ ತಿಳಿಸಲಾಗಿದೆ.

ಪಟಗಾರನ ಮಾತು ಕೇಳಿ ಚುನಾವಣೆಯಲ್ಲಿ ಸ್ಪರ್ಧಿಸಿದ ಪ್ರಭು ನಾಲ್ಕು ಐದು ಹುಡುಗರನ್ನು ಕಟ್ಟಿಕೊಂಡು ಪ್ರಚಾರ ಆರಂಭಿಸಿದನು. ಪ್ರಚಾರ ಮಾಡಲು ಊರೂರು ಸುತ್ತುತ್ತಿರುವಾಗ ಚಂಪಾಪುರ ತಾಂಡಗಳಲ್ಲಿ ಅಡ್ಡಾಡಿದರು. ಚುನಾವಣೆಯಲ್ಲಿ ನಿಮ್ಮ ಓಟು ನನಗೆ ನೀಡಬೇಕೆಂದು ಪ್ರಭು ಜನರನ್ನು ಕೇಳಿದಾಗ ಜನರು ಸಾರಾಯಿ ಕುಡಿಯುವುದಕ್ಕೆ, ದೋಸೆ ತಿನ್ನಕ್ಕೆ, ಜೋಳ ಖರೀದಿಸಲು, ಆಸ್ಪತ್ರೆಗೆ, ಮನೆಗಳಿಗೆ ಸುಣ್ಣ ತುಂಬಿಸಲಿಕ್ಕೆ, ಬಿದ್ದು ಹೋಗಿರುವ ಗೋಡೆ ಕಟ್ಟುವುದಕ್ಕೆ, ರಸ್ತೆ ರಿಪೇರಿಗೆ ಎಂದು ಹಣದ ಬೇಡಿಕೆಯನ್ನು ಮುಂದಿಟ್ಟರು. ಅವರ ಬೇಡಿಕೆಗಳನ್ನು ಕೇಳಿದ ಪ್ರಭುವಿಗೆ ಜೀವ ಹೋದಂಗಾಯಿತು. ಚುನಾವಣೆಯ ಬಗ್ಗೆ ಅರಿವಿಲ್ಲದಿದ್ದ ಪ್ರಭುವಿಗೆ ಇಡೀ ಆಕಾಶ ತಲೆ ಮೇಲೆ ಬಿದ್ದಂತಾಗಿ ಚುನಾವಣೆ ಸಹವಾಸನೆ ಬೇಡ ಎನ್ನುವ ಮಟ್ಟಕ್ಕೆ ಬಂದನು. ಇಂದಿನ ದಿನಗಳಲ್ಲಿಯೂ ಚುನಾವಣಾ ಆಯೋಗ ಸಾಕ್ಷರತೆ ಮೂಡಿಸಿದರೂ ಇಂತಹ ಬೇಡಿಕೆಗಳು ನಿಂತಿಲ್ಲ.

ಲೇಖಕರ 'ಗೋರಮಾಟಿ' ಕಾದಂಬರಿಯು ಪೂರ್ಣವಾಗಿ ಗ್ರಾಮೀಣ ಜೀವನ ವಿಧಾನವನ್ನು ಒಳಗೊಂಡಿದ್ದರೂ ನಾಗರೀಕತೆ ಮುಂದುವರೆದಂತೆ ಅದರೊಂದಿಗೆ ಒಗ್ಗಿಕೊಂಡು ತಾನು ಬೆಳವಣಿಗೆ ಆಗಿರುವುದು ಕಂಡುಬರುತ್ತದೆ. ಬುದ್ಧನಾಯ್ಕನ ಮೂರನೇ ತಲೆಮಾರಿನ ಸಂತಾನ ಆಧುನಿಕತೆಗೆ ಬಳಗಾಗಿರುವುದು ಕಥೆಯೊಳಗೆ ಅಡಕವಾಗಿದೆ. ಗೊತ್ತಾನ ಏಳನೆ ಮಗ ಪಿಣು, ಇವನ ತಮ್ಮ ಗದ್ದಿ ಭತ್ತ ನಾಟಿ ಮಾಡಬೇಕು ಅಂತ ಭತ್ತದ ಸಸಿಗಳನ್ನು ಪಾತಿ ಹಾಕಿದರೂ ಆ ಭತ್ತದ ಸಸಿಗಳನ್ನು ನಾಟಿ ಮಾಡಿ ಆರು ತಿಂಗಳಿಗೆ ಸೊಂಪಾಗಿ ಭತ್ತ ಬೆಳೆದರು. "ಭತ್ತನ ಪಿಣುನೆ ಹೇರ‍್ಕೊಂಡ ಹೋಗಿ ಮಾರ‍್ಕೊಂಡು ಹೊಸ ಪಿಲಿಪ್ಸ್ ರೇಡಿಯೊ ತಂದಿದ್ದ. ಮನಿ ಮಂದಿಗೆಲ್ಲಾ ಬಹಳ ಖುಷಿಯಾಗತು ಕೆಲವರಂತು ಇದೊಂದು ಪ್ರಗತಿಯ ಸಂಕೇತ ಅಂತ ಕರೆದರು". ಈ ಮಾತಿನಲ್ಲಿ ಗೊತ್ತಾನ ಕುಟುಂಬ ಆಧುನಿಕತೆಯ ಕಡೆಗೆ ಸಾಗಿದುದರ ಬಗ್ಗೆ ತಿಳಿಸಲಾಗಿದೆ.

ದಿನವಿಡೀ ರೊಟ್ಟಿ ತಿನ್ನುತ್ತಿದ್ದವರಿಗೆ ಅನ್ನದ ರುಚಿ ತಿಳಿಯಲೇ ಇಲ್ಲ. ಪಿಣು ಮತ್ತು ಗದ್ದಿಯ ಶ್ರಮದಿಂದಾಗಿ ಜೋಳದ ರೊಟ್ಟಿ ತಿನ್ನದವರ ಬಾಯಿಗೆ ಅನ್ನದ ರುಚಿ ಹೊಸ ಲೋಕದ ಪರಿಚಯವಾದಂತೆ ಆಗಿತ್ತು. ತನ್ನ ಮಕ್ಕಳು ಹೊಸ ಜಗತ್ತಿನ ಹೊಸ ಬದುಕಿನ ಜೊತೆಗೆ ಹೊಂದಿಕೊಳ್ಳುತ್ತಿರುವುದು ಮನಸ್ಸಿನಲ್ಲಿ ತಡೆಯಲಾಗದ ಸಂತೋಷ ಉಂಟು ಮಾಡಿತ್ತು. ಪಿಣು ಭತ್ತ ಮಾರಿದ ದುಡ್ಡಿನಿಂದ ಪಿಲಿಪ್ಸ್ ರೇಡಿಯೋ ತಂದಿರುವುದನ್ನು ಮನೆಯ ಜನರೆಲ್ಲರೂ ಪ್ರಗತಿಯ ಸಂಕೇತ ಎಂದು ಕರೆದರು. ಅದೇ ವರ್ಷದಾಗ ಪಿಣು ಹಠಮಾಡಿ ಸೈಕಲ್ ಖರೀದಿಸಿದ್ದು ಆಧುನಿಕತೆಗೆ ಒಳಗಾದುದ್ದನ್ನು ಖಚಿತಪಡಿಸುತ್ತದೆ.

ಕಾಕಾಪುರ ತಾಂಡದೊಳಗೆ ಗೌರ್ಮೆಂಟ್ ವತಿಯಿಂದ ನೆಲ ಕೊರಿಯೋ ಬೋರ್‌ವೆಲ್ ಬಂದಿತು. ಪಿಣು ಈ ಸೌಲಭ್ಯ ಪಡೆಯಲು ಮುಂದಾಗಿ ತಮಗೂ ನೀರಾವರಿ ಭೂಮಿಯನ್ನು ಪಡೆದುಕೊಂಡನು. ನೀರಾವರಿ ಸವಲತ್ತು ಪಡೆದು ಶೇಂಗಾ ಬೆಳೆದು ಭಾರೀ ಹಣಗಳಿಸಿ ಶೆಟ್ಟಿಯ ಹೊಲದ ಪಕ್ಕದಾಗ ಇರುವ ಕುರುಬರ ಅಂದಾನಪ್ಪನ ಆರೂವರೆ ಎಕರೆ ಜಮೀನನ್ನು ಖರೀದಿಸಿದನು. ಎರಡು ಮೂರು ವರ್ಷದಾಗ ಹೊಲಗಳು ಜಾಸ್ತಿ ಆದವು ಉಳುಮೆ ಮಾಡಲು ಯೋಚನೆ ಮಾಡಿ. "ಬ್ಯಾಂಕಿನೊಳಗೆ ಲೋನಮಾಡಿ ಹೊಸ ಟ್ರಾಕ್ಟರ್ ಬುಕ್ ಮಾಡ್ಸಿದ ಗೊತ್ರಾನಾಯ್ಕು, ಮಕ್ಕಳು ದುಡಿತಾರಂದ್ರ ನಾಯಾಕೆ ಬ್ಯಾಡ ಅನ್ನಬೇಕು ನಾಳೆ ತಿರ‍್ಸೋರು ಅವರೆ ನಂದೇನೈತಿ ಸುಮ್ಮನಾದ" ಈ ಮಾತಿನಲ್ಲಿ ದುಡಿಮೆ ಮಾಡಿ ಹೊಲದ ಮೇಲೆ ಹೊಲ ಖರೀದಿಸಿದ ಪಿಣು ಉಳುಮೆ ಮಾಡಲು ಟ್ಯಾಕ್ಟರ್ ತೆಗೆದುಕೊಂಡಿರುವುದರ ಬಗ್ಗೆ ತಿಳಿಸುತ್ತದೆ.

ಪಿಣು ಹಗಲು–ರಾತ್ರಿ ಹೊಲಕ್ಕೆ ನೀರು ಬಿಡುವುದು ಗುದ್ದಲಿಯಿಂದ ಅಗೆಯುವುದು ಮಾಡಿ ಬೇಸರವಾಗಿತ್ತು. ಪಿಣ್ಣು ತನ್ನ ಅಪ್ಪ ಗೊತ್ತಾನ ಮುಂದೆ ಹಠ ಮಾಡಿ ಟ್ರ್ಯಾಕ್ಟರ್‌ನ

ಕೊಂಡುಕೊಳ್ಳುವಂತೆ ಉತ್ತೇಜಿಸಿದನು. ಅದರ ಫಲವಾಗಿ ಗೊತ್ತಾ ಬ್ಯಾಂಕಿನಿಂದ ಸಾಲ ತಂದು ಟ್ರ್ಯಾಕ್ಟರ್‌ಗೆ ದುಡ್ಡು ಕಟ್ಟಿದ್ದರಿಂದ ಮನೆ ಮುಂದೆ ಟ್ರ್ಯಾಕ್ಟರ್ ಬಂದಿತ್ತು. ಇದನ್ನು ಕಂಡ ಸೋನ್ಯಾ, ಗಬಡು, ಪೂಜಾರಿಪಾಪನಿಗೆ ಹೊಟ್ಟೆ ಉರಿ ತಡೆದುಕೊಳ್ಳಲಾರದೆ ಅಸೂಯೆ ಪಡಲಾರಂಭಿಸಿದರು. ಯಾರು ಏನೇ ಅಂದರೂ ತಲೆಕೆಡಿಸಿಕೊಳ್ಳದ ಗೊತ್ತಾನ ಕುಟುಂಬ ಆಧುನಿಕತೆಯೊಂದಿಗೆ ಜೀವನ ಸಾಗಿಸತೊಡಿಗಿತ್ತು.

ಬ್ರಿಟಿಷರ ಕಾಲದಿಂದಲೂ ಕಾಕಪುರ ತಾಂಡದೊಳಗೆ ಬದುಕು ಸಾಗಿಸುತ್ತಿದ್ದ ಕುಂಬಾರ ಮಲ್ಲಪ್ಪನ ವಂಶಸ್ಥರೂ ಆಧುನಿಕತೆಯ ಸ್ಪರ್ಶದಿಂದ ವಿನಾಶದ ಕಡೆಗೆ ಮುಖ ಮಾಡಿದರು. ಮಲ್ಲಪ್ಪನ ಕಾಲದಲ್ಲಿ ವರ್ಷಕ್ಕೆ ಒಂದು ಸಾರಿಯಾದ್ರೂ ಅಕ್ಕಿ, ಬೆಲ್ಲ, ಕಾಳು, ಎಲೆ, ಅಡಿಕೆ, ದಕ್ಷಿಣೆಗಂತ 5 ರೂಪಾಯಿ ತೆಗೆದುಕೊಂಡು ಮಡಿಕೆ ಕೊಡುತ್ತಿದ್ದರು. ತಾಂಡದೊಳಗೆ ಹುಲ್ಲಿಗೆ, ಸೌದೆಗೆ, ಧಾನ್ಯಕ್ಕೆ ಅಂತ ಮಡಿಕೆ ಮಾರಿ ಜೀವನ ನಡೆಸುತ್ತಿದ್ದ ಕಾಲವಿತ್ತು. ಆದರೆ "ದಿನಕಳದಂಗೆ ಅಲ್ಯೂಮಿನಿಯಂ ಬಂತು. ಸ್ವಾರಿ ಬಳಸೋದು ಕಡಿಮೆ ಆಯಿತು. ಕುಂಬಾರ ಮಲ್ಲಪ್ಪನ ಕುಂಬಾರಕಿಗ ಅರ್ಧ ಪೆಟ್ಟುಬಿತ್ತು. ಇನ್ನೂ ಸ್ವಲ್ಪಕಾಲಕ ಬಂದು ಪ್ಲಾಸ್ಟಿಕ್ ಯುಗದಾಗ ತಿಗರಿನೆ ನಿಂತುಹೋಗಿ ಮಲ್ಲಣ್ಣ ಕುಂಬಾರಕಿ ಬಿಟ್ಟು ಹೊಲ ಉಳಾಕ ಹತ್ತಿದ". ಈ ಮಾತಿನಲ್ಲಿ ಆಧುನಿಕತೆಯಿಂದ ಕುಂಬಾರಿಕೆ ವೃತ್ತಿ ಮಾಯವಾದ ಕಾರಣ ಮಲ್ಲಣ್ಣನ ಕುಟುಂಬದವರು ವ್ಯವಸಾಯಕ್ಕೆ ತೊಡಗಿದರ ಬಗ್ಗೆ ತಿಳಿಸುತ್ತದೆ.

ಕಾಕಾಪುರ ತಾಂಡದ ಲಂಬಾಣಿಗರಿಗೆ ಮಡಿಕೆ ಕೊಡುವುದರ ಮೂಲಕ ಇಡೀ ತಾಂಡಕ್ಕೆ ಆಸರೆಯಾಗಿದ್ದ ಮಲ್ಲಣ್ಣ ಸತ್ತು ಹೋದಾಂಗಿನಿಂದ ಕುಂಬಾರಿಕೆ ಕೆಲಸನೂ ನಿಂತು ಹೋಯಿತು. ಮಡಿಕೆ ಜಾಗಕ್ಕೆ ಅಲ್ಯೂಮೀನಿಯಂ ಪಾತ್ರೆಗಳು ಬಳಕೆಗೆ ಬಂದವು. ಅಲ್ಯೂಮೀನಿಯಂ ಅನಂತರದಲ್ಲಿ ಸ್ಟೀಲ್, ಕಂಚು, ತಾಮ್ರ, ಹಿತ್ತಾಳೆ ಪಾತ್ರೆಗಳು ಬಳಕೆಗೆ ಬಂದ ಹೊತ್ತಿನಲ್ಲಿಯೇ ಪ್ಲಾಸ್ಟಿಕ್ ವಸ್ತುಗಳು ಬಳಕೆಯಾದವು. ಇದರಿಂದಾಗಿ ಕುಂಬಾರರ ಜೀವನ ಅತಂತ್ರವಾಗಿ ಕೂಲಿಗೆ, ವ್ಯವಸಾಯಕ್ಕೆ ತಮ್ಮ ಬದುಕನ್ನು ಬದಲಿಸಿಕೊಂಡರು. ಇವರಂತೆ ಈರಭದ್ರಾಚಾರಿ, ಹೊನ್ನಾಚಾರಿ, ಮಾನಾಚಾರಿ ತಮ್ಮ ಮರಗೆಲಸ ಬಿಟ್ಟು ಕಾರ್ಖಾನೆಗಳಲ್ಲಿ ಕಬ್ಬಿಣದ ಸರಳು ತಯಾರು ಮಾಡುವುದು ಟ್ರ್ಯಾಕ್ಟರ್ ಬಿಡಿಭಾಗ ತಯಾರಿ ಮಾಡುವ ಕೆಲಸಕ್ಕೆ ತೊಡಗಿಕೊಂಡರು.

ಲೇಖಕರ 'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಯಲ್ಲಿ ಅಧುನಿಕತೆ ತಾಂಡವ ಬದುಕಿನೊಳಗೆ ವಿನೂತನ ರೀತಿಯಲ್ಲಿ ಪ್ರಯೋಗಗೊಂಡಿದೆ. ಅನಾರೋಗ್ಯ ಪೀಡಿತಳಾಗಿದ್ದ ಚಿಮ್ನಿಯನ್ನಾ ತಿಳಿದವರ ಮಾರ್ಗದರ್ಶನದಿಂದ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಚಿಮ್ನಿಯನ್ನು ಪರೀಕ್ಷೆ ಮಾಡಿದ ಡಾಕ್ಟರ್ ದಾವಣಗೆರೆಯ ಆಸ್ಪತ್ರೆಗೆ

ಕರೆದುಕೊಂಡು ಹೋಗುವಂತೆ ಹೇಳಿದರು. ಆದರೆ ತಾಂಡದೊಳಗೆ ದಾವಣಗೆರೆ ಆಸ್ಪತ್ರೆಯೆಂದರೆ ಒಂದು ರೀತಿಯಲ್ಲಿ ಭಯದ ವಾತಾವಣರವನ್ನು ಮಾಡಿತು. ಕಾರಣ ಈ ಆಸ್ಪತ್ರೆಯಲ್ಲಿ ಸಾಮವೇಸ್ತ್ರಿ ಸತ್ತಿದ್ದ. ಅವನ ಆಧುನಿಕ ಶೈಲಿ ಎಂದರೆ 118"ಸಾಮಮೇಸ್ತ್ರಿಯ ಕೈಯಾಗಗೊಂದು ಆಟಮಿಟಿ ವಾಚು, ಮುಕ್ಳಾಗೊಂದು ಸೈಕಲ್, ಬಗಲಾಗ ರೇಡಿವೆ, ಬಿಳಿ ಧೋತ್ರ, ಕೆಂಪು ಸೆಲ್ಯೇವು ಮಂದಿ "ಬಂದ ನೋಡ್ರಲೇ ಮದುಮಗ" ಅಂತೇಳಿ ಹಾಸೇವಾಡ್ತಿದ್ರು". ಈ ಮಾತಿನಲ್ಲಿ ಕಾಫಿ ತೋಟದಲ್ಲಿ ದುಡಿಯುತ್ತಿದ್ದ ಸಾಮಮೇಸ್ತ್ರಿಯ ಆಧುನಿಕ ಜೀವನ ಶೈಲಿಯನ್ನು ತಿಳಿಸುವುದಾಗಿದೆ.

ಡಾಕ್ಟರ್ ದಾವಣಗೆರೆ ದೊಡ್ಡ ಆಸ್ಪತ್ರೆಗೆ ಚಿಮ್ನಿಯನ್ನು ಕರೆದುಕೊಂಡು ಹೋಗಿ ಎಂದಾಗ ತಾಂಡದ ಜನರೆಲ್ಲ ಚಿಮ್ನಿಯ ಆಯಸ್ಸು ಮುಗಿದೆ ಹೋಯಿತ್ತು ಅಂದುಕೊಂಡಿದರು. ಏಕೆಂದರೆ ಕಾಫಿ ತೋಟದಲ್ಲಿ ಮೇಸ್ತ್ರಿ ಕೆಲಸ ಮಾಡುತ್ತಿದ್ದ ಸಾಮವೇಸ್ತ್ರಿ ಕೂಲಿ ಆಳುಗಳನ್ನು ಸುಲಿಗೆ ಮಾಡಿ ಬಂದ ಕಮೀಷನ್‌ನಿಂದ ಸಾರಾಯಿ, ಹೆಂಡ ಕುಡಿದು ಅನಾರೋಗ್ಯಗೊಂಡು ದಾವಣಗೆರೆ ಆಸ್ಪತ್ರೆ ಸೇರಿ ಸತ್ತು ಹೋಗಿದ್ದನು. ಆದರೆ ಇವನು ಜೀವಂತವಾಗಿದ್ದಾಗ ಕಾಫಿ ತೋಟದಿಂದ ತಾಂಡಕ್ಕೆ ಬರುವಾಗ ನೀಟಾಗಿ ಮಾಡಿದ್ದ ಕ್ರಾಪು, ಕೈಯಲ್ಲಿ ಆಟಮಿಟಿಕ್ ವಾಚು, ಸೈಕಲ್, ಜೊತೆಗೊಂದು ರೇಡಿಯೋ, ಬಿಳಿ ರೇಷ್ಮೆ ಪಂಚೆ, ಕೆಂಪು ಶಾಲು ಹಾಕಿಕೊಂಡು ಮದುಮಗನಂತೆ ಬರುತ್ತಿದ್ದನು. ಅವನ ಈ ನವೀಕರಣಕ್ಕೆ ಆಧುನಿಕತೆಯ ಸೆಳೆತ ಬಹುಮುಖ್ಯವಾದ ಪಾತ್ರವಹಿಸಿತ್ತು.

ಚಿನ್ನಿನಾಯ್ಕ ತಾಂಡ ಬಿಟ್ಟು ಮೂವತ್ತು ವರ್ಷಗಳೇ ಕಳೆದುಹೋಗಿದ್ದವು. ಈ ಮಾತಿನಲ್ಲಿ ವರ್ಷಗಳ ಅವಧಿಯು ನಡುವೆ ತಾಂಡದೊಳಗೆ ಸಾಕಷ್ಟು ಬದಲಾವಣೆಗೊಂಡಿದ್ದವು. "ತಾಂಡದಲ್ಲಿಗ ಗುಡಿಸಲುಗಳೇ ಇಲ್ಲಾ ತಾಂಡದ ಮುಂದಿನ ಕೆಂಧೂಳಿಗ ಹಾರಿಸಿಕೊಂಡು ಹೋಗಾಕೆ ಹುಲ್ಲು, ಆಪ್ರ ಇಲ್ಲ. ಸರ್ಕಾರದ ನೂರಾರು ಯೋಜನೆಗಳು ಇದ್ದೋರಿಗೂ, ಇಲ್ಲದವರಿಗೂ ಜನತಾ ಮನೆ ಅದ್ಯಾವುದೋ ಸ್ಕೀಮಿನೊಳಗೆ ಪುಗಸಟ್ಟೆ ಕರೆಂಟು ಕೊಟ್ಟದೆ" ಈ ಮಾತಿನಲ್ಲಿ ಕಾಟೇಬರಿ ತಾಂಡದ ಜನರು ಸರ್ಕಾರದ ಸವಲತ್ತುಗಳನ್ನು ಬಳಸಿಕೊಂಡಿರುವ ಬಗ್ಗೆ ತಿಳಿಸಲಾಗಿದೆ. ಕಾಟೇಬರಿ ತಾಂಡದ ಜನರಿಗೆ ಸರ್ಕಾರ ಹಲವಾರು ಸವಲತ್ತುಗಳನ್ನು ಒದಗಿಸಿ ಕೊಟ್ಟಿತ್ತು. ಇದರಿಂದಾಗಿ ಇಲ್ಲಿನ ಜನರು ತಮ್ಮ ಹಳೆಯ ಮನೆಗಳನ್ನು ಕೆಡವಿ ಹೊಸದಾಗಿ ಮಂಗಳೂರು ಅಂಚಿನ ಮನೆಯನ್ನು ಕಟ್ಟಿಕೊಂಡಿದರು. ಮಣ್ಣಿನಿಂದ ಕೂಡಿದ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗಿತ್ತು. ಸರ್ಕಾರದಿಂದ ರೇಷನ್, ಎಲೆಕ್ಟ್ರಾನ್ ಕಾರ್ಡುಗಳು ದೊರಕಿದ್ದವು. ಎಣ್ಣೆದೀಪದ ಬೆಳಕಿನಲ್ಲಿ ಕಾಲ ಸಾಗಿಸುತ್ತಿದ್ದವರಿಗೆ ಸರ್ಕಾರ ಉಚಿತವಾಗಿ ವಿದ್ಯುತ್ ಪೂರೈಸಿ ಬೆಳಕಿನ ಸೌಲಭ್ಯ ನೀಡಿತ್ತು. ಭಾರತೀಯ ಪ್ರಜೆಗೆ ದೊರೆಯುತ್ತಿದ್ದ

ಎಲ್ಲ ರೀತಿಯ ಸವಲತ್ತುಗಳನ್ನು ಕಾಟೇಬರಿ ತಾಂಡದ ಲಂಬಾಣಿ ಜನ ಪಡೆದುಕೊಂಡಿದ್ದರು. ಈ ಎಲ್ಲ ಸೌಕರ್ಯಗಳು ಆಧುನಿಕತೆಯಿಂದ ಒದಗಿದವೆಂದು ಹೇಳಬಹುದು.

ಮಂಗ್ಯಾನಾಯ್ಕನು ಗಂಡು ಮಗುವಿಗಾಗಿ ಚಿನ್ನಿಗೆ ಮರಣಾಂತಿಕವಾಗಿ ಹಿಂಸೆ ಮಾಡಿ ಕೊನೆಗೆ ಎರಡನೆಯ ಮದುವೆಯಾದನು. ಆದರೂ ಇವನ ಕಷ್ಟ ಪರಿಹಾರ ಆಗಲೇ ಇಲ್ಲ. ಎರಡನೆಯ ಹೆಂಡತಿಯ ಗಂಡು ಮಕ್ಕಳು ಮಂಗ್ಲ್ಯಾನ ಆಸ್ತಿಯನ್ನೆಲ್ಲಾ ತಮ್ಮ ಹೆಸರಿಗೆ ಬರೆದುಕೊಂಡು ಮಂಗ್ಲ್ಯಾನನ್ನು ಮಾನಸಿಕವಾಗಿ ಹಿಂಸೆ ಮಾಡಿ ಜರ್ಜರಿತಗೊಳಿಸಿದರು. ಇದರ ನಡುವೆ ಹಿರಿಯ ಹೆಂಡತಿ ಚಿನ್ನಿಯ ಮಕ್ಕಳು ಆಧುನಿಕತೆಯ ಸ್ಪರ್ಶದಿಂದಾಗಿ ಮಂಗ್ಲ್ಯಾನ ವಿರುದ್ಧ ಕಾನೂನು ಸಮರ ಮಾಡಿದ ಸಂದರ್ಭ "ಅವಳ ಮದುವೆಯಾಗದ ಕೊನೆಯ ಹೆಣ್ಣು ಮಕ್ಕಳು ತಮ್ಮ ನ್ಯಾಯಕ್ಕಾಗಿ ಕೋರ್ಟಿಗೆ ಹೋಗಿ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕಿದೆ ಎನ್ನೋ ಕೇಸ್ ಫಿಟ್ ಮಾಡಿ ಕೋರ್ಟಿಗು ಅಲೆಸಿ, ಮೇಲೆ ಕುಂತ ಜಡ್ಜ್‌ಗೆ ವಿನಂತಿ ಮಾಡಿದ" . "ಈ ಮಾತಿನಲ್ಲಿ ಮಂಗ್ಲ್ಯಾನ ಹದಿನಾರು ಜನ ಮಕ್ಕಳಲ್ಲಿ ಮದುವೆಯಾಗದ ನಾಲ್ಕು ಜನ ಮಕ್ಕಳು ತಮ್ಮ ತಾಯಿಗಾಗಿ ಕಾನೂನು ಹೋರಾಟ ಮಾಡಿರುವ ಬಗ್ಗೆ ತಿಳಿಸುತ್ತದೆ.

ಕಾಟೇಬರಿ ತಾಂಡದೊಳಗೆ ಮಂಗ್ಲ್ಯಾನ ಸ್ಥಿತಿ ಚಿಂತಾಜನಕವಗಿತ್ತು. ಕಾರಣ ಆಧುನಿಕತೆಯ ಸ್ಪರ್ಶದಿಂದ ಶಿಕ್ಷಣ ಪಡೆದುಕೊಂಡಿದ್ದ ಮಂಗ್ಲ್ಯಾ ಮತ್ತು ಚಿನ್ನಿ ದಂಪತಿಯ ನಾಲ್ವರು ಕಿರಿ ಹೆಣ್ಣು ಮಕ್ಕಳು ನಮ್ಮ ತಂದೆಯ ಮೇಲೆ ಕೋರ್ಟ್‌ನಲ್ಲಿ ಕೇಸು ಹಾಕಿದ್ದರು. ಇವರ ಆಪಾದನೆಯಲ್ಲಿ ನಮ್ಮ ತಂದೆ ನಮಗೆ ಮದುವೆ ಮಾಡಿಲ್ಲದ ಕಾರಣ ಗಂಡು ಮಕ್ಕಳಷ್ಟೇ ಸರಿಸಮನಾದ ಆಸ್ತಿಯ ಹಕ್ಕಿದೆ ತಮಗೆಲ್ಲರಿಗೂ ಅಪ್ಪನ ಆಸ್ತಿಯಲ್ಲಿ ಭಾಗಬೇಕೆಂದು ಕೇಳಿದರು. ಆದರೆ ಮಂಗ್ಲ್ಯಾ ನ್ಯಾಯಾಧೀಶರ ಮುಂದೆ ತನ್ನ ಅಸಹಾಯಕತೆಯನ್ನಾ ತೋಡಿಕೊಂಡು ಮಾಡಿದ ತಪ್ಪಿಗೆ ಕ್ಷಮೆಯಾಚಿಸಿದನು. ಈ ಎಲ್ಲಾ ಹೋರಾಟವು ಆಧುನಿಕತೆಯ ಬದುಕಿನಿಂದ ಬಂದ ಉಡುಗೊರೆ ಎಂದೇ ಭಾವಿಸಬಹುದಾಗಿದೆ.

ಲೇಖಕರ 'ಗುಡ್ಡಜ್ಜ' ಸಂಕಲನದಲ್ಲಿ ಹೊಸತನಕ್ಕೆ ಒಗ್ಗಿಕೊಂಡು ಬದುಕು ನಡೆಸಿದ ಲಂಬಾಣಿಗರ ಬದುಕಿನ ಕಥೆಗಳನ್ನು ಕಾಣಬಹುದು. 'ಆಯಾ' ಕಥೆಯಲ್ಲಿ ಚಂದ್ರಪ್ಪ ತನ್ನ ಪೂರ್ವಿಕರು ನಡೆಸಿಕೊಂಡು ಬಂದಿದ್ದ ಕ್ಷೌರಿಕ ಕಸುಬನ್ನೇ ತಾನು ಮುಂದುವರೆಸಿಕೊಂಡು ಬಂದಿದ್ದನು. ಆದರೆ ಆತನ ಮಗ ಹನುಮಂತ ಕ್ಷೌರಿಕ ವೃತ್ತಿ ಮಾಡಲು ನಿರಾಕರಿಸಿ ಕೂಲಿ ಮಾಡುವ ನಿರ್ಧಾರ ತೋರಿದನು. "ಕೂಲಿ ಮಾಡಿದರೆ ಅವತ್ತಿಗಾಗುವಷ್ಟು ಕಾಳಾದರೂ ಸಿಗತೈತಿ, ವರ್ಷಕ್ಕ ಒಂದುಸಲ 'ಆಯಾ' ಕೊಟ್ರ ಮುಗೀತು–ಮುದುಕರು, ಹುಡುಗರು ಮನಿಮಂದಿ ಕಾಯಕ ಮಾಡಿಸ್ಕೊಳ್ತಾರ" . ಈ

ಮಾತಿನಲ್ಲಿ ಕೂಲಿ ಮಾಡಿದ ಅನುಭವ ಇದ್ದ ಹನುಮಂತ ಅದರಿಂದಾಗುವ ಅನುಕೂಲತೆ ಕುರಿತು ವಿವರಿಸಿದ್ದಾನೆ.

ಚಂದ್ರಪ್ಪ ತನ್ನ ಕ್ಷೌರಿಕ ಕಾಯಕವನ್ನ ತನ್ನ ಪ್ರಾಣವೆಂಬಂತೆ ಪ್ರೀತಿಸುತ್ತಿದ್ದನು. ಮೂವತ್ತು ವರ್ಷದ ಹಿರಿಮಗ ಹನುಮಂತನಿಗೆ ಮಾತ್ರ ತನ್ನ ತಾತ ಮುದ್ತಾತಂದಿರ ಕಾಯಕವನ್ನು ಕಾಪಾಡಿಕೊಂಡು ಹೋಗುವ ಮನಸ್ಸಿರಲಿಲ್ಲ. ನೂರು ಜನರ ತಲೆ ಬೋಳಿಸಿದರೂ ಸುಗ್ಗಿ ಕಾಲಕ್ಕೆ ಕಾಳು ಸಿಗುವುದಿಲ್ಲ ಮನೆ ಜನರೆಲ್ಲ ಉಪವಾಸ ಇರಬೇಕಾದ ಈ ಕಸುಬು ನನಗೆ ಬೇಡ ಎಂದು ತಿರಸ್ಕಾರಿಸಿದನು. ಕೂಲಿ ಮಾಡಿದರೂ ಒಂದಿಷ್ಟು ಕೂಲಿಯ ಕಾಳು ಸಿಗುತ್ತೇ ಸುಂಕ ಕಟ್ಟಿದರೆ ಕೂಲಿಗಾದರೂ ಕರೆಯುತ್ತಾರೆ. ಆಧುನಿಕತೆ ಸ್ಪರ್ಶವಿರುವ ನಗರ ಪ್ರದೇಶದ ಕಟಿಂಗ್ ಸೇಲ್‌ಗೆ ಹೋಗಿ ಬರುವ ಊರಿನವರಿಗೆ ಹಳೆಟ್ರಂಕು ಅದರೊಳಗಿರುವ ಕಪ್ಪಾಗಿರುವ ಬ್ರಷ್, ಪಾಚಿ ಕಟ್ಟಿರೋ ಹಿತ್ತಾಳೆ ಲೋಟದ ಸೇವಿಂಗ್ ಇಷ್ಟ ಪಡುವುದಿಲ್ಲ. ಹಾಗಾಗಿ ನಾನು ಕ್ಷೌರಿಕ ವೃತ್ತಿ ಮಾಡುವುದಕ್ಕಿಂತ ಕೂಲಿ ಮಾಡುವುದು ಶ್ರೇಷ್ಟವೆಂದು ಅವನು ವಾದಿಸಿದನು.

'ಗಾಂಧಿ, ಗೋಪ್ಲ ಮತ್ತು ಮಂಟಕುರಿ' ಕಥೆಯಲ್ಲಿ ಗೋಪ್ಲನು ಶಾಲೆಯಲ್ಲಿ ಪಾಂಡು ಮೇಷ್ಟು ಹೇಳಿದ ಗಾಂಧೀಜಿಯವರ ಅಹಿಂಸಾವಾದಿ ಪಾಠನ ಹೆಚ್ಚು ಮನಸ್ಸಿಗೆ ಅಚ್ಚಿಕೊಂಡಿದ್ದನು. ಗೋಪ್ಲನ ತಂದೆ ತಿರುಪನು ಊರಿನ ದೇವರಿಗೆ ಹರಕೆ ತೀರಿಸಲು ಒಂದು ಹೆಣ್ಣು ಕುರಿಯನ್ನ ಸಂತೆಯಿಂದ ತಂದಿದ್ದನು. ಆದರೆ ಆ ಕುರಿಮರಿಗೆ ಒಂದು ಟಗರ ಮರಿ ಹುಟ್ಟಿದ್ದು ತಿರುಪನಿಗೆ ಸಂತೋಷವಾಯಿತು. ಟಗರುಮರಿಗೆ ಮೂರು ಕಾಲು ಸರಿಯಾಗಿದ್ದು ಒಂದು ಕಾಲು ಊನವಾಗಿದ್ದರಿಂದ ಮಂಟಕುರಿ ಅಂತ ಕರೆಯುತ್ತಿದ್ದರು. ಆ ಮಂಟಕುರಿಗೂ ಗೋಪ್ಲನಿಗೆ ಒಂದು 'ರೀತಿಯಲ್ಲಿ ಅವಿನಾಭಾವ ಸಂಬಂಧ ಬೆಳೆದಿತ್ತು. ಆದರೆ ಹಬ್ಬದ ಹೆಸರಿನಲ್ಲಿ ಮಂಟಕುರಿಯನ್ನು ಬಲಿಕೊಟ್ಟಾಗ ಬೇಸರಗೊಂಡ ಗೋಪ್ಲ "ಅವನವ್ವನ ನಾ ಈ ತಿನ್ನೋ ಕಾಟಕರ ಜಾತ್ಯಾಗ ಯಾಕಾರ ಹುಟ್ಟಿದ್ನೋ ಏನೋ? ಪಾಂಡು ಮೇಷ್ಟ್ರು ತಿನ್ನಗಿಲ್ಲಂತ ಅವರೇ ಪಾಡು. ಗಾಂಧೀನೂ ತಿಂತಿದ್ದಿಲ್ಲಂತ ಪ್ರಾಣಿಹಿಂಸೆ ಮಾಡಬಾರ್ದು ಅಂತ ಮಂದಿಗೆ ಹೇಳ್ತಿದ್ರಂತ" . ಈ ಮಾತಿನಲ್ಲಿ ಗಾಂಧೀಜಿಯ ತತ್ವಕ್ಕೆ ಬಿದ್ದು ಗೋಪ್ಲಾನು ಸಸ್ಯಹಾರಿಯಾಗಲು ಯತ್ನಿಸಿದರ ಬಗ್ಗೆ ತಿಳಿಸಿದೆ.

ತರಗತಿಯಲ್ಲಿ ಪಾಂಡುಮಾಸ್ತರು ಗಾಂಧೀಯವರ ವ್ಯಕ್ತಿತ್ವದ ಬಗ್ಗೆ ಗೋಪ್ಲಾನಿಗೆ ತಿಳಿಸಿದ್ದರಿಂದ ಪ್ರೇರಣೆಗೊಂಡ ಗೋಪ್ಲನು ಮಾಂಸಹಾರಿಯಿಂದ ಸಸ್ಯಹಾರಿಯಾಗಿ ಪರಿವರ್ತನೆಗೊಳ್ಳಲು ಬಯಸಿದನು. ತನ್ನ ಪ್ರೀತಿಯ ಕಾಲಿಲ್ಲದ ಮಂಟ ಕುರಿಯನ್ನ ದೇವರಿಗೆ ಬಲಿಕೊಟ್ಟಿದ್ದು ಮನಸ್ಸಿನ ಮೇಲೆ ಗಾಯ ಮಾಡಿತ್ತು. ಆದರೆ ತಿರುಪನ

ರುದ್ರಾವತಾರಕ್ಕೆ ನಡುಗಿದ ಭೀಮಿ ಮಗನಿಗೆ ಬಲವಂತವಾಗಿ ಮಂಟಕುರಿಯನ್ನು ತಿನ್ನಿಸಿದಳು. ಆಗ ಬೇಸಾರ ಮಾಡಿಕೊಂಡ ಗೋಪ್ಲಾನು ಯಾಕಾದರೂ ಈ ಕಟುಕರ ಜಾತಿಯಲ್ಲಿ ಹುಟ್ಟಿದೆ ಎಂದು ಪರಿತಪಿಸಿದನು. ಆಧುನಿಕತೆಯೊಂದಿಗೆ ಒಗ್ಗಿಕೊಳ್ಳಲು ಪ್ರಯತ್ನಿಸಿದ ಗೋಪ್ಲನಿಗೆ ಅವರ ತಂದೆ ತಾಯಿಗಳೇ ವಿರೋಧಿಗಳಾಗಿದ್ದರು.

'ಕೊಂಯ್ಯ ಮತ್ತು ಧೋತ್ರ' ಸಂಕಲನದ 'ದೇವರ ಬಂಗಾರ' ಕಥೆಯಲ್ಲಿ ಪರಸಣ್ಣ ಪಟ್ಟಣದಲ್ಲಿ ಸಾಕಷ್ಟು ವಿದ್ಯೆ ಕಲಿತು ಬಂದಿದ್ದನು. ಊರಿನೊಳಗೆ ಯಲ್ಲವ್ವನಿಗೆ ಹರಕೆ ಕೊಡುವ ನೆಪದಲ್ಲಿ ಪಾರೋತಿ ಅನ್ನೋ ಹುಡುಗಿಯನ್ನ ದೇವದಾಸಿ ಮಾಡುವುದಕ್ಕೆ ಇಡೀ ಊರಿಗೆ ಊರೇ ತೀರ್ಮಾನಿಸಿತ್ತು. ಆದರೆ ಪಟ್ಟಣದಲ್ಲಿ ಓದು-ಬರಹ ಕಲಿತಿದ್ದ ಪರಮೇಶನಿಗೆ ಅದರ ಸಾಧಕ ಭಾದಕದ ಅರವಿತ್ತು. ಆದ್ದರಿಂದ ಅವನು "ಅವ್ವ ದೊಡ್ಡವ್ವ ನನದೊಂದು ಮಾತೈತಿ ನಿಮ್ಮ ಮನಸ್ಸಿಗೆ ಕೆಟ್ಟ ಅನಿಸೋದಿಲ್ಲಾಂದ್ರ ನಾನು ಅಕೀನ ಮದ್ವಿ ಆಕ್ಕೀನಿ". ಈ ಮಾತಿನಲ್ಲಿ ಮಾನವೀಯತೆಯಲ್ಲಿ ದೇವದಾಸಿಪದ್ಧತಿಗೆ ಗುರಿಯಾಗುತ್ತಿದ್ದ ಹುಡುಗಿಯನ್ನು ವಿವಾಹವಾಗಿರುವುದನ್ನು ತಿಳಿಸುತ್ತದೆ.

ತಳಸಮುದಾಯದ ಹುಡುಗಿಯರನ್ನ ದೇವರ ಹೆಸರಿನಲ್ಲಿ ವೇಶ್ಯಾರನ್ನಾಗಿ ಮಾಡುವ ಪದ್ಧತಿ ಆದಿಕಾಲದಿಂದಲೂ ರೂಢಿಯಲ್ಲಿತ್ತು. ಯಲ್ಲವ್ವನ ಹರಕೆ ಎಂಬ ಹೆಸರಿನಲ್ಲಿ ತಳಸಮುದಾಯಕ್ಕೆ ದೇವದಾಸಿ ಸೇವೆ ಶಾಪವಾಗಿತ್ತು. ಈ ಪದ್ದತಿ ಬಗೆ ಪಾರೋತಿಯ ತಾಯಿ ಮಾದೇವಿ ಶಾಪವಾಕುತ್ತಾ ಅಳತೊಡಗಿದಳು. ಪೂರ್ವಿಕರ ಕಾಲದಲ್ಲಿ ಬುದ್ದಿ ಇಲ್ಲದೇ ಮಾಡಿದ ಕಂದಾಚಾರಗಳು ಪ್ರಸ್ತುತ ಸಮಾಜದಲ್ಲಿ ರೂಢಿಗೆ ಬರುವುದಿಲ್ಲ. ಇಂದು ಇಂತಹ ಶಿಷ್ಟಾಚಾರಗಳ ವಿರುದ್ದ ಕೋರ್ಟು ಕಛೇರಿ ಇದ್ದಾವೆ ನೀವೇನು ಹೆದರಬೇಡಿ ನೀವು ಒಪ್ಪಿದ್ದರೆ ನಾನೇ ಮದುವೆ ಮಾಡಿಕೊಳ್ಳತ್ತೇನೆ. ಎಂದು ಪರಸಣ್ಣನೇ ಮದುವೆಯಾಗಿ ಪಾರೋತಿಗೆ ಹೊಸ ಬದುಕು ನೀಡಿದನು.

'ಪಲಾಯನದಂದು' ಕಥೆಯಲ್ಲಿ ಬಂದೂಕ ಎಂ.ಎ. ಪಾಸು ಮಾಡಿ ಉದ್ಯೋಗವಿಲ್ಲದೆ ಮತ್ತೇ ಊರಿಗೆ ಬಂದು ಸೇರಿದನು. ಮೊದಮೊದಲು ಎಲ್ಲರಿಂದಲೂ ಮೆಚ್ಚುಗೆ ಪ್ರೀತಿಗೆ ಪಾತ್ರವಾಗಿದ್ದವನು ಅನಂತರದಲ್ಲಿ ಮನೆಯವರಿಗೆ ಹೊರೆ ಎಂಬಂತೆ ಕಾಣಿಸಿಕೊಂಡನು. ಮನೆಯ ಬಡತನದ ವಾತಾವರಣದಿಂದ ಬುದ್ದಿ ಕಲಿತ ಬಂದೂಕ ಊರಿನವರೊಂದಿಗೆ ಕಾಫಿ ನಾಡಿನಲ್ಲಿ ದುಡಿಯಲು ಹೊರಟನು. ಅಲ್ಲಿಯ ತೋಟದ ಮಾಲೀಕ ಜೋಸೆಫ್ ಬಂದೂಕನ ವಿದ್ಯಾಭ್ಯಾಸ ಕೇಳಿ ಹೇಳಿದ್ದು ಹೀಗೆ-"ನೀನು ನಮ್ಮ ಧರ್ಮದವನಾಗಿದ್ರೆ ಇಷ್ಟೊತ್ತಿಗೆ ಅಮೇರಿಕಾದಲ್ಲಿ ಇರ್ತಿದ್ದೆ ಬಂದೂಕ, ಅಂದ" ಈ ಮಾತಿನಲ್ಲಿ ಗೌಪ್ಯವಾಗಿ ಮತಾಂತರ ಪದ್ದತಿ ಆಧುನಿಕತೆಯೊಂದಿಗೆ ನಡೆಯುತ್ತಿರುವುದರ ಬಗ್ಗೆ ತಿಳಿಸುತ್ತದೆ.

ಕಾಫಿ ನಾಡಿನ ಮಾಲೀಕ ಜೋಸೆಫ್ ಬಂದೂಕನ ವಿದ್ಯಾಭ್ಯಾಸ ಕೇಳಿ ಆಶ್ಚರ್ಯ ಚಕಿತನಾದನು. ಎಂ.ಎ. ಓದಿ ಕೂಲಿ ಕೆಲಸ ಮಾಡುತ್ತಿದ್ದೀಯಾ ಅಂತ ಕನಿಕರ ಪಡುತ್ತಾ ಬಂದೂಕನಿಗೆ ಮನೆಯಲ್ಲಿ ಊಟ ಮಾಡಿಸಿದನು. ಊಟದ ಅನಂತರ ಬಂದೂಕನಿಗೆ ನೀನು ನಮ್ಮ ಧರ್ಮದವನಾಗಿದ್ದರೆ ಇಷ್ಟೊತ್ತಿಗೆ ನೀನು ಅಮೇರಿಕಾದಲ್ಲಿ ಕೆಲಸ ಮಾಡುತ್ತಿದ್ದೆ ಎಂದು ಹೇಳಿದನು. ಬಂದೂಕನ ನಿರುದ್ಯೋಗದ ಅಸಹಾಯಕತೆಯನ್ನು ಜೋಸೆಫ್ ಮತಾಂತರ ಪದ್ಧತಿಗೆ ಒಳಪಡಿಸುವ ಪ್ರಯತ್ನ ಮಾಡಿದನು. ಅದೇ ವೇಳೆಗೆ ಬಂದೂಕನು ಸಹ 'ಹಾಳಾದ್ದು ಈ ಹಿಂದೂ ಧರ್ಮದಲ್ಲಿ ಹುಟ್ಟಿದ್ದು ದೊಡ್ಡದಾದ ಪಾಪ ಆಗಿದೆ' ಎಂದು ತನ್ನ ಅಸಹಾಯಕತೆ ತೋಡಿಕೊಂಡನು. ಈ ಮೂಲಕ ಬದುಕಿಗೆ ಆಸರೆಯಾಗುವ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗುವುದರಲ್ಲಿ ಯಾವುದೇ ತಪ್ಪಿಲ್ಲ ಎನ್ನುವಂತೆ ತನ್ನ ನೋವನ್ನು ತೋಡಿಕೊಂಡನು.

'ಕಲ್ಲೇ ಕಲ್ಲೇ ಕಥೆ ಹೇಳು' ಸಂಕಲನದ 'ಎಲೆಕ್ಷನ್ನೋ ಡೊಣ್ಣನಾಯ್ಕನ ಧಿಮಾಕೋ' ಕಥೆಯಲ್ಲಿ ತಾಂಡದ ಹಳ್ಳಿಕಟ್ಟೆಯಲ್ಲಿ ಪುಂಡೈಕಳ ಜೊತೆ ಪಚ್ಚಿ ಆಡುತ್ತಿದ್ದ ಡೊಣ್ಣನಾಯನ ಎಲಕ್ಷನ್ ಟೈಮ್ ಬಂದಾಗ ನಾನೇ ಊರ ಮುಖಂಡನಂತೆ ದರ್ಪ ತೋರುತ್ತಿದ್ದನು. ತಾಂಡದ ಚೆನ್ನ, ಭೀಮ, ಸಂತ್ಯಾರಾಜ, ಚೌಗಲೆ, ಕಡೆಮನೀನಿಂಗೇಶಿ, ಮ್ಯಾಗಳಮನಿದ್ಯಾಮ, ಇವರೆಲ್ಲರನ್ನೂ ಹಳ್ಳಿ ಕಟ್ಟೆಯಲ್ಲಿ ಕೂರಿಸಿಕೊಂಡು ಎಲೆಕ್ಷನ್ ಬಗ್ಗೆ ಭಾರೀ ಚರ್ಚೆಯಲ್ಲಿ ತೊಡಗಿದನು. "ನೋಡ್ರಪ್ಪ ಮನ್ನೂರ ಸೇತಮಿ ಸರಿಯಾಗಿಲ್ಲ, ದಾರಿ ಹ್ಯಾಂಗತಿ ನೋಡಿರಲ್ಲಾ ರಾತ್ರಿ ಹೊತ್ನಾಗ ಯಾವಾನಾರ ಬರೋಹಂಗೈತೆನ್ರೋ ಮರಾಯ. ಯಾವನಾರ ಕೊಂದು ಜಾಲಿ ಕಂಟಿಯೊಳಗ ಒಸದ್ರು ಯಾರೂ ಕೇಳೋರು ದಿಕ್ಕಿಲ್ಲ". ಈ ಮಾತಿನಲ್ಲಿ ಡೊಣ್ಣ ಊರಿನ ಜನರ ಮುಂದೆ ಮುಖಂಡನಂತೆ ತನ್ನೂರಿನ ಸಮಸ್ಯೆಯ ಬಗ್ಗೆ ತಿಳಿ ಹೇಳುತ್ತಿರುವುದು.

ಊರಿನ ಒಳಗೆ ಸಾಮಾನ್ಯ ಕೂಲಿಕಾರನಂತಿದ್ದ ಡೊಣ್ಣ ಎಲೆಕ್ಷನ್ ಸಮಯದಾಗ ಊರ ಮುಖಂಡನಂತೆ ವರ್ತಿಸುತ್ತಿದ್ದನು. ಅವರಿವರ ಹತ್ತಿರ ಚೀಟಿ ದುಡ್ಡು ತಗೆದುಕೊಂಡು ಹುಡುಗರ ಮುಂದೆ ದೊಡ್ಡ ದೊಡ್ಡ ಮಾತನಾಡುತ್ತಾ ಪಟ್ಟೇಶಿ ಟೀ ಅಂಗಡಿಯಲ್ಲಿ ಎಲ್ಲರಿಗೂ ಅರ್ಧ ಕಾಫ್ ಚಹಾ ಕುಡಿಸಿ ಹುಡುಗರೆಲ್ಲಾ ಅವನನ್ನ ಊರ ಮುಖಂಡ ಎಂದು ಕರೆಯೋ ಹಾಗೆ ಮಾಡಿಕೊಂಡಿದ್ದನು. ಮತ್ತೇ ಊರ ತೊಂದರೆಯ ಬಗ್ಗೆ ತಿಳಿದಿರುವವನಂತೆ ಎಲ್ಲರ ಮುಂದೆ ತೋರಿಸಿಕೊಳ್ಳುತ್ತಾ ಗ್ರಾಮ ಪಂಚಾಯಿತಿ ಎಲೆಕ್ಷನ್‌ಗೆ ರಾಘನ ಪರ ಪ್ರಚಾರ ಮಾಡುತ್ತಿದ್ದನು. ಗ್ರಾಮೀಣ ಪ್ರದೇಶದಲ್ಲಿ ಎಲೆಕ್ಷನ್ ರಾಜಕೀಯ ಪುಡಾರಿಗಳಿಗೆ ಪ್ರತಿಷ್ಠೆಯ ಕಣವಾಗಿ, ಗುಂಪುಗಾರಿಕೆ ಮಾಡಿ ಊರಿನ ಹಿರಿಯರು ಕಿರಿಯರಿಗೆ ಅಪ್ಪ ಅವ್ವ ಅಂತ ಇಲ್ಲದ ಸಂಬಂಧದಲ್ಲಿ ಮಾರ್ಯಾದೆ ಕೊಟ್ಟು ಓಟುಗಳಿಸೋ ಪ್ರಯತ್ನ ಮಾಡುತ್ತಿರುವುದು ಇಂದಿಗೂ ನಡೆಯುತ್ತಿದೆ.

'ಎಲ್ಲಿಯೂ ಸಲ್ಲದವ' ಕಥೆಯಲ್ಲಿ ಯತಿರಾಜು ತುರುವೆಕೊಪ್ಪಲಿನಿಂದ ಮೂರುನೂರು ಕಿಲೋ ಮೀಟರ್ ದೂರದ ನಂದಿಪುರ ಎಂಬ ಸಣ್ಣ ಕುಗ್ರಾಮದಲ್ಲಿ ಹುಟ್ಟಿದನು. ಗೋಡೆಗಳೇ ಇಲ್ಲದ ಶಾಲೆಯೊಳಗೆ ವಿದ್ಯಾಭ್ಯಾಸ ಕಲಿತು ಸರ್ಕಾರಿ ಕಛೇರಿಯೊಂದರಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ ಯತಿರಾಜನ ಆಧುನಿಕ ಬದುಕಿನ ಅವಾಂತರ ಹೇಳತ್ತಿರದಾಗಿತ್ತು. ಇವನ ಹೆಂಡತಿ ವಂದನಾ ಹಳ್ಳಿಯವಾಂದರೆ ಮನಸ್ಸು ಮುರಿದುಕೊಳ್ಳುತ್ತಿದ್ದರು. ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಯತಿರಾಜನ ಬದುಕು ಸೂತ್ರವಿಲ್ಲದ ಗಾಳಿಪಟವಾಗಿತ್ತು. "ಕಟ್ಟಿಗೆಯಿಂದ ಹಿಡಿದು ನೀರಿನವರೆಗೆ ಕೊಂಡು ಕೊಂಡೆ ಜೀವನ ನಡೆಸುವ ಪರಿಸ್ಥಿತಿಯೊಳಗೆ ಗುಮಾಸ್ತನ ಸಂಬಳ ಯಾವ ತುದಿಗಳಿಗೂ ಮುಟ್ಟಲಾಗುತ್ತಿರಲಿಲ್ಲ. ಮಕ್ಕಳಾದ ಮೇಲಂತೂ ಒಂದನೆಯ ತಾರೀಖಿಗೆ ಸಾಲಗಾರರ ಮುಂದೆ ಕೈ ಚಾಚುವ ಸ್ಥಿತಿ ಯತಿರಾಜನದಾಗಿರುತ್ತದೆ". ಈ ಮಾತಿನಲ್ಲಿ ಆಧುನಿಕ ಬದುಕಿನೊಳಗೆ ಸಾಮಾನ್ಯ ಗುಮಾಸ್ತರ ಕೆಲಸದ ದುರ್ಬಲ ಜೀವನವನ್ನು ತಿಳಿಸಲಾಗಿದೆ.

ತುರುವೆಕೊಪ್ಪಲು ಊರಿನಲ್ಲಿ ಸರ್ಕಾರಿ ಕಛೇರಿಯಲ್ಲಿ ಗುಮಾಸ್ತ ಕೆಲಸ ಮಾಡುತ್ತಿದ್ದ ಯತಿರಾಜನಿಗೆ ಬದುಕು ದುಸ್ತರವಾಗಿತ್ತು. ನಗರ ಪ್ರದೇಶಕ್ಕೆ ಒಗ್ಗಿಕೊಂಡು ಬದುಕು ನಡೆಸುವುದು ಸವಾಲಿನ ಕೆಲಸವಾಗಿತ್ತು. ಯತಿರಾಜನಿಗೆ ಸ್ವಗ್ರಾಮ ನಂದಿಪುರದಿಂದ ಯಾವುದೇ ಸಹಕಾರ ಸೌಲಭ್ಯವಿಲ್ಲದ ಕಾರಣ ತನ್ನ ತಿಂಗಳ ಸಂಬಳದಲ್ಲಿ ಎಲ್ಲವನ್ನೂ ಕೊಂಡುಕೊಳ್ಳಬೇಕಾಗಿತ್ತು. ಅಡುಗೆ ಮಾಡಲು ಸೌದೆಯಿಂದ ಹಿಡಿದು ನೀರಿಗೆ, ವಿದ್ಯುತ್, ಮನೆ ಬಾಡಿಗೆ ಹೀಗೆ ಹಲವಾರು ಸವಲತ್ತುಗಳಿಗೆ ತಿಂಗಳ ಸಂಬಳ ಖರ್ಚಾಗುತ್ತಿತ್ತು. ಈ ಪರಿಸ್ಥಿತಿಯನ್ನು ಸುಧಾರಿಸಲು ಯತಿರಾಜು ಸಾಲ ಮಾಡುತ್ತಿದ್ದ. ಇದರ ನಡುವೆ ಇವನ ಬದುಕಿಗೆ ವಂದನಾಳ ಪ್ರವೇಶವಾಗಿದ್ದು ಜೀವನ ಮತ್ತಷ್ಟು ದುಸ್ತರವಾಯಿತು. ಇಂತಹ ಬದುಕು ಪ್ರಸ್ತುತ ಸಂದರ್ಭದಲ್ಲಿಯೂ ಆಧುನಿಕ ಜೀವನದಲ್ಲಿ ಸಾಮಾನ್ಯವಾಗಿ ನಡೆಯುತ್ತಿದೆ.

ಆಧುನಿಕ ಸ್ಪರ್ಶದಿಂದ ಲಂಬಾಣಿ ಸಮುದಾಯದಲ್ಲಿ ಹಲವಾರು ಬದಲಾವಣೆಗಳು ಕಂಡು ಬಂದವು. ಬಡತನದ ಬೇಗುದಿಗೆ ಬಿದ್ದು ಸಮಾಜದಲ್ಲಿ ಶೋಷಣೆಗೆ ಒಳಗಾಗಿದ್ದ ಲಂಬಾಣಿ ಸ್ತ್ರೀಯರು ಆಧುನಿಕ ಮಟ್ಟದ ಸ್ಪರ್ಶದಿಂದ ಶಿಕ್ಷಣ ಪಡೆದು ನಮ್ಮ ಹಕ್ಕು ಬಾಧ್ಯತೆಗಳನ್ನು ಪಡೆದುಕೊಳ್ಳುವಲ್ಲಿ ಸಮರ್ಥರಾದರು, ಲಂಬಾಣಿಗರು ಹಂತ-ಹಂತವಾಗಿ ಬದಲಾವಣೆಯ ನವಯುಗಕ್ಕೆ ಹೊಂದಿಕೊಳ್ಳುತ್ತಾ ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಂಡಿರುವ ಬಗ್ಗೆ ಲೇಖಕರು ತಮ್ಮ ಕಥನ ಸಾಹಿತ್ಯದಲ್ಲಿ ನಿರೂಪಿಸಿರುವುದು ಅದ್ಭುತವಾಗಿದೆ.

ಇಂತಹ ತಳಸಮುದಾಯದವರನ್ನು ಕುರಿತು ಡಾ.ಎಂ.ಎಸ್. ಶೇಖರ್ ಅವರ ಹೇಳಿಕೆ "ವಾಸ್ತವವಾಗಿ ದಲಿತರೆ ಈ ದೇಶದ ಮೂಲನಿವಾಸಿಗಳು. ಆಶ್ರಮ ಸಂಸ್ಕೃತಿಗೆ ಮತ್ತೊಂದು ಹೆಸರೆಂದರೆ ದಲಿತರು ಬೆವರು ಹರಿಸದೆ ಊಟ ಮಾಡಿದವರಲ್ಲ ಕೃಷಿ ಸಂಸ್ಕೃತಿಯ ಹುಟ್ಟಿಗೆ ಈ ನೆಲದ ಸಂಗತಿಗೆ ದಲಿತರೆ ಕಾರಣ ಹಾಗಾಗೀ ಈ ಭೂಮಿಯ ಕರುಳಬಳ್ಳಿಗಳಾದ ದಲಿತರೇ ಈ ನೆಲದ ನಿಜ ಸಾಂಸ್ಕೃತಿಕ ವಾರಸುದಾರಾಗಿದ್ದಾರೆ. ಈ ಎಲ್ಲ ಹಿನ್ನೆಲೆಯಲ್ಲಿ ದಲಿತ ಸಾಂಸ್ಕೃತಿಕ ನೆಲೆಗಳು ಈ ದೇಶದ ಮೂಲ ಸಾಂಸ್ಕೃತಿಕ ನೆಲೆಗಳೇ ಆಗಿದೆ" ಎಂಬ ಮಾತು ಗಮನಾರ್ಹವಾಗಿದೆ.

ಅದೇ ರೀತಿ ಒಂದು ಜನಾಂಗದ ಬಗ್ಗೆ ಹೇಳುವಾಗ "ಯಾವ ಜನಾಂಗಕ್ಕೆ ಸಾಂಸ್ಕೃತಿಕ ಬೇರುಗಳಿರುತ್ತವೋ ಆ ಜನಾಂಗಕ್ಕೆ ನಾಶವೇ ಇಲ್ಲ ಹಾಗಾಗಿ ನಿಜ ಸಂಸ್ಕೃತಿಯ ಜನಪದ ವಾರಸುದಾರರಾದ ತಳಸಮುದಾಯದವರು ಅಸಾಧಾರಣವಾದ ಸಾಂಸ್ಕೃತಿಕ ಅಡಿಪಾಯವನ್ನು ಹೊಂದಿದವರಾಗಿದ್ದಾರೆ. ಅವರು ಗರಿಕೆ ಇದ್ದ ಹಾಗೆ. ನಿಜವಾದ ಶಕ್ತಿ ಸಾಮರ್ಥ್ಯ ಇರುವ ಕಾರಣದಿಂದಲೇ ಶತಮಾನಗಳಿಂದಲೂ ಹಲವು ಬಗೆಯ ಹಿಂಸೆ, ಅಪಮಾನ, ಶೋಷಣೆಗೆ ಒಳಪಟ್ಟರೂ ತಮ್ಮ ಸಂಸ್ಕೃತಿಯನ್ನು ಬಿಡಲು ಅವರ ಮನಸ್ಸು ಒಪ್ಪುವುದೇ ಇಲ್ಲ" ಎಂದು ವ್ಯಾಖ್ಯಾನಿಸಿದ್ದಾರೆ.

ವಲಸೆಯ ಹಾದಿಯಲ್ಲಿ

ಸೃಷ್ಟಿ ನಾಗೇಶ್ ಒಂದಿಷ್ಟು ಪುಸ್ತಕಗಳನ್ನು ಕಳಿಸಿದ್ದರು. ಅದರಲ್ಲಿ ಮಲಾಣ್ ಕೂಡ ಒಂದು. ನೋಡಿದ ಕೂಡಲೇ ಬೇರೆಲ್ಲ ಕೆಲಸ ಬಿಟ್ಟು ಅದನ್ನೇ ಓದಲಾರಂಭಿಸಿದೆ. ಯಾಕೆಂದರೆ ಅದು ನಾನು ತುಂಬಾ ಗೌರವಿಸುವ ಶಾಂತಾ ನಾಯ್ಕ ಶಿರಗಾನಹಳ್ಳಿಯವರ ಪುಸ್ತಕ. ಹಿಂದೊಮ್ಮೆ ಸುಮಾರು ನಾನು ಹೈಸ್ಕೂಲಿನಲ್ಲಿದ್ದಾಗ ಅವರು ಕಾರವಾರದ ಆಕಾಶವಾಣಿಯಲ್ಲಿದ್ದವರು. ಆಗಲೇ ಇವಳು ಬರೆಯುತ್ತಾಳೆ ನೋಡಿ ಎಂದು ಬೆನ್ನು ತಟ್ಟಿದವರು. ಹೀಗಾಗಿ ಅವರ ಹೆಸರು ನೋಡಿದಾಕ್ಷಣ ಅದನ್ನೇ ಮೊದಲು ಓದಬೇಕೆನಿಸಿತ್ತು. ಈ ಸಲ ಸೃಷ್ಟಿ ನಾಗೇಶ್ ಹೇಳಿದ ಇದನ್ನು ಮೊದಲು ಓದಿ ಎನ್ನುವ ಎಲ್ಲ ಮಾತುಗಳನ್ನೂ ಗಾಳಿಗೆ ತೂರಿಯಾಗಿತ್ತು.

ಇದೊಂದು ಶತಮಾತಗಳ ವಲಸೆಯ ಕಥೆ. ರಾಜಸ್ಥಾನದ ಒಂದು ಹಳ್ಳಿಯಿಂದ ಕರ್ನಾಟಕ, ಆಂದ್ರದ ಕಡೆಗೆ ಗುಳೆ ಬಂದಂತಹ ಈ ಜನಾಂಗದ ಕಥೆಯನ್ನು ಓದಿದರೆ ಮೈನವಿರೇಳದೇ ಇರದು. ಕೆಲವು ಕಡೆ ಕೋಪ, ಕೆಲವು ಕಡೆ ಕಣ್ಣೀರು ನಮ್ಮನ್ನು ಕೇಳದೇ ನುಸುಳದಿದ್ದರೆ ನೀವು ಈ ಕಾದಂಬರಿಯನ್ನು ಓದಿದ್ದೂ ವ್ಯರ್ಥ ಎನ್ನುವಷ್ಟು ಸೊಗಸಾಗಿ ಮೂಡಿ ಬಂದಿದೆ.

ಬಂಜಾರಾ ಜನಾಂಗವು ರಾಜಸ್ಥಾನದ ಹಳ್ಳಿಗಳಲ್ಲಿ ವೈಭವದಿಂದ ಜೀವನ ಮಾಡಿಕೊಂಡಿದ್ದವರು. ವ್ಯಾಪಾರ ವಹಿವಾಟಿನಿಂದಾಗಿ ಸಾಕಷ್ಟು ಗಟ್ಟಿ ಕುಳ ಎನ್ನಿಸಿಕೊಂಡವರು. ಆದರೆ ಯಾವಾಗ ದೆಹಲಿಯಲ್ಲಿ ಮುಸ್ಲಿಂ ಆಡಲಿತ ಪ್ರಾರಂಭವಾಯಿತೋ ಅದರಲ್ಲೂ ಔರಂಗಜೇಬ್ ದೆಹಲಿಯ ಸಿಂಹಾಸನವನ್ನೇರಿದನೋ ಆಗ ಪ್ರಾರಂಭವಾಯಿತು ನೋಡಿ, ಬಂಜಾರಾಗಳ ದುರ್ವಿಧಿ.

ಈ ಕಾದಂಬರಿ ಪ್ರಾರಂಭವಾಗುವುದೂ ಕೂಡ ದಕ್ಷಿಣಕ್ಕೆ ವಲಸೆ ಹೋಗುವ ಸೈನ್ಯದೊಂದಿಗೆ ಸೇರಿಕೊಳ್ಳುವ ಇಬ್ಬರು ಸಹೋದರರ ಕಥೆಯೊಂದಿಗೆ. ಅವರು ದಕ್ಷಿಣದ ಕಡೆಗೆ ವಲಸೆ ಹೋಗಲು ನಿರ್ಧರಿಸಿರುವುದೂ ಕೂಡ ಮುಸ್ಲಿಂ ಯುವಕರು ತಮ್ಮ ಸಹೋದರಿಯರನ್ನು 'ಆಗ್ವಾ' ಮಾಡಿಕೊಂಡು ಹೋದಾರೆಂಬ ಭಯದಿಂದಲೇ. ಬಂಜಾರಾ ಹುಡುಗಿಯರು ತಾಂಡಾದಿಂದ ಹೊರಗೆ ಬರುವುದೇ ದೀಪಾವಳಿ ಹಬ್ಬದಂದು ಮಾತ್ರ. ತಾಂಡಾದ ಆದಿದೇವತೆ ಮರಿಯಮ್ಮನ ಮಟ್ಟೋದ ಮುಂದೆ ನೃತ್ಯ ಮಾಡಲು. ಆಗ ಮಾತ್ರ ಮುಸ್ಲಿಂ ಯುವಕರಿಗೆ ಆ ಹುಡುಗಿಯರು ಕಾಣಸಿಗುತ್ತಿದ್ದುದು. ಹೀಗಾಗಿ ಗುಂಪು ಗುಂಪಾಗಿ ಬರುವ ಮುಸ್ಲಿಂ ಯುವಕರು ಬಂಜಾರಾ ಯುವತಿಯರನ್ನು ಅಪಹರಿಸಿಕೊಂಡು ಹೋಗಿಬಿಡುತ್ತಿದ್ದರು. ಹಾಗೆ ಅಪಹರಿಸಿಕೊಂಡು ಹೋದ ನಂತರ ಆ ಯುವತಿಯರು ಅತ್ತ ಮುಸ್ಲಿಂ ಕೂಡ ಆಗಲಾರದೇ, ಇತ್ತ ಬಂಜಾರಾ ಸಮುದಾಯಕ್ಕೂ ಸೇರಿದವರಾಗಿ ಉಳಿಯದೇ ಜೀವನದಲ್ಲಿ ನೊಂದು ಬದುಕೇ ಬೇಸರವಾಗಿ ಆತ್ಮಹತ್ಯೆಗೂ ಹೇಸದ ಸ್ಥಿತಿ ತಲುಪಿಬಿಡುತ್ತಿದ್ದರು. ಈ ಕಾರಣದಿಮದಾಗಿಯೇ ಎತ್ತುಗಳನ್ನು ಸಾಕಿಕೊಂಡು ದೊಡ್ಡ ವ್ಯಾಪಾರಸ್ಥರಾಗಿದ್ದ ಬಂಜಾರ ಸಮುದಾಯ ಗುಜರಾತ ಕಡೆಗೆ ಅತ್ತ ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶದ ಕಾಡುಗಳೊಳಗೆ ಸೇರಿಕೊಂಡು ಬುಡಕಟ್ಟುಜನಾಂಗದವರಂತೆ ವಾಸಿಸಲು ಪ್ರಾರಂಭಿಸಿದ್ದರು. ಆದರೆ ಬಂಜಾರರ ವ್ಯಾಪಾರದ ನೈಪುಣ್ಯತೆ, ಅವರ ವ್ಯವಹಾರಿಕ ಜ್ಞಾನ ಮತ್ತು ಎಲ್ಲದ್ದಕ್ಕಿಂತ ಮುಖ್ಯವಾಗಿ ಅವರ ಧೈರ್ಯ ಸಾಹಸ ಹಾಗೂ ದೇಹದೃಢತೆಯಿಂದಾಗಿ ಮುಸ್ಲಿಂ ಆಡಳಿತಗಾರರಿಗೆ ಬಂಜಾರರ ಮಾರ್ಗದರ್ಶನ ಅನಿವಾರ್ಯವಾಗಿದ್ದಿತು. ಇತ್ತ ಬಂಜಾರರಿಗೂ ಮುಸ್ಲಿಂ ಆಡಳಿತದಿಂದ ದೂರ ಸರಿದು ತಮ್ಮ ಹೆಣ್ಣುಮಕ್ಕಳ ರಕ್ಷಣೆ ಮಾಡಿಕೊಳ್ಳುವ ಆತುರದಲ್ಲಿದ್ದರು. ಇಂತಹುದ್ದೇ ಹೊತ್ತಿನಲ್ಲಿ ತಮ್ಮ ತಂಗಿ ರೂಪ್ಕಿ ಹಾಗೂ ಅವಳ ತಂಗಿ ಪಾರೂವನ್ನು ರಕ್ಷಣೆ ಮಾಡುವ ಭರದಲ್ಲಿ ಹತ್ತು ಮುಸ್ಲಿಂ ಯುವಕರನ್ನು ಕೊಂದು ಹಾಕಿದ್ದ ಮೀಟು ಹಾಗೂ ಥಾವು ಔರಂಗಜೇಬನ ಸೇನಾಧಿಪತಿಯರಲ್ಲಿ ಒಬ್ಬನಾದ ಜುಲ್ಮಾನ್‌ಖಾನ ಎಂಬುವವನಿಗೆ ತಿಳಿದರೆ ಇಡೀ ತಾಂಡಾ ಸರ್ವನಾಶವಾಗುವುದನ್ನು ಅರಿತು ಸಂಕೆಭಾಕ್ರಿ ಎನ್ನುವ ತಾಂಡಾವನ್ನು ಬಿಟ್ಟು ಜೈಪುರದ ಹತ್ತಿರ ದಕ್ಷಿಣ ಭಾರತದ ವ್ಯಾಪಾರಕ್ಕೆಂದು ತಮ್ಮೊಂದಿಗೆ ಸೈನ್ಯವನ್ನು ಆಯ್ಕೆ

ಮಾಡುತ್ತಿರುವ ಜಂಗಿ ಭಂಗಿ ಎಂಬ ಸಹೋದರರ ಕಡೆ ಬಂದಿದ್ದರು. ಅವರ ಬಳಿ ತಾವು ಚವ್ಹಾಣರು ಎಂದು ಕೆಲಸಕ್ಕೆ ಸೇರಿಕೊಂಡು ಹೊರಡುವ ಮಹಾ ವಲಸೆಯ ಕಥೆ ಇದು. ಆ ವಲಸೆಯಲ್ಲಿಯೇ ಮದುವೆ ಮಾಡಿಕೊಳ್ಳುವ ಮೀಟುವಿನ ಬಾಳಿನ ತಿರುವಿನ ಕಥೆ ಇಲ್ಲಿದೆ.

ಚಿಕ್ಕವಳಿರುವಾಗ ನನಗೆ ರಾಧಾ ಕೃಷ್ಣರ ಕಥೆ ಅಚ್ಚರಿ ಹುಟ್ಟಿಸುತ್ತಿತ್ತು. ಇಡೀ ಜಗತ್ತಿನಲ್ಲಿ ಅತ್ಯುನ್ನತ ಪ್ರೇಮಕ್ಕೆ ಉದಾಹರಣೆಯಾಗಿ ನೀಡುವ ಈ ಕಥೆಯ ನಾಯಕಿ ರಾಧಾ ಕೃಷ್ಣನ ಪತ್ನಿಯಲ್ಲ. ಆಕೆ ಬರೀ ಕೃಷ್ಣನ ಪ್ರೇಯಸಿ. ಆಕೆಗೊಬ್ಬ ಗಂಡನಿದ್ದಾನೆ. ಅವಳದ್ದೇ ಆದ ಒಂದು ಸಂಸಾರವಿದೆ. ಆದರೆ ಕೃಷ್ಣನ ಮೇಲಿರುವ ಅವಳ ಪ್ರೇಮಕ್ಕೆ ಯಾವುದೇ ಹೋಲಿಕೆಯಿಲ್ಲ. ಅಚ್ಚರಿಯೆಂದರೆ ಈ ಪ್ರೇಮ ಎಂದೂ ಅನೈತಿಕ ಎಂದು ಅನ್ನಿಸಿಕೊಳ್ಳಲೇ ಇಲ್ಲ. ತೀರಾ ಮಡಿವಂತರಿಂದ ಹಿಡಿದು ತೀರಾ ಕರ್ಮಠ ಸಂಪ್ರದಾಯಿಗಳವರೆಗೆ ಎಲ್ಲರೂ ಈ ಪ್ರೇಮವನ್ನು ಅತ್ಯಂತ ಸಹಜ ಎಂದು ಒಪ್ಪಿಕೊಂಡಿದ್ದರು. ಆದರೆ ನಿಜ ಜೀವನಕ್ಕೆ ಬಂದ ಕೂಡಲೇ ಈ ತರಹದ ಪ್ರೇಮಗಳೆಲ್ಲ ಅನೈತಿಕ ಅಥವಾ ಹಾದರ ಎನ್ನಿಸಿಕೊಳ್ಳುತ್ತದೆ. ಬಾಜಿರಾವ್ ಎಂಬ ಮರಾಠಾ ಶೂರ ಮಸ್ತಾನಿ ಎಂಬ ಮುಸ್ಲಿಂ ಯುವತಿಯನ್ನು ಪ್ರೇಮಿಸಿದರೆ ಅದು ಅಪ್ಪಟ ಸಾಮಾಜಿಕ ಬಹಿಷ್ಕಾರಗೊಂಡ ಪ್ರೇಮವಾಗುತ್ತದೆ. ಕೊನೆಯಪಕ್ಷ ಬಾಜಿರಾವ್ ಹಾಗೂ ಮಸ್ತಾನಿಯ ಈ ಪ್ರೇಮ ಕಥಾನಕವಾಗಿಯಾದರೂ ಅದೆಷ್ಟೋ ಕಾಲದ ನಂತರ ಒಪ್ಪಿತವಾಗುತ್ತದೆ. ಆದರೆ ಜನಸಾಮಾನ್ಯರ, ನಮ್ಮ ನಿಮ್ಮ ನಡುವೆಯೇ ಇಂತಹ ಪ್ರೇಮವನ್ನು ಕಂಡರೆ ನಾವು ಹೇಗೆ ಅವರೊಡನೆ ವ್ಯವಹರಿಸಬಹುದು ಎಂದು ಒಮ್ಮೆ ಯೋಚಿಸಿ ನೋಡಿ. ವಿವಾಹದ ಆಚೆಗಿರುವ ಗಂಡು ಹೆಣ್ಣಿನ ಸಂಬಂಧವನ್ನು ನಾವು ಯಾವ ಕಾರಣಕ್ಕೂ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಕೆಲವು ವರ್ಷಗಳ ಹಿಂದೆ ಒಬ್ಬ ವಿವಾಹಿತ ಯುವತಿ ಮೈಮೇಲೆ ಸೀಮೆ ಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳು. ಕಾರಣವಿಷ್ಟೇ. ಅರಬ್ ದೇಶದಲ್ಲಿ ಕೆಲಸ ಮಾಡುತ್ತಿದ್ದ ಆಕೆಯ ಗಂಡ ಊರಿಗೆ ಬಂದವನು ಅವಳ ಬಳಿ ಬರದೇ ಸೀದಾ ಅವನ ತಾಯಿಯ ಬಳಿ ಹೋಗಿದ್ದ. ಅದಕ್ಕೆ ಕಾರಣವೂ ಇತ್ತೂ ಈ ಯುವತಿ ಬೇರೆ ಯುವಕನೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾಳೆ ಎಂದು ಆತನಿಗೆ ತಿಳಿಸಲಾಗಿತ್ತು. ಗಂಡ ಬರುತ್ತಾನೆ ಎಂದು ಎರಡು ದಿನ ಕಾದ ಆಕೆ ನಂತರ ಬೆಂಕಿ ಹಚ್ಚಿಕೊಂಡಿದ್ದಳು. ಆಗಲೆಲ್ಲ ಆಕೆ ರಾತ್ರಿ ಹೊತ್ತು ಹೊರಗೆ ನಿಂತು ಒಬ್ಬನ ಬಳಿ ಮಾತನಾಡುತ್ತಿರುತ್ತಾಳೆ ಎನ್ನುವ ಮಾತುಗಳು ಕೇಳಿಬರುತ್ತಿತ್ತು. ನಿಜಕ್ಕೂ ನನಗೆ ಅಚ್ಚರಿ. 'ಆ ಯುವಕನೊಂದಿಗೆ ಆಕೆಯ ಸಂಬಂಧ ಇದ್ದಿದ್ದೇ ನಿಜವಾದರೆ ಮನೆಯ ಹೊರಗೆ ನಿಂತು ಮಾತನಾಡುವ ಅಗತ್ಯವಾದರೂ ಏನಿದೆ? ಹೊರಗೆ ನಿಂತು ಮಾತನಾಡುತ್ತಿದ್ದಾಳೆಂದರೆ ಅವರಿಬ್ಬರ ನಡುವೆ ನಾವೆಲ್ಲ ಅನುಮಾನಿಸುವ ಸಂಬಂಧ ಇರಲಿಕ್ಕಿಲ್ಲ. ಅದು ಕೇವಲ

ಸ್ನೇಹವಿರಬಹುದು.' ಎಂದು ಅವಳ ಪರವಾಗಿ ಮಾತನಾಡಿದ್ದೆ. ಆದರೆ ಏನೇ ಆದರೂ ವಿವಾಹದ ಆಚೆಗಿನ ಹೆಣ್ಣು ಗಂಡಿನ ಸ್ನೇಹ ಕೂಡ ಅನುಮಾನಕ್ಕೆ ಕಾರಣವಾಗುತ್ತದೆ ಎಂಬುದನ್ನು ಗಮನಿಸುವಾಗ ಈ ಕಾದಂಬರಿಯಲ್ಲಿನ ಅಂತಹುದ್ದೊಂದು ಸಂಬಂಧ ಹೇಗೆ ಇಡೀ ಬಂಜಾರಾ ಜನಾಂಗವನ್ನು ಇಕ್ಕಟ್ಟಿಗೆ ಸಿಲುಕಿಸುತ್ತದೆ ಎಂಬುದನ್ನು ಗಮನಿಸಬೇಕಿದೆ.

ಮೀಟು ಹೊರಟಿದ್ದು ಆಸೀಫ್‌ಖಾನ್ ಎನ್ನುವವನೊಡನೆ. ಆದರೆ ಆತನ ಮಗಳು ಮೀಟುವಿನ ಶೌರ್ಯಕ್ಕೆ ಮರುಳಾಗಿ ಆತನಿಗೆ ಒಲಿದು ಬಂದಿದ್ದಳು. ಇತ್ತ ಆಗತಾನೆ ಮದುವೆಯಾದ ಮೀಟು ಸೈನಾಜ್‌ಳ ಒತ್ತಾಯಕ್ಕೆ ಅನಿವಾರ್ಯವಾಗಿ ಅವಳೊಂದಿಗೆ ಸಂಬಂಧ ಬೆಳೆಸಬೇಕಾಗಿತ್ತು. ಅವಳ ಮದುವೆಯ ನಂತರವೂ ಈ ಸಂಬಂಧ ಮುಂದುವರೆದು ಆಕೆ ಮಿಟುವಿನಿಂದ ಒಬ್ಬ ಮಗನನ್ನು ಪಡೆಯುವ ಆಕೆ ಬಾಣಂತಿಯ ನಂಜಿನಿಂದ ಸಾವನ್ನಪ್ಪುತ್ತಾಳೆ. ಆದರೆ ಮುಂದೊಮ್ಮೆ ಅವಳ ಗಂಡ ಲತೀಫ್‌ಖಾನ್‌ನಿಗೆ ಇವರ ವಿಷಯ ಗೊತ್ತಾಗಿದ್ದಲ್ಲದೇ ಮಾವನ ಅಧಿಕಾತರವನ್ನು ಪಡೆಯುವುದಕ್ಕೋಸ್ಕರ ಮೀಟುನನ್ನು ಕೊಂದು ಹಾಕುವುದರೊಂದಿಗೆ ಕಥೆ ಮತ್ತೊಂದು ತಿರುವು ಪಡೆಯುತ್ತದೆ.

ಮೀಟುವಿನ ತಮ್ಮ ಥಾವೂ ಅಣ್ಣನ ಹೆಂಡತಿ ಹಾಗೂ ಮಗ ದೇಸೂನನ್ನು ತುಂಬ ಜಾಗ್ರತೆಯಿಂದ ಕಾಪಾಡಿಕೊಳ್ಳುತ್ತಾನಾದರೂ ಪೀಳಿಗೆಗಳು ಮುಂದುವರೆದಂತೆ ಹಳೆಯ ಬಾಂಧವ್ಯದ ಎಳೆ ಬಿಚ್ಚಿಕೊಳ್ಳುತ್ತ ಸಡಿಲವಾಗುತ್ತದೆ. ಇತ್ತ ಥಾವೂ ಕೂಡ ಹೈದರಾಬಾದಿನ ಕಡೆ ವ್ಯಾಪಾರಕ್ಕೆಂದು ಮಗ ಲಚ್ಮ ಜೊತೆ ಹೋದವನು ಅಲ್ಲಿ ನಿಜಾಮರ ಜೊತೆಗಿದ್ದ ಲತೀಫ್‌ಖಾನನ ಮಗನ ಸೈನಿಕರಿಂದ ಸತ್ತು ಹೋಗುತ್ತಾನೆ. ಇರಿತದ ಗಾಯದ ನಂಜೇರಿ ಲಚ್ಮ ಕೂಡ ಮರಣ ಹೊಂದುತ್ತಾನೆ. ಲಚ್ಮನ ಹೆಂಡತಿ ಗುಜಾ ಸತಿಯಾಗುತ್ತಾಳೆ. ಆಕೆ ದೈವಿಸ್ಥಾನ ಪಡೆಯುತ್ತಾಳೆ. ಇಂದಿಗೂ ಭರಮ್‌ಕೋಟ್‌ದ ಜನಾಂಗ ಗುಜಾಸತಿಯನ್ನು ಪ್ರಾರ್ಥಿಸಿಯೇ ಮುಂದುವರೆಯುವ ಸಂಪ್ರದಾಯವಿದೆ.

ಮುಂದೆ ದೇಸು ಹೈದರಾಬಾದಿನ ಕಡೆ ಪುನಃ ವ್ಯಾಪಾರಕ್ಕೆ ಹೊರಟಾಗ ಮತ್ತೆ ಲತೀಫ್‌ಖಾನನ ಮಗ ಜಂಗ್ಲಿಖಾನ್‌ನ್ನು ಭೇಟಿಯಾಗುವ ಸಂದರ್ಭ ಎದುರಾಗುತ್ತದೆ. ತನ್ನಂತೆಯೇ ಇರುವ ಬಂಜಾರಾನನ್ನು ನೋಡಲು ಆಸಕ್ತನಾದ ಜಂಗ್ಲಿಖಾನನನ್ನು ಸಂಧಿಸಿದಾಗ ಇಬ್ಬರಿಗೂ ಒಳಮರ್ಮ ಅರ್ಥವಾದರೂ ಏನೂ ಅರಿವಾಗದಂತೆ ಇಬ್ಬರೂ ದೂರವಾಗಿದ್ದರೂ ದರೋಡೆಕೋರರು ದಾಳಿ ಮಾಡಿದಾಗ ಪುನಃ ಜಂಗ್ಲಿಖಾನನೇ ಬಂದು ದೇಸುವಿನ ರಕ್ಷಣೆ ಮಾಡಿದ್ದ. ಇದು ಕಥೆಯೊಳಗೆ ಕಾಣುವ ಮಾನವ ಸಂಬಂಧದ ಮಿತಿ ಮತ್ತು ಶ್ರೇಷ್ಠತೆಯನ್ನು ತೋರಿಸುತ್ತದೆ. ಆದರೆ ದೇಸುವಿನ ಚಿಕ್ಕಪ್ಪ ಥಾವೂನ ಮಗ ತೋತ್ಯಾ ಬೇರೆಯಾಗಿದ್ದ. ಸಂಬಂಧಗಳು ನಿಧಾನವಾಗಿ ಹರಿದು ಹೋಗತೊಡಗಿತ್ತು.

ಇದಾದ ನಂತರ ಈ ಬಂಜಾರರಿಗೆ ದೊಡ್ಡ ಏಟು ಬಿದ್ದಿದ್ದು ಬ್ರಿಟೀಷ್ ಆಡಳಿತದಲ್ಲಿ. ಸ್ವತಃ ವ್ಯಾಪಾರಿಗಳಾದ ಬ್ರಿಟೀಷರು, ಈ ಚಿಕ್ಕಪುಟ್ಟ ವ್ಯಾಪಾರಿಗಳನ್ನೆಲ್ಲ ಹೊಸಕಿ ಹಾಕಿಬಿಟ್ಟಿದ್ದರು. ತಮ್ಮ ಅನುಮತಿಯಿಲ್ಲದೇ ವ್ಯಾಪಾರ ಮಾಡುತ್ತಾರೆ ಎನ್ನುವ ಕಾರಣಕ್ಕಾಗಿ ಬಂಜಾರರನ್ನೆಲ್ಲ ದರೋಡೆಕೋರರೆಂದು ಬಿಂಬಿಸಿ ಬಿಟ್ಟಿದ್ದರು. ಬ್ರಿಟೀಷರಿಂದ ತಮ್ಮನ್ನು ಕಾಪಾಡಿಕೊಳ್ಳುವ ಸಲುವಾಗಿ ಮತ್ತೆ ಈ ಜನಾಂಗ ಕಾಡುಗಳನ್ನೇ ಆಶ್ರಯಿಸಬೇಕಾದದ್ದು ವಿಪರ್ಯಾಸ. ದೇಸೂನ ನಂತರ ಧನಸಿಂಗ್, ಅವನ ನಂತರ ಹನುಮನಾಯ್ಕ ಹಾಗೆಯೇ ಸಾಗಿ ಸೂರ್ಯನಾಯ್ಕನವರೆಗಿನ ಕಥೆಯನ್ನು ಹೇಳುತ್ತದೆ.

ಇಡೀ ಕಾದಂಬರಿಯ ಕೊನೆಯ ಹಂತದಲ್ಲಿ ಬಂಜಾರಾ ಜನಾಂಗ ಹೇಗೆ ಆಧುನಿಕತೆಯತ್ತ ಮುಖ ಮಾಡಿದೆ ಎನ್ನುವುದನ್ನು ಹಂತಹಂತವಾಗಿ ತಿಳಿಸುತ್ತದೆ. ಭಮರ್‌ಕೋಟ್ಯಾದ ಕವಲುಗಳು ಬೇರೆಬೇರೆಯಾಗಿ ಈಗಿನ ಕರಮ್‌ತೋಟ್ ಜನಾಂಗದ ಸೂರ್ಯನಾಯ್ಕ ಉಪನ್ಯಾಸಕನಾಗಿದ್ದ. ಹೆಂಡತಿ ವಂದನಾ ಕೂಡ ಸಂಶೋಧನೆ ಮಾಡಿ ವಿದ್ಯಾವಂತೆ ಅನ್ನಿಸಿಕೊಂಡಿದ್ದಳು. ನೇರ ನಡೆನುಡಿಯ ಸೂರ್ಯ ನಾಯ್ಕ ಬದುಕನ್ನು ಸರಳವಾಗಿ ಎದುರಿಸಿದವನು. ಬಡತನದ ಬದುಕಿನಿಂದ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿಕೊಂಡಿದ್ದನಾದರೂ ಸಹೋದ್ಯೋಗಿಗಳ ತುಳಿತಕ್ಕೂ ಒಳಗಾದವನು. ತನ್ನ ಮಕ್ಕಳಾದರೂ ಮೇಲೆ ಬರಲಿ ಎಂದು ಕಾಯುತ್ತಿರುವವನು

ಇಷ್ಟೆಲ್ಲದರ ನಡುವೆ ಇಡೀ ಕಾದಂಬರಿಯಲ್ಲಿ ಬಂಜಾರಾಗಳ ಪದ್ಧತಿಗಳು, ಆಚಾರ ವಿಚಾರಗಳು ಯಥೇಚ್ಛವಾಗಿ ಕಾಣಸಿಗುತ್ತವೆ. ಪ್ರತಿ ಸಂಪ್ರದಾಯದ ಸ್ಥೂಲ ಚಿತ್ರಣವನ್ನು ಕೊಡುವುದರಲ್ಲಿ ಕಾದಂಬರಿಕಾರರು ಯಶಸ್ವಿಯಾಗುತ್ತಾರೆ. ಜೊತೆಗೆ ಬಂಜಾರಾ ಜನಾಂಗದ ಭಾಷೆಯ ಸಣ್ಣ ಪರಿಚಯವೂ ಸಿಗುತ್ತದೆ.

ಚಿಕ್ಕವಳಿದ್ದಾಗ ಲಂಬಾಣಿ ಜನಾಂಗದ ಉಡುಪು ನೋಡುವುದೇ ಒಂದು ವಿಶೇಷ ಎನ್ನಿಸುತ್ತಿತ್ತು ನನಗೆ. ಕಟ್ಟಡ ಕೆಲಸ ಮಾಡಲು ಬಂದ ಬಂಜಾರಾ ಹೆಂಗಸರ ಬಳಿ ಮಾತನಾಡುತ್ತ ನಾಣ್ಯಗಳನ್ನು ಪೋಣಿಸಿ ಹೊಲೆದ ಅವರ ದುಪಟ್ಟಾಗಳನ್ನು ಮುಟ್ಟಿಮುಟ್ಟಿ ನೋಡಿ ಖುಷಿಪಡುತ್ತಿದ್ದೆ. ಯಾರ ಬಳಿಯಲ್ಲಾದರೂ ಸರಿ ಸಲೀಸಾಗಿ ಸ್ನೇಹ ಬೆಳೆಸುವ ನನ್ನ ಗುಣ ಆ ಹೆಂಗಳೆಯರ ಬಳಿ ಹೋಗುವಂತೆ ಮಾಡುತ್ತಿತ್ತು. ಕಾದಂಬರಿ ಓದಿ ಮುಗಿಸಿದ ನಂತರ ಶಾಂತಾ ನಾಯ್ಕರಿಗೆ ಫೋನ್ ಮಾಡಿ "ನನಗೆ ನಿಮ್ಮ ಹೆಂಗಸರು ಹಾಕುವಂತಹ ಡ್ರೆಸ್ ಬೇಕು" ಪುಟ್ಟ ಮಕ್ಕಳಂತೆ ಹಠ ಹಿಡಿದು ಹೇಳಿದ್ದೆ. "ಮುಂದಿನ ಸಲ ಇಲ್ಲಿಗೆ ಬಂದಾಗ ಕೊಡಸ್ತೀನಿ. ಆದರೆ ಈಗ ಅದನ್ನು ಮಾಡೋದು ಕಡಿಮೆ ಆಗಿದೆ. ಹೇಳಿ ಮಾಡಿಸಬೇಕು." ಎಂದಿದ್ದಾರೆ. ಚಂದದ ನಾಣ್ಯ ಹೊಲಿದು ಮಾಡಿದ ಆ ದುಪಟ್ಟಾಗೋಸ್ಕರ ಈಗ ಕಾಯುತ್ತಿದ್ದೇನೆ.

ಅಡಿ ಟಿಪ್ಪಣಿ

1. ಕತ್ತಲು ಕರಗುವ ಮುನ್ನ
   ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 2–3
2. ಪೂರ್ವೋಕ್ತ, ಪುಟ. 3
3. ಕತ್ತಲು ಕರಗುವ ಮುನ್ನ
   ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 4
4. ಪೂರ್ವೋಕ್ತಿ ಪುಟ. 11.
5. ಕತ್ತಲು ಕರಗುವ ಮುನ್ನ
   ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 67
6. 'ಗೋರಮಾಟಿ'
   ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 45.
7. ಪೂರ್ವೋಕ್ತಿ ಪುಟ. 60
8. 'ಗೋರಮಾಟಿ'
   ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 45.
9. ಲಮಾಣಿ ಚಿಮ್ನಿ ಆತ್ಮಚರಿತೆ
   ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡ ಪ್ರಕಾಶನ, 2012, ಪುಟ. 19
10. 'ಗುಡ್ಡಜ್ಜ' ಸಣ್ಣಕತೆ ಸಂಕಲನ
   ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 54
11. ಪೂರ್ವೋಕ್ತಿ ಪುಟ.64
12. ಕೊಂಯ್ಯ ಮತ್ತು ಧೋತ್ರ ಸಂಕಲನ
   ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್ಸ್, 2004, ಪುಟ. 19
13. ಕೊಂಯ್ಯ ಮತ್ತು ಧೋತ್ರ ಸಂಕಲನ
   ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್ಸ್, 2004, ಪುಟ. 61
14. ಕಲ್ಲೇ ಕಲ್ಲೇ ಕಥೆ ಹೇಳು ಸಂಕಲನ
   ಶಿರಗಾನಹಳ್ಳಿ ಶಾಂತನಾಯ್ಕ ಸಿವಿಜಿ ಇಂಡಿಯಾ, 2011, ಪುಟ. 34
15. ಕಲ್ಲೇ ಕಲ್ಲೇ ಕಥೆ ಹೇಳು ಸಂಕಲನ
   ಶಿರಗಾನಹಳ್ಳಿ ಶಾಂತನಾಯ್ಕ ಸಿವಿಜಿ ಇಂಡಿಯಾ, 2011, ಪುಟ. 71
16. ನವಯುಗ ಸೃಷ್ಟಿಯ ನೇತಾರ ಬಾಬಾಸಾಹೇಬ್ ಅಂಬೇಡ್ಕರ್
   ನೀಲಕಂಠ ಸ್ವಾಮಿ ಮೊಂಬಳ್ಳಿ, ರಾರಾಜಿಸು ಪ್ರಕಾಶನ, 2011, ಪುಟ. 93
17. ಕತ್ತಲು ಕರಗುವ ಮುನ್ನ
   ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 1

18. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 2
19. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 30
20. 'ಗೋರ್‌ಮಾಟಿ'
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 10
21. 'ಗೋರಮಾಟಿ'
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 37
22. 'ಗೋರಮಾಟಿ'
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 86
23. 'ಗೋರಮಾಟಿ'
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 105
24. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 26
25. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 59
26. ಲಮಾಣಿ ಚಿಮ್ನಿ ಆತ್ಮ ಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 73
27. 'ಗುಡ್ಡಜ್ಜ'–ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 2
28. 'ಗುಡ್ಡಜ್ಜ'–ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 10.
29. 'ಗುಡ್ಡಜ್ಜ'–ಸಣ್ಣಕತೆ ಸಂಕಲನ, ಶಿರಗಾನಹಳ್ಳಿ ಶಾಂತನಾಯ್ಕ, ಪುಟ. 58
30. 'ಕೊಂಯ್ಯ ಮತ್ತು ಧೋತ್ರ' ಸಣ್ಣಕತೆ ಸಂಕಲನ,
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್ಸ್, 2004, ಪುಟ. 12
31. 'ಕೊಂಯ್ಯ ಮತ್ತು ಧೋತ್ರ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್ಸ್, 2004, ಪುಟ. 64
32. ಕಲ್ಲೇ ಕಲ್ಲೇ ಕಥೆ ಹೇಳು
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 16
33. ಕಲ್ಲೇ ಕಲ್ಲೇ ಕಥೆ ಹೇಳು
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 33

34. ಉ.ಪ., 1972, ನಾಮ್‌ದೇವ್ ಢಸಾಳ್ ಕವನಗಳು
ಡಾ. ಹೆಚ್.ಎಸ್. ಅನುಪಮ, ಲಡಾಯ ಪ್ರಕಾಶನ, 2012, ಪುಟ. XVIII
35. 'ಕತ್ತಲು ಕರಗುವ ಮುನ್ನ' ಕಾದಂಬರಿ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 3
36. 'ಕತ್ತಲು ಕರಗುವ ಮುನ್ನ' ಕಾದಂಬರಿ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 24
37. 'ಕತ್ತಲು ಕರಗುವ ಮುನ್ನ' ಕಾದಂಬರಿ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 53
38. 'ಗೋರಮಾಟಿ' ಕಾದಂಬರಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 24
39. 'ಗೋರಮಾಟಿ' ಕಾದಂಬರಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 25
40. 'ಗೋರಮಾಟಿ' ಕಾದಂಬರಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 75
41. ಲಮಾಣಿ ಚಿಮ್ನಿ ಆತ್ಮಚರಿತೆ (ಕಾದಂಬರಿ)
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 13
42. ಲಮಾಣಿ ಚಿಮ್ನಿ ಆತ್ಮಚರಿತೆ (ಕಾದಂಬರಿ)
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 48
43. 'ಗುಡ್ಡಜ್ಜ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 46
44. 'ಗುಡ್ಡಜ್ಜ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 59
45. 'ಕೊಂಯ್ಯ ಮತ್ತು ಧೋತ್ರ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ. 2-3.
46. 'ಕೊಂಯ್ಯ ಮತ್ತು ಧೋತ್ರ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ. 19
47. ಕಲ್ಲೇ ಕಲ್ಲೇ ಕಥೆ ಹೇಳು ಸಣ್ಣಕತೆ ಶಿರಗಾನಹಳ್ಳಿ
ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 77
48. ಕಲ್ಲೇ ಕಲ್ಲೇ ಕಥೆ ಹೇಳು ಸಣ್ಣಕತೆ ಶಿರಗಾನಹಳ್ಳಿ
ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 28
49. ಪ್ರಗತಿ ಪಥ.
ಪ್ರೊ. ಎಸ್. ನಾಗರಾಜು, ಜ್ಯೋತಿ ಪ್ರಕಾಶನ, ಮೈಸೂರು. 2011, ಪುಟ. 159.

50. ಪ್ರಗತಿ ಪಥ.
ಪ್ರೊ. ಎಸ್. ನಾಗರಾಜು, ಜ್ಯೋತಿ ಪ್ರಕಾಶನ, ಮೈಸೂರು. 2011, ಪುಟ. 164
51. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 4
52. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 39
53. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 34
54. ಗೋರಮಾಟಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 11.
55. ಗೋರಮಾಟಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 52
56. ಗೋರಮಾಟಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 95
57. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರನಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 8
58. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರನಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 65
59. 'ಗುಡ್ಡಜ್ಜ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 32.
60. 'ಗುಡ್ಡಜ್ಜ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 78
61. 'ಕೊಂಯ್ಯ ಮತ್ತು ಧೋತ್ರ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪ್ರಕಾಶನ, 2004, ಪುಟ. 33
62. 'ಕೊಂಯ್ಯ ಮತ್ತು ಧೋತ್ರ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ. 68–69
63. 'ಕಲ್ಲೇ ಕಲ್ಲೇ ಕಥೆ ಹೇಳು' ಸಣ್ಣಕತೆ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 39
64. ಕಲ್ಲೇ ಕಲ್ಲೇ ಕಥೆ ಹೇಳು' ಸಣ್ಣಕತೆ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 68–69
65. ಕರ್ನಾಟಕ ಸಾಂಸ್ಕೃತಿ ಸಂಘರ್ಷ ಒಂದು ಅಧ್ಯಯನ
ಡಾ.ಬಿ.ಎಸ್.ಗೀತಾ ಕನ್ನಡ ಸಾಹಿತ್ಯ ಪರಿಷತ್ತು, 2008, ಪುಟ. 157

66. ನ.ಸಂ.ನೇ ಬಾಬಾ ಸಾಹೇಬಾ ಅಂಬೇಡ್ಕರ್
ನೀಲಕಂಡಸ್ವಾಮಿ ಮಾಂಬಳಿ, ರಾರಾಜಿಸು ಪ್ರಕಾಶನ, 2001 ಪುಟ. 83
67. ಗ್ರಾಮೀಣ ಮಹಿಳಾ ಲೋಕ
ಬಿ.ಸಿ. ಶೈಲಾ ನಾಗರಾಜ್ ಮುನ್ನುಡಿ, ಸಿವಿಜಿ ಪಬ್ಲಿಕೇಷನ್, 2008 ಪುಟ. XVIII
68. ಗ್ರಾಮೀಣ ಮಹಿಳಾ ಲೋಕ
ಬಿ.ಸಿ. ಶೈಲಾ ನಾಗರಾಜ್ ಮುನ್ನುಡಿ, ಸಿವಿಜಿ ಪಬ್ಲಿಕೇಷನ್, 2008 ಪುಟ. XV
69. ಗ್ರಾಮೀಣ ಮಹಿಳಾ ಲೋಕ
ಬಿ.ಸಿ. ಶೈಲಾ ನಾಗರಾಜ್ ಮುನ್ನುಡಿ, ಸಿವಿಜಿ ಪಬ್ಲಿಕೇಷನ್, 2008 ಪುಟ. VIII
70. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 2
71. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 50
72. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 68
73. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 77
74. ಗೋರಮಾಟಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 31
75. ಗೋರಮಾಟಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 39
76. ಗೋರಮಾಟಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 44
77. ಗೋರಮಾಟಿ
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 51
78. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 10
79. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 24
80. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 60
81. 'ಗುಡ್ಡಜ್ಜ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, ಪುಟ. 58–59

82. 'ಗುಡ್ಡಜ್ಜ' ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 63.
83. ಕೊಂಯ್ಯ ಮತ್ತು ಧೋತ್ರ, ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ. 39.
84. ಕೊಂಯ್ಯ ಮತ್ತು ಧೋತ್ರ, ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ. 6.
85. ಕಲ್ಲೇ ಕಲ್ಲೇ ಕಥೆ ಹೇಳು, ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 63.
86. ಕಲ್ಲೇ ಕಲ್ಲೇ ಕಥೆ ಹೇಳು, ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಶ್ರೀಕ್ಷೇತ್ರ ಪ್ರಕಾಶನ, 2005, ಪುಟ. 57.
87. ಸಾರ್ವಜನಿಕ ರಂಗದಲ್ಲಿ ಮಹಿಳೆ
ಶಾರದದೇವಿ ಮಾಳವಾಡ, ಸಹ್ಯಾದ್ರಿ ಪ್ರಕಾಶನ, 1990, ಪುಟ. 17.
88. ಸ್ತ್ರೀ ಲೇಖ ಡಾ. ಕೆ.ಎಸ್. ರತ್ನಮ್ಮ, ಶ್ರೀಕ್ಷೇತ್ರ ಪ್ರಕಾಶನ, 2005, ಪುಟ. 3
89. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 5.
90. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 9.
91. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 21.
92. 'ಗೋರಮಾಟಿ'
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 10
93. 'ಗೋರಮಾಟಿ'
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ.29
94. 'ಗೋರಮಾಟಿ'
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿ ಪ್ರಕಾಶನ, 2007, ಪುಟ. 40.
95. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ. 7.
96. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, 36.
97. ಲಮಾಣಿ ಚಿಮ್ನಿ ಆತ್ಮಚರಿತೆ
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, 58

98. ಗುಡ್ಡಜ್ಜ ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 3
99. ಗುಡ್ಡಜ್ಜ ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ. 41.
100. ಕೊಂಯ್ಯ ಮತ್ತು ಧೋತ್ರ, ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ. 50.
101. ಕೊಂಯ್ಯ ಮತ್ತು ಧೋತ್ರ, ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ. 74.
102. ಕಲ್ಲೇ ಕಲ್ಲೇ ಕಥೆ ಹೇಳು ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 22–23.
103. ಕಲ್ಲೇ ಕಲ್ಲೇ ಕಥೆ ಹೇಳು ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011, ಪುಟ. 81–82.
104. ಗ್ರಾಮೀಣ ಮಹಿಳಾ ಲೋಕ
ಬಿ.ಎಸ್. ಶೈಲಾ ನಾಗರಾಜ್, ಸಿವಿಜಿ ಪಬ್ಲಿಕೇಷನ್, 2008, ಪುಟ. xv
105. ಉರಿಯ ಪದಗಳು, 1972, 2006, ನಾಮದೇವ್ ಢಸಾಳ್ ಕವನಗಳು
ಡಾ. ಎಚ್.ಎಸ್. ಅನುಪಮಾ, ಲಡಾಯಿ ಪ್ರಕಾಶನ, 2012, ಪುಟ. xix.
106. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 4
107. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 23.
108. ಕತ್ತಲು ಕರಗುವ ಮುನ್ನ
ಶಿರಗಾನಹಳ್ಳಿ ಶಾಂತನಾಯ್ಕ, ತಾರಾ ಪ್ರಿಂಟಿಂಗ್ ಪ್ರೆಸ್, 2004, ಪುಟ. 57.
109. ಗೋರಮಾಬಿ (ಕಾದಂಬರಿ)
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿಪ್ರಕಾಶನ, 2007, ಪುಟ. 132
110. ಗೋರಮಾಬಿ (ಕಾದಂಬರಿ)
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿಪ್ರಕಾಶನ, 2007, ಪುಟ 133
111. ಗೋರಮಾಬಿ (ಕಾದಂಬರಿ)
ಶಿರಗಾನಹಳ್ಳಿ ಶಾಂತನಾಯ್ಕ, ಜ್ಯೋತಿಪ್ರಕಾಶನ, 2007, ಪುಟ 148.
112. 'ಲಮಾಣಿ ಚಿಮ್ನಿ ಆತ್ಮಚರಿತೆ'
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ 43.
113. 'ಲಮಾಣಿ ಚಿಮ್ನಿ ಆತ್ಮಚರಿತೆ'
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ 71.

114. 'ಲಮಾಣಿ ಚಿಮ್ನಿ ಆತ್ಮಚರಿತೆ'
ಶಿರಗಾನಹಳ್ಳಿ ಶಾಂತನಾಯ್ಕ, ಶ್ರೀಚೂಡಾ ಪ್ರಕಾಶನ, 2012, ಪುಟ 74.

115. ಗುಡ್ಡಜ್ಜ' ಸಣ್ಣಕಥೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ 94

116. ಗುಡ್ಡಜ್ಜ' ಸಣ್ಣಕಥೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಅನಿಕೇತನ ಪ್ರಕಾಶನ, 1999, ಪುಟ 101

117. ಕೊಂಯ್ಯ ಮತ್ತು ಧೋತ್ರ ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ. 41.

118. ಕೊಂಯ್ಯ ಮತ್ತು ಧೋತ್ರ ಸಣ್ಣಕತೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಪಬ್ಲಿಕೇಷನ್, 2004, ಪುಟ 83

119. ಕಲ್ಲೇ ಕಲ್ಲೇ ಕಥೆ ಹೇಳು ಸಣ್ಣಕಥೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011 ಪುಟ. 47

120. ಕಲ್ಲೇ ಕಲ್ಲೇ ಕಥೆ ಹೇಳು ಸಣ್ಣಕಥೆ ಸಂಕಲನ
ಶಿರಗಾನಹಳ್ಳಿ ಶಾಂತನಾಯ್ಕ, ಸಿವಿಜಿ ಇಂಡಿಯಾ, 2011 ಪುಟ. 66

121. ಪ್ರಸ್ತಾವನೆ : ಆಧುನಿಕ ಕನ್ನಡ ಸಾಹಿತ್ಯದ ಮೊದಲ ತಲೆಮಾರಿನ ದಲಿತ ಸಾಹಿತಿಗಳು : ಡಾ.ಎಂ.ಎಸ್. ಶೇಖರ್, ಪುಟ. xi.

122. ಪೂರ್ವೋಕ್ತ, ಪುಟ. xix.

ಮೀನು ಮತ್ತು ಹುಡುಗಿ-ಒಂದು ನೋಟ

ಡಾ. ನಾಯಕರ ಹುಲುಗಪ್ಪ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಅನೇಕ ದಲಿತ ಲೇಖಕರಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಇಂಗ್ಲೀಷ್ ಅಧ್ಯಯನ ವಿಭಾಗದ ಪ್ರೊ.ಶಾಂತನಾಯ್ಕ ಹೆಸರು ಒಂದು. ಇಂಗ್ಲೀಷ್ ಸಾಹಿತ್ಯದಲ್ಲಿ ಎಂ.ಎ.,ಪಿಎಚ್‌ಡಿ ಪದವಿ ಪಡೆದರೂ ಇವರಿಗೆ ಕನ್ನಡ ಭಾಷೆ, ವ್ಯಾಕರಣ ಮತ್ತು ಕನ್ನಡ ಸಾಹಿತ್ಯದ ಮೇಲೆ ಅಪಾರವಾದ ಪ್ರೀತಿ. ಅದರಲ್ಲಿ ದಲಿತರನ್ನು ಕುರಿತು ಇವರು ಬರೆದಿರುವ ಸಾಹಿತ್ಯ ತುಂಬ ಮೌಲ್ಯಯುತವಾದದು. ದಲಿತ ಚಿಂತನೆಗಳಿಂದ, ಬಂಡಾಯದ ಧ್ವನಿಯಿಂದ, ವಿಮರ್ಶೆಗಳಿಂದ, ತಾಂಡದ ಜನರ ಬದುಕು ನಡೆ-ನುಡಿ, ಸಂಸ್ಕೃತಿಯನ್ನು ಬೆಳಕಿಗೆ ತರುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ಇವರ ಮೀನು ಮತ್ತು ಹುಡುಗಿ ಎನ್ನುವ ಕವನ ಸಂಕಲನ ಸಮಾಜ ಕೇಂದ್ರಿತ ಮಹತ್ವದ ಕೃತಿ, ವೈಚಾರಿಕ ಆಕೃತಿ ಮೂಡಿಸಿದ ಕೃತಿ.ಈ ಕವನ ಸಂಕಲನದಲ್ಲಿ ಸುಮಾರು 62 ಕವನಗಳಿವೆ. ಈ ಎಲ್ಲಾ ಕವಿತೆಗಳಲ್ಲಿ ಲೇಖಕರೆ ಹೇಳುವ ರೀತಿಯಲ್ಲಿ ಇಲ್ಲಿ ಯಾವ ವ್ಯಕ್ತಿ, ಧರ್ಮ, ಜಾತಿಗೆ ನಿಂದಿಸಿಲ್ಲಾ, ಬದಲಾಗಿ ಆ ವ್ಯವಸ್ಥೆಯೊಳಗಿನ ದೋಷವನ್ನು ಹೊರಹಾಕಿರುವೆ. ಶತಮಾನಗಳಿಂದ ಜಾತಿ ಎಂಬ ಸಂಕೀರ್ಣ ಪದರದೊಳಗೆ ಸಿಕ್ಕು ನಲಗಿರುವ ನನ್ನ ಜನರು ಅನುಭವಿಸಿರುವ ಅವಮಾನ ಎಂಥಹುದೆಂಬುದು ಜಗತ್ತಿಗೆ ತಿಳಿದಿದೆ. ಆ ನೋವು ಒಂದು ಕ್ಷಣ ನನ್ನೊಳಗೆ ಇಳಿದು ಈ ಕವನಗಳನ್ನು ಬರೆಯುವಂತೆ ಮಾಡಿದೆ. ಇಲ್ಲಿ ಲೇಖಕರ ನೋವು, ದಲಿತರ ಪರ ಒಲವು ಇದೆ. ಹಲವಾರು ಕಷ್ಟಗಳಿಂದ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವ ಲೇಖಕರು ತಮ್ಮ ಧ್ವನಿಯನ್ನು ಬಡವರ ಪರವಾಗಿ ಕವಿತೆಗಳ ಮೂಲಕ ಕಟ್ಟಿಕೊಟ್ಟಿರುವುದನ್ನು ನಾವು ಕಾಣುತ್ತವೆ. ಇಲ್ಲಿ ಲೇಖಕರ ಸಂವೇಧನೆಯು ಹಲವಾರು ಕವನಗಳ ಮೂಲಕ ಹೊರಬಂದಿದೆ. ತಮಗೆ ಯಾವುದೆ ಕವಿಯ ಪ್ರೋತ್ಸಾಹ ಇಲ್ಲದಿದ್ದರು ತಮ್ಮ ಸುತ್ತ-ಮುತ್ತ ಇರುವ ಜನಗಳಿಂದ ಆದ ಅವಮಾನ, ಅಪಮಾನ, ಮಾನಸಿಕ ಹಿಂಸೆ,

ಶೋಷಣೆಗಳಿಂದ ನನ್ನಲ್ಲಿ ಕವಿತೆ ಬರೆಯುವ ಕಿಚ್ಚು ಉಂಟಾಯಿತು ಎನ್ನುತ್ತಾರೆ ಲೇಖಕರು. ತಮ್ಮ ಹರೆಯದ ಆರಂಭದಲ್ಲಿ ರಚನೆಗೊಂಡ ಈ ಕವಿತೆಗಳು ತಾವು ಅನುಭವಿಸಿದಂತಹ ಹಲವಾರು ಕಷ್ಟ-ಕರ್ಪಣ್ಯಗಳನ್ನು ಪದಗಳ ಮೂಲಕ ಹಿಡಿದಿಡುವ ಪ್ರಯತ್ನವನ್ನು ಮಾಡಿದ್ದಾರೆ.

ಕನ್ನಡ ಕಾವ್ಯ ಪರಂಪರೆ, ಸಂಸ್ಕೃತಿ ಸಂದರ್ಭ ಮತ-ಧರ್ಮ ಫ್ಯೂಡಲ್ ಆಧ್ಯಾತ್ಮದ ಒಳಹು ತಾವು ಕಾಣಬಹುದಾದ ಸಂಗತಿ, ಬಂಡಾಯದ ಮನೋಭಾವ ಕಸಿಮಾಡುವ, ತನ್ನ ಕಾಲದ ಸವಾಲು ಸಮಾನತೆಯ ಸಮಾಜ, ಕಠೋರ ಸತ್ಯವನ್ನು ನಿರೂಪಿಸಿದ್ದಾರೆ. ಹೀಗೆ ಪ್ರತಿಮೆಗಳು ಇಡೀ ಕವನ ಸಂಕಲನವನ್ನು ಒಂದು ಸಾವಯವ ಜೀವಂತ ಸೃಷ್ಟಿಯನ್ನಾಗಿ ಮಾಡುತ್ತವೆ. ಯಾವುದರೊಳಗೋ ಮುಳುಗಿ, ಮುಳುಗಿದ್ದರೂ ತನ್ನ ಇರವನ್ನು ನೆನಪು ಮಾಡಿ ಕೊಡುತ್ತಲೇ ಇರುವ ಪ್ರಕ್ರಿಯೆ ಇಡೀ ಕವನವನ್ನು ಆವರಿಸುತ್ತದೆ.ಗಹನವಾದ ಚಿಂತನೆಯನ್ನು ಸರಳವಾದ ಭಾಷೆಯಲ್ಲಿ ನಿರೂಪಿಸಿದ್ದಾರೆ.

ಈ ಕವನ ಸಂಕಲನದ ಮೊದಲ ಕವನ ಹೆಜ್ಜೆಗಳು ಎನ್ನುವ ಕವನದಲ್ಲಿ

ಅಜ್ಜನ ನೆತ್ತಿಯ ಮೇಲೆ ರಾಜನೊತ್ತಿದ್ದ
ಗುಲಾಮಿ ಹೆಜ್ಜೆಗಳ
ನೂಪೂರಗಳಾಗಿದ್ದ ಅಜ್ಜ
ಮಹಾರಾಣಿಯ ಮೃದುಪಾದಗಳಿಗೆ
ರಾಜನ ಸಿಂಹಾಸನದಡಿಯಲ್ಲಿ
ಅಜ್ಜನ ಕನಸುಗಳು ಹೂತು ಹೋಗಿದ್ದವು

ಎನ್ನುವಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಛಾಪು ಮೂಡಿದೆ. ಬಡವರ ಕನಸುಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಬಡವರ ಎಷ್ಟೊ ಆಸೆಗಳು ಆಕಾಂಕ್ಷೆಗಳು ಆಳುವವರ ಕೈಯಲ್ಲಿ ಅವರೆಲ್ಲ ಕನಸುಗಳು ನಶಿಸಿಹೋಗಿರುವುದನ್ನು ತುಂಬಾ ಮಾರ್ಮಿಕವಾಗಿ ಅವರ ಪಾದದಡಿಯಲ್ಲಿ ಹೂತು ಹೋಗಿದ್ದಾವೆ ಎನ್ನುತ್ತಾರೆ.

ನಮ್ಮ ಸರಕಾರಿ ವ್ಯವಸ್ಥೆಯನ್ನು ತುಂಬಾ ವ್ಯಂಗವಾಗಿ ವಿವರಿಸಿದ ಬಗೆಯನ್ನು ನಾವು ಅವರ ರಾಡಿನೀರು ಮತ್ತು ಕಾಗೆ ಎನ್ನುವ ಕವನದಲ್ಲಿ ನೋಡಬಹುದು. ತಮ್ಮ ಮುಂದೆಯೆ ವ್ಯವಸ್ಥೆಯು ಹದಗೆಟ್ಟು ಹೋಗಿದ್ದರು ಇಲಾಖೆಯವರು ಸುಮ್ಮನೆ ಕೂತಿರುವುದನ್ನು ನಾವು ಕಾಣುತ್ತೇವೆ. ಇಂತಹ ಇಲಾಖೆಯನ್ನು ಕಾಗೆಗೆ ಹೋಲಿಸಿರುವುದನ್ನು ಗಮನಿಸಬಹುದು.

ಹುಬ್ಬಿ-ಧಾರವಾಡ ಮಾ ನಗರ ಪಾಲಿಕೆ
ನೀರು ಸರಬರಾಜು ಇಲಾಖೆ ಮುಂದೆ
ಸಣ್ಣದೊಂದು ಗುಂಡಿ, ಗುಂಡಿ ತುಂಬಾ ನೀರು
ರಾಡಿ ನೀರೊಳಗೆ ಕತ್ತು ಬಳಕಿಸಿ ನಡೆಸಿತ್ತು ಕಸರತ್ತು
ಒಪತಪಾದಿಗಳ ಗೈಯುವಂ ಜನಕ್ಕೂ
ಕಾಕಮಜ್ಜನಕ್ಕೂ ತಾಳೆ ಹಾಕಿದ್ದೆ
ಆತ್ಮಶುದ್ಧಿಯೋ, ಪಾಪ ಹಾರಿಯೋ
ಛೇ.....ಛೇ.....ಹಾಗೇನೂ ಇಲ್ಲಾ ಬಿಡಿ

ಇವರ ಆತ್ಮಗಳು ಎನ್ನುವ ಕವಿತೆಯಲ್ಲಿತನ್ನ ಬದುಕಿನ ಕನಸನ್ನು ನೆರವೇರಿಸಿಕೊಳ್ಳಲಾರದ ಅಜ್ಜನ ಸ್ಥಿತಿಯನ್ನು ತುಂಬ ವ್ಯಂಗವಾಗಿ ಚಿತ್ರಿಸಿದ್ದಾರೆ. ಇಡೀ ಜೀವಮಾನ ದುಡಿದರು ತನ್ನ ಸಣ್ಣ ಸಣ್ಣ ಆಸೆಗಳನ್ನು ಈಡೇರಿಸಿಕೊಳ್ಳಲಾಗದ ಜೀವ ಕಳೆದುಕೊಳ್ಳುವ ಮುದುಕ ಸ್ಥಿತಿಯನ್ನು ಹೀಗೆ ಬಣ್ಣಿಸಿದ್ದಾರೆ.

ಬಿಸಿಲು ಗುದುರೆ ಬೆನ್ನೇರಿ
ಬದುಕನ್ನು ಹಿಡಿಯಲು ಹಠತೊಟ್ಟು
ಹಸಿದು ಸ್ಮಶಾನ ಸೇರಿದ ಅಜ್ಜ

ನೆತ್ತಿ ಉರಿಯುವಂತೆ ಹೊರೆಹೊತ್ತು
ಕನಸು ಕಾಣುವಾಗೆಲ್ಲಾ
ಉರಿವ ನೆತ್ತಿಯೋ ಕುತ್ತಾದಂತಾಗಿ ಬಿಕ್ಕಳಿಸಿದ ಅಜ್ಜ

ತೆರೆದ ಮೈಯಿಂದ ಸೂರ್ಯನ ಕೆಂಗಿರಣಗಳಿಗೆ ಬಲಿಯಾದ
ಅಪ್ಪ ಕರುಕಲಾದ ಕರಿಮೈ
ಅಂಗಿಕಾಣದೇ ಹೆಣವಾದ ಅತೃಪ್ತ ಆತ್ಮಗಳು

ಈ ಮಹಾನಗರದ ಮೂಲೆಯಲ್ಲಿ ಎನ್ನುವ ಕವಿತೆಯಲ್ಲಿ ನಗರ ಬದುಕಿನ ಜೀವನವನ್ನು ಕುರಿತು ತುಂಬ ವ್ಯಂಗ್ಯತ್ಮಾಕವಾಗಿ ಚಿತ್ರಿಸಿರುವುದನ್ನು ಕಾಣುತ್ತೆವೆ. ನಗರ ದಿನನಿತ್ಯದ ಬದುಕನ್ನು ವಿಶ್ಲೇಷಿಸುತ್ತಾ

ಹಸಿವಿಗಾಗಿ ಹಾದರದ ಹಾದಿ ಹಿಡಿದವಳು
ಏಡ್ಸ್ ಹರಡುವ ತಾಣವಾಗಿದ್ದಾಳೆ

ಒಂದು ಕಾಲದ ಹಳ್ಳಿ ಹಳ್ಳಿಗಳೆಲ್ಲಾ

ಕಳೆದು ಹೋದಂತೆ

ಕುಳಿತಿದ್ದಾರೆಲ್ಲಿ ಕೊಳಚೆ ಜೀವಿಗಳು

ಈವ್ಯವಸ್ಥೆಯಲ್ಲಿ ಸರಕಾರದ ಪಾಲುದಾರರಾದ ನೌಕರರು ಯಾವ ರೀತಿ ಭ್ರಷ್ಟಚಾರದಲ್ಲಿ ತೊಡಗಿದ್ದಾರೆ ಎಂಬುದನ್ನು ಕೋಟು ಬೂಟಿನ ಮಂದಿ ಯಾವುದೇ ನಾಚಿಕೆ ಮಾನ ಮಾರ್ಯದೆ ಇಲ್ಲದೆ ಜನರಲ್ಲಿ ಬೇಡುವ ಅವರ ಜೀವವನ್ನು ಇಂಡುವ ಬಗೆಯನ್ನು ಈ ರೀತಿಯಲ್ಲಿ ಹೇಳಿದ್ದಾರೆ.

ಕೋಟು ಬೂಟಿನ ಕಚೇರಿ ಮಂದಿ

ಕಿಸೆ ತುಂಬಿಕೊಳ್ಳುತ್ತಾರೆ

ಬಡವರ ಉಸಿರನ್ನ

ಬಾಚಿಕೊಳ್ಳುತ್ತಾರೆ ಬೆವರ ಪಾಲನ್ನ

ಕೆಲವರಿಗೆ ಮೋಜಾದರೆ ಕೆಲವರಿಗೆ ನರಕ

ಇಂಥ ಮಹಾನಗರದಲ್ಲಿ ಹುಚ್ಚನ ಮದುವೆಯಲಿ ಉಂಡವನೆ ಜಾಣ ಎನ್ನುವಂತೆ ಸಿಕ್ಕವನಿಗೆ ಮೃಷ್ಟಾನ್ನ ಸಿಗದವನಿಗೆ ಮಣ್ಣೆಗತಿಯೆಂಬುದನ್ನು

ಮಹಾನಗರದ ಮೂಲೆಯಲ್ಲಿ

ತಣ್ಣಗೆ ಎಲ್ಲವು ನಡೆಯುತ್ತವೆ

ಹಗಲು-ರಾತ್ರಿ

ದಿಕ್ಕು ದೆಸೆಗಳಿಲ್ಲದೆ

ದಕ್ಕಿದವನದೆ ದೊಡ್ಡ ಪಾಲು

ದಕ್ಕದವನು ಮುಕ್ಕುತ್ತಾನೆ ಮಣ್ಣು ಎನ್ನುತ್ತಾರೆ.

ತನ್ನ ಸುತ್ತಮುತ್ತ ನಡೆಯುವ ಘಟನೆಗಳಲ್ಲಿ ನನೊಬ್ಬನೆ ನನ್ನ ಬಿಟ್ಟು ಬೇರೆ ಯಾರು ಇಲ್ಲ, ನಾ ಹುಟ್ಟಿದಾಗ ಒಬ್ಬನೆ ಮತ್ತು ಸತ್ತಾಗ ನಾ ಒಬ್ಬನೆ ಎನ್ನುವ ಮಾರ್ಮಿಕ ಸತ್ಯವನ್ನು ನಾನೊಬ್ಬನೆ ಎನ್ನುವ ಕವನದಲ್ಲಿ ಈ ರೀತಿ ಹೇಳುತ್ತಾರೆ

ನಾನೊಬ್ಬನೆ ನನ್ನ ಸುತ್ತ ಸುಳ್ಳು

ನಗುವಿನ ನಾಟಕ ಅಳುವಿನ ಮೋಜು ಗೋಜು

ಬುಟಾಟಿಕೆ ಬಲೆಗಳು

ನಾ ಅತ್ತಾಗ ನನಂತರಂಗ
ನಾ ನಕ್ಕಾಗ ಹೃದಯದ ಕಂಪನ
ಇವೆರೆಡು ಬಿಟ್ಟು
ನಾ ನಿಜವಾಗಿಯೂ ಒಬ್ಬನೇ
ಹೊರೆ ಹೊತ್ತಾಗ ಬರಿಕನಸು
ಇಳುಹಿದಾಗ ಬರಿಮನಸು
ಜೀವದ ಜಂಜಡ ತೊರೆದಾಗ
ಮಣ್ಣಿನಲಿ.....ನಾ ಒಬ್ಬನೆ

ಮಾನವರಿಲ್ಲದ ನಾಡಿನಲ್ಲಿ ಎನ್ನುವ ಕವನದಲ್ಲಿ
ಮಾನವರಿಲ್ಲದ ನಾಡಿನಲ್ಲಿ
ಮನಸುಗಳಿಗೆ ಅರ್ಥವೇ ಇಲ್ಲ
ರಕ್ತ ಜೀಜಾಸುರನ ಸಂತಾನದಲ್ಲಿ
ಸಮಾನತೆ ಹುಡುಕ ಹೊರಟರಲ್ಲಾ

ಕಂಬಾಲಪಲ್ಲಿಯಲಿ
ನಂಜುಕಾರುವ ಹಗಲು, ನರಕವಾಯ್ತು ಇರಳು
ಸಾವು ನೆತ್ತಿಯ ಮೇಲೆ ತೂಗು ಕತ್ತಿ
ಕೊನೆಗೂ ಜೀವಿಗಳು ಜೀವಂತವಾಗಿಯೇ ಬೆಂದು ಹೋದವೇ..?

ಹೊಣೆ ಯಾರದು ಅದಕೆ
ಒದೆಯುವವರ ಕಾಲ್ಚೆಂಡಾದ ನಾವೋ
ಬರಿ ಒದೆಯುತ್ತಲೇ ಬಂದ ನೀವು
ಕಾಲನೊಬ್ಬನಿಗೆ ಗೊತ್ತು ಕಾಕತಾಳಿಯುತ್ತರೆ.

ಬಾಬಾ ಸಾಹೇಬ್ ಮತ್ತು ನಾವು ಎನ್ನುವ ಕವನದಲ್ಲಿ ಅಂಬೇಡ್ಕರ್ ಅವರ ಜೀವನ ಶೈಲಿಯನ್ನು ತಮ್ಮದೇ ನೆಲೆಗಟ್ಟಿನಲ್ಲಿ ವಿವರಿಸಿದ್ದಾರೆ. ಬಾಬಾ ಸಾಹೇಬ್ ಮತ್ತು ನಾವು ಎನ್ನುವ ಕವನ ಭಾರತದ ಕೋಟ್ಯಂತರ ಜನರ ತಂದೆ ಎಂದು ಗುರುತಿಸಿಕೊಂಡಿರುವ

ಅಂಬೇಡ್ಕರ್ ಅವರ ಚಿಂತನೆಯನ್ನು ತುಂಬಾ ಮಾರ್ಮಿಕವಾಗಿ ವಿಮರ್ಶಿಸಿದ್ದಾರೆ. ಭಾರತದ ದಲಿತರನ್ನು ಮನುಷ್ಯರೇ ಎಂದು ಪರಿಗಣಿಸದ ಈ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡಿದಾತ

ಮನುಜರಿಲ್ಲದ ನಾಡಿನಲಿ

ಮನಸುಗಳ ಸೃಷ್ಟಿಸಿದನಾತ

ಧರ್ಮದ ತಿರಳ ತಿಳಿಹೇಳಿದ ಪರಾಕ್ರಮಿ

ಹಂದಿ ನಾಯಿಗಳಂತೆ ಇಲ್ಲಿನ ದಲಿತರನ್ನು ಕಾಣುತ್ತಿದ್ದ ಜನರಿಗೆ ಸಮಾನತೆಯ ಪಾಠಮಾಡಿದಾತ ಭಾತರದಲ್ಲಿ ಅಂಬೇಡ್ಕರ್ ಅಂತಹ ಮಹಾನುಭಾವ ಹುಟ್ಟದಿದ್ದರೆ ಇಲ್ಲಿನ ಜನ ಇನ್ನೂ ಎಷ್ಟುವರ್ಷಗಳು ದಾಸರಾಗಿ ಶೋಷಣೆಗೆ ಒಳಗಾಗುತ್ತಿದ್ದರು. ಪ್ರಜಾಪ್ರಭುತ್ವದ ಎದ್ದು ಕಾಣುವ ಸ್ಥೂಲ ಸಂರಚನೆಯ ಮುಖ್ಯ ಶಿಲ್ಪಿ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಪರಿಗಣಿಸಲ್ಪಟ್ಟಿದ್ದರು. ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಕಲ್ಪನೆ ತೀರ ವಿಭಿನ್ನ ಸಮಾಜವನ್ನು ಆದರ್ಶ ಸಮಾಜವನ್ನಾಗಿ ತಮ್ಮ ಕಲ್ಪನೆಯ ಸುಖಿರಾಜ್ಯವನ್ನಾಗಿ ಬದಲಾಯಿಸಿ ಸ್ವಾತಂತ್ರ್ಯ, ಸಮಾನತೆ ಮತ್ತು ಬ್ರಾತೃತ್ವಗಳನ್ನು ಒಟ್ಟಿಗೆ ಸಾಧಿಸಿಬಲ್ಲದೆಬಂತೆ ಪ್ರಜಾಪ್ರಭುತ್ವವನ್ನು ಅವರು ಕಲ್ಪಿಸಿಕೊಂಡಿದ್ದರು.

Fshion

ಪ್ಯಾಶನ್ ಎನ್ನುವ ಕವನದಲ್ಲಿ ಇಂದಿನ ಸಮಾಜದಲ್ಲಿ ಆಗುವ ಬದಲಾವಣೆಯನ್ನು ಕಂಡು ಮುದುಕಿ ಮೂರ್ಛೆಹೋದ ಬಗೆಯನ್ನು ಈ ರೀತಿಯಾಗಿ ವರ್ಣಿಸಿದ್ದಾರೆ.

ಐ ನನ ಶಿವನ

ಯಾ ಕಾಲ ಬಂತ ನಮ್ಮವ

ಎನ್ನುವುದನ್ನು ತುಂಬಾ ವ್ಯಂಗ್ಯಭರಿತ ಧ್ವನಿಯಲ್ಲಿ ಹಳ್ಳಿ ಭಾಷೆಯ ಸೊಗಡಿನಲ್ಲಿ ವಿವರಿಸಿದ್ದಾರೆ.

Beauti Farlor

ಹಾಗೆಯೇ ಬ್ಯೂಟಿ ಪಾರ್ಲರ್ ಎನ್ನುವ ಕವಿತೆಯಲ್ಲಿ ಇಂದಿನ ಪ್ಯಾಶನ್ ಯುಗದಲ್ಲಿ ಹುಡುಗಿಯರು ಹುಡುಗರ ವೇಷ ಧರಿಸಿ ಹುಡುಗರಿಗೂ ಹುಡುಗಿಯರಿಗೂ ವ್ಯತ್ಯಾಸವೇ ಇರದ ಪ್ರಮೇಣವನ್ನು ಒಬ್ಬ ಹುಡುಗ ಕಕ್ಕಬಿಕ್ಕಿಯಾದ ಬಗೆಯನ್ನು ಅಶ್ಚರ್ಯಭರಿತ ಧ್ವನಿಯಲ್ಲಿ ಹೇಳಿದ್ದಾರೆ. ದುಡ್ಡಿದ್ದರೆ ಗಂಡು ಹೆಣ್ಣಾಗುವ, ಹೆಣ್ಣು ಗಂಡಾಗುವ ಪರಿಯನ್ನು ವ್ಯಂಗ್ಯದ ಧ್ವನಿಯಲ್ಲಿ ವಿವಿರಿಸಿದ್ದಾರೆ. ಹಾಗೆಯೇ ಖಿಥಿಣುಖಿ ನ್ನು ರಕ್ತ ಎಂದುಭಾವಿಸಿ

ಹೆಂಗಸೊಬ್ಬಳಿಗೆ ಹೇಳಿ ಅದರಿಂದ ಪೇಚಾಗಿ ತಲೆ ಮೇಲೆ ಕೈಹೊತ್ತುಕೊಂಡ ಕುಂತವನ್ನು ಕುರಿತು ವಿಮರ್ಶಿಸಿದ್ದಾರೆ.

ದೇವರು

ದೇವರು ಎನ್ನುವ ಕವನದಲ್ಲಿ ಯಾರಿಗೂ ಅರ್ಥವಾಗದ ಜಗತ್ತನ್ನು ಕುರಿತು ವಿವರಿಸಲು ಪ್ರಯತ್ನಿಸಿದ್ದರೆ. ಯಾರಿಗೂ ಅರ್ಥವಾಗದ ಕೇವಲ ವಿವಾದಗಳಿಗೆ ಹುಟ್ಟಿಕೊಂಡಿರುವ ದೇವಸ್ಥಾನಗಳು ಎಂದು ಹೇಳುತ್ತಾರೆ. ಭಕ್ತಿ ಎನ್ನುವುದು ಭಯ ಮತ್ತು ಪ್ರೀತಿಯಿಂದ ಉಂಟಾದ ಒಂದು ಭಾವ. ಸಾಮಾನ್ಯವಾಗಿ ಜನಪದರೇ ಹೇಳುವಂತೆ "ಸಂಕಟ ಬಂದಾಗ ವೆಂಕಟರಮಣ" ಎನ್ನುವ ಮಾತು ಸತ್ಯ. ವಾಸ್ತವವಾದಿ ಚಿಂತಕ ಕಾರ್ಲ್‌ಮಾರ್ಕ್ಸ್ ಧರ್ಮವನ್ನು ಹೃದಯ ಹೀನ ವಿಶ್ವದ ಹೃದಯ, ಅದೊಂದು ಅಫೀಮು ಎಂದು ಹೇಳಿದ. ಮನುಷ್ಯ ತನ್ನ ಸಂಕಟಗಳಿಗೆ ಎಲ್ಲಿಯೂ ಪರಿಹಾರ ದೊರೆಯದೇ ಇದ್ದಾಗ ದೇವರು ಧರ್ಮದ ಮೊರೆ ಹೋಗುತ್ತಾನೆ. ಅದಕ್ಕೆ ಬುದ್ಧ ದೇವರಿಲ್ಲದ ಧರ್ಮವನ್ನು ಕಟ್ಟಿದ. ಬಸವ ದೇಗುಲವಿಲ್ಲದ ಧರ್ಮವನ್ನು ರೂಪಿಸಿದ. ಸೂಫಿ ಸಂತ ಕಬೀರ ದೇವರನ್ನು ಗುಡಿ ಮಸೀದಿಯಲ್ಲಿ ಗುರುತಿಸಿದೆ ಭಕ್ತರ ಮನದಲ್ಲಿ ಗುರುತಿಸಿದ. ಕುವೆಂಪು ಗುಡಿ, ಚರ್ಚ್ ಮಸೀದಿಗಳಿಂದ ಹೊರಬಂದು ವಿಶ್ವಮಾನವ ಧರ್ಮವನ್ನು ಕಟ್ಟಲು ಕರೆಕೊಟ್ಟರು. ಹೀಗೆ ದೇವರು ಧರ್ಮದ ಪರಿಕಲ್ಪನೆಯನ್ನು ವಿವರಿಸಿದ್ದಾರೆ.

ಮಾನವ ಜನಾಂಗ ಇತಿಹಾಸದಲ್ಲೇ ಹೆಚ್ಚು ಶೋಷಣೆಗೆ ಒಳಾಗದವರಲ್ಲಿ ದಲಿತರು ಪ್ರಮುಖರು. ಕನ್ನಡ ನಾಡಿನ ಚರಿತ್ರೆಯಲ್ಲಿ ರಾಜಕೀಯ ಮತ್ತು ಮತೀಯ ಶಕ್ತಿಗಳು ಸಮಾಜವನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿದ್ದವು. ಈ ತರಹದ ಶಕ್ತಿ ಕೇಂದ್ರಗಳು ದಲಿತರನ್ನು ದಲಿತ ಮಹಿಳೆಯರನ್ನು ಅವರ ಜೀವನದ ಜೊತೆ ಚೆಲ್ಲಾಟವಾಡಿದ ಸಂಗತಿಗಳನ್ನು ಈ ಕವನ ಸಂಕಲನದ ಎಷ್ಟೋ ಕವಿತೆಗಳಲ್ಲಿ ಪ್ರೊ.ಶಾಂತನಾಯ್ಕ ಸರ್ ಅವರು ಕಟ್ಟಿಕೊಟ್ಟಿದ್ದಾರೆ. ಹಾಗೆಯೇ ಇಂದಿನ ಸಮಾಜದಲ್ಲಿ ನಡೆಯುವ ಘಟನೆಗಳು, ಜನರ ಬದುಕುಗಳು, ಅವರ ಆಚರಣೆಗಳು, ಅವರ ಭಾಷೆ ಕುರಿತು ತುಂಬಾ ವಿಮರ್ಶಾತ್ಮಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸಲು ಪ್ರಯತ್ನಿಸಿದ್ದಾರೆ. ಕೆಲವೊಮ್ಮೆ ವ್ಯಂಗ್ಯಭರಿತವಾಗಿ ಕೆಲವೊಮ್ಮೆ ಹಾಸ್ಯಭರಿತವಾಗಿ, ಕೆಲವೊಮ್ಮೆ ಜಗತ್ತೆ ಹೀಗೆ ಎನ್ನುವ ನೆಲೆಯಲ್ಲಿ ತಮ್ಮ ದಲಿತ ನೋವನ್ನು ತೊಡಿಕೊಂಡಿದ್ದಾರೆ.

ಡಾ. ನಾಯಕರ ಹುಲುಗಪ್ಪ, ಕನ್ನಡ ಅತಿಥಿ ಉಪನ್ಯಾಸಕರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

"ಶಿರಗಾನಹಳ್ಳಿ ಶಾಂತನಾಯ್ಕರವರ ಚಿಮ್ನಿ ಆತ್ಮಚರಿತೆ ಕಾದಂಬರಿಯ ವಿಶ್ಲೇಷಣೆ"

ಪವನ್ ಕುಮಾರ್

ಶಾಂತನಾಯ್ಕರವರು ಕನ್ನಡ ಸಾಹಿತ್ಯದ ವಿಶಿಷ್ಟ ಬರಹಗಾರರಾಗಿದ್ದು ಲಂಬಾಣಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಒಂದು ಬುಡಕಟ್ಟು ಜನಾಂಗದವರಾದ ಲಮಾಣಿ ಸಮುದಾಯದವರು ಊರೂರು ಅಲೆಯುತ್ತಾ, ಬದುಕಿಗಾಗಿ ನಾನಾ ಕಸುಬುಗಳನ್ನು ಅವಲಂಬಿಸಿ ಜೀವನಕ್ಕೆ ಒಂದು ನಿರ್ದಿಷ್ಟ ಗುರಿ ಕಾಣದೇ ಶತ-ಶತಮಾನಗಳಿಂದ ಬದುಕು ಸಾಗಿಸುತ್ತಿರುವ ಲಂಬಾಣಿ ಸಮುದಾಯದ ಬಡತನ, ಅನಕ್ಷರತೆ, ಸಂಸ್ಕೃತಿ ಚಹರೆಗಳನ್ನು ಸಮುದಾಯದ ಜೀವನ ಪದ್ಧತಿಯನ್ನು ಸಾಹಿತ್ಯದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಶಾಂತನಾಯ್ಕರು ರಚಿಸಿದ ಕಾದಂಬರಿಯಾದ 'ಲಮಾಣಿ ಚಿಮ್ನಿ ಆತ್ಮಚರಿತೆ' ಈ ಇಡೀ ಕಾದಂಬರಿಯು ಬಡ ಲಂಬಾಣಿ ಹೆಣ್ಣುಮಗಳ ಜೀವನವನೇ ಕೇಂದ್ರಿಕರಿಸಿದೆ. ವ್ಯಕ್ತಿ ಮತ್ತು ಸಮುದಾಯ ಕೇಂದ್ರಿತ ವಸ್ತುವಿನ ಆಶಯವನ್ನು ಹೊಂದಿದ್ದು, ಇವರು ದಲಿತ ಬಂಡಾಯ ಕಾಲಘಟ್ಟದ ಲೇಖಕರಿಗಿಂತ ಭಿನ್ನವಾದ ಬರವಣಿಗೆಯ ಶೈಲಿಯನ್ನು ರೂಪಿಸಿಕೊಂಡಿದ್ದಾರೆ, ಈ ಕಾದಂಬರಿಯು ಲಮಾಣಿ ಬುಡಕಟ್ಟಿನ ಜೀವನ ಶೈಲಿಯು ನಿರಂತರ ಬದಲಾವಣೆಗೆ ಒಳಗಾಗುತ್ತಿರುವ ಸಂಸ್ಕೃತಿಯುನ್ನು ಅನಾವರಣಗೊಳಿಸಿದೆ. ಲಮಾಣಿ ಸಮುದಾಯದ ಮಹಿಳೆಯರ ಸ್ಥಿತಿಗತಿ, ಪುರುಷರ ದೌರ್ಬಲ್ಯತೆಗಳು, ಮೇಲ್ವರ್ಗದವರ ದಬ್ಬಾಳಿಕೆಗಳು ಹಾಗೂ ದುರಂತ ಚಹರೆಗಳನ್ನು ಕಾದಂಬರಿಯು ಅಕ್ಷರ ಸ್ವರೂಪ ಪಡೆದುಕೊಂಡಿದೆ.

ಲಮಾಣಿ ಸಮುದಾಯದೊಳಗೆ ಬಡತನ, ಅನಕ್ಷರತೆ, ಮನೆ ತುಂಬ ಮಕ್ಕಳು. ಕೇಳುವವರ್‍ಯಾರು? ಹುಟ್ಟಿದ್ದು ತಮಗೆ, ಉಳಿದರೆ ಅದೃಷ್ಟ ಗಟ್ಟಿ ಐತೆ ಅಂದುಕೊಳ್ಳುವುದು ಸತ್ತರೆ ಶಿವನವು ಅಂದುಕೊಂಡು ಹೊಟ್ಟೆ ತುಂಬ ಹೆಂಡ, ಸಾರಾಯಿ ಕುಡಿದು ಆ ಅಮಲಿನಲ್ಲಿ ವಾರ ಹದಿನೈದು ದಿನಗಳ ಕಾಲ ನೆನಪು ಮಾಡಿಕೊಂಡು ಬೇಸರ ಪಟ್ಟು

ಮತ್ತೆ ಯಥಾಸ್ಥಿತಿಗೆ ಮರಳುವ ಬದುಕು ಪ್ರತಿನಿತ್ಯ ನಡೆಯುತ್ತಿತ್ತು. ಇದು ಲಮಾಣಿಗರ ನಿತ್ಯದ ವ್ಯಥೆ ಎಂಬ ಸತ್ಯಾಂಶವು ಕಾದಂಬರಿಯಲ್ಲಿ ಕಥೆಗೆ ಸ್ಪಷ್ಟತೆಯನ್ನು ದೊರಕಿಸಿಕೊಟ್ಟಿದ್ದಾರೆ. 'ಚಿಮ್ನಿ' ಕಾಟೇಬಾರಿ ತಾಂಡಕ್ಕೆ ಸೇರಿದ ಬಡ ಹೆಣ್ಣು ಮಗಳು. ಈ ತಾಂಡವನ್ನು ಕಟ್ಟಿಬೆಳೆಸಿದ ಥಾವ್ರ್ಯನಾಯ್ಕ ಚಿಮ್ನಿಯ ಪೂರ್ವಜ್ಜ. ಇವರು ಕಾಟೇಬಾರಿ ತಾಂಡವನ್ನು ಕಟ್ಟಿದ್ದು ಬಹುವಿಶೇಷ ಆಂಧ್ರಪ್ರದೇಶದ ಮೂಲೆಯಿಂದ ಕರ್ನಾಟಕದ ಬಳ್ಳಾರಿ ಪ್ರವೇಶಿಸಿ ಅಲ್ಲೆಲ್ಲೊ ಗೂಡೂರೋ ಅಪ್ಪೆಬಳ್ಳತಾಂಡದ ಹತ್ತಿರ ಹನುಮನಾಯ್ಕ, ಅವನಪ್ಪನೂವೆ ಅಜ್ಜನೂ ಜಮೀನು ಮಾಡಿಕೊಂಡಿದರು. ಮೂಡಲಸೀಮೆಯಿಂದ ಲದೇಣಿಯಾ(ಸಾಮಾನು ಹೊರುವ ಕುದುರೆಗಾಡಿ) ಮಾಡಿ ಕೊಂಡು ಸಾವಿರಾರು ಲಮಾಣಿಗರು ದಿಕ್ಕು ದೆಸೆಯಿಲ್ಲದೆ ದಿಕ್ಕಾಪಾಲಾಗಿರುವಾಗ ಚಿಮ್ನಿಯ ತಾತ ಥಾವುನಾಯ್ಕ ಮಾತ್ರ ತನ್ನ ಮಡದಿ ಗುಬ್ಬೀರಿ ಜೊತೆ ನಾಲ್ಕು ಮಂದಿ ಮಕ್ಕಳೊಂದಿಗೆ ಕಾಟೇಬಾರಿ ತಾಂಡದೊಳಗೆ ಶಾಶ್ವತವಾಗಿ ನೆಲೆ ನಿಂತರು. ಅಲ್ಲಿಂದ ಮಂಗ್ಲ್ಯಾ, ಸಂಪೂ ದಂಪತಿಗಳಿಗೆ ಕಾಟೇಬಾರಿತಾಂಡವೇ ವಾಸಸ್ಥಳವಾಯಿತು. ಗ್ರಾಮೀಣ ಜೀವನ, ಪೂರ್ವಜರನ್ನು ಸ್ಮರಿಸಿಕೊಳ್ಳುವ ಮೂಲಕ ಅವರ ಬದುಕನ್ನು ವರ್ಣಿಸಿರುವುದರಿಂದ ಕಾದಂಬರಿಗೆ ವಾಸ್ತವಿಕತೆಯ ಕಂಪುತಟ್ಟಿದೆ.

ಚಿನ್ನಾನಾಯ್ಕನು ತನ್ನ ಮೂವತ್ತು ವರ್ಷದ ಹಿಂದಿನ ಕಷ್ಟ–ಸುಖದ ಬಗ್ಗೆ ಮೆಲುಕು ಹಾಕುವುದರ ಮೂಲಕ ಕಾದಂಬರಿ ಆರಂಭ ಪಡೆಯುತ್ತದೆ. "ಹತ್ತು ಮೈಲಿ ದೂರದವರಿಗೆ ದೊಡ್ಡವರ ಹಿಂದೆ ಹೋಗಿ ಶೇಂಗಾ ಆಯ್ದು, ಹೊಲದ ಮಾಲೀಕನಿಂದ ಛೀ! ಥು ಅನ್ನಿಸಿಕೊಂಡು ಬದುಕಿನ ಬಂಡಿ ಸಾಗೋದಕ್ಕೆ ತಾನು ಸಾಕಾರಿಯಾಗಿದ್ದನ್ನ ಚಿನ್ನಾನಾಯ್ಕ ಮರಿಯಾಕ ಆಗದೆ ಒಳಗೊಳಗೆ ತಮ್ಮಂಥವರ ಬದುಕೇಕೆ ಹೀಗೆಂದು ಆಕಾಶದ ಕಡೆಗೆ ಮುಖ ಮಾಡಿಕೊಂಡು ತಡಬಡಿಸುತ್ತಾನೆ". ಚಿನ್ನಾನು ತನ್ನ ಬಾಲ್ಯದ ಜೀವನವನ್ನು ನೆನಪಿಸಿಕೊಳ್ಳುತ್ತಿರುವುದು ಒಂದು ಕಡೆಗಿದ್ದರೆ ತಳವರ್ಗದವರ ಬದುಕು, ಬಡತನ ಹೇಗಿತ್ತು ಎನ್ನುವುದಕ್ಕೆ ಸೂಚ್ಯವಾಗಿ ಕಾದಂಬರಿಯಲ್ಲಿ ಪ್ರಮುಖವಾಗಿ ಚಿಮ್ನಿ, ಚಿನ್ನಾನಾಯ್ಕ, ಚಿನ್ನಿ, ಪೀಕಿ, ಸಂಪುನಾಯ್ಕ, ಮಂಗ್ಲ್ಯಾನಾಯ್ಕ, ಥಾವ್ರ್ಯನಾಯ್ಕ, ರಂಗೋಲಿಸಿದ್ದ, ಜಮೀನ್ದಾರ್ ರಾಘವ, ತಿಮ್ಮನಾಯ್ಕ, ಸಾಕಿ, ಪಾರಿ, ರಾಮಿ, ಚೈನಿ, ಲಾಲ್ಯ, ಭಗನ್ಯಾ, ಬೋಜ್ಯ, ಮತ್ತು ಸಾಮಮೇಸ್ತ್ರಿಯಂತ ಹೆಸರುಗಳ ಬಂಡಾರವೇ ಇದೆ. ಈ ಎಲ್ಲ ಪಾತ್ರಗಳನ್ನು ಸಂದರ್ಭಕ್ಕೆ ಔಚಿತ್ಯವಾಗಿ ಬಳಸಿಕೊಂಡಿದ್ದು ಎಲ್ಲವೂ ಕಾದಂಬರಿಯ ಬೆಳವಣಿಗೆಗೆ ಪೂರಕವಾಗಿ ಚಿತ್ರಣಗೊಂಡಿವೆ. ಸಂಪುನಾಯ್ಕ ಚಿನ್ನುನಾಯ್ಕನ ಅಪ್ಪ, ಇತನಿಗೆ ಎಂಟು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಆದರೆ ಇವನ ತಮ್ಮ ಮಂಗ್ಲ್ಯಾನಾಯ್ಕನಿಗೆ ಎಲ್ಲವೂ ಹೆಣ್ಣು ಮಕ್ಕಳು ಇದು ಅವನ ಮನೋವೇದನೆಗೆ

ಪ್ರಮುಖ ಕಾರಣವಾಗಿತ್ತು. 12 ಹೆಣ್ಣು ಮಕ್ಕಳಲ್ಲಿ ಮನೆಗೆ ಗಂಡು ಮಗನಂತೆ ದುಡಿದು ಮನೆಮಂದಿಗೆ, ತಾಂಡಕ್ಕೆ, ನೆರೆಹೊರೆಯವರಿಗೆಲ್ಲ ಮಾದರಿಯಾಗಿದ್ದವಳು ಚಿಮ್ನಿ ಒಬ್ಬಳೇ. 'ಬಡತನಕ್ಕೆ ಮಕ್ಕಳು ಜಾಸ್ತಿ' ಎನ್ನುವಂತೆ ಲಮಾಣಿ ಬುಡಕಟ್ಟಿನಲ್ಲಿ ಮಕ್ಕಳಿಗೆ ಕೊರತೆಯೇ ಇಲ್ಲ. ಇದಕ್ಕೆ ಕಾರಣ ಲಮಾಣಿಗರಲ್ಲಿ ಗಂಡು ಮಗನ ಮೇಲಿರುವ ವ್ಯಾಮೋಹ ಎನ್ನುವುದನ್ನು ಲೇಖಕರ ಸಮರ್ಥಿಸುತ್ತಾರೆ.

ಗಂಡು ಮಗುವಿಗಾಗಿ ಸ್ತ್ರಿ-ಪುರುಷರಿಬ್ಬರು ಮಹಿಳೆಯರನ್ನು ಶೋಷಣೆ ಮಾಡುವ ಪರಿಯ ಬಗ್ಗೆ ಇವರ ಕಾದಂಬರಿಯಿಂದ ಹೆಚ್ಚಿನ ಮಾಹಿತಿ ದೊರಕುತ್ತದೆ. ಗಂಡು ಮಗನಿಗಾಗಿ ಹಂಬಲಿಸುತ್ತಿದ್ದ ಮಂಗ್ಲ್ಯಾನಿಗೆ ಹಿರಿ ಪತ್ನಿ ಚಿನ್ನಿಯಿಂದ 12 ಹೆಣ್ಣು, ಕಿರಿ ಪತ್ನಿ ಪೀಕಿಯಿಂದ 6 ಹೆಣ್ಣು ಪಡದು ಮಾನಸಿಕವಾಗಿ ನೊಂದಿದ್ದ, ಇದು ಇವನೊಬ್ಬನ ನೋವಾಗಿರಲ್ಲಿಲ್ಲ ಇಡೀ ತಾಂಡದ ಗಂಡಸರ ವ್ಯಥೆಯಾಗಿತ್ತು. ಗಂಡು ಮಗನಿಗಾಗಿ ಹಂಬಲಿಸುವವರ ಮಧ್ಯೆ ಚಿಮ್ನಿ ಎಂಬ ಹೆಣ್ಣು ಮಗಳು ಗಂಡಿಗೆ ಸರಿಸಮಾನಾಗಿ ನಿಲ್ಲುವುದು ಈ ಕಾದಂಬರಿಯ ಮುಖ್ಯ ತಿರುಳಾಗಿದೆ. ಈಕೆಯ ನಿಷ್ಟೆ, ಪ್ರಮಾಣಿಕತೆ, ಶ್ರದ್ದೆಯ ಚಿತ್ರಣವೂ ಕಾದಂಬರಿ ಓದುಗರಿಂದ ಅನುಕಂಪ ದೊರಕಿಸಿಕೊಳ್ಳುತ್ತದೆ. ಶಾಂತನಾಯ್ಕರು ಚಿಮ್ನಿ ಪಾತ್ರದ ಬಗ್ಗೆ ವಿವರಿಸುತ್ತಾ "ಅಕಿ ಅದೇನು ಮಾಡ್ಯಾಳೋ ಮನಿ ಮಂದಿಗೆಲ್ಲಾ ಅಕಿ ಮಾತಂದ್ರ ವೇದವಾಕ್ಯ ಎಲ್ಲರಿಗೂ ಯಾರೊಬ್ಬರು ವಿರೋಧ ಮಾಡಂಗಿಲ್ಲ, ಆಗಲ್ಲ ಅನ್ನೋದೇ ಇಲ್ಲ ಅಂತೀನಿ" ಎನ್ನತ್ತಾ ಆಕೆಯ ಸ್ವಭಾವದ ಬಗ್ಗೆ ಅನುಕಂಪ ಪಡುತ್ತಾರೆ. ಕಾದಂಬರಿಯ ಪಾತ್ರವಾಗಿರುವ ಮಂಗ್ಲ್ಯಾ ತನ್ನ ಮಗಳು ಚಿಮ್ನಿಯ ಗುಣವನ್ನು ವರ್ಣಿಸುತ್ತಾ "ಏಯ್ ಆಕಿ ಮಗಳಲ್ಲ ನಂಗ, ಮಗ, ಆಕಿ ಮಾತು, ಕತೆ, ನಡೆ-ನುಡಿ, ರೀತಿ ರೀವಾಜು ಎಲ್ಲಾ ಶುದ್ಧ ಅಂದಂತೆ ಮಾಡ್ತಾಳಾ ಯಾರ ಮನಸ್ಸು ನೋಯಿಸೋದಿಲ್ಲ ಅಕ್ಕಂದಿರನ್ನು, ತಂಗಿಯರನ್ನು ಪಸಂದಾಗೆ ನೋಡ್ಕಂತಾಳ, ತಾಂಡದ ಮಂದಿ ಯಾರಾದ್ರು ಬೆಟ್ಟು ಮಾಡಿ ಹೇಳ್ಲಿ ಚಿಮ್ನಿ ಹಿಂಗಂತ ಅವತ್ತೆ ನಾನು ಮೀಸೆ ಬೋಳಸ್ಕಂತೀನಿ"ಎಂದು ತನ್ನ ಗರ್ವವನ್ನು ಹೊರಹಾಕಿದ್ದಾನೆ.

ಚಿಮ್ನಿ ಇಡೀ ತಾಂಡಕ್ಕೆ ಮಾತ್ರವಲ್ಲ ನೆರೆಹೊರೆ ಸಾಹುಕಾರರು, ಜಮೀನ್ದಾರರು, ಮನೆ ಮಗಳಂತೆ ಇದ್ದಳು ಎಂಬ ಅಂಶವು ಅತೀ ಹೆಚ್ಚಿನ ವರ್ಣನೆಯಂತಿದೆ. ಜಮೀನ್ದಾರ್ ರಾಘವ ಆಕೆಯ ಸ್ವಭಾವಕ್ಕೆ ಮಾರುಹೋಗಿ "ಅವಳ ಮಾರಿ ನೋಡಿದ್ರ ಅಕಿ, ನಮ್ಮ ಮಂದಿಯೊಳಗ ಹುಟ್ಟಬೇಕಿತ್ತು, ಅದೇನು ಸಂಸ್ಕಾರ" ಎನ್ನುವ ವರ್ಣನೆಯಲ್ಲಿ ಲೇಖಕ ತನ್ನ ಸಮುದಾಯದ ಮುಗ್ಧತೆಯನ್ನು ಈ ಪಾತ್ರದ ಮೂಲಕ ಹೊರಹಾಕುತ್ತಿರುವಂತಿದೆ. ಕಾದಂಬರಿಯ ಕೆಲವೆಡೆ ಮುಗ್ಧಳಂತೆ ಬಿಂಬಿಸಿರುವ ಚಿಮ್ನಿ ತಾಂಡಪುರುಷರ ದೌರ್ಜನ್ಯತೆಯ ವಿಷಯ ಬಂದಾಗ ಅವರ ವಿರುದ್ದ ಸಿಡುಕುತ್ತಾ "ಹೆಂಡತಿ-ಮಕ್ಕಳಿಗೆ

ಚಿತ್ರ ಹಿಂಸೆ ನೀಡುವಂತ ಬೇವರ್ಸಿಗಳನ್ನ, ತಾಂಡದಿಂದ ಹೊರಗ ಹಾಕಬೇಕು ಹೆಂಡತಿರ ದುಡಿಮೆ ತಿನ್ನೋ ಬೇಜವಾಬ್ದಾರಿ ಗಂಡಸರನ್ನ ಗಡಿಪಾರ ಮಾಡಬೇಕು" ಎಂದು ಹೌಹಾರಿರುವುದು ಉಂಟು.

ಕಟುನಿಟ್ಟಿನ, ಸರಳತೆ ವ್ಯಕ್ತಿತ್ವವನ್ನು ಹೊಂದಿದ್ದ ಚಿಮ್ನಿಗೆ ಹೃದಯದೊಳಗೆ ಸಣ್ಣ ರಂಧ್ರ ಕಾಣಿಸಿಕೊಂಡು ಆಕೆಯ ಇಡೀ ಬದುಕನ್ನೇ ನುಂಗಿ ಹಾಕಿದ್ದು ಕಾದಂಬರಿಯ ದುರಂತಕ್ಕೆ ಕಾರಣವಾಗಿದೆ. ಈ ಕಾಯಿಲೆಯಿಂದಾಗಿ ಚಿಮ್ನಿ ಸಾಯುವ ತನಕನೂ ಅಣು–ಅಣುವಾಗಿ ಕೊರಗಿ ಸಾಯುವುದರ ಬಗ್ಗೆ ಓದುಗರಲ್ಲಿ ಮಮಕಾರವನ್ನಂಟು ಮಾಡುತ್ತದೆ. ಕಾಯಿಲೆಯ ಕಾರಣದಿಂದಾಗಿ ಚಿಮ್ನಿ ಸಮಾಜದಲ್ಲಿ ಹಲವಾರು ಅಪಮಾನಗಳಿಗೆ ಗುರಿಯಾದ ಸಂದರ್ಭವೂ ಕಾದಂಬರಿಗೆ ಹೊಸ ಚೈತನ್ಯವನ್ನು ತಂದುಕೊಟ್ಟಿದ್ದು ಕಾದಂಬರಿಯಲ್ಲಿ ಬಡತನ, ಹಸಿವು, ಶೋಷಣೆ, ದಬ್ಬಾಳಿಕೆ ಮತ್ತು ವರ್ಗ ಹೋರಾಟಗಳು ಅಧಿಕವಾಗಿ ಇಲ್ಲದಿದ್ದರೂ ಕಥೆಯ ಅಗತ್ಯತೆಗೆ ಅನುಗುಣವಾಗಿ ಬಳಕೆಗೊಂಡಿವೆ. ಈ ಕಾದಂಬರಿಗೆ ಚಿಮ್ನಿಯೇ ನಾಯಕಿ ಆಗಿದ್ದೂ ಅವಳ ಸಾವಿನ ದುರಂತತೆ ಮುಖ್ಯ ಭಾಗವಾಗಿದೆ. ಇದರೊಂದಿಗೆ ಲಮಾಣಿ ಸಮುದಾಯದ ಸಂಪ್ರದಾಯಗಳು, ಆಚರಣೆಗಳು ಮತ್ತು ಮೂಢ ನಂಬಿಕೆಯಂತ ಸಾಮಾಜಿಕ ಪಿಡುಗುಗಳ ಸಂಗತಿಯಿದೆ. ಕಥೆಯಲ್ಲಿ ಚಿಮ್ನಿ ಆಯಾಸಗೊಂಡಿರುವುದನ್ನು ಕಂಡ ತಾಯಿ ಚಿನ್ನಿ ಇದೊಂದು ದೆವ್ವದ ಕಾಟವೆಂದು ಭ್ರಮಿಸಿ "ಏಯ್ ಹಾದರಗಿತ್ತಿ ಯಾವಳಲೇ ನೀನು, ಇಡೀ ಜಗತ್ತೆ ಇತ್ತಲ್ಲಾ ನಿನಗೆ ಬಿಟ್ಟವಳೇ ನನ್ನ ಮಗಳೆ ಬೇಕಿತ್ತ?" ಎಂದು ಮನ ಬಂದಂತೆ ದಂಡಿಸುವಲ್ಲಿ ಲಮಾಣಿಗರ ಅನರಕ್ಷತೆ ಮೌಢ್ಯತೆಯನ್ನು ಸೂಚಿಸುತ್ತದೆ. ಸತ್ತ ಚಿಮ್ನಿಯನ್ನು ಮಣ್ಣು ಮಾಡಿರುವ ಜಾಗದ ಈಚಲೂಮರದ ಕೆಳಗೆ ಗುಡಿ ಕಟ್ಟಿ ಅವ್ವ ಮಾ ತಾಯಿ ಚಿಮ್ನವ್ವ, ಉಧೋ ಉಧೋ ತಾಯೇ ಅಂತೇಳಿ ವಿನಂತಿ ಮಾಡಿಕೊಂಡು ಕಾಟೇಬಾರಿ ತಾಂಡದ ಆದಿದೇವತೆಯಾಗಿ ಮಾಡಿಕೊಂಡಿರುವಲ್ಲಿ ಲಂಬಾಣಿಗರ ಅಜ್ಞಾನತೆಯನ್ನು ಹಾಗೂ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ದೈವಿಕರಿಸುವುದರ ಮೂಲಕ ಲಂಬಾಣಿಗಳ ಅಂಧ ಶ್ರದ್ಧೆಯನ್ನು ತಿಳಿಸುತ್ತದೆ. ಕಾದಂಬರಿಯ ಪೂರ್ಣಭಾಗ ಚಿಮ್ನಿ ಎಂಬ ಬಡ ಹೆಣ್ಣು ಮಗಳ ಕಥೆಯೇ ಆಗಿದ್ದೂ ಆಕೆಯ ಸರಳತೆ, ಸಜ್ಜನಿಕೆ, ಪ್ರಮಾಣಿಕತೆ, ಸೌಮ್ಯತೆ, ದುಡಿಮೆಯಲ್ಲಿನ ಶ್ರದ್ಧೆ, ನಂಬಿಕೆ ಎಲ್ಲವೂ ತಾಂಡದೊಳಗೆ ಮತ್ತು ಹೊರಗೆ ಮನೆ ಮಾತಾಗಿರುವುದರ ಬಗ್ಗೆ ಚರ್ಚಿಸಲಾಗಿದೆ. ತಮ್ಮ ಬುಡಕಟ್ಟಿನ ಕಷ್ಟ–ಕಾರ್ಪಣ್ಯಗಳನ್ನು ಸಮುದಾಯದ ನೆಲೆಯಲ್ಲಿ ಸಾಂಸ್ಕೃತಿಕ ಕಾದಂಬರಿಯ ಮೂಲಕ ಕಟ್ಟುವ ಕೆಲಸ ಮಾಡಿದ್ದಾರೆ. ಲಮಾಣಿ ಸಮಾಜವು ಮಹಿಳೆಯರನ್ನು ನೆಡೆಸಿಕೊಳ್ಳುವ ರೀತಿ, ಮೂಢನಂಬಿಕೆಗಳ ವರ್ಣನೆ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಕಾದಂಬರಿಯ

ಜೀವಾಳವೇ ಚಿಮ್ನಿ ಮತ್ತು ಆಕೆಯ ಬದುಕಾಗಿರುವುದರಿಂದ ಉಳಿದೆಲ್ಲಾ ಅಂಶಗಳು ಗೌಣವಾಗಿ ಕಾಣಿಸುತ್ತವೆ.

'ಲಮಾಣಿ ಸಂಸ್ಕೃತಿ' ಲಮಾಣಿಗರ ಆಚರಣೆ, ರೂಢಿ-ಸಂಪ್ರದಾಯಗಳನ್ನು ಕಾದಂಬರಿಯ ಜೊತೆ-ಜೊತೆಯಲ್ಲಿ ತಂದಿದ್ದು ಹಾಲಿಗೆ ಜೇನಿನ ಮಿಶ್ರಣವಾದಂತೆ ಹೊಂದಿಕೊಂಡಿದೆ. ದೀಪಾವಳಿ, ಮದುವೆ ಸಮಾರಂಭವನ್ನು ಲಮಾಣಿಗರು ಹಿಂದೂ ಸಂಪ್ರದಾಯಕ್ಕೆ ವಿಭಿನ್ನವಾಗಿ ಮತ್ತು ವಿಶೇಷತೆಗಳೊಂದಿಗೆ ಆಚರಿಸಿಕೊಂಡು ಬಂದಿದ್ದಾರೆ. ಲಮಾಣಿ ಸಂಸ್ಕೃತಿಯಲ್ಲಿ ದೀಪಾವಳಿ ಹಬ್ಬಕ್ಕೆ ವಿಶೇಷವಾದ ಸ್ಥಾನ ನೀಡಲಾಗಿದೆ. ಈ ಹಬ್ಬವನ್ನು ಲಮಾಣಿಗರು ಮೂರು ದಿನಗಳ ಕಾಲ ತುಂಬಾ ಶ್ರದ್ಧೆ ಮತ್ತು ಭಕ್ತಿಯಿಂದ ಕೈಗೊಳ್ಳುತ್ತಾರೆ. ಗುರೂಜಿ, ಹನುಮಾಜಿ ಮತ್ತು ಬಾಲಾಜಿ ದೇವತೆಗಳನ್ನು ಪೂಜಿಸುತ್ತಾರೆ. ದೀಪಾವಳಿ ಹಬ್ಬದ ಕಡೆಯ ದಿನ ಮಾತೃ-ಪಿತೃಗಳಿಗೆ ಪೂಜೆಸಲ್ಲಿಸುತ್ತಾರೆ. ತಾಂಡದ ಹುಡುಗರು-ಹುಡುಗಿಯರು ತಾಂಡದೇವಸ್ಥಾನದ ಮುಂದೆ ಗುಂಪು ಕಟ್ಟಿ ಕುಣಿಯುವುದು ರೂಢಿ ಸಂಪ್ರದಾಯ ಒಳಗೊಂಡಿರುವುದನ್ನು ಲಂಬಾಣಿ ಸಂಸ್ಕೃತಿಯ ಜಾನಪದ ಆಚರಣೆಯನ್ನು ಬಳಸಿಕೊಂಡಿರುವುದು ಕಾದಂಬರಿಗೆ ಒಂದು ವಿಶಿಷ್ಟತೆಯನ್ನು ತಂದು ಕೊಟ್ಟಿದೆ.

ಮದುವೆ ಸಮಾರಂಭಗಳಲ್ಲಿಯೂ ಸಹ ಹಿಂದೂ ಧರ್ಮದ ಆಚರಣೆಗೆ ಅನುಸಾರವಾಗಿ ವಿಭಿನ್ನ ರೀತಿಯ ಪದ್ಧತಿ ಹೊಂದಿದ್ದಾರೆ. ಲಮಾಣಿಗರು ಹೆಣ್ಣಿನ ಕುಲಕ್ಕೆ ಸಂಬಂಧಿಸಿದಂತೆ ತೆರೆ ಕೊಡುವ ಪದ್ಧತಿ, ಎತ್ತಿನ ಮೇಲೆ ವಧು ನಿಲ್ಲಿಸಿ ತವರು ಮನೆಯನ್ನು ಹರಸುವ ಆಚರಣೆಗಳು, ಮಡಿಕೆಕಟ್ಟುವುದು, ಹುಡುಗನ ಜುಟ್ಟಿಂದ ಬೀಳುವ ನೀರನ್ನಾ ಹುಡುಗಿ ತಾಯಿ ಕೂಡಿಯುವುದು ಮತ್ತು ಮಣ್ಣಿನತಟ್ಟೆಯನ್ನು ಜೋರಾಗಿ ಕಾಲಡಿಗೆ ಒಯ್ಯುವುದು ಇನ್ನೂ ಹಲವಾರು ಆಚರಣೆಗಳು ಲಮಾಣಿಗರಲ್ಲಿದೆ. ಕಾದಂಬರಿ ಮುಂದುವರಿದಂತೆ ಆಧುನಿಕತೆಗೆ ಒಗ್ಗಿಕೊಂಡಂತೆ ರಚನೆಯಾಗಿದ್ದು ಸ್ಥಳೀಯ ಮಿಷನರಿಗಳ ಶಿಕ್ಷಣದ ಪ್ರಭಾವದಿಂದ ಅಕ್ಷರಜ್ಞಾನ ಪಡೆದ ಮಂಗ್ಲ್ಯಾನ ನಾಲ್ಕು ಜನ ಹೆಣ್ಣು ಮಕ್ಕಳು ಮದುವೆಯಾಗದ ಕಾರಣ ಆಸ್ತಿಯಲ್ಲಿ ಪಾಲುಬೇಕೆಂದು ಕೋರ್ಟನಲ್ಲಿ ಧಾವೆ ಹಾಕಿದ್ದು ಹೊಸತನಕ್ಕೆ ಕನ್ನಡಿ ಹಿಡಿದಂತಿದೆ.

'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಯ ಭಾಷೆ ಮತ್ತು ಶೈಲಿ, ಕಾದಂಬರಿಯ ಸಂಪೂರ್ಣ ಭಾಗ ಉತ್ತರ ಕರ್ನಾಟಕದ ದಾವಣಗೆರೆ, ಹರಿಹರ, ಹರಪನಹಳ್ಳಿ ಭಾಗದ ಸುತ್ತ-ಮುತ್ತಲಿನ ಪ್ರದೇಶಗಳ ಪ್ರದೇಶಿಕ ಭಾಷೆಯ ಜೊತೆಗೆ ಲಮಾಣಿ ಬುಡಕಟ್ಟಿನ ಭಾಷೆಯು ಬೇರೆತು ರೂಪುಗೊಂಡಿದೆ. ಈ ಕಾದಂಬರಿಯಲ್ಲಿ ಲೇಖಕ ಪ್ಲಾಶ್‌ಬ್ಯಾಕ್ ತಂತ್ರವನ್ನು ಅಳವಡಿಸಿಕೊಳ್ಳುವ ಮೂಲಕ ನಿರೂಪಣೆಗೆ ಕುಂದು ಬರದಂತೆ ವಿವರಿಸಿದ್ದಾರೆ.

ಇಲ್ಲಿರುವ ಮತ್ತೊಂದು ತಂತ್ರ ಎಂದರೆ ನಾಟಕದಲ್ಲಿ ಪಾತ್ರಧಾರಿಯ ಪರಿಚಯ ಮಾಡಿಕೊಡಲು ಸೂತ್ರಧಾರಿ ಇರುವಂತೆ ಕಾದಂಬರಿಯ ಕಥನವನ್ನು ನಿರೂಪಿಸಲು ನಾಯಕಿ ಚಿಮ್ನಿಯ ದೊಡ್ಡಪ್ಪನ ಮಗ ಚಿನ್ನಾನಾಯ್ಕನನ್ನು ಸೂತ್ರಧಾರಿಯಂತೆ ಲೇಖಕರು ಕಾದಂಬರಿಯಲ್ಲಿ ಬಳಸಿಕೊಂಡಿದ್ದಾರೆ.

'ಲಮಾಣಿ ಚಿಮ್ನಿ ಆತ್ಮಚರಿತೆ' ಕಾದಂಬರಿಯು ಹೆಸರಿಗೆ ತಕ್ಕಂತೆ ಲಮಾಣಿ ಬುಡಕಟ್ಟಿನ ಬಡ ಹೆಣ್ಣು ಮಗಳು ಚಿಮ್ನಿಯ ಆತ್ಮಚರಿತೆಯಾಗಿದೆ. ಲಂಬಾಣಿಗರ ಸಂಸ್ಕೃತಿಯ ಜೊತೆ ಜೊತೆಯಲ್ಲಿ ಮೇಲ್ವರ್ಗದ ಸಮುದಾಯದ ಶೋಷಣೆಯ ಕೇಂದ್ರವನ್ನಾಗಿ ಸೂಚಿಸಲಾಗಿದೆ. ಗ್ರಾಮೀಣದಿಂದ ಆರಂಭಗೊಂಡು ಆಧುನಿಕತೆಯ ಸ್ಪರ್ಶದೊಂದಿಗೆ ಮುಕ್ತಾಯಗೊಳ್ಳುವುದರಿಂದ ಪೂರ್ವ ಮತ್ತು ಉತ್ತರದ ಕಲ್ಪನೆ ಕಾದಂಬರಿಯಲ್ಲಿದೆ. ಈ ಕಾದಂಬರಿಗೆ ಮುನ್ನುಡಿ, ಬೆನ್ನುಡಿ ಎರಡನ್ನು ಲೇಖಕರೇ ನೀಡಿರುವುದು ಕಾದಂಬರಿಯಲ್ಲಿ ಲಮಾಣಿ ಜೀವನ ಕ್ರಮವನ್ನು ವಿಶಿಷ್ಟವಾಗಿ ಅರ್ಥೈಸಿದ್ದಾರೆ. ಒಟ್ಟಾರೆಯಾಗಿ ಕಾದಂಬರಿ ಸಮುದಾಯ ಕೇಂದ್ರಿತ ನೆಲೆಯಿಂದ ಕೂಡಿದ್ದು ಒಬ್ಬ ಬಡ ಹೆಣ್ಣು ಮಗಳ ಜೀವನದ ಹೋರಣವಾಗಿದೆ. ಒಂದು ಉತ್ತಮ ಕಾದಂಬರಿಯಲ್ಲಿ ಇರಬೇಕಾಗಿರುವ ಎಲ್ಲ ರೀತಿಯ ತಾತ್ವಿಕತೆಗಳನ್ನು ಕಟ್ಟುವ ಪ್ರಯತ್ನ ಮಾಡಿದ್ದಾರೆ.

ಗ್ರಂಥ ಋಣ

1. ಲಮಾಣಿ ಚಿಮ್ನಿಆತ್ಮಚರಿತೆ– ಡಾ.ಶಿರನಹಳ್ಳಿ ಶಾಂತನಾಯ್ಕ
2. ಲಂಬಾಣಿ ಸಂಸ್ಕೃತಿ – ಡಾ ಸಣ್ಣರಾಮ
3. ಕರ್ನಾಟಕದ ಬುಡಕಟ್ಟಿನ ಲಂಬಾಣಿಗಳು * ಡಾ. ಪಿ.ಕೆ.ಖಂಡೋಬಾ
4. ದಲಿತ ಸಂವೇದನೆ–ಅಪ್ಪಗೆರೆ ಸೋಮಶೇಖರ್

ಪವನ್ ಕುಮಾರ್, ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ, ಬೆಂಗಳೂರು–560 104
ಮೊ: 8123443209

ಶಾಂತ ನಾಯ್ಕ್ ರ ಗುಡ್ಡಜ್ಜನ ಕಥಾ ಸಂಕಲನದಲ್ಲಿ ಆಯ್ದ ಕಥೆಗಳ ವಿಶ್ಲೇಷಣೆ

ಹಡಪದ ವಿಷ್ಣು

ಒಬ್ಬ ವ್ಯಕ್ತಿ ಸಮಾಜದ ಚಟುವಟಿಕೆಯಲ್ಲಿ ತೊಡಗಿಸಿ ಕೊಂಡಾಗ ಆತನು ಯಶಸ್ಸು ಸಾಧಿಸಲು ಸಾಧ್ಯ ಸಮಾಜಮುಖಿಯಾಗಿ ಕೆಲಸ ಮಾಡುವವರು ಜಗತ್ತಿನಲ್ಲಿ ಎಲ್ಲಿ ಬೇಕಾದರೂ ಜೀವಿಸಬಲ್ಲರು ಮನುಷ್ಯ ತಾನು ಬದುಕಲು ಪ್ರಯತ್ನಿಸುತ್ತಿರುವಾಗ ಪರ ಮತ್ತು ವಿರೋಧಗಳು ಸದಾ ತಾಂಡವವನ್ನಾಡುತ್ತಿರುತ್ತವೆ ಅವುಗಳನ್ನ ಎದುರಿಸಿ ಅರ್ಥೈಸಿಕೊಂಡು ಸತತ ಪ್ರಯತ್ನಗಳ ಸಾಧನೆಯೇ ಬದುಕನ್ನ ಕಟ್ಟಿ ಕೊಡಲು ಸಾಧ್ಯ ಶಾಂತ ನಾಯ್ಕ್ ರ ಗುಡ್ಡಜ್ಜನ ಕಥಾ ಸಂಕಲನದಲ್ಲಿ ಆಯ್ದ ಕಥೆಗಳ ವಿಶ್ಲೇಷಣೆ *

ಡಾ. ಶಿರಗನಹಳ್ಳಿ ಶಾಂತ ನಾಯ್ಕ್ ಎನ್. ಇವರು ಮೂಲತಹ ಬಳ್ಳಾರಿ ಜಿಲ್ಲೆಯವರಾಗಿದ್ದು ಹರಪನಹಳ್ಳಿ ತಾಲೂಕಿನ ಶಿರಾಗಾನಹಳ್ಳಿ ಎಂಬ ತಾಂಡದಲ್ಲಿ 1 ಜನವರಿ 1965 ರಂದು ಜನಿಸಿದರು ತಂದೆ ಗಂಗ್ಯಾ ನಾಯ್ಕ್ ಅಲಿಯಾಸ್ ನಾಗ್ಯನಾಯ್ಕ ತಾಯಿ ಕೇಳಿಬಾಯಿ ಇವರ ಪ್ರೀತಿಯ ಮಗನಾಗಿದ್ದರೂ ಶಾಂತನಾಯ್ಕ್ ರವರು ಅತ್ಯಂತ ಹಿಂದುಳಿದ ಭಾರತದ ದೊಡ್ಡ ಬುಡಕಟ್ಟು ಸಮುದಾಯವಾದ ಬಂಜಾರ(ಲಂಬಾಣಿ) ಸಮುದಾಯಕ್ಕೆ ಸೇರಿದವರಾಗಿದ್ದು ಆ ಸಮುದಾಯದ ಆಚರಣೆ ಸಂಸ್ಕೃತಿಯನ್ನು ಅಲ್ಲಿನ ವಿಶೇಷತೆಗಳನ್ನು ಬರವಣಿಗೆಯ ಮೂಲಕ ಪ್ರಪಂಚಕ್ಕೆ ಪರಿಚಯಿಸುವಲ್ಲಿ ಯಶಸ್ಸು ಕಂಡರು ಅವರ ಕಥೆಗಳು ಕವನಸಂಕಲನಗಳು ಕಾದಂಬರಿ ನಾಟಕ ಸಾಹಿತ್ಯ ಹಾಗೂ ಪ್ರಬಂಧಗಳು ಓದುಗರ ಗಮನವನ್ನು ಸೆಳೆಯುತ್ತವೆ ಇವರು ತಮ್ಮ ಪುಸ್ತಕ ಬರವಣಿಗೆಯಲ್ಲಿ ಬಳಸುವಂತಹ ಭಾಷೆ ಹಳ್ಳಿಗಳ ನೈಜ ಸಂಭಾಷಣೆ ಯಾಗಿದೆ ಸಾಮಾನ್ಯ ಜನರ ಬದುಕು ಮತ್ತು ಬಡವರ ಕಷ್ಟ ಜೀವನವನ್ನು ಪುಸ್ತಕರೂಪದಲ್ಲಿ ಜನರಿಗೆ ಪರಿಚಯಿಸಿದರು ಅವರ ಕಥೆ ಕಾದಂಬರಿ ಮತ್ತು ನಾಟಕಗಳು ಸಾಮಾನ್ಯ ಜನರಿಗೆ ತುಂಬಾ ಹತ್ತಿರವಾಗುತ್ತವೆ ಏಕೆಂದರೆ ಅವು ಎಲ್ಲರ ಜೀವನದಲ್ಲಿ ಬಂದು

ಹೋದಂತಹ ಘಟನೆಗಳಾಗಿವೆ. ಇವರ ಕಥೆಗಳನ್ನು ಓದಿದಾಗ ನನಗೆ ಅನಿಸಿದ್ದು ಇವರ ವಸ್ತುವಿನ ಆಯ್ಕೆಯಲ್ಲಿ ಸರಳತೆ ಕಾಣುತ್ತದೆ ಸಾಮಾನ್ಯ ಜನರಿಗೆ ಆಗುವ ಅನ್ಯಾಯ ಕುರಿತು ಇವರ ಆಕ್ರೋಶ ಇವರ ಬರವಣಿಗೆಯಲ್ಲಿ ಕಾಣುತ್ತದೆ ಇವರು ರಚಿಸಿರುವಂತಹ ಗುಡ್ಡಜ್ಜ ಎಂಬ ಕಥಾ ಸಂಕಲನದ ಎಲ್ಲಾ ಕಥೆಗಳು ಪ್ರತಿಯೊಬ್ಬರಿಗೂ ತುಂಬಾ ಹತ್ತಿರವಾಗುತ್ತದೆ

ಶಾಂತ ನಾಯ್ಕರವರು ಪುಸ್ತಕದಲ್ಲಿ ಬಳಸುವಂತಹ ಭಾಷೆ ತುಂಬಾ ವಿಶೇಷವಾದದ್ದು ಒಂದು ಬಾರಿ ಪುಸ್ತಕವನ್ನು ಓದಿದಾಗ ಅರ್ಥವಾದಂತೆ ಕಾಣುತ್ತದೆ ಆದರೆ ಅಷ್ಟು ಬೇಗ ಅರ್ಥವಾಗುವುದಿಲ್ಲ ಅದನ್ನು ಸೂಕ್ಷ್ಮವಾಗಿ ಪ್ರತಿಯೊಂದು ಪದವನ್ನು ಅರ್ಥೈಸಿ ಕೊಂಡು ಓದಿದಾಗ ಮಾತ್ರ ಅಲ್ಲಿನ ಭಾಷೆಯ ನಿಘಂಟು ಎಷ್ಟು ಬಲಿಷ್ಠವಾಗಿದೆ ಎಂಬುದು ನಮಗೆ ಗೊತ್ತಾಗುತ್ತದೆ ಮತ್ತು ಅದನ್ನು ನಾವು ಮನಸ್ಸು ಕೊಟ್ಟು ಓದಿದಾಗ ಅರ್ಥವಾಗುತ್ತದೆ ಅಂದರೆ ಅವರ ಪುಸ್ತಕಗಳನ್ನು ಅರ್ಥಮಾಡಿಕೊಳ್ಳಲು ಭಾಷೆಯ ನಿಘಂಟಿನ ಮೇಲೆ ಜ್ಞಾನ ಇದ್ದವರಿಗೆ ಮಾತ್ರ ಬೇಗ ಅರ್ಥವಾಗುತ್ತದೆ ಇಲ್ಲವಾದರೆ ಸ್ವಲ್ಪ ತಲೆ ಕೆಡಿಸುತ್ತದೆ ಎಂಬುದು ನನ್ನ ಅಭಿಪ್ರಾಯ.

ಬೀದರ ಮತ್ತು ಛತ್ರ ದೂಟ

ಇವರು ರಚಿಸಿದ ಗುಡ್ಡಜ್ಜ ಎಂಬ ಕಥಾ ಸಂಕಲನವನ್ನು ನಾನು ಆಯ್ಕೆ ಮಾಡಿಕೊಂಡು ಓದಲು ಪ್ರಾರಂಭಿಸಿದಾಗ ಬಿದರ ಮತ್ತು ಛತ್ರ ದೂಟ ಎಂಬ ಕಥೆ ತುಂಬಾ ಆಸಕ್ತಿಯನ್ನು ಹುಟ್ಟಿಸಿತು ಏಕೆಂದರೆ ಬಿದರನ ಕಥೆ ನನ್ನ ಜೀವನದಲ್ಲಿ ಒಂದು ದಿನ ಬಂದಿತ್ತು ಆದರೆ ಸ್ವಲ್ಪ ವ್ಯತ್ಯಾಸವಿದೆ ಶಾಲೆಯಲ್ಲಿರುವ ಶಿಕ್ಷಕರಿಗೆ ಹೆದರಿದರೆ ನಾನು ಮಾತ್ರ ನನ್ನ ಮನೆಯಲ್ಲಿರುವ ಮಾಮನಿಗೆ ಹೆದರುತ್ತಿದ್ದೆ. ಬಿದರನ ಕಥೆ ಏನೆಂದರೆ ಬಿದರ ಮತ್ತು ಡಿಂಗ,ಬೊಮ್ಮ ಈ ಮೂವರು ಬಡ ಕುಟುಂಬದಿಂದ ಬಂದವರು ಪ್ರತಿದಿನ ತಿನ್ನಲು ಅನ್ನ ಸಿಗುತಿತಲ್ಲಿಲ್ಲ ಹಾಸ್ಟೆಲ್ ನಲ್ಲಿ ಇವರಿಗೆ ಗಂಜಿಯನ್ನು ಕೊಡುತ್ತಿದ್ದರು ಇವರಿಗೆ ರೊಟ್ಟಿ ಸಿಗುವುದು ಯಾರಾದರೂ ಕೊಟ್ಟಾಗ ಮಾತ್ರ ಇವರು ಹಾಸ್ಟೆಲ್ ನಲ್ಲಿ ಇದ್ದು ತಮ್ಮ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು ಇವರಿಗೆ ಪ್ರತಿದಿನ ಹಾಸ್ಟೆಲ್‌ನಲ್ಲಿ ಗಂಜಿಯನ್ನು ನೀಡಲಾಗುತ್ತಿತ್ತು ವಾರಕ್ಕೆ ಒಂದು ದಿನ ಮಾತ್ರ ಅನ್ನವನ್ನಿಡುತ್ತಿದ್ದರು. ಇವರಿಗೆ ಸಿಹಿ ತಿಂಡಿಗಳನ್ನು ತಿನ್ನುವ ಆಸೆ ಇತ್ತು ಅದಕ್ಕಾಗಿ ಒಂದು ದಿನ ಪಕ್ಕದಲ್ಲಿ ಇರುವ ಛತ್ರದಲ್ಲಿ ಮದುವೆ ಇರುವ ಸುದ್ದಿ ಕೇಳಿ ಈ ಮೂವರು ಊಟಕ್ಕೆಂದು ಅಲ್ಲಿಗೆ ಹೋಗುತ್ತಾರೆ ಅಲ್ಲಿ ತಯಾರಾಗುತ್ತಿರುವ ಬಿಸಿ ಬಿಸಿ ಸಿಹಿ ಊಟವನ್ನು ನೋಡಿ ಬಾಯಲ್ಲಿ ನೀರು ಬರಿಸಿಕೊಂಡು ಇವತ್ತು ಹೇಗಾದರೂ ಮಾಡಿ ಊಟವನ್ನು ಸವಿಯಲೇಬೇಕು ಎಂಬ ಆಸೆಯಿಂದ ಇರುತ್ತಾರೆ ಇನ್ನೇನು ಊಟವನ್ನು ಸವಿಯಲೇಬೇಕು ಎನ್ನುವಷ್ಟರಲ್ಲಿ ಶಾಲೆಯ ಶಿಕ್ಷಕರನ್ನು ನೋಡಿ ಅವರು

ಬಂದಿರುವುದು ಗೊತ್ತಾಗುತ್ತೆನೋ ಎಂಬ ಆಲೋಚನೆಯಲ್ಲಿ ಬೀಳುತ್ತಾರೆ ಈ ವಿಷಯ ಶಿಕ್ಷಕರಿಗೆ ಗೊತ್ತಾಗುತ್ತಾ ಅಥವಾ ಇಲ್ಲವಾ ಎಂಬುದು ಇದರ ಕಥೆಯಾಗಿದ್ದು ಮುಂದೆ ಏನಾಗುತ್ತದೆ ಎಂಬುದು ಆಸಕ್ತಿಕರ ವಿಷಯವಾಗಿದೆ ಈ ಮಕ್ಕಳ ಕುಟುಂಬವನ್ನು ಮತ್ತು ಅವರ ಕಷ್ಟ ಏನು ಎಂಬುದು ಇದರ ಕಥೆಯಾಗಿದೆ

ಲೇಖಕರು ಈ ಕಥೆಯಲ್ಲಿ ಮಕ್ಕಳ ಸ್ವಭಾವ ಮತ್ತು ಅವರ ಭಯ ಮತ್ತು ಮುಗ್ಧತೆಯನ್ನು ತುಂಬಾ ಅಚ್ಚುಕಟ್ಟಾಗಿ ವಿವರಿಸಿದ್ದಾರೆ ಹಳ್ಳಿಯ ಶಾಲೆಗಳಲ್ಲಿ ಮಕ್ಕಳು ಯಾವ ರೀತಿ ಇರುತ್ತಾರೆ ಮತ್ತು ಅವರ ಮನಸ್ಥಿತಿ ಏನು ಎಂಬುದನ್ನು ಹೇಳುತ್ತಾ ಬಡ ಮಕ್ಕಳ ಶಾಲಾ ಹಾಸ್ಟೆಲ್ ಜೀವನವನ್ನು ಕುರಿತು ಈ ಕಥೆಯಲ್ಲಿ ಓದುಗರಿಗೆ ಇಷ್ಟವಾಗುವಂತೆ ಹೇಳಲು ಹೊರಟಿದ್ದಾರೆ

ಈ ಕಥೆಯನ್ನು ಓದುತ್ತಿರುವ ಸಮಯದಲ್ಲಿ ನನಗೆ ನನ್ನ ಬಾಲ್ಯದ ನೆನಪು ಮತ್ತೆ ಮರುಕಳಿಸುತ್ತಿತ್ತು ಏಕೆಂದರೆ ನಾವು ಸಹ ಚಿಕ್ಕವರಿದ್ದಾಗ ಮದುವೆಯ ಛತ್ರಕ್ಕೆ ಹೋಗಿ ಕಳ್ಳತನದಿಂದ ಊಟಮಾಡಿ ಬರುತ್ತಿದ್ದೆವು ಹಾಗೆ ಹೋಗಿದ್ದಾಗ ನಮ್ಮ ಭಯ ಜಾಸ್ತಿ ಏಕೆಂದರೆ ಯಾರಾದರೂ ನೋಡಿ ಮನೆಯಲ್ಲಿ ಅಥವಾ ಶಾಲೆಯಲ್ಲಿ ಹೇಳಿ ಬಿಡುತ್ತಾರೆ ಎನ್ನುವ ಭಯದಿಂದ ನಾವು ಇರುತ್ತಿದ್ದೆವು ಅದೇರೀತಿ ಈ ಕಥೆಯಲ್ಲಿ ಬರುವ ಬೀದರನ ಪಾತ್ರದಂತೆ ಈ ಕಥೆಯೂ ಸಹ ಓದುಗರಲ್ಲಿ ಆಸಕ್ತಿ ಹುಟ್ಟಿಸಿ ಓದಿದ ಮೇಲೆ ಬೀದರನ ಮೇಲೆ ಪ್ರೀತಿ ಹುಟ್ಟಿಸುತ್ತದೆ ಎಂದು ಹೇಳಬಹುದು ಈ ಕಥೆ ಮಕ್ಕಳ ಬಾಲ್ಯದ ಕ್ಷಣಗಳನ್ನು ಕುರಿತು ಹೇಳುತ್ತದೆ

ಬಿದರನ ಕಿತ್ತುತಿನ್ನುವ ಬಡತನದಲ್ಲೂ ವಿದ್ಯಾಭ್ಯಾಸದ ಮೇಲಿರುವ ಹಠ ಡಿಂಗ, ಬಿದರ, ಬೊಮ್ಮರ ಸ್ನೇಹ ಮತ್ತು ಬಡವರ ನೋವನ್ನು ಇವರ ಪಾತ್ರದೊಳಗಿನ ಮುಗ್ಧತೆಯನ್ನು ಬಹಳ ಅಚ್ಚುಕಟ್ಟಾಗಿ ವಿವರಿಸಿದ್ದಾರೆ.

ಕಮ್ಲಿಯ ಕಳವಳದ ಕ್ಷಣಗಳು

ಪ್ರತಿಯೊಬ್ಬರಲ್ಲಿ ಕಳವಳದ ಕ್ಷಣಗಳು ಇದ್ದೇ ಇರುತ್ತವೆ ಅದರಲ್ಲೂ ಹೆಣ್ಣಿನ ಜೀವನದಲ್ಲಿ ಹೆಚ್ಚಾಗಿ ಕಂಡುಬರುತ್ತವೆ ಒಂದು ಹೆಣ್ಣನ್ನು ಸಮಾಜ ಯಾವ ರೀತಿ ನೋಡುತ್ತದೆ ಅವರಿಗೆ ಸಿಗುವಂತ ಗೌರವ ಎಂಥದ್ದು ಎನ್ನುವ ಕಥಾಹಂದರವನ್ನು ಶಾಂತ ನಾಯ್ಕರವರು ಕಮ್ಲಿಯ ಕಳವಳದ ಕ್ಷಣಗಳು ಎಂಬ ಕಥೆಯಲ್ಲಿ ವಿವರಿಸಿದ್ದಾರೆ. ಒಂದು ಹೆಣ್ಣಿಗೆ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡುತ್ತಾರೆ ಅವಳಿಗೆ ಮಕ್ಕಳು ಹುಟ್ಟುತ್ತಾಳೆ ಕೆಲವು ದಿನ ಕಳೆದ ಮೇಲೆ ಗಂಡ ಸತ್ತು ಹೋಗುತ್ತಾನೆ ಗಂಡನಿಲ್ಲದೆ ಸಮಾಜದಲ್ಲಿ ಜೀವನ ಮಾಡುವುದು ಬಹಳ ಕಷ್ಟ ಏಕೆಂದರೆ ಊರಿನ ಗಂಡಸರೆಲ್ಲರೂ ಹದ್ದಿನ ಹಾಗೆ

ಹೆಣ್ಣನ್ನು ಕುಕ್ಕುವ ಹಾಗೆ ನೋಡುತ್ತಾರೆ ಮತ್ತು ಊರಿನಲ್ಲಿ ಕೆಲವರಿಂದ ಹೆದರಿಕೆಯ ಜೀವನವನ್ನು ನಡೆಸ ಬೇಕಾಗುವ ಸಂದರ್ಭಗಳು ಜಾಸ್ತಿ ಬರುತ್ತವೆ ಇವೆಲ್ಲವನ್ನೂ ಎದುರಿಸಿ ಜೀವನ ಸಾಗಿಸುತ್ತಿದ್ದಳು ಕಮ್ಲಿ.

ಕಮ್ಲಿ ಈಕೆ ತುಂಬಾ ಧೈರ್ಯಶಾಲಿ ಚಿನ್ಯ, ನಾಗ, ಭರಮನ ಗೌಡರಂತಹ ಆಸೆಬುರುಕರು ಕಣ್ಣು ಬಿದ್ದರೂ ಧೈರ್ಯದಿಂದ ಅವರೆಲ್ಲರನ್ನು ಎದುರಿಸಿ ಜೀವನವನ್ನು ನಡೆಸುತ್ತಿದ್ದಳು ಒಂದು ದಿನ ಕಮ್ಲಿಯ ಹಿರಿ ಮಗನಿಗೆ ಹುಷಾರಿಲ್ಲದೆ ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಅವನನ್ನು ಯಾವ ರೀತಿ ಕಮ್ಲಿ ರಕ್ಷಿಸಿಕೊಳ್ಳುತ್ತಾರೆ ಅಥವಾ ರಕ್ಷಿಸಿ ಕೊಳ್ಳುವುದಿಲ್ಲ ಎಂಬ ಆಸಕ್ತಿಕರ ವಿಷಯಗಳನ್ನು ಈ ಕತೆ ಒಳಗೊಂಡಿದೆ.

ನಾಟಕಕಾರರು ಒಂದು ಸ್ತ್ರೀಗೆ ಚಿಕ್ಕವಯಸ್ಸಿನಲ್ಲಿ ಮದುವೆ ಮಾಡಬಾರದು ಒಂದು ವೇಳೆ ಮಾಡಿದರೆ ಚಿಕ್ಕವಯಸ್ಸಿನಲ್ಲಿ ಗಂಡ ಸತ್ತು ಹೋದರೆ ಅವಳು ವಿಧವೆಯಾಗಿ ಹೇಗೆ ಜೀವನವನ್ನು ನಡೆಸುತ್ತಾರೆ ಮತ್ತು ಆ ಹೆಣ್ಣಿಗೆ ಸಮಾಜದಲ್ಲಿ ಸಿಗುವ ಗೌರವ ಎಂಥದ್ದು ಮತ್ತು ಸಮಾಜದ ಜನರು ಯಾವ ದೃಷ್ಟಿಯಿಂದ ಹೆಣ್ಣನ್ನು ನೋಡುತ್ತಾರೆ ಎಂಬ ವಿಷಯವನ್ನು ಕುರಿತು ಲೇಖಕರು ಕಮ್ಲಿಯ ಕಳವಳದ ಕ್ಷಣಗಳು ಎಂಬ ಕಥೆಯಲ್ಲಿ ಹೇಳಲು ಹೊರಟಿದ್ದಾರೆ ಎಂದು ಹೇಳಬಹುದು. ನಾನು ಈ ಕತೆಯನ್ನು ಓದುತ್ತಾ ಇರುವ ಸಂದರ್ಭದಲ್ಲಿ ಚಂದ್ರಶೇಖರ ಕಂಬಾರರ ಸಂಗ್ಯಾ ಬಾಳ್ಯಾ ನಾಟಕ ಮತ್ತು ದೇವನೂರು ಮಹಾದೇವನವರ ಕುಸುಮಬಾಲೆ ಎಂಬ ಕೃತಿ ನೆನಪಾಯಿತು ಏಕೆಂದರೆ ಇವುಗಳಲ್ಲಿ ಸಂಗ್ಯಾಬಾಳ್ಯ ಎಂಬ ನಾಟಕದಲ್ಲಿ ಊರಿನ ಶ್ರೀಮಂತ ವ್ಯಕ್ತಿಯಾದ ಸಂಗ್ಯಾ ಗಂಗಿ ಎನ್ನುವ ಮದುವೆಯಾದ ಸ್ತ್ರೀಯ ಮೇಲೆ ಮೋಹಕ್ಕೆ ಒಳಗಾಗುತ್ತಾನೆ ಆಕೆಯನ್ನು ಹೇಗಾದರೂ ಮಾಡಿ ಪಡೆಯಬೇಕು ಎಂಬ ಆಸೆಯಿಂದ ಸಂಗ್ಯಾನ ಜೊತೆ ಸೇರಿಕೊಂಡು ಗಂಗಿಯ ಮನೆಯ ಪಕ್ಕದಲ್ಲಿರುವ ಒಬ್ಬ ಮುದುಕಿಗೆ ಹಣಕೊಟ್ಟು ಗಂಗೆಯನ್ನು ಮೋಸದಿಂದ ಬಲೆಗೆ ಬೀಳಿಸಿ ಕೊಳ್ಳುತ್ತಾರೆ. ಆದರೆ ಕಮ್ಲಿಯ ಕಥೆಯಲ್ಲಿ ಕಮ್ಲಿಯ ಅತ್ತೆ ಮತ್ತು ಗೌಡರು ಸೇರಿ ಕಮ್ಲಿಯ ಮಗನ ಅನಾರೋಗ್ಯವನ್ನು ಮುಂದಿಟ್ಟುಕೊಂಡು ಆಸೆಯನ್ನು ಈಡೇರಿಸಿಕೊಳ್ಳು ತ್ತಾನೆ ಬರಮನ ಗೌಡ ಇದೇ ರೀತಿಯಾಗಿ ದೇವನೂರು ಮಹಾದೇವ ನವರು ರಚಿಸಿರುವಂತಹ ಕುಸುಮಬಾಲೆ ಎಂಬ ಕೃತಿಯಲ್ಲಿ ಸಹ ಬರುತ್ತದೆ ಇವೆರಡರಲ್ಲಿ ಒಂದನ್ನೊಂದು ಹೋಲುವ ಅಂಶಗಳು ಹೆಚ್ಚಾಗಿ ಕಂಡುಬರುತ್ತವೆ. ಒಟ್ಟಾರೆಯಾಗಿ ಹೇಳುವುದಾದರೆ ಶಾಂತ ನಾಯ್ಕರವರು ಕಮ್ಲಿಯ ಕಳವಳದ ಕ್ಷಣಗಳು ಎಂಬ ಕಥೆಯಲ್ಲಿ ಮೊದಲಿಗೆ ಓದುಗರಲ್ಲಿ ಆಸಕ್ತಿ ಯನ್ನು ಹೆಚ್ಚಿಸಿ ಕಥೆಯ ಅಂತ್ಯದಲ್ಲಿ ಕಣ್ಣೀರನ್ನು ತರಿಸುತ್ತಾರೆ ಸ್ತ್ರೀಯರ ಮೇಲೆ ಇರುವ ಗೌರವವನ್ನು ಹೆಚ್ಚಿಸಿದ್ದಾರೆ ಎಂದು ಹೇಳಬಹುದು.

ಶಾಂತ ನಾಯ್ಕ್ ರವರು ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ ಎಂದು ನನಗನ್ನಿಸುತ್ತದೆ ಹಿಂದುಳಿದವರ್ಗದ ಸ್ತ್ರೀ ಯವರು ಯಾವ ರೀತಿ ಶೋಷಣೆಗೆ ಮತ್ತು ಅತ್ಯಾಚಾರಕ್ಕೆ ಹಾಗೂ ಅವರಿಗೆ ಅನ್ಯಾಯವಾಗಿರುವ ಘಟನೆಗಳನ್ನು ಕುರಿತು ವಿವರಿಸಿದ್ದಾರೆ. ಕಮಲಿ ಚಿಕ್ಕ ವಯಸ್ಸಿಗೆ ತನ್ನ ಗಂಡನನ್ನು ಕಳೆದುಕೊಂಡು ತನ್ನ ಮಕ್ಕಳನ್ನು ಯಾವ ರೀತಿ ನೋಡಿಕೊಳ್ಳುತ್ತಾಳೆ ಎಂಬುದರ ಕುರಿತು ಓದುಗರಲ್ಲಿ ಆಸಕ್ತಿ ಬೆಳೆಸುತ್ತದೆ ಮತ್ತು ಒಂಟಿಯಾಗಿರುವ ಸ್ತ್ರೀಯರ ಮೇಲೆ ಕಾಮಾಂಧರ ಕಣ್ಣುಬಿದ್ದು ಅವಳ ಮೇಲೆ ಬಲತ್ಕಾರ ಮಾಡಲು ಹೋದಾಗ ಕಮಲಿ ಮಾಡುವ ಧೈರ್ಯದ ಸಾಹಸ ಮೆಚ್ಚುಗೆಯನ್ನು ಗಳಿಸುತ್ತದೆ ಆದರೆ ಎಷ್ಟೇ ಧೈರ್ಯಶಾಲಿಯಾದರೂ ತನ್ನ ಮಕ್ಕಳಿಗೆ ಅಪಾಯ ಉಂಟಾದಾಗ ತಮಗೆ ಗೊತ್ತಿಲ್ಲದೆಯೇ ಶರಣಾಗುತ್ತಾರೆ ಒಂದು ಹೆಣ್ಣು ಇರುವ ಪರಿಸ್ಥಿತಿಯನ್ನು ಮತ್ತು ನೋವನ್ನು ಅರ್ಥಮಾಡಿಕೊಳ್ಳದೆ ಇರುವ ಸಮಾಜವನ್ನು ಕುರಿತು ಅತ್ಯಂತ ಆಸಕ್ತಿಕರವಾಗಿ ತಮ್ಮ ಬರವಣಿಗೆಯಲ್ಲಿ ತಿಳಿಸಿದ್ದಾರೆ. ಅದೇ ರೀತಿ ಒಂದು ಗಂಡು ಕಟ್ಟಿಕೊಂಡಿರುವ ಹೆಂಡತಿಯನ್ನು ಹೊಡೆದು ಬಡೆದು ಹಿಂಸೆ ಕೊಟ್ಟು ಅವಮಾನಿಸಿ ಅವಳನ್ನು ಅನುಮಾನದಿಂದ ನೋಡಿದರು ಕೊನೆಗೆ ಯಾವ ಪರಿಸ್ಥಿತಿ ಬರುತ್ತದೆ ಎಂಬುದನ್ನು ಘಾತ ಎಂಬ ಕಥೆಯಲ್ಲಿ ಸಿಂಗನ ಪಾತ್ರದ ಮೂಲಕ ವಿವರಿಸಿದ್ದಾರೆ.

ಗುಡ್ಡಜ್ಜ

ಶಾಂತ ನಾಯಕರ ಗುಡ್ಡಜ್ಜ ಎನ್ನುವ ಕಥೆ ಬಹಳ ವಿಶೇಷ ಮತ್ತು ವಿಭಿನ್ನವಾದ ದ್ದಾಗಿದೆ ಇದರ ಕಥೆ ಏನೆಂದರೆ ಎಪ್ಪತ್ತರ ವಯಸ್ಸಿನ ಗುಡ್ಡಜ್ಜ ಊರಿನ ಹೊರಗಡೆ ಇರುವ ಕುರಿ ಹಟ್ಟಿಯಲ್ಲಿ ಕುರಿಯನ್ನು ಕಾಯುತ್ತಿರುತ್ತಾನೆ ಮೈಕೈ ನೋವು ಸೊಂಟ ನೋವು ಮತ್ತು ಅನಾರೋಗ್ಯದಿಂದ ಕೂಡಿರುತ್ತಾನೆ ಈತನು ಕುರಿಗಳನ್ನು ಬೆಳಗ್ಗೆ ಅಡವಿಗೆ ಹೊಡೆದುಕೊಂಡು ಹೋಗಿ ಕುರಿಗಳನ್ನು ಮೇಯಿಸಿಕೊಂಡು ಮತ್ತೆ ಸಂಜೆ ಆದ ಕೂಡಲೇ ತಿರುಗಿ ಕುರಿಗಳನ್ನು ಹೊಡೆದುಕೊಂಡು ತನ್ನ ಹಟ್ಟಿಗೆ ಬರುತ್ತಾನೆ ಪ್ರತಿದಿನ ಸಂಜೆ ಕುರಿಯ ಹಾಲನ್ನು ಮಾರುತ್ತಾ ಇರುತ್ತಾನೆ ಅದೇ ಊರಿನ ಮದುವೆಯಾದ 40ರ ವಯಸ್ಸಿನ ಯಂಕವ್ವ ಎನ್ನುವ ಸ್ತ್ರೀ ತನಗೆ ಕೊರಿಯಾ ಹಾಲು ಬೇಕಾದಾಗ ಗುಡ್ಡಜ್ಜನ ಬಳಿಬಂದು ತೆಗೆದುಕೊಂಡು ಹೋಗುತ್ತಾಳೆ ಒಂದು ದಿನ ಗುಡ್ಡಜ್ಜನಿಗೆ ಸಂಕವ್ವನ ಮೇಲೆ ಆಸೆ ಹುಟ್ಟುತ್ತದೆ. ಸಂಕವ್ವಳು ಸಹ ಮನೆಗೆ ಬಾ ಚಹಾ ಮಾಡಿಕೊಡುತ್ತೇನೆ ಎಂದು ಹೇಳುತ್ತಾಳೆ ಒಂದು ದಿನ ಗುಡ್ಡಜ್ಜ ಮನೆಗೆ ಬರುತ್ತಾನೆ ಅಲ್ಲಿ ಏನು ನಡೆಯುತ್ತದೆ ಆತನ ಆಸೆ ನೆರವೇರಿಸಿ ಕೊಳ್ಳುತ್ತಾನೆಯೇ ಎಂಬುದು ಇದರ ಕಥೆಯಾಗಿದೆ. ಲೇಖಕರ ಈ ಕಥೆಯ ಕಲ್ಪನೆಗೆ ಮೆಚ್ಚುಗೆಯನ್ನು ನೀಡಲೇಬೇಕು ಏಕೆಂದರೆ ಆಸೆಗೆ ವಯಸ್ಸಿನ

ಮಿತಿ ಇರುವುದಿಲ್ಲ ಅವರಿಗೆ ಬೇಕಾಗಿರುವುದನ್ನು ಹೇಗಾದರೂ ಮಾಡಿ ಪಡೆಯಲೇಬೇಕು ಎನ್ನುವ ಹಠ ಅವರು ಯಾವ ತಪ್ಪನ್ನು ಆದರೂ ಮಾಡಲು ಹಿಂಜರಿಯುವುದಿಲ್ಲ ಎಂಬ ಎಂಬ ಪಾಠ ಈ ಕಥೆಯಲ್ಲಿದೆ ನಾನು ಈ ಕತೆಯನ್ನು ಓದುತ್ತಿರುವಾಗ ನನಗೆ ನೆನಪಿಗೆ ಬಂದಿದ್ದು ಕುವೆಂಪುರವರ ಮಲೆಗಳಲ್ಲಿ ಮದುಮಗಳು ಎಂಬ ಕಾದಂಬರಿ ಈ ಕಾದಂಬರಿಯಲ್ಲಿ ಸಹ ಊರಿನ ಗೌಡ ಆಸೆ ಪಟ್ಟಿರುವ ಹೆಣ್ಣಿನ ಅತ್ತೆ ಸೇರಿಕೊಂಡು ಹೆಣ್ಣನ್ನು ಗೌಡನಿಗೆ ಒಪ್ಪಿಸಬೇಕು ಎಂದು ಉಪಾಯ ಮಾಡುತ್ತಾರೆ ಇದನ್ನು ತಿಳಿದ ಸೊಸೆ ಗೌಡ ಬರುವ ಸಮಯವನ್ನೂ ನೋಡಿ ಕೊಂಡು ತಾನು ಆ ಸ್ಥಳದಿಂದ ನಿರ್ಗಮಿಸಿ ತಾನು ಇರುವ ಸ್ಥಳದಲ್ಲಿ ತನ್ನ ಅತ್ತೆಯನ್ನು ಮಲಗಿಸಿ ಆಕಿ ಹೊರಡುತ್ತಾಳೆ ಅಲ್ಲಿಗೆ ಬಂದ ಗೌಡ ನಾನು ಇಷ್ಟಪಟ್ಟಿದ್ದು ಇವಳನ್ನೇ ಎಂದು ತಿಳಿದುಕೊಂಡು ಅವಳನ್ನು ಅನುಭವಿಸುತ್ತಾನೆ ನಂತರ ತಾನು ಮಾಡಿರುವ ತಪ್ಪಿನ ಬಗ್ಗೆ ಅರಿವಾಗುತ್ತದೆ ಇದೇ ರೀತಿಯಾಗಿ ಗುಡ್ಡಜ್ಜನಿಗೂ ಸಹ ಯಂಕವ್ವನ ಮನೆಗೆ ಹೋದಾಗ ತನ್ನ ಭಯದಿಂದ ಅನಾರೋಗ್ಯದಿಂದ ಹೆದರಿ ತಾನು ಮಾಡುತ್ತಿರುವುದು ತಪ್ಪು ಎಂದು ಭಾವಿಸಿ ಅಲ್ಲಿಂದ ಹಿಂತಿರುಗಿ ಬರುತ್ತಾನೆ ಆದರೆ ಯಂಕವ್ವ ಗುಡ್ಡಜ್ಜನನ್ನ ಬಲೆಗೆ ಬೀಳಿಸಿಕೊಂಡು ಆತನಲ್ಲಿರುವ ಕುರಿಗಳನ್ನು ಮಾರಿ ತನ್ನ ಮಗಳ ಮದುವೆಯನ್ನು ಮಾಡಬೇಕು ಎಂದು ಭಾವಿಸಿ ಗುಡ್ಡಜ್ಜ ಹಿಂತಿರುಗಿ ಬಂದೇ ಬರುತ್ತಾನೆ ಎಂಬ ಕಲ್ಪನೆಯಲ್ಲಿ ಜೀವಿಸುತ್ತಿರುತ್ತಾರೆ

ಬಡವರು ಬಡತನವನ್ನು ಹೋಗಲಾಡಿಸಿ ತಮ್ಮ ಮಕ್ಕಳ ಭವಿಷ್ಯವನ್ನು ಕಾಪಾಡಿಕೊಳ್ಳಲು ತಮಗೆ ಗೊತ್ತಿಲ್ಲದೆಯೇ ತಪ್ಪುಗಳನ್ನು ಮಾಡುತ್ತಾರೆ ಎಂಬುದನ್ನು ಲೇಖಕರು ಈ ಗುಡ್ಡ ಜ್ಜನ ಕಥೆಯಲ್ಲಿ ತುಂಬಾ ಅಚ್ಚುಕಟ್ಟಾಗಿ ಹೇಳಿದ್ದಾರೆ.

ಮೋಹಕ್ಕೆ ವಯಸ್ಸಿನ ಮಿತಿ ಇಲ್ಲ ಎಂಬುದನ್ನು ಗುಡ್ಡಜ್ಜನ ಪಾತ್ರದ ಮೂಲಕ ಹೇಳಿದ್ದಾರೆ ಅಂದರೆ ಒಬ್ಬ 70ರ ವಯಸ್ಸಿನ ಅಜ್ಜ ಮೋಹಕ್ಕೆ ಬಲಿಯಾದರೆ 40ರ ವಯಸ್ಸಿನ ಯಂಕವ್ವ ತನ್ನ ಕಷ್ಟಗಳನ್ನು ನಿವಾರಿಸಿ ತನ್ನ ಮಗಳ ಮದುವೆಯ ಕನಸು ಕಾಣುವ ಸ್ತ್ರೀ ಇವೆರಡು ಪಾತ್ರಗಳು ಓದುಗರಲ್ಲಿ ವಿಶೇಷವಾದಂತಹ ಅನುಭವವನ್ನು ನೀಡುತ್ತವೆ.

ಒಟ್ಟಾರೆಯಾಗಿ ಶಾಂತ ನಾಯ್ಕರವರು ಗುಡ್ಡ ಜ್ಜನ ಕಥಾಸಂಕಲನವನ್ನು ಕುರಿತು ಹೇಳುವುದಾದರೆ ನಾನು ಓದಿದ ಮೂರು ಕಥೆಗಳಾದ ಬೀದರ ಮತ್ತು ಛತ್ರ ದೂಟ, **ಕಮ್ಲಿಯ ಕಳವಳದ ಕ್ಷಣಗಳು ಮತ್ತು ಗುಡ್ಡಜ್ಜ.**

ಈ ಮೂರು ಕಥೆಗಳು ವಿಶೇಷವಾದಂತಹ ಕಥಾಹಂದರವನ್ನು ಹೊಂದಿವೆ ಬೀದರ ಮತ್ತು ಛತ್ರ ದೂಟದಲ್ಲಿ ಮಕ್ಕಳ ಬಾಲ್ಯಜೀವನವನ್ನು ನೆನಪಿಸಿದರೆ ಕಮಲಿಯ

ಕಳವಳದ ಕ್ಷಣಗಳಲ್ಲಿ ಒಂದು ಹೆಣ್ಣು ಕಷ್ಟದಲ್ಲಿದ್ದಾಗ ಪ್ರಪಂಚ ಯಾವ ರೀತಿ ನೋಡುತ್ತದೆ ಮತ್ತು ಸಮಾಜದಲ್ಲಿ ಸಿಗುವ ಗೌರವವನ್ನು ಕುರಿತು ಈ ಕತೆಯಲ್ಲಿ ನೋಡಬಹುದು. ವಯಸ್ಸಿಗೆ ಆಸೆಯ ಮಿತಿಯಿಲ್ಲ ಯಾರು ಬೇಕಾದರೂ ಆಸೆ ಪಡಬಹುದು ಆದರೆ ಅದನ್ನು ಪಡೆಯಬೇಕಾದರೆ ಧೈರ್ಯ ಬೇಕು ಎಂಬುದನ್ನು ಗುಡ್ಡ ಜ್ಜನ ಕಥೆಯಲ್ಲಿ ನಾವು ತಿಳಿಯಬಹುದು. ಈ ಕಥೆಗಳನ್ನು ಓದುತ್ತಿದ್ದರೆ ಪಾತ್ರಗಳು ನಮ್ಮ ಕಣ್ಣಮುಂದೆ ಬಂದು ಹೋಗುತ್ತಿರುತ್ತವೆ ಎಂದು ನನಗೆ ಅನ್ನಿಸುತ್ತದೆ ಈ ಪಾತ್ರಗಳು ನಮ್ಮ ಮನದಲ್ಲಿ ಚಿರಸ್ಥಾಯಿಯಾಗಿ ಉಳಿದುಬಿಡುತ್ತವೆ ಸಮಾಜದಲ್ಲಿ ಆಗುವ ಅನಾಹುತಗಳ ಬಗ್ಗೆ ಧ್ವನಿಯೆತ್ತುವ ಹಾಗೆ ಈ ಪಾತ್ರಗಳು ಪ್ರೇರೇಪಿಸುತ್ತವೆ ಎಂದು ಹೇಳಬಹುದು.

ಶಾಂತ ನಾಯ್ಕರವರು ಹೆಚ್ಚಾಗಿ ಒಂದು ಸ್ತ್ರೀ ಯಾವ ರೀತಿ ಶೋಷಣೆಗೆ ಒಳಪಡುತ್ತಾಳೆ ಎಂಬುದರ ವಿಷಯವನ್ನು ಕುರಿತು ಚರ್ಚಿಸಿದ್ದಾರೆ ಮುಂದೆ ಯಾವ ರೀತಿಯಾದಂತಹ ತಿರುವು ಪಡೆದುಕೊಳ್ಳುತ್ತದೆ ಎಂಬುದರ ಕುರಿತು ಆಸಕ್ತಿಯನ್ನು ಹುಟ್ಟಿಸಿದ್ದಾರೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಏನೇ ಆದರೂ ಶಾಂತ ನಾಯ್ಕ್‌ರವರು ರಚಿಸಿದ ಎಲ್ಲಾ ನಾಟಕ ಕಥಾ ಕಾದಂಬರಿಗಳು ಉತ್ತಮವಾದಂತಹ ಮನ್ನಣೆಯನ್ನು ಪಡೆದಿದೆ ಇವರ ಕಥೆಗಳು ಸಮಾಜಕ್ಕೆ ತುಂಬಾ ಹತ್ತಿರವಾಗಿವೆ ಇಂತಹ ಪಾತ್ರಗಳು ಇವತ್ತಿಗೂ ಕೆಲವು ಭಾಗದಲ್ಲಿ ಕಾಣುತ್ತವೆ ಒಂದು ಕಥೆ ಇಂದ ಇನ್ನೊಂದು ಕಥೆಗೆ ತುಂಬಾ ಹತ್ತಿರದ ಸಂಬಂಧವನ್ನು ಹೊಂದುತ್ತವೆ ಮತ್ತು ಅವುಗಳನ್ನು ಅರ್ಥಮಾಡಿಕೊಂಡಾಗ ನಮ್ಮಲ್ಲಿ ಒಂದು ರೀತಿಯು ಉತ್ತಮವಾದಂತಹ ಭಾವನೆಗಳು ಉಂಟಾಗುತ್ತವೆ.

ಹಡಪದ ವಿಷ್ಣು, ನಾಟಕ ಉಪನ್ಯಾಸಕರು, ಸ.ಸ.ಅ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಳ್ಳಾರಿ

ಮೀನು ಮತ್ತು ಹುಡುಗಿ ಕೃತಿಯೊಳಗಣ ಹೂರಣ

ಡಾ. ಕೆ.ಎಸ್. ಶಿವಪ್ರಕಾಶ

"ನೋ ಸೋರ್ಸ್, ನೋ ಹಿಸ್ಟರಿ" ಎಂಬ ಹೇಳಿಕೆಯಂತೆ ವಸ್ತುವಿಲ್ಲದೆ ಕಾವ್ಯವಿಲ್ಲ. ವಾಸ್ತವವಾಗಿ ವಸ್ತುವೇ ಕಾವ್ಯ. ಆದಕಾರಣ ವಸ್ತುವೇ ಕಾವ್ಯದ ಮೂಲಾಧಾರವಾಗಿದೆ. ಪಾಶ್ಚಾತ್ಯರು ವಸ್ತುವನ್ನು ಸಬ್ಜೆಕ್ಟ್, ಮ್ಯಾಟರ್, ಪ್ಲಾಟ್ ಎಂದು ಗುರುತಿಸಿದ್ದಾರೆ. ಪ್ಲೇಟೋ, ಅರಿಸ್ಟಾಟಲ್ ಮೊದಲಾದವರು ಕಾವ್ಯವಸ್ತುವಿನ ಬಗೆಗೆ ಸಾಕಷ್ಟು ಚರ್ಚಿಸಿದ್ದಾರೆ. ವಸ್ತು ಇಂತಹುದೇ ಇರಬೇಕೆಂದು ಹೇಳಿರುವ ಪ್ಲೇಟೋನ ಮಾತು ಮತ್ತು "ಅಯ್ಯಾ ಲೇಖಕರೇ ನಿಮ್ಮ ಬೆನ್ನು ಎಷ್ಟನ್ನು ಹೊರಬಹುದೋ ಅಷ್ಟನ್ನು ಮಾತ್ರ ಆಯ್ಕೆ ಮಾಡಿಕೊಳ್ಳಿ" ಎಂದಿರುವ ಅರಿಸ್ಟಾಟಲ್‌ನ ಮಾತಿನಲ್ಲಿ ಈ ಸೂಚನೆ ಕಂಡುಬರುತ್ತದೆ.

ವಸ್ತುವನ್ನು ಆಯ್ದುಕೊಳ್ಳುವುದು ಹಾಗೂ ಅದರ ವಿನ್ಯಾಸವನ್ನು (ಬ್ಲೂಪ್ರಿಂಟ್) ಸಿದ್ಧಪಡಿಸಿಕೊಳ್ಳುವುದು ಕವಿಗೆ ಬಿಟ್ಟಿರುವ ವಿಚಾರ. ಒಬ್ಬ ಕವಿ ಎಂತಹ ವಸ್ತುವನ್ನು ಆಯ್ದುಕೊಳ್ಳುತ್ತಾನೆ ಮತ್ತು ಅದನ್ನು ಹೇಗೆ ನಿರ್ವಹಿಸುತ್ತಾನೆ ಎಂಬುದರ ಆಧಾರದಿಂದ ಆ ಕವಿಯ ಪ್ರತಿಭಾ ಸಾಮರ್ಥ್ಯವನ್ನು ಗುರುತಿಸಬಹುದಾಗಿದೆ. ಈ ದೃಷ್ಟಿಯಿಂದ ಪ್ರೊ.ಶಾಂತನಾಯ್ಕರವರ ಪ್ರಮುಖ ಕಾವ್ಯ 'ಮೀನು ಮತ್ತು ಹುಡುಗಿ' ವಸ್ತುವಿನ್ಯಾಸ, ಕವಿ ಅದನ್ನು ನಿರ್ವಹಿಸಿರುವ ರೀತಿ. ಕವಿತೆಗಳ ಒಳನೋಟಗಳು, ಕವಿಯ ಆಶಯ ಹಾಗೂ ದೂರದೃಷ್ಟಿ ಇತ್ಯಾದಿ ಅಂಶಗಳ ಬಗೆಗೆ ವಿವೇಚಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

"ಮೀನು ಮತ್ತು ಹುಡುಗಿ" ಕಾವ್ಯವು ಸ್ವರೂಪದ ದೃಷ್ಟಿಯಿಂದ 80 ಕವನಗಳನ್ನೊಳಗೊಂಡ ಸಂಕಲನವಾಗಿದೆ. ಹಾಗೆಯೇ ಕವಿತೆಯ ಶೀರ್ಷಿಕೆಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ಈ ಕಾವ್ಯವನ್ನು ಅವಲೋಕಿಸಿದಾಗ ನಿಶ್ಚಿತವಾದ ನೀಲನಕ್ಷೆಯಿಲ್ಲದೆ ಕವಿಯು ಕಾವ್ಯರಚನೆಗೆ ಮುಂದಾಗಿಲ್ಲವೆಂಬುದು ಅರಿವಿಗೆ ಬರುತ್ತಿದೆ. ಒಬ್ಬ ಕಟ್ಟಡ ಶಿಲ್ಪಿಯಂತೆ, ಒಬ್ಬ ಗಣಿತಕಾರನಂತೆ ಪ್ರೊ.ಶಾಂತಾನಾಯ್ಕರವರು ಮೊದಲು ತನ್ನ ಕಾವ್ಯದ

ಗಡಿಗೆರೆಗಳನ್ನು (ಲೈನ್‌ಅವುಟ್) ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಈ ಕಾವ್ಯದಲ್ಲಿ ನಿಶ್ಚಿತ ವಸ್ತು, ನಿಶ್ಚಿತ ಪಾತ್ರ, ನಿಶ್ಚಿತ ಭಾಷಾನೀತಿ, ನಿಶ್ಚಿತ ರೂಪ ಇವುಗಳ ಬಗೆಗೆ ಕವಿಯು ಸಾಕಷ್ಟು ಆಲೋಚಿಸಿರಬೇಕೆಂದು ಕಾಣುತ್ತದೆ. ಅಂತೆಯೇ ವಸ್ತುವಿನ ನಿರ್ಣಯ ಮತ್ತು ನಿರ್ವಹಣೆಯ ವಿಷಯದಲ್ಲಿ ವಸ್ತುವಿನ ನಿರ್ವಹಣೆಗಿಂತ ಹೆಚ್ಚಾಗಿ ಕವಿಯು ವಸ್ತು ನಿರ್ಣಯದ ವಿಷಯದಲ್ಲಿ ಹೆಚ್ಚು ಶ್ರಮಪಟ್ಟಿರುವ ಹಾಗೆ ಕಂಡುಬರುತ್ತದೆ. ಈ ಕೆಳಗಿನ ಕವಿತೆಗಳಲ್ಲಿಯ ಅಂಶಗಳ ಆಧಾರದಿಂದ ಈ ಮೇಲಿನ ಮಾತುಗಳನ್ನು ಸ್ಪಷ್ಟಪಡಿಸಬಹುದು.

'ಹೆಜ್ಜೆಗಳು' ಈ ಕವಿತೆಯಲ್ಲಿ ಕವಿಯು ಅಜ್ಜನ ಮತ್ತು ಅಪ್ಪನ ಕಾಲದ ಪರಂಪರೆಯ ನೆನಪುಗಳೊಂದಿಗೆ ಗುಲಾಮತನದಿಂದ ಸ್ವತಂತ್ರದ ಪರಿಕಲ್ಪನೆಯ ಕಡೆಗೆ ಕವಿಯ ಮನಸ್ಸು ಸೆಳೆಯುತ್ತಿದೆಯೆಂಬ ಅಂಶವು ಈ ಕವಿತೆಯಲ್ಲಿ ಧ್ವನಿತವಾಗಿದೆ.

"ಅಜ್ಜನ ನೆತ್ತಿಯ ಮೇಲೆ ರಾಜನೊತ್ತಿದ್ದ
ಗುಲಾಮಿ ಹೆಜ್ಜೆಗಳು. . .. .
ರಾಜನ ಸಿಂಹಾಸನದಡಿಯಲ್ಲಿ
ಅಜ್ಜನ ಕನಸುಗಳು ಹೂತು ಹೋಗಿದ್ದವು"

ಈ ಕವಿತೆಯನ್ನು ಒಳಹೊಕ್ಕು ವಿಶ್ಲೇಷಿಸಿದಾಗ ರಾಜಸತ್ತೆಯ ಅಡಿಯಲ್ಲಿ ನಮ್ಮ ಹಿರಿಯರಿಗೆ ಶೋಷಣೆ–ತಳಮಳವೆಂಬುದು ಒಂದು ರೀತಿಯಲ್ಲಿ ಜೀತದಾಳುವಿನಂತೆ ಬದುಕನ್ನು ಸವೆಸಿಕೊಂಡಿದ್ದಾರೆಂಬುದು ಕವಿಮನದ ಬೇಸರದ ಆಶಯವಾಗಿದ್ದು, ರಾಜಸಿಂಹಾಸನದ ಪ್ರಭುತ್ವದಡಿಯಲ್ಲಿಯೇ ಅಜ್ಜನ ಆಸೆಯ ಕನಸುಗಳು ಹೂತು ಹೋಗಿವೆಯೆಂದು ಕವಿಯು ಕಸಿವಿಸಿಗೊಂಡಿದ್ದಾರೆ.

ಅಂತೆಯೇ ಅಪ್ಪನ ಹೆಗಲ ಮೇಲೆಲ್ಲಾ ಬ್ರಿಟೀಷರ ಕೆಂಪು ಕೆಂಪಾದ ಬೂಟಿನ ಹೊಡೆತದ ಗುರುತುಗಳಿದ್ದು ಸಾಲು ಮರದಲ್ಲಿ ನೇತುಬಿದ್ದ ಹೆಣಗಳು ಶೋಷಣೆಯ ಪ್ರತೀಕಗಳಾಗಿವೆಯೆಂದು ಈ ಕವಿತೆಯಲ್ಲಿ ಧ್ವನಿತವಾಗುತ್ತಿದೆ.

"ಸಾಲುಮರಗಳಿಗೆ ನೇತು ಬಿದ್ದ ಹೆಣಗಳು
ಅಪ್ಪನ ಸಾವಿನ ಪ್ರತೀಕಗಳು"

ಈ ಕವಿತೆಯಲ್ಲಿ ಅಪ್ಪನದು ಒಂದು ರೀತಿಯ ಶೋಷಣೆಯಾದರೆ, ಅವ್ವನದು ಇದಕ್ಕೆ ವ್ಯತಿರಿಕ್ತವಾದ ಭಾವನೆಯಾಗಿದೆ. "ತಾಯಿ ಹಾಗೂ ತಾಯಿನೆಲ"ವೆಂಬ ವಿಶಾಲಾರ್ಥದಲ್ಲಿ ವಿವರಿಸಲಾಗಿದ್ದು, ಹರಿದು ಹಂಚಿದರು ಹೌದಪ್ಪಗಳಿಗೆ! ಒಟ್ಟಾರೆ ಈ ಕವಿತೆಯಲ್ಲಿ "ಸ್ವಾತಂತ್ರ್ಯದ ಹೆಜ್ಜೆಗಳು ವಿಸ್ತಾರವಾಗಿ ಬೆಳೆಯುತ್ತಲಿವೆ ಮುಗಿಲೆತ್ತರಕೆ" ಎಂಬ ಉಕ್ತಿಯಲ್ಲಿ ಉತ್ಕಟವಾದ ಸ್ವತಂತ್ರದ ಬಯಕೆಯು ಧ್ವನಿಯ ಮೂಲಕ

ಸ್ಫೋಟಗೊಂಡಿದೆ.

"ರಾಡಿನೀರು ಮತ್ತು ಕಾಗೆ" ಎಂಬ ಕವಿತೆಯಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ನೀರು ಸರಬರಾಜು ಇಲಾಖೆಯ ಗುಂಡಿ ತುಂಬಾ ರಾಡಿ ನೀರು ತುಂಬಿಕೊಂಡಿದ್ದು ಕಾಗೆಗಳು ಕತ್ತು ಬಳುಕಿಸಿ ಕಸರತ್ತು ನಡೆಸಿದ್ದುವೆಂಬುದನ್ನು ಸಮಾಜದ ರೀತಿ–ನೀತಿಗಳಿಗೆ ಹೋಲಿಸಿ ವಿಡಂಭಿಸಿದ್ದಾರೆ. ಜಪತಪಗಳನ್ನು ಮಾಡುವ ಜನರನ್ನು ಕಾಗೆಯ ಮಜ್ಜನಕ್ಕೆ ಹೋಲಿಕೆ ಕೊನೆಗೆ. . . .

"ಅದಕ್ಕೂ ತಿಳಿದಿದೆ ಗಂಗೆ–ತುಂಗೆಗಳೆಲ್ಲಾ
ರಾಡಿಗಿಂತ ರಾಡಿಯೆಂದು
ತನ್ನ ಪರಿಶುದ್ಧ ಮನಸ ಹೊತ್ತು
ರಾಡಿ ನೀರಲ್ಲೂ ಸ್ನಾನಗೈದೇನಾಗದೆಂದು ಬಗೆದಿವೆ"ಯೆಂಬುದು ಕವಿಯ ಅಂತಿಮ ಆಶಯವಾಗಿದೆ.

'ಆತ್ಮಗಳು' ಈ ಕವಿತೆಯಲ್ಲಿ ಕವಿಯು ಸಮಾಜದಲ್ಲಿಯ ಬಡಜನತೆಯ ಬಗೆಗೆ ಕಾಳಜಿ–ಕಳಕಳಿಯನ್ನು ಅಭಿವ್ಯಕ್ತಿಸಿದ್ದಾರೆ. ಬಡಜನರು ಜೀವನದಲ್ಲಿ ಅನೇಕ ಆಸೆಗಳನ್ನು ಕಟ್ಟಿಕೊಂಡು ಕನಸುಗಳು ನನಸಾಗದೇ ಕನಸಾಗಿಯೇ ಉಳಿದು ಸ್ಮಶಾನ ಸೇರಿದ ಅಜ್ಜನ ನೆನಪುಗಳನ್ನು ಮೆಲುಕು ಹಾಕಿದ್ದಾರೆ.

"ಬಿಸಿಲು ಗುದುರೆ ಬೆನ್ನೇರಿ
ಬದುಕನ್ನು ಹಿಡಿಯಲು ಹಠತೊಟ್ಟು
ಹಸಿದು ಸ್ಮಶಾನ ಸೇರಿದ ಅಜ್ಜ"

ಹೊರೆ ಹೊತ್ತುಕೊಂಡು ನೆತ್ತಿಯು ಉರಿಯುವಂತೆ ಕನಸು ಕಾಣುವಾಗಲೆಲ್ಲ ಉರಿವ ನೆತ್ತಿಯೇ ಕುತ್ತಾದಂತಾಗಿ ಬಿಕ್ಕಳಿಸಿದ ಅಜ್ಜಿಯ ಜೀವನವು ನೋವಿನ ಚಿತ್ರಣದೊಂದಿಗೆ ಕನಸು ನನಸಾಗದೇ ಅತೃಪ್ತ ಜೀವಗಳಾಗಿವೆಯೆಂಬುದು ಕವಿಯ ವಿವೇಚನೆಯಾಗಿದೆ.

"ಈ ಮಹಾನಗರದ ಮೂಲೆಯಲ್ಲಿ" ಎಂಬ ಕವಿತೆಯಲ್ಲಿ ನಗರ ಜೀವನದ ಬದುಕಿನ ವಿವಿಧ ಮಜಲುಗಳನ್ನು ಚಿತ್ರಿಸುವುದರೊಂದಿಗೆ ಬದುಕಿಗಾಗಿ ಜೀವನವನ್ನೇ ಮಾರಿಕೊಳ್ಳುವ ತಲ್ಲಣಗಳನ್ನು ಲೇಖಕರು ಈ ಕವಿತೆಯಲ್ಲಿ ಮಹಾನಗರದ ಮೂಲೆಯಲ್ಲಿ ನೊಂದ ಮನಸುಗಳು ಮಾತನಾಡುತ್ತಿವೆಯೆಂಬುದಾಗಿ ವಿವರಿಸಿ ನೊಂದ ಜೀವಗಳ ಬಗೆಗೆ ನೋವನ್ನು ಚಡಿಮಿಡಿದ್ದಾರೆ.

"ಹಸಿವಿಗಾಗಿ ಹಾದರದ ಹಾದಿ ಹಿಡಿದವಳು

ಏಡ್ಸ್ ಹರಡಲು ಕಾರಣವಾಗಿದ್ದಾಳೆ.
ಯಾರಿಗೂ ಯಾರಿಲ್ಲ
----------- ---
--------- ----
ಕೊಲೆಗಾರರು ಕಳ್ಳ ಖದೀಮರು
ಯೋಜನೆ ಹಾಕುತ್ತಾರೆ
--------- -----
ರದ್ದಿ ಆರಿಸುವ ಹುಡುಗ
ಕೆದರುತ್ತಾನೆ ಹೊಲಸು
ಮಹಾನಗರದ ಮೂಲೆಯಲ್ಲಿ
ತಣ್ಣಗೆ ಎಲ್ಲವೂ ನಡೆಯುತ್ತಿವೆ
ಹಗಲು – ರಾತ್ರಿ"

ಈ ಮೇಲಿನ ಕವಿತೆಯಲ್ಲಿ ನಗರ ಜೀವನದ ಯಾಂತ್ರಿಕತೆಯ ಮಧ್ಯದಲ್ಲಿ ಕಳ್ಳ ಖದೀಮರು ಕಳ್ಳತನದ ಹಾದಿ ಹಿಡಿದರೆ ಸಾಮಾನ್ಯ ಬಡಜನರು ಕಷ್ಟದ ಹಾದಿಯಲ್ಲೇ ಜೀವನ ಸವೆಸುತ್ತಿದ್ದಾರೆ. ಮಹಾನಗರದ ಮೂಲೆಯಲ್ಲಿ ಚಿಂತಾಜನಕವಾದ ವೇಶ್ಯೆಯರ ಬದುಕು, ರದ್ದಿ ಆರಿಸುವ ಹುಡುಗನ ಜೀವನ ಹೋರಾಟಗಳ ಜೊತೆಯಲ್ಲಿಯೇ ಉಳ್ಳವರ ದೊಡ್ಡಪಾಲಿನ ಗದ್ದಲದಲ್ಲಿ ದಕ್ಕದ ಬಡಜನರು ಮಣ್ಣು ಮುಕ್ಕುತ್ತಾರೆಂಬುದಾಗಿ ಚಿತ್ರಿಸಿ ಸಾಮಾಜಿಕ ವಿಡಂಬನೆ ಮಾಡಿದ್ದಾರೆ.

"ದಿನಕ್ಕೊಂದು ದೇವರು" ಈ ಕವಿತೆಯಲ್ಲಿ ದೇಶದ ತುಂಬೆಲ್ಲಾ ದೇವರುಗಳೇ ತುಂಬಿಕೊಂಡಿವೆಯೇ ಹೊರತು ದೈವ ತುಂಬಿದ ಮನಸ್ಸುಗಳಿಲ್ಲ. ಬಸವಣ್ಣನವರ "ಅಂತರಂಗ–ಬಹಿರಂಗ" ಬೇರೆಬೇರೆಯಾಗಿವೆಯೆಂದು ಡಾಂಭಿಕತನದ ದೈವಭಕ್ತಿಯನ್ನು ಈ ಕೆಳಗಿನಂತೆ ವ್ಯಂಗ್ಯ, ಕಟಕಿ ಹಾಗೂ ವಿಡಂಬನಾತ್ಮಕವಾಗಿ ಕಂಡರಿಸಿದ್ದಾರೆ.

"ಮರಕ್ಕೊಂದು ಗುಡಿ
ಗುಡಿಗೊಂದು ದೇವರು
ಹುಟ್ಟುತ್ತಿವೆ ಈ ದೇಶದಲಿ
ನಿತ್ಯನೂತನವಾಗಿ"

ನಮ್ಮ ದೇಶದಲ್ಲಿ ದೇವರ – ಧರ್ಮದ ಹೆಸರಿನಲ್ಲಿ ಹಗರಣಗಳು ಕೆಲವಾದರೆ ಮತ್ತೊಬ್ಬ ಮಡಿಗಾಗಿ, ಮಗದೊಬ್ಬ ಗದ್ದುಗೆಗಾಗಿ ಕಚ್ಚಾಡುತ್ತಿರುವ ಸುಚ್ಚಾಟಗಳ ಸ್ಥಿತಿಯನ್ನು ಈ ಕವಿತೆಯಲ್ಲಿ ವಿಡಂಬಿಸಿದ್ದಾರೆ. ಈ ದೇಶದ ತುಂಬೆಲ್ಲಾ ಕಳ್ಳದೇವರೇ (ಕಳ್ಳರೇ)

ತುಂಬಿಕೊಂಡಿರುವಾಗ ಸಾಮಾನ್ಯ ಜನರೇ ಪೆಚ್ಚಾಗಿದ್ದಾರೆ. ಆದಕಾರಣ ಈ ದೇಶದಲಿ ದೇವರುಗಳೇ ಹೆಚ್ಚಾಗಿ ಜನಸಾಮಾನ್ಯರೇ ಕಡಿಮೆಯಾಗಿದ್ದಾರೆಂಬ ಚಿಂತೆಯು ಕವಿಯನ್ನು ಕಾಡುತಲಿದೆ.

'ಹೀಗೆ' ಎಂಬ ಈ ಕವಿತೆಯಲ್ಲಿ ಇಂದಿನ ಯುವಜನಾಂಗದ ರೀತಿ-ನೀತಿ ನಡವಳಿಕೆಗಳನ್ನು ಕಂಡುಂಡು ನೋವಿನಿಂದ ಕಳಕಳಿಯನ್ನು ಅಭಿವ್ಯಕ್ತಪಡಿಸಿದ್ದಾರೆ.

ಹುಡುಗಿಯರೇ ಹೀಗೆ
ನನ್ನಾಳಕ್ಕಿಳಿದು ಬಿಡುತ್ತಾರೆ
------- -------
ಮನಸ್ಸನ್ನು ಕದ್ದು
ಗುದ್ದಾಡುವಂತೆ ಮಾಡಿ
ಗೆದ್ದೆವೆಂದು ಓಡಿ ಬಿಡುತ್ತಾರೆ.

ಇಂದಿನ ಯುವಕರನ್ನು ಪ್ರೀತಿಯ ಬಲೆಯಲ್ಲಿ ಸಿಕ್ಕಿಸಿಕೊಂಡು, ಪ್ರೀತಿಗಾಗಿ ಹಾತೊರೆಯುವ ಯುವಕರಿಗೆ ಪ್ರೀತಿಯಿಂದಲೇ ಯುವತಿಯರು ಪಲಾಯನ ಮಾಡುತ್ತಾರೆಂದು ಯುವಕರಿಗೆ ಸೂಚ್ಯವಾಗಿ ಹೇಳಿದ್ದಾರೆ.

"ಅರ್ಥವಾಗುವ ಮುನ್ನ
ವ್ಯರ್ಥ ಕನಸನು ಕಂಡು
ತಲೆ ಕೆಡಿಸಿಕೊಂಡಾಗ
ದೂರದಿಂದಲೇ ಅಯ್ಯೋ ಎನ್ನುತ್ತಾರೆ"

ಇಂದಿನ ಯುವ ಜನಾಂಗವು ಬದುಕಲು ನೆಲೆಯಿಲ್ಲದೆ ವ್ಯರ್ಥ ಕನಸನು ಕಂಡು, ಪ್ರೀತಿ - ಪ್ರೇಮವೆಂದು ತಲೆ ಕೆಡಿಸಿಕೊಂಡು ದುಃಖದ ಪ್ರಪಾತದಲ್ಲಿದ್ದಾಗ ಯುವತಿಯರು ದೂರದಿಂದಲೇ ಅಯ್ಯೋ! ಎಂದು ಹುಸಿ ಮರುಕವನು ವ್ಯಕ್ತಪಡಿಸಿ ತಮ್ಮ ದಾರಿಯನ್ನು ಗಟ್ಟಿಗೊಳಿಸಿಕೊಳ್ಳುತ್ತಾರೆಂಬುದು 'ಹೀಗೆ' ಕವಿತೆಯ ಆಶಯವಾಗಿದೆ.

"ತಳಮಳದ ಕ್ಷಣಗಳು" ಕವಿತೆಯಲ್ಲಿ ಕವಿಯು ತಮ್ಮ ಬಾಲ್ಯ ಜೀವನದ ವಿದ್ಯಾಭ್ಯಾಸದ ದಿನಗಳನ್ನು ತಮ್ಮ ನೆನಪಿನಂಗಳದಲ್ಲಿ ಈ ಕೆಳಗಿನಂತೆ ಚಿತ್ರಿಸಿದ್ದಾರೆ.

"ಸಾಲಿಗಂತ ಬರ್ತಿದ್ವಿ
ಆಡಿ ಹಾಡಿ ಕುಣಿದಾಡ್ತಿದ್ವಿ
ಜೇನು-ನೊಣ ಮೂಲ್ಯಾಗಿನ ಮಂಗ್ಯಾ
ಸ್ವಾಗತಿಸುತ್ತಿದ್ದವು ನಮ್ಮನ್ನ"

ಈ ಕವಿತೆಯ ಪ್ರಾರಂಭದಲ್ಲಿ ಕವಿಯು ಗುರುಗಳಾದ ಚಂಪಾ, ಗಿರಡ್ಡಿ, ಮನ್ಸೂರ

ಮಾಸ್ತರರ ಜೀವನ ಶೈಲಿಯು ಕಂಡುಬರುತ್ತದೆ. ಹಾಗೆಯೇ ಪಾಠ ಕೇಳುವಾಗ ಮಂಗ್ಯಾನಂಗ ಕುಳಿತುಕೋ ಎಂಬ ಭಾವನೆಯೊಂದಿಗೆ ವಿದ್ಯಾಭ್ಯಾಸದ ದಿನಗಳಲ್ಲಿಯ ತುಂಟತನದ ಹುಡುಗಾಟಿಕೆಗಳನ್ನು

"ಮನಿಗೆ ಹೋಗೊ ಮುಂದ ಹೀರೋನಂಗ
---------- ---------- ----
ಚಾ ಕುಡುಸಾಕ ಟೋಪಿ ಹಾಕಿ
ಚೀಟಿ ಎತ್ತಿ ಚುರಮರಿ ತಿಂದು"

ಎಂಬ ಸಾಲುಗಳಲ್ಲಿ ವಿದ್ಯಾಭ್ಯಾಸದ ಯೌವನಾವಸ್ಥೆಯ ದಿನಗಳಲ್ಲಿಯ ನೆನಪುಗಳನ್ನು ಮೆಲುಕು ಹಾಕಿ ಆ ತಳಮಳದ ಕ್ಷಣಗಳನ್ನು ತಡೆದುಕೊಳ್ಳಲಾರದೆ ವೇದನೆ ಪಡುತ್ತಿರುವ ಕವಿಯು ಕವಿತೆಯ ಕೊನೆಯಲ್ಲಿ 'ಬದುಕು ನಿಂತನೀರಲ್ಲ'ವೆಂದು ಸಮಾಧಾನ ಪಟ್ಟುಕೊಂಡಿರುವುದು ಈ ಕವಿತೆಯಲ್ಲಿ ಕಂಡುಬರುತ್ತದೆ.

"ಅಶೋಕನ ಶೋಕ"ವೆಂಬ ಕವಿತೆಯಲ್ಲಿ ಯುದ್ಧದ ಭೀಕರತೆಯನ್ನು ಕಂಡ ಸಾಮ್ರಾಟ ಅಶೋಕನ ಮನವು ಪರಿತಪಿಸಿದ ರೀತಿಯನ್ನು ಈ ಕೆಳಗಿನ ಸಾಲುಗಳಲ್ಲಿ ಅಭಿವ್ಯಕ್ತಗೊಂಡಿದೆ.

"ಅಶೋಕ ಶೋಕತಪ್ತನಾಗಿದ್ದ
ಅಸಹಾಯಕ ಬದುಕು ಅಸಹನೀಯವಾದುದು ಕಂಡು
ಕಳಿಂಗ ನಾಡಿನ ಬಿಳಿ ಮಣ್ಣು
ಕೆಂಪರಡಿ ತಂಪಾಗಿ ರಕ್ತದ ಪಿಪಾಸಿಯಾಗಿದ್ದ ಕಂಡು
-------- --------------
ನಿರಪರಾಧಿಗಳ ಕೊಯ್ದು ಕುತ್ತಿಗೆ
ಮತ್ತೆದ್ದು ಮಾತಾಡಿ
ಅದಾವ ದ್ರೋಹ ಮಾಡಿದ್ದೆವು
ದೊರೆ ನಿಮಗೆ......?"

ಅಶೋಕ ದೊರೆಯ ಎದೆಯೊಳಗಿನ ನೋವು ಕಾವಾಗಿ ಕನವರಿಸಿ, ಬುದ್ಧ ಸಾರಿದ ಅಹಿಂಸೆಯ ಜಾಡು ಹಿಡಿದು, ಬುದ್ಧನ ತತ್ವಕ್ಕೆ ಶರಣಾದ ಅಶೋಕನು ದೃಢವಾದ ಹೆಜ್ಜೆಯನು ಹಾಕಿದ ಹಿರಿಮೆಯನ್ನು ಈ ಕವಿತೆಯು ಸಾರಿ ಹೇಳುತ್ತಿದೆ.

ಈ ಕವನ ಸಂಕಲನದ ಮತ್ತೊಂದು ಗಮನಾರ್ಹವಾದ ಕವಿತೆಯೆಂದರೆ "ಟ್ರಂಕ್ ಮತ್ತು ಇತಿಹಾಸ" ಈ ಕವಿತೆಯಾಗಿದೆ. ಕವಿಯು ಈ ಕವಿತೆಯಲ್ಲಿ ತಮ್ಮ ಬಡತನದ

ಜೀವನವನ್ನು

"ಅವ್ವನ ಹರುಕು ಸೀರೆ,
ಅಪ್ಪನ ತೂತಾನು ತೂತಾದ ಪಂಚೆ ದೋತರ,
ಉಡಲು ಬಾರದ ನನ್ನ ಹಳೆ ಅಂಗಿ,
ಒಂದಷ್ಟು ಹರುಕ ಅರವಿ..
ಇರುವ ಈ ಪುರಾತನ ಟ್ರಂಕನ್ನು ಮೇಲೆತ್ತಿದರೆ
ಯಾರೋ ಸತ್ತರೆಂಬಂತೆ ಶೋಕ... ಮಾಡಿದರೂ ಸಹ
ಅವ್ವ ಕೂಡಿಟ್ಟ ಕೈಕಾಸಿನ ರಹಸ್ಯ ನಿಧಿಯನ್ನು
ತನ್ನಲ್ಲಿ ಅಡಗಿಸಿಕೊಂಡಿದೆ.

ನಾಲ್ಕು ಮೂಲೆಗಳೂ ಮುರಿದು, ಮೇಲಿನ ಮುಚ್ಚಳ ಬೀಗ ಕಾಣದೆ ಗುಡಿಸಲ ಮೂಲೆಯಲ್ಲಿ ಬಿದ್ದಿರುವ ಈ ಟ್ರಂಕ್ ಮನೆಯ ಮರ್ಯಾದೆಯನು ಕಾಪಾಡಲು ಇರುವ ಏಕೈಕ ಸಾಧನವಾಗಿದೆ! ಕವಿಯ ಮನಸ್ಸಿನಲ್ಲಿ ತಳಮಳವೆಂದರೆ ಪರಂಪರೆಯ ರಕ್ಷಣೆ, ತಲೆಮಾರುಗಳ ಹೊಣೆ, ತನ್ನ ವಂಶಜರ ಬಗೆಗಿನ ಅತೀವವಾದ ಪ್ರೀತಿ, ಗೌರವ, ಅಭಿಮಾನವಿರಬೇಕಾದ ಅಗತ್ಯತೆಯನ್ನು ಅತ್ಯಂತ ಸೂಕ್ಷ್ಮವಾಗಿ ಅಭಿವ್ಯಕ್ತಿಸಿರುವ ಕವಿ ಜಾಣ್ಮೆಯು ಮೆಚ್ಚುವಂತದ್ದಾಗಿದೆ.

ಇದೇ ಮಾದರಿಯಲ್ಲಿ "ಬವಣೆ ಮತ್ತು ಅವನು", "ಶೋಧನೆ", 'ಮಾರಲಿಟ್ಟ ಕನಸು', 'ಮಾನವರಿಲ್ಲದ ನಾಡಿನಲ್ಲಿ', "ಅರ್ಥಸಚಿವನ ಅನರ್ಥ ರೇಖೆಗಳು", "ಒಂದು ಸತ್ತ ಕಾಗೆಯ ಸುತ್ತ" ಇತ್ಯಾದಿ ಕವಿತೆಗಳನ್ನು ಹೆಸರಿಸಬಹುದಾಗಿದೆ.

"ಫ್ಯಾಷನ್" ಎಂಬ ಕವಿತೆಯಲ್ಲಿ ಕವಿಯು ನಾಗರೀಕತೆಯ ಭರಾಟೆಯಲ್ಲಿ ಇಂದಿನ ಜನಾಂಗ ಇರುವಂತಹ ಸಂಸ್ಕೃತಿಯನ್ನು ಮರೆತಿದ್ದಾರೆ ಎಂಬ ನೋವಿನ ಕಳಕಳಿಯನ್ನು ಈ ಕೆಳಗಿನಂತೆ ಚಿತ್ರಿಸಿದ್ದಾರೆ.

"ನಮ್ಮೂರ ಮುದುಕಿ
ಹರಿಯಾರ ಸಂತಿಯೊಳಗ
ಅರ್ಧ ತೋಳ ಹರಿದ
ಮುದುಕಿ ಕಂಡು
ಶಿವ ಶಿವ ಶಿವ ಅಂದಳು."
"ತುಂಟಿ ರಂಗಿನವಳ ಕಂಡು
ಯಾ ಪಾರ್ಟ ಮಾಡ್ತೀರಿ

ಎಂದಿದ್ದಳು".

ಹಾಗೆಯೇ

"ಕರಾಪಿನ ಹುಡುಗಿಯ ಕಂಡು

ಹುಡಗಾ ಹಿಂಗ್ಯಾಕ ಮಾಡಾಕ ಹತ್ತಿ ಅಂದಿದ್ದಳು"

ಅದಕ್ಕೆ ಆ ಹುಡುಗಿ :

"ನಾ ಹುಡುಗಿ ಬೇ

ಕಣ್ಣ ಕಾಣ್ತಾವಿಲ್ಲ" ಎಂಬುದಾಗಿ ಫ್ಯಾಷನ್ ಹುಡುಗಿ ಅಂದಿದ್ದಾಳೆ. ಅದಕ್ಕಾಗಿ ಹಿರಿತನದ ಅಜ್ಜಿಯ ಬಾಯಿಂದ ಬಂದ ಭಾವನೆಗಳನ್ನು ಈ ಕೆಳಗಿನಂತೆ ಉಲ್ಲೇಖಿಸಿದ್ದಾರೆ.

"ಐ ನನ ಶಿವನ

ಯಾ ಕಾಲ ಬಂತ ನಮ್ಮವ್ವ

ಎನ್ನುತ್ತಿದ್ದಂತೆ

ಫ್ಯಾಷನ್, ಅಜ್ಜಿ ಎಂದಾಗ

ಮೂರ್ಛೆ ಹೋಗಿದ್ದಳು" ಎಂಬ ಉಲ್ಲೇಖದಲ್ಲಿ ಸಂಸ್ಕೃತಿಯ ಪ್ರತೀಕವಾದ ಅಜ್ಜಿ ಹಾಗೂ ನಾಗರೀಕತೆಯ ಪ್ರತಿನಿಧಿಯಾದ ಹುಡುಗಿ ಈ ವಯೋಮಾನಗಳ ನಡುವಿನ ವೈರುಧ್ಯತೆಗಳನ್ನು ಈ ಕವಿತೆಯಲ್ಲಿ ಎಳೆವಳೆಯಾಗಿ ಚಿತ್ರಿಸಿದ್ದಾರೆ.

"ಬ್ಯೂಟಿಪಾರ್ಲರ್" ಎಂಬ ಕವಿತೆಯಲ್ಲಿ ಸಮಾಜದಲ್ಲಿ ನಡೆಯುವ ಸಣ್ಣ ಘಟನೆಗಳ ಮೂಲಕ ಉದಾತ್ತವಾದ ಸಂದೇಶವನ್ನು ಸಾರಿದ್ದಾರೆ.

"ಹಲೋ

ಎಂದು

ಬೆನ್ನಿಗೆ ಹೊಡೆದೆ

ಯೂ ಈಡಿಯಟ್

ಹೆಣ್ಣು ಧ್ವನಿ ಕೇಳಿ

ಕಕ್ಕಾವಿಕ್ಕಿಯಾದೆ

ಬೆವರಿಳಿದ

ಮುಖವರಳಿಸಿ

ಸಾರಿ ಎಂದು ನಕ್ಕೆ!

ಈ ಕವಿತೆಯಲ್ಲಿ ಯುವಕನೊಬ್ಬನು ಮೈಮರೆತು ತನ್ನ ಸ್ನೇಹಿತನೆಂದು ಭ್ರಮಿಸಿ ಹುಡುಗಿಯ ಬೆನ್ನಿಗೆ ಹೊಡೆದು ಅನಂತರ ಬೆಪ್ಪಾಗಿ ಹೋಗಿದ್ದಾನೆಂಬುದು ಕವಿಯ

ಕಲ್ಪನೆ ನಿಜವಾಗಿಯೂ.....

"ನನ್ನ ಗೆಳೆಯಾ
ನಿಮ್ಮ ಹಾಗೆ ಇದ್ದ
ಮಾತು ಹೊರಡಲಿಲ್ಲ
ತಪ್ಪಿನ ಅರಿವಾಗಿ
ಹಿಂದಿರುಗಿದೆ"

ಬ್ಯೂಟಿಪಾರ್ಲರ್ ಶಪಿಸುತ" ಈ ಭಾವನೆಯೊಂದಿಗೆ ಮಾತು ಹೊರಡದೆ ಪೆಚ್ಚಾದ ಯುವಕನ ಇಕ್ಕಟ್ಟಿನ ಸ್ಥಿತಿಯನ್ನು ಈ ಕವಿತೆಯಲ್ಲಿ ಚಿತ್ರಿಸಿದ್ದಾರೆ.

"ಲಿಪ್‌ಸ್ಟಿಕ್" ಎಂಬ ಕವಿತೆಯಲ್ಲಿ ನಮ್ಮೂರ ನಂಜುಂಡನಿಗಾದ ಕಸಿವಿಸಿಯ ಸ್ಥಿತಿಯನ್ನು ತುಂಬಾ ಹಾಸ್ಯಮಯವಾಗಿ ಈ ಕೆಳಗಿನಂತೆ ಚಿತ್ರಿಸಿದ್ದಾರೆ.

"ನಮ್ಮೂರ
ನಂಜುಂಡ
ಪಾರ್ಟಿಯೊಳಗ
ಕೆಂದುಟಿ
ಹೆಂಗಸೊಬ್ಬಳ ಕಂಡು
ಅಮ್ಮ
ನಿಮ್ಮ
ತುಟಿಹೊಡೆದು
ರಕ್ತ ಬರ್ತಿದೆ ಎಂದ."

ನಮ್ಮೂರ ನಂಜುಂಡನು ಆ ಕೆಂದುಟಿಯ ಹೆಂಗಸನ್ನು ಕಂಡು ನಿನ್ನ ತುಟಿಯಿಂದ ರಕ್ತ ಸೋರುತಿದೆ ಎಂದಾಗ

"ಎ
ನಾನಿನ್ನು
ಮದುವಿ ಆಗಿಲ್ಲಾ
ಬೇಕೂಫ
ಎಂದುದ ಕೇಳಿ
ತಲೆ ಮೇಲೆ
ಕೈ ಹೊತ್ತು ಕುಳಿತ ನಮ್ಮೂರ ನಂಜುಂಡ"

ಒಟ್ಟಾರೆಯಾಗಿ 'ಮೀನು ಮತ್ತು ಹುಡುಗಿ' ಕಾವ್ಯದಲ್ಲಿಯ ಪಾತ್ರಗಳ ಮೂಲಕ ಭಾಷಾ ಬಳಕೆ, ವಸ್ತು ವೈವಿಧ್ಯತೆಯ ವಿನ್ಯಾಸ, ಸಾಹಿತ್ಯ ಮತ್ತು ಇತಿಹಾಸದ ಅನುಸಂಧಾನಗಳ ಸಾಧ್ಯತೆಗಳ ಕಾರಣದಿಂದ ಕೃತಿಯು ಧನಾತ್ಮಕ ನೆಲೆಗಳಿಂದ ಚೆತೋಹಾರಿಯಾಗಿದೆ. ಹಾಗೆಯೇ ವಸ್ತುವನ್ನು ಕ್ಲಸ್ತವಾಗಿ ಮಂಡಿಸಿರುವ ಕ್ರಮ – ವಿಧಾನ ಹಾಗೂ ವೈಧಾನಿಕತೆಗಳು ಕೃತಿಕಾರನ ಪ್ರತಿಭಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ.

ಡಾ. ಕೆ.ಎಸ್. ಶಿವಪ್ರಕಾಶ, ಕನ್ನಡ ಅಧ್ಯಾಪಕರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ಭಾರತದಲ್ಲಿ ಮಾತನಾಡುವ ಸುಗಾಲಿ, ಲಮಾಣಿ, ಬಂಜಾರರ ಗೋರಬೋಲಿಯು ಇಂಡೋ ಆರ್ಯನ್ ಭಾಷಾ ಪರಿವಾರಕ್ಕೆ ಸೇರಿದ್ದು, ಕೋಟಿಗಟ್ಟಲೆ ಜನ ಗೋರಬೋಲಿ ಮಾತನಾಡುವವರು ಭಾರತ ಸಂವಿಧಾನದ ಅನುಚ್ಛೇದ ೮ರಲ್ಲಿ ಸೇರದೇ ಇರುವುದು ಚಿಂತನೀಯವಾಗಿದೆ. ಸರ್ವಚೇತನವಾದದ ಅಪ್ಪಟ ಬುಡಕಟ್ಟು ಲಕ್ಷಣಗಳನ್ನು ಹೊಂದಿರುವ ಇವರನ್ನು ಸ್ವತಂತ್ರ ಭಾರತದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ವಿಮುಕ್ತ ಮತ್ತು ಹಿಂದಳಿದ ವರ್ಗಗಳ ಪಟ್ಟಿಯಲ್ಲಿ ವರ್ಗೀಕರಿಸಿ ವಿಭಿನ್ನ ರಾಜ್ಯಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಇದು ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆಗೆ ಹಿನ್ನೆಡೆಯಾಗುತ್ತಿದೆ. ಮೀಸಲಾತಿ ಪಡೆಯುವಲ್ಲಿಯೂ ಅಪಸ್ವರಗಳು ಕೇಳಿಬರುತ್ತಿವೆ. ಈ ಕಳಂಕದಿಂದ ಮುಕ್ತಿ ನೀಡಲು ಇವರೆಲ್ಲರನ್ನು ಅವರ ಕಳ್ಳುಬಳ್ಳಿಯ ಹಿನ್ನೆಲೆಯಲ್ಲಿ ಭಾರತದಾದ್ಯಂತ ಬುಡಕಟ್ಟು ಪಟ್ಟಿಗೆ ಸೇರಿಸಿ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ವಿಶೇಷ ಮೀಸಲಾತಿ ಕಲ್ಪಿಸುವುದು ಸೂಕ್ತವಾಗಿದೆ. ಸುಗಾಲಿ, ಲಮಾಣಿ, ಬಂಜಾರ, ಗೋರಬೋಲಿ ಭಾಷೆ ಮತ್ತು ಸಂಸ್ಕೃತಿಯ ಕುರಿತು ಭಾರತದಾದ್ಯಂತ ನೂರಾರು ಚಿಂತಕರು ಸಾಹಿತ್ಯ ರಚಿಸಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರೊ ಪಿ ಕೆ ಖಂಡೋಬ, ಪ್ರೊ ಡಿ ಬಿ ನಾಯಕ, ಪ್ರೊ ಸಣ್ಣರಾಮ, ಪ್ರೊ ಗಂಗಾ ನಾಯಕ, ಪ್ರೊ ಶಿರಗಾನಹಳ್ಳಿ ಶಾಂತನಾಯ್ಕ, ಡಾ ಪಿ ಕೆ ರಾಠೋಡ, ಡಾ ಹರಿಲಾಲ ಪವಾರ, ಡಾ ಕೆ ಬಿ ಪವಾರ ಅವರುಗಳು ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತ ಉತ್ಕೃಷ್ಠ ಸಾಹಿತ್ಯ ಕೃಷಿಮಾಡಿದ್ದಾರೆ.

ಪ್ರೊ ಕೆ. ಎಂ. ಮೇತ್ರಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ

ISBN 819556332-5
9 788195 563326

ಅಕ್ಷರ ಮಂಟಪ